ಪ್ರಬುದ್ಧ ಕರ್ಣಾಟಕ

ಸಂಪುಟ ೪೧—ಸಂಚಿಕೆ ೪

೧೬೨

ವಿಕಾರಿ ಸಂವತ್ಸರ

ಪುಷ್ಯ ಸಂಚಿಕೆ

ಮೈಸೂರು

ಮೈಸೂರು ವಿಶ್ವವಿದ್ಯಾನಿಲಯ

೧೯೬೦

BVP05113

ವಿಷಯ…

Prabuddha Karnataka Vol-41, Sl-4
BVP05113

BVP- 2368
20/9/18
…Reserved
25/317

ಮಾನ್ಯ ಚಂದಾದಾರರಲ್ಲಿ ವಿನಂತಿ :—

ಈ ಸಂಚಿಕೆಯೊಂದಿಗೆ ಪ್ರಬುದ್ಧ ಕರ್ಣಾಟಕದ ೪೧ ನೆಯ ಸಂಪುಟ ಮುಕ್ತಾಯವಾಗುತ್ತದೆ. ಶಾರ್ವರಿ ಸಂವತ್ಸರದ ಚೈತ್ರ ಪೌರ್ಣಿಮೆಯ ಹೊತ್ತಿಗೆ (ಅಂದರೆ ತಾ. ೧೧-೪-೧೯೬೦) ಸರಿಯಾಗಿ ೪೨ ನೆಯ ಸಂಪುಟದ ೧ ನೆಯ ಸಂಚಿಕೆ ಬರುತ್ತದೆ.

ಈ ವರ್ಷ ಕೊನೆಕೊನೆಗೆ ಬಂದ ಬೇಡಿಕೆಗಳನ್ನು ಪೂರೈಸುವುದಕ್ಕೆ ಸಾಕಾದಷ್ಟು ಪ್ರತಿಗಳು ನಮ್ಮಲ್ಲಿ ಉಳಿಯದೆ ಹೋದುವು. ಆದುದರಿಂದ ಹೊಸ ವರ್ಷದಲ್ಲಿ ಚಂದಾದಾರರಾಗ ಬಯಸುವವರು ಆದಷ್ಟು ಮುಂಚಿತವಾಗಿಯೇ ಚಂದಾ ಹಣವನ್ನು ಕಳಿಸಬೇಕಾಗಿ ವಿನಂತಿ. ಹಿಂದಿನ ಚಂದಾದಾರರು ಈ ಸಂಚಿಕೆ ಕೈಗೆ ಸೇರಿದ ಕೂಡಲೇ ಮುಂದಿನ ವರ್ಷದ ಚಂದಾಹಣವನ್ನು ಎಂ.ಓ. ಮುಖಾಂತರ ಕೆಳಗಿನ ವಿಳಾಸಕ್ಕೆ ದಯೆಯಿಟ್ಟು ಕಳಿಸಿಕೊಡಬೇಕು. ಹೊಸ ಸಂಚಿಕೆ ಬರುವ ಹೊತ್ತಿಗೆ ಎಂ.ಓ. ಆಗಲೀ ಆ ಬಗ್ಗೆ ಪತ್ರವಾಗಲೀ ಬರದಿದ್ದರೆ ವಿ.ಪಿ. ಮುಖಾಂತರ ಅದನ್ನು ಕಳುಹಿಸಿಕೊಡಲಾಗುತ್ತದೆ. ದಯೆಯಿಟ್ಟು ಸ್ವೀಕರಿಸಬೇಕಾಗಿ ಪ್ರಾರ್ಥನೆ.

ಹೆಚ್ಚಿನ ವಿವರಗಳಿಗೆ ಇದೇ ಸಂಚಿಕೆಯ ಕೊನೆಯಲ್ಲಿರುವ ಪ್ರಕಟಣೆಯನ್ನು ನೋಡಿ.

ಡೈರೆಕ್ಟರ್-ಇನ್-ಛಾರ್ಜ್,
ವಿಶ್ವವಿದ್ಯಾನಿಲಯ ಪ್ರಸಾರಾಂಗ
ವಾಣಿವಿಲಾಸ ಮೊಹಲ್ಲ, ಮೈಸೂರು-೨

- -

ದಿನಾಂಕ ....

ಗೆ

ಡೈರೆಕ್ಟರ್-ಇನ್-ಛಾರ್ಜ್,
ವಿಶ್ವವಿದ್ಯಾನಿಲಯ ಪ್ರಸಾರಾಂಗ
ವಿ. ವಿ. ಮೊಹಲ್ಲ, ಮೈಸೂರು-೨

ಮಾನ್ಯರೆ,

ದಯೆಯಿಟ್ಟು ನನ್ನನ್ನು "ಪ್ರಬುದ್ಧ ಕರ್ಣಾಟಕ" ತ್ರೈಮಾಸಿಕ ಪತ್ರಿಕೆಗೆ ೧೯೬೦-೬೧ ನೇ ಸಾಲಿಗೆ ಚಂದಾದಾರನನ್ನಾಗಿ ಸ್ವೀಕರಿಸಬೇಕಾಗಿ ಕೋರುತ್ತೇನೆ. ಮೇಲ್ಕಂಡ ಪತ್ರಿಕೆಯ ಚಂದಾ ಹಣದ ಬಗ್ಗೆ ರೂ.................... M. O. ಮೂಲಕ .... ೧೯ ರಲ್ಲಿ ಕಳುಹಿಸಿರುತ್ತೇನೆ./ ಪತ್ರಿಕೆಯನ್ನು ವಿ.ಪಿ.ಪಿ. ಮೂಲಕ ಕಳುಹಿಸಿ.


ನನ್ನ ವಿಳಾಸ :—

.... ತಮ್ಮ ವ

....

....

....



‘ ಸಂಜೆಗಿರಿ ’ಯಲಿ ಸಂಜೆ : ಯಾವ ದೊರೆ ನನಗೆ ಸರಿ ?

ಪ್ರಬುದ್ಧ ಕರ್ಣಾಟಕ

ವಿಕಾರಿ ಸಂವತ್ಸರ	೧೬೨	ಪುಷ್ಯ ಸಂಚಿಕೆ

ಕಣ್ಣು*

ಎಂತಹ ಕೃಪೆ ಈ ಕಣ್ಣು,
ಹೂದೋಟದ ಶ್ರೀಸೋಟವ ಸವಿಯುತ್ತಿಹ ಈ ಕಣ್ಣು!
ಭಗವಂತನ ದಯೆ ಘನಿಸಿಹುದಿಲ್ಲಿ;
ಧನ್ಯತೆ ಕ್ಷಣಕ್ಷಣಕೂ ಅವತರಿಸಿದೆ ಇಲ್ಲಿ
ಹೂ ಹೂ ಹೂವಿನ ಸುಂದರ ರೂಪದಲಿ:
ಭಾವಿಸಿದನಿತೂ, ಕಯ್ ಮುಗಿಯುತ್ತಿದೆ;
ಚಿಂತಿಸಿದನಿತೂ, ಮನ ಮಲರುತ್ತಿದೆ;
ಧ್ಯಾನಿಸಿದನಿತೂ, ಚೇತನ ರೋಮಾಂಚನವಾಗುತಿದೆ!
ಕಣ್ಣಿನ ಈ ಸೌಭಾಗ್ಯಕೆ
ಜೀವದ ಭಕ್ತಿ, ಕೃತಜ್ಞತೆ
ಜಗದಂಬೆಯು ಪಾದಕೆ ಹೂವಾರತಿಯೆತ್ತುತಿದೆ!
ಸಾಕ್ಷಾತ್ಕಾರದ ಅಗ್ನಿಯ ಅಂಚಿಗೆ ತಾಗುತ್ತಿದೆ
ಶರಣೆನುವೀ ನನ್ನಾತ್ಮದ ರತಿ,

---

* [ಮನೆಯ ಉದ್ಯಾನದಲ್ಲಿ ಆಶ್ವೀಜಮಾಸದ ಪ್ರಾತಃ ಸಮಯದ ಹೊಂಬಿಸಿಲಿನಲ್ಲಿ ಹಸುರು ಹೂವುಗಳ ವೈಭವವನ್ನು ಸವಿಯುತ್ತಿರುವಾಗ ಉಂಟಾದ ಅನುಭವ.]

ಶರಣಾಗತಿ,
ನಮಸ್‌ಕೃತಿ!

ಸೃಷ್ಟಿಯ ಸಾರ್ಥಕತೆಗೆ ಈ ಅಕ್ಷಿಯೆ ಸಾಕ್ಷಿ :
ಅಕ್ಷಿಯ ಪುರುಷಾರ್ಥಕೆ ಈ ಸೃಷ್ಟಿಯೆ ಸಾಕ್ಷಿ ;
ಅಕ್ಷಿಯ ಸೃಷ್ಟಿಯ ಸಂಗಮಸೌಭಾಗ್ಯವೆ
ಕೃಪೆಯೆ ಸ್ವಯಂ ತಾನಾಗಿಹ ಈ ದೃಷ್ಟಿ!
ಎಂತಹ ಕೃಪೆ ಓ ಈ ಕಣ್ಣು!
ಎಂತಹ ಭಾಗ್ಯವೊ ಈ ಮಣ್ಣು!

ಕಣ್ಣು
ಬರಿ ಇಂದ್ರಿಯವಲ್ಲೊ :
ಸಾಕ್ಷಾತ್ಕಾರದ ಅಪರೋಕ್ಷದ ಅನುಭೂತಿಯ ಒಂದಂಗ!

೧೨-೧೦-೫೯ —ಕುವೆಂಪು

ಅಮೇರಿಕ ದೇಶದ ಸಂಯುಕ್ತ ಸಂಸ್ಥಾನಗಳು

ನಮ್ಮಲ್ಲಿ, ಸಾಧಾರಣ ಮಾತುಕತೆಯಲ್ಲಿ, ಅಮೇರಿಕ ಎಂದರೆ, ಸಂಯುಕ್ತ ಸಂಸ್ಥಾನ ಎಂದೇ ಭಾವನೆ. ಅಮೇರಿಕಾ ಎನ್ನುವುದು ಪಶ್ಚಿಮಾರ್ಧಗೋಳದ ಉತ್ತರ ಮತ್ತು ದಕ್ಷಿಣದಲ್ಲಿರುವ ಎರಡು ಭೂಭಾಗಕ್ಕೆಲ್ಲ ಅನ್ವಯಿಸುವ ಹೆಸರು. ಆಂಗ್ಲ ಭಾಷೆಯಲ್ಲಿ ಮಾತನಾಡುವವರು U. S. ಎಂದು ಹೇಳುವುದು ಸರಿ. ಇದು ಈಗ ಬದಲಾವಣೆ ಹೊಂದಿ The States ಎಂಬುದು ರೂಢಿಗೆ ಬರುತ್ತಿದೆ. ಒಂದು ಸಲ ಒಬ್ಬ ಜಪಾನ್ ಕಲಾವಿದೆ, I am thankful to the American People ಎಂದು ಸಂಸ್ಥಾನಗಳ ಜನರನ್ನು ಸಂಬೋಧಿಸುವುದನ್ನು ನೋಡಿದೆ. ಅಮೇರಿಕದ ಸಂಯುಕ್ತ ಸಂಸ್ಥಾನದವರು ಈ ಖಂಡದ ಇತರ ದೇಶಗಳೊಡನೆ ಕೂಡಿ Pan America ಎಂಬ ಭಾವನೆಯು ಬೆಳೆಯುವಂತೆ ಶ್ರಮಿಸುತ್ತಿದ್ದಾರೆ. ಇದಕ್ಕೆ Monroe Doctrine ಸಹಾಯಕಾರಿಯಾಗಿದೆ. ಈ ಅಭಿಪ್ರಾಯ ಸುಮಾರು ೧೯ ನೆಯ ಶತಮಾನದ ಮಧ್ಯೆ ಪ್ರಾರಂಭವಾಯಿತೆನ್ನಬಹುದು. ಏಷ್ಯಾಖಂಡವೂ ಕೂಡ ಇದೇ ತತ್ತ್ವವನ್ನು ಅನುಸರಿಸುವಂತಿದೆ. ಸಂಯುಕ್ತಸಂಸ್ಥಾನಗಳು ಎಂದು ಕರೆಯುವುದರಲ್ಲಿ ಅರ್ಥವಿದೆ. ಮೊದಲು ೧೩ ಸಂಸ್ಥಾನಗಳು ಒಟ್ಟಾಗಿ ಒಂದು ಸರ್ಕಾರವನ್ನು ನಿರ್ಮಾಣ ಮಾಡಿದುವು. ಈಗ ೪೮ ಸಂಸ್ಥಾನಗಳಿವೆ. ಆದರೆ ಮೊದಲಿನ ಸರ್ಕಾರದ ನಿಯಮವನ್ನೇ ಅನುಸರಿಸುತ್ತಿವೆ. ಇವರಿಗೆ Constitution is the civil Bible. ಕ್ರೈಸ್ತರ ಬೈಬಲ್ ಗ್ರಂಥ ಹೇಗೆ ಇವರ ಸಮಾಜಕ್ಕೆ ಒಂದು ನಿಯಮಾವಳಿಯನ್ನು ನಿರ್ಮಿಸಿರುವುದೋ ಹಾಗೆ ರಾಜಕೀಯ ಜೀವನಕ್ಕೆ Constitution ನಿಯಮಾವಳಿಯನ್ನು ನಿರ್ಮಿಸಿದೆ. ಉಪಾಧ್ಯಾಯ ವೃತ್ತಿಯಲ್ಲಿರುವವರನ್ನು ಬಿಟ್ಟು—ವಿಶ್ವವಿದ್ಯಾನಿಲಯದವರೂ ಕೂಡ—ಉಳಿದೆಲ್ಲ ಅಧಿಕಾರಿಗಳೂ, Constitution ನನ್ನು ಅಥವಾ ರಾಜ್ಯಾಂಗ ಸಂವಿಧಾನವನ್ನು ಸಂರಕ್ಷಿಸುತ್ತೇವೆಂದು ಪ್ರತಿಜ್ಞೆಮಾಡಬೇಕು. ಈ ಪ್ರತಿಜ್ಞೆಗೆ ಭಂಗ ಬರದಂತೆ ನೋಡಿಕೊಳ್ಳುವುದು ಇಲ್ಲಿನ ನ್ಯಾಯಾಂಗದ ಮುಖ್ಯ ಕರ್ತವ್ಯ. ಐಕ್ಯ ಸರ್ಕಾರವಿದ್ದರೂ ಸಂಸ್ಥಾನಗಳಿಗೆ ಅನೇಕ ವಿಷಯಗಳಲ್ಲಿ ಸ್ವಾಧಿಕಾರವಿದೆ. ಉದಾಹರಣೆಗೆ ವಿದ್ಯಾಭ್ಯಾಸ ಸಂಸ್ಥಾನಕ್ಕೆ ಸೇರಿದ್ದು. ಒಂದು ಸಂಸ್ಥಾನದ ವಿವಾಹ ಅಥವಾ ವಿಚ್ಛೇದನ ಕಾನೂನು ಕಟ್ಟಳೆಗಳು ಇನ್ನೊಂದು ಸಂಸ್ಥಾನದಲ್ಲಿಲ್ಲ. ಒಂದು ಸಂಸ್ಥಾನ ನಗ್ನ ಚಿತ್ರಗಳನ್ನು ತೋರಿಸಲು ಅನುಮತಿಕೊಟ್ಟರೆ ಇನ್ನೊಂದರಲ್ಲಿ ಅದು

ರದ್ದು. ಹೊರಗಿನಿಂದ ಬರುವ ಎಲ್ಲರಿಗೂ ಒಂದು ವಿಶೇಷ ರೀತಿಯ ಸಮಾಜ ಸರ್ಕಾರ ಕಾಣುತ್ತದೆ.

ಕ್ರಿ.ಶ.೧೪೯೨ರಲ್ಲಿ, ಕೊಲಂಬಸ್‌ನು, ಇಂಡಿಯಾ ದೇಶಕ್ಕೆಂದು, ಭೂಪ್ರದಕ್ಷಿಣಾ ಮಾರ್ಗವಾಗಿ ಹೊರಟು, ಅಮೇರಿಕಾ ಖಂಡದಲ್ಲಿ ಕಾಲಿಟ್ಟನು. ಇವನೇ ಮೊದಲು ಕಾಲಿಟ್ಟ ಬಿಳಿಯ ಜನ ಎಂದು ಸಾಮಾನ್ಯ ನಂಬಿಕೆ. ಬ್ರೆಸ್ಟಿಲಿನ ಕೆಲವರು ಐತಿಹಾಸಿಕರು, ಇವನಿಗಿಂತಲೂ ಮೊದಲೇ ಪೋರ್ಚುಗೀಸರ ವಸಾಹತು ಬ್ರೆಸ್ಸಿಲ್‌ನಲ್ಲಿ ಇತ್ತೆಂದು ವಾದಿಸುತ್ತಾರೆ. ಕೊಲಂಬಸ್ ಕಂಡು ಹಿಡಿದರೂ ಅವನ ಹೆಸರು ಕೇವಲ ಅಲ್ಲಿ ಇಲ್ಲಿ ಪಟ್ಟಣಗಳಿಗೆ ಕೊಡಲ್ಪಟ್ಟಿದೆ. ಇವನ ನಂತರ, ೫ ವರ್ಷಗಳಾದಮೇಲೆ ಬಂದ ಅಮೆರಿಗೊ ವೆಸ್ಪುಸಿಯ ಹೆಸರು ಎರಡು ಖಂಡಗಳಿಗೂ ನಿಂತಿದೆ. ಇವನು ಕೊಲಂಬಸ್‌ನಷ್ಟು ಪ್ರಖ್ಯಾತನೂ ಅಲ್ಲ ಸಾಹಸಿಯೂ ಅಲ್ಲ, ಅಥವಾ ಎರಡು ಖಂಡ ಗಳನ್ನೂ ಸವಿಸ್ತಾರವಾಗಿ ತಿಳಿದವನಲ್ಲ. ದಕ್ಷಿಣ ಅಮೇರಿಕದ ಪೂರ್ವತೀರದಲ್ಲಿ ಮಾತ್ರ ಸಂಚರಿಸಿದವನು. ಇದು ಯಾರ ತಪ್ಪೂ ಅಲ್ಲ. ಚರಿತ್ರಕಾರರ ತಪ್ಪು.

ಸಂಯುಕ್ತ ಸಂಸ್ಥಾನಗಳು ಉತ್ತರ ಅಮೇರಿಕಾ ಖಂಡದ ಮಧ್ಯಭಾಗದಲ್ಲಿ ಇಂಡಿಯಾ ದೇಶದ ಎರಡರಷ್ಟು ವಿಸ್ತಾರವಾಗಿದ್ದರೂ ಜನಸಂಖ್ಯೆ ಅರ್ಧದಷ್ಟಿದೆ. ಜನಸಂಖ್ಯೆ ಹೆಚ್ಚಾಗಿದಷ್ಟೂ ದೊಡ್ಡ ದೇಶ ಎಂಬ ಭಾವನೆ ನನಗೆ ಬಾಲ್ಯದಲ್ಲಿತ್ತು. ಎಲ್ಲಿಂದ ಎಲ್ಲಿಯವರೆಗೆ ನೋಡಿದರೂ ಒಂದೇ ತರದ ಜನ, ಒಂದೇ ತರದ ಸಂಸ್ಕೃತಿ ಕಾಣುತ್ತದೆ. ಒಂದು ಊರಿಂದ ಇನ್ನೊಂದು ಊರಿಗೆ ಹೋಗಬೇಕಾದರೆ ಮಹಾ ಕಾಡು. ಅಪಾಯಕಾರಿಯಾದ ಯಾವ ಕಾಡುಮೃಗಗಳೂ ಇಲ್ಲ. ಭೂಮಿ ಫಲ ವತ್ತಾಗಿದೆ. ಹುಲ್ಲು ಬೇಕಾದಷ್ಟು ಬೆಳೆಯುತ್ತದೆ. ಭಾರತೀಯ ರೈತ ಇಲ್ಲಿ ಬಂದರೆ, ಎಷ್ಟೊಂದು ಒಳ್ಳೆ ಜಮೀನು, ಯಾರೂ ಉಳುವವರೇ ಇಲ್ಲ ಎನಿಸುತ್ತದೆ. ಎಷ್ಟೊಂದು ಹುಲ್ಲಿದೆ, ಎಷ್ಟೊಂದು ಮೇಕೆ, ದನಗಳನ್ನು ಸಾಕಬಹುದು ಎನಿಸುತ್ತದೆ. ಇವರಿಗೆ ನಿಜವಾಗಿಯೂ ಇಷ್ಟೊಂದು ಜಮೀನು ಬೇಡ. ಸ್ವಲ್ಪವನ್ನು ಉಪಯೋಗಿಸಿ, ಉಳಿದುದನ್ನು ಪ್ರಜಾಸಂಖ್ಯೆ ಹೆಚ್ಚಾದರೆ ಇರಲಿ ಎಂದು ಇಟ್ಟುಕೊಂಡಿದ್ದಾರೆ. ಪರದೇಶದಿಂದ ಇಲ್ಲಿಗೆ ಜನರು ಹೆಚ್ಚಾಗಿ ಬಂದು ನೆಲಸುವಂತಿಲ್ಲ. ಕಲ್ಲುಬಂಡೆಗಳನ್ನು ನೋಡಿದರೆ ಕಪ್ಪಗಿವೆ. ಕಬ್ಬಿಣವೋ ಕಲ್ಲಿದ್ದಲೋ ಅವುಗಳಲ್ಲಿ ತುಂಬಿರಬಹುದು ಎನ್ನಿಸುತ್ತದೆ. ನಮ್ಮ ದೇಶದಲ್ಲಿ, ಮೈಸೂರನ್ನು ಬಿಟ್ಟು ಕುಕ್ಕರಹಳ್ಳಿಗೆ ಹೋದರೆ ಬೇರೆ ಸಂಸ್ಕೃತಿ, ಜನರೇ ಬೇರೆ ಮನೆಗಳೇ ಬೇರೆ ಎನ್ನಿಸುತ್ತದೆ. ಇಲ್ಲಿ ಹಾಗಲ್ಲ. ಒಂದು ನಗರವನ್ನು ನೋಡಿದರೆ ಇನ್ನೊಂದನ್ನು ನೋಡಬೇಕಾಗಿಲ್ಲ. ಮನೆಗಳೆಲ್ಲಾ ಒಂದೇ ತೆರನಾಗಿವೆ. ಜನರೂ ಹೆಚ್ಚು ಕಡಿಮೆ ಒಂದೇ ತೆರನಾಗಿದ್ದಾರೆ. ಮೊದಮೊದಲು

ಒಬ್ಬರನ್ನು ನೋಡಿ ಇನ್ನೊಬ್ಬರನ್ನು ಗುರುತುಹಿಡಿಯಬೇಕಾದರೆ ಕಷ್ಟ. ಇವನೂ ಅವನ ಹಾಗೆ ಇದ್ದಾನಲ್ಲ ಎಂದು ಸಂಶಯವಾಗುತ್ತದೆ. ಮೊದಲು ಬೇರೆ ಬೇರೆ ಜನರಾಗಿದ್ದರು. ಈಗ ಬೆರತುಹೋಗಿ ಒಂದೇ ಜನರಾಗಿದ್ದಾರೆ. ಎಲ್ಲೆಲ್ಲಿಯೂ ಒಂದೇ ಭಾಷೆ, ಇಂಗ್ಲಿಷ್. ವಿದ್ಯಾವಂತರ ಭಾಷೆಗೂ ಅಲ್ಪವಿದ್ಯಾವಂತರ ಭಾಷೆಗೂ ಹೆಚ್ಚು ವ್ಯತ್ಯಾಸವಿಲ್ಲ. ಪುಸ್ತಕದಲ್ಲಿ ಕಲಿತ ನನ್ನ ಭಾಷೆಯನ್ನು ನೋಡಿ "You speak good English" ಎಂದು ಆಶ್ಚರ್ಯಪಡುತ್ತಾರೆ. ಬಿಳಿಯಜನರಲ್ಲದವರು ಇಂಗ್ಲೀಷು ಮಾತನಾಡುತ್ತಾರೆ ಎಂದರೆ ಅವರಿಗೆ ಆಶ್ಚರ್ಯ. ಇಂಗ್ಲೀಷು ಮಾತನಾಡುವವರಲ್ಲಿ ನಾನೇ ಕಳಪೆ, ನಮ್ಮ ದೇಶದವರು ಇನ್ನೂ ಚೆನ್ನಾಗಿ ಮಾತನಾಡುತ್ತಾರೆ ಎಂದು ಜಂಭ ಕೊಚ್ಚುತ್ತೇನೆ!

"Air India International"ನಲ್ಲಿ ವಿಮಾನ ಪ್ರಯಾಣ ಆನಂದಮಯವಾಗಿತ್ತು. "May I have your attention please, I welcome you on behalf of captain, , , We are flying at the height of . ." ಎಂದು ಆಗಿಂದಾಗ್ಗೆ ಮಧುರವಾದ ಧ್ವನಿಯಲ್ಲಿ ಸುಂದರವಾದ ಹುಡುಗಿಯೊಬ್ಬಳು ಹೇಳುತ್ತಿದ್ದಳು. ಸುಖಾಸನ, ಗಾಳಿ ಬರಲು ಕೊಳಾಯಿಗಳು, ಆಗಿಂದಾಗ್ಗೆ ಪಾನೀಯ, ಹೊತ್ತು ಹೊತ್ತಿಗೆ ಊಟ ತಂದಿರಿಸುತ್ತಿದ್ದಳು. ವಿಮಾನ ನಮ್ಮದು. ನಮ್ಮ ದೇಶ ಎಷ್ಟು ಮುಂದುವರಿದಿದೆ ಎಂದು ಗೊತ್ತಾಯಿತು. ವಿಮಾನದಲ್ಲಿ ಕೆಲಸ ಮಾಡುವವರು ನಮ್ಮವರೆ? ಹಾಗಿದ್ದರೆ ಹಳ್ಳಿಯ ಜನಕ್ಕೂ ಇವರಿಗೂ ಎಷ್ಟು ವ್ಯತ್ಯಾಸ? ಇವರಿಗೂ, ನಾವು ಹಡಗಿನಲ್ಲಿ ಕುಳಿತಾಗ, ಅಲ್ಲಿದ್ದ ಪರದೇಶದ ಕೆಲಸಗಾರರಿಗೂ ಯಾವ ವ್ಯತ್ಯಾಸವೂ ಇರಲಿಲ್ಲ. ಜನರು ಸದ್ವಿನಯವಾಗಿ ಮಾತಾಡುವುದು ವಿಮಾನದಲ್ಲಿಯೇ ಪ್ರಾರಂಭವಾಯಿತು. ನಾನು ನ್ಯೂಯಾರ್ಕ್ ನಗರದಲ್ಲಿಳಿದಾಗ "Foreign Student Advisors" ಎಂದು ತೋಳಪಟ್ಟಿಯನ್ನು ಕಟ್ಟಿ, ಸ್ತ್ರೀಯರು ನಮಗೆ ಸಹಾಯ ಮಾಡುತ್ತಿದ್ದರು. ಹೋಟಲಿನಲ್ಲಿ ಇಳಿದುಕೊಂಡರೆ "ಇಂಟರ್ ನ್ಯಾಷನಲ್ ರಿಲೇಷನ್ಸ್" ಎಂದು ಬೋರ್ಡ್ ಹಾಕಿಕೊಂಡು ಓರ್ವ ಸ್ತ್ರೀ ಅಧಿಕಾರಿಯು ಕುಳಿತಿದ್ದರು. ಜನರ ಸದ್ವಿನಯ ಅಷ್ಟಿಷ್ಟಲ್ಲ. ದಾರಿಗೆ ಅಡ್ಡಲಾಗಿ ನಿಂತಿದ್ದರೆ "Excuse me" ಎಂದು ಹೇಳಿ ದಾರಿ ಬಿಡಿಸಿಕೊಳ್ಳುತ್ತಿದ್ದರು. ಮೈ ತಾಕಿದರೆ ಅಥವಾ ಅವರಿಂದ ನಮಗೆ ಸ್ವಲ್ಪ ಮಾತ್ರ ಅಡ್ಡಿಯಾಯಿತು ಎಂದು ಕಂಡು ಬಂದರೆ "Pardon me" ಎಂದು ಕೇಳುತ್ತಿದ್ದರು. ರೈಲ್ವೆ ನಿಲ್ದಾಣದಲ್ಲಿ, ಸಬ್‌ವೆಯಲ್ಲಿ, ಅಂಗಡಿ ಮುಂಗಟ್ಟಿನಲ್ಲಿ ಕಕ್ಕಾಬಿಕ್ಕಿಯಾಗಿ ನೋಡುತ್ತ ಇದ್ದರೆ, "May I help you" ಎಂದು ಮುಂದೆ ಬರುತ್ತಿದ್ದರು. ಯಾರೊಬ್ಬರೂ ಘರ್ಜಿಸಿ ಮಾತ

ನಾಡಿದುದನ್ನು ನೋಡಲಿಲ್ಲ. ಎಲ್ಲರೂ ಹಸನ್ಮುಖಿಗಳಾಗುತ್ತಿದ್ದರು. ಪರದೇಶದಿಂದ ಬಂದ ವಿದ್ಯಾರ್ಥಿಗಳಿಗೆ ಮೊದಲ ಪಾಠ Orientation " ಎಂದು ದೇಶದ ನಡೆನುಡಿ ಜೀವನ ಕ್ರಮವನ್ನು ಪರಿಚಯ ಮಾಡಿಸಿಕೊಡುವುದು. Orientation ಗಾಗಿ ನಾನು ನ್ಯೂಯಾರ್ಕ್ ಸಂಸ್ಥಾನದ ಒಂದು ಕಾಲೇಜಿನಲ್ಲಿ ಒಂದು ತಿಂಗಳು ಇರಬೇಕಾಯಿತು. ಅಲ್ಲಿನ ಪ್ರೊಫೆಸರೊಬ್ಬರು, ನಯವಿನಯದ ಮೇಲೆ ಮಾತನಾಡುತ್ತ "ದೊಡ್ಡ ದೊಡ್ಡ ಅಂಗಡಿಗಳಲ್ಲಿ ಗಿರಾಕಿಗಳು ಉಲ್ಲಾಸದಿಂದ ಸಾಮಾನು ಕೊಳ್ಳಲೆಂದು ಪ್ರಸನ್ನ ವದನರಾದ ಕನ್ಯೆಯರನ್ನೇ ನೋಡಿ ಆರಿಸುತ್ತಾರೆ. ಅವರು ಯಾಂತ್ರಿಕವಾಗಿ ಗಿರಾಕಿಯನ್ನು ಕಂಡೊಡನೆ ಮಂದಹಾಸವನ್ನು ಬೀರುತ್ತಾರೆ," ಎಂದು ಹೇಳಿದರು. ಮುಗುಳ್‌ನಗೆಯು ಹೇಗಿರಬೇಕು, ತುಟಿಗಳು ಹೇಗಿರಬೇಕು, ಹೇಗೆ ಮುಖ ತಿರುಗಿಸಬೇಕು ಎಂಬುದನ್ನೆಲ್ಲಾ ಶಿಕ್ಷಣ ಮೂಲಕವಾಗಿ ಕಲಿತಂತೆ ಕಾಣುತ್ತದೆ. ನಾಟಕಕ್ಕೂ ನಿತ್ಯ ಜೀವನಕ್ಕೂ ಯಾವ ವ್ಯತ್ಯಾಸವೂ ಕಾಣುವುದಿಲ್ಲ. ಮುಖ್ಯವಾಗಿ ಸ್ತ್ರೀಯರ ಪೋಷಾಕು ನಾಟಕರಂಗಕ್ಕೇ ಹೊರಟಂತಿರುತ್ತದೆ.

ನಮ್ಮ ದೇಶದಲ್ಲಿ ಬೆಳ್ಳಿಯೆಲ್ಲಾ ಭಂಗಾರವಾಗುತ್ತದೆ. ಅಂದರೆ ರೂಪಾಯಿ ಚಿನ್ನದ ಒಡವೆಯಾಗಿ ಪೆಟ್ಟಿಗೆಯನ್ನು ಸೇರುತ್ತದೆ. ಇಲ್ಲಿ ಮುತ್ತು ರತ್ನಗಳಿಗೆ ಸಾಕಷ್ಟು ಆಕರ್ಷಣೆ ಇದ್ದರೂ, ಕೃತಕ ಮುತ್ತನ್ನು ಕಟ್ಟಿಯೇ ಜನರು ಸಂತೋಷ ಪಡುತ್ತಾರೆ. "ಹತ್ತು ಕಟ್ಟುವ ಬದಲು ಒಂದು ಮುತ್ತು ಕಟ್ಟು" ಎಂದು ನಮ್ಮ ಹಳ್ಳಿ ಕಡೆ ಒಂದು ಗಾದೆಯಿದೆ. ಇಲ್ಲಿ ಒಂದು ಮುತ್ತು ಕಟ್ಟುವ ಬದಲು ಒಂದೆರಡು ಕೃತಕ ಮುತ್ತು, ಆ ಕಿವಿಗೊಂದು ಈ ಕಿವಿಗೊಂದು, ತಲೆಯಮೇಲೆ ಒಂದು ಬಣ್ಣದ ಹಕ್ಕಿಯ ಗರಿ, ಕತ್ತಿನ ಸುತ್ತು ಕಂಬಳಿಯಂತಹ ಕೂದಲಿರುವ ಒಂದು ಬಗೆಯ ನರಿಯ ಚರ್ಮ, ಕೈಗಳಿಗೆ ಆಳಿಲ ಚರ್ಮದ ಚೀಲ, ಮೈಗೆ ಬಿಗಿಯಾಗಿ ಲಂಗ ಜಂಪರ್, ಮೆಟ್ಟುಗಾಲಿನ ಎಕ್ಕಡ ಇವೇ ಸ್ತ್ರೀಯರ ಉಡುಪು. ಕುರಿಯ ತುಪ್ಪಟದ (ಉಣ್ಣೆಯ) ಮತ್ತು ಹತ್ತಿಯ ಉಡುಪು ಪುರುಷರಿಗೆ. ಮನೆಗಳು, ವಾಸಕ್ಕೆ ಎಷ್ಟುಬೇಕೊ ಅಷ್ಟು ಅಚ್ಚುಕಟ್ಟಾಗಿವೆ. ಒಂದಂಗೈ ಅಗಲ ಸ್ಥಳವೂ ನಿರುಪಯೋಗವಾಗುವಂತಿಲ್ಲ. ಪಡಸಾಲೆ ಬೇಕು, ಕಂಬ ಸಾಲುಗಳು ಬೇಕು, ಉಪ್ಪರಿಗೆಗಳು ಬೇಕು, ಮಾಳಿಗೆಗಳು ಬೇಕು, ಸುತ್ತ ಕೆತ್ತನೆಯ ಕೆಲಸವಿರಬೇಕು ಚಿತ್ರವಿರಬೇಕು ಎಂಬ ಶ್ರೀಮಂತ ಮನೋಭಾವನೆ ಎಲ್ಲಿಡೆಯೂ ಕಾಣುವುದಿಲ್ಲ. "Utility" ಅಂದರೆ ಉಪಯೋಗ ವಿದ್ದರೆ ಸಾಕು. ಸೌಂದರ್ಯೋಪಾಸಕತೆಯು ಗೌಣ. ಶ್ರೀಮಂತರ ಮನೆಗಳು ಅರಮನೆಗಳಂತಿವೆ. ಸೌಂದರ್ಯಕ್ಕಾಗಿಯೇ ಕಟ್ಟಿರುವ ಸಾರ್ವಜನಿಕ ಕಟ್ಟಡಗಳಿವೆ. ಆದರೆ ಮುಕ್ಕಾಲುಪಾಲು ವುಪಯೋಗ, ಸಾಕಷ್ಟು ಸೌಂದರ್ಯ ಇಷ್ಟಿದ್ದರೆ ಸಾಕು.

ಸರಿ, ದುಡ್ಡನ್ನೆಲ್ಲಾ ಬ್ಯಾಂಕಿನಲ್ಲಿ ಹಾಕುತ್ತಾರೆ ಅಥವಾ ಸಾಮಾನು ಕೊಳ್ಳುತ್ತಾರೆ ಇದರಿಂದ ಹಣದ ಚಲಾವಣೆ ಹೆಚ್ಚು. ಕೈಗಾರಿಕೆಗಳು ಬ್ಯಾಂಕಿನಿಂದ ಹಣ ಪಡೆದು ಹೊಸ ಹೊಸ ವಸ್ತುಗಳನ್ನು ನಿರ್ಮಾಣ ಮಾಡುತ್ತವೆ.

ನಮ್ಮ ದೇಶದಲ್ಲಿ ಭಂಗಾರವನ್ನು ಕೂಡಿಡುವುದು ಐಶ್ವರ್ಯ ಎಂಬ ಭಾವನೆಯಿಂದ. ನಮ್ಮ ಶ್ರೀಮಂತ ಮಹಿಳೆಯರು ಎಂದಿಗೂ ಕೃತಕ ಮುತ್ತನ್ನು ಕಟ್ಟುವುದಿಲ್ಲ, ಎಂದಿಗೂ ತಾಮ್ರದ ಬಳೆಗಳನ್ನು ತೊಡುವುದಿಲ್ಲ. ನೆಹರೂರವರು ಒಂದು ಸಲ ಮಹಿಳೆಯರು ಭಂಗಾರದ ಭಾರಕ್ಕೆ, ಬಿಸಿಲಿನ ತಾಪಕ್ಕೆ ಪರಿತಾಪಗೊಳ್ಳುತ್ತಿರುವುದನ್ನು ನೋಡಿ, ಕನಿಕರಪಡದೆ, ಕಠಿಣವಾಗಿ ಟೀಕಿಸಿದುದು ಜ್ಞಾಪಕಕ್ಕೆ ಬಂತು. ಇಲ್ಲಿ ಐಶ್ವರ್ಯ ವಂತರು ಎಡಗೈಯಿಗೆ ಹಣ ಬಂದರೆ ಬಲಗೈಯಲ್ಲಿ ಖರ್ಚುಮಾಡುತ್ತಾರೆ. ನಮ್ಮ ದೇಶದಲ್ಲಿ ಅದು ಹೆಚ್ಚು ಪಾಲು ತಂಗುತ್ತದೆ. ಇದರಿಂದ "Capital is shy in India" ಎಂದು ಅರ್ಥ ತತ್ವಜ್ಞಾನಿಗಳು ಕರುಬುತ್ತಾರೆ. ಹಣ ಚಲಾವಣೆಯಲ್ಲಿದ್ದಷ್ಟೂ ಕೈಗಾರಿಕಾಭಿವೃದ್ಧಿ ಹೆಚ್ಚು. ನೀರು ಹರಿದಷ್ಟೂ, ಬಡವನ ಗದ್ದೆಗೆ ಬಚ್ಚಲು ನೀರಾದರೂ ದೊರಕುತ್ತದೆ. ಇದರಿಂದ ಈ ದೇಶ ಶ್ರೀಮಂತರ ದೇಶವಾಗಿದ್ದರೂ, ಬಡವನಿಗೆ ಜೀವನಕ್ಕೆ ಬೇಕಾದಷ್ಟು ಆಹಾರ ದೊರೆಯುತ್ತದೆ. ಐಶ್ವರ್ಯವಂತರಾಗುವುದನ್ನು ನೋಡಿ ಜನ ಕರುಬುವುದಿಲ್ಲ.

ವಲಸೆ ತಿರುಗುವುದು (Migratory) ಈ ಜನರ ಸ್ವಭಾವ. ಹುಟ್ಟಿದ್ದು ಒಂದು ಕಡೆ, ಬೆಳೆಯುವುದು ಇನ್ನೊಂದು ಕಡೆ, ನೆಲಸುವುದು ಮತ್ತೊಂದು ಕಡೆ. ಹೈಸ್ಕೂಲು ಹತ್ತುತ್ತಲೆ ಇದು ಪ್ರಾರಂಭವಾಗುತ್ತದೆ. ಹುಟ್ಟಿದೂರಿನಲ್ಲಿ ಹೈಸ್ಕೂಲು ಇದ್ದರೂ, ಅದನ್ನು ಬಿಟ್ಟು ದೂರದ ಇನ್ನೊಂದು ಊರಿನಲ್ಲಿರುವ ಹೈಸ್ಕೂಲಿಗೆ ಹೋಗುತ್ತಾನೆ. ಅಲ್ಲಿಂದ, ದೂರದ ಇನ್ನೊಂದು ವಿಶ್ವವಿದ್ಯಾನಿಲಯಕ್ಕೆ ಹೋಗುತ್ತಾನೆ. ತನ್ನ ತಂದೆ ಇರುವ ವಿಶ್ವವಿದ್ಯಾನಿಲಯದಲ್ಲಿರದೆ ಇನ್ನೊಂದಕ್ಕೆ ಹೋಗುವುದು ಸೋಜಿಗ. ವಿವಾಹ ನಿಷ್ಕರ್ಷೆಗಳಾಗುವುದು ವಿಶ್ವವಿದ್ಯಾನಿಲಯಗಳಲ್ಲೆ.

ಕನ್ಯೆಯರು ಎಲ್ಲಿಂದಲೋ ವಿಶ್ವವಿದ್ಯಾನಿಲಯಕ್ಕೆ ಬಂದಿರುತ್ತಾರೆ. ಅವರ ಮುಖ್ಯ ಉದ್ದೇಶ ಅನುರೂಪನಾದ ವರನನ್ನು ಹುಡುಕುವುದು. ಸಾಮಾನ್ಯವಾಗಿ ಪ್ರತಿಯೊಬ್ಬ ವಿದ್ಯಾರ್ಥಿಗೂ ಮತ್ತು ವಿದ್ಯಾರ್ಥಿನಿಗೂ ಒಂದು ಕಾರು ಇರುತ್ತದೆ. ಅದರಲ್ಲಿ ವಿಶ್ವಾಸ ಬೆಳೆದ ವಿದ್ಯಾರ್ಥಿ ವಿದ್ಯಾರ್ಥಿನಿಯರು ಕುಳಿತು ಭಾನುವಾರಗಳಲ್ಲಿ, ಸಿನಿಮಾ, ಆಟ ನೋಟಗಳಿಗೆ ಹೋಗಿ ಒಟ್ಟಿಗೆ ಭೋಜನ ಮಾಡುತ್ತಾರೆ. ಬಹು ಪಾಲು ನರ್ತಿಸುವುದೂ ಉಂಟು. ಮುತ್ತು ಕೊಡುವುದು ಅಸಹನೀಯವಲ್ಲದುದರಿಂದ ಅದರಲ್ಲಿ ಯಾವ ತಪ್ಪನ್ನೂ ಎಣಿಸುವುದಿಲ್ಲ. Orientation ನಲ್ಲಿ ನಮ್ಮ ಒಬ್ಬ

ಪ್ರಾಧ್ಯಾಪಕರು ಹೇಳಿದಂತೆ, ವಿಶ್ವವಿದ್ಯಾನಿಲಯದ ಸುಮಾರು ಶೇಕಡ ೩೦ ಮಂದಿಯಲ್ಲಿ ೨೦ ಮಂದಿ ಬಾಲಕರೂ ೧೦ ಮಂದಿ ಸ್ತ್ರೀಯರು, ನಮ್ಮ ಭಾಷೆಯ ಪ್ರಕಾರ ಕೆಟ್ಟುಹೋಗುತ್ತಾರೆ. ತಂದೆತಾಯಿಗಳು ಮಕ್ಕಳು ಕೆಡದಂತೆ ಎಚ್ಚರಿಕೆ ತೆಗೆದುಕೊಳ್ಳುತ್ತಾರೆ. ಇನ್ನೊಬ್ಬ ಪ್ರಾಧ್ಯಾಪಕರು ಹೇಳಿದರು: "ನಾವು ಮಕ್ಕಳ ಇಷ್ಟಕ್ಕೆ ಅಡ್ಡಿ ಬರುವುದಿಲ್ಲ, ಆದರೆ ಒಳ್ಳೆಯ ಮಕ್ಕಳೇ ಜತೆಯಾಗುವಂತೆ ಏರ್ಪಡಿಸಲು ಪ್ರಯತ್ನಿಸುತ್ತೇವೆ" ಎಂದು.

ತಂದೆತಾಯಿಗಳು ಮಕ್ಕಳ ಬೆಳವಣಿಗೆಯಲ್ಲಿ ಹೆಚ್ಚಾಗಿ ಎಚ್ಚರಿಕೆ ತೆಗೆದುಕೊಳ್ಳದಿದ್ದರೆ, ಅಂಥ ಮಕ್ಕಳು ದಾರಿತಪ್ಪುವುದು ಸಹಜ. ಅಸಾಧಾರಣವಾಗಿ ಬೆಳೆದಿರುವ ನಗರಗಳಲ್ಲಂತೂ ಹೇಳತೀರದು—ಇಂತಹ ಮಕ್ಕಳ ಹಾವಳಿಯೇ ಹಾವಳಿ. ಹೇಗೋ ರಿವಾಲ್ವರ್ ಇವರಲ್ಲಿರುತ್ತದೆ. ತಾವೇ ಒಂದು ವಿಧವಾದ ಬಂದೂಕನ್ನು ತಯಾರು ಮಾಡಿಕೊಳ್ಳುತ್ತಾರೆ ಎಂದು ಕೆಲವರ ಅಭಿಪ್ರಾಯ. ಪರಸ್ಪರ ಹೊಡೆದಾಡುವುದು, ಲೂಟಿ ಮಾಡುವುದು, ಇವರ ಸ್ವಭಾವ. ಇವರಿಂದ ಸಜ್ಜನರಿಗಂತೂ ಬಾಧೆ ತಪ್ಪದು. ಇದನ್ನು Juvenile delinquency ಎಂದು ಕರೆಯುತ್ತಾರೆ. ಇದು ನ್ಯೂಯಾರ್ಕ್, ಚಿಕಾಗೊ ನಗರಗಳಲ್ಲಿ ಹೆಚ್ಚು. ಇದರಿಂದ ನಿತ್ಯ ಅನೇಕ ಪ್ರಾಣಹತಿ. ಇದನ್ನು ತಪ್ಪಿಸಲು ಕಾರ್ಯಕ್ರಮ ಕೈಗೊಳ್ಳುತ್ತಿದ್ದಾರೆ. ಇದು ಕೈಗಾರಿಕೆ ಹಬ್ಬಿದ ಸಮಾಜದ ಕುಂದುಕೊರತೆಗಳಲ್ಲೊಂದು. ಭಾರತವೂ ಈ ಸಮಸ್ಯೆಯನ್ನು ಬಿಡಿಸಬೇಕಾಗಬಹುದು. ಬೊಂಬಾಯಿ ಕಲ್ಕತ್ತ ನಗರಗಳು ವಿಶೇಷವಾಗಿ ಬೆಳೆಯುತ್ತಿವೆ. ಎಲ್ಲರೂ ನಗರೋನ್ಮುಖಿಗಳಾಗಿದ್ದಾರೆ. ಹಳ್ಳಿಗಳಲ್ಲಿ ವಾಸಮಾಡಲು ಇಷ್ಟಪಡುವವರು ವಿರಳ. ಕಾರ್ಮಿಕರು ಬಡವರೂ ಅಲ್ಪವಿದ್ಯಾವಂತರೂ ಆಗಿಬಿಟ್ಟರೆ ಸಮಾಜಕ್ಕೆ ಕುಂದು ತಪ್ಪದು.

ವಿವಾಹಕ್ಕೆ ಹೆಚ್ಚು ಖರ್ಚಿಲ್ಲ. ಮದುವೆಯಾಗಲಿಷ್ಟವುಳ್ಳವರು ಒಂದು ವೈದ್ಯಕೀಯ ಅಪ್ಪಣೆ ಚೀಟಿಯನ್ನು ಹೊಂದಿರಬೇಕು. ಆಗ ಅವರು ತಮ್ಮ ಚರ್ಚ್ ಅಥವಾ ಯಾವುದಾದರೂ ರಿಜಿಸ್ಟ್ರಾರ್ ಕಚೇರಿಗೆ ಹೋಗಿ ವಿವಾಹವಾಗಬಹುದು. ವಿವಾಹ ವಿಚ್ಛೇದನಗಳೂ ಹೆಚ್ಚು. ಸುಮಾರು ಶೇಕಡ ೩೦. ಆದರೆ ಈಗೀಗ ಇದು ಕಡಮೆಯಾಗುತ್ತಿದೆ. ಯುದ್ಧಕಾಲಗಳಲ್ಲಿ ಇದು ಹೆಚ್ಚಾಗಿದ್ದುದು ಜನಗಣತಿಯ ಮೂಲಕ ತಿಳಿದುಬರುತ್ತದೆ.

ವಿವಾಹವಾದ ನಂತರ ಹುದ್ದೆಗಾಗಿ ಇನ್ನೊಂದು ಸ್ಥಳಕ್ಕೆ ಹೋಗುತ್ತಾರೆ. ಸಾಮಾನ್ಯವಾಗಿ ಮೊದಲು ಸೇರಿದ ಹುದ್ದೆಯಲ್ಲಿಯೇ ಕೊನೆಯ ವರೆಗೂ ಇರುವುದಿಲ್ಲ. ೨-೩ ಹುದ್ದೆಗಳನ್ನಾದರೂ ತಟಾಯಿಸುವುದು ಈ ಜನರ ಸ್ವಭಾವ. ಇದರಿಂದ ಒಂದೂರಿನಿಂದ ಇನ್ನೊಂದೂರಿಗೆ ಅಲೆಯುತ್ತಾರೆ. ಕೊಂಡ ಮನೆಯನ್ನು ಮಾರಿ

ಬಿ. ಎ. ಪದವೀಧರರು. ಕಾಲೇಜಿನಲ್ಲಿ ಓದುತ್ತಿದ್ದಾಗ ಮದುವೆಯಾದವರು. ತಂದೆಗೆ ನ್ಯೂಯಾರ್ಕಿನಲ್ಲಿ ಕೆಲಸ. ಮನೆಗೂ ನ್ಯೂಯಾರ್ಕಿಗೂ ೧೦೦ ಮೈಲಿ. ೭ ಘಂಟೆಗೆ ಎದ್ದು, ಕಾಫಿ ಇಲ್ಲ ತಿಂಡಿ ಇಲ್ಲ, ಕಾರಿನಲ್ಲಿ ಕುಳಿತು ಹತ್ತಿರದ ರೈಲ್ವೆ ನಿಲ್ದಾಣದಲ್ಲಿ ಕಾರನ್ನು ಬಿಟ್ಟು, ರೈಲಿನಲ್ಲಿ ಕುಳಿತು ಹೋಗಬೇಕು. ೧೦ ಘಂಟೆ ಹೊತ್ತಿಗೆ ರೈಲಿನಲ್ಲಿರುವ ಭೋಜನದ ಬೋಗಿಯಲ್ಲಿ ಊಟಉಪಚಾರ. ಈ ಮಧ್ಯೆ, ಅನೇಕ ಪದರಗಳಿರುವ ಒಂದು ಸಣ್ಣ ಪೆಟ್ಟಿಗೆಯಲ್ಲಿ ಆಫೀಸಿನ ಕಾಗದ ಪತ್ರಗಳು. ಆಫೀಸಿನಲ್ಲಿ ಕುಳಿತಂತೆಯೇ ಅಲ್ಲಿ ಕಾಗದ ಪತ್ರಗಳನ್ನು ನೋಡಿ ಕೆಲಸ ಮುಗಿಸುವುದು. ತಪ್ಪದೆ ಒಂದು ವರ್ತಮಾನ ಪತ್ರಿಕೆಯ ಒಂದೆರಡು ಸಂಚಿಕೆಗಳನ್ನು ಓದುವುದು. ನ್ಯೂಯಾರ್ಕಿನಲ್ಲಿಳಿದು ಬಸ್ಸಿನಲ್ಲೋ, ಸಬ್‌ವೆ ಯಲ್ಲೋ ಕುಳಿತು ಕಚೇರಿಗೆ ಹೋಗುವುದು. ಸಂಜೆ ಮನೆಗೆ ಬರಬೇಕಾದರೆ ೧೦ ಘಂಟೆ. ರಾತ್ರಿ ಊಟ ಮನೆಯಲ್ಲಿ. ಊಟವಾದೊಡನೆ, ಮನೆಯ ಪಕ್ಕದಲ್ಲಿರುವ ಸ್ವಂತ ವರ್ಕ್‌ಷಾಪಿಗೆ ಹೋಗಿ, ಕೊಳೆಬಟ್ಟೆಯನ್ನು ಧರಿಸಿ, ಮರಗೆಲಸ ಮಾಡುವುದು ರಾತ್ರಿ ೧೨ ಘಂಟೆ ವರೆಗೆ. ಬೇಕಾದ ಕುರ್ಚಿ, ಮೇಜ, ಆಟದ ಸಾಮಾನು ಮಾಡುವುದು. "ಇವುಗಳನ್ನು ಮಾರುತ್ತೀರ" ಎಂದು ಕೇಳಿದರೆ "ಮಾರುವುದಕ್ಕಲ್ಲ, ಕೇವಲ ವಿನೋದಕ್ಕಾಗಿ" ಎಂದು ಉತ್ತರ. ಕಾರ್ಖಾನೆಯಲ್ಲಿ ಕೆಲಸವಿಲ್ಲದಿದ್ದರೆ ಓದುವುದು, ಅಥವಾ ಟೆಲಿವಿಷನ್ ನೋಡುವುದು. ಸಾಮಾನ್ಯವಾಗಿ ಶೇಕಡ ೮೦ ಮನೆಗಳಲ್ಲಿ ಟೆಲಿವಿಷನ್ ಇದೆ. ಕೆಲಸಕ್ಕಾಗಿ ಪ್ರತಿನಿತ್ಯ ೫೦೦ ಮೈಲಿಗಳ ಪ್ರಯಾಣ ಮಾಡುವವರು ಅನೇಕರಿದ್ದಾರೆ. ಉದಾಹರಣೆಗೆ ಫಿಲಿಡೆಲ್ಫಿಯ ನಗರಕ್ಕೆ ನ್ಯೂಯಾರ್ಕಿನಿಂದ ಬರುತ್ತಾರೆ. ಆದರೆ ಪ್ರಯಾಣ ಕಾಲದಲ್ಲಿ ಓದುವುದು, ಕಾಗದ ಪತ್ರಗಳನ್ನು ವಿಲೇವಾರಿ ಮಾಡುವುದು. ಪುಸ್ತಕವಿಲ್ಲದೆ ಯಾರೂ ಪ್ರಯಾಣ ಮಾಡುವುದಿಲ್ಲ.

ನಮ್ಮನ್ನು ಮೊದಲ ಹೆಸರಾವುದು, ಮಧ್ಯದ ಹೆಸರಾವುದು, ಕೊನೆಯ ಹೆಸರಾವುದು ಎಂದು ಕೇಳುತ್ತಾರೆ. ಇವರಿಗೆ ಮೊದಲ ಹೆಸರು ಸ್ವಂತ ಹೆಸರು. ಕೊನೆಯ ಹೆಸರು ಮನೆತನದ ಹೆಸರು. ಮಧ್ಯದ ಹೆಸರೂ ಸ್ವಂತ ಹೆಸರಿನ ಒಂದು ಭಾಗ. ಇದರಿಂದ Arthur T. Birsh ಎಂದು ಬರೆಯುತ್ತಾರೆ. ಮಧ್ಯದ ಹೆಸರನ್ನು ಅಕ್ಷರದಿಂದ ಸಂಕೇತಿಸಿ, ಪೂರ್ಣ ವಿರಾಮವನ್ನಿಡುತ್ತಾರೆ. Mr. Birsh ಎಂದು ಕರೆಯಬೇಕು. ಅವರು ಬಹಳ ಹಿರಿಯರಾದರೆ, Mr Arthur ಎಂದು ಕರೆಯಬಾರದು. Arthur ಎಂದು ಕರೆದರೆ ವಾತ್ಸಲ್ಯವನ್ನು ತೋರಿಸುತ್ತದೆ. Mr Arthur ಎಂದರೆ ದೂಷಣೆ ಮಾಡಿದಂತಾಗುತ್ತದೆ. ಬರ್ಷ್ ಎಂದು ಕರೆದರೆ ಬಯ್ದಂತಾಗುತ್ತದೆ. ನಾನು ಒಂದು ಸಲ ಬರ್ಷ್ ಎಂದೆ. ಅವರು ಆಗ್ರಹಗೊಂಡರು. ಅನಂತರ ಹೇಳಿಕೊಟ್ಟರು. ಸ್ತ್ರೀಯರೂ ಮೊದಲ ಹೆಸರನ್ನು ಕರೆಯಬೇಕೆಂದು ಹೇಳುತ್ತಾರೆ. Miss ಅಥವಾ Mrs ಎಂದು

ಕರೆಯಬಾರದು. Mrs ಎಂದರೆ ವಯಸ್ಸಾದವರು ಎಂಬ ಭಾವನೆ. ಟಪ್ಪಾಲು ಕಾಗದಗಳಲ್ಲಿ Mr. Arthur T. Birsh ಎಂದೇ ಬರೆಯಬೇಕು. ಅಥವಾ Mr and Mrs Arthur T. Birsh ಎಂದು ಬರೆಯಬೇಕು. Mrs ಮೊದಲು ಬರುವುದಿಲ್ಲ. ಅವರಿಗೆ ಬಹಳ ವಯಸ್ಸಾದಂತೆ ಕಂಡರೂ girl ಎಂದೇ boy ಎಂದೇ ಕರೆಯಬೇಕು. ತಮಗೆ ವಯಸ್ಸಾಗಿದೆ ಎಂದು ತೋರಿಸಿಕೊಳ್ಳುವುದಾಗಲೀ, ಹಾಗೆ ಕರೆಸಿಕೊಳ್ಳುವುದಾಗಲೀ ಇಷ್ಟವಿಲ್ಲ. ಸಾಮಾನ್ಯವಾಗಿ ಮಧ್ಯ ವಯಸ್ಸಿನವರಾದರೂ boy ಮತ್ತು girl ಎಂದೇ ಸಂಬೋಧಿಸಿಕೊಳ್ಳುವುದು ವಾಡಿಕೆ. ಸುಮಾರು ೮೦ ರ ಹತ್ತಿರ ವಯಸ್ಸಾಗುತ್ತಿದ್ದರೂ ಯುವಕರಂತೆಯೇ ಉತ್ಸಾಹದಿಂದ ಕೆಲಸ ಮಾಡುತ್ತಾರೆ. ಯಾವ ಕಾಯಿಲೆ ಕಸಾಲೆಯೂ ಇರುವುದು ಕಾಣುವುದಿಲ್ಲ. ಯುವಕ ಯುವತಿಯರಲ್ಲಿ ಯಾರೂ, ನರಪೇತಾಳಗಳಿಲ್ಲ. ಎತ್ತರದ ಆಕಾರ, ತುಂಬಿದ ಮೈ. ಸ್ತ್ರೀಯರು ತೆಳ್ಳಗಿರಲು ಹೆಚ್ಚು ಪ್ರಯತ್ನ ಪಡುತ್ತಾರೆ. ಊಟ ಉಪಚಾರಗಳಲ್ಲಿ ಕಟ್ಟುನಿಟ್ಟಾಗಿರುತ್ತಾರೆ.

ಮೂರು ಹೊತ್ತು ಊಟ. ಪ್ರಾತಃಕಾಲ Breakfast ; ಮೊದಲು ಹಣ್ಣಿನ ರಸವನ್ನು ಕುಡಿದು ಅನಂತರ ತಿಂಡಿಯನ್ನು ತಿನ್ನುತ್ತಾರೆ. ಮಧ್ಯಾಹ್ನದ ಊಟ Lunch. ಸ್ತ್ರೀಯರು ಸಾಮಾನ್ಯವಾಗಿ ಮಿತ ಆಹಾರಿಗಳು. ಸಾಯಂಕಾಲದ ಊಟ Dinner. ಅವರು ಆಹಾರವನ್ನು ಚಾಕುವಿನಿಂದ ಅಂದವಾಗಿ ಹಚ್ಚಿ, ಮುಳ್ಳು ಗುದ್ದಲಿಗೆ ಸಿಕ್ಕಿಸಿ ತಿನ್ನುವುದರಲ್ಲಿ ಒಂದು ವಿಧವಾದ ಸೊಬಗು ಕಾಣುತ್ತದೆ

ಅಡಿಗೆ ಮಾಡುವುದು ಸೈಂಟಿಫಿಕ್ ಎಂದು ಹೇಳಬಹುದು. ದೊಡ್ಡ ದೊಡ್ಡ ಎನ್‌ಸೈಕ್ಲೋಪಿಡಿಯೋದಂತ ಅಡಿಗೆಯ ಪುಸ್ತಕಗಳಿವೆ. ಅವುಗಳಲ್ಲಿ ಹೇಳಿರುವ ಪ್ರಮಾಣದಲ್ಲಿ ಬೆರಸಿ ಅಡಿಗೆ ಮಾಡುತ್ತಾರೆ. ಕೆಮಿಸ್ಟ್ರಿ ಲ್ಯಾಬ್‌ನಲ್ಲಿ ಎಕ್ಸ್‌ಪೆರಿಮೆಂಟ್ ಮಾಡುತ್ತಿರುವಂತೆ ಕಾಣುತ್ತದೆ. ಬೆಂದಮೇಲೆ ಬೆರಸುವುದೇ ಹೆಚ್ಚು. ಕಾರವನ್ನು ಕಂಡರಿಯದವರೇ ಬಹಳ ಮಂದಿ. ಅನೇಕರು ಶಾಖಾ ಆಹಾರಿಗಳೂ ಇದ್ದಾರೆ. ಒಂದು ಸಲ Vegetarian Club ಎಂದು ಬೋರ್ಡ್ ಹಾಕಿದ್ದುದನ್ನು ಕಾರಿನಲ್ಲಿ ಎಲ್ಲಿಯೋ ಹೋಗುತ್ತಿರುವಾಗ ನೋಡಿದೆ. ಅದರ ವಿಷಯವಾಗಿ ಕೇಳಿದಾಗ ಅನೇಕರು ಶಾಖಾ ಆಹಾರಿಗಳಾಗಲು ಹಾಗೆ ಸಂಸ್ಥೆಗಳನ್ನೇರ್ಪಡಿಸಿಕೊಂಡಿದ್ದುದು ತಿಳಿಯಬಂತು.

ಮಕ್ಕಳ ಬೆಳವಣಿಗೆಗೆ ಹೆಚ್ಚು ಗಮನಕೊಡುತ್ತಾರೆ. ಅತ್ಯಂತ ಹೆಚ್ಚಾದ ಗಮನವನ್ನು ಸೆಳೆದಿರುವ ಇವರ ಎರಡು ವಿಷಯಗಳಾವುವೆಂದರೆ ಒಂದನೆಯದು ಮಕ್ಕಳ ಬೆಳವಣಿಗೆ, ಎರಡನೆಯದು ಸ್ತ್ರೀ ಪೋಷಣೆ. ಸ್ತ್ರೀಯು ಪುಷ್ಪವತಿಯಾಗಿರುವ ಕಾಲದಲ್ಲಿ ಅತ್ಯಂತ ಎಚ್ಚರಿಕೆಯಿಂದ ಆಹಾರ ನಿಯಮಗಳನ್ನು ಪಾಲಿಸುತ್ತಾಳೆ. ವೈದ್ಯರ ಹಿತ ಸಲಹೆಗಳನ್ನು ಪಡೆಯುತ್ತಾಳೆ. ಸಾಮಾನ್ಯವಾಗಿ ಪ್ರಸವಕಾರ್ಯ

ವೆಲ್ಲಾ ಆಸ್ಪತ್ರೆಯಲ್ಲಿ ನಡೆಯುತ್ತದೆ. ಮಾತೆಯರು ಮಕ್ಕಳಿಗೆ ಸ್ತನ್ಯಪಾನ ಮಾಡಿಸುವುದು ವಿರಳ; ಮಕ್ಕಳಿಗೆ ಯೋಗ್ಯವಾದ ಹಾಲನ್ನು ಶೀಶೆಗಳಲ್ಲಿ ಮಾರುತ್ತಾರೆ. ಅದನ್ನೇ ಕುಡಿಸುತ್ತಾರೆ. ಔಷಧಿ ಗುಳಿಗೆಗಳನ್ನು ಆಹಾರದಷ್ಟೇ ಕ್ರಮವಾಗಿ ನಿತ್ಯವೂ ತೆಗೆದುಕೊಳ್ಳುತ್ತಾರೆ. ಅನೇಕ ತಾಯಂದಿರು ಸ್ಕೂಲು ಕಾಲೇಜುಗಳಲ್ಲಿ ತಾವು ಓದುತ್ತಿದ್ದಾಗ ಮಕ್ಕಳ ಬೆಳೆವಣಿಗೆಯ ವಿಷಯವಾಗಿ ಪಾಠ ಕಲಿತಿರುತ್ತಾರೆ. ಅಲ್ಲದೆ ಬೇಕಾದ ಪುಸ್ತಕಗಳನ್ನು ಓದುತ್ತಾರೆ. ವಾರಪತ್ರಿಕೆಗಳಲ್ಲಿ ತಪ್ಪದೆ ಆಹಾರ, ಆರೋಗ್ಯ, ಮಕ್ಕಳ ಬೆಳವಣಿಗೆಯ ವಿಷಯವಾಗಿ ಲೇಖನಗಳಿರುತ್ತವೆ. ಇದರಿಂದ ತಾಯಿಯಾದವಳಿಗೆ ಕಾಲ ಕಾಲಕ್ಕೆ ಕೊಡಬೇಕಾದ ಆಹಾರ, ವೈದ್ಯಕೀಯ ತಿಳುವಳಿಕೆ, ಮಕ್ಕಳ ಬೆಳವಣಿಗೆಗೆ ಬೇಕಾದ ಸನ್ನಿವೇಶ ಎಲ್ಲವೂ ತಿಳಿದಿರುತ್ತದೆ.

ಮಗುವನ್ನು ತಾಯಿಯ ಕೊಠಡಿಯಲ್ಲಿ ಮಲಗಿಸುವುದಿಲ್ಲ. ಅದಕ್ಕೆ ಬೇರೇ ಕೊಠಡಿ. ಮಲಮೂತ್ರಗಳು ಹಾಸಿಗೆಯ ಮೇಲೆ ಚೆಲ್ಲದಂತೆ ಬಿಗಿಯಾದ ಮತ್ತು ಚೀಲದಂತ ಕಾಚವನ್ನು ತೊಡಿಸಿರುತ್ತಾರೆ. ಪ್ರಾತಃಕಾಲದಲ್ಲೆದ್ದು, ಬಟ್ಟೆಯನ್ನು ಬದಲಾಯಿಸಿ, ಆಯಾ ಕಾಲಕ್ಕೆ ಅನುಗುಣವಾದ ಆಹಾರವನ್ನು ಕೊಟ್ಟು, ಕಟಕಟೆಯಂತಹ ಕಾಗಡಿಯಲ್ಲಿ ಕೂರಿಸಿಬಿಡುತ್ತಾರೆ. ಕಾಗಡಿಯ ತುಂಬ ವಯಸ್ಸಿಗೆ ತಕ್ಕಂತೆ ಹೊಂದುವ, ಬುದ್ಧಿ ಬೆಳವಣಿಗೆಗೆ ತಕ್ಕಂತಹ ಆಟದ ಸಾಮಾನುಗಳಿರುತ್ತವೆ. ಮಗುವಿನ ಹತ್ತಿರ ಯಾರೂ ಇರುವುದಿಲ್ಲ. ನಾಯಿ ಒಂದೊಂದು ವೇಳೆ ಓಡಾಡುತ್ತದೆ ಅಷ್ಟೆ. ತಾಯಿ ತನ್ನ ಕೆಲಸದಲ್ಲಿ ನಿರತಳಾಗಿರುತ್ತಾಳೆ. ಯಾವುದಾದರೂ ವೃತ್ತಿಯಲ್ಲಿದ್ದರೆ, ಕಾರನ್ನು ನಡೆಸಿಕೊಂಡು ಹೋಗುತ್ತಾಳೆ. ಇಲ್ಲಿ ನಮ್ಮ ದೇಶದ ಹಾಗೆ ಕೆಲಸಮಾಡುವ ಶೂದ್ರ ವೃತ್ತಿಯ ಹೆಂಗಸರಿಲ್ಲ. ನೀಗ್ರೋಜನರು ಸ್ವತಂತ್ರರಾಗಿರುವುದರಿಂದ ಬಿಳಿಯಜನರೇ ಒಬ್ಬೊಬ್ಬರ ಮನೆಯಲ್ಲಿ ಕೆಲಸ ಮಾಡುತ್ತಾರೆ. ಮಧ್ಯಮ ವರ್ಗದವರು ಮಾತ್ರ ಈ ಬಗೆಯ ಆಳನ್ನು ಇಟ್ಟುಕೊಂಡಿರುತ್ತಾರೆ. ಈ ಆಳು ಅಥವಾ ಕೆಲಸಮಾಡುವವಳು ವಾರಕ್ಕೆ ಒಂದು ಸಲ ಬಂದರೇ ಹೆಚ್ಚು. ವಾರಕ್ಕೆ ಎರಡು ದಿನ ಅಥವಾ ಮೂರು ದಿನ ಕೆಲಸದವರು ಬಂದರೆ ಅವರು ಅಧಿಕ ಶ್ರೀಮಂತರೆಂದು ಹೇಳಬಹುದು. ವಾರಕ್ಕೆ ಒಂದು ದಿನ ಬಂದು ಮನೆಯೊಡತಿಗೆ ಸಹಾಯಮಾಡುತ್ತಾರೆ. ತಾವೇ ಎಲ್ಲ ಕೆಲಸವನ್ನೂ ಮಾಡಿಬಿಡುವುದಿಲ್ಲ. ಮುಖ್ಯವಾದ ಕೆಲಸವಾವುದೆಂದರೆ ಮನೆಯ ಮೂಲೆ ಮೂಲೆಯನ್ನೂ, ಗೋಡೆಯನ್ನೂ ಗುಡಿಸುವುದು ಅಷ್ಟೆ. ಬಟ್ಟೆ ಒಗೆಯಲು, ಪಾತ್ರೆ ತೊಳೆಯಲು ಯಂತ್ರಗಳಿರುವುದರಿಂದ ಕೆಲಸದವರ ಅಗತ್ಯ ಅಷ್ಟಿಲ್ಲ. ನೆಲ ಗುಡಿಸಲೂ ಯಂತ್ರಗಳಿವೆ. ಬಂಡಿಯ ಗಾಲಿಯಂತಹ ಒಂದು ಸಣ್ಣ ಯಂತ್ರವನ್ನು ನೆಲದಮೇಲೆ ಉರುಳಿಸುತ್ತಾರೆ. ಅದು

ಒಂದು ಕೊಳಾಯಿಯಿಂದ ಸಾಬೂನಿನ ನೀರನ್ನು ಚೆಲ್ಲುತ್ತದೆ. ಇನ್ನೊಂದು ಕಡೆಯಿಂದ ಉಜ್ಜುತ್ತದೆ, ಅನಂತರ ಗುಡಿಸಿ ನೆಲವನ್ನು ಆರಿಸುತ್ತದೆ. ರಾತ್ರಿ ಒಂದು ವೇಳೆ ಚಲನಚಿತ್ರ ನೋಡಲು ದಂಪತಿಗಳಿಬ್ಬರೂ ಹೋಗಬೇಕಾದರೆ ಮನೆಗೆಲಸಕ್ಕೆ ಸಹಾಯ ಮಾಡುವ ಸ್ತ್ರೀಗೆ ಫೋನಿನಲ್ಲಿ ಹೇಳುತ್ತಾರೆ. ಆ ಕೆಲಸದ ಸ್ತ್ರೀಯು ಕಾರಿನಲ್ಲಿ ಕಾಲಕ್ಕೆ ಸರಿಯಾಗಿ ಬಂದು ಮಗುವು ಕೊಠಡಿಯಲ್ಲಿ ಮಲಗಿದ್ದರೆ, ತಾನು ಸುಖವಾಗಿ ಸೋಫದ ಮೇಲೆ ಕುಳಿತುಕೊಂಡು ಓದುತ್ತಿರುತ್ತಾಳೆ. ಸೇವಕಿಯು ಮನೆಗೆ ಬಂದೊಡನೆ ಯಜಮಾನನು ಎದ್ದು ನಿಲ್ಲಬೇಕು. ಸ್ತ್ರೀಯರು ಬರುತ್ತಿದ್ದರೆ ಗಂಡಸರು ಎದ್ದು ನಿಂತು, ಒಂದೊಂದು ವೇಳೆ ತಗ್ಗಿ ಬಗ್ಗಿ ಮೃದುನುಡಿಗಳನ್ನಾಡಿ, ಅವರು ಕುಳಿತ ನಂತರ ಕುಳಿತುಕೊಳ್ಳುವುದು ನಾಗರಿಕರ ಲಕ್ಷಣ. ಒಂದು ಘಂಟೆಗೆ ಇಷ್ಟು ಎಂದು ಸೇವಕಿಗೆ ಹಣಕೊಡಬೇಕು. ನಮ್ಮಲ್ಲಿರುವ ಹಾಗೆ ತಿಂಗಳಿಗೊಂದು ಸಲವಲ್ಲ. ಮನೆಯವರು ಮನೆಗೆ ಬಂದೊಡನೆ, ತಾನು ಹೊರಡಲುದ್ಯುಕ್ತಳಾಗುತ್ತಾಳೆ. ಆಗ ಮನೆಯವರು Thank you very much ಎಂದು ಹೇಳಬೇಕು. ಹಾಗೆ ಹೇಳದಿದ್ದರೆ ಸೇವಕಿಯು ಕೋಪಿಸಿಕೊಳ್ಳುತ್ತಾಳೆ. ಅನಂತರ 'Good night' ಹೇಳಿ ಕಾರಿನಲ್ಲಿ ಕುಳಿತು ಮನೆಗೆ ಹೋಗುತ್ತಾಳೆ. ಅವಳಿಗೂ ಮನೆಯ ಯಜಮಾನಿಗೂ, ಉಡುಪಿನಲ್ಲಾಗಲೀ ಮಾತುಕತೆಯಲ್ಲಾಗಲೀ ಯಾವ ವ್ಯತ್ಯಾಸವೂ ಕಾಣುವುದಿಲ್ಲ. ಒಂದು ಸಲ ನಾನು ಒಬ್ಬರ ಮನೆಗೆ ಹೋದಾಗ, ಸೇವಕಿಯೂ ಮನೆಯ ಯಜಮಾನಿಯೂ ಒಟ್ಟಿಗೆ ನನ್ನನ್ನು ಎದುರು ಮಾತನಾಡಿಸಲು ನಿಂತಿದ್ದರು. ನನಗೆ ಸೇವಕಿಯೇ ಮನೆ ಯಜಮಾನಿಯೆಂದು ತೋರುತ್ತಿತ್ತು. ಇಂತವರ ಮನೆಗೆ ಹೋಗುತ್ತೇನೆ ಎಂದು ನನಗೆ ಗೊತ್ತಿದ್ದುದರಿಂದ "Hello Mrs. . ." ಎಂದು ಸೇವಕಿಗೇ ಹಸ್ತಲಾಘವನ್ನು ಕೊಟ್ಟೆ. ಆಗ ಆಕೆ "ನಾನು Mrs. . .ಅಲ್ಲ, ಇವರು. ನಾನು ಸಹಾಯಮಾಡುವವಳು," ಎಂದಳು. ಅನಂತರ ಯಜಮಾನಿಯನ್ನು ಮಾತನಾಡಿಸುವದಾಯಿತು. ಸೇವಕಿಯನ್ನು ಮನೆ ಯಜಮಾನಿಯೆಂದು ನಾನು ತಪ್ಪು ತಿಳಿದುದಕ್ಕೆ, ಅವರು ಆಕ್ರೋಶಗೊಳ್ಳಲಿಲ್ಲ. ಆದರೆ ಸೇವಕಿಯಲ್ಲಿ ಒಂದು ವಿಧವಾದ ದಗ್ಧ ಚಿಂತೆ, ಭಗ್ನ ಹರುಷ ಕಂಡಿತು, ಅಥವಾ ಅದು ನನ್ನ ಕಣ್ಣಿಗೆ ಹಾಗೆ ಕಂಡಿರಬಹುದು. ಏಕೆಂದರೆ ಈ ಸಮಾಜದಲ್ಲಿ ದುಡಿಮೆ ಮಾಡುವವರನ್ನು ಕೀಳೆಂದು ಭಾವಿಸುವುದಿಲ್ಲ. ಜನರು ತಮ್ಮ ಕೆಲಸ ತಾವು ಮಾಡಿಕೊಳ್ಳುವುದರಲ್ಲಿ ಅಪೂರ್ವ ಶಕ್ತಿಯನ್ನು ತೋರಿಸುತ್ತಾರೆ. ಪ್ರಯಾಣ ಮಾಡಬೇಕಾದರೆ ಪ್ರತಿಯೊಬ್ಬರ ಬಳಿಯಲ್ಲಿಯೂ ಒಂದು ಪೆಟ್ಟಿಗೆ ಇರುತ್ತದೆ. ಅದು ಎಷ್ಟೇ ಭಾರವಾಗಿದ್ದರೂ ಕೈಯಲ್ಲಿ ಹಿಡಿದು ಪ್ಲಾಟ್‌ಫಾರಂನಿಂದ ರೈಲುಬಂಡಿಗೆ ಹೋಗಬೇಕಾದರೆ ಎಷ್ಟೊ ದೂರ—ಅಷ್ಟು ದೂರವನ್ನು ನಡೆದು ಬಂಡಿಯನ್ನು ಹತ್ತಿ ಹಲಕಿನಮೇಲೆ

ಇಡುತ್ತಾರೆ. ರೈಲ್ವೆ ನಿಲ್ದಾಣಗಳಲ್ಲಿ ಕೂಲಿಯವರುಂಟು. ಎಲ್ಲರಂತೆ ಅವರೂ ಸೂಟು ಧರಿಸಿರುತ್ತಾರೆ. ಆದರೆ ಅವರ ಕೂಲಿ ಸರ್ಕಾರಿ ಅಧಿಕಾರಿಯ ಸಂಬಳದಷ್ಟೇ ಇರುತ್ತದೆ. ಇದರಿಂದ ಹೊರಲಾರದಷ್ಟು ಹೊರೆ ಇದ್ದರೆ ಮಾತ್ರ ಕೂಲಿಯನ್ನು ನೇಮಿಸುತ್ತಾರೆ.

ತಾವು ಕೂಲಿ ಕೆಲಸ ಮಾಡುತ್ತಿದ್ದರೆ, ನಾನು ಜವಾನ, ಕೆಲಸಗಾರ, ಕೂಲಿಗಾರ, ಎಂದು ಅವರು ಹೇಳಿಕೊಳ್ಳುವುದಿಲ್ಲ. ಹಾಗೆ ಹೇಳಿಕೊಳ್ಳುವುದು ಅವರ ಮಾನಕ್ಕೆ ಕಡಿಮೆ. "ನಾನು ಶಾರ್ಲೆಟ್ ಟೆಕ್ಸ್‌ಟೈಲ್ಸ್‌ನಲ್ಲಿದ್ದೇನೆ, ನಾನು ಸೆಂಟ್ರಲ್ ರೈಲ್ವೆಯಲ್ಲಿ ಕೆಲಸ ಮಾಡುತ್ತೇನೆ, ನಾನು ವೆಸ್ಟರನ್ ಪ್ರಿಂಟರ್ಸ್‌ಗೆ ಸೇರಿದವನು," ಎಂದು ಹೇಳಿಕೊಳ್ಳುತ್ತಾನೆ. ಸಾಮಾನ್ಯವಾಗಿ ಕಾರ್ಖಾನೆಯಲ್ಲಿ ಕೆಲಸಮಾಡುವ ಕಾರ್ಮಿಕನೂ ಕಾರಿನಲ್ಲಿ ಬರುತ್ತಾನೆ. ವೆಸ್ಟರನ್ ಪ್ರಿಂಟರ್ಸ್ ಎಂಬ ಮುದ್ರಣಾಲಯದಲ್ಲಿ ೬೦೦೦ ಮಂದಿ ಕೆಲಸಗಾರರಿದ್ದಾರೆ. ಸುಮಾರು ೪೦೦೦ ಕಾರುಗಳು ಹೊರಗೆ ನಿಂತಿದ್ದುವು. ಅವೆಲ್ಲವೂ ಕೆಲಸಗಾರರಿಗೆ ಸೇರಿದುವು ಎಂದು ಹೇಳಿದರು. ನಮ್ಮ ಕಾಲೇಜಿನಲ್ಲಿ ಸುಣ್ಣ ಬಣ್ಣ ಬಳಿಯಲು ಕೆಲಸಗಾರರು ಬರುತ್ತಾರೆ. ಪುಸ್ತಕ ಬರೆಯುವವರು ಹೇಗೆ ಕತ್ತೆತ್ತಿ ಓಡಾಡುತ್ತಾರೋ, ಇವರು ಅದಕ್ಕಿಂತ ಹೆಚ್ಚು ದಿಮಾಕಿನಲ್ಲಿ ಓಡಾಡುತ್ತಾರೆ. ಹೊಟೆಲ್ಲಿನಲ್ಲಿ ಒಟ್ಟಿಗೆ ಕುಳಿತು ಊಟ ತಿಂಡಿಗಳನ್ನು ತಿನ್ನುತ್ತಾರೆ. ನಮ್ಮ ದೇಶದಲ್ಲಿಯೂ ಇದೇ ವಾತಾವರಣ ಬರುತ್ತಿದೆಯಲ್ಲವೆ?

ಈ ದೇಶದಲ್ಲಿ ಬಡವರಿಲ್ಲವೆಂದಲ್ಲ, ದಂಡಿಯಾಗಿದ್ದಾರೆ. ಇವರು ನಮ್ಮ ದೇಶದವರಷ್ಟು ಬಡವರಲ್ಲ. ಇವರಿಗೆ ಕಾರು ಇರುತ್ತದೆ. ಟೆಲಿವಿಷನ್ ಇರುತ್ತದೆ, ಒಂದು ಮನೆ ಇರುತ್ತದೆ. ಎಲ್ಲರಂತೆಯೇ ಉಡುಪು, ಊಟ ಉಪಚಾರ. ಆದರೆ ಮಕ್ಕಳನ್ನು ವಿಶ್ವವಿದ್ಯಾನಿಲಯಗಳಲ್ಲಿ ಓದಿಸಲು ಹಣವಿರುವುದಿಲ್ಲ. ದೊಡ್ಡ ದೊಡ್ಡ ಕಾಕ್‌ಟೇಯಿಲ್ ಪಾರ್ಟಿಗಳಿಗೆ ಹೋಗಲು ಹಣವಿರುವುದಿಲ್ಲ. ಯಾವಾಗಲೂ ಹಿಡಿತವಾಗಿಯೇ ದುಡ್ಡು ಖರ್ಚುಮಾಡಬೇಕು. ಸಾಮಾನುಗಳನ್ನು ಕೊಳ್ಳಬೇಕಾದರೆ ಯಾರೂ ಪೂರ್ತಿ ದುಡ್ಡನ್ನು ಒಂದೇ ಸಲ ಕೊಡುವುದಿಲ್ಲ. ಕಂತಿನ ಪ್ರಕಾರ ಅನೇಕ ವರ್ಷಗಳ ಕಾಲ ಕೊಡುತ್ತಾರೆ. ಸಂಬಳ ಬಂದ ತಕ್ಷಣ, ಹತ್ತಾರು ಕಂತಿಗೆ ಹೋಗುತ್ತದೆ. ದೊಡ್ಡ ದೊಡ್ಡ ಪಟ್ಟಣಗಳಲ್ಲಿ ತೀರಾ ಬಡವರೂ ಇರುತ್ತಾರೆ. ಬಂದ ಸಂಬಳವೆಲ್ಲಾ ಹೀಗೆ ಖರ್ಚಾಗುತ್ತದೆ. ವಾಸಕ್ಕೆ ಬಿದ್ದು ಹೋಗುತ್ತಿರುವ ಹಳೆ ಮನೆಯೊಂದು. ನ್ಯೂಯಾರ್ಕಿನಲ್ಲಿ ಇಂತಹ ಬಡವರಿರುವ ಒಂದು ಸ್ಥಳವಿದೆ. ಇಲ್ಲಿರುವವರು ಬಹಳ ಮಂದಿ ನೀಗ್ರೋ ಜನರು, ಅಥವಾ ಬೆರೆತ ಬಿಳಿಯ ನೀಗ್ರೋ ಜನರು, ಸ್ವಲ್ಪ ಮಂದಿ ಬಿಳಿಯ ಜನರು. ದೃಶ್ಯ ನಿಜವಾಗಿಯೂ ದುರಂತಮಯವಾಗಿದೆ. ನ್ಯೂಯಾರ್ಕ್ ಭವ್ಯ ನಗರವೆಲ್ಲಿ? ನಾಗರಿಕತೆಯ ರಥಕ್ಕೆ ಸಿಕ್ಕಿ ಮುರಿದು ಬಿದ್ದಿರುವ ಮಾನವ ಪಂಗಡವೆಲ್ಲಿ?

ಎಲ್ಲಿಗೆಲ್ಲಿಗೆ ಅಂತರ! ಆದರೆ ಈ ದೃಶ್ಯಗಳು ಅಪರೂಪ. ಎಲ್ಲೆಡೆಯೂ ಸುಖ ಸೌಂದರ್ಯ ಹಬ್ಬಿದೆ.

ರೈಲ್ವೆ ನಿಲ್ದಾಣದಲ್ಲಿ ಒಬ್ಬನು ಕುರ್ಚಿಯ ಮೇಲೆ ಕುಳಿತಿದ್ದನು. ಮುಂದೆ ಮೇಜಿನ ಮೇಲೆ ಒಂದು ಬೋರ್ಡಿತ್ತು. ಅವನು ಅಧಿಕಾರಿಯಂತೆ ಸೂಟು ಧರಿಸಿದ್ದನು. ಕಣ್ಣಿಗೆ ತಂಪು ಕನ್ನಡಿಯನ್ನು ಧರಿಸಿದ್ದನು. ನಾನು ಯಾರೋ ಅಧಿಕಾರಿ ಎಂದೇ ತಿಳಿದುಕೊಂಡೆ. ಆದರೆ ಬೋರ್ಡ್ ನೋಡಿದರೆ "ನಾನು ಕುರುಡ, ಸಹಾಯ ಮಾಡಿ" ಎಂದಿತ್ತು. ಇನ್ನೊಂದು ಸಲ ಬೀದಿಯಲ್ಲಿ ಹೋಗುತ್ತಿದ್ದೆ. ಒಬ್ಬಾಕೆ ನಿಧಾನವಾಗಿ ನಡೆಯುತ್ತಿದ್ದಳು. ಜನರು ನಡೆಯಬೇಕಾದರೆ ರೈಲು ಮೋಟಾರು ಓಡಾಡಿದಂತೆ. ಅವಳು ನಿಧಾನವಾಗಿ ನಡೆಯುತ್ತಿದ್ದುದನ್ನು ಕಂಡು ನನಗೆ ಆಶ್ಚರ್ಯವಾಯಿತು. ಅವಳ ಸರಿ ನಾನು ನಡೆದಾಗ ಅವಳನ್ನು ನೋಡಿದೆ. ಸೊಗಸಾಗಿ ಎಲ್ಲರಂತೆ ಉಡುಪು ಧರಿಸಿದ್ದಳು. ಕೈಯಲ್ಲಿ ಒಂದು ಪೆಟ್ಟಿಗೆಯಂತಹ ತಟ್ಟೆ ಹಿಡಿದಿದ್ದಳು. ಕಣ್ಣಿಗೆ ತಂಪು ಕನ್ನಡಿ ಧರಿಸಿದ್ದಳು. ಆಗ ಗೊತ್ತಾಯಿತು, ಅವಳೂ ಯಾಚಿಸುವವಳೆಂದು. ಈ ದೃಶ್ಯಗಳು ಬಹಳ ಅಪರೂಪ. ಈ ದೇಶದವರ ಬರವಣಿಗೆಯಲ್ಲಿ "ಭಾರತದಲ್ಲಿ ಭಿಕ್ಷುಕರು ತುಂಬಿದ್ದಾರೆ. ರಾತ್ರಿಯಲ್ಲಿ ಹೊದಿಯುವುದಕ್ಕೂ ಇಲ್ಲದೆ ಬೀದಿಯಲ್ಲೇ ಮಲಗಿರುತ್ತಾರೆ" ಎಂದು ಮೊದಲಾಗಿದೆ. ಯಾರು ಇಲ್ಲ ಎಂದು ಹೇಳುವುದಕ್ಕೆ ಸಾಧ್ಯ? ಆದರೆ ಈ ದೇಶದಲ್ಲಿ ನೋಡೇನು ಎಂದರೂ ಆ ದೃಶ್ಯವಿಲ್ಲ.

ನೀಗ್ರೋ ಜನರ ಸ್ಥಿತಿಯೂ ಉತ್ತಮಗೊಳ್ಳುತ್ತಿದೆ. ಸರಿಯಾಗಿ ಆಲೋಚಿಸದೆ ನೋಡುವುದಾದರೆ ಅನೇಕ ತಪ್ಪುಗಳು ಕಾಣುತ್ತವೆ. ಕೆಲವು ಕಡೆಗಳಲ್ಲಿ, ನೀಗ್ರೋ ಜನರು ಬೇರೆ ವಾಸ ಮಾಡಬೇಕು. ಹೊಟೆಲ್ಲುಗಳಲ್ಲಿ ಕೆಲಸ ಮಾಡಿದರೂ, ಅಡಿಗೆ ಮನೆಯಲ್ಲಿ ಕೆಲಸ ಮಾಡಿದರೂ, ಆಹಾರ ಪದಾರ್ಥಗಳನ್ನು ಅಡಿಗೆ ಮಾಡಿದರೂ, ಮಾಡಿದುದನ್ನು ಬಡಿಸಿದರೂ, ಜತೆಯಲ್ಲಿ ಕುಳಿತು ಊಟ ಮಾಡಬಾರದು; ಕೆಲವು ಕಡೆ ಬಿಳಿಯ ಜನರ ಸ್ಕೂಲಿಗೆ ನೀಗ್ರೋ ಜನರ ಪ್ರವೇಶವಿಲ್ಲ. ಕೆಲವು ಕಡೆ ನೀಗ್ರೋ ಜನರನ್ನು ಸ್ವಾಮಿ madam ಎಂದು ಗೌರವವಾಗಿ ಮಾತನಾಡಿಸುವುದಿಲ್ಲ. ನೀಗ್ರೋ ಜನರ ಅಭಿವೃದ್ಧಿ ಸಂಘವಿದ್ದರೆ, ಅದಕ್ಕೆ ವ್ಯತಿರಿಕ್ತವಾಗಿ ಬಿಳಿ ಜನರ ಸಂಘವಿದೆ. ಆದರೆ ಸಮಸ್ಯೆಯನ್ನು ಬಿಡಿಸಲು ಮನಸ್ಸಿರುವವರು ನೋಡುವುದಾದರೆ ಎಷ್ಟೋ ಮುಂದುವರಿದಿದ್ದಾರೆ ಎಂದು ಹೇಳಬೇಕು. ಜಾತಿ (race), ಬಣ್ಣ, ಬಡತನ, ಸಂಸ್ಕೃತಿ ಮೊದಲಾಗಿ ಪರಸ್ಪರ ಅಂತರ ತುಂಬ. ಆದರೆ ನೀಗ್ರೋ ಜನರಿಗೆ ಸಮಾನ ಹಕ್ಕು ಬಾಧ್ಯತೆಗಳನ್ನು ಕೊಡಬೇಕೆಂಬ ಚಳುವಳಿ ಇತ್ತೀಚೆಗೆ ಪ್ರಾರಂಭವಾಯಿತು. ಇಷ್ಟು ಅತ್ಯಲ್ಪಕಾಲದಲ್ಲಿ ತಕ್ಕಮಟ್ಟಿಗೆ ಮುಂದುವರಿದಿದ್ದಾರೆ ಎಂದು ಹೇಳಬಹುದು.

೧೭ ಶತಮಾನದಲ್ಲಿ ಯೂರೋಪಿಯನರು ಈ ದೇಶಕ್ಕೆ ಬಂದರು. ನೂರು ವರುಷದೊಳಗೆ ಸ್ವಾತಂತ್ರ್ಯವನ್ನು ಸಂಪಾದಿಸಿದರು. ಆಗ ಬಹಳ ಬಡತನವಿತ್ತು. ಅನಕ್ಷರತೆ ತುಂಬಿತ್ತು. ಇಂಗ್ಲೀಷಿನವರು ಇವರನ್ನು ಅನಾಗರಿಕರು ಎಂದು ಕರೆಯುತ್ತಿದ್ದರು. ತಾವೂ ಮೊದಮೊದಲು ನಿರ್ಲಿಪ್ತ ನೀತಿಯನ್ನೇ ಪಾಲಿಸಿದರು. ಯುದ್ಧಗಳಲ್ಲಿ ಭಾಗವಹಿಸಲಿಲ್ಲ. ಯೂರೋಪ್ ದೇಶದ ಬಂಡವಾಳಗಾರರು ಕೈಗಾರಿಕೆಗಳನ್ನು ನಿರ್ಮಿಸಿದರು. ಇಂಡಿಯಾ ದೇಶ ತನ್ನ ಸ್ವಾತಂತ್ರ್ಯವನ್ನು ಕಳೆದುಕೊಂಡ ಕಾಲದಲ್ಲಿಯೇ ಇವರು ಸ್ವತಂತ್ರರಾದರು. ಎಲ್ಲ ದೇಶಗಳಿಗೂ ಹರಡಿದ ಕೈಗಾರಿಕಾ ಕ್ರಾಂತಿ ಭಾರತಕ್ಕೆ ಬರಲಿಲ್ಲ. ಬ್ರಿಟಿಷರು ಅದನ್ನು ತಡೆಗಟ್ಟಿದರು. ಅದರ ಬದಲು ಭಾರತದ ಹಣ, ಹತ್ತಿ, ಕಚ್ಚಾವಸ್ತುಗಳು ಇಂಗ್ಲೆಂಡಿಗೆ ಹೋದುದರಿಂದ ಅಲ್ಲಿ ಕೈಗಾರಿಕಾ ಕ್ರಾಂತಿ ಸುಗಮವಾಗಿ ಸಾಗಲು ಸಾಧ್ಯವಾಯಿತು. ಅಮೇರಿಕಾ ದೇಶಕ್ಕೂ ಇಂಗ್ಲೆಂಡಿಗೂ ಬಹಳ ಕಾಲ ಬದ್ಧದ್ವೇಷವಿತ್ತು. ಆ ಕಾಲದಲ್ಲಿ ಅಮೇರಿಕ ದೇಶೀಯರು ಹೆಚ್ಚು ಮುಂದುವರಿದರು.

ಅಮೇರಿಕಾ ದೇಶ ಮುಂದುವರಿಯಲು ವಿಶ್ವವಿದ್ಯಾನಿಲಯಗಳೇ ಕಾರಣ. ವಿಶ್ವವಿದ್ಯಾನಿಲಯದಲ್ಲಿ ಸೈನ್ಯದಲ್ಲಿರುವಂತೆ ಶಿಸ್ತುಇದೆ, ತರಪೇತು ದೊರೆಯುತ್ತದೆ. ವಿಶ್ವವಿದ್ಯಾನಿಲಯಗಳು ಎರಡು ವಿಧ: ಸರ್ಕಾರಿ, ಖಾಸಗಿ. ಖಾಸಗಿ ವಿದ್ಯಾನಿಲಯಗಳೇ ಹೆಚ್ಚು. ಮತ್ತು ಅವುಗಳಲ್ಲಿ ಐಶ್ವರ್ಯ ತುಂಬಿದೆ. ದೊಡ್ಡದೊಡ್ಡ ಕಟ್ಟಡಗಳನ್ನು ಕಟ್ಟಿ, ಪುಸ್ತಕಭಂಡಾರಗಳನ್ನು ತೆರೆದಿದ್ದಾರೆ. ವಿಶ್ವವಿದ್ಯಾನಿಲಯಗಳಿಗೆ President ಮುಖ್ಯಾಧಿಕಾರಿ. ಕಾಲೇಜುಗಳನ್ನು ಸ್ಕೂಲು ಎಂದು ಕರೆಯುತ್ತಾರೆ. ಅದರ ಮುಖ್ಯಾಧಿಕಾರಿಯನ್ನು ಡೀನ್ ಎಂದು ಕರೆಯುತ್ತಾರೆ. ಇನ್ನು ಉಳಿದೆಲ್ಲ ವಿಷಯಗಳೂ ನಮ್ಮಂತೆಯೆ.

ಶಿಕ್ಷಣ ಕ್ರಮದಲ್ಲಿ ನಮಗೂ ಇವರಿಗೂ ಹೆಚ್ಚು ವ್ಯತ್ಯಾಸವಿದೆ. ಇದನ್ನು ವಿವರಿಸುತ್ತಾಹೋದರೆ ನನ್ನ ಕಾಗದ ಒಂದು ಲೇಖನವಾಗಿ ಪರಿಣಮಿಸುತ್ತದೆ. ಈಗಾಗಲೇ ಇದು ಹನುಮಂತನ ಬಾಲದಂತೆ ಬೆಳೆದುಬಿಟ್ಟಿತು. ಆದುದರಿಂದ ಇಲ್ಲಿಗೇ ನಿಲ್ಲಿಸುತ್ತೇನೆ.

—ಕೆ. ನರಸಯ್ಯ.

ಲಕ್ಷ್ಮೀಶಕವಿಯ ಬಿರುದು

ಲಕ್ಷ್ಮೀಶನು ಅಶ್ವಮೇಧಪರ್ವವನ್ನು ಕನ್ನಡದಲ್ಲಿ ಬರೆದುದು ಆಬಾಲವೃದ್ಧರಿಂದಲೂ ಪಂಡಿತ ಪಾಮರರಿಂದಲೂ ಸಮಾದೃತವಾಗಿದೆ. ಅವನು ಸಂಗೀತದಂತೆ ಶಬ್ದಧ್ವನಿಗಳ ಮೂಲಕ ಜನರ ಕಿವಿಯನ್ನು ಸೆಳೆದಿರಿಸಿಕೊಂಡು, ಕಲಾಮಯವಾದ ಅಂತಸ್ಸಾಹಿತ್ಯದ ಮೂಲಕ ಮನಸ್ಸನ್ನು ಸೂರೆಗೊಂಡ ದಿವ್ಯಶಕ್ತಿವಂತನೆಂದು ಅವನ ಮಾತುಗಳಿಂದಲೇ ತಿಳಿಯುತ್ತದೆ :

'ಜಾಣರಂ ತಲೆದೂಗಿಸದೆ ನುಡಿದಡಾ ಪದ
ಕ್ಕೋಣೆಯಂ ಬಹುದೆಂದು ಸರಸೋಕ್ತಿಯಿಂದೆ ಗೀ
ರ್ವಾಣಪುರನಿಲಯ ಲಕ್ಷ್ಮೀವರಂ ತಾನೆ ಸಂಗೀತ ಸುಕಲಾನಿಪುಣನು
ವೀಣೆಯಿಂ ಗಾನಮಂ ನುಡಿಸುವಂದದೊಳೆನ್ನ
ವಾಣಿಯಿಂ ಕವಿತೆಯಂ ಪೇಳಿಸಿದನೆಂದರಿದು
ಕೇಣಮಂ ತೊರೆದು ಪುರುಡಿಸುವರಂ ಜರೆದು ಕಿವಿದೆರೆದು ಕೇಳ್ವುದು ಸುಜನರು' (೧-೮)

ಈ ಕೃತಿಯ ಷಟ್ಪದಿಗಳ ವಿಷಯವಾಗಿ ಹೇಳಿದುದು—

'ವರವರ್ಣದಿಂದ್ಧೆ ಶೋಭಿತವಾಗಿ ರೂಪವಿ
ಸ್ತರದಿಂದೆ ಚೆಲ್ವಾಗಿ ಮಧುರತರ ನವರಸೋ
ದರ ಭರಿತದಿಂದೆ ವಿಲಸಿತಮಾಗಿ ಸುಮನೋನುರಾಗದಿಂ ಪ್ರಚುರಮಾಗಿ
ನಿರುತ ಮಂಜುಳಶಬ್ದದಿಂದೆ ಕಿವಿಗಿಂಪಾಗಿ
ಚರಿಸುವ ಸುಲಲಿತ ಷಟ್ಪದಿಗಳೆಡೆವಿಡದೆ ಝೇಂ
ಕರಿಸದಿರ್ಪವೆ ಬಂದು ನೆರೆದ ವಿದ್ವತ್ಸಭಾ ನೀರೇರುಹಾಕರದೊಳು' (೧-೧೩)

ಈ ಕಾರಣಗಳನ್ನು ವಿವರಿಸಿ ಈ ಕವಿಯು 'ನಾದಲೋಲ'ನೆಂದು, 'ಉಪಮಾಲೋಲ'ನೆಂದು ಮೊದಲಾಗಿ ವಿಮರ್ಶಕರು ಬರೆದಿದ್ದಾರೆ (ಲಕ್ಷ್ಮೀಶಕವಿಪ್ರಶಸ್ತಿ—ನೋಡಿರಿ). ಕನ್ನಡದಲ್ಲಿ ದಶಪರ್ವ ಭಾರತವನ್ನು ಬರೆದ ಕುಮಾರವ್ಯಾಸನೂ, ಆರು ಕಾಂಡದನಕ ರಾಮಾಯಣವನ್ನು ಬರೆದ ಕುಮಾರವಾಲ್ಮೀಕಿಯೂ ಆಯಾ ಮೂಲಗ್ರಂಥಗಳ ಆಧಾರದಿಂದಲೇ ಬರೆದರೂ, ತಮ್ಮ ಪ್ರತಿಭೆಯ ಶಕ್ತಿಯ ಪ್ರವಾಹದಲ್ಲಿ ಹೊಸತಾಗಿ ನಿರೂಪಿಸಿದ್ದಾರೆ. ಹಾಗೆಯೇ ಲಕ್ಷ್ಮೀಶನೂ ಜೈಮಿನಿಯ ಸಂಸ್ಕೃತದ ಅಶ್ವಮೇಧವನ್ನು

ಕನ್ನಡಿಸುವಲ್ಲಿ ಸ್ವಂತಗಾರಿಕೆಯನ್ನು ತೋರಿಸಿದ್ದಾನೆಂದು ಹಲವಾರು ವಿದ್ವಾಂಸರು ಬರೆದಿದ್ದಾರೆ. ಇಲ್ಲಿಯ ಶ್ರೀರಾಮಾಶ್ವಮೇಧದ ಕತೆಯು ಇಕ್ಕಡೆಯಲ್ಲಿ ಹೇಗೆ ಬಂದಿದೆಯೆಂದು ವಿವರಿಸಿ ಬರೆದ ನನ್ನ ಒಂದು ಲೇಖನವು ಸುಬೋಧ ಮಾಸಪತ್ರಿಕೆಯಲ್ಲಿ ಪ್ರಕಟವಾಗಿದೆ. ವ್ಯಾಸರ ಅಶ್ವಮೇಧ ಪರ್ವಕ್ಕಿಂತ ಹೆಚ್ಚಾಗಿ ವೀರಭಕ್ತರ ಕಥನವನ್ನೊಳಗೊಂಡ ಈ ಜೈಮಿನಿಯ ಕೃತಿಯು ಅದುವರೆಗೆ ಕನ್ನಡದಲ್ಲಿ ಇದ್ದಿಲ್ಲವೆಂದು ಲಕ್ಷ್ಮೀಶನು ಕನ್ನಡಿಸಲು ಕೈಹಚ್ಚಿದನು. ಕನ್ನಡ ಸಾಹಿತ್ಯದಲ್ಲಿ ಇಂತಹ ಗ್ರಂಥಗಳು ವಿರಳವಾಗಿವೆ. ಇಷ್ಟು ಜನಪ್ರೀತವಾದ ಈ ಕವಿಯ ಪ್ರದೇಶದ ವಿಷಯದಲ್ಲಿ ಕವಿಯೇ ಹೇಳಿದುದು ಹೀಗದೆ:

'ವಿದ್ವತ್ಸಭಾವಲಯಮರಿಯೆ ವಿರಚಿಸಿದಂ ಭ
ರದ್ವಾಜ ಗೋತ್ರಭವನಣ್ಣಮಾಂಕನ ಸುತಂ
ಸದ್ವಿನುತ ಕರ್ಣಾಟಕವಿಚೂತವನಚೈತ್ರ ಲಕ್ಷ್ಮೀಶನೆಂಬೋರ್ವನು
ಹೃದ್ವನಜದೊಳ್ ದೇವಪುರದ ಲಕ್ಷ್ಮೀಶನ ಪ
ದದ್ವಯವನಾವಗಂ ಧ್ಯಾನಿಸುವರಡಿಗಳಂ
ಸದ್ವಿನಯದಿಂ ಭಜಿಪ ಬಲ್ಪಿಂದೆ ವಿಮಲ ಜೈಮಿನಿ ಭಾರತದ ಕಥೆಯನು' ೨ (೧-೧೧)

ಈ ಪದ್ಯದಲ್ಲಿ ಕವಿಯ ಗೋತ್ರ, ಪಿತೃನಾಮ, ಬಿರುದು ಮತ್ತು ಕವಿನಾಮ, ಕವಿಯ ಹುಟ್ಟೂರುಗಳು ಹೇಳಿವೆ. ಇವುಗಳಲ್ಲಿ ಕೆಲವು ವಿಷಯುಗಳ ಬಗೆಗೆ ವಿವಾದಗಳಿವೆ: ಲಕ್ಷ್ಮೀಶನ ತಂದೆಯ ಹೆಸರು 'ಅಣ್ಣಮ'ನೆಂದು ಸ್ಪಷ್ಟವಾಗಿದೆ, ಇದರ ಬದಲು 'ಅಣ್ಣಯ'ನಿರಬೇಕೆಂಬುದು ಅಷ್ಟು ಸ್ಪಷ್ಟವಾಗಿಲ್ಲೆಂದು ಹೇಳಬರುತ್ತದೆ! ಕವಿಯೇ ಹೇಳಿದ ಜನನ ಸ್ಥಲ (ಹುಟ್ಟೂರು) 'ದೇವಪುರ'ವೆಂದರೆ ಚಿಕ್ಕಮಗಳೂರು ಜಿಲ್ಲೆಯ ದೇವನೂರು ಆಗಿರಬೇಕೆಂದೂ, ಗುಲ್ಬರ್ಗಾ ಜಿಲ್ಲೆಯ ಸುರಪುರದ ಪಕ್ಕದಲ್ಲಿರುವ ದೇವಪುರವೆಂದೂ ವಾದಗಳಿವೆ. "ಸುರಪುರ ಪಕ್ಷಕ್ಕಿಂತ ಅವು (ದೇವನೂರು ಎನ್ನುವವು) ನಂಬತಕ್ಕುವೆಂದು ತೋರುತ್ತದೆ. ಲಕ್ಷ್ಮೀಶನ ಹೆಸರಿನ ಸುತ್ತು ಸಟೆ-ದಿಟ ಬೆರೆತ ಒಂದು ಪರಿವೇಷ ದೇವನೂರಿನಲ್ಲಿರುವುದೇ ಅವನು ಆ ಊರವನಿರಬಹುದೆಂಬುದಕ್ಕೆ ಸಾಕ್ಷಿಯಾಗಿದೆ," ಯೆಂದು ಡಾ. ರಂ. ಶ್ರೀ. ಮುಗಳಿಯವರು ಬರೆದಿದ್ದಾರೆ. (ಕನ್ನಡ ಸಾಹಿತ್ಯ ಚರಿತ್ರೆ, ಪುಟ, ೨೭೯). ಈ ಬಗೆಗೆ ವಿದ್ವಾಂಸರಲ್ಲಿ ಬಹುಮತವದೆ! ಪ್ರಕೃತ ಲಕ್ಷ್ಮೀಶಕವಿಯ ಬಿರುದಿನ ವಿಷಯದಲ್ಲಿ ಇತ್ತೀಚೆಗೆ ಭಿನ್ನಾಶಯದ ಒಂದೆರಡು ಬರೆಹಗಳು ಕಾಣುತ್ತಿವೆ; ಅದನ್ನು ಕುರಿತು ಕೆಲವು ಬೇರೆ ಉದಾಹರಣೆಗಳನ್ನು ಆಯ್ದು ಎತ್ತಿ ಬರೆದು, 'ಕರ್ಣಾಟ ಕವಿಚೂತವನ ಚೈತ್ರ'ನೆಂಬುದೇ ಇವನ ಬಿರುದಿನ ಸರಿಯಾದ ವಾಚಕವೆಂದು ಬರೆಯಲೆಳಸಿದ್ದೇವೆ. ಈ ಸಂಗತಿ ಕಾಣಲು ಚಿಕ್ಕ

ದಾದರೂ ಉಪೇಕ್ಷಣೀಯವಲ್ಲ; ಕನ್ನಡ ಸಾಹಿತ್ಯಾಭ್ಯಾಸಿಗಳೂ ಸಾಹಿತ್ಯಾಭಿಜ್ಞರೂ ಇತ್ತ ತಮ್ಮ ಗಮನವನ್ನು ಹರಿಯಿಸಬೇಕೆಂದು ನಮ್ರತೆಯಿಂದ ಹಾರಯಿಸುತ್ತೇವೆ.

ವಾದಗಳು—"ಲಕ್ಷ್ಮೀಶನ ಕನ್ನಡ ಜೈಮಿನಿ ಭಾರತದ ಹಳೆಯ ಹಸ್ತಾಕ್ಷರದ ಓಲೆಯ ಪ್ರತಿಗಳೆರಡರಲ್ಲೂ (ಒಂದರ ಕಾಲ ೧೭೧೮, ಇನ್ನೊಂದರ ಕಾಲ ೧೭೩೩) 'ಕರ್ಣಾಟ ಕವಿ ಚೈತ್ರವನ ಚೂತ'ನೆಂದು ಲಿಖಿತವಾಗಿದೆ. ಲಕ್ಷ್ಮೀಶನು ತನ್ನ ನಮ್ರ ಸ್ವಭಾವಕ್ಕೆ ತಕ್ಕುದಲ್ಲದ 'ಕರ್ಣಾಟ ಕವಿಚೂತವನ ಚೈತ್ರ' ನೆಂದು ಕರೆಯಿಸಲು ಒಡಂಬಡಲಾರನು" ಎಂದು ಶ್ರೀ ಡಿ. ಎಲ್. ನರಸಿಂಹಾಚಾರ್ಯರು ಬರೆದಿದ್ದಾರೆ. ಈ ವಿಷಯವನ್ನು ಅನುಮೋದಿಸಿ ಶ್ರೀ ಪಾಂಡುರಂಗ ದೇಸಾಯಿಯವರು ಬರೆದುದು ಹೀಗದೆ: "ಈ ವಿಷಯದಲ್ಲಿ ಹೆಚ್ಚಿನ ಅನ್ವೇಷಣಗಳು ನಡೆದರೆ ಈ ಪಾಠವನ್ನು ಪುಷ್ಟೀಕರಿಸುವ ಇನ್ನೂ ಅನೇಕ ಮಾತೃಕೆಗಳು ದೊರೆಯಬಹುದು. 'ಕರ್ಣಾಟಕವಿ ಚೂತವನಚೈತ್ರ' ಎಂಬ ಪ್ರಚಲಿತ ಪಾಠವು ಪ್ರಾಮುಖ್ಯಕ್ಕೆ ಬರಲು ಕಾರಣ ವೇನು ಎಂಬ ಸಂಗತಿ ವಿಚಾರಾರ್ಹವಾಗಿದೆ. ಈ ಎರಡು ಪಾಠಗಳಲ್ಲಿ ತಾರತಮ್ಯ ವರಿಯದೆ ವಿನಯದಿಂದ ಕವಿಗೆ ಹೆಚ್ಚಿನ ಗೌರವ ಸಲ್ಲುತ್ತದೆ ಎಂಬ ಕಲ್ಪನೆಯಿಂದ ಕೆಲವು ಅಭಿಮಾನಿಗಳು ಒಂದನೆಯದನ್ನು ಮರೆಯಿಸಿ ಎರಡನೆಯದನ್ನು ಮುಂದಕ್ಕೆ ತಂದರೆಂದು ಊಹಿಸಬಹುದು. ಈಗಲಾದರೂ, 'ಕರ್ಣಾಟ ಕವಿಚೈತ್ರವನ ಚೂತ' ಎಂಬ ಪಾಠವು ಸರಸವಾಗಿದೆ ಎಂದೂ, ಇದುವೇ ಮೂಲಪಾಠವಾಗಿರಬೇಕೆಂದೂ ನಮಗೆ ತೋರುತ್ತದೆ. ಈ ಬಿರುದೇ ಕವಿಯ ವಿನಯಶೀಲಭಾವನೆಗೆ ಅನುಗುಣವಾದು ದೆಂದು ನಮ್ಮ ನಂಬುಗೆ." (ಶರಣಸಾಹಿತ್ಯ ೧೭—೬). ಈರ್ವರು ವಿದ್ವಾಂಸರ ಮಾತುಗಳನ್ನು ಆಧರಿಸಿ "ನಮಗಾದರೂ ಶ್ರೀ ದೇಸಾಯಿಯವರ ವಾದವೇ ಸಮಂಜಸವೆಂದು ತೋರುತ್ತದೆ"ಯೆಂದು ಶ್ರೀ ಆಸ್ಥಾನ ವಿದ್ವಾನ್, ಪಂಡಿತರತ್ನಂ, ಬಿ. ಶಿವಮೂರ್ತಿಶಾಸ್ತ್ರಿಗಳು ಬರೆದಿದ್ದಾರೆ (ಮೈಸೂರು ಸಂಸ್ಥಾನದ ಸಾಹಿತ್ಯ ಮತ್ತು ಸಂಸ್ಕೃತಿ ಅಭಿವೃದ್ಧಿ ಇಲಾಖೆಯವರು ಪ್ರಕಾಶಪಡಿಸಿದ 'ಮಹಾಕವಿ ಲಕ್ಷ್ಮೀಶ ವಿರಚಿತ—ಕನ್ನಡ ಜೈಮಿನಿಭಾರತ' ದಲ್ಲಿಯ 'ಕವಿ-ಕಾವ್ಯ ವಿಚಾರ' ಪುಟ ೧೮. ಇಸ್ವಿ ೧೯೩೭).

ನಮ್ಮ ಮಾತುಗಳು—ಈ ಬಗೆಗೆ ವಿಚಾರಿಸುವಲ್ಲಿ—ವಿವೇಚಿಸುವಲ್ಲಿ—ಪ್ರಾಚೀನ ಹಾಗೂ ಅರ್ವಾಚೀನ ಕೃತಿಗಳ ವಾಕ್ಯಗಳನ್ನು ಅಗತ್ಯವಾಗಿ ಗಮನಿಸ ಬೇಕಾಗಿದೆ. ಅಲ್ಲಲ್ಲಿಡೆ 'ನಂದನ ಚೈತ್ರ' 'ಮಾಕಂದ ಚೈತ್ರ', 'ಮಾಕಂದ ವಸಂತ' ಇತ್ಯಾದಿ ಹೇಗೆ ಏಕಪ್ರಕಾರವಾಗಿ ಹಿಂದಿನಿಂದಲೂ ಸಾಗಿಬಂದಿದೆಯೆಂದು ಪರಿ ಶೀಲಿಸಬಹುದು.

(೧) ಸೋಮರಾಜನ ಉದ್ಭಟ ಚರಿತೆಯಲ್ಲಿದೆ—

'ಮಿಸುನಿಗೆ ಕಂಪು, ಅಲರ್ವಿಲ್ಲವನ |
ಅಸಿಗೆ ಅಗ್ಗದ ಕೂರ್ಪು, ನಂದನ ಶ್ರೀಗೆ ವಸಂ |
ತಸಮಾಗಮಮೊಂದುವ ವೋಲ್ |
ಪೊಸಜವ್ವನಮುಮರ್ದುದಾ ಕುಮಾರಿಕೆಗೆರಸಾ' || (೬-೮೩).

ಇಲ್ಲಿಯ 'ನಂದನ ಶ್ರೀಗೆ ವಸಂತ ಸಮಾಗಮ' ವೆಂಬುದು 'ಕವಿಚೂತವನ ಚೈತ್ರ' ವೆಂಬಂತಿದ್ದು ಸುರಸವೂ ಸಾರ್ಥಕವೂ ಒಪ್ಪವೂ ಆಗಿದೆಯಲ್ಲವೇ?

(೨) ಹರಿಹರ ಮಹಾಕವಿಯು ರಚಿಸಿದ 'ನಂಬಿಯಣ್ಣನ ರಗಳೆ'ಯಲ್ಲಿ ದೇವ ದೇವನನ್ನು ಬಣ್ಣಿಸುವಲ್ಲಿದೆ—'ಭಕ್ತಜನವನಫಲಿತ ವಸಂತ'ನೆಂದು, ಇದೂ ನಾವೆನ್ನುವ ಕವಿ ಬಿರುದಿನಂತೆ ಸ್ಮರಣೀಯವಾಗಿದೆ, ಹಿನ್ನೆಲೆಯಂತಿದೆ!

(೩) ಕನ್ನಡ ಸಾಹಿತ್ಯದ ಅಚಲ ಹಾಗೂ ಸತ್ಯರೂಪ ಸಾಕ್ಷಿಗಳಾದ ಶಿಲಾ ಶಾಸನಗಳಲ್ಲೂ ಈ ತೆರದ ಉದಾಹರಣೆಗಳು ನಮಗೆ ದೊರೆಯುತ್ತವೆ:

(i) ಚಾಳುಕ್ಯ ಮನೆತನದಲ್ಲಿ ಹುಟ್ಟಿ ಆರನೆಯ ವಿಕ್ರಮಾದಿತ್ಯನೆಂದು ಸುಪ್ರಸಿದ್ಧನಾದ ರಾಜವರ್ಯನ ಆಳಿಕೆಯ ಕಾಲದಲ್ಲಿ ಬರೆದ ಹಲವು ಶಿಲಾಶಾಸನಗಳ ಸಂಕಲನವು ಭಾರತ ಸರ್ಕಾರದ ವತಿಯಿಂದ ಪ್ರಕಟವಾಗಿದೆ. (ಇಸ್ವಿ ೧೯೫೩. ದಕ್ಷಿಣ ಭಾರತದ ಶಾಸನಗಳು. ಸಂಪುಟ ೧೧. ಭಾಗ ೩). ಆ ರಾಜನ ಆಳಿಕೆಯ ಇಪ್ಪತ್ತೊಂದನೆಯ ವರುಷದಲ್ಲಿ (ಇಸ್ವಿ ೧೦೯೬-೭) ಬರೆದ ಶಾಸನದಲ್ಲಿ ರಾಜ ಪತ್ನಿಯನ್ನು ಕುರಿತು ಹೇಳಿದುದು ಹೀಗಿದೆ.

"ತತ್ಪಾದ ಪದ್ಮೋಪಜೀವಿಗಳಪ್ಪ ಸ್ವಸ್ತಿಯನವರತ ಪರಮ ಕಲ್ಯಾಣಾಭ್ಯುದಯ (ಸ)ಹಸ್ರ ಫಳಭೋಗಭಾಗಿನಿ ದ್ವಿತೀಯ ಲಕ್ಷ್ಮೀಸಮಾನೆ ಕ(ಲ)ಹಂಸಯಾನೆ ಶೃಂಗಾರ್ದ್ರ ರಸ ಸುಧಾಧಾರೆ ಶ್ರೀಮತ್ತ್ರಿಭುವ(ನಮ)ಲ್ಲ ದೇವ ಚಿತ್ತ **ಸಹಕಾರ ವನ ನಿರಂತರ ವಸಂತ** ಲಕ್ಷ್ಮಿ ಚಾಳುಕ್ಯರಾಯನರ್ಧಾಂಗ—ಯರಪ್ಪ ಶ್ರೀಮದಭಿನವ ಸರಸ್ವತಿ ಚಂದಲದೇವಿಯರು" (ಶಾಸನಾಂಕ. ೧೪೨ ಸಾಲು ೬-೧೧).

(ii) ಇಸ್ವಿ ೧೧೦೩ ರಲ್ಲಿ ಬರೆದ ಇನ್ನೊಂದು ಶಾಸನದಲ್ಲಿದೆ—"ಇನ್ತವಾರ್ಯ ಭುಜವಿಕ್ರಮನುಂ ಪರಬಳಪ್ರಳಯ ಭೈರವನುಮರಾತಿ ದಾವಪಾವಕನುಂ ಮೊರಕ ಕುಳ ಸರೋಜಿನಿ ರಾಜಹಂಸನುಂ ವಿನಯಾವತಂಸನುಮುದ್ಧತಮಲ್ಲನುಂ ಜಗಕ್ಕೆ ನಲ್ಲನುಂ ಭಯಲೋಭವರ್ಜಿತನುಂ ಸಂಸಾರಸಾರನುಂ **ವನ್ದಿಜನವನಾಕಂದನಂದನ ವಸಂತನು**ಮತಿನಿರ್ಮಳಸ್ವಾಂತನುಂ ನಿಖಿಲಗುಣಭರಿತನುಂ ಸದ್ಧರ್ಮ ನಿರತನು

ಮೆನಿಸಿ ತನ್ನ ಪೆಸರೆ ಪೆಸರಾಗಿ ಪೊಸವೂರನೇಕಭೋಗದಿನಾಳ್ದು ಸುಖಸಂಕಥಾವಿನೋದದಿನಿಳ್ದು " ನಾಕಿಗಾವುಂಡನು ಮೆರೆಯುತಿದ್ದನೆಂದು. (ಶಾಸನಾಂಕ ೧೫೨. ಸಾಲು ೨೩-೫).

(iii) ಅದೇ ಶಾಸನದ ದತ್ತಿಯನ್ನು ಪಡೆದವನ ಗುರುಪರಂಪರೆಯನ್ನು ಹೇಳುವಲ್ಲಿದೆ—

" ಶಿವಧರ್ಮಾರ್ವ್ವೋಧಿ ಸಂವರ್ಧನ ತುಹಿನಕರರ್ಚಾರುಚಾರಿತ್ರ ಮಾಕಂ
ನ್ದ ವಸನ್ತ ಶಬ್ದವಿದ್ಯಾಪ್ರಥಿತಪೃಥುಲ ತಾಳಮ್ಬನರ್ನಿತ್ಯದಾನ
ಯ್ಕ ವಿನೋದವ್ಯಾಪಕರ್ತಾವೆನೆ ನೆಗಳ್ದರಿಳಾಚಕ್ರದೊಳ್ಕೀರ್ತಿಲಕ್ಷ್ಮೀ |
ಧವರಾತ್ಮೋದ್ಯತ್ತಪೋಗ್ನಿಗ್ರಸಿತ ಮನಸಿಜಸಾರ್ಮವೇದಿ ಬ್ರತೀಂಧ್ರರ್ ||"

(ಸಾಲು ೨೯-೩೦)

(iv) ಇನ್ನೊಂದು ಶಾಸನವು ಇಸ್ವಿ ೧೧೦೫ ರಲ್ಲಿ ಬರೆದುದಿದ್ದು, ಅದರಲ್ಲಿ ಗುರುಪರಂಪರೆಯವನೊಬ್ಬನನ್ನು (ಪೂರ್ವೋಕ್ತ ಸಾಮವೇದಿಯನ್ನು ಆಗಿರಬಹುದು) ಹೊಗಳಿದ ಪದ್ಯವಿದು—

" ಶಿವಧರ್ಮಾಂಭೋಧಿ ಸಂವರ್ಧನ ತುಹಿನಕರಂ ಚಾರುಚಾರಿತ್ರ ಮಾಕಂ |
ದ ವಸ(ನ್ತಂ) ಶಬ್ದವಿದ್ಯಾಪ್ರಥಿತ ಪೃಥುಲತಾಳಂಬನಂ ನಿತ್ಯದಾನೈ |
ಕ ವಿನೋದಂ ವ್ಯಾಪಕಂ ತಾನೆನೆ ನೆಗಳ್ದನಿಳಾಚಕ್ರದೊಳ್ಕೀ (ಲ ಲ)ಕ್ಷ್ಮೀ
ಧವನಾತ್ಮೋದ್ಯತ್ತಪೋಗ್ನಿಗ್ರಸಿತಮನಸಿಜಂ ಸಾಮವೇದಿ ಬ್ರತೀಂದಂ ||"

(ಶಾಸನಾಂಕ ೧೫೭. ಸಾಲು ೩೦-೨).

ಈ ನಾಲ್ಕು ಕಡೆಗಳ ಶಿಲಾಶಾಸನಗಳಲ್ಲಿ " ಸಹಕಾರ ವಸಂತ "ನೆಂದು ಪೂರ್ವಪರ ಸಂಬಂಧವು ಏಕಪ್ರಕಾರವಾಗಿದೆ, ಪರಿವರ್ತನೆಯಾಗಿಲ್ಲ. 'ದೇವಚಿತ್ತ ಸಹಕಾರವನ ನಿರಂತರ ವಸಂತಲಕ್ಷ್ಮಿ' ಯೆಂದು, 'ವಂದಿಜನ ಮಾಕಂದ ನಂದನ ವಸಂತ 'ನೆಂದು, 'ಚಾರುಮಾಕಂದ ವಸಂತ' ಎಂದು ಹೇಳುವಲ್ಲಿ ಸುರಸತೆ ಹಾಗೂ ವಿನಯ ಶೀಲತೆಗಳು ಒಪ್ಪಿ ಬಂದಿವೆಯೆಂಬುದಕ್ಕೆ ಮರುಮಾತಿರದು. 'ಕರ್ಣಾಟಕವಿಚೂತವನ ಚೈತ್ರ 'ನೆಂಬುದೇ ಸರಿಯೆಂದು ಇವುಗಳಿಂದ ತಿಳಿಯಲಾಗುವುದು !

ವಿಜಯನಗರದ ಕಾಲದ ಕವಿಗಳಲ್ಲಿ ಮಧುರನು ಸುಪ್ರಸಿದ್ಧನು. ಅವನು ಎರಡನೆಯ ಹರಿಹರನ ಆಳ್ಕೆಯಲ್ಲಿದ್ದನು. ಧರ್ಮನಾಥ ಪುರಾಣಾದಿ ಕೃತಿಗಳನ್ನು ರಚಿಸಿದ್ದಾನೆ. ಅವನಿಗಿರುವ ಹಲವು ಬಿರುದುಗಳಲ್ಲಿ "ಸರಸಕವಿ ರಸಾಲ ವಸಂತ" ನೆಂಬುದೊಂದಾಗಿದೆ.

ಲಕ್ಷ್ಮೀಶನಿಗಿಂತ ಬಹುಶಃ ಪ್ರಾಚೀನನಾದ ಇವನ ಬಿರುದನ್ನು ಕೇಳಿ ಅವನಿಗೆ "ಕರ್ಣಾಟಕವಿಚೂತವನಚೈತ್ರ" ನೆಂಬ ಬಿರುದು ಬಂದಿರಬೇಕು. ಹೇಗಾದರೂ ಮಧುರನ ಬಿರುದಿನಲ್ಲಿಯೂ ಈ ತೆರದ ವಿನ್ಯಾಸವಿರುವುದನ್ನು ನಾವು ನೆನಪಿನಲ್ಲಿಡ ಬೇಕೆಂದು ಹೇಳಿದರೆ ತಪ್ಪಾಗಲಾರದು.

(೪) ಕುಮಾರವ್ಯಾಸನ ಕನ್ನಡ ಭಾರತದಲ್ಲಿ—ಅರ್ಜುನನಲ್ಲಿಗೆ ಹೋಗಲು ಊರ್ವಶಿಯನ್ನು ಹೇಳಿಸಿದ ಇಂದ್ರನ ಮಾತಿನಲ್ಲಿ—ಇಂತಹ ನಿರೂಪಣವೊಂದು ಇದೆ—

'ಕಮಲಮುಖಿ ನೀ ಕಮಲವಾತನು
ಭ್ರಮರ ನೀ ಸುರವನದ ಸಿರಿಮಧು
ಸಮಯವರ್ಜುನನೆಂದು ಬೆಸಸಿದನಮರಪತಿಯೆಂದ'—ಅರಣ್ಯಪರ್ವ, ೭-೧೦೧.

ಇಲ್ಲಿ 'ಭ್ರಮರಕ್ಕೆ ಸಿರಿಮಧುಸಮಯ'ವೊದಗುವಂತೆ ಊರ್ವಶಿಗೆ ಅರ್ಜುನನ ಸಮಾಗಮವು ಸೊಗಸುವುದೆಂದು ಹೇಳಿದೆ. 'ಮಧುಕಾಲಕ್ಕೆ ಭ್ರಮರ'ವೆಂದು ಪರಿವರ್ತಿತವಾಗಿಲ್ಲವೆಂದು ತಿಳಿಯಬೇಕು. ಹಾಗೆಯೇ 'ಕವಿಚೂತವನಕ್ಕೆ ಚೈತ್ರ' ನೆಂದು ಹೇಳುವುದು ಸೊಗಸುವುದಲ್ಲವೇ ?

(೫) "ಕುಮಾರವ್ಯಾಸ ಮತ್ತು ಲಕ್ಷ್ಮೀಶರ ಪ್ರಭಾವಳಿಯಲ್ಲಿ ಬೆಳೆದ" ಕವಿಗಳಲ್ಲಿ ಗೋಪ ಇಲ್ಲವೆ ಗೋವಿಂದ ಕವಿಯೊಬ್ಬನು, ಇವನು ಚಿತ್ರಭಾರತದಲ್ಲಿ "ಪೂರ್ವಕವಿಗಳಲ್ಲೊಬ್ಬನಾದ 'ಲಕ್ಷ್ಮೀಪತಿ'ಯನ್ನು ನೆನೆದಿದ್ದಾನೆ. ಅಲ್ಲದೆ 'ಉತ್ತಮ ಕವೀಂದ್ರೋತ್ಸವಂ ಚೈತ್ರ ಶುಕನವೀವುತ್ತಿರಲು ಸದ್ಗುರು ಕೃಪಾಮೃತದ ಪೆದ್ದೊರೆಯ ಒತ್ತಿ ಬಹ ಪರ್ವಿನಿಂ ತಳೆದು' ಎಂಬಲ್ಲಿ (ಪೀಠಿಕೆ ಪದ್ಯ ೨೩) ಲಕ್ಷ್ಮೀಶ—ಕುಮಾರವ್ಯಾಸ ಇಬ್ಬರನ್ನೂ ಸೂಚಿಸಿರಬೇಕೆಂಬ ಊಹೆಯಿದೆ." (ಡಾ. ರಂ. ಶ್ರೀ. ಮುಗಳಿ—ಕನ್ನಡ ಸಾಹಿತ್ಯ ಚರಿತ್ರೆ. ಪುಟ, ೨೭೫, ಮತ್ತು ಶ್ರೀ ಎಂ. ಗೋವಿಂದ ಪೈ—ಶ್ರೀ ಪಂಜೆಯವರ ನೆನಪಿಗಾಗಿ, ಪುಟ, ೧೮೫). ಇಲ್ಲಿನ ಉದ್ಧಾರ—ಊಹೆಗಳಿಂದ ಲಕ್ಷ್ಮೀಶನ ಬಿರುದು 'ಕವಿಚೂತವನಚೈತ್ರ'ನೆಂದೇ ನಿರ್ಧರಿಸಲಾಗುತ್ತದೆ. ಹಾಗಲ್ಲವಾದರೆ, 'ಕವಿಚೈತ್ರವನಚೂತ'ನೆಂದೇ ಇರಬೇಕಾಗಿದ್ದರೆ, ಇಲ್ಲಿ 'ಚೂತ' ನೆಂದು ಹೇಳಲಾಗುತ್ತಿತ್ತು !

(೬) ಕನ್ನಡ ಸಾಹಿತ್ಯದ ಒಂದು ಪ್ರಭೇದವಾದ ಯಕ್ಷಗಾನ ಪ್ರಬಂಧಗಳಲ್ಲಿ 'ಜರಾಸಂಧವಧೆ'ಯೆಂಬುದರಲ್ಲಿದೆ—

" ಭಕ್ತ ಜನವನಚೈತ್ರ ಶುಕ್ತಿಶುಭ್ರ ಚರಿತ್ರ
ಮತ್ತು ರಾಜಖಳಸಿಂಗ ಶ್ರೀ ಭೃತ್ಯ ಕರುಣಾಪಾಂಗ
ಸತ್ವಾತಿಶಯಪೂರ್ಣ ಹರಿ ಕೃಷ್ಣ ಸಲಹೆಮ್ಮ ನೆನುತ ಚಿಂತಿಸುತಿರ್ದನು ಧರ್ಮಜನು "

ಇಲ್ಲಿಯ ' ಭಕ್ತ ಜನವನ ಚೈತ್ರ ' ನೆಂಬ ಹೇಳಿಕೆಗೆ ಲಕ್ಷ್ಮೀಶ ಮೊದಲಾದವರ ಮಾತು ಹಿನ್ನೆಲೆಯಾಗಿರಬೇಕೆಂದು ತಿಳಿಯಬಹುದಲ್ಲವೇ ?

ಕೊನೆಮಾತು—ಕವಿ ಲಕ್ಷ್ಮೀಶನ ಬಿರುದು ಇದುವರೆಗೆ ಪ್ರಚಲಿತವಾದಂತೆ **' ಕರ್ಣಾಟಕವಿಚೂತವನಚೈತ್ರ'** ನೆಂದೇ ಸರಿಯಾಗಿದೆ. 'ಕರ್ಣಾಟಕವಿಚೈತ್ರವನ ಚೂತ 'ವೆಂಬುದು ಕೈತಪ್ಪಾಗಿರಬೇಕೆಂದು ಇಲ್ಲಿ ಬರೆದ ಉದಾಹರಣಗಳಿಂದ ನಿರ್ಧಾರವಾಗುತ್ತದೆ! ಇತ್ಯಲಂ !

—ವಿದ್ವಾನ್ ಕೆ. ವೆಂಕಟರಾಮಾಚಾರ್ಯ,
ಸುರತ್ಕಲ್ಲು (ದ. ಕ.)

ಮದುವೆಯಾಗುವ ಮುನ್ನ

೧

ಮಡದಿಯಾಗುವ ಹೆಣ್ಣು ಮುಡಿತುಂಬ ಹೂ ಮುಡಿದು
ಚಹವ ತಂದಳು ನಾನು ಕುಳಿತಲ್ಲಿಗೆ.
ಲಜ್ಜೆಯಾವರಿಸಿದ್ದ ಮೊಗವು ನಸುಗೆಂಪಾಗಿ
ಅರಳಿತ್ತು ಅಲ್ಲೇನೆ ನಗುಮಲ್ಲಿಗೆ.

೨

ಏನು ಮಾಟದ ಹೆಣ್ಣೊ ! ಮಾಟ ಮಾಡಿದ ಹಾಗೆ
ಕುಡಿನೋಟ ಬೀರಿದಳು ನನ್ನ ಕಡೆಗೆ.
ಏನು ಅರಿಯದ ಗಂಡು ನೋಟಕ್ಕೆ ಮರುಳಾಗಿ
ಮಂಕನೊಲು ಬಿದ್ದಿತ್ತು ಅವಳ ಉಡಿಗೆ.

೩

ಕಣ್ಣು ಕಿರಣವೆ ಸುಳಿದು ಪ್ರಶ್ನೆಯನು ಕೇಳಿತ್ತು :
" ಚಹವು ಹೇಗಿದೆಯೆಂದು ಕೇಳಬಹುದೆ ? "
ಮಂತ್ರ ಹಾಕಿದ ಹಾವು ಕಣ್ಣಿನಲೆ ಆಡಿತ್ತು :
" ಕಹಿಯಿದ್ದರೂ ಹಾಗೆ ಹೇಳಬಹುದೆ ? "

೪

ಕಣ್ಣು-ಕಣ್ಣೇ ಸೇರಿ ಮಾತನಾಡಿದವಿಂತು ;
ಕಣ್ಣು ಮಾತನೆ ತೀಡುತಿತ್ತು ಹವೆಯು.
ಕಣ್ಣು ಆಡಿದ ಮಾತು ಬಾಯಿ ಉಚ್ಚರಿಸಿದರೆ
ಬಂದೀತೆ ಚಹದಲ್ಲಿ ಇಂಥ ಸವಿಯು ?

—ಗಿರಡ್ಡಿ ಗೋವಿಂದರಾಜ,
ಅಬ್ಬಿಗೇರಿ.

ಶಿಕ್ಷಣದ ಗುರಿ

ಸಂಸ್ಕೃತಿಯೆಂದರೆ ವಿಚಾರದ ಸಂಚಲನೆ. ಅದು ಸೌಂದರ್ಯ ಹಾಗೂ ಮಾನವೀಯ ಅನುಕಂಪಗಳನ್ನು ಗ್ರಹಣಮಾಡಬಲ್ಲ ಶಕ್ತಿ. ಸಂಸ್ಕೃತಿಯೆಂದರೆ ಕೇವಲ ಅನೇಕಾನೇಕ ವಿಷಯಗಳ ಸಂಗ್ರಹವಲ್ಲ. ಬರಿಯ ಮಾಹಿತಿದಾರ ಮನುಷ್ಯನ ಸಹವಾಸ ಬಹಳೇ ಬೇಸರ ತರುವಂತಹದು. ನಮಗೆ ಇಂದು ಸುಸಂಸ್ಕೃತ ಹಾಗೂ ಯಾವುದೊಂದು ವಿಶಿಷ್ಟ ಜ್ಞಾನಕ್ಷೇತ್ರದಲ್ಲಿ ತಜ್ಞರಾದ ಜನರು ಬೇಕಾಗಿದ್ದಾರೆ. ಯಾಕೆಂದರೆ ಇಂಥ ಜನರ ವಿಶಿಷ್ಟ ಜ್ಞಾನವು ಅವರಿಗೆ ಒಂದು ಸ್ಥಿರವಾದ ನಿಲವನ್ನು ಒದಗಿಸಿಕೊಡುವದು, ಅವರ ಸಂಸ್ಕೃತಿಯು ಅವರಿಗೆ ತತ್ವಜ್ಞಾನದ ಗಭೀರತೆಯನ್ನೂ ಕಲೆಯ ಔನ್ನತ್ಯವನ್ನೂ ದಯಪಾಲಿಸುವದು. ಬೌದ್ಧಿಕ ಪ್ರಗತಿಯೆಂದರೆ ಆತ್ಮವಿಕಾಸವೇ ಸೈ. ಅದು ಸಾಧಾರಣವಾಗಿ ಹದಿನಾರರಿಂದ ಮೂವತ್ತು ವರುಷಗಳ ನಡುವೆ ನಡೆಯುತ್ತದೆ. ಈ ಶಿಕ್ಷಣದ ಮಹತ್ವಪೂರ್ಣ ಭಾಗವು ತಾಯಂದಿರು ಮಕ್ಕಳಿಗೆ ಕಿಶೋರಾವಸ್ಥೆಯಲ್ಲಿ ಕೊಡುವ ತರಬೇತಿಯಲ್ಲಿರುತ್ತದೆ. ಈ ಸಂದರ್ಭದಲ್ಲಿ ಆರ್ಚ ಬಿಷಪ್ ಟೆಂಪಲರ್ ಕೊಟ್ಟ ದೃಷ್ಟಾಂತವು ಮನನೀಯವಿದೆ. ರಗ್ಬಿ (Rugby) ಯ ಒಬ್ಬ ಮನುಷ್ಯನು ಚಿಕ್ಕಂದಿನಲ್ಲಿ ಅಷ್ಟೇನು ಪ್ರತಿಭಾಶಾಲಿಯಿರಲಿಲ್ಲ. ಆದರೆ ಅವನು ತನ್ನ ಪ್ರೌಢಾವಸ್ಥೆಯಲ್ಲಿ ಜೀವನದಲ್ಲಿ ಬಹಳೇ ಯಶಸ್ಸನ್ನು ಸಂಪಾದಿಸಿದನು. ಜನರು ಚಕಿತರಾಗಿ ಅವನನ್ನು ಆ ಬಗ್ಗೆ ವಿಚಾರಿಸಲಾಗಿ ಅವನೆಂದ: "ಜನರು ಹೊಸಹರೆಯದಲ್ಲಿ ಹೇಗಿರುವರೋ ಅದೇನು ಅಷ್ಟೊಂದು ಮಹತ್ವದ್ದಲ್ಲ. ಆ ನಂತರ ಅವರು ಏನಾಗುವರೋ ಅದೇ ಸ್ಥಾಯಿಯಾದದ್ದು ಮತ್ತು ನಾವಾದರೂ ಅದಕ್ಕೇ ಹೆಚ್ಚು ಮಹತ್ವವನ್ನು ಕೊಡಬೇಕು."

ಮಕ್ಕಳನ್ನು ಬೌದ್ಧಿಕ ಚಟುವಟಿಕೆಗಳಿಗಾಗಿ ತರಬೇತಿಗೊಳಿಸುವಾಗ ನಾವು ಒಂದು ವಿಷಯದಲ್ಲಿ ವಿಶೇಷ ಜಾಗರೂಕರಾಗಿರತಕ್ಕದ್ದು—ಅದೆಂದರೆ ಉಪಯೋಗಿಸಲ್ಪಡದೆ ಮನಸ್ಸಿನಲ್ಲಿ ಸಂಗ್ರಹಿತವಾಗುವ, ವರೆಗೆ ಹಚ್ಚಲ್ಪಡದೇ ಉಳಿಯುವ ಹಾಗೂ ಹೊಸ ಹೊಸ ವಿಚಾರವಾಹಿನಿಗಳಲ್ಲಿ ಪ್ರವಹಿಸದ ನಿಷ್ಕ್ರಿಯ ವಿಚಾರಗಳ ಸಂಚಯ, ಇಂಥ ಜೊಳ್ಳು ವಿಚಾರಗಳು ಮನಸ್ಸಿನಲ್ಲಿ ಕೂಡಿ ಬೀಳದಂತೆ ನಾವು ನೋಡಿಕೊಳ್ಳಬೇಕು. ಈ ದಿಶೆಯಲ್ಲಿ ಎರಡು ಸಾಮಾನ್ಯ ನಿಯಮಗಳನ್ನು ನಾವು ವಿಧಿಸಬಹುದು. ಅವಾವೆಂದರೆ, "ಬಹಳ ವಿಷಯಗಳನ್ನು ಕಲಿಸಿ ಮನಸ್ಸಿನಲ್ಲಿ ಗೊಂದಲವನ್ನುಂಟುಮಾಡ

ಬೇಡಿರಿ ; ” ಹಾಗೂ “ ನೀವೇನನ್ನು ಕಲಿಸುವಿರೋ ಅದನ್ನು ಸಂಪೂರ್ಣವಾಗಿ ಒಳ್ಳೇ ಚೆನ್ನಾಗಿ ಕಲಿಸಿರಿ.” ಬಹಳ ವಿಷಯುಗಳ ಬಗ್ಗೆ ತುಸುತುಸು ಸಂಗತಿಗಳನ್ನು ಕಲಿಸುವುದರಿಂದ ಪರಸ್ಪರ ಸಂಬಂಧಸೂತ್ರವಿಲ್ಲದ ಅನೇಕ ವಿಚಾರಗಳು ಮನಸ್ಸಿನಲ್ಲಿ ನಿರ್ಜೀವ ವಸ್ತುಗಳಂತೆ ತಲೆ ಹಾಕಲ್ಪಡುವವು. ಆದುದರಿಂದ ಮಕ್ಕಳು ಕೆಲವೇ ಮಹತ್ವಪೂರ್ಣ ವಿಷಯಗಳನ್ನು ಕಲಿಯುವದೊಳ್ಳೆಯದು. ಆಗ ಆ ವಿಷಯಗಳು ಹೆಚ್ಚೆಚ್ಚು ವೈವಿಧ್ಯಪೂರ್ಣವಾದ ವೈಚಾರಿಕ ಕಿರಣಗಳಲ್ಲಿ ಫಲಶ್ರುತಿ ಪಡೆಯುವವು.

ಮಗುವು ತಾನು ಕಲಿತ ವಿಷಯಗಳನ್ನು ತನ್ನವನ್ನಾಗಿ ಅಂದರೆ ಆತ್ಮಸಾತ್ ಮಾಡಿಕೊಳ್ಳಬೇಕು ಹಾಗೂ ತನ್ನ ಜೀವನದ ವಿವಿಧ ವ್ಯಾವಹಾರಿಕ ಅಂಗಗಳಲ್ಲಿ ತಾನು ಕಲಿತ ವಿಷಯಗಳ ಪ್ರತ್ಯಕ್ಷ ಉಪಯೋಗವನ್ನು ಅದು ಅರಿಯುವಂತಾಗಬೇಕು. ಶಿಕ್ಷಣದ ಪ್ರಾರಂಭದಿಂದಲೇ ಮಗುವು ಸಂಶೋಧನೆಯಿಂದುಂಟಾಗುವ ಆನಂದವನ್ನು ಅನುಭವಿಸಬೇಕು. ಅರ್ಥಾತ್ ಮಗುವು ಯಾವಾಗಲೂ ತನ್ನಷ್ಟಕ್ಕೆ ತಾನು ಸಣ್ಣ ಪ್ರಮಾಣದ ಸಂಶೋಧಕನಾಗಿರಬೇಕು. ಅಂದರೇನೇ ಅಂತಹ ಆನಂದವು ಲಭ್ಯ. ಮಗುವಿಗೆ ತಾನು ಪಡೆಯುತ್ತಿರುವ ಶಿಕ್ಷಣವು ತನ್ನದೇ ಜೀವನದಲ್ಲಿ ದಿನಂಪ್ರತಿ ಜರುಗುತ್ತಿರುವ ಘಟನೆಗಳ ಬಗ್ಗೆ ತಿಳವಳಿಕೆಯನ್ನುಂಟು ಮಾಡುತ್ತದೆಂಬ ಅರಿವು ಹುಟ್ಟಬೇಕು. ಇಲ್ಲಿ ಅರಿವೆಂದರೆ ಕೇವಲ ತರ್ಕಬದ್ಧವಾದ ವಿಂಗಡಣಾತ್ಮಕ ಪರಿಶೋಧನೆಯಲ್ಲ. ಅದಂತೂ ಇದ್ದೇ ತೀರಬೇಕು. “ಎಲ್ಲರನ್ನೂ ಅರಿಯುವುದೆಂದರೆ ಎಲ್ಲರನ್ನೂ ಕ್ಷಮಿಸಿದಂತೆ” ಎಂದು ಫ್ರೆಂಚ ಗಾದೆಯೊಂದು ಹೇಳುತ್ತದೆ. ಹಿರಿದಾದ ಅರಿವು ಹಿರಿದಾದ ಹೃದಯುವನ್ನುಂಟುಮಾಡುವುದೇ ಆಗಿದೆ. ನಾವಿಲ್ಲಿ ‘ಅರಿವು’ ಎಂಬ ಪದಕ್ಕೆ ಇಷ್ಟೆಲ್ಲ ಅರ್ಥ ಹಚ್ಚಬೇಕು. ಕೇವಲ ಪಾಂಡಿತ್ಯ ಪ್ರದರ್ಶಕರು (Pedants) ಜೀವನೋಪಯೋಗಿ ಶಿಕ್ಷಣವನ್ನು ಕೀಳುದೃಷ್ಟಿಯಿಂದ ನೋಡುವರು. ಆದರೆ ಶಿಕ್ಷಣವು ಜೀವನದಲ್ಲಿ ಉಪಯೋಗ ಬೀಳಲಾರದಾದರೆ ಅದರ ಪ್ರಯೋಜನವಾದರೂ ಏನು? ಜೀವನದಲ್ಲಿ ನಿಮ್ಮ ಗುರಿ ಯಾವುದೇ ಇರಲಿ ನಿಮ್ಮ ಶಿಕ್ಷಣವು ನಿಮ್ಮ ಗುರಿಯನ್ನು ಸಾಧಿಸಲು ಉಪಯೋಗವಾಗುವಂತಹದಿರಬೇಕು. ಶಿಕ್ಷಣವು ಸೇಂಟ ಆಗಸ್ಟೀನನಂಥವರನ್ನು ಮೊದಲ್ಗೊಂಡು ನೆಪೋಲಿಯನ್ನನವರೆಗೆ ಎಲ್ಲರಿಗೂ ಅವರವರ ರೀತಿಯಲ್ಲಿ ಉಪಯುಕ್ತವಾಗಿತ್ತು. ಶಿಕ್ಷಣವು ಯಾವಾಗಲೂ ಉಪಯುಕ್ತವಾದದ್ದು. ಯಾಕಂದರೆ ಅರಿವು ಯಾವಾಗಲೂ ಉಪಯುಕ್ತವಾದದ್ದೇ. ಶಿಕ್ಷಣದ ಉದ್ದೇಶವಾದರೂ ಈ ಅರಿವನ್ನು ಹುಟ್ಟಿಸುವುದೇ ಆಗಿದೆ. ಒಮ್ಮೆ ಶಿಕ್ಷಣವು ಈ ಅರಿವನ್ನು ಹುಟ್ಟಿಸಿತೆಂದರೆ ಅದು ಕೃತಕೃತ್ಯವಾದಂತೆ. ಮುಂದೆ ಈ ಅರಿವೇ ಗುರುವಾಗುವುದು. ಒಳ್ಳೆಯ ಶಿಕ್ಷಣ

ದಿಂದುಂಟಾಗುವ ಈ ಜ್ಞಾನ ಅಥವಾ ಅರಿವಿನಲ್ಲಿ ತಾತ್ಕಾಲಿಕ ಒತ್ತಡದ ಪರಿಸ್ಥಿತಿಯ ಪರಿಜ್ಞಾನಕ್ಕೆ ವಿಶೇಷ ಮಹತ್ವವಿದೆ. ಗತಕಾಲದ ಘಟನೆಗಳ ಜ್ಞಾನದ ಉಪಯೋಗವು ನಮ್ಮನ್ನು ಇಂದಿನ ಪರಿಸ್ಥಿತಿಯನ್ನೆದುರಿಸಲು ಸಿದ್ಧಗೊಳಿಸುವುದೇ ಆಗಿದೆ. ವರ್ತಮಾನವನ್ನು ಅಲಕ್ಷಿಸುವುದಾಗಲಿ, ತುಚ್ಛವೆಂದು ತಿಳಿಯುವುದಾಗಲಿ ಬಹಳೇ ಘಾತುಕವಾದ ವಿಚಾರ. ವರ್ತಮಾನಕಾಲವು ಒಂದು ದೃಷ್ಟಿಯಿಂದ ಎಲ್ಲವನ್ನೂ ಒಳಗೊಂಡಿರುತ್ತದೆ. ವರ್ತಮಾನದ ಪವಿತ್ರಕ್ಷೇತ್ರದಲ್ಲಿ ಗತಕಾಲವು ಫಲ ಬಿಟ್ಟಿರುತ್ತದೆ. ಮತ್ತು ಆದರಲ್ಲಿ ಭವಿಷ್ಯತ್ತಿನ ಬೀಜ ಒಡೆದಿರುತ್ತದೆ.

ಶಿಕ್ಷಣವೆಂದರೆ ಜ್ಞಾನವನ್ನು ಉಪಯೋಗಿಸುವ ಕಲೆಯ ಸಂಪಾದನೆ. ಈ ಕಲೆಯು ಕಲಿಸಲು ಬಲು ಗಡಚಾದುದು. ನಿಜವಾದ ಶೈಕ್ಷಣಿಕಗುಣಗಳುಳ್ಳ ಯಾವುದಾದರೊಂದು ಪಠ್ಯ ಪುಸ್ತಕವು ಪ್ರಸಿದ್ಧವಾದಾಗ ವಿಮರ್ಶಕರು ಆ ಪುಸ್ತಕವು ಕಲಿಸಲು ಬಲುಗಡಚಾದುದೆಂದು ಹೇಳದಿರರು. ಅವರು ಹಾಗೆ ಹೇಳುವುದಾದರೂ ಸಹಜವೇ ಸರಿ. ಯಾಕೆಂದರೆ ನಿಜವಾದ ಶಿಕ್ಷಣದ ದಾರಿ ಬಲು ಕಠಿಣವಾದದ್ದು. 'ಶಿಕ್ಷಣ' ಎಂಬ ಪದವು 'ಶಿಸ್ತು' ಹಾಗೂ 'ಸಂಯಮನ'ಗಳ ಅರ್ಥವನ್ನು ಕೊಡುತ್ತದೆ. ಪರಿಪೂರ್ಣವಾದ ಶಿಕ್ಷಣಾವಸ್ಥೆಯೆಂದರೆ ಜ್ಞಾನಯೋಗ ಕರ್ಮಯೋಗಗಳ ಸಮನ್ವಯವೆಂದೇ ಹೇಳಬಹುದು. ಸುದೈವದಿಂದ ಯಾವುದೊಂದು ಪರಿಮಿತ ಕ್ಷೇತ್ರದಲ್ಲಿ ವಿಶೇಷ ಜ್ಞಾನ ಸಂಪಾದಿಸುವುದು ಒಟ್ಟಾರೆ ಸುಸಂಸ್ಕೃತರಾಗುವುದಕ್ಕಿಂತ ಸುಲಭವಾದುದು. ಇದಕ್ಕೆ ಅನೇಕ ಕಾರಣಗಳುಂಟು. ಅವುಗಳಲ್ಲಿ ಮುಖ್ಯವಾದದ್ದೆಂದರೆ ವಿದ್ಯಾರ್ಥಿಯು ಸಾಮಾನ್ಯವಾಗಿ ತನಗೆ ಇಷ್ಟವಾದ ವಿಷಯದಲ್ಲಿ ವಿಶೇಷ ಜ್ಞಾನಪಡೆಯಲು ಇಚ್ಛಿಸುವುದೇ ಆಗಿದೆ. ಸಾಮಾನ್ಯ ಸಾಂಸ್ಕೃತಿಕ ಶಿಕ್ಷಣವು ಮನಸ್ಸಿನಲ್ಲಿಯ ಸುಪ್ತಚೇತನಗಳನ್ನು ಉದ್ದೀಪ್ತಗೊಳಿಸುವುದು. ಹಾಗೂ ವಿಶಿಷ್ಟ ಶಿಕ್ಷಣವು ಈ ಉದ್ದೀಪ್ತಚೇತನವನ್ನು ಜೀವನದ ವಿವಿಧ ವ್ಯಾವಹಾರಿಕ ಕ್ಷೇತ್ರಗಳಲ್ಲಿ ಉಪಯೋಗಿಸುವುದು. ಆದರೆ ಈ ಎರಡೂ ಕಾರ್ಯಗಳು ಒಂದರಿಂದೊಂದು ಭಿನ್ನವಾದವುಗಳೆಂದು ನಾವು ತಿಳಿಯಬಾರದು. ಹಾಗೆ ನೋಡಿದರೆ ಅವು ಪರಸ್ಪರಪೂರಕವಾದವುಗಳೇ ಆಗಿವೆ. ಸಾಮಾನ್ಯ ಸಂಸ್ಕೃತಿಯ ಅನುಸರಣದಲ್ಲಿಯೇ ಯಾವುದೊಂದು ವಿಶಿಷ್ಟವಿಷಯದಲ್ಲಿ ಅಭಿರುಚಿ ಉಂಟಾಗಬಹುದು. ಅದರಂತೆಯೇ ನಾವು ಯಾವುದೊಂದು ವಿಶಿಷ್ಟ ವಿಷಯುವನ್ನು ಅಭ್ಯಸಿಸುವಾಗ ಉಳಿದ ವಿಷಯಗಳೊಡನಿರುವ ಅದರ ಸಂಬಂಧವು ನಮ್ಮನ್ನು ಹೆಚ್ಚು ವಿಶಾಲವಾದ ಜ್ಞಾನಕ್ಷೇತ್ರದಲ್ಲಿ ಕರೆದೊಯ್ಯಬಹುದು. ಅನೇಕ ಭೌತವಿಜ್ಞಾನಿಗಳು, ಜೀವಶಾಸ್ತ್ರಜ್ಞರು, ಗಣಿತಜ್ಞರು, ಖಗೋಲ ಶಾಸ್ತ್ರಜ್ಞರು, ಕಲೋಪಾಸಕರು, ಇತಿಹಾಸಜ್ಞರು ಹಾಗೂ ಇನ್ನುಳಿದ

ಶಾಸ್ತ್ರಜ್ಞರು ಹೆಚ್ಚು ವಿಶಾಲವಾದ ಹಾಗೂ ಹೆಚ್ಚು ಮೂಲಭೂತವಾದ ತತ್ವಶಾಸ್ತ್ರದ ಕಡೆಗೆ ಹೊರಳಿದ್ದು ಹೀಗೆಯೇ. ಇನ್ನು ಯಾವುದೊಂದು ಶಿಕ್ಷಣವು ಕೇವಲ ಸಾಮಾನ್ಯ ಸಂಸ್ಕೃತಿಯನ್ನು ಕಲಿಸುವುದೆಂದಾಗಲಿ ಅಥವಾ ಕೇವಲ ವಿಶಿಷ್ಟ ವಿಷಯದಲ್ಲಿ ತಜ್ಞತೆಯನ್ನುಂಟುಮಾಡುವುದೆಂದಾಗಲೀ ಹೇಳಲಾಗದು. ಹಾಗೆ ನೋಡಿದರೆ ಸಾಮಾನ್ಯ ಶಿಕ್ಷಣಕ್ಕಾಗಿ ನಾವು ಅಭ್ಯಸಿಸುವ ವಿಷಯಗಳು ಸಾಮಾನ್ಯವಿರದೇ ವಿಶಿಷ್ಟವಾದವುಗಳೇ ಇರುವವು; ಹಾಗೂ ವಿಶಿಷ್ಟರೀತಿಯಲ್ಲಿಯೇ ಅಭ್ಯಸಿಸಲ್ಪಡುವವು. ಇದರಂತೆಯೇ ನಾವು ಯಾವುದೊಂದು ವಿಶಿಷ್ಟವಿಷಯದಲ್ಲಿ ಪರಿಣತರಾಗಬೇಕಾದರೆ ನಮ್ಮ ಮನಸ್ಸು ಒಂದು ನಿರ್ದಿಷ್ಟವಾದ ಸಾಮಾನ್ಯ ಸಾಂಸ್ಕೃತಿಕ ಮಟ್ಟದಲ್ಲಿರಬೇಕಾಗುತ್ತದೆ. ಇದರಿಂದ ಒಂದು ಮಾತು ಸುಸ್ಪಷ್ಟವಾಗುತ್ತದೆ. ಅದೆಂದರೆ, ಯಾವುದೊಂದು ವಿಶಿಷ್ಟ ವಿಷಯದ ನಿಜವಾದ ತಜ್ಞನು ಉಳಿದ ವಿಷಯಗಳ ಬಗ್ಗೆ ಕೂಡ ಒಂದು ಬಗೆಯ ತರ್ಕಶುದ್ಧವಾದ ಅಭಿಪ್ರಾಯವನ್ನು ಇಟ್ಟುಕೊಂಡಿರುವನು. (ಇದರರ್ಥ ಅವನು ಉಳಿದ ವಿಷಯಗಳಲ್ಲಿ ಕೂಡ ಬಲ್ಲಿದನಾಗಿರುವನೆಂದಲ್ಲ). ಉಳಿದ ವಿಷಯಗಳನ್ನು ಅವನು ಸಂಪೂರ್ಣವಾಗಿ ಅಲಕ್ಷಿಸುವುದಂತೂ ಸಾಧ್ಯವೇ ಇಲ್ಲ. ಯಾವನೊಬ್ಬ ತಜ್ಞನು ಉಳಿದ ವಿಷಯಗಳನ್ನು ಪೂರ್ಣವಾಗಿ ಅಲಕ್ಷಿಸುತ್ತಿದ್ದರೆ ಅಥವಾ ಅವುಗಳ ಬಗ್ಗೆ ತರ್ಕವಿರುದ್ಧವಾದ ಅಭಿಪ್ರಾಯವನ್ನು ತಳೆಯುತ್ತಿದ್ದರೆ ಅವನಿಗೆ ತನ್ನ ವಿಷಯದಲ್ಲಿ ಕೂಡ ತರ್ಕಬದ್ಧವಾದ ಅಭಿಪ್ರಾಯವಿರುವುದಿಲ್ಲವೆಂದೇ ಹೇಳಬೇಕು. ಅಂಥವನು ನಿಜವಾದ ತಜ್ಞನೆನಿಸಲಾರನು. ಅವನು ಕದಾಚಿತ್ ಷೋಕು ಹಾಕಿ ತಜ್ಞನಾಗಿರಲೂ ಸಾಕು. ವಿಷಯಗಳೂ ಅವುಗಳನ್ನಭ್ಯಸಿಸುವ ಮಾರ್ಗಗಳೂ ಬೇರೆ ಬೇರೆಯಾಗಿದ್ದರೂ ತರ್ಕಬದ್ಧತೆ ಎಲ್ಲ ವಿಷಯಗಳಲ್ಲಿ ಒಂದೇ ಆಗಿದೆ. ಇದೆಲ್ಲ ಶಿಕ್ಷಣದ ಬೌದ್ಧಿಕ ಲಕ್ಷಣಗಳ ವಿಚಾರವಾಯ್ತು.

ಆದರೆ ಇನ್ನೊಂದು ಬಗೆಯ ಮಹತ್ವದ ಶಿಕ್ಷಣವಿದೆ. ಅದಿಲ್ಲದಿದ್ದರೆ ಶಿಕ್ಷಣ ಹಾಗೂ ಸಂಸ್ಕೃತಿ ಅಪೂರ್ಣವಾಗುಳಿಯುವವು. ಆ ಶಿಕ್ಷಣವೆಂದರೆ ವಿದ್ಯಾರ್ಥಿಗಳಲ್ಲಿ ಸೌಂದರ್ಯಾಭಿರುಚಿಯನ್ನು ಹುಟ್ಟಿಸುವುದು. ಶೈಲಿಯ ಪಾತ್ರವು ಇಲ್ಲಿ ಮಹತ್ತರವಾದುದು. ಒಳ್ಳೆಯ ಶೈಲಿಯು ಸಾಹಿತ್ಯದಲ್ಲಿಯೇ ಆಗಲಿ, ವೈಜ್ಞಾನಿಕ ಬರಹಗಳಲ್ಲಿಯೇ ಆಗಲಿ, ಪ್ರತ್ಯಕ್ಷ ಕಾರ್ಯನಿರ್ವಹಣದ ವಿನ್ಯಾಸದಲ್ಲಿಯೇ ಆಗಲಿ ಮೂಲತಃ ಒಂದೇ ಗುಣವನ್ನು ಪಡೆದಿರುವುದು. ಆ ಗುಣವು ಮಾನವನ ಸೌಂದರ್ಯದೃಷ್ಟಿಗೆ ಸಂಬಂಧಿಸಿದುದು. ಒಳ್ಳೆಯ ಶೈಲಿ ಕ್ರಿಕೆಟ ಆಟದಲ್ಲಿಯೇ ಇರಲಿ, ಚತುರ ಮಾತುಗಾರಿಕೆಯಲ್ಲಿಯೇ ಇರಲಿ, ಒಳ್ಳೆಯ ಬರವಣಿಗೆಯಲ್ಲಿಯೇ ಇರಲಿ ಅದನ್ನು

ನಾವು 'ಸುಂದರ' ಎಂದೇ ವರ್ಣಿಸುತ್ತೇವೆ. ಸರ್ವಾಂಗಸುಂದರ ಶೈಲಿಯು ಶಿಕ್ಷಣದ ಅಂತಿಮ ಸಾಧನೆ. ಎಲ್ಲ ಉಪಯುಕ್ತತೆಯು ಅಲ್ಲಿ ರಸಘಟ್ಟಿಯನ್ನು ಪಡೆದಿರುತ್ತದೆ. ಸೌಂದರ್ಯದೃಷ್ಟಿಯು ಒಂದು ದೃಷ್ಟಿಯಿಂದ ಜೀವನದ ಎಲ್ಲ ದೃಷ್ಟಿಗಳ ಒಂದು ಸರಸ ಸಂಗಮವೇ ಸರಿ. ಶೈಲಿಯು ನಮ್ಮ ಕಾರ್ಯ ಶಕ್ತಿಯನ್ನು ನಿಯಂತ್ರಿಸಿ ಅದಕ್ಕೊಂದು ಸುಂದರ ರೂಪವನ್ನು ಕೊಡುತ್ತದೆ. ಶಿಕ್ಷಣವು ಇಂದು ಕೇವಲ ಯಂತ್ರವತ್ತಾಗಿ ನಡೆದುದರಿಂದ ಅಲ್ಲಿ ನಾವು ಸರಸ್ವತಿಯ ವೀಣೆಯ ಝೇಂಕಾರ ದಿಂದಾಗುವ ಸ್ಪಂದನವನ್ನು ಹೊಂದಲಾರದಾಗಿದ್ದೇವೆ. ಇಂದು ನಮ್ಮಲ್ಲಿ ಎಷ್ಟು ಜನ ವಿದ್ಯಾರ್ಥಿಗಳು ಶಿಕ್ಷಣಕ್ಕೆ ಜೀವನೋಪಾರ್ಜನೆಯ ಸಾಧನವೆಂಬುದಕ್ಕಿಂತ ಹೆಚ್ಚಿನ ಅರ್ಥವನ್ನು ಕಲ್ಪಿಸಿದ್ದಾರೆ? ಇಂದು ನಮ್ಮಲ್ಲಿ ಎಷ್ಟು ವಿದ್ಯಾರ್ಥಿಗಳ ಹೃದಯವು ಜ್ಞಾನದ ನವನವೀನ ತರಂಗಗಳ ಸ್ಪಂದನವನ್ನು ಹೊಂದಿ ಝುಮ್ . . . ಝುಮ್ ಎನ್ನುತ್ತದೆ?

ಇದು ರಾಷ್ಟ್ರೀಯ ಶಿಕ್ಷಣದ ಕಾಲ. ಯಾವುದೊಂದು ರಾಷ್ಟ್ರದ ಉನ್ನತಿ ಯಾಗಲಿ ಅವನತಿಯಾಗಲಿ ಅದರ ಯುವಜನಾಂಗದ ಆಸೆ—ಆಕಾಂಕ್ಷೆಗಳ, ಗುರಿ—ಧ್ಯೇಯಗಳ ಸಫಲತೆ ಅಥವಾ ವಿಫಲತೆಯನ್ನು ಅವಲಂಬಿಸಿರುತ್ತದೆ. ಎಂತಲೇ ನಾಡ ನಾಯಕರು ಯುವಕರನ್ನು ಮೇಲಿಂದ ಮೇಲೆ ಎಚ್ಚರಿಸುತ್ತಿರುತ್ತಾರೆ. ಈ ಎಚ್ಚರಿ ಕೆಯು ದಿನಬಳಕೆಯ ಮಾತೆಂದು ಬಗೆದು ಅದನ್ನು ಅಲಕ್ಷಿಸುವುದರಲ್ಲಿ ಅರ್ಥವಿಲ್ಲ. ಶಿಸ್ತು ಸಂಘಟನೆಗಳಿಲ್ಲದ ಧೀಶಕ್ತಿಯು ಸದ್ಯದ ಪರಿಸ್ಥಿತಿಯಲ್ಲಂತೂ ನಿರುಪಯೋಗಿ. ನಾವು, ಇಂದು ಎಷ್ಟೊ ಧೀಮಂತರಾದ ಯುವಕರು ಯಾವುದೇ ಬಗೆಯ ನಿಶ್ಚಿತ ಗೊತ್ತುಗುರಿಗಳಿಲ್ಲದೆ, ಯಾವುದೇ ಬಗೆಯ ಶಿಸ್ತಿಗೆ ಒಳಗಾಗದೆ ಅನಿಶ್ಚಿತ ಅಸ್ತವ್ಯಸ್ತ ಜೀವನವನ್ನು ಸಾಗಿಸಿ ತಮ್ಮ ಧೀಶಕ್ತಿಯ ಹ್ರಾಸಮಾಡಿಕೊಳ್ಳುತ್ತಿರುವುದನ್ನು ನೋಡುತ್ತೇವೆ. ಇಂಥವರು ಶಿಸ್ತಿಗೆ ಒಳಪಡದಿರುವುದೇ ಪ್ರತಿಭಾಶಾಲಿಗಳ ಲಕ್ಷಣ ವೆಂಬ ತಪ್ಪು ಕಲ್ಪನೆಯನ್ನು ಬಿಟ್ಟು ಬಿಟ್ಟು ಸ್ವಯಂಪ್ರೇರಿತ ಸುವ್ಯವಸ್ಥಿತ ಜೀವನವನ್ನು ಸಾಗಿಸಿದಲ್ಲಿ ಅವರ ಪ್ರತಿಭೆಗೂ ಸಮಾಜಕ್ಕೂ ಮಹದುಪಕಾರ ಮಾಡಿದಂತಾಗುತ್ತದೆ.

ಕೊನೆಯದಾಗಿ ಧಾರ್ಮಿಕ ಶಿಕ್ಷಣದ ಬಗ್ಗೆ ತುಸು ವಿಚಾರ ಮಾಡುವುದಗತ್ಯ. ಇಲ್ಲಿ ಧಾರ್ಮಿಕ ಶಿಕ್ಷಣವೆಂದರೆ ಯಾವುದೊಂದು ವಿಶಿಷ್ಟಧರ್ಮದ ತತ್ವಗಳ ಬೋಧೆನೆಯಲ್ಲ. ಯಾವ ಶಿಕ್ಷಣವು ಕರ್ತವ್ಯಬುದ್ಧಿ ಹಾಗೂ ಶ್ರದ್ಧಾಭಾವನೆಗಳನ್ನು ಜಾಗ್ರತಗೊಳಿಸುವುದೋ ಅದೇ ಧಾರ್ಮಿಕ ಶಿಕ್ಷಣ. ನಮ್ಮ ಕರ್ತವ್ಯಬುದ್ಧಿಯು ವಿವಿಧ ಘಟನೆಗಳ ಮೇಲಿರುವ ನಮ್ಮ ಸುಪ್ತನಿಯಂತ್ರಕ ಶಕ್ತಿಯ ಅರಿವಿನಿಂದ ಹುಟ್ಟುತ್ತದೆ. ಎಲ್ಲಿ ಜ್ಞಾನದಿಂದ ಪರಿಸ್ಥಿತಿಯನ್ನು ಸುಧಾರಿಸುವುದು ನಮಗೆ

ನಾವು 'ಸುಂದರ' ಎಂದೇ ವರ್ಣಿಸುತ್ತೇವೆ. ಸರ್ವಾಂಗಸುಂದರ ಶೈಲಿಯು ಶಿಕ್ಷಣದ ಅಂತಿಮ ಸಾಧನೆ. ಎಲ್ಲ ಉಪಯುಕ್ತತೆಯು ಅಲ್ಲಿ ರಸಘಟ್ಟಿಯನ್ನು ಪಡೆದಿರುತ್ತದೆ. ಸೌಂದರ್ಯದೃಷ್ಟಿಯು ಒಂದು ದೃಷ್ಟಿಯಿಂದ ಜೀವನದ ಎಲ್ಲ ದೃಷ್ಟಿಗಳ ಒಂದು ಸರಸ ಸಂಗಮವೇ ಸರಿ. ಶೈಲಿಯು ನಮ್ಮ ಕಾರ್ಯ ಶಕ್ತಿಯನ್ನು ನಿಯಂತ್ರಿಸಿ ಅದಕ್ಕೊಂದು ಸುಂದರ ರೂಪವನ್ನು ಕೊಡುತ್ತದೆ. ಶಿಕ್ಷಣವು ಇಂದು ಕೇವಲ ಯಂತ್ರವತ್ತಾಗಿ ನಡೆಧುದರಿಂದ ಅಲ್ಲಿ ನಾವು ಸರಸ್ವತಿಯ ವೀಣೆಯ ಝೇಂಕಾರ ದಿಂದಾಗುವ ಸ್ಪಂದನವನ್ನು ಹೊಂದಲಾರದಾಗಿದ್ದೇವೆ. ಇಂದು ನಮ್ಮಲ್ಲಿ ಎಷ್ಟು ಜನ ವಿದ್ಯಾರ್ಥಿಗಳು ಶಿಕ್ಷಣಕ್ಕೆ ಜೀವನೋಪಾರ್ಜನೆಯ ಸಾಧನವೆಂಬುದಕ್ಕಿಂತ ಹೆಚ್ಚಿನ ಅರ್ಥವನ್ನು ಕಲ್ಪಿಸಿದ್ದಾರೆ? ಇಂದು ನಮ್ಮಲ್ಲಿ ಎಷ್ಟು ವಿದ್ಯಾರ್ಥಿಗಳ ಹೃದಯವು ಜ್ಞಾನದ ನವನವೀನ ತರಂಗಗಳ ಸ್ಪಂದನವನ್ನು ಹೊಂದಿ ಝುಂಮ್ . . . ಝುಂಮ್ ಎನ್ನುತ್ತದೆ?

ಇದು ರಾಷ್ಟ್ರೀಯ ಶಿಕ್ಷಣದ ಕಾಲ. ಯಾವುದೊಂದು ರಾಷ್ಟ್ರದ ಉನ್ನತಿಯಾಗಲಿ ಅವನತಿಯಾಗಲಿ ಅದರ ಯುವಜನಾಂಗದ ಆಸೆ—ಆಕಾಂಕ್ಷೆಗಳ, ಗುರಿ—ಧ್ಯೇಯಗಳ ಸಫಲತೆ ಅಥವಾ ವಿಫಲತೆಯನ್ನು ಅವಲಂಬಿಸಿರುತ್ತದೆ. ಎಂತಲೇ ನಾಡ ನಾಯಕರು ಯುವಕರನ್ನು ಮೇಲಿಂದ ಮೇಲೆ ಎಚ್ಚರಿಸುತ್ತಿರುತ್ತಾರೆ. ಈ ಎಚ್ಚರಿಕೆಯು ದಿನಬಳಕೆಯ ಮಾತೆಂದು ಬಗೆದು ಅದನ್ನು ಅಲಕ್ಷಿಸುವುದರಲ್ಲಿ ಅರ್ಥವಿಲ್ಲ. ಶಿಸ್ತು ಸಂಘಟನೆಗಳಿಲ್ಲದ ಧೀಶಕ್ತಿಯು ಸದ್ಯದ ಪರಿಸ್ಥಿತಿಯಲ್ಲಂತೂ ನಿರುಪಯೋಗಿ. ನಾವು, ಇಂದು ಎಷ್ಟೊ ಧೀಮಂತರಾದ ಯುವಕರು ಯಾವುದೇ ಬಗೆಯ ನಿಶ್ಚಿತ ಗೊತ್ತುಗುರಿಗಳಿಲ್ಲದೆ, ಯಾವುದೇ ಬಗೆಯ ಶಿಸ್ತಿಗೆ ಒಳಗಾಗದೆ ಅನಿಶ್ಚಿತ ಅಸ್ತವ್ಯಸ್ತ ಜೀವನವನ್ನು ಸಾಗಿಸಿ ತಮ್ಮ ಧೀಶಕ್ತಿಯ ಹ್ರಾಸಮಾಡಿಕೊಳ್ಳುತ್ತಿರುವುದನ್ನು ನೋಡುತ್ತೇವೆ. ಇಂಥವರು ಶಿಸ್ತಿಗೆ ಒಳಪಡದಿರುವುದೇ ಪ್ರತಿಭಾಶಾಲಿಗಳ ಲಕ್ಷಣವೆಂಬ ತಪ್ಪು ಕಲ್ಪನೆಯನ್ನು ಬಿಟ್ಟು ಬಿಟ್ಟು ಸ್ವಯಂಪ್ರೇರಿತ ಸುವ್ಯವಸ್ಥಿತ ಜೀವನವನ್ನು ಸಾಗಿಸಿದಲ್ಲಿ ಅವರ ಪ್ರತಿಭೆಗೂ ಸಮಾಜಕ್ಕೂ ಮಹದುಪಕಾರ ಮಾಡಿದಂತಾಗುತ್ತದೆ.

ಕೊನೆಯದಾಗಿ ಧಾರ್ಮಿಕ ಶಿಕ್ಷಣದ ಬಗ್ಗೆ ತುಸು ವಿಚಾರ ಮಾಡುವುದಗತ್ಯ. ಇಲ್ಲಿ ಧಾರ್ಮಿಕ ಶಿಕ್ಷಣವೆಂದರೆ ಯಾವುದೊಂದು ವಿಶಿಷ್ಟಧರ್ಮದ ತತ್ವಗಳ ಬೋಧೆನೆಯಲ್ಲ. ಯಾವ ಶಿಕ್ಷಣವು ಕರ್ತವ್ಯಬುದ್ಧಿ ಹಾಗೂ ಶ್ರದ್ಧಾಭಾವನೆಗಳನ್ನು ಜಾಗ್ರತಗೊಳಿಸುವುದೋ ಅದೇ ಧಾರ್ಮಿಕ ಶಿಕ್ಷಣ. ನಮ್ಮ ಕರ್ತವ್ಯಬುದ್ಧಿಯು ವಿವಿಧ ಘಟನೆಗಳ ಮೇಲಿರುವ ನಮ್ಮ ಸುಪ್ತನಿಯಂತ್ರಕ ಶಕ್ತಿಯ ಅರಿವಿನಿಂದ ಹುಟ್ಟುತ್ತದೆ. ಎಲ್ಲಿ ಜ್ಞಾನದಿಂದ ಪರಿಸ್ಥಿತಿಯನ್ನು ಸುಧಾರಿಸುವುದು ನಮಗೆ

ಸಾಧ್ಯವಿರುವುದೋ ಅಲ್ಲಿ ಆ ಪರಿಸ್ಥಿತಿಯ ಬಗ್ಗೆ ಅಜ್ಞಾನಿಗಳಾಗಿ ಉಳಿಯುವುದು ಅಪರಾಧವೆಂದೆಣಿಸಲ್ಪಡುತ್ತದೆ. ಗತಕಾಲದ ಸವಿನೆನಹುಗಳನ್ನು ಹೃದಯದಲ್ಲಿ ಜಾಗ್ರತವಾಗಿರಿಸಿಕೊಂಡ ಹಾಗೂ ಮುಂಬರುವ ಮಂಗಳದ ನಾಂದಿಯು ಎದೆಯಲ್ಲಿ ಮೊಳಗುತ್ತಿರುವ ಆಶಾವಾದಿತ್ವವೇ ಶ್ರದ್ಧೆಯೆಂದೆನಿಸುವುದು. ಇಂತಹ ಅಚಲ ಶ್ರದ್ಧೆಗೆ ಅನಂತವೇ ಕಾಲಮಿತಿ ಎಂದೆನಿಸುವುದು.

[ಆಲ್‌ಫ್ರೆಡ್ ನಾರ್ಥ ವೈಟಹೆಡ್‌ರ 'Aims of Education' ಎಂಬ ಪ್ರಬಂಧದ ಆಧಾರದಿಂದ]

ಸಾಹಿತ್ಯದಲ್ಲಿ ನೀತಿಯ ಮೌಲ್ಯಗಳು

೧

ಯಾಂತ್ರಿಕ ಜನ, ವ್ಯಾಪಾರೀ ಸಮಾಜ ಇರುವ ಜಗತ್ತಿನಲ್ಲಿ ಶ್ರೇಷ್ಠ ರೀತಿಯ ಕಲೆ, ಸಾಹಿತ್ಯ ಅರಳಿ ಜೀವಿಸುವುದಿಲ್ಲ. ಪ್ರಸಿದ್ಧರಾದ ನವ್ಯ ಸಾಹಿತಿಗಳ ಕೃತಿಗಳು ಮರ್ಮಭೇದಕ ಶಕ್ತಿಯುಳ್ಳ ಕ್ಲಿಷ್ಟವಾದ ವಸ್ತುಕಗಳು, ವಸ್ತುಸಂಬಂಧಿಯಾದ ಕೃತಿಗಳು. ವೈಜ್ಞಾನಿಕ ಚಿಂತನಾ ವಿಧಾನಗಳಿಗೆ ನಮ್ಮನ್ನು ಅನುಗೊಳಿಸುವ ಮೂಲಕ ಅವು ನಮ್ಮ ಜ್ಞಾನವನ್ನು ಅರಳಿಸಿ, ಮತಿಯನ್ನು ಹರಿತಗೊಳಿಸುತ್ತವೆ. ಆದರೆ ಜೀವನದ ಪರಮಾರ್ಥವೇನು? ಅದರ ಅಗೋಚರವಾದ ಸಮ್ಮೋಹಕ ಲಾವಣ್ಯವೇನು ಎನ್ನುವ ಪುರುಷಾರ್ಥಗಳನ್ನು, ಮೌಲ್ಯಗಳನ್ನು ನೀಡುವುದಿಲ್ಲ. ಹಾಗಾಗಿ ಕ್ರತುಶಕ್ತಿಯುಳ್ಳ ಪ್ರತಿಭಾಬೀಜಗಳಿಲ್ಲದ ಅವರ ಮನೋಭೂಮಿ ಗುಪ್ತವಾಗಿಯೆ ಬಂಜರಾಗಿರುತ್ತದೆ.

ಬರ್ನಾರ್ಡ್ ಷಾ, ಮತ್ತು ಎಚ್. ಜಿ. ವೆಲ್ಸ್‌ರಂತಹ ಸುಪ್ರಸಿದ್ಧ ಮೇಧಾವಿಗಳೂ ಸಹ ಪ್ರತಿಭೆಯ ಉತ್ತುಂಗ ಶಿಖರಕ್ಕೆ ಏರಲಾರರು; ಪೂರ್ಣ ಜೀವನದ ಸಮಗ್ರಾರ್ಥವನ್ನು ಕಾಣಿಸುವಂತಹ, ವಿನೂತನ ಸೃಷ್ಟಿದರ್ಶನದಿಂದ ಮೂಕವಿಸ್ಮಿತರಾಗಿ ಪ್ರಾಕೃತ ಶ್ರದ್ಧೆಯನ್ನು ಅವಲಂಬಿಸುವಂತೆ ಮಾಡುವ ಒಂದೇ ಒಂದು ಮಹಾಕಾವ್ಯವನ್ನಾಗಲೀ ಅವರು ಸೃಷ್ಟಿಸಿಲ್ಲ. ನಮ್ಮ ಹೃದಯವು ಸಂಪೂರ್ಣವಾಗಿ ಪರಿವರ್ತಿತವಾಗುವಂತೆ ತನ್ನ ಭವ್ಯತೆಯಿಂದ ನಮ್ಮ ಅಹಂಕಾರವನ್ನು ಪುಡಿಮಾಡಿ ಹೃದಯವನ್ನು ಗಂಭೀರವಾಗಿ ಸ್ಪಂದಿಸುವಂತಹ; ಅದೃಷ್ಟದ ಕ್ರೂರಮುಷ್ಟಿಗೆ ಸಿಲುಕಿ ಒದ್ದಾಡುವ ಮಹಾಪಾತ್ರ ಸೃಷ್ಟಿಯಿಂದ ನೂತನ ದರ್ಶನ ನೀಡುವ; ನಮ್ಮನ್ನು ಹಿಡಿದಲುಗಿಸಿ ನಮ್ಮ ತನವನಿತನ್ನೂ ಹನಿಬಿಡದಂತೆ ಹೀರಿ ಶೋಧಗೈಯುವ ಒಂದೇ ಒಂದು ನಾಟಕವನ್ನೂ ಅವರು ಸೃಷ್ಟಿಸಿಲ್ಲ. ಅವರು ಕಂಡದ್ದು ಮನುಷ್ಯನ ಆತ್ಮದ ಆಂದೋಲನದ ಸದ್ದನ್ನೇ ಹೊರತು ಅದರ ಗಭೀರತೆಯನ್ನಲ್ಲ. ಅವರು ಪ್ರಧಾನತಃ ನಿಶಿತಮತಿಗಳು; ಅಧ್ಯಾತ್ಮಿಗಳಲ್ಲ.

ವಿಜ್ಞಾನಕ್ಕೂ ಕಲೆಗೂ ಮೂಲಭೂತವಾದ ಒಂದು ದೊಡ್ಡ ವ್ಯತ್ಯಾಸವಿದೆ. ಸೃಷ್ಟಿಶೀಲನಾದ ಕಲೆಗಾರನು ಮಾನವನ ಏಕಾಂತ ಅಜ್ಞಾತ ಜೀವನವನ್ನು, ಅಂತರಂಗ

ಜೀವನವನ್ನು ಚಿತ್ರಿಸುತ್ತಾನೆ. ಜಗತ್ತಿನ ಪ್ರತಿಯೊಂದು ಪಾತ್ರವೂ ತನ್ನ ಕ್ರಿಯೆ ಕರ್ಮಗಳಿಂದ ಆತನ ದರ್ಶನವನ್ನು ಪೂರ್ಣಗೊಳಿಸುತ್ತದೆ. ಆದರೆ ವೈಜ್ಞಾನಿಕ ಸಂಶೋಧನೆಗಳಲ್ಲಾದರೋ ಈ ಅನನ್ಯ ವೈಶಿಷ್ಟ್ಯವಿರುವುದಿಲ್ಲ. ಅವುಗಳನ್ನು ಮತ್ತೊಬ್ಬರ ರಚನೆಗಳಿಂದ ಬದಲಾಯಿಸಬಹುದೆಂದು ತೋರುತ್ತದೆ. ಅಮೆರಿಕಾ ದೇಶವು ಅಣು ಬಾಂಬನ್ನು ಕಂಡುಹಿಡಿದದ್ದು ಒಂದು ಅಘಟಿತ ಘಟನೆ ಮಾತ್ರ. ಬ್ರಿಟನ್, ರಷ್ಯಾ, ಜರ್ಮನಿ ಅಥವಾ ಜಪಾನ್ ಕೂಡ ಆ ಕೆಲಸವನ್ನು ಮಾಡಬಹುದಾಗಿತ್ತು. ಕೊಲಂಬಸ್ ಬರದಿದ್ದರೂ ಅಮೆರಿಕಾ ಖಂಡವನ್ನು ಯಾರಾದರೂ ಕಂಡುಹಿಡಿಯುತ್ತಿದ್ದರು. ವಾಸ್ಕೋಡಗಾಮನು ಆಫ್ರಿಕಾಖಂಡವನ್ನು ಬಳಸಿಕೊಂಡು ಇಂಡಿಯಾ ದೇಶಕ್ಕೆ ಸಮುದ್ರಮಾರ್ಗವನ್ನು ಶೋಧಿಸದಿದ್ದರೆ ಉಳಿದಾರಾದರೂ ಅದನ್ನು ನೆರವೇರಿಸುತ್ತಿದ್ದರು. ಆದರೆ ಕಾಳಿದಾಸ, ಷೇಕ್ಸ್‌ಪಿಯರ್ ಅಂತಹ ಪ್ರತಿಭಾವಂತ ಚೇತನಗಳು ಜೀವಿಸದಿದ್ದರೆ ಶಾಕುಂತಲಾ, ಹ್ಯಾಮ್ಲೆಟ್, ಒಥೆಲೊ ನಾಟಕಗಳಿಗೆ ಸೊನ್ನೆ ಬೀಳುತ್ತಿತ್ತು ಎಂಬುದರಲ್ಲಿ ಸಂದೇಹವೇ ಇಲ್ಲ. ನಿಜವಾಗಿ ಹೇಳುವುದಾದರೆ ಮಹಾಕಾವ್ಯಕೃತಿಗಳೂ ಕಲಾದ್ಭುತಗಳೂ ಬದಲಿಸಲಾಗದ ಸೃಷ್ಟಿಗಳು. ಅಂತಹ ಕೃತಿಗಳು ವಿಶ್ವ ಮತ್ತು ಕೃತಿಕಾರನ ವ್ಯಕ್ತಿತ್ವದ ಅಪೂರ್ವ ಮಿಲನದಿಂದ ಸಂಜನಿತವಾದುವು. ಈ ಅಪೂರ್ವ ಐಕ್ಯ, ಸಾಮರಸ್ಯ ಸಂಘಟಿಸುವುದು ಒಮ್ಮೆಯಾದರೂ ಅದಕ್ಕೆ ವಿಶ್ವಾಧಿಕಾರ, ವಿಶ್ವಮೌಲ್ಯ ಇರುತ್ತದೆ. ವೈಜ್ಞಾನಿಕ ಸಂಶೋಧನೆಗಳಿಗೆ ಸಂಸ್ಥೆಗಳಿವೆ; ಆದರೆ ಪ್ರವಾದಿ ಕವಿಗಳನ್ನು ತರಪೇತುಮಾಡುವ ಸಂಸ್ಥೆಗಳಿರಲು ಸಾಧ್ಯವಿಲ್ಲ. ವಿಜ್ಞಾನವು ಅನೇಕರ ಸಹಕಾರದಿಂದ ಕೂಡಿ ಆಗುವ ಪ್ರಯತ್ನ; ಅದು ಅನೇಕರ ಬುದ್ಧಿ ಸಮಷ್ಟಿಯಿಂದ ರಚಿತವಾದದು; ಆದರೆ ಕಲೆ ಏಕೈಕ ಪ್ರತಿಭಾವಂತನ ವಿಶಿಷ್ಟ ಸೃಷ್ಟಿ.

೨

ಕಲೆಗಳಲ್ಲೊಂದಾದ ಸಾಹಿತ್ಯಕ್ಕೆ ಧರ್ಮತತ್ತ್ವಶಾಸ್ತ್ರಗಳೊಡನೆ ಸೇರಿ ಆತ್ಮವನ್ನು ಎಚ್ಚರಿಸುವ ಪವಿತ್ರ ಕರ್ತವ್ಯವಿದೆ. ಬೋಧನೆಯಾಗಲಿ ಅಥವಾ ಮನೋರಂಜನೆಯಾಗಲಿ ಅದರ ಮುಖ್ಯೋದ್ದೇಶವಲ್ಲ; ಅದರ ಪರಮಗುರಿ ಆತ್ಮೋದ್ದೀಪನ, ಆತ್ಮವಿಕಾಸ. ಮಹಾಕಾವ್ಯ ಬುದ್ಧಿರಮ್ಯವಲ್ಲ; ಆಧ್ಯಾತ್ಮಿಕಾನುಭವ ವೇದ್ಯ; ಅದೊಂದು ಗಾರುಡಿ, ಮಿಂಚಿನ ಹೊಳಹು, ಮಂತ್ರ. ಸಾಹಿತ್ಯ ಜೀವನವನ್ನು ಕುರಿತ ವಿಮರ್ಶೆಯೂ ಅಲ್ಲ, ಅದರ ಪ್ರತಿಬಿಂಬವೂ ಅಲ್ಲ; ಜೀವನದ ಪರಿವರ್ತನೆ, ಪರಿಣಾಮ. ಹೃದಯವನ್ನು ರಮಿಸಿ, ಮನಸ್ಸಿನ ಬೇಗುದಿ ನೋವು ಯಾತನೆಗಳನ್ನು ಸಮಾಧಾನಕ್ಕೆ

ತಂದು ಹದಗೊಳಿಸಿ, ಮಾನಸಿಕ ಧಾರ್ಮಿಕ ತೇಜಸ್ಸನ್ನು ಪುಷ್ಟಿಗೊಳಿಸಿ ಉದಾತ್ತಗೊಳಿಸುತ್ತದೆ. ಜಗತ್ತನ್ನು ಆತ್ಮದ ಕಣ್ಣಿನಿಂದಲೆ ನೋಡುವಂತೆ ಮಾಡಿ ನಮ್ಮ ಬದುಕಿಗೆ ಮಾನವೀಯತೆ, ಸಹಾನುಭೂತಿ, ಎಚ್ಚರಿಕೆಗಳನ್ನು ತುಂಬುತ್ತದೆ. ಆದರ ಕರ್ತವ್ಯ ಪವಿತ್ರವಾದುದು. ಮಹಾಕಾವ್ಯ ನಮ್ಮನ್ನು ಶಾಂತಮೌನದ ಸ್ಥಿತಿಗೆ, ಆನಂದ ಸ್ಥಿತಿಗೆ ಕರೆದೊಯ್ಯಬೇಕೆಂದು ಭಾರತೀಯ ದಾರ್ಶನಿಕ ಮೀಮಾಂಸಕರು ಭಾವಿಸುತ್ತಾರೆ. ಈ ರಸಾನುಭವ ಸಚ್ಚಿದಾನಂದ ಸಂಬಂಧಿಯಾದುದು, ಅದು ಬ್ರಹ್ಮಾನಂದ ಸಹೋದರ. ಬ್ರಹ್ಮಾನುಭೂತಿ, ಸಚ್ಚಿದಾನಂದಾನುಭವದ ಅರಿವು ಇಂದ್ರಿಯಗಳ ಒಪ್ಪಿಗೆಗಾಗಲೀ ವಿಚಾರದ ಶಕ್ತಿಗಾಗಲೀ ಕಾಯುವುದಿಲ್ಲ. ಸತ್ಯದರ್ಶನ ಕ್ಷಣಾರ್ಧದಲ್ಲಿ ಮಿಂಚಿ ಹೋಗತಕ್ಕದ್ದು. ಸಹೃದಯ ತನ್ನ ತರ್ಕ ಪರಿಮಿತವಾದ ಅನುಭವವನ್ನು ಮುನ್ಚಾಚಿ ತನ್ನ ಅಹಂಮಿತಿಯನ್ನು ಕಳೆದುಕೊಳ್ಳುತ್ತಾನೆ— ನಿಷ್ಠುರಾಭ್ಯಾಸದಿಂದಲ್ಲ, ಕಲಾವಿದನ ಮಾಯಾಕುಂಚದ ಗಾರುಡಿಯ ಸೃಷ್ಟಿಗೆ ಸಮ್ಮೋಹಗೊಂಡು ಧ್ಯಾನಾನುಸಂಧಾನ ಮಾಡುವುದರಿಂದ, ಆನಂದಗೊಳ್ಳುವುದರಿಂದ. ಕಾವ್ಯ ಮತ್ತೊಮ್ಮೆ ಸಹೃದಯನಲ್ಲಿ ಮಂಗಳ ಮುಹೂರ್ತದಲ್ಲಿ ಪುನರ್ ಸೃಷ್ಟಿತವಾಗಬೇಕು.

ಅನುಭವವನ್ನು ಮಾತಿನಲ್ಲಿ ಚಿತ್ರಿಸುವುದು ಸಾಹಿತ್ಯವಾದರೆ ಅದರ ಬೆಲೆ ಯಾವ ವಿಧವಾದ ಅನುಭವದ ಮೇಲೆ ಅದು ರಚಿತವಾಗಿದೆ ಎಂಬುದರಲ್ಲಿ ಅಡಗಿದೆ. ಕೇವಲ ಅವಲೋಕನೆಯ ಮಟ್ಟದಲ್ಲಿ ಮಾತ್ರ ನಿಂತಿರುವ ವಾಸ್ತವವಾದಿಗಳು ನಮ್ಮ ಮಾಂಸ ಚರ್ಮಗಳನ್ನು ಮುಚ್ಚಿದ ಉಡಿಗೆಯನ್ನು ಸುಲಿದು ತೆಗೆದು ಅದರ ನಗ್ನ ಚಿತ್ರಗಳನ್ನಿತ್ತು ನಮ್ಮ ಇಂದ್ರಿಯಗಳನ್ನು ಪ್ರಚೋದಿಸಿ ಸುಪ್ತ ರಾಗಗಳನ್ನು ಉದ್ರೇಕಗೊಳಿಸುತ್ತಾರೆ. ವಿಚಾರವಾದಿಗಳು ಮಿತಿಯಿಲ್ಲದ ವಾದವಿವಾದಗಳಿಂದ ವಿಶ್ವದ ನಿಯತಿಯನ್ನು ವಿವರಿಸುತ್ತಾರೆ. ಬ್ಲೇಕ್‌ನ ಮಾತಿನಲ್ಲಿ ಹೇಳುವುದಾದರೆ 'ನಮ್ಮ ಅಜ್ಞಾನವನ್ನು ತಿದ್ದುತ್ತಾರೆ'. ಗ್ರೀಕ್ ದೇಶದ ತತ್ವಜ್ಞಾನಿಯಾದ ಎಂಪಿಡೊಕ್ಲಿಸ್, ರೋಮನ್ ದೇಶದ ಲೂಕ್ರಿಷಿಯಸ್, ಹಾಗೂ ನಮ್ಮ ಭಾರತದ ಅನೇಕ ಚಿಂತನಶೀಲರು ವೇದಾಂತಭಾವನೆಗಳನ್ನೂ ಪದ್ಯದಲ್ಲಿ ಹೆಣೆದಿದ್ದಾರೆ. ಗಣಿಗಳ ರಾಷ್ಟ್ರೀಕರಣ, ವಿವಾಹ ವಿಚ್ಛೇದನ ಸುಧಾರಣೆ, ಮಾರ್ಕ್ಸ್ ಸಮಾಜದ ರೂಪರೇಖೆಗಳು ಮುಂತಾದ ವಿಶೇಷ ವಿಚಾರಗಳನ್ನು ಕುರಿತು ಅವರು ಚಿಂತಿಸುತ್ತಾರೆ. ಕೆರಳಿಸುವಂತೆ ಅವರು ತಮ್ಮ ಅಭಿಪ್ರಾಯವನ್ನು ನಮಗೆ ತಿಳಿಸುತ್ತಾರೆಯೆ ವಿನಃ ದರ್ಶನ ನೀಡುವುದಿಲ್ಲ. ಅವರಿಗೆ ಆ ದಿವ್ಯಕ್ರಿಯಾಶಕ್ತಿಯಿಲ್ಲ. ಹಾಗಾಗಿ ಅವರು ನಮ್ಮಲ್ಲಿರುವ ವಿಚಾರವನ್ನು ಮುಟ್ಟುತ್ತಾರೆಯೆ ಹೊರತು ನಮ್ಮ ಅಂತರಂಗವನ್ನಲ್ಲ. ನಮ್ಮ ಸ್ವಭಾವದಲ್ಲಿ ಅವರ ಸ್ಥೂಲ ದೃಷ್ಟಿಗೆ ಗೋಚರವಾದಷ್ಟನ್ನು

ಮಾತ್ರ, ತಮ್ಮ ಅನುಭವದ ಪ್ರಕಾರ ಯಾವುದು ಸತ್ಯವೋ ಅಷ್ಟನ್ನು ಮಾತ್ರ ತಿಳಿಸುತ್ತಾರೆ. ಆದ್ದರಿಂದ ಇಡೀ ಜಗತ್ತಿನ ಸಮಗ್ರ ಚಿತ್ತಾಂತರಾಳ ಪ್ರಪಂಚದ ಮೇಲೆ ಅವರ ಸರ್ವಾಧಿಕಾರವಿರುವುದಿಲ್ಲ. ಸಮಸ್ತ ಜಗತ್ತಿನಲ್ಲಿ ಬಹು ಅಲ್ಪಭಾಗ ಮಾತ್ರ ಅವರಿಬ್ಬರ ಪಾಲು ಅಷ್ಟೆ; ಉಳಿದ ಶ್ರೀಮಂತ ಸೌಂದರ್ಯದಿಂದ ವಂಚಿತರಾಗಿರುತ್ತಾರೆ ಅವರು. ಪ್ರಾಣ, ಮನೋವಲಯಗಳ ಖಂಡದೃಷ್ಟಿಯಿಂದ ಮಾತ್ರ ಮೂಡಿಬರುವ ಈ ಅವರ ಕಾವ್ಯಗಳಿಗೆ ನಮ್ಮ ಅಂತರ್ ನಿಗೂಢಾತ್ಮನ ಪ್ರಭುತ್ವಮುದ್ರೆಯಿರುವುದಿಲ್ಲ. ಹೀಗಾಗಿ ನಮ್ಮ ವಿವಿಧಾನುಭವಗಳನ್ನು ಪ್ರತಿಬಿಂಬಿಸುವ ಅನೇಕ ಸ್ತರದ ಕಾವ್ಯಗಳು ಜನ್ಮ ತಾಳಿವೆ: ರೋಮಾಂಚನಕಾರಿ ಸಾಹಿತ್ಯ, ಭಾವನಾತ್ಮಕ ಸಾಹಿತ್ಯ, ಸತ್ತ್ವಯುಕ್ತವಾದ ಶಕ್ತಿಕಾವ್ಯ, ಮಹಾಕಾವ್ಯ ಮುಂತಾದುವು. ದೇಹ—ಮನಸ್ಸು—ಆತ್ಮಗಳ ಕ್ಷೇಮ ಸಂಸ್ಕಾರಕ್ಕಾಗಿ ಮಹಾಕಾವ್ಯ, ಶಕ್ತಿಸಾಹಿತ್ಯ ಅವತರಿಸುತ್ತದೆ. ಆತ್ಮದ ಸಂಪೂರ್ಣತೆ, ಸಾಮಾಜಿಕ ಹಾಗೂ ಪ್ರಾಕೃತಿಕ ಜಗತ್ತಿನೊಡನೆ ಅದರ ಸಮನ್ವಯ, ಇದೇ ಆ ಕಾವ್ಯದ ಗುರಿ.

೩

ರಾಗದ್ವೇಷಗಳ ಅಂಟಿನಿಂದ ಸ್ವತಂತ್ರಗೊಂಡು ಆತ್ಮಸ್ಥಿತಿಗೆ ಏರಲಾರದ ಯಾವ ಕಲಾವಿದನ ಕೃತಿಯೂ ನಮ್ಮ ಚೇತನವನ್ನು ಅರಳಿಸಲಾರದು, ನಮ್ಮ ಪ್ರಜ್ಞಾವಿಕಾಸವನ್ನುಂಟುಮಾಡಲಾರದು. ಯಾರಿಗೆ ಅನಿರ್ವಚನೀಯ ಆನಂದ ಸಂಭವಿಸಿದೆಯೋ ಅವರಿಗೆ ಮಾತ್ರ ಸರಿಯಾದ ದರ್ಶನ ಅವತರಿಸುತ್ತದೆ. ಅಹಂಕಾರ, ಕಾಮನೆಗಳ ಪ್ರಭುತ್ವದಿಂದ ಮುಕ್ತಗೊಂಡಲ್ಲದೆ ಮನುಷ್ಯಚೇತನ ಯಾವ ಪವಿತ್ರ ಕಾರ್ಯದಲ್ಲೂ ನಿರ್ಮಲ ಆಲೋಚನೆಗಳಲ್ಲಿಯೂ ತೊಡಗಲಾರದು. ತನ್ನಿಚ್ಛೆಯನ್ನು ಸತ್ಯಕ್ಕೆ ಸಮರ್ಪಿಸಿ ರಾಗಗಳನ್ನು ಗೆದ್ದು, ಸಮಸ್ತ ಮೃಣ್ಮಯ ಆಲೋಚನೆಗಳನ್ನು ಒಳಸೆಳೆದು ವಶಗೊಳಿಸಿಕೊಂಡು ಸತ್ಯವೊಂದರ ಮೇಲೆ ತನ್ನ ಸಮಗ್ರ ಶಕ್ತಿಯನ್ನೂ ಕೇಂದ್ರೀಕರಿಸಬೇಕು. ಅನಂತರವೇ ಅವನ ಬುದ್ಧಿ ಮಾಗುತ್ತದೆ, ವಿವೇಕ ಪಕ್ವವಾಗುತ್ತದೆ. ಋಷಿಯಾಗದವನು ಮಹಾಕಾವ್ಯವನ್ನು ಸೃಷ್ಟಿಸಲಾರ. ಸಂತ ಜೀವನಕ್ಕೆ ಮಾತ್ರವಲ್ಲ, ಕಲಾಸೃಷ್ಟಿಗೂ ಸಹ ಚಿತ್ತೈಕಾಗ್ರತೆ ಅತ್ಯಗತ್ಯ. ಅತೀತ ಪ್ರಜ್ಞೆಯಿಂದ ಮಹಾಕಾವ್ಯ ಸ್ಫೂರ್ತಿ ಅವತರಿಸಿ ಬರುತ್ತದೆ. ನಮ್ಮ ಚೇತನವನ್ನು ಮಹತ್ತರ ಶಕ್ತಿಯೊಂದು ಆಕ್ರಮಿಸಿ ವಶಗೊಳಿಸಿಕೊಳ್ಳುವುದೆ ಸ್ಫೂರ್ತಿಯ ಪವಾಡ. ಅನುಭವ ತೀವ್ರತೆ, ವಸ್ತುವಿನ ತದೇಕ ಧ್ಯಾನ—ಇವೇ ಭಾವ ಆಲೋಚನೆಗಳಿಗೆ ಗರಿ ನೀಡಿ, ವರ್ಣ, ಲಯ, ಚಿತ್ರಗಳಲ್ಲಿ ಅವು ಮೂರ್ತೀಭವಿಸುವಂತೆ ಮಾಡುತ್ತವೆ. ಕವಿಗೆ

ದರ್ಶನತೀವ್ರತೆಯಲ್ಲಿ, ಆತ್ಮಪಾವಿತ್ರ್ಯಸೌಕುಮಾರ್ಯಗಳಲ್ಲಿ ಕೊರತೆಯಿದ್ದರೆ ಅವನು 'ಕವಿ'ಯ ಪಟ್ಟಕ್ಕೆ ಅರ್ಹನಲ್ಲ. ಕವಿಗೆ ಸೃಷ್ಟಿಕಾರ್ಯವೆಂದರೆ ಅತಿ ಯಾತನೆಯ ಕರ್ಮವೆಂದೆ ಅನಿಸುತ್ತದೆ. ಅವನು ನೋವೆರೆದು ಬೆಳೆದ ಸಲವಿನ ಬೆಳೆಯನ್ನು ಅನಂತರ ಬಂದ ನಾವು ಅನುಭವಿಸುತ್ತೇವೆ. ಕವಿಯ ಈ ತಪಸ್ಸು ಎಷ್ಟೇ ದುರಂತವಾಗಿದ್ದರೂ ಅದು ನಿಷ್ಕ್ರಿಯಾತ್ಮಕ ಯಾತನೆಯಲ್ಲ. ಬಡತನದ ಅಪಾರ ಹಿಂಸೆ, ರೋಗ ಅಪಮಾನಗಳ ರೂಕ್ಷಯಾತನೆ, ಅಗೋಚರ ಅದೃಷ್ಟದ ಹುಚ್ಚು ಕೈವಾಡ—ಯಾವುದೆಷ್ಟೆ ದುರಂತವಾಗಿದ್ದರೂ ಪರರ ಸಮಸ್ತ ಅನುಭವವನ್ನು ತನ್ನದಾಗಿ ಅನುಭವಿಸುವ ಕವಿಗೆ ಅದು ಪ್ರೇಮ ರೂಪವಾದುದಾಗಿರುತ್ತದೆ. ದುಃಖಿತ ಮಾನವ ಜನಾಂಗವನ್ನು ಉದ್ಧರಿಸಲು ಹಾತೊರೆಯುವ ಜ್ವಲಂತ ಅಭೀಪ್ಸೆಯಾಗಿರುತ್ತದೆ, ಪ್ರೇಮಭೃತವಾದ ಆ ಕ್ರಿಯಾತ್ಮಕ ಯಾತನೆ.

ಮಹಾಕಾವ್ಯ ಸೃಷ್ಟಿಕರ್ತರು ಮಹೋದ್ದೇಶಕ್ಕೆ ಸಮರ್ಪಿತವಾದ ಚೇತನರು, ಕರ್ಮಯೋಗಿಗಳು, ಸತ್ಯಾರಾಧಕರು; ತಮ್ಮೊಳಗೇ ಇರುವ ತಮ್ಮ ಪರಿಪೂರ್ಣತೆಯನ್ನು ಕಾಣುವಂಥ ಶಕ್ತಿಯುಳ್ಳವರು. ತಮ್ಮ ಸಮಸ್ತವನ್ನೂ ಅದಕ್ಕೂ ಹಿರಿಯದಾದ ಉದ್ದೇಶಕ್ಕೆ ಅರ್ಪಿಸುವುದರಿಂದ ಅವರು ಅಖಂಡ ಸಾಮರಸ್ಯವನ್ನು ಪಡೆದುಕೊಳ್ಳುತ್ತಾರೆ.

ತಪಸ್ಸಿನಿಂದ ಮನುಷ್ಯ ದೇವತ್ವಕ್ಕೆ ಏರುತ್ತಾನೆ. ತಪಸ್ಯೆ ಅಥವಾ ಸಂಯಮ ಸೃಷ್ಟಿಪೂರ್ವದಲ್ಲಿರುತ್ತದೆ. ದಯಾಮಯರಾದ ಅಸಂಖ್ಯಾತ ಮಹರ್ಷಿಗಳು ತಮ್ಮ ತಪಸ್ಸಿನ ದಿವ್ಯವೇದನೆಯಿಂದ ಈ ಜಗತ್ತನ್ನು ಕಟ್ಟಿದ್ದಾರೆ; ಸಹಾನುಭೂತಿ, ತ್ಯಾಗಗಳ ನೆತ್ತರಿನಿಂದ ಅದನ್ನು ಬಂಧಿಸಿದ್ದಾರೆ. ಈ ಪವಿತ್ರ ತಪಸ್ವಿಗಳ ಅಮೃತ ಹಸ್ತವೇ ನಮ್ಮನ್ನು ಜಗತ್ತಿನ ಕಷ್ಟ ಕಾರ್ಪಣ್ಯಗಳಿಂದ, ನಿಗೂಢ ದುಃಖಗಳಿಂದ ಕಾಪಾಡುತ್ತದೆ. ಆದಿ ಮಹಾಕವಿ ವಾಲ್ಮೀಕಿಯೆ ಸ್ವಯಂ ಋಷಿ, ದ್ರಷ್ಟಾರ. ಅವನಿಗೆ ಬೆಳಕು ತೋರಿದ ನಾರದನಾದರೊ ಋಷಿಪುಂಗವ.

೪

... ಸಾಹಿತ್ಯ ಪಲಾಯನವಲ್ಲ, ಜೀವನದ ಕಡೆ ಬೆನ್ನು ತಿರುಗಿಸಿ ಹಿಮ್ಮೊಗ ಹಾಕಿಕೊಂಡು ಓಡಿ ಹೋಗುವುದಲ್ಲ. ದರ್ಶನ, ಲಯ, ಪ್ರತಿಮೆಗಳ ಮೂಲಕ ಅತೀತ ಪ್ರಪಂಚದ ಸಂದೇಶವನ್ನು ಅನುಭವವೇದ್ಯವಾದ ವಾಸ್ತವ ಜಗತ್ತಿಗೆ ಒಯ್ಯುವುದೇ ಅದರ ಕೆಲಸ. ಡನ್‌ಕವಿ ಹೇಳುವಂತೆ ಕವಿಗಳು 'ಅನಂತದ ಗುತ್ತಿಗೆ' ತೆಗೆದುಕೊಂಡು ನಮಗೆ ದಾನಮಾಡುತ್ತಾರೆ. ವಾಲ್ಮೀಕಿಗೆ ಕಾಲಾದೇಶಾತೀತವಾದ

' ಸತ್ಯ 'ವೊಂದರಲ್ಲಿ ಮಾತ್ರ ಆಸ್ತೆ ಇರದೆ ಕಾಲದೇಶಮಿತವಾದ ಅದರ ಅಭಿವ್ಯಕ್ತಿಯ ವಿಪುಲವೈಭವದಲ್ಲೂ ಆಸಕ್ತಿ ಶ್ರದ್ಧೆ ಇತ್ತು. ಆತನಿಗೆ ಸತ್ಯ ಶಿವ ಸುಂದರಗಳು ತತ್ತ್ವಶಾಸ್ತ್ರದ ಅರೂಪಭಾವನೆಯಾಗಿರದೆ ವಿಶಿಷ್ಟವಾದ ಜೀವಂತ ಮೂರ್ತಿಗಳಾಗಿದ್ದುವು. ವಾಲ್ಮೀಕಿ ಆ ಆದರ್ಶದ ಅರೂಪ ಪ್ರಪಂಚವನ್ನು ರಕ್ತಮಾಂಸದ ಜೀವಂತ ಪ್ರಪಂಚಕ್ಕೆ ಪರಿವರ್ತಿಸಲು ಆಶಿಸಿದ. ಮನುಷ್ಯಪರಿಪೂರ್ಣತೆ, ಆದರ್ಶಮಾನವನ ಆದರ್ಶಕಲ್ಪನೆ ರಾಮನಲ್ಲಿ ಸಾಕ್ಷಾತ್ಕಾರಗೊಂಡಿದೆ. ರಾಮ ಆದರ್ಶಮಾನವ. ಶೌರ್ಯ, ಧರ್ಮಾಧರ್ಮಗಳ ಸೂಕ್ಷ್ಮಪರಿಜ್ಞಾನ, ಕೃತಜ್ಞತೆ, ನುಡಿಯಲ್ಲಿ ಸ್ಥಿರಪ್ರತಿಜ್ಞೆ, ಸಾತ್ತ್ವಿಕತೆ, ಸಕಲ ಲೋಕ ಕಲ್ಯಾಣಕಾರಿಯಾದ ಮನೋಭಾವ, ವಿವೇಕ, ಸಮ್ಮೋಹಕ ರೂಪ, ನಿರ್ಮತ್ಸರ ಬುದ್ಧಿ, ರಣರಂಗದಲ್ಲಿನ ಅಪ್ರತಿಮ ಕ್ಷಾತ್ರ ತೇಜಸ್ಸು, ಕ್ಷಮಾ ಗುಣ—ಇಂತಹ ಸಮಸ್ತ ಪವಿತ್ರಗುಣಗಳೂ ಯಾರಲ್ಲಿವೆ ಎಂದು ವಾಲ್ಮೀಕಿ ನಾರದನನ್ನು ಕೇಳುತ್ತಾನೆ. ಮನುಷ್ಯ ತಾನೇನಾಗಬೇಕೆಂಬ ಆದರ್ಶವನ್ನೂ, ಮಾನವತ್ವದ ಔದಾರ್ಯದ ಉನ್ನತಿಯ ಪರಮಸ್ಥಿತಿಯನ್ನೂ ವಾಲ್ಮೀಕಿ ತನ್ನ ರಾಮಾಯಣದಲ್ಲಿ ಅನೇಕ ಚಿರಸ್ಮರಣೀಯ ಪಾತ್ರಪ್ರತಿಮೆಗಳ ಮೂಲಕ ಧ್ವನಿಸಿದ್ದಾನೆ.

ಅತೀತ-ವಾಸ್ತವ, ವಿಶ್ವ-ವ್ಯಕ್ತಿ, ಇವುಗಳ ಸಾಮರಸ್ಯ ಸಮನ್ವಯದಿಂದಲೆ ಕವಿ ಮಾನವ ವ್ಯಕ್ತಿತೆಯ ಅಖಂಡೈಕ್ಯವನ್ನು ಸಾಧಿಸುತ್ತಾನೆ. ಅವನು ಈ ನಮ್ಮ ಸುತ್ತಮುತ್ತಣ ಜಗತ್ತಿನಿಂದಲೇ ಸಾಧಾರಣ ಘಟನೆಗಳನ್ನು ಆರಿಸಿಕೊಂಡು, ಅವುಗಳನ್ನು ನಿರೂಪಿಸುವ ವಿಧಾನದಿಂದಲೆ ಈ ದೈನಂದಿನ ಜಗತ್ತಿಗಿಂತಲೂ ಉತ್ತಮವಾದ ಅತಿಶಯವಾದ ಉದಾತ್ತವಾದ ಲೋಕವೊಂದರ ಹೊಳಹನ್ನು ಕಾಣಿಸಬಲ್ಲ. ಕವಿ ಭಯಾನಕವಾದ ಕಗ್ಗೊಲೆಯನ್ನು ರಕ್ತಪ್ಲಾವಿತ ಯುದ್ಧವನ್ನು ವರ್ಣಿಸುವಾಗಲೂ ಸಹ ಮಾನವ ಚೇತನದ ಉದ್ಧಾರದ ಹೋರಾಟವನ್ನೇ ಧ್ವನಿಸುತ್ತಾನೆ. ವಿಜ್ಞಾನ ಮತ್ತು ಇತರ ಶಾಸ್ತ್ರಗಳಿಂದುಂಟಾಗಿರುವ ಬದಲಾವಣೆಗಳನ್ನರಿತು ಅವುಗಳನ್ನು ಒಪ್ಪಿಕೊಂಡು ಅವನ್ನೇ ಅಪೂರ್ವ ಸೌಂದರ್ಯದ ಅಭಿವ್ಯಕ್ತಿಯ ಸಾಧನವನ್ನಾಗಿ, ನೂತನ ಆಕರವನ್ನಾಗಿ, ಸ್ಫೂರ್ತಿಯನ್ನಾಗಿ ಉಪಯೋಗಿಸಿಕೊಳ್ಳುತ್ತಾನೆ. ಮನೋವಿಕಾಸಕ್ಕೆ ಸಹಕಾರಿಯಾಗುವ ಯಾವುದೇ ವಿಧವಾದ ಯಾಂತ್ರಿಕ ಬೆಳವಣಿಗೆಗಳನ್ನು ಕಲೆಗಾರ ಸ್ವೀಕರಿಸುತ್ತಾನೆ. ಪ್ರತಿಯೊಂದು ವಸ್ತುವೂ ಅವನ ಕಣ್ಣಿಗೆ ವಿಶಿಷ್ಟವಾದುದೆ, ಅಪೂರ್ವವಾದುದೆ. ಪ್ರಪಂಚದ ಯಾವ ವಸ್ತುವಿನಲ್ಲೂ ಆತ ತಪ್ಪಿಸಿಕೊಳ್ಳಲಾರ. ತೋರಿಕೆಯ ವಸ್ತುವನ್ನು ತಟಕ್ಕನೆ ಭೇದಿಸುತ್ತಾನೆ; ಆ ವಸ್ತುವಿನ ಮುಖ್ಯ ಜೀವ ಜೀವಾಳವನ್ನು ತಟ್ಟನೆ ಸೆರೆಹಿಡಿಯುತ್ತಾನೆ . . . ಜೀವನಕ್ಕೆ ಅಡಿಯಿಡುತ್ತ ಅವನು ಅದರ ಉದ್ದೇಶವನ್ನು ಕುರಿತು ಅಷ್ಟಾಗಿ ಯೋಚಿಸುವುದಿಲ್ಲ.

ವಸ್ತುವಿಗೂ ತನಗೂ ನಡುವೆ ಇರುವ ಕಂದರವನ್ನು ಅನುಕಂಪನ ಶೀಲವಾದ ತನ್ನ ಪ್ರತಿಭೆಯಿಂದ ಒಡೆದು ಮುರಿಯುತ್ತಾನೆ, ಅದನ್ನು ಬಂಧಿಸುತ್ತಾನೆ.

ವಸ್ತುವಿನ ಜೀವಜೀವಾಳವನ್ನು ಗ್ರಹಿಸಲು ಉಗ್ರಏಕಾಗ್ರತೆ, ದರ್ಶನ ಶುದ್ಧಿ ಬಹುಮುಖ್ಯ ; ಚಾಂಚಲ್ಯವಲ್ಲಿ ಸಲ್ಲದು. ಕಾತರ ಹೃದಯರಾಗಿ ತೀವ್ರವಾಗಿ ಅನುಭವಿಸಬೇಕು. ಮನಸ್ಸಿನ ಕಾತರ, ಹೃದಯದ ರಾಗೋದ್ರೇಕ ಎಲ್ಲವನ್ನೂ ಉದ್ಧರಿಸಿ ಸರಳಗೊಳಿಸಿ ಅನಂತರ ವಸ್ತು-ತಾನು ಅದ್ವೈತ ಭಾವದಿಂದ ಸಾರೂಪ್ಯವನ್ನು ಪಡೆದು ಒಂದಾಗಬೇಕು. ಪ್ರತಿಭೆ ದೀಪ್ತಗೊಂಡಾಗ ಒಳಗೆ ಕೆಲವು ದೃಶ್ಯ ಚಿತ್ರಗಳು ಉಕ್ತಿಧಾರಣೆಗಾಗಿ ಹಂಬಲಿಸಿ ಹೊರಬರಲು ಜ್ವಲಿಸುತ್ತಿರುತ್ತವೆ. ಆಗಲೇ ಅಭಿವ್ಯಕ್ತಿ ಅನಿವಾರ್ಯವಾಗುತ್ತದೆ. ಈ ದರ್ಶನಕ್ಕೆ ಮಾತಿನ ಹೊದಿಕೆಯನ್ನು ನಾವು ಹೊದಿಸುವುದಿಲ್ಲ. ಆದರೆ ಆ ದೀಪ್ತದರ್ಶನವೆ ಉಜ್ವಲವಾದಾಗ ಜೀವಂತ ಕಳೆಯುಳ್ಳ ಮಾತಿನಲ್ಲಿ ಪ್ರಜ್ವಲಿಸುತ್ತದೆ. ಈ ನುಡಿ, ನುಡಿಯಲ್ಲಾಗುವ ಈ ಅಭಿವ್ಯಕ್ತಿ ಸೂಕ್ಷ್ಮದರ್ಶನದ ಹೊದಿಕೆ ಎನ್ನುವುದಕ್ಕಿಂತಲೂ, ಅದರ ಅವತಾರ, ಪ್ರತಿಮೆ ಎಂದರೆ ಹೆಚ್ಚು ಒಪ್ಪುತ್ತದೆ. ಅನುಭವ ತೀವ್ರತೆ, ದರ್ಶನ ಶಕ್ತಿ ಮಾತಿನ ಮೂಲಕ, ಮಾತಿನ ರೂಪದಲ್ಲಿ ಹೊಳೆಯುತ್ತದೆ. ಉಳಿದಂತೆ ಅವೇ ಮಾತುಗಳು ಸಪ್ಪೆ ಸಪ್ಪೆಯಾಗಿ ಕಳಾಹೀನವಾಗಿ ತೋರುತ್ತವೆ. ಮಹಾ ಸಾಹಿತ್ಯವೆಲ್ಲವೂ ಅಂತರಂಗದರ್ಶನದ ದೀಪ್ತಆಲೋಚನೆಯ ರಸಾಭಿವ್ಯಕ್ತಿ. ಅಂತಹ ಸಾಹಿತ್ಯ ಸ್ವಇಚ್ಛೆ ಇಲ್ಲದೆ, ಸಂಕಲ್ಪ ದೂರವಾಗಿ, ಎಚ್ಚೆತ್ತ ಪ್ರಜ್ಞೆಗೆ ತಿಳಿಯದಂತೆ ಪ್ರವಹಿಸುತ್ತದೆ. ಎಷ್ಟರಮಟ್ಟಿಗೆ ತನ್ನ ಅರಿವಿಲ್ಲದೇ ಈ ಸೃಷ್ಟಿಯಾಗುತ್ತದೆಯೊ ಅಷ್ಟರ ಮಟ್ಟಿಗೆ ಅದರ ಶಕ್ತಿ ಶ್ರೀಮಂತವಾಗುತ್ತದೆ. ಮಹಾಕೃತಿಕಾರರೆಲ್ಲರೂ ತೀವ್ರ ಸಂವೇದನಾಶೀಲರೂ, ಅಖಂಡ ದೃಷ್ಟಿಯುಳ್ಳವರೂ, ಸತ್ಯದರ್ಶನಯುಕ್ತರೂ ಆಗಿದ್ದಾರೆ.

೫

ಸೃಷ್ಟ್ಯಾತ್ಮಕ ಸಾಹಿತ್ಯ ನಮಗೆ ರೋಮಾಂಚನವನ್ನುಂಟುಮಾಡುವುದಕ್ಕಾಗಲೀ ಅಥವಾ ನೀತಿಪಾಠ ಹೇಳುವುದಕ್ಕಾಗಲೀ ಆಶಿಸುವುದಿಲ್ಲ. ಇತರರಿಗೆ ಸಹಾಯಾರ್ಥವಾಗಿಯಾಗಲೀ ಅಥವಾ ಅವರ ಮೇಲೆ ಪ್ರಭಾವ ಬೀರಲೆಂದಾಗಲಿ ಕವಿ ಬರೆಯುವುದಿಲ್ಲ. ಆ ಕೃತಿಯ ರಚನೆಗೆ ಸಾವಯುವ ಸಂಬಂಧವಿರುತ್ತದೆ. ತನ್ನ ಅಭಿವ್ಯಕ್ತಿಗಾಗಿ ತಡಬಡಿಸುತ್ತಿರುವ ಅಂತರಂಗದ ಸುಮಧುರ ಸಂವೇದನೆಯ ಒತ್ತಡದಿಂದ ಬಿಡುಗಡೆಹೊಂದಲು ಬರೆಯುತ್ತಾನೆ. ಇಂಥ ಕೃತಿಗಳು ಬರಿಯ ನೀತಿಯ ಉದ್ದೇಶದಿಂದ ಬರೆದುವಲ್ಲ; ಅವು ಕವಿಸಮಯವೂ ಅಲ್ಲ; ಆದರೆ ಮಾತ್ರ ನೈತಿಕ ಪರಿಣಾಮ

ವನ್ನು ಬೀರುತ್ತವೆ. ನೀತಿ ಶಾಸ್ತ್ರಗಳಾಗಲಿ ಅಥವಾ ನೀತಿಬೋಧಕ ಕವಿತೆಗಳಾಗಲೀ ನಮ್ಮನ್ನು ಇದಕ್ಕಿಂತ ಉತ್ತಮವಾಗಿ ಪರಿವರ್ತಿಸಲಾರವು. ಆದರೆ ಯಾವೊಂದು ನೀತಿಯ ಉದ್ದೇಶವಿಲ್ಲದೆ ರಚಿತವಾದ ಕಲಾಕೃತಿಗಳು ನಾವು ಜೀವನವನ್ನು ಆಳವಾಗಿ ಅರ್ಥಮಾಡಿಕೊಳ್ಳುವಂತೆ ಸ್ಫೂರ್ತಿಯಿತ್ತು ಶಾಂತಿ ನೀಡುತ್ತವೆ. ಹ್ಯಾಮ್ಲೆಟ್ ಅಥವಾ ಒಥೆಲೊ ನಾಟಕ ಖಂಡಿತ ನೀತಿಯ ಉದ್ದೇಶದಿಂದ ರಚಿತವಾದುವಲ್ಲ. ಆದರೆ ಅವು ಬದುಕಿನ ಅಂತರಾರ್ಥವನ್ನು ಅರಿಯುವ ರೀತಿಯನ್ನು ಧ್ವನಿಸಬಹುದು.

ಷೇಕ್ಸ್‌ಪಿಯರ್ ತನ್ನ ಪ್ರಸಿದ್ಧವಾದ ಸಾಂಸಾರಿಕ ರುದ್ರನಾಟಕಗಳಲ್ಲಿ ಜೀವನಕ್ಕೆ ಕನ್ನಡಿ ಹಿಡಿಯುವ ಮೂಲಕ ನಮ್ಮ ಸಮಸ್ತ ಕರುಣೆಯನ್ನೂ ಯಜ್ಞ ಪಶುಗಳಾದ ಆ ಹುತಾತ್ಮರಿಗೆ ಮುಡಿಪಾಗಿಟ್ಟಿದ್ದಾನೆ. ಹ್ಯಾಮ್ಲೆಟ್‌ನ ದಾರುಣ ಯಾತನೆ ತಲ್ಲಣ ಅನಿರೀಕ್ಷಿತವಲ್ಲ. ಕ್ಲಾಡಿಯಸ್ ಮತ್ತು ಗೆರ್ಟ್ರೂಡ್ ವ್ಯಭಿಚಾರೀ ಜೀವನವನ್ನು ಬಾಳುತ್ತಾರೆ. ಹ್ಯಾಮ್ಲೆಟ್‌ನ ತಂದೆಯನ್ನು ಕೊಂದು ಅವನ ಸಿಂಹಾಸನವನ್ನೇರಿ ಅವನಿಗೆ ಬರಬೇಕಾದ ಅಧಿಕಾರದ ಪ್ರಗತಿಯನ್ನು ಅಪಹರಿಸುತ್ತಾರೆ. ತನ್ನ ತಾಯಿಯ ಕುಟಿಲತನ ಅವನಿಗೆ ಮಾಯಲಾರದ ಘಾಯ ಮಾಡುತ್ತದೆ. ಗಂಡು ಹೆಣ್ಣಿಗಿರುವ ಎಲ್ಲ ವಿಧದ ಸಂಬಂಧವೂ ತಾಯಿಯ ವಿಶ್ವಾಸ ಘಾತುಕತನದಿಂದ ಅಲ್ಲಿಯೇ ಕಡಿದು ಬೀಳುತ್ತದೆ. ಅವನ ಕಣ್ಣಿಗೆ ಈಗ ಒಫೀಲಿಯಾ ಸುಳಿಯುತ್ತಾಳೆ. ನಿರಪರಾಧಿನಿಯಾಗಿದ್ದರೂ ಅವಳನ್ನು ವೇಶ್ಯಾಜೀವನಕ್ಕೆ ವಿಧಿಲಿಖಿತಳಾದಂತೆ ತಿರಸ್ಕರಿಸುತ್ತಾನೆ; ಸಮಸ್ತ ಸ್ತ್ರೀ ಸಮೂಹವೆ ಅವನಿಗೆ ಅಸಹ್ಯವಾಗಿ ಕ್ರೂರವಾಗಿ ತೋರುತ್ತದೆ. ಮುಗ್ಧ ಒಫೀಲಿಯಾಳನ್ನು ಆಶ್ರಮಕ್ಕೆ ಸೇರುವಂತೆ ಪೀಡಿಸಿ, ಹುಚ್ಚು ಹಿಡಿಸಿ ಕೊನೆಗೆ ಅವಳ ಸಾವಿಗೂ ಕಾರಣನಾಗುತ್ತಾನೆ. ಅವನ ತಾಯಿಯ ವರ್ತನೆಯಿಂದಾದ ಉದ್ದೀಪ್ತ ಕೋಪೋದ್ರೇಕ ಯಾವಾಗಲೂ ಅವನನ್ನು ಭರ್ಜಿಯಂತೆ ಇರಿಯುತ್ತಿರುತ್ತದೆ. ಆ ನೊಂದ ಹತಾಶ ಚೇತನನ ಹೃದಯದಿಂದ ಈ ಮಾತು ಬರುತ್ತವೆ: "We will have no more marriages" . . .

Hamlet: Is this a prologue or the posy of a ring?
Ophelia: 'Tis brief, my lord.
Hamlet: As woman's love.

ಅವನ ಸ್ವಾಭಾವಿಕ ಅಂತಃಸ್ಫೂರ್ತಿ ನಂದಿಹೋಗಿರುತ್ತದೆ. ಅವನ ಬುದ್ಧಿಶಕ್ತಿಗೆ ಅಂತ್ಯಕಾಲ ಒದಗಿದೆ. ಈಗ ಅವನು ತಾರ್ಕಿಕವಾಗಿ ಯೋಚಿಸಲಾರ; ಆಲೋಚನೆಗಳು ಅವನ ಬುದ್ಧಿಯಿಂದ ಉದುರಿ ಹೋಗುತ್ತವೆ. ಪ್ರತೀಕಾರ ಪ್ರೇಮಗಳ 'ಶಪಿತ ಮಾತ್ಸರ್ಯ'ದಿಂದ ಪಲಾಯನ ಮಾಡಲು ಇಚ್ಛಿಸುತ್ತಾನೆ. ಬದುಕು—

ಸಾವುಗಳ ನಡುವೆ ಅವನ ಮನಸ್ಸು ತೂಗುಯ್ಯಾಲೆಯಾಡುತ್ತದೆ. "To be or not to be" ಎಂದು ಅನಿಶ್ಚಯತೆಯ ಗೊಂದಲದಲ್ಲಿ ಭ್ರಮಿಸುತ್ತಾನೆ. ಮ್ಯಾಕ್‌ಬೆತ್ ನಾದರೊ ನೆತ್ತರಿನಲ್ಲಿ ಅದ್ದಿ ಮುಳುಗಿ ಸ್ನಾನಗೊಂಡು ಕೊನೆಗೆ ಜೀವನವೊಂದು ದಂತಕತೆ, ಗೊಂದಲ, ಅರ್ಥವಿಲ್ಲದ ಗಜಿಬಿಜಿ ಎಂದು ಟೀಕೆಮಾಡಿ ಕೊನೆಯಾಗುತ್ತಾನೆ. ಒಥೆಲೊ ತನ್ನ ಹೆಂಡತಿಯನ್ನೂ ಕೊಂದು, ತನ್ನನ್ನೂ ಕೊಂದುಕೊಂಡು ಅಪಶ್ರುತ ಜೀವನದ ಪೂರ್ಣ ಮುಕ್ತಾಯ ಹಾಡುತ್ತಾನೆ; ಅಸೂಯಾಪರ ನೀಚನೊಬ್ಬ ಅವನ ವಿಶ್ವಾಸವನ್ನು ಗಳಿಸಿ ಅವನ ದೌರ್ಬಲ್ಯಗಳನ್ನು ದುರುಪಯೋಗಪಡಿಸಿಕೊಂಡು ಅವನನ್ನು ಕ್ಷಯಿಸುತ್ತಾನೆ.

ಈಗ ಹ್ಯಾಮ್ಲೆಟ್, ಮ್ಯಾಕ್‌ಬೆತ್, ಒಥೆಲೊ ಇವರಿದ್ದ ಪರಿಸ್ಥಿತಿಯನ್ನು ಗಮನಿಸಿ: ಜಟಿಲ ಸನ್ನಿವೇಶಗಳ ನಡುವೆ ಸಿಲುಕಿಕೊಂಡು ಗೋಜುಗೋಜಾಗಿ ಗಂಟುಗಂಟಾಗಿ, ಯಾವುದೊ ರಾಗೋದ್ರೇಕಗಳ ಮುಷ್ಟಿಯಲ್ಲಿ ಸಿಲುಕಿಕೊಂಡು ನಿಶ್ಚೇಷ್ಟಿತರಾಗಿ ನಿಷ್ಕ್ರಿಯಾವಂತರಾಗಿ ಬದುಕಿನ ತೋಲವನ್ನೆ ಕಳೆದುಕೊಳ್ಳುತ್ತಾರೆ. ತಮ್ಮ ಆತ್ಮವನ್ನು ಕವಿದಿರುವ ಕತ್ತಲೆಯ ಮೊತ್ತವನ್ನು ಚೆದುರಿಸಲು ಇಚ್ಛಿಸುತ್ತಾರೆ; ಆದರೆ ಅವರಿಗೆ ಮಾರ್ಗ ತೋರುವ ಜನ್ಮ ನಕ್ಷತ್ರವೇ ಕತ್ತಲನ್ನು ಚೆಲ್ಲಿ ಎದುರು ಬೀಳುತ್ತದೆ. ಯಾವುದೋ ಅದೃಶ್ಯ ಅದಮ್ಯ ಶಕ್ತಿ ಹೀಗೆ ಅವರನ್ನು ಅಸಹ್ಯ ನಾಶಕ್ಕೆ ದೂಡಿದಂತೆ ಕಾಣುತ್ತದೆ. ನಾವು ಅವುಗಳ ರುದ್ರ ಭಯಂಕರತೆಯನ್ನು ಕಂಡೂ ಅದರ ಹಿಂದಿರುವ ಭವ್ಯತೆಯನ್ನು ಒಪ್ಪಿ ವಿಸ್ಮಯಪಡುತ್ತೇವೆ. ಮ್ಯಾಕ್‌ಬೆತ್, ಹ್ಯಾಮ್ಲೆಟ್ ಮತ್ತು ಒಥೆಲೊ ಅವರು ನಮ್ಮ ಮೇಲೆ ಪರಿಣಾಮ ಬೀರುವುದು ನಮಗೂ ಅವರಿಗೂ ಇರುವ ವ್ಯತ್ಯಾಸದಿಂದಲ್ಲ; ಪರಸ್ಪರ ಸಾಮ್ಯತೆಯ ಮೂಲಕ. ಷೇಕ್ಸ್‌ಪಿಯರ್ ಈ ಮಹಾನಾಟಕಗಳ ಮೂಲಕ ಮನುಷ್ಯ ಆತ್ಮದ ಏಕ ಪ್ರಕಾರತೆಯನ್ನು ಐಕ್ಯವನ್ನು ನಮಗೆ ತೋರಿಸುತ್ತಾನೆ. ನಮ್ಮ ಭಿನ್ನಾಭಿಪ್ರಾಯವನ್ನು, ಭಿನ್ನ ಭಿನ್ನ ಸಂಪ್ರದಾಯಗಳ ಹಿಂದೆ ಅಡಗಿರುವ ಭಾವಗಳ ಐಕ್ಯವನ್ನು, ಮೇಳವನ್ನು ಮನೋಜ್ಞವಾಗಿ ಚಿತ್ರಿಸಿ ನಮ್ಮನ್ನು ವಿಸ್ಮಯಗೊಳಿಸುತ್ತಾನೆ. ಹ್ಯಾಮ್ಲೆಟ್‌ನಂತೆ ಬಿಳಿಯ ಮುಖವಾಗಲಿ ಅಥವಾ ಒಥೆಲೋನಂತೆ ಕಪ್ಪುಮುಖವಾಗಲಿ ನಮಗಿರ ಬಹುದು, ಇಲ್ಲದಿರಬಹುದು; ಆದರೆ ಭಾವ ಜೀವನದಲ್ಲಿ ನಾವೆಲ್ಲರೂ ಒಂದು, ಸಮಾನ ಜೀವಿಗಳು. ಮಹಾಕಾವ್ಯಗಳು ಮನುಷ್ಯ ಮನುಷ್ಯನನ್ನು ಹತ್ತಿರ ತರುವ, ಮೃದು ಮಧುರವಾಗಿ ಸಂಬಂಧಿಸುವ ಮಾಂಗಲ್ಯಸೂತ್ರ. ಪ್ರತಿಭಾಜನ್ಯವಾದ ಪರಿಶುದ್ಧ ವಾತಾವರಣದಲ್ಲಿ ಮನುಷ್ಯನಿರ್ಮಿತವಾದ ಸಮಸ್ತ ನಿರ್ಬಂಧಕ ಬಂಧನಗಳೂ ಕತ್ತರಿಸಿ ಅರ್ಥಹೀನವಾಗಿ ಲಯವಾಗಿ ಹೋಗುತ್ತವೆ; ಹೃದಯದ ಇರಿತಗಳೆಲ್ಲ

ಮೂದುಹೋಗುತ್ತವೆ. ಈ ಜಗತ್ತಿರುವುದು ಸಂತೋಷಪಡುವುದಕ್ಕೂ ಅಲ್ಲ, ಸಹಿಸಿ ಕೊಂಡಿರಲೂ ಅಲ್ಲ; ಆದರೆ ಅರ್ಥಮಾಡಿಕೊಳ್ಳುವುದಕ್ಕೆ, ಅರಿತು ಪುನಃ ಸೃಷ್ಟಿಸು ವುದಕ್ಕೆ.

ಸಾಹಿತ್ಯದ ಮುಖೋದ್ದೇಶ ವಿರಾಮಕಾಲಹರಣ ಉಪಾಯವಲ್ಲ; ಸಂಸ್ಕೃತ ಮನೋರಂಜನೆಯನ್ನು ಪ್ರಚೋದಿಸುವ ಸಾಧನವೂ ಅಲ್ಲ. ಅದರ ಕರ್ತವ್ಯ ಇನ್ನೂ ಗಂಭೀರತರ: ಮನುಷ್ಯನನ್ನು ಹುರಿದುಂಬಿಸಿ ಉನ್ನತಿಗೇರಿಸುವುದು, ಉದಾತ್ತ ಗೊಳಿಸುವುದು. ಸಾಹಿತ್ಯ ಯಾವೊಬ್ಬನನ್ನು ಮತಾಂತರಗೊಳಿಸದಿರಬಹುದು, ಸಾಮಾಜಿಕ ಕ್ರಾಂತಿಗಳ ರಣಭೇರಿಯನ್ನು ಬಾರಿಸದಿರಬಹುದು. ಆದರೆ ನಮ್ಮ ಮಾನಸಿಕ ಪ್ರಜ್ಞಾಸ್ಥಿತಿಯನ್ನು ಸ್ವರೂಪಾಂತರಗೊಳಿಸಿ ಉತ್ಕರ್ಷಗೊಳಿಸುತ್ತದೆ; ನಮ್ಮ ಬುದ್ಧಿ ಸಂಸ್ಕಾರಗಳ ಸ್ವರೂಪವನ್ನೇ ಬದಲಾಯಿಸುತ್ತದೆ. ಲಯ ಬದ್ಧವಾದ ನುಡಿಗಳ ಶಕ್ತಿಯು ಅನ್ಯಪ್ರತಿಭಟನೆಗಳನ್ನೆಲ್ಲಾ ಮುರಿಯುತ್ತದೆ, ವಿಮರ್ಶೆಯನ್ನು ಅಲ್ಲೇ ನಿಲ್ಲಿಸಿ ಬಿಡುತ್ತದೆ; ಕವಿಯ ಸತ್ಯದರ್ಶನವನ್ನು ಆದರದಿಂದ ಸ್ವೀಕರಿಸಲು ಬುದ್ಧಿ ಯನ್ನು ಹದಗೊಳಿಸುತ್ತದೆ. ಮಾನಸವನ್ನು ಅಧ್ಯಾತ್ಮಕ್ಕೇರಿಸುವ ಒಂದು ವಿಧವಾದ ಶಾಂತಿ, ಒಂದು ಬಗೆಯ ಉದ್ಧಾರಕ ಭಾವ, ಸತ್ಯದ ಒಂದು ಆವಿಷ್ಕಾರ ಅಂದು ನಮ್ಮ ಮನಸ್ಸನ್ನು ಪ್ರವೇಶಿಸಿದಂತೆ ತೋರುತ್ತದೆ. ಸೌಂದರ್ಯದಾಯಕವಾದ ಯಾವೊಂದು ವಸ್ತುವೂ ಅರಿವಿಲ್ಲದಂತೆ ನಮ್ಮನ್ನು ಪುಟಕ್ಕೆ ಹಾಕಿ ಪವಿತ್ರಗೊಳಿಸುತ್ತದೆ. ಋಷಿಗಳ ಅಂತರ್‌ದೃಷ್ಟಿ ಸತ್ಯದಿಂದ ತುಂಬಿದೆ. ಮಹಾಕವಿಗಳು ಸತ್ಯಜ್ಯೋತಿಯನ್ನು ಹಿಡಿದವರು. ಇತರರಲ್ಲಿ ಸತ್ಯ ಪ್ರಬೋಧನೆಯಾದಾಗ ಧರ್ಮ, ನೀತಿ, ವೃದ್ಧಿಯಾಗು ತ್ತದೆ. ಸತ್ಯ ಧರ್ಮದ ಮಳೆಯನ್ನು ಸುರಿಸುತ್ತದೆ. ಜನಾಂಗವನ್ನು ಏಕೀಕರಿಸು ವುದೆಲ್ಲವೂ ಸತ್ಯ, ಬೇರ್ಪಡಿಸುವುದೆಲ್ಲಾ ಅಸತ್ಯ. ಆದ್ದರಿಂದಲೇ ಸತ್ಯ ಶಿವಮಯ ವಾದುದು, ಸುಂದರವಾದುದು; ಅಸತ್ಯ ಕ್ರೂರಿ ಮತ್ತು ಕುರೂಪಿ. ಆಲೋಚನೆಯು ತನಗೆ ತಾನೆ ಎಷ್ಟೇ ಉನ್ನತವಾಗಿರಲಿ ಅದರ ಅಂತಿಮಗುರಿ ಕ್ರಿಯಾತ್ಮಕ ವಾಗಿರುವುದು. ಸತ್ಯದ ಪರಮಗುರಿ ಆತ್ಮವಿಕಾಸ, ಮಾನವ ಜನಾಂಗಕ್ಕೆ ಮಾಡುವ ಪರಮ ಸೇವೆ. ಸತ್ಯವನ್ನು ಆರಾಧಿಸುವುದರ ಮೂಲಕ ನಾವು ಸೌಂದರ್ಯವನ್ನು ಆನಂದವನ್ನು ಸೃಜಿಸುತ್ತೇವೆ. ಇಂತಹ ನಿರ್ಮಿತಿಯ ಮೂಲಕ ನೂತನ ಮಾನವತೆ ಯನ್ನೇ ನಿರ್ಮಿಸುತ್ತೇವೆ. ಸತ್ಯಸಾಧನೆ ವೈಯಕ್ತಿಕವಾದರೂ ಅದರಿಂದ ಸಾಮಾಜಿಕ ಪರಿಣಾಮಗಳುಂಟು. ಸತ್ಯ-ಧರ್ಮ ಒಂದಕ್ಕೊಂದು ಪೂರಕ; ಎರಡೂ ಒಡನಾಡಿಗಳು. ನಾವು ಜಗತ್ತಿನ ಸ್ವಾತಂತ್ರ್ಯಕ್ಕೆ ಪ್ರಯತ್ನಿಸ ಹೊರಟಮಾತ್ರದಿಂದಲೇ ನಮ್ಮ ಏಕಾಂತಜೀವನವನ್ನು ತ್ಯಜಿಸಿ ಆತ್ಮವನ್ನು ಶಿಲುಬೆಗೇರಿಸಬೇಕೆಂದು ಅರ್ಥವಲ್ಲ.

ಕೊನೆಗೆ ಕಾರ್ಲ್‌ಮಾರ್ಕ್ಸ್‌ನಿಗೂ ಕೂಡ ಷೇಕ್ಸ್‌ಪಿಯರ್, ಈಸ್ಕಿಲಸ್ ಕವಿಗಳ ಕೃತಿಗಳನ್ನು ವರ್ಷಕ್ಕೊಮ್ಮೆಯಾದರೂ ಓದುವುದರ ಮೂಲಕ ತನ್ನ ಅಂತಃಶಕ್ತಿಯನ್ನು ಪುನರ್ ಶುದ್ಧಿಗೊಳಿಸಿಕೊಂಡು ವೃದ್ಧಿಗೊಳಿಸಿಕೊಳ್ಳುವುದು ಅತ್ಯಗತ್ಯವಾಯಿತು.

ನೀತಿಯ ಮೌಲ್ಯಗಳು ಯುಗಯುಗಕ್ಕೆ ಬದಲಾಗುತ್ತಿರುತ್ತವೆ. ಆದರೆ ಅವುಗಳ ಪರಮಗುರಿ ಮಾನವೀಯತೆ, ಸಹಾನುಭೂತಿ, ಕರುಣೆಯ ಪ್ರೇರಣೆ. ದೇವರು ದೊಡ್ಡವನಾಗಿರುವುದು ಎಲೆಯಿಲ್ಲದ ಕರುಣೆ, ಸಹಾನುಭೂತಿಗಳಿಂದ. ಸಾಹಿತ್ಯವೂ ಕರುಣೆ, ಸಹಾನುಭೂತಿ ಮುಂತಾದ ಮಾನವೀಯ ಭಾವಗಳನ್ನೇ ಪ್ರೇರಿಸುವುದು.

೬

ಸ್ವಾತಂತ್ರ್ಯ ಆನಂದಗಳು ಅವಿಭಾಜ್ಯವೆಂದು ಸಾಹಿತ್ಯ ಸಾರುತ್ತದೆ. ವಿಶ್ವದ ಇತರ ಜೀವಿಗಳಂತೆಯೇ ನಾವೆಲ್ಲರೂ ಒಂದೇ ಸತ್ಯದ ಅಮೃತ ಕಾಂತಿಯಿಂದ ಆವೃತರಾಗಿದ್ದೇವೆ ; ಅದೇ ಮಹೋನ್ನತ ಭಾವದಿಂದ, ಆದರ್ಶದಿಂದ ಉದ್ದೀಪ್ತರಾಗಿದ್ದೇವೆ ; ಅಂತೆಯೇ ಅದೇ ಸಾವು, ನೋವು, ರಾಗದ್ವೇಷಗಳ ನಡುವೆ ಸಿಕ್ಕಿ ನೊಂದು ಬಳಲಿದ್ದೇವೆ. ಸಾಹಿತಿಗಳು ಪ್ರಾಚೀನವಾದುದರಲ್ಲಿ ಭಕ್ತಿಯಿಟ್ಟೊ ಭವಿಷ್ಯದ ಶ್ರೀಮಂತಿಕೆಯಲ್ಲಿ ವಿಶ್ವಾಸವಿಟ್ಟುಕೊಂಡು ಜನಾಂಗ ರಾಷ್ಟ್ರಗಳ ಕಂದಕಗಳನ್ನೆಲ್ಲಾ ದಾಟಿ, ಆದರೂ ಒಂದೊಂದು ಜನಾಂಗದ ಬೌದ್ಧಿಕ, ಕಲಾತ್ಮಿಕ, ಆಧ್ಯಾತ್ಮಿಕ ಪರಂಪರೆಗಳನ್ನು ಗೌರವಿಸುವಂತಹ ಮಾನವ ಭ್ರಾತೃತ್ವವನ್ನು, ಬೆಳಸುವ ಬಂಧಿಸುವ ಸೂತ್ರವನ್ನೂ ನೇಯಬಲ್ಲರು.

ಸಾಹಿತಿಗಳು ಎಂದೂ ಬಾಹ್ಯಮೌಲ್ಯಗಳನ್ನು ಒಪ್ಪಬಾರದು. ಭಯವನ್ನು ಹೊಡೆದೋಡಿಸುವ ಒಬ್ಬನೇ ಒಬ್ಬ ಗುರುವನ್ನು ಒಬ್ಬನೆ ಪ್ರಭುವನ್ನು, 'ಸತ್ಯಗುರು'ವನ್ನು ಆಶ್ರಯಿಸಬೇಕು ಕವಿ. ಆದರೆ ಬರೆಹಗಾರರೂ ಮನುಷ್ಯರೇ ಆದುದರಿಂದ ಅವರೂ ಒಂದು ಜಾತಿಗೆ ಸೇರುತ್ತಾರೆ. ಅಂದಹಾಗೆ ಅಂದಂದಿನ ಮೌಲ್ಯಗಳಿಂದ ಬಂಧಿತರಾಗಿಯೆ ಇರುತ್ತಾರೆ. ವ್ಯಕ್ತಿಯ ಅತ್ಯುನ್ನತ 'ಅಂತರ್ ದೃಷ್ಟಿ'ಯ ಬೇರೂ ಸಹ ಅಂದಿನ ಸಾಮಾಜಿಕ ಅನುಭವದಲ್ಲೆ ಅಡಗಿರುತ್ತದೆ; ಹಾಗೂ, ತನ್ನ ಪರಮಾರ್ಥವನ್ನು ಆ ಜನಾಂಗಕ್ಕೆ ಸಂಬಂಧಿಸಿದಂತೆಯೆ ಕಂಡುಕೊಳ್ಳುತ್ತದೆ. ಸಾಮಾಜಿಕ ಇತಿಹಾಸಮಿತಿಯನ್ನು ಮೀರಿ ಮೇಲೆ ಬಹು ಎತ್ತರಕ್ಕೆ ಏರಿರುವ ಸಾಹಿತಿಯೂ ಸಂಪೂರ್ಣವಾಗಿ ಅಂದಿನ ಸಾಮಾಜಿಕ ಆವರಣದಿಂದ ತಪ್ಪಿಸಿಕೊಳ್ಳಲಾರ. ಕವಿ ಅಂದಿನ ಯುಗದಲ್ಲಿ ಸಮಾಜದಲ್ಲಿ ಪ್ರಚುರವಾದ ದೃಷ್ಟಿ, ರೀತಿ, ಶೈಲಿ, ಸಾಧನಗಳನ್ನೇ ಬಳಸುತ್ತಾನೆ. ಅನುಭವ, ಅಂತರ್ ದೃಷ್ಟಿಗಳ ವೈಶಾಲ್ಯ

ವಿದ್ದಷ್ಟೂ ಅದರ ವಿಶ್ವಮೌಲ್ಯ ಹೆಚ್ಚುತ್ತದೆ. ಮಹಾಕವಿ ನಿಯಮಿತ, ನಿರ್ದಿಷ್ಟ ಕಾಲದಲ್ಲಿ ಜನ್ಮ ತಾಳಿದರೂ ಕಾಲಾತೀತ ಲೋಕಕ್ಕೆ ಬೆಳಕು ನೀಡುತ್ತಾನೆ. ಇವರಲ್ಲಿ 'ಋಷಿ'ಯಾದವನು ಇಡೀ ವಿಶ್ವಕ್ಕೆ ಸೇರಿದವನು. ವ್ಯಾಸ, ವಾಲ್ಮೀಕಿ, ಹೋಮರ್, ವರ್ಜಿಲ್, ಡಾಂಟೆ, ಷೇಕ್ಸ್‌ಪಿಯರ್, ವಿಶ್ವದ ಭಾವಗಳನ್ನು ಉಪಯೋಗಿಸಿ, ಕಾವ್ಯರಚಿಸಿ, ಎಲ್ಲ ಕಾಲದ, ಎಲ್ಲ ದೇಶದ ಜನಾಂಗಗಳನ್ನು ತಮಗೆ ಋಣಿಯಾಗುವಂತೆ ಮಾಡಿಕೊಂಡಿದ್ದಾರೆ. ಅವರ ಉದ್ದೇಶ ತಮ್ಮ ಕಾಲದ ಜೀವನ ಚರಿತ್ರೆಯನ್ನು ಮಾತ್ರ ತಿಳಿಸುವುದಾಗಿರಲಿಲ್ಲ; ಆ ಜನಾಂಗದ ಹೃದಯದ ಕನಸು, ಹಾರೈಕೆಗಳನ್ನು ಅಭಿವ್ಯಕ್ತಿಗೊಳಿಸುವುದಾಗಿದ್ದಿತು.

ಕವಿವ್ಯಕ್ತಿಯಲ್ಲಿರುವ ವಿಶ್ವಮಾನವನಿಗೂ ರಾಷ್ಟ್ರಪ್ರಜೆಗೂ, ಅಥವಾ ಸಂಸ್ಥೆಯ ಸದಸ್ಯನಿಗೂ ಏನಾದರೂ ಒಂದು ವೇಳೆ ಒಳತೋಟಿಯುಂಟಾದರೆ, ಅಂಥ ವೇಳೆಗಳಲ್ಲಿ ಕವಿ ತನ್ನಲ್ಲಿರುವ, ತತ್ತ್ವಜ್ಞ ವ್ಯಕ್ತಿಗೆ ಕಲಾವಿದ ವ್ಯಕ್ತಿಗೆ ಸತ್ಯದ್ರಷ್ಟಾರ ವ್ಯಕ್ತಿಗೆ ವಂಚನೆಯಾಗದಂತೆ, ತತ್ತ್ವಜ್ಞಾನಿ ಸಾಕ್ರಟೀಸ್‌ನಂತೆ ಸೋವನುಭವಿಸಲೂ, ಎದುರಿಸಲೂ ಸಿದ್ಧನಿರಬೇಕು. ನಮ್ಮ ಸತ್ಯದ ಕಲ್ಪನೆ ಹುಸಿಯಾಗಿರಬಹುದು. ನಮ್ಮದು ತಪ್ಪಲ್ಲ, ನಾವು ನಿರ್ದೋಷಿಗಳು, ಎಂದು ಸಾಧಿಸುವ ಹಾಗಿಲ್ಲ; ಆದರೆ ನಾವು ನಮ್ಮ ಅಂತರ್‌ವಾಣಿಯೊಡನೆ ಮೇಳಗೊಂಡು ವರ್ತಿಸಬೇಕು; ಆ ಒಳಬೆಳಕು ನಡೆಸಿದಂತೆ ನಡೆಯಬೇಕು. ನಮ್ಮ ಅಂತರಂಗಕ್ಕೆ ವಿರುದ್ಧವಾಗಿ, ಅಪಶ್ರುತಿಯಾಗಿ, ಮತ್ತೊಬ್ಬರ ಆದರ್ಶಕ್ಕನುಗುಣವಾಗಿ ನಡೆಯುವುದೂ, ಬೇರೊಂದು ಮಾರ್ಗ. ಹಿಡಿಯುವುದೂ ಖಂಡಿತ ಆತ್ಮವಂಚನೆಯಾಗುತ್ತದೆ. ಸತ್ಯೋದ್ದೇಶ, ಅನುಭವ ನಿರೂಪಣೆಯಲ್ಲಿ ನಿರ್ವಂಚನೆ, ಶುದ್ಧ ಸಾಹಿತ್ಯಕ್ಕೆ ಅತಿ ಮುಖ್ಯವಾದ ಜೀವಿತೋದ್ದೇಶಗಳು. ನಾವು ಯಾವುದನ್ನೂ ಮಾಡಬಹುದು, ಮಾಡದಿರಬಹುದು, ಆದರೆ ಮಾತ್ರ ಸಾಕ್ಷಿಯಾಗಿರಬೇಕು. ನಾವು ನಮ್ಮ 'ಅಂತರ್ ವಾಣಿ'ಗೆ ಭಿನ್ನವಾಗಿರುವಂತೆ ಅಂದಿನ ಸಾಮಾಜಿಕ ಪರಿಸ್ಥಿತಿಗಳು ಪ್ರೇರಿಸಿದರೆ ಆ ಕಟ್ಟುಕಟ್ಟಳೆಗಳನ್ನು ಉಲ್ಲಂಘಿಸಿ ನಡೆಯುವುದೊಂದೇ ಮದ್ದು. ಅಸತ್ತಿನೊಡಗೂಡಿ ಸಹಕರಿಸಲು ಎಂದೂ ನಮ್ಮ ಒಪ್ಪಿಗೆಯನ್ನು ನೀಡಬಾರದು. ಕೆಟ್ಟದ್ದನ್ನು ಪ್ರತಿಭಟಿಸುವುದು ನಮ್ಮ ಅಧಿಕಾರ ಮಾತ್ರವಲ್ಲ; ಕರ್ತವ್ಯವೂ ಹೌದು. ಇಂಥ ಸುವ್ಯಕ್ತವಾದ ಸ್ಪಷ್ಟ ಅಸ್ವೀಕಾರ ಆತ್ಮಕ್ಷೇಮದ ದೃಷ್ಟಿಯಿಂದ ಅತ್ಯಂತ ಖಚಿತವಾದುದು ಮತ್ತು ಉಚಿತವಾದುದು. ಅಸತ್ಯದೊಡನೆ ಸ್ನೇಹಗೊಂಡು, ಮಂದಿಯೊಡನೆ ಬೆರೆತುಕೊಂಡು ಸಾವನ್ನು ಪ್ರತಿಭಟಿಸುವುದಕ್ಕಿಂತಲೂ ಈ ಅಸ್ವೀಕಾರ ಭಯಂಕರವಾದುದು. ಬದುಕಿನ ನಿರ್ಣಾಯಕವಾದ ಅಂತಹ ಸಂದಿಗ್ಧ ಸನ್ನಿವೇಶಗಳಲ್ಲಿ ನಮ್ಮೊಳಗಿನ ಸತ್ಯಜ್ಯೋತಿಯ ಕಿರಣಕೃಪೆಯ ನುಡಿಯೊಂದೇ ಉತ್ತಮ ಆದರ್ಶ

ಜಗತ್ತಿನ ಆಶಾಕಿರಣ ಬಲದಿಂದ ಸದ್ಯಪ್ರಪಂಚವನ್ನು ಧಿಕ್ಕರಿಸಲು ದೃಷ್ಟಿ, ಧೈರ್ಯ, ಬಲಗಳನ್ನು ನೀಡಬಲ್ಲದು. ಸಾಹಿತಿಗಳಾಗಿ ಇಲ್ಲಿ ರಾಜಕೀಯದ ಅತಿ ಬಳಕೆಯ ಮಾತನ್ನು ಬಳಸುವುದಾದರೆ "ಸ್ವನಿರ್ಧಾರ ಸ್ವಾತಂತ್ರ್ಯ"ವನ್ನು ನಾವು ಬಯಸುತ್ತೇವೆ. ನಾವು ಯಾವ ದೇಶದ, ಯಾವ ಮನುಷ್ಯನ ಅಧಿಕಾರಕ್ಕೂ ತಲೆಬಾಗುವುದಿಲ್ಲ, ಒಪ್ಪಂದಗೊಳ್ಳುವುದಿಲ್ಲ. ಉಳಿದವರು ಒಪ್ಪಬಹುದು, ಆದರೆ ಸಾಹಿತಿ ನಿಜವಾಗಿಯೂ ನಿಷ್ಠುರ ಪ್ರಾಮಾಣಿಕನಾಗಿರಬೇಕು, ಸತ್ಯಾವಲಂಬಿಯಾಗಿರಬೇಕು. ಅವನ ಅನುಭವಕ್ಕೆ ಬಾರದ ಯಾವ ಒಂದು ಸುಳ್ಳುಮಾತೂ ತುಟಿ ಮೀರಬಾರದು; ಅಸತ್ಯವಾದ ಒಂದು ಆಲೋಚನೆಯೂ ಅವನ ಮನಸ್ಸನ್ನು ಪ್ರವೇಶಿಸಬಾರದು. ನೆಪೋಲಿಯನ್ ಯುದ್ಧ ಮಾಡಿದ ವೇಳೆಯಲ್ಲಿ, ಏನೊಂದೂ ಯುದ್ಧಗೀತೆಯನ್ನು ರಚಿಸದ ಗಯಟೆಯನ್ನು ಟೀಕಿಸಿ ಯಾರೊ ಪ್ರಶ್ನಿಸಿದಾಗ ಅದಕ್ಕವನು ಹೀಗೆ ಹೇಳುತ್ತಾನೆ: 'ನನ್ನ ಸಮಸ್ತ ಕೃತಿಗಳಲ್ಲೆಲ್ಲೂ—ಗದ್ಯ-ಪದ್ಯ ಕೃತಿಗಳಲ್ಲೆಲ್ಲೂ—ನಾನು ಜೀವಿಸದ, ನನ್ನ ಹೃದಯಕ್ಕೆ ತಿಳಿಯದ ವಿಷಯವೊಂದನ್ನು ಹೇಳುವ ಅವಮಾನದ ಕೆಲಸವನ್ನು ಮಾಡಿಲ್ಲ. ಪ್ರೀತಿಯಿಂದ ಸ್ಪಂದಿತನಾದಾಗ ನಾನು ಪ್ರೇಮಗೀತೆಗಳನ್ನು ರಚಿಸಿದೆ. ನನಗೆ ದ್ವೇಷಭಾವವೆ ಇಲ್ಲದಿರುವಾಗ ದ್ವೇಷಗೀತೆಗಳನ್ನು ಹೇಗೆ ರಚಿಸಲಿ? ನಮ್ಮ ನಮ್ಮಲ್ಲೆ ಹೇಳಿಕೊಳ್ಳುವುದಾದರೆ, ಫ್ರೆಂಚರನ್ನು ನಾನು ತಿರಸ್ಕರಿಸಿಯೂ ಇರಲಿಲ್ಲ ದ್ವೇಷಿಸಿಯೂ ಇರಲಿಲ್ಲ; ಆದರೂ ಅವರಿಂದ ಬಿಡುಗಡೆ ಹೊಂದಿದಾಗ ದೇವರಿಗೆ ನನ್ನ ವಂದನೆಗಳನ್ನು ಸಲ್ಲಿಸಿದೆ,' ಎಂದು. ಹೀಗಿರುವುದರಿಂದ ನಮ್ಮ ಸಾಧನೆಯ ವೇಗ ಕುಂಠಿತವಾಗಬಹುದು; ಒಮ್ಮೊಮ್ಮೆ ನಿಲ್ಲಬಹುದು. ಆದರೂ ನಮ್ಮ ಆತ್ಮಪರಿಪೂರ್ಣತೆಯ ಆದರ್ಶದ ಸಾಧನೆಯಲ್ಲಿ ನಂಬಿಕೆ ಇರಬೇಕು. ಪ್ರಜಾಪ್ರಭುತ್ವ ಎನ್ನುವುದು ರಾಜಕೀಯ ಮಾಡಿದ ಒಂದು ಸಿದ್ಧತೆಯಲ್ಲ, ಅದೊಂದು ಧಾರ್ಮಿಕ ಶ್ರದ್ಧೆ. ಆತ್ಮಗೌರವ ಭ್ರಷ್ಟರಾಗದೆ ನಾವು ನಮ್ಮ ಅಂತರ್‌ವ್ಯಕ್ತಿತೆಯನ್ನು ಅನ್ಯರಿಗೆ ಎರವಲಾಗಿ ಕೊಡಲಾಗುವುದಿಲ್ಲವೆಂದು ಈ ಧಾರ್ಮಿಕಶ್ರದ್ಧೆ ಒತ್ತಾಯಮಾಡುತ್ತಲೇ ಇದೆ.

ಆದರೂ ಕೆಲವು ಸಾಹಿತಿಗಳು ಅಂದಿನ ಸಮಾಜವನ್ನು ಒಪ್ಪಿಸುವುದರಲ್ಲಿ ಆಸಕ್ತರಾಗಿರುತ್ತಾರೆ. ಅಂದಿನ ಸಾಮಾಜಿಕ, ರಾಜಕೀಯ ಮೌಲ್ಯಗಳಿಗೆ, ಸಾರ್ವಜನಿಕ ರುಚಿಗೆ ವಿಧೇಯನಾಗಿರುವುದು ಸಾಹಿತಿಯ ಕರ್ತವ್ಯ ಎಂದು ಆರ್ನಾಲ್ಡ್ ಬೆನೆಟ್ ವಾದಿಸುತ್ತಾನೆ: "ತನ್ನ ಮೌಲ್ಯಗಳನ್ನೆ ತನ್ನದೆ ಆದ ನಿಯಮಕ್ಕನುಸಾರವಾಗಿ ಒಪ್ಪಿಕೊಂಡು ಜನ ತನ್ನನ್ನು ಪ್ರಶಂಸಿಸಬೇಕೆಂದು ಯಾವ ಸಾಹಿತಿಯಾದರೂ ಬಯಸಿದರೆ, ನಿಜವಾಗಿಯೂ ಅಂಥವನು ದೇವರಾಗಿರಬೇಕು, ಅಲ್ಲವೆ ಅವ್ಯವಹಾರಿ, ವಂಚಕ ಆಗಿರಬೇಕು. ಕೊನೆಯ ಮಾತೇ ಸೂಕ್ತ.. ಅವನು ಬಯಸುವುದು ಅತಿ ಹೆಚ್ಚು," ಎಂದು.

ಸಾಹಿತಿ ತಾನು ಒಪ್ಪುವುದು ಇಲ್ಲ ಬಿಡುವುದು, ರಿಯಾಯಿತಿ ತೋರಿಸುವುದು ಮುಖ್ಯಾಂಶ ಸಂಬಂಧವಾಗಿಯೆ ಅಥವಾ ಅಮುಖ್ಯಾಂಶ ಸಂಬಂಧವಾಗಿಯೆ ಎಂಬುದು ಇಲ್ಲಿಯ ಮುಖ್ಯಪ್ರಶ್ನೆ. ತನ್ನ ದೃಢನಂಬಿಕೆಗಳನ್ನೆ ಆತ ಅರ್ಪಿಸಿಕೊಂಡರೆ, ತೊರೆದುಬಿಟ್ಟರೆ ಅವನಲ್ಲಿಯ ಮಹಾಸಾಹಿತಿ ಗುಣಕ್ಕೆ ಲೋಪಬರುತ್ತದೆ. ಜನರಿಗೆ ಪ್ರಿಯವಾದುದನ್ನು ಹೇಳುವುದು ಸುಲಭ; ಆದರೆ ಅವರು ಅವಶ್ಯವಾಗಿ ಕೇಳಬೇಕಾದುದನ್ನು ಹೇಳುವುದು ಕಠಿನ. ಅಮೆರಿಕಾದಲ್ಲಿ ಗುಲಾಮಗಿರಿಯನ್ನು ಸದೆಬಡಿದೋಡಿಸುವಾಗ ಗ್ಯಾರಿಸನ್ ಹೇಳುವ ಮಾತನ್ನು ನೆನಸಬಹುದು: "ನಾನು ಶ್ರದ್ಧೆಯಿಂದಿದ್ದೇನೆ—ಕವಲಾದ, ಸಂದೇಹಯುಕ್ತವಾದ ಮಾತನ್ನು ಹೇಳಲಾರೆ—ಯಾರನ್ನೂ ನಾನು ಕ್ಷಮಿಸುವುದಿಲ್ಲ—ಅದಕ್ಕಾಗಿ ಒಂದಂಗುಲವೂ ನಾನು ಹಿಮ್ಮೆಟ್ಟುವುದಿಲ್ಲ. ಕೊನೆಗೂ ಜನತೆ ನನ್ನನ್ನೆ ಕಿವಿಗೊಟ್ಟು ಆಲಿಸುತ್ತಾರೆ." ವ್ಯಾಪಾರಿಯಲ್ಲಿ, ಕೊನೆಗೆ ರಾಜಕೀಯ ವ್ಯಕ್ತಿಯಲ್ಲಿ ಕ್ಷಮಾರ್ಹವಾದುದು ಸಾಹಿತಿ ಆಚಾರ್ಯರಲ್ಲಿ ಅಕ್ಷಮ್ಯ. ಕೃತಿರಚನೆ ವ್ಯಾಪಾರ ಬುದ್ಧಿಯಿಂದ ಲೆಕ್ಕಾಚಾರ ಹಾಕಿ ಕಟ್ಟಿದುದಲ್ಲ; ಅದು ವೈಯಕ್ತಿಕವಾದ ಸ್ವ-ನಿಷ್ಠ ಭಾವನೆಗಳ ಸಾರಸರ್ವಸ್ವ. ಪ್ರಾಮಾಣಿಕತೆಯ ಸ್ಪಂದನವಿಲ್ಲದಿದ್ದರೆ ಅದು 'ಸಾಹಿತ್ಯ'ವಾಗುವುದಿಲ್ಲ. 'ಸರಿ' 'ತಪ್ಪು'ಗಳನ್ನು ಸಮಾಜ ಅರಿಯುವಂತೆ ಮಾಡಿ ಅವರನ್ನು ಮೇಲೆತ್ತುವುದು ಧೀಮಂತರ ಕರ್ತವ್ಯ. ಸಾಹಿತಿಗಳು ಭವಿಷ್ಯದ ನಿಷ್ಠಾವಂತಿಕೆಯನ್ನು ಅಭಿವ್ಯಕ್ತಿಗೊಳಿಸಬೇಕು. ಜಾನ್‌ಸನ್ ಹೇಳುತ್ತಾನೆ: "ಕವಿ ತನ್ನ ಕಾಲದ ರಾಗದ್ವೇಷಗಳಿಂದ ಅತಿ ದೂರನಾಗಿರಬೇಕು. ಧರ್ಮಾಧರ್ಮಗಳನ್ನು ಅವುಗಳ ಶುದ್ಧ-ಸ್ಥಿರ-ಸ್ಥಿತಿಯಲ್ಲಿ ಕಾಣಬೇಕು. ಆತ ಅಂದಿನ ನಿಯಮಗಳನ್ನು, ಅಭಿಪ್ರಾಯಗಳನ್ನು ಉಪೇಕ್ಷಿಸಿ ನಿತ್ಯ ಶಾಶ್ವತವಾದ, ಸಾಧರಣೀಕೃತವಾದ ಅಚಿಂತ್ಯ ಪ್ರಪಂಚಕ್ಕೆ ಏರಬೇಕು. ಇದರಿಂದ ಅವನ ಕೀರ್ತಿಯ ಪ್ರಗತಿ ವೇಗಗುಂದಿದರೂ ಅಷ್ಟರಲ್ಲೇ ತೃಪ್ತಿಪಡಬೇಕು. ತನ್ನ ಕಾಲದ ಹೊಗಳಿಕೆಯನ್ನು ತಿರಸ್ಕರಿಸಿ ಮುಂದಿನ ಜನಾಂಗ ಒರೆಹಚ್ಚಲು ತನ್ನನ್ನು ಅರ್ಪಿಸಿಕೊಳ್ಳಬೇಕು," ಎಂದು. ಮಾನವನ ಭವಿಷ್ಯಕ್ಕಾಗಿ ಹೋರಾಡುವುದೊಂದೇ ಸರಿಯಾದ ಕಾರಣ. ಇದನ್ನು ನಾವು ಸ್ವಲ್ಪ ಗಂಭೀರವಾಗಿ ಗುರುತರವಾಗಿ ಯೋಚಿಸಿ ಸ್ವೀಕರಿಸಿಕೊಂಡರೆ ಹೊಸ ಮಾನವತೆಯನ್ನೇ ಸೃಷ್ಟಿಸಲು ಸಹಾಯಮಾಡಿದಂತಾಗುತ್ತದೆ. "ಹೊಸ ಹೊಸ ಅಬ್ಬರಗಳನ್ನು ಕಂಡುಹಿಡಿಯುವವರ ಸುತ್ತಲಲ್ಲ; ನೂತನ ಮಾನವೀಯ ಮೌಲ್ಯಗಳನ್ನು ಸೃಷ್ಟಿಸುವವರ ಸುತ್ತ ಜಗತ್ತು ಅಗೋಚರವಾಗಿ, ಮೌನವಾಗಿ ಸುತ್ತುವುದು," ಎಂದು ನೀಷೆ ಹೇಳುತ್ತಾನೆ.

Moral Values in Literature — ಅಮೃತಾ. ವಿ.

Dr. S. Radhakrishnan

ಮೂವರು ಸಂಸ್ಕೃತಗದ್ಯ ಮಹಾಕವಿಗಳು*

ಸಂಸ್ಕೃತಗದ್ಯಕವಿಗಳಲ್ಲಿ ಬಾಣ ದಂಡಿ ಮತ್ತು ಸುಬಂಧು ಈ ಮೂವರೇ ಮುಖ್ಯರಾದವರು. ಇವರಲ್ಲಿ ಬಾಣನು ಹರ್ಷಚರಿತೆ ಮತ್ತು ಕಾದಂಬರಿಗಳನ್ನೂ ದಂಡಿಯು ದಶಕುಮಾರ ಚರಿತೆಯನ್ನೂ ಮತ್ತು ಸುಬಂಧುವು ವಾಸವದತ್ತೆಯನ್ನೂ ಬರೆದಿದ್ದಾರೆ. ಇವುಗಳಲ್ಲಿ ಹರ್ಷಚರಿತೆಯು ಆಖ್ಯಾಯಿಕೆ ಅಥವಾ ಅರ್ಧಚಾರಿತ್ರಿಕ ವಾದ ಕಥೆ. ಉಳಿದ ಮೂರು ಕೃತಿಗಳು ಕಥೆಗಳು. ಈ ಮೂವರು ಕವಿಗಳ ಕೃತಿ ಗಳಲ್ಲಿ ಬಾಣ ಮತ್ತು ಸುಬಂಧುಗಳ ಕೃತಿಗಳು ಒಂದು ಜಾತಿಯವು, ದಂಡಿಯ ಕೃತಿಯೇ ಒಂದು ಜಾತಿ.

ಬಾಣ ಮತ್ತು ಸುಬಂಧುಗಳ ಕೃತಿಗಳೇ ಕಾವ್ಯಶಾಸ್ತ್ರದಲ್ಲಿ ಗದ್ಯಕಾವ್ಯ ಲಕ್ಷಣಕ್ಕೆ ಲಕ್ಷ್ಯಗಳು, ದಂಡಿಯದಲ್ಲ. ಈ ಕಾವ್ಯಗಳಲ್ಲಿ ವರ್ಣನೆ ಪಾತ್ರನಿರೂಪಣೆ ಗಿಂತ ಹೆಚ್ಚು ; ಕಲ್ಪನೆಯಿದೆ ಆದರೆ ಪಾಂಡಿತ್ಯ ಹೆಚ್ಚು ; ಶೈಲಿಯೂ ಕಥಾಸಂವಿಧಾನವೂ ಕಠಿನ ಮತ್ತು ಕೃತಕ. ದುರ್ವೃತ್ತನಾಯಕರಿಲ್ಲ ; ಸದ್ವೃತ್ತರೂ ಮಹಾನುಭಾವರೂ, ಕನಿಕರದ ಸ್ವಭಾವದವರೂ, ಇಲ್ಲಿನ ಪಾತ್ರಗಳು. ಆದರೂ ಜನ್ಮಾಂತರದಲ್ಲಿರುವ ನಾಯಕರು, ರೂಪಾಂತರಗಳಲ್ಲಿರುವ ವ್ಯಕ್ತಿಗಳು, ಆಶ್ಚರ್ಯಕರವಾದರೂ ಮೃದು ವಾದ ಸಾಹಸಗಳು ಇವು ಈ ಮೂವರ ಕೃತಿಗಳಿಗೂ ಬಹುಮಟ್ಟಿಗೆ ಸಾಧಾರಣಾಂಶ ಗಳು. ಜನಪದಕಥೆಗಳ ಶೃಂಗಾರಕಲ್ಪನೆ ಈ ಕೃತಿಗಳ ಪರಿಷ್ಕಾರಪೂರ್ಣವಾದ ಕಾವ್ಯದರ್ಪಣದಲ್ಲಿ ಪ್ರತಿಫಲಿಸಿದೆ.

ಬಾಣ : ಹರ್ಷಚರಿತೆ

ಬಾಣನು ಹರ್ಷನ ಆಸ್ಥಾನಕವಿಯೆಂದು ಹರ್ಷಚರಿತೆಯಿಂದಲೇ ತಿಳಿದುಬರು ತ್ತದೆ. ಆದುದರಿಂದ ಈತನ ಕಾಲ ನಿರ್ವಿವಾದವಾಗಿ ಆರು ಮತ್ತು ಏಳನೆಯ ಶತಮಾನ. ಈತನು ಪುಣ್ಯವಶಾತ್ ತನ್ನ ಜೀವನ ಚರಿತ್ರೆಯನ್ನು ತಾನೇ ತಿಳಿಸಿದ್ದಾನೆ.

---

* 'ಸಂಸ್ಕೃತ ಗದ್ಯಕಲೆಯ ಸಂಕ್ಷಿಪ್ತ ಇತಿಹಾಸ'ದಲ್ಲಿ ಪ್ರಾಸಂಗಿಕವಾಗಿ ಬಂದ ಬಾಣದಂಡಿ. ಮತ್ತು ಸುಬಂಧುಗಳ ಕೃತಿಗಳನ್ನು ಬಹು ಸಂಕ್ಷಿಪ್ತವಾಗಿ ವಿಮರ್ಶಿಸಲಾಗಿತ್ತು (ಪ್ರ. ಕ. ವಿಳಂಬಿ ಸಂವತ್ಸರದ ಪುಷ್ಯಸಂಚಿಕೆ). ಪ್ರಕೃತಲೇಖನದ ಮಿತಿಯಲ್ಲಿ ಈ ಮೂವರು ಕವಿಗಳ ಕೃತಿಗಳನ್ನೂ ಸ್ವಲ್ಪ ವಿಸ್ತಾರವಾಗಿಯೇ ತುಲನಾತ್ಮಕದೃಷ್ಟಿಯಿಂದ ವಿಮರ್ಶಿಸಲಾಗಿದೆ.

ಹರ್ಷಚರಿತೆಯ ಮೊದಲನೆಯ ಉಚ್ಛ್ವಾಸದಲ್ಲಿ ತನ್ನ ವಂಶವನ್ನು ವಿಸ್ತಾರವಾಗಿಯೂ ಕಾದಂಬರಿಯ ಪೀಠಿಕಾಶ್ಲೋಕಗಳಲ್ಲಿ ಸಂಕ್ಷೇಪವಾಗಿಯೂ ವರ್ಣಿಸಿದ್ದಾನೆ. ಬ್ರಾಹ್ಮಣ, ವಾತ್ಸ್ಯಾಯನ ಗೋತ್ರಕ್ಕೆ ಸೇರಿದವನು. ಈತನ ಜನ್ಮಸ್ಥಳ ಶೋಣಾ ನದಿಯ ಪಶ್ಚಿಮದಲ್ಲಿದ್ದ ಪ್ರೀತಿಕೂಟವೆಂಬ ಹಳ್ಳಿ. ಈತನ ತಂದೆ ಚಿತ್ರಭಾನು, ತಾಯಿ ರಾಜದೇವಿ. ಬಾಣನು ತಾಯಿಯನ್ನು ಶೈಶವದಲ್ಲಿಯೇ ಕಳೆದುಕೊಂಡನು. ಚಿತ್ರಭಾನುವು ತಂದೆಯ ಕರ್ತವ್ಯದ ಜೊತೆಗೆ ತಾಯಿಯ ವಾತ್ಸಲ್ಯವನ್ನೂ ಬೆರಸಿ ಕೊಂಡು ಶಿಶು ಬಾಣನನ್ನು ಬಹು ಪ್ರೀತಿಯಿಂದ ಸಾಕಿದನು. ವಿದ್ಯೆ ಹೇಳಿದನು. ಆದರೆ ಹದಿನಾಲ್ಕನೆಯ ವಯಸ್ಸಿನಲ್ಲಿ ಬಾಣನು ದುರ್ದೈವವಶಾತ್ ತಂದೆಯನ್ನೂ ಕಳೆದುಕೊಂಡನು. ತಾರುಣ್ಯದ ಚಾಪಲ್ಯ ಮತ್ತು ಉತ್ಸಾಹಗಳಿಂದ ರಸಿಕರಾದ ಮಿತ್ರರೊಡನೆ ದೇಶಾಟನಮಾಡಿ ಪಾಂಡಿತ್ಯ ವಿವೇಕ ಮತ್ತು ಅನುಭವಗಳನ್ನು ಸಂಪಾದಿಸಿದನು. ಪ್ರೀತಿಕೂಟಕ್ಕೆ ಹಿಂದಿರುಗಿ ಬಂಧುಗಳೊಡನೆ ಬೆರತು ಆನಂದ ದಿಂದಿರುವಾಗ ಒಂದು ದಿನ ಹರ್ಷವರ್ಧನನ ದಾಯಾದಿಯಾದ ಕೃಷ್ಣನು ಈತನಿಗೆ ಹರ್ಷನ ಆಸ್ಥಾನಕ್ಕೆ ಕೂಡಲೇ ಬರಬೇಕೆಂದು ಪತ್ರ ಕಳಿಸಿದನು. ಮೊದಲು ಸ್ವಲ್ಪ ಹಿಂಜರಿದರೂ, ಅನಂತರ ಕೆಲವು ಶಾಂತಿಕರ್ಮಗಳನ್ನಾಚರಿಸಿ ಹರ್ಷನ ಆಸ್ಥಾನಕ್ಕೆ ಹೋದನು. ರಾಜನು ಮೊದಲು ಸ್ವಲ್ಪ ತಿರಸ್ಕಾರಪೂರ್ವಕ ವಾಗಿ ಕಂಡರೂ ಸ್ವಲ್ಪ ಕಾಲದಲ್ಲಿಯೇ ಆತನ ಅಂತರ್ಯಪ್ರೇಮವು ಬಚ್ಚಿಡಲಾಗ ದಾಯಿತು. ಅಮಿತವಾದ ಗೌರವವನ್ನು ಹೊಂದಿ ಅನಂತರ ಜನ್ಮಸ್ಥಳಕ್ಕೆ ಹಿಂದಿರುಗಿ ತನ್ನ ಬಂಧುಮಿತ್ರರ ಕೋರಿಕೆಯಂತೆ ಹರ್ಷಚರಿತೆಯನ್ನು ಹೇಳಲು ಆರಂಭಿಸುತ್ತಾನೆ. ಮೊದಲು ಶ್ರೀಕಂಠವೆಂಬ ಜನಪದ ಮತ್ತು ರಾಜಧಾನಿಯಾದ ಸ್ಥಾಣ್ವೀಶ್ವರನಗರದ ವರ್ಣನೆ. ಅನಂತರ ಪುಷ್ಪಭೂತಿಯೆಂಬ ರಾಜನ ವಂಶದಲ್ಲಿ ಹುಟ್ಟಿದ ವಿಖ್ಯಾತರಾದ ರಾಜರ ವರ್ಣನೆ. ಈ ವಂಶದಲ್ಲಿಯೇ ಪ್ರತಾಪಶಾಲಿಯಾದ ಪ್ರಭಾಕರವರ್ಧನನ ಜನನ. ಇವನಿಗೆ ರಾಜ್ಯವರ್ಧನ ಮತ್ತು ಹರ್ಷವರ್ಧನರೆಂಬ ಇಬ್ಬರು ಪುತ್ರರೂ ರಾಜ್ಯಶ್ರೀ ಎಂಬ ಪುತ್ರಿಯೂ ಜನಿಸುತ್ತಾರೆ. ಮೌಖರಿ ವಂಶ ತಿಲಕನಾದ ಗ್ರಹವರ್ಮನು ರಾಜ್ಯಶ್ರೀಯನ್ನು ವಿವಾಹ ಮಾಡಿಕೊಳ್ಳುತ್ತಾನೆ. ಪ್ರಭಾಕರ ವರ್ಧನನು ಮೃತನಾಗಲು ದುಃಖಪರವಶನಾದ ರಾಜ್ಯವರ್ಧನನು ರಾಜ ನಾಗಲು ಇಚ್ಛಿಸದೆ ಹರ್ಷನಿಗೇ ಪಟ್ಟಕಟ್ಟಬೇಕೆಂದಿರುವಷ್ಟರಲ್ಲಿ ಮಾಳವರಾಜನು ಗ್ರಹವರ್ಮನನ್ನು ಕೊಂದು ರಾಜ್ಯಶ್ರೀಯನ್ನು ಸೆರೆ ಹಿಡಿದನೆಂದು ವಾರ್ತೆ ಬರುತ್ತದೆ. ರಾಜ್ಯವರ್ಧನನು ಮಾಳವರಾಜನ ಮೇಲೆ ದಂಡೆತ್ತಿ ಹೋಗುತ್ತಾನೆ; ಆದರೆ ಗೌಡ ದೇಶದ ದೊರೆಯು ಮೋಸದಿಂದ ಇವನನ್ನು ಕೊಂದುಬಿಡುತ್ತಾನೆ. ರಾಜ್ಯಶ್ರೀಯನ್ನು

ಬಿಡಿಸಿಕೊಳ್ಳಲೋಸುಗ ಹರ್ಷನು ತಾನೇ ಹೊರಡುತ್ತಾನೆ. ದಾರಿಯಲ್ಲಿಯೇ, ಆಕೆಯು ಸೆರೆಯಿಂದ ತಪ್ಪಿಸಿಕೊಂಡು ಅರಣ್ಯವನ್ನು ಹೊಕ್ಕಳೆಂಬ ವರ್ತಮಾನ ಸಿಕ್ಕುತ್ತದೆ. ದಿಕ್ಕುಗೆಟ್ಟು ಹರ್ಷನು ರಾಜ್ಯಶ್ರೀಯನ್ನು ಕಾಡಿನಲ್ಲೆಲ್ಲ ಹುಡುಕುತ್ತಾನೆ. ಕೊನೆಗೆ ಅಗ್ನಿಪ್ರವೇಶ ಮಾಡುವುದರಲ್ಲಿದ್ದ ಆಕೆಯನ್ನು ಕಂಡು ತಡೆದು ಸಂತಯಿಸುತ್ತಾನೆ. ಹರ್ಷಚರಿತೆ ಇಲ್ಲಿಗೆ ಮುಗಿಯುತ್ತದೆ. ಇದರಲ್ಲಿ ಸರಸ್ವತೀ ದಧೀಚರ ಸಮಾಗಮವೂ, ಹರ್ಷವರ್ಧನನು ಮರಣ ಶಯ್ಯೆಯಲ್ಲಿದ್ದ ಪ್ರಭಾಕರವರ್ಧನನನ್ನು ಕಾಣುವುದೂ ಪ್ರಶಂಸನೀಯವಾಗಿ ಚಿತ್ರಿಸಲ್ಪಟ್ಟಿವೆ. ಶೃಂಗಾರರಸ ಚಿತ್ರಣದಲ್ಲಿ ಬಾಣನ ಸಂಯಮ ಮತ್ತು ಔಚಿತ್ಯವಿವೇಕಗಳನ್ನು ಸರಸ್ವತೀ ದಧೀಚರ ಸಮಾಗಮದಲ್ಲಿ ಕಾಣಬಹುದು.

ದುರ್ವಾಸ ಋಷಿಯು ಬ್ರಹ್ಮಸಭೆಯಲ್ಲಿ ಒಂದು ಸಲ ಸಾಮಗಾನ ಮಾಡುತ್ತಾ ಅನವಧಾನತೆಯಿಂದ ಸ್ವರಲೋಪ ಮಾಡಿದಾಗ ಸರಸ್ವತಿಯು ನಕ್ಕುಬಿಡುತ್ತಾಳೆ. ಕುಪಿತನಾದ ಮುನಿಯು ದೇವಿಯನ್ನು ಮರ್ತ್ಯಲೋಕವನ್ನು ಹೊಂದುವಂತೆ ಶಪಿಸುತ್ತಾನೆ. ಆಗ ಕರುಣಾಳುವಾದ ಭಗವಾನ್ ಬ್ರಹ್ಮನು ನಿರವಧಿಕವಾದ ಆ ಶಾಪಕ್ಕೆ ಮಗನೊಬ್ಬನನ್ನು ಹಡೆಯುವವರೆಗೆ ಭೂಮಿಯಲ್ಲಿರು ಎಂದು ಅವಧಿಯನ್ನು ಕಲ್ಪಿಸುತ್ತಾನೆ. ದೇವೀಸರಸ್ವತಿಯು ಸಾವಿತ್ರೀದೇವಿಯೊಡನೆ ಮರ್ತ್ಯಲೋಕಕ್ಕೆ ಬಂದು ಶೋಣ ನದ ತೀರದ ಒಂದು ಲತಾಮಣ್ಟಪದಲ್ಲಿ ಶಿವಾರ್ಚನರತಳಾಗಿ ನೆಲಸುತ್ತಾಳೆ. ಚ್ಯವನಪುತ್ರನಾದ ದಧೀಚನು ತನ್ನ ತಂದೆಯ ಆಶ್ರಮಕ್ಕೆ ಹೋಗುತ್ತಿರುವಾಗ ದೈವಗತಿಯಿಂದ ಮಾರ್ಗದಲ್ಲಿ ಸರಸ್ವತಿಯನ್ನು ಕಂಡು ಆಕೆಯಲ್ಲಿ ಅನುರಕ್ತನಾಗುತ್ತಾನೆ; ಸರಸ್ವತಿಯೂ ಕೂಡ ದಧೀಚನ ಸೌಂದರ್ಯದಿಂದ ಮೋಹಿತಳಾಗುತ್ತಾಳೆ. ತನ್ನ ತಂದೆಯ ಆಶ್ರಮವನ್ನು ತಲುಪಿದ ಮೇಲೆ ದಧೀಚನು ಪ್ರೇಮ ಭಿಕ್ಷೆಗಾಗಿ ಮಾಲತಿಯನ್ನು ಸರಸ್ವತಿಯ ಬಳಿಗೆ ಕಳಿಸುತ್ತಾನೆ. ಸರಸ್ವತಿಯ ಸಮ್ಮತಿಯನ್ನು ಪಡೆದು ಮಾಲತಿಯು ಚ್ಯವನಾಶ್ರಮಕ್ಕೆ ಹಿಂದಿರುಗಿ ದಧೀಚನನ್ನು ಸರಸ್ವತಿಯ ಬಳಿಗೆ ಕರೆದುಕೊಂಡು ಹೋಗುತ್ತಾಳೆ. ಆಗ:

ಆ ಜಗಾಮ ಚ ಮಧುಮಾಸ ಇವ ಸುರಭಿಗನ್ಧವಾಹಃ, ಹಂಸ ಇವ ಕೃತಮೃಣಾಲಧೃತಿಃ, ಶಿಖಣ್ಡೀವ ಘನಪ್ರೀತ್ಯುನ್ಮುಖಃ, ಮಲಯಾನಿಲ ಇವಾಹಿತಸರಸಚನ್ದನಧವಲತನುಲತೋತ್ಕಮ್ಪಃ, ಕೃಷ್ಯಮಾಣ ಇವ ಕೃತಕರಕಚಗ್ರಹೇಣ ಗ್ರಹಪತಿನಾ, ಪ್ರೇರ್ಯಮಾಣ ಇವ ಕಂದರ್ಪೋದ್ದೀಪನ ದಕ್ಷೇಣ ದಕ್ಷಿಣಾನಿಲೇನ, ಉಹ್ಯಮಾನ ಇವೋತ್ಕಲಿಕಾಬಹುಲೇನ ರತಿರಸೇನ, ಪರಿಮಲಸಂಪಾತಿನಾ ಮಧುಪಪಟಲೇನ ಪಟೇನೇವ ನೀಲೇನಾಚ್ಛಾದಿತಾಂಗಯಷ್ಟಿಃ, ಅನ್ತಃ ಸ್ಫುರತಾ ಮತ್ತಮದನಕರಿ ಕರ್ಣಶಂಖಾಯಮಾನೇನ ಪ್ರತಿಮೇಂದುನಾ ಪ್ರಥಮಸಮಾಗಮವಿಲಾಸವಿಲಕ್ಷಸ್ಮಿತೇನೇವ ಧವಲೀ ಕ್ರಿಯಮಾಣೈಕಕಪೋಲೋದರೋ ಮಾಲತೀದ್ವಿತೀಯೋ ದಧೀಚಃ| ಆಗತ್ಯ ಚ ಹೃದಯಗತ ದಯಿತಾನೂಪುರರವವಿಮಿಶ್ರಯೇವ ಹಂಸಗದ್ಗದಯಾ ಗಿರಾ ಕೃತಸಂಭಾಷಣೋ ಯಥಾ ಮನ್ಮಥಃ

ಸಮಾಜ್ಞಾಪಯತಿ, ಯಥಾ ಯೌವನಮುಪದಿಶತಿ, ಯಥಾ ವಿದಗ್ಧತಾಧ್ಯಾಪಯತಿ, ಯಥಾನುರಾಗಃ ಶಿಕ್ಷಯತಿ, ತಥಾ ತಾಮಭಿರಾಮಾಂ ರಾಮಾಮರಮಯತ್ | ಉಪಜಾತವಿಸ್ರಮ್ಭಾಚಾತ್ಮಾನಮ ಕಥಯದಸ್ಯ ಸರಸ್ವತೀ | ತೇನ ತು ಸಾರ್ಧಮೇಕದಿವಸಮಿವ ಸಂವತ್ಸರಮಧಿಕಮನಯತ್ |

[ಪರಿಮಳವನ್ನು ಸೂಸುವ ಗನ್ಧವನ್ನು ಹಚ್ಚಿಕೊಂಡು (ಪುಷ್ಪಸೌರಭವನ್ನು ಬೀರುವ ಮಾರುತನನ್ನು ಹೊಂದಿದ) ಚೈತ್ರಮಾಸದಂತೆ, ತಾವರೆಯ ದಂಟಿನ ಹಾರವನ್ನು ಧರಿಸಿ (ತಾವರೆಯ ದಂಟನ್ನು ತಿಂದು ಜೀವಿಸುವ) ಹಂಸದಂತೆ, ಅತಿಶಯ ವಾದ ಪ್ರೀತಿಯಿಂದ ಕಾತರನಾಗಿ (ಮೇಘಗಳನ್ನು ಪ್ರೀತಿಯಿಂದ ಕತ್ತೆತ್ತಿ ನೋಡು ತ್ತಿರುವ) ನವಿಲಿನಂತೆ, ಸಾಂದ್ರವಾದ ಚಂದನರಸದಂತೆ ಬಿಳುಪಾಗಿಯೂ ಬಳ್ಳಿಯಂತೆ ಕೃಶವೂ ಆದ ಶರೀರದಲ್ಲಿ ನಡುಕವನ್ನು ಹೊಂದಿ (ನಿಬಿಡವಾದ ಚನ್ದನ ಮತ್ತು ಧವಲವೃಕ್ಷಗಳನ್ನಾಶ್ರಯಿಸಿರುವ ಸಣ್ಣನೆಯ ಬಳ್ಳಿಗಳನ್ನು ಅಲುಗಿಸುತ್ತಿರುವ) ಮಲಯಮಾರುತದಂತೆ, ಕೈಗಳನ್ನೂ ತಲೆಗೂದಲನ್ನೂ ಹಿಡಿದ ಚಂದ್ರನಿಂದ ಎಳೆಯ ಲ್ಪಡುತ್ತಿರುವನೋ ಎಂಬಂತೆ (ಅಥವಾ ಕಿರಣಗಳಿಂದ ತನ್ನ ತಲೆಗೂದಲನ್ನು ಮುಟ್ಟಿರುವ ಚಂದ್ರನಿಂದ ಉದ್ದೀಪನಗೊಂಡಿರುವವನು ಹೇಗೋ ಹಾಗೆ) ಕಾಮೋದ್ದೀಪನಚತುರನಾದ ದಕ್ಷಿಣಮಾರುತನಿಂದ ಮುಂದೆ ಮುಂದೆ ಹೋಗು ವಂತೆ ಮಾಡಲ್ಪಡುತ್ತಿರುವನೋ ಎಂಬಂತೆ, ಬಹಳವಾದ ಅಲೆಗಳುಳ್ಳ ಪ್ರೀತಿಯ ಹೊನಲಿನಿಂದ ಒಯ್ಯಲ್ಪಡುತ್ತಿರುವನೋ ಎಂಬಂತೆ (ಅಥವಾ ಬಹಳವಾದ ಆಕಾಂಕ್ಷೆ ಗಳುಳ್ಳ ಪ್ರೀತಿಭಾವದಿಂದ ಪ್ರಚೋದಿಸಲ್ಪಡುತ್ತಿರುವನೋ ಎಂಬಂತೆ) ಪರಿಮಲ ಕ್ಕೆರಗಿದ ದುಂಬಿಗಳ ಸಮೂಹದಿಂದಲೋ ಎಂಬಂತೆ ಅನೇಕ ಪರಿಮಳಗಳಿಂದ ಕೂಡಿದ ನೀಲವಸ್ತ್ರದಿಂದ ಆಚ್ಛಾದಿತವಾದ ಕೃಶಶರೀರವುಳ್ಳವನಾಗಿ, ಹೃದಯದಲ್ಲಿ ನೆಲಸಿರುವ ಮದಿಸಿದ ಮದನನೆಂಬ ಆನೆಯ ಕಿವಿಯ ಶಂಖದಂತಿರುವ ಚನ್ದ್ರನ ಪ್ರತಿಬಿಂಬದಿಂದ, ಪ್ರಥಮ ಸಮಾಗಮ ವಿಲಾಸದಿಂದ ವಿಲಕ್ಷಣವಾದ ನಗುವಿನಿಂದಲೋ ಎಂಬಂತೆ ಬಿಳುಪಾಗಿದ್ದ ಒಂದು ಕಡೆ ಕೆನ್ನೆಯ ಮೇಲುಭಾಗವನ್ನುಳ್ಳವನಾಗಿ ದಧೀಚನು ಮಾಲತಿಯೊಡನೆ ಬಂದನು. ಬಂದು, ಹೃದಯದಲ್ಲಿ ನೆಲಸಿರುವ ಪ್ರೇಯಸಿಯ ನೂಪುರ ಶಬ್ದದೊಡನೆ ಬೆರೆತಿರುವುದೋ ಎನ್ನುವಂತೆ ಹಂಸಗದ್ಗದದಂತಿರುವ ಮಾತಿನಿಂದ ಮಾತನಾಡಿಸುತ್ತಾ, ಮನ್ಮಥನು ಆಜ್ಞೆಯಿತ್ತಂತೆ, ಯೌವನವು ಉಪದೇಶಿಸಿದಂತೆ, ಪಾಂಡಿತ್ಯವು ಬೋಧಿಸಿದಂತೆ, ಅನುರಾಗವು ಕಲಿಸಿದಂತೆ, ಮನೋಹರಳಾದ ಆ ಸುನ್ದರಿಯನ್ನು ಆನಂದಗೊಳಿಸಿದನು. ವಿಶ್ವಾಸ ಹೊಂದಿದ ಮೇಲೆ ಸರಸ್ವತಿಯು ತನ್ನ ಸ್ಥಿತಿಯನ್ನು ಆತನಿಗೆ ತಿಳಿಸಿದಳು ಮತ್ತು ಅವನೊಡನೆ ಒಂದು ವರ್ಷವನ್ನು ಒಂದು ದಿವಸದಂತೆ ಕಳೆದಳು.]

ಬಾಣನು ಈ ಸಂದರ್ಭದಲ್ಲಿ ಸಂಭೋಗಶೃಂಗಾರವನ್ನು ವಿಸ್ತರಿಸಿದ್ದರೆ ರಸ ಪೋಷಣೆಗೆ ಬದಲು ರಸಭಂಗವೇ ಆಗುತ್ತಿದ್ದಿತು. ಅಷ್ಟೇ ಅಲ್ಲ; ಜುಗುಪ್ಸೆಯೇ ಉಂಟಾಗುತ್ತಿತ್ತು. ದೇವೀ ಸರಸ್ವತಿಯ ವಿಷಯದಲ್ಲಿನ ಪೂಜ್ಯಭಾವಕ್ಕೆ ಕುಂದುಂಟಾಗ ದಂತೆ ಶೃಂಗಾರವರ್ಣನೆಯನ್ನು ಮಿತಗೊಳಿಸಿದ್ದಾನೆ, ಸಂಯಮಗೊಳಿಸಿದ್ದಾನೆ, ಸಂಕ್ಷೇಪಗೊಳಿಸಿದ್ದಾನೆ. ಚ್ಯವನಪುತ್ರನೂ, ಮುಂದೆ ಲೋಕಹಿತಕ್ಕಾಗಿ ತನ್ನ ಬೆನ್ನುಮೂಳೆಯನ್ನೇ ಕೊಟ್ಟವನೂ, ಅಲ್ಲದೆ ತನ್ನ ವಂಶಕ್ಕೆ ಆದ್ಯಪ್ರವರ್ತಕನೂ ಆದ ದಧೀಚನ ವಿಷಯದಲ್ಲಿಯೂ ಅವನಿಗೆ ಅತ್ಯಂತವಾದ ಗೌರವ. ಈ ದೃಷ್ಟಿಯಿಂದಲೂ ಶೃಂಗಾರವರ್ಣನೆ ಮುಂದುವರೆದಿದ್ದರೆ ಅನುಚಿತವೇ ಆಗುತ್ತಿತ್ತು. ಶಾಪನಿಮಿತ್ತದಿಂದ ಉಂಟಾದ ಇವರೀರ್ವರ ಸಮಾಗಮವನ್ನು ಕವಿಯು ಸಹಾನುಭೂತಿಯಿಂದ ನೋಡಿದ್ದಾನೆ; ಉಚಿತವಾದಷ್ಟನ್ನು ಮಾತ್ರ ಹೇಳಿ ಸಂದರ್ಭದ ಗಾಂಭೀರ್ಯವನ್ನು ಕಾಪಾಡಿದ್ದಾನೆ.

ಬಾಣನ ಕಾದಂಬರಿ ದಂಡಿಯ ದಶಕುಮಾರಚರಿತೆ ಸುಬಂಧುವಿನ ವಾಸವ ದತ್ತೆ ಇವು ಮೂರು ಕಲ್ಪಿತ ಕಥೆಗಳು; ಅವುಗಳ ವಾತಾವರಣವೆಲ್ಲವೂ ಕಲ್ಪ ನಾಮಯ, ಆದರೆ ಚಾರಿತ್ರಿಕ ವಸ್ತುವನ್ನು ಅಧಿಕರಿಸಿ ಬರೆದಿರುವ ಹರ್ಷಚರಿತೆಯು ಕಲ್ಪನೆಯಲ್ಲಿ ಅವುಗಳಿಗಿಂತ ಅವರಶ್ರೇಣಿಯದಲ್ಲ. ಅವುಗಳಲ್ಲಿರುವಂತೆಯೇ ಇಲ್ಲಿಯೂ ಕಲ್ಪನೆಗೇ ಹೆಚ್ಚಿನ ಸ್ಥಾನ. ಆದುದರಿಂದ ಚರಿತ್ರೆಯ ದೃಷ್ಟಿಯಿಂದ ಇದಕ್ಕೆ ಬೆಲೆ ಬಹಳ ಅಲ್ಪ. ಉದಾಹರಣೆಗೆ ಮಾಳವ ಮತ್ತು ಗೌಡ ರಾಜರ ವಿಷಯದಲ್ಲಿ ನಮಗೆ ಯಾವ ವಿಧವಾದ ಜ್ಞಾನವೂ ಇದರಿಂದ ಉಂಟಾಗುವುದಿಲ್ಲ. ಹರ್ಷನ ಜೀವನದಲ್ಲಿ ಯಾವುದೋ ಒಂದು ಪುಟ್ಟ ಪ್ರಸಂಗದ ಚಿತ್ರ ಮಾತ್ರ ನಮಗೆ ಇಲ್ಲಿ ಸಿಕ್ಕುತ್ತದೆ. ಚಕ್ರವರ್ತಿಯ ರಾಜ್ಯಭಾರದ ಹೆಚ್ಚಿನ ವಿವರಗಳೇನೂ ಇದರಲ್ಲಿ ಕಂಡುಬರುವುದಿಲ್ಲ. ಕಾರಣ, ಬಾಣನ ಮುಖ್ಯೋದ್ದೇಶ ತನ್ನ ಕಲೆಯ ಪ್ರದರ್ಶನ; ಚಾರಿತ್ರಿಕ ಸತ್ಯ ವಲ್ಲ. ಪ್ರಾಚೀನ ಭಾರತ ಸಂಸ್ಕೃತಿಯಲ್ಲಿ ಚರಿತ್ರೆಗೆ ಅಷ್ಟು ಪ್ರಾಧಾನ್ಯವಿಲ್ಲ. ಏಕೆಂದರೆ, ಅಲ್ಲಿ ಭೂತಾರ್ಥಕ್ಕಿಂತಲೂ ಕಲ್ಪಿತಾರ್ಥವೇ ಸತ್ಯತರ. ಚಾರಿತ್ರಿಕ ವ್ಯಕ್ತಿ ನಾಯಕನಾದರೂ ಕಾವ್ಯದಲ್ಲಿ ಆತನನ್ನು ತಾತ್ಕಾಲಿಕವಾಗಿ ಪೌರಾಣಿಕ ವ್ಯಕ್ತಿಯ ಮಟ್ಟಕ್ಕೆ ಏರಿಸುವುದೇ ಸ್ವಾಭಾವಿಕ. ಇದರಿಂದ ಬಾಣನಂತಹ ಕವಿಶ್ರೇಷ್ಠರು ಚಾರಿತ್ರಿಕ ವಸ್ತುವನ್ನು ಕುರಿತು ತಮ್ಮ ಕಾವ್ಯವನ್ನು ಬರೆದಾಗ ಚರಿತ್ರಕಾರರ ಗೌರವವನ್ನೆಂದಿಗೂ ಬಯಸುವುದಿಲ್ಲ; ಅವರಿಗೆ ಕವಿಗಳೆಂದು ಕರೆಸಿಕೊಳ್ಳಬೇಕೆಂದೇ ಬಯಕೆ; ಅವರ ದೃಷ್ಟಿಯಿಂದ ತಮ್ಮ ಕೃತಿ ಕಾವ್ಯವೇ ಹೊರತು ಚರಿತ್ರೆಯೆಂದಿಗೂ ಅಲ್ಲ. ಹರ್ಷಚರಿತೆಯ ಇನ್ನೊಂದು ವಿಶೇಷಲಕ್ಷಣವೆಂದರೆ ಬಾಣನು ಇದರಲ್ಲಿ

ಬಳಕೆಯಲ್ಲಿಲ್ಲದ ಪದಗಳನ್ನು ವಿಪುಲವಾಗಿ ತುಂಬಿದ್ದಾನೆ. ಈ ಕಾರಣದಿಂದ ಹರ್ಷ ಚರಿತೆಯು ಕಾದಂಬರಿಗಿಂತಲೂ ಓದಿ ಅರ್ಥಮಾಡಿಕೊಳ್ಳಲು ಕ್ಲಿಷ್ಟತರ. ಕಾದಂಬರಿ ಮತ್ತು ಹರ್ಷಚರಿತೆಗಳಲ್ಲಿ ಬಾಣನು ಹರ್ಷಚರಿತೆಯನ್ನೇ ಮೊದಲು ಬರೆದಂತೆ ತೋರುವುದು.*

ಕಾದಂಬರಿ

ಕಾದಂಬರಿಯಲ್ಲಿ ಇತಿವೃತ್ತದ ಸೋಗೂ ಇಲ್ಲ; ಬರಿಯ ಕಲ್ಪನೆ. ಆದರೆ ಹರ್ಷಚರಿತೆಯಂತೆಯೇ ಅಪೂರ್ಣ. ದುರ್ದೈವವಶಾತ್ ಬಾಣನು ಇದನ್ನು ಪೂರ್ತಿಗೊಳಿಸುವ ಮೊದಲೇ ಅನಿರೀಕ್ಷಿತವಾದ ಅಕಾಲಮೃತ್ಯುವಿಗೆ ತುತ್ತಾದನು. ಬಾಣನ ಮಗನಾದ ಭೂಷಣಭಟ್ಟ ಅಥವಾ ಪುಳಿನ (ಪುಳಿಂಧ್ರ?) ನು ಅದನ್ನು ಪೂರ್ಣಗೊಳಿಸಿದುದು ಪಿತೃಭಕ್ತಿಯಿಂದಲೆಂತಲೂ, ಪಾಂಡಿತ್ಯ ಪ್ರದರ್ಶನಕ್ಕೋಸ್ಕರ ವಲ್ಲವೆಂತಲೂ ತಿಳಿಸಿದ್ದಾನೆ. ಉತ್ತರಾರ್ಧವಾದ ಈತನ ಕೃತಿಯು ಬಾಣನಕೃತಿಯ ಮಟ್ಟಕ್ಕೆ ಏರುವುದಿಲ್ಲವೆಂದು ಎಲ್ಲರೂ ಒಪ್ಪುತ್ತಾರೆ. ಕಥೆಯಲ್ಲಿ ಅವಾಂತರ ವೈಷಮ್ಯ ಗಳನ್ನು ಸೇರಿಸಬೇಕೆಂಬ ಬಯಕೆಯೂ ಜೊತೆಗೆ ಶೀಘ್ರವಾಗಿ ಮುಗಿಸಬೇಕೆಂಬ ಸಂಭ್ರಮವೂ ಸೇರಿರುವಂತೆ ಕಾಣುತ್ತದೆ. ಭೂಷಣನು ತನ್ನ ತಂದೆಯ ಪ್ರಥಮ ವಾರ್ಷಿಕ ಶ್ರಾದ್ಧದ ದಿನವೇ ಈ ಕೃತಿಯನ್ನು ಮುಗಿಸಿರುವೆನೆಂದು ಹೇಳುತ್ತಾನೆ. ತಂದೆಯ ಶಬ್ದಧೋರಣೆಯ ಜೊತೆಗೆ ತನ್ನದನ್ನೂ ಸೇರಿಸಿದ್ದಾನೆ.

ಕಾದಂಬರಿಯ ಕಥೆ

ಗಂಧರ್ವರಾಜನಾದ ಹಂಸನಿಗೆ ರಾಣಿ ಗೌರಿಯಲ್ಲಿ ಮಹಾಶ್ವೇತೆಯೆಂಬ ಒಬ್ಬಳೇ ಮಗಳು ಜನಿಸುತ್ತಾಳೆ. ಗಂಧರ್ವ ಕುಲಕ್ಕೆಲ್ಲಾ ಅತ್ಯಂತ ಪ್ರೀತಿಪಾತ್ರಳಾದ ಈ ಮುದ್ದುಗುವರಿ ಕಾಲಕ್ರಮದಲ್ಲಿ ಅಸೀಮಸುಂದರಯುವತಿ ಯಾಗುತ್ತಾಳೆ. ವಸಂತಋತುವಿನಲ್ಲೊಂದುದಿನ, ಕೈಲಾಸಪರ್ವತದ ಸಮೀಪದಲ್ಲಿ ರುವ ಅಚ್ಛೋದವೆಂಬ ಸರೋವರಕ್ಕೆ ಸ್ನಾನಕ್ಕೋಸ್ಕರ ತನ್ನ ತಾಯಿಯಾದ ಗೌರಿ ಮತ್ತು ತಾಂಬೂಲಕರಂಕವಾಹಿನಿಯಾದ ತರಲಿಕೆ ಇವರೊಡನೆ ಬರುತ್ತಾಳೆ. ಸರಸ್ತೀರಪ್ರದೇಶದಲ್ಲಿ ಅಡ್ಡಾಡುತ್ತಿರುವಾಗ ಎಲ್ಲಿಂದಲೋ ಬೀರುತ್ತಿದ್ದ ಪುಷ್ಪ

* ಹರ್ಷಚರಿತೆಯ ಸ್ಥಾಣ್ವೀಶ್ವರ ಜನಪದ ವರ್ಣನೆಯನ್ನು 'ಸಂಸ್ಕೃತ ಗದ್ಯಕಲೆಯ ಸಂಕ್ಷಿಪ್ತ ಇತಿಹಾಸ'ದಲ್ಲಿ ಬಾಣನ ಶೈಲಿಯ ಉದಾಹರಣೆಯಾಗಿ ಕೊಟ್ಟಿದೆ. [ಪ್ರಬುದ್ಧ ಕರ್ಣಾಟಕ, ಸಂಪುಟ ೪೦ ಸಂಚಿಕೆ ೪ ; ಪುಟಗಳು ೧೨೧-೧೨೨].

ಸೌರಭದಿಂದ ಆಕೃಷ್ಟಳಾಗಿ ಅದರ ಆಕರವನ್ನರಸುತ್ತ ನಡೆಯಲು ರೂಪದಿಂದ ಮನ್ಮಥ ನನ್ನು ನಾಚಿಸುವ ಮುನಿಕುಮಾರನೊಬ್ಬನು ತನ್ನ ಮಿತ್ರನೊಡನೆ ಇದಿರಿನಲ್ಲಿ ಆಗಮಿಸು ತ್ತಿದ್ದುದನ್ನು ಕಾಣುತ್ತಾಳೆ; ಕುತೂಹಲದಿಂದ ಅವನನ್ನು ನೋಡುತ್ತಿದ್ದಂತೆಯೇ ಪ್ರೇಮಪರವಶಳಾಗುತ್ತಾಳೆ. ಶ್ವೇತಕೇತುವಿನ ದರ್ಶನ ಮಾತ್ರದಿಂದಲೇ ಲಕ್ಷ್ಮೀ ದೇವಿಯಲ್ಲಿ ಜನಿಸಿದ ಪುಂಡರೀಕನೆಂಬ ಈ ಋಷಿಕುಮಾರನು ಅನುಪಮ ಸುಂದರಿ ಯಾದ ಮಹಾಶ್ವೇತೆಯನ್ನು ಕಂಡು ಮದನವಿಕಾರವನ್ನು ಹೊಂದುತ್ತಾನೆ; ಕಿವಿಯ ಮೇಲೆ ತಾನು ಧರಿಸಿದ್ದ ಪುಷ್ಪಮಂಜರಿಯನ್ನು ಆಕೆಯ ಇಚ್ಛೆಯಂತೆ ಆಕೆಗೆ ಕೊಡು ವಾಗ ತನ್ನ ಅಕ್ಷಮಾಲೆಯು ಬೆರಳುಗಳಿಂದ ಜಾರುತ್ತಿದ್ದುದೂ ಅವನಿಗೆ ಅರಿವಾಗ ಲಿಲ್ಲ. ನೆಲಕ್ಕೆ ಬೀಳುವ ಮೊದಲೇ ಮಹಾಶ್ವೇತೆ ಅದನ್ನು ತೆಗೆದುಕೊಂಡು ತನ್ನ ಕೊರಳಿನಲ್ಲಿ ಧರಿಸಿಕೊಳ್ಳುತ್ತಾಳೆ. ಸ್ನಾನಕ್ಕಾಗಿ ತನ್ನ ತಾಯಿಯು ತ್ವರೆಮಾಡಿದಳೆಂದು ಅವಳು ಸ್ವಲ್ಪ ಮುಂದೆ ಹೋಗಲು ಪಾರ್ಶ್ವಸ್ಥನಾದ ಕಪಿಂಜಲನು ಪುಂಡರೀಕ ನಿಗೆ ಅನೇಕವಿಧವಾದ ಎಚ್ಚರಿಕೆಯನ್ನೀಯುತ್ತಾನೆ. ತನ್ನ ಅಕ್ಷಮಾಲಿಕೆಯನ್ನು ಹಿಂದಕ್ಕೆ ಕೊಡೆಂದು ಕೇಳಲು ಬಂದ ಪುಂಡರೀಕನು ಶೂನ್ಯಚಿತ್ತನಾಗಿದ್ದುದನ್ನು ಕಂಡು ಮಹಾಶ್ವೇತೆಯು ಬೇಕೆಂತಲೇ ತನ್ನ ಮುತ್ತಿನ ಹಾರವನ್ನು ಅವನ ಕೈಯಲ್ಲಿಟ್ಟು, ಅವನು ಅಲ್ಲಿಂದ ಹೊರಟ ಮೇಲೆ ತಾನೂ ಸ್ನಾನಾನಂತರ ಪುಂಡರೀಕಾಕ್ರಾಂತ ಹೃದಯಳಾಗಿ ಹೇಮಕೂಟವನ್ನು ಸೇರುತ್ತಾಳೆ. ಋಷಿಕುಮಾರನು ಸ್ವಲ್ಪ ಹಿಂದೆ ಇದ್ದ ತರಲಿಕೆಯನ್ನು ಕಂಡು ಅವಳಿಂದ ಮಹಾಶ್ವೇತೆ ಯಾರೆಂಬುದನ್ನು ತಿಳಿದು ಆಕೆಯ ಮೂಲಕ ಗುಟ್ಟಾಗಿ ಒಂದು ಪ್ರಣಯಪತ್ರವನ್ನು ಕಳಿಸುತ್ತಾನೆ. ಸಾಯಂ ಕಾಲದಲ್ಲಿ ಕಪಿಂಜಲನು ಬಂದು ಪುಂಡರೀಕನು ದಶಮಾವಸ್ಥೆಯನ್ನು ಸಮೀಪಿಸು ತ್ತಿರುವುದನ್ನು ಮಹಾಶ್ವೇತೆಗೆ ತಿಳಿಸಿ ತನ್ನ ಪ್ರಿಯಮಿತ್ರನ ಪ್ರಾಣರಕ್ಷಣೆಗಾಗಿ ಯತ್ನಿಸುವಂತೆ ಬೇಡಿಕೊಳ್ಳುತ್ತಾನೆ. ತೌರುಮನೆಗೆ ತನ್ನಿಂದಾಗುವ ಅಪಮಾನದಿಂದ ಭೀತಳಾದ ಮಹಾಶ್ವೇತೆಯು ಹೊರಡುವುದು ಸ್ವಲ್ಪ ತಡವೇ ಆಗುತ್ತದೆ. ಬರುವಷ್ಟ ರಲ್ಲಿ, ಚಂದ್ರನನ್ನು ಎರಡು ಜನ್ಮಗಳಲ್ಲಿ ಪ್ರೇಮಭಂಗದಿಂದ ನರಳುವಂತೆ ಶಪಿಸಿ, ಚಂದ್ರ ನಿಂದ, ತಾನೂ ಚಂದ್ರನೊಡನೆ ಜನ್ಮಧರಿಸುವಂತೆ ಪ್ರತಿಶಪ್ತನಾಗಿ ಪುಂಡರೀಕನು ಮದನಾಗ್ನಿಗೆ ಆಗತಾನೇ ಆಹುತಿಯಾಗಿದ್ದಾನೆ. ವಲ್ಲಭನೊಂದಿಗೆ ಚಿತಾರೋಹಣ ಕ್ಕೆಂದು ಮಹಾಶ್ವೇತೆಯು ಸಿದ್ಧಳಾಗುತ್ತಿರಲು ಚಂದ್ರಮಂಡಲದಿಂದ ಶ್ವೇತವಸ್ತ್ರ ಧಾರಿಯಾದ ದಿವ್ಯಪುರುಷನೊಬ್ಬನು ಇಳಿದು ಬಂದು ವೇಗದಿಂದ ಪುಂಡರೀಕನ ದೇಹವನ್ನು ತೆಗೆದುಕೊಂಡು ಸ್ವಲ್ಪಕಾಲದಲ್ಲಿಯೇ ಪ್ರಿಯಸಮಾಗಮವಾಗುವ ಸಂಭವವಿರುವುದರಿಂದ ಪ್ರಾಣತ್ಯಾಗ ಮಾಡಕೂಡದೆಂದು ಮಹಾಶ್ವೇತೆಗೆ ಹೇಳುತ್ತಾ

ತಾರಾಮಂಡಲವನ್ನು ಸೇರುತ್ತಾನೆ. ಮಿತ್ರಪ್ರೇಮದಿಂದ ದಿವ್ಯಪುರುಷನನ್ನೇ ಹಿಂಬಾಲಿಸಿ ಕಪಿಞ್ಜಲನೂ ಆಕಾಶಕ್ಕೆ ಹಾರಿದನು. ದಿವ್ಯಪುರುಷನು ತಾನು ಚಂದ್ರನೆಂದು ತಿಳಿಸಿ, ಪುಂಡರೀಕನ ಶಾಪದ ಶೀಘ್ರಪರಿಹಾರಕ್ಕಾಗಿ ಶ್ವೇತಕೇತುವನ್ನು ನೋಡೆಂದು ಪ್ರೇರಿಸಲು, ಕಪಿಂಜಲನು ಶ್ವೇತಕೇತುವಿನ ಆಶ್ರಮಕ್ಕೆ ಹೊರಡುತ್ತಾನೆ. ಹೋಗುವ ಸಂಭ್ರಮದಲ್ಲಿ, ಕುದುರೆಯಂತೆ ನೆಗೆದು ವೈಮಾನಿಕನೊಬ್ಬನನ್ನು ದಾಟಿದ್ದರಿಂದ, ಕುಪಿತನಾದ ಆ ಗಗನಚಾರಿಯು ಕುದುರೆಯಾಗಿ ಹುಟ್ಟೆಂದು ಶಪಿಸುತ್ತಾನೆ. ಇತ್ತ ದಿವ್ಯಪುರುಷನ ಅಣತಿಯಂತೆ ಮಹಾಶ್ವೇತೆಯು ಭರ್ತೃಸಮಾಗಮಕ್ಕೋಸ್ಕರ ಜೀವಧಾರಣೆಮಾಡಿದವಳಾಗಿ, ತನ್ನ ತಂದೆತಾಯಿಗಳ ಅನುಮತಿ ಪಡೆದು ಅಚ್ಛೋದ ಸರಸ್ತೀರದ ಸಿದ್ಧಾಯತನದಲ್ಲಿ ತಪಶ್ಚರ್ಯೆಗಾಗಿ ನೆಲಸಿ ಸರ್ವಲೋಕೇಶ್ವರನಾದ ಶಿವನನ್ನು ನಿರಂತರವೂ ಅರ್ಚಿಸುತ್ತಿದ್ದಾಳೆ. ಅತ್ತ ಚಿತ್ರರಥಮದಿರಾಪುತ್ರಿಯಾದ ಕಾದಂಬರಿಯು ಪ್ರಾಪ್ತವಯಸ್ಕಳಾಗಿದ್ದರೂ ಗೆಳತಿಯಾದ ಮಹಾಶ್ವೇತೆಗೆ ಒದಗಿರುವ ಕಷ್ಟ ಪರಿಹರಿಸುವವರೆಗೆ ತಾನೂ ಬ್ರಹ್ಮಚರ್ಯದಲ್ಲಿರುವೆನೆಂದು ನಿರ್ಧರಿಸುತ್ತಾಳೆ. ಅನ್ಯೋನ್ಯಶಾಪನಿಮಿತ್ತವಾಗಿ ಜನ್ಮತಾಳಬೇಕಾಗಿ ಬರಲು ಚಂದ್ರನೂ ಪುಂಡರೀಕನೂ ಉಜ್ಜಯಿನಿಯಲ್ಲಿ ರಾಜನಾದ ತಾರಾಪೀಡ ಮತ್ತು ಮಂತ್ರಿಯಾದ ಶುಕನಾಸ ಇವರಿಗೆ ಕ್ರಮವಾಗಿ ಚಂದ್ರಾಪೀಡ ಮತ್ತು ವೈಶಮ್ಪಾಯನರೆಂಬ ಮಕ್ಕಳಾಗಿ ಹುಟ್ಟುತ್ತಾರೆ. ಸಕಲ ವಿದ್ಯಾಪಾರಂಗತರಾದಮೇಲೆ ಇವರು ಒಮ್ಮೆ ದಿಗ್ವಿಜಯಕ್ಕೆಂದು ಹೊರಡುತ್ತಾರೆ. ಋಷಿ ಶಾಪದಿಂದ ಕುದುರೆಯ ಜನ್ಮವನ್ನು ಪಡೆದಿದ್ದ ಕಪಿಞ್ಜಲನು ಇಂದ್ರಾಯುಧವೆಂಬ ಹೆಸರಿನಿಂದ ಚಂದ್ರಾಪೀಡನ ವಾಹನವಾಗುತ್ತಾನೆ. ಭೂಲೋಕದಲ್ಲಿ ಅವತರಿಸಿದ ಚಂದ್ರನ ಸೇವೆಗಾಗಿ ಪತ್ರಲೇಖೆ ಎಂಬ ಹೆಸರಿನಿಂದ ಕುಲೂತ (ಅಥವಾ ಕುಂತಲ) ರಾಜನ ಮಗಳಾಗಿ ಹುಟ್ಟಿದ್ದ ರೋಹಿಣಿಯು ಮಹಾರಾಣಿ ವಿಲಾಸವತಿಯಿಂದ ನಿಯುಕ್ತಳಾಗಿ, ಚಂದ್ರಾಪೀಡನ ಜೊತೆಯಲ್ಲಿಯೇ ಹೊರಡುತ್ತಾಳೆ. ಹಿಮಾಲಯದಲ್ಲಿರುವ ಕಿರಾತರನ್ನು ಸದೆಬಡಿದು ಕುಮಾರನು ಸುವರ್ಣಪುರದಲ್ಲಿ ಸೈನ್ಯದ ವಿಶ್ರಾಂತಿಗಾಗಿ ಪಾಳೆಯಬಿಡುತ್ತಾನೆ. ಒಂದು ದಿನ ಮೃಗಯಾವಿಹಾರದಲ್ಲಿರುವಾಗ ರಾಜಪುತ್ರನು ಕಿನ್ನರದಂಪತಿಗಳನ್ನು ನೋಡಿ, ಹಿಡಿಯಬೇಕೆಂದು ಹಿಂಬಾಲಿಸಿ ಇಂದ್ರಾಯುಧವನ್ನೇರಿ ಹೊರಡುತ್ತಾನೆ. ಇಂದ್ರಾಯುಧವು ತನ್ನ ಪೂರ್ವಜನ್ಮ ಸ್ಮರಣೆಯಿಂದ ಚಂದ್ರಾವತಾರನಾದ ಚಂದ್ರಾಪೀಡನನ್ನು ಉದ್ದೇಶಪೂರ್ವಕವಾಗಿಯೇ ಸಿದ್ಧಾಯತನದ ಬಳಿಗೆ ತರುತ್ತದೆ. ಚಂದ್ರಾಪೀಡನು ಮಹಾಶ್ವೇತೆಯನ್ನು ಕಾಣುತ್ತಾನೆ. ಮಹಾಶ್ವೇತೆ ತನ್ನ ಕರುಣಕಥೆಯನ್ನು ತಿಳಿಸಿ, ಬ್ರಹ್ಮಚರ್ಯವ್ರತವನ್ನು ಸಂಕಲ್ಪಿಸಿದ್ದ ಕಾದಂಬರಿಯನ್ನು ವಿವಾಹಕ್ಕೆ

ಅನುನಯಗೊಳಿಸಲೆಂದು ಚಂದ್ರಾಪೀಡನನ್ನು ಕರೆದುಕೊಂಡು ಹೇಮಕೂಟಕ್ಕೆ ಬರುತ್ತಾಳೆ. ಅಲ್ಲಿ, ಕಾದಂಬರಿಯೂ ಚಂದ್ರಾಪೀಡನೂ ಪರಸ್ಪರ ಅನುರಕ್ತರಾಗುತ್ತಾರೆ. ಆದರೆ ಚಂದ್ರಾಪೀಡನು ಪಿತೃನಿದೇಶದಿಂದ ಕೂಡಲೇ ಉಜ್ಜಯನಿಗೆ ಹೊರಡಬೇಕಾಗುತ್ತದೆ. ಅಚ್ಛೋದ ಸರಸ್ಸಿನ ಬಳಿಯಲ್ಲಿ ಸೈನ್ಯವನ್ನು ವಿಶ್ರಾಂತಿಗಾಗಿ ಬಿಟ್ಟು ಸೈನ್ಯವನ್ನು ತೆಗೆದುಕೊಂಡು ಆದಷ್ಟು ಬೇಗಬರುವಂತೆ ವೈಶಂಪಾಯನನಿಗೆ ಆಜ್ಞೆ ಕೊಟ್ಟು ಉಜ್ಜಯಿನಿಗೆ ಹೊರಡುತ್ತಾನೆ. ಚಂದ್ರಾಪೀಡನು ಉಜ್ಜಯಿನಿಗೆ ಬಂದ ಕೆಲವು ದಿನಗಳಲ್ಲಿಯೇ ಪತ್ರಲೇಖೆಯು ಹೇಮಕೂಟದಿಂದ ಬಂದು ಕಾದಂಬರಿಯ ವಿರಹವನ್ನು ವಿಸ್ತರಿಸುತ್ತಾಳೆ. ರಾಜಪುತ್ರನು ವೈಶಮ್ಪಾಯನನನ್ನು ಕರೆತರಲು ದಶಪುರಕ್ಕೆ ಬರುತ್ತಾನೆ. ವೈಶಮ್ಪಾಯನನು ಅಚ್ಛೋದ ಸರಸ್ತೀರಪ್ರಾಂತವನ್ನು ತಲುಪಿದ ಕೂಡಲೇ ಯಾವುದೋ ಒಂದು ವಿಧವಾದ ವಿಕಾರಕ್ಕೆ ಒಳಗಾಗಿ ಆ ಸ್ಥಳವನ್ನು ಬಿಟ್ಟು ತಾನು ಕದಲುವುದಿಲ್ಲವೆಂದು ತಿಳಿಸಿದ ಮೇಲೆ ಸೈನ್ಯವು ನಗರಾಭಿಮುಖವಾಗಿ ಹೊರಟದ್ದನ್ನು ಕೇಳಿ ರಾಜಕುಮಾರನು ಪುನಃ ನಗರಿಗೇ ಹಿಂದಿರುಗುತ್ತಾನೆ. ಅನಂತರ ತಂದೆಯ ಅಪ್ಪಣೆಯನ್ನು ಪಡೆದು ಸೈನ್ಯಸಮೇತನಾಗಿ ಅಚ್ಛೋದ ಸರೋವರಕ್ಕೆ ಬರುತ್ತಾನೆ.

ಇಷ್ಟರಲ್ಲಿ ವೈಶಮ್ಪಾಯನನು ಪೂರ್ವಜನ್ಮದ ವಾಸನೆಯಿಂದ, ಕಳೆದುಹೋಗಿದ್ದ ಏನೋ ಒಂದು ವಸ್ತುವನ್ನು ಸ್ಮರಿಸಿಕೊಂಡವನಂತೆ ಅಚ್ಛೋದ ಸರಃಪ್ರಾನ್ತವನ್ನೆಲ್ಲಾ ಹುಡುಕುತ್ತಾ ಹೇಮಕೂಟದಿಂದ ಅದೇ ತಾನೇ ಹಿಂತಿರುಗಿದ್ದ ಮಹಾಶ್ವೇತೆಯನ್ನು ಕಂಡು ಮದನಪರವಶನಾಗಿ ಅವಳನ್ನು ರತಿಸುಖಕ್ಕಾಗಿ ಪೀಡಿಸಿ ಗಿಳಿಯಾಗುವಂತೆ ಶಾಪಹೊಂದಿ ಕೂಡಲೇ ಶರೀರತ್ಯಾಗಮಾಡುತ್ತಾನೆ. ಸೈನಿಕರು ಶಾಪದಿಂದ ಮೃತನಾದವನು ಚಂದ್ರಾಪೀಡನ ಪ್ರಿಯಸಖನೆಂದು ತಿಳಿಸಲು ಮಹಾಶ್ವೇತೆಯು ಶೋಕನಿಮಗ್ನಳಾಗುತ್ತಾಳೆ. ಚಂದ್ರಾಪೀಡನು ಮಹಾಶ್ವೇತೆಯಿಂದ ಈ ಸುದ್ದಿಯನ್ನು ಕೇಳಿ ಪ್ರಾಣತ್ಯಾಗಮಾಡುತ್ತಾನೆ. ಅಷ್ಟರಲ್ಲಿ ಕಾದಂಬರಿಯು ಅಲ್ಲಿಗೆ ಬಂದು ತನ್ನ ಪ್ರಿಯನು ಮರಣಹೊಂದಿರುವುದನ್ನು ಕಂಡು ಸಹಗಮನಕ್ಕೆ ಸಿದ್ಧಳಾಗುತ್ತಾಳೆ. ಸಹಗಮನಕ್ಕೆ ಮೊದಲು ಪತಿಯಪಾದಗಳನ್ನು ಮುಟ್ಟಲು ಕೂಡಲೇ ಹೊರಬಿದ್ದ ಚಾಂದ್ರತೇಜಸ್ಸು ಮಹಾಶ್ವೇತೆಗೂ ಕಾದಂಬರಿಗೂ ಭರ್ತೃಸಮಾಗಮದ ಆಶ್ವಾಸನವನ್ನಿತ್ತು ಮಾಯವಾಗುತ್ತದೆ. ಚಾಂದ್ರತೇಜಸ್ಸಿನ ಸ್ಪರ್ಶವುಂಟಾದ ಕೂಡಲೇ ತನ್ನ ನಿಜಸ್ವರೂಪದ ಅರಿವಾಗಲು ಪತ್ರಲೇಖೆಯು ಕೂಡಲೇ ಇಂದ್ರಾಯುಧವನ್ನು ಹತ್ತಿ ಅಚ್ಛೋದ ಸರಸ್ಸಿನಲ್ಲಿ ಮುಳುಗುತ್ತಾಳೆ. ಶಾಪಾವಸಾನದಿಂದ ಕುದುರೆಯ ರೂಪವನ್ನು ತೊರೆದ ಕಪಿಂಜಲನು ಮಹಾಶ್ವೇತೆಯ ಬಳಿಗೆ

ಬಂದು ತಾನು ಚಂದ್ರಲೋಕಕ್ಕೆ ಹೋದದ್ದು ಮೊದಲುಗೊಂಡು ಎಲ್ಲವನ್ನೂ ವಿವರಿಸಿ ಗಿಳಿಯಾಗೆಂದು ಮಹಾಶ್ವೇತೆಯಿಂದ ಶಪಿಸಲ್ಪಟ್ಟ ವೈಶಂಪಾಯನನೇ ಪುಂಡರೀಕನೆಂದು ಹೇಳುತ್ತಾನೆ. ಇದನ್ನು ಕೇಳಿ ಮಹಾಶ್ವೇತೆಯು ಎದೆ ಚಚ್ಚಿಕೊಂಡು ಅಳುತ್ತಾಳೆ. ಕಪಿಂಜಲನು ಆಕೆಯನ್ನು ಸಮಾಧಾನಗೊಳಿಸಿ ಚಂದ್ರನಮಾತಿನಂತೆ ಶ್ವೇತಕೇತುವನ್ನು ಕಾಣಲು ಆಕಾಶಕ್ಕೆ ನೆಗೆಯುತ್ತಾನೆ. ಇಷ್ಟರಲ್ಲಿ ವೈಶಂಪಾಯನನು ಶಾಪಕಾರಣದಿಂದ ವಿಂಧ್ಯಾಟವಿಯಲ್ಲಿ ಗಿಳಿಯಾಗಿ ಜನಿಸಿ ತಾಯಿತಂದೆಗಳನ್ನು ಕಳೆದುಕೊಂಡು ದೈವಯೋಗದಿಂದ ಜಾಬಾಲಿಯ ಆಶ್ರಮವನ್ನು ಸೇರಿ ಅಲ್ಲಿ ತನ್ನ ಪೂರ್ವಜನ್ಮವೃತ್ತಾಂತವನ್ನೆಲ್ಲ ಜಾಬಾಲಿಯಿಂದ ಅರಿಯುತ್ತಾನೆ. ಶ್ವೇತಕೇತುವಿನ ಅಪ್ಪಣೆಯಂತೆ ಕಪಿಂಜಲನು ಜಾಬಾಲಿಯ ಆಶ್ರಮಕ್ಕೆ ಬಂದು ಶುಕರೂಪಿಯಾದ ವೈಶಂಪಾಯನನಿಗೆ ಮತ್ತೆ ದುಡುಕಿ ತೊಂದರೆಗೊಳಗಾಗದಂತೆ ಬುದ್ಧಿವಾದವನ್ನು ಹೇಳುತ್ತಾನೆ. ಆದರೂ ಪೂರ್ವಜನ್ಮದ ನೆನಪು ಬಂದೊಡನೆ ಮಹಾಶ್ವೇತೆಯ ಮೇಲಿನ ಪ್ರೇಮವು ಜಾಗೃತವಾಗಿ ಶುಕರೂಪಿಯಾದ ವೈಶಂಪಾಯನನು ಆಶ್ರಮದಿಂದ ತಪ್ಪಿಸಿಕೊಳ್ಳುತ್ತಾನೆ. ಇಷ್ಟರಲ್ಲಿ ಚಂಡಾಲಕನ್ಯೆಯಾಗಿ ಜನಿಸಿದ್ದ ಲಕ್ಷ್ಮಿಯು ಇದನ್ನು ಹಿಡಿದು ಪಂಜರದಲ್ಲಿ ಹಾಕುತ್ತಾಳೆ. ಚಂದ್ರಾಪೀಡನು ವಿದಿಶಾನಗರದ ಅರಸನಾದ ಶೂದ್ರಕನಾಗಿ ಜನಿಸಿರಲು ಚಂಡಾಲಕನ್ಯೆಯು ಗಿಳಿಯನ್ನು ತಂದು ಅವನಿಗೆ ಅರ್ಪಿಸುತ್ತಾಳೆ. ಅದು ಅವನಿಗೆ ತನ್ನ ಪೂರ್ವ ವೃತ್ತಾಂತವೆಲ್ಲವನ್ನೂ ಕಥಾರೂಪದಲ್ಲಿ ತಿಳಿಸುತ್ತದೆ. ಇಷ್ಟಾದರೂ ಮಗನೆಂದು ತನ್ನನ್ನು ಕರೆಯುವ ಚಂಡಾಲಕನ್ಯೆ ಯಾರೆಂದು ಗಿಳಿಗೆ ತಿಳಿಯದು. ರಾಜನು ಕುತೂಹಲದಿಂದ ಆಕೆಯನ್ನು ಕರೆಸಿ ಕೇಳಲು ಆಕೆಯು ತಾನೇ ಲಕ್ಷ್ಮಿಯೆಂದೂ ಗಿಳಿಯಾಗಿರುವ ವೈಶಂಪಾಯನನೇ ಪುಂಡರೀಕನೆಂದೂ ರಾಜನಾಗಿರುವ ಶೂದ್ರಕನೇ ಚಂದ್ರಾಪೀಡನೆಂದೂ ತಿಳಿಸಲು ಕಾದಂಬರಿಯು ನೆನಪುಂಟಾಗಿ ಶೂದ್ರಕಮಹಾರಾಜನು ಕೂಡಲೇ ದೇಹತ್ಯಾಗ ಮಾಡುತ್ತಾನೆ.

ಇತ್ತ ಮಹಾಶ್ವೇತೆಯ ಆಶ್ರಮದಲ್ಲಿ ವಸಂತಋತುವು ಆರಂಭಿಸಲು ಒಂದು ಸಲ ಮದನ ಪರವಶಳಾದ ಕಾದಂಬರಿಯು ಚಂದ್ರಾಪೀಡನ ಶರೀರವನ್ನು ಬಿಗಿದಪ್ಪಲು, ಕೂಡಲೇ ಚಂದ್ರಾಪೀಡನು ನಿದ್ರೆಯಿಂದ ಎಚ್ಚೆತ್ತವನಂತೆ ಏಳುತ್ತಾನೆ. ಗಿಳಿಯಾಗಿದ್ದ ವೈಶಂಪಾಯನನು ಮಹಾಶ್ವೇತೆಗೆ ಪ್ರಿಯವಾಗಿದ್ದ ಪುಂಡರೀಕ ರೂಪಿನಿಂದಲೇ ಅಲ್ಲಿಗೆ ಬಂದು ಸೇರುತ್ತಾನೆ. ಬಂಧುಸಮಾಗಮ, ವಿವಾಹ ಮತ್ತು ರಾಜ್ಯಪ್ರಾಪ್ತಿ ಇವುಗಳೊಂದಿಗೆ ಕಥೆ ಮುಗಿಯುತ್ತದೆ. ಕಾದಂಬರಿಯ ಕಥೆಯೇನೋ ಹೀಗಿದ್ದರೂ ಬಾಣನು ಇದನ್ನು ಜೋಡಿಸಿರುವ ರೀತಿಯೇ ಬೇರೆ. ಪುಂಡರೀಕನ ಶಾಪದಿಂದ

ಭೂಮಿಯಲ್ಲಿ ಅವತರಿಸಬೇಕಾಗಿ ಬಂದ ಚಂದ್ರನ ಮೂರನೆಯ ಜನ್ಮ ಶೂದ್ರಕರಾಜ. ಚಂದ್ರನ ಪ್ರತಿಶಾಪದಿಂದ ಜನ್ಮಾಂತರವನ್ನು ಹೊಂದಿದ ಪುಂಡರೀಕನ ಮೂರನೆಯ ಜನ್ಮ ವೈಶಮ್ಪಾಯನಶುಕ. ಮಗನು ದುಡುಕಿ ಪುನರಪಿ ಇನ್ನೂ ಹೆಚ್ಚಿನ ತೊಂದರೆಗೊಳಗಾಗದಂತೆ ನೋಡಿಕೊಳ್ಳಲು ಚಂಡಾಲಕನ್ಯಾರೂಪವನ್ನು ಧರಿಸಿರುವ ಲಕ್ಷ್ಮಿಯು ಈ ಶುಕವನ್ನು ಶೂದ್ರಕನಿಗೆ ತಂದುಕೊಡಲು, ಜಾಬಾಲಿಮುನಿಯ ಅನುಗ್ರಹದಿಂದ ವಾಕ್ಛಕ್ತಿಯನ್ನೂ ಜನ್ಮಾಂತರಸ್ಮರಣವನ್ನೂ ಪಡೆದಿದ್ದ ಗಿಳಿ ವೈಶಮ್ಪಾಯನನು ತನ್ನ ವೃತ್ತಾಂತವನ್ನು ಶೂದ್ರಕನಿಗೆ ನಿರೂಪಿಸುತ್ತಾನೆ. ಕಥೆಯು ಆರಂಭಿಸುವುದು ಈ ಶೂದ್ರಕನ ವರ್ಣನೆಯಿಂದ. ಓದುಗರಿಗೆ ಶೂದ್ರಕನೇ ಕಥಾ ನಾಯಕನಾದ ಚಂದ್ರಾಪೀಡನೆಂದು ಗೊತ್ತಾಗುವುದು ಕೊನೆಯಲ್ಲಿ. ಇದರಿಂದಾಗಿ ಕಥೆಯು ಚಮತ್ಕಾರಪೂರ್ಣವಾಗಿದೆ ಮತ್ತು ಮನೋಹರವಾಗಿದೆ.

ಕಥಾ ಸಾಹಿತ್ಯದಲ್ಲಿ, ಅದರಲ್ಲಿಯೂ ಕಾದಂಬರಿಯಲ್ಲಿ ಗಿಳಿಯ ಪಾತ್ರ ಬಹಳ ದೊಡ್ಡದು. ಕಥನದ ಬಹು ಮುಖ್ಯಭಾಗವೆಲ್ಲ ಗಿಳಿಯದೆ. ಕಾದಂಬರಿಯ ಕೊನೆಯ ಸ್ವಲ್ಪವನ್ನುಬಿಟ್ಟು ಉಳಿದ ಕಥೆಯೆಲ್ಲವೂ ಗಿಳಿಯಿಂದ ರಾಜನಿಗೆ ಹೇಳಲ್ಪಟ್ಟಿದೆ. ಕಥೆಯಲ್ಲಿ ಕಥೆಯನ್ನು ತೊಡಕಿಸುವ ಕಥಾಸಂಪ್ರದಾಯದ ಪೂರ್ಣಲಾಭವನ್ನು ಕಾದಂಬರಿಯಲ್ಲಿ ಪಡೆಯಲಾಗಿದೆ. ಬಾಣನು ಕಾದಂಬರಿಯನ್ನು ಪೂರ್ತಿಯಾಗಿ ಬರೆಯಲಾಗಲಿಲ್ಲ; ಸ್ಪೆನ್ಸರನಂತೆ ಬಾಣನು ಅತಿ ದೀರ್ಘವಾದ ಯೋಜನೆಯನ್ನು ಹಾಕಿಕೊಂಡು ಮುಗಿಸಲು ಶಕ್ತನಾಗಲಿಲ್ಲ. ಚಂದ್ರಾಪೀಡನು ತಂದೆಯ ಆಜ್ಞೆಯಂತೆ ಹೇಮಕೂಟದಿಂದ ಹಿಂದಿರುಗಿ ಬಂದಮೇಲೆ ಪತ್ರಲೇಖೆಯ ಮೂಲಕವಾಗಿ ಕಾದಂಬರಿಯು ಅವನಿಗೆ ಕಳಿಸಿದ ಪ್ರೇಮಸಂದೇಶದೊಂದಿಗೆ ಬಾಣನ ಕೃತಿ ಮುಗಿಯುತ್ತದೆ. ವಸ್ತುವು ಅಂಕುರಿಸಿದೆ, ಆದರೆ ವಿಕಸಿಸಿಲ್ಲ. ಉಳಿದ ಅರ್ಧವನ್ನು ಭೂಷಣಭಟ್ಟನು ಚಾತುರ್ಯದಿಂದಲೇ ಬೆಳಸಿ ಪೂರ್ಣಗೊಳಿಸಿದ್ದಾನೆ.

ಬಾಣನು ಕಾದಂಬರಿಯನ್ನು ಬೃಹತ್ಕಥೆಯ ಸಮನಸ್ (ಸ) ಎಂಬ ರಾಜನ ಕಥೆಯ ಆಧಾರದಮೇಲೆ ಬರೆದಿರುವನೆಂದು ತಿಳಿದುಬರುತ್ತದೆ. ಹೆಸರುಗಳೆಲ್ಲಾ ಇಲ್ಲಿ ಬೇರೆಯಾಗಿವೆ. ಬೃಹತ್ಕಥೆಯಲ್ಲಿ ಒಬ್ಬನೇ ಕಿನ್ನರ, ಇಲ್ಲಿ ಕಿನ್ನರದ್ವಯ; ಅಲ್ಲಿನ ವಿದ್ಯಾಧರರಿಗೆ ಪ್ರತಿಯಾಗಿ ಇಲ್ಲಿ ಗಂಧರ್ವರು ಮತ್ತು ಅಪ್ಸರೆಯರು. ಬಾಣನ ಶೃಂಗಾರವು ಸುಸಂಸ್ಕೃತವಾದುದು ಮತ್ತು ರಮ್ಯವಾದುದು. ರಾಜಕುಮಾರನನ್ನು ನೋಡಲೆಂದೇ ವ್ಯಾಜಾಂತರದಿಂದ ತನ್ನ ಪ್ರಾಸಾದವನ್ನೇರಿದ ಕಾದಂಬರಿಯ ಮನೋಭಾವಗಳನ್ನು ವರ್ಣಿಸುವಾಗ, ಬಾಣನು, ಪ್ರಥಮತಃ ಅನುರಾಗಕ್ಕೊಳಗಾದ ಬಾಲೆಯ ಮನಸ್ಸಿನಲ್ಲಿ ಉದಿಸುವ ಯುವತಿಸಹಜವಾದ ಚಾಂಚಲ್ಯ ಮತ್ತು ಕನ್ಯಾ

ಸಹಜವಾದ ಲಜ್ಜೆ ಇವೆರಡರ ವಿಷಯದಲ್ಲಿ ಆಶ್ಚರ್ಯಕರವಾದ ಅಂತರ್ದೃಷ್ಟಿಯನ್ನು ಮುಟ್ಟಿದ್ದಾನೆ.

ಸಾಹಿತ್ಯದಲ್ಲಿ ನಿರ್ವ್ಯಾಜಮೈತ್ರೀನಿರೂಪಣ ವಿರಳವೇ. ಆದರೆ ಕಾದಂಬರಿಯಲ್ಲಿ ಕಪಿಂಜಲನ ಪಾತ್ರ ನಿರ್ವ್ಯಾಜಮೈತ್ರಿಯ ಪರಾಕಾಷ್ಠೆಯನ್ನು ಮುಟ್ಟಿದೆ. ಲೋಕಾನ್ತರಗಮನ, ಶಾಪ, ಶ್ವಾಪದಜನ್ಮ ಇವುಗಳನ್ನೆಲ್ಲ ಅನುಭವಿಸಿ ಮಿತ್ರನ ಅಭ್ಯುದಯವೊಂದನ್ನೇ ಫಲವನ್ನಾಗಿ ಪಡೆದ ಕಪಿಂಜಲನು ನಿರ್ವ್ಯಾಜಮೈತ್ರಿಯ ಮುದ್ದೆ. ಶಾಪದಿಂದ ಗಿಳಿಯಾಗಿದ್ದ ಪುಂಡರೀಕ (ವೈಶಂಪಾಯನ) ನನ್ನು ಜಾಬಾಲಿಯ ಆಶ್ರಮದಲ್ಲಿ ಕಂಡಾಗ ಕಪಿಂಜಲನ ಹೃದಯವು ಶೋಕ ಆನಂದಗಳಿಂದ ತುಂಬುತ್ತದೆ; ಹೇಗೆ ಅವನನ್ನು ಆದರಿಸಬೇಕೆಂದು ತೋರದೆ ಆ ಗಿಳಿಯನ್ನು ಒಮ್ಮೆ ಎದೆಯಮೇಲೂ ಒಮ್ಮೆ ತಲೆಯಮೇಲೂ ಇಟ್ಟುಕೊಂಡು ಚಿಕ್ಕಹುಡುಗನಂತೆ ರೋದಿಸುತ್ತಾನೆ. ಬಾಣ ಮತ್ತು ಭೂಷಣರ ಮೈತ್ರೀಕಲ್ಪನೆ ಸರ್ವಾತಿಶಾಯಿನಿಯಾಗಿ ಪರಿಣಮಿಸಿದೆ.

ಬಾಣನಲ್ಲಿ ದೋಷಗಳಿಲ್ಲದೆ ಇಲ್ಲ; ವಿವರಗಳನ್ನು ಬೆಳಸಿಕೊಂಡು ಕಥೆಯ ಓಟವನ್ನು ಕುಂಠಿತವನ್ನಾಗಿ ಮಾಡುವುದು ಅವನ ಮುಖ್ಯ ದೌರ್ಬಲ್ಯ. ಅವನ ವಸ್ತು ಮನೋಹಾರಿ, ಆದರೆ ಅದರ ಪರಿಮಾಣ ಕ್ಲೇಶಕಾರಿ. ಉಜ್ಜಯಿನಿ, ಶುಕನಾಸ, ಅರಮನೆ, ವಿಂಧ್ಯಾಟವೀ, ಚಂಡಿಕಾಲಯ ಇವುಗಳ ವರ್ಣನೆಗಳು ಸೊಗಸಾದ ಶಬ್ದಚಿತ್ರಗಳನ್ನೊದಗಿಸುವುದೇನೋ ನಿಜ; ಆದರೆ ವರ್ಣನೆ ಅತಿಯಾಯಿತು ಅಷ್ಟೆ. ಬಾಣನು ಯಾವ ವಿಷಯವನ್ನಾದರೂ ದೊಡ್ಡದಾಗಲೀ ಸಣ್ಣದಾಗಲಿ ವರ್ಣಿಸಲು ಪ್ರಾರಂಭಿಸಿದನೆಂದರೆ, ಅದನ್ನು ಇದಕ್ಕಿಂತಲೂ ಹೆಚ್ಚು ವರ್ಣಿಸಲು ಇನ್ನು ಸಾಧ್ಯವೇ ಇಲ್ಲವೆನ್ನುವವರೆಗೂ ಬಿಡುವುದಿಲ್ಲ. ಸೌಂದರ್ಯವರ್ಣನೆಯಲ್ಲಾಗಲೀ, ಶೋಕವರ್ಣನೆಯಲ್ಲಾಗಲೀ, ಉಪದೇಶದಲ್ಲಿಯಾಗಲೀ ಸಾಧ್ಯವಿರುವ ಯಾವ ವಿವರವನ್ನೂ ಬಿಟ್ಟಿಲ್ಲ, ಸಮಾನಾರ್ಥಕಗಳಾದ ವಿಶೇಷಣಗಳಾವನ್ನೂ ಉಪಯೋಗಿಸದೇ ಇಲ್ಲ, ಅಲಂಕಾರ ವಿಧಾನವೊಂದನ್ನೂ ಉಪೇಕ್ಷಿಸಿಲ್ಲ. ಆದರೂ 'ಬಾಣೋಚ್ಛಿಷ್ಟಂ ಜಗತ್ಸರ್ವಂ' ಎಂಬ ಮಾತು ವರ್ಣನೆಯ ದೃಷ್ಟಿಯಿಂದ ಸಾರ್ಥಕವೇ ಆಗಿದೆ.

ಬಾಣನ ಪಾತ್ರಗಳನ್ನು ಛಾಯಾಮಾತ್ರಗಳೆಂದು ಹೇಳುವುದುಂಟು; ಎರಡನೆಯ ಅಥವಾ ಮೂರನೆಯ ಜನ್ಮದಲ್ಲಿರುವ ಇವನ ನಾಯಕರು ಯಾವ ಲಕ್ಷಣಗಳನ್ನೂ ಸ್ಪಷ್ಟವಾಗಿ ಹೊಂದಿಲ್ಲ. ಅವರನ್ನು ವ್ಯಕ್ತಿಮಾತ್ರದವರೆಂದು ನಂಬುವಂತೆಯೇ ಇಲ್ಲ. ಆದರೂ ಬಾಣನ ವರ್ಣನಕೌಶಲವು ತಾತ್ತ್ವಿಕತೆಯನ್ನು ಪೂರ್ಣವಾಗಿ ತ್ಯಜಿಸಿಲ್ಲ. ಮಾನವೀಯತೆ ಸಂಪೂರ್ಣವಾಗಿ ಮಾಯವಾಗಿಲ್ಲ. ಅವನು ಚಿತ್ರಿಸಿರುವ ಪ್ರಪಂಚವು ಬರಿಯ ಕಲ್ಪನೆಯಾದರೂ ನಮ್ಮ ಮೆಚ್ಚುಗೆ ಸಹಾನುಭೂತಿಗಳನ್ನು

ಮಾತ್ರ ಎಂದಿಗೂ ಕಳೆದುಕೊಂಡಿಲ್ಲ; ಕಥೆಯು ಅಪರಿಚಿತ, ಕಥನ ವಿಧಾನವೂ ಅಂತೆಯೇ ಅಪರಿಚಿತ ; ಆದರೆ ಅಮಾನುಷತೆ ಜನಪ್ರಿಯ ಕಥಾಸಾಹಿತ್ಯದಲ್ಲಿ ಸುಪರಿಚಿತವಾದದ್ದೆ. ಇದರಿಂದ ಸ್ಪೆನ್ಸರನ ಫೆಯರೀ ಕ್ವೀನೆ (Faery queene) ಯಂತೆಯೇ ಇದೂ ಕಾವ್ಯ ರಂಜನೆಯನ್ನು ಪೂರ್ಣವಾಗಿಯೇ ಹೊಂದಿದೆ. ಕಲ್ಪಿತ ಜಗತ್ತು ಮಾನವ ಪ್ರಪಂಚ ಎರಡೂ ವಿಶದವಾಗಿಯೇ ಚಿತ್ರಿತವಾಗಿವೆ. ಆದರೆ ಮಾನವಪ್ರೇಮ ಮತ್ತು ಶೋಕ ಗಳ ಮುಂದೆ ಕಥೆಯಲ್ಲಿ ಬರುವ ಅಪ್ರಾಕೃತ ಸನ್ನಿವೇಶಗಳೂ ಕಲ್ಪನೆಗಳೂ ನಿಲ್ಲಲಾರವು.

ಬಾಣನ ಕಾವ್ಯದ ಘನತೆಯು ಕಥನದಲ್ಲಿಯೂ ಅಲ್ಲ, ಪಾತ್ರ ನಿರೂಪಣೆ ಯಲ್ಲಿಯೂ ಅಲ್ಲ, ಶೈಲಿಯಲ್ಲಿಯೂ ಅಲ್ಲ ; ಘನತೆ ಇರುವುದೆಲ್ಲ ರಸ ಮತ್ತು ಕಲ್ಪನೆಗಳಲ್ಲಿ. ಶೃಂಗಾರ ರಸವನ್ನು ಕಾದಂಬರೀ ಮತ್ತು ಚಂದ್ರಾಪೀಡರ ಸಮಾಗಮದಲ್ಲಿ ಚೆನ್ನಾಗಿ ತಂದಿದ್ದಾನೆ. ಕರುಣರಸವು ಗಿಳಿಮರಿಯ ಶೈಶವ ಚಿತ್ರಣದಲ್ಲಿಯೂ ಮಹಾಶ್ವೇತಾ ವೃತ್ತಾಂತದಲ್ಲಿಯೂ ಪೂರ್ಣವಾಗಿ ಚಿತ್ರಿತವಾಗಿದೆ. ಕಾಳಿದಾಸ ಭವಭೂತಿಗಳು ಹೇಳುವಂತೆ ಸ್ನೇಹವು ಅನೇಕ ಜನ್ಮವ್ಯಾಪಿ. ಪುಂಡರೀಕನು ಅಸುವನ್ನು ನೀಗಿದ ಮೇಲೆ ಪ್ರೇಮ ಕೊನೆಗೊಳ್ಳಲಿಲ್ಲ; ಪ್ರೇಮದಿಂದ ಬೇರೆಯ ಜನ್ಮವೂ ಬಂತು ; 'ಭಾವಸ್ಥಿರಾಣಿ ಜನನಾಂತರ ಸೌಹೃದಾನಿ' ಎಂಬ ಕಾಳಿದಾಸೋಕ್ತಿಯಂತೆ ಅಥವಾ 'ಪುರಾಣೋ ವಾ ಜನ್ಮಾಂತರನಿಬಿಡಪರಿಚಯಃ' ಎಂಬ ಭವಭೂತ್ಯುಕ್ತಿಯಂತೆ ವೈಶಂಪಾಯನನ ಮನಸ್ಸು ಅಚ್ಛೋದ ಸರಸ್ತೀರಕ್ಕೆ ಬಂದೊಡನೆಯೇ ಮಹಾ ಶ್ವೇತೆಯ ವಿರಹವ್ಯಥೆಯನ್ನು ಅನುಭವಿಸುವುದಕ್ಕೆ ಆರಂಭಿಸುತ್ತದೆ. ತಿರ್ಯಗ್ಜನ್ಮ ಬಂದರೂ ಈ ಸ್ನೇಹವಾಸನೆ ಬಿಡದು. ಜನ್ಮಾಂತರ ಶ್ರದ್ಧೆಯಿಂದ ಬರುವ ಕಲ್ಪನಾ ವಿಶೇಷಗಳನ್ನು ಇಲ್ಲಿ ಕಾಣಬಹುದಾಗಿದೆ. ಮತ್ತು ಕಾಮವು ತ್ಯಾಗ ಸಹನೆಗಳಿಂದ ಪುನೀತವಾಗಿ ಪವಿತ್ರಪ್ರೇಮವಾಗುವುದೆಂಬ ಕಲ್ಪನೆ ಮಹಾಶ್ವೇತೆಯ ಜೀವನದಿಂದ ಚಿತ್ರಿತವಾಗಿದೆ.

ಬಾಣನೇ ಮೊದಲಾದ ಮಧ್ಯಯುಗದ ಲೇಖಕರಿಗೂ ಬಹಳ ಹಿಂದೆಯೇ ಛಂದಸ್ಸು ಕಾವ್ಯಕ್ಕೆ ಕೇವಲ ಒಂದು ಬಾಹ್ಯಾಲಂಕಾರವೆಂಬ ಭಾವ ಮೂಡಿತ್ತು. ಕಾವ್ಯರಚನೆಯಲ್ಲಿ ಇದು ಒಂದು ವಿಧವಾದ ಕ್ರಾಂತಿಯನ್ನೇ ಎಬ್ಬಿಸಿತು, ಗದ್ಯವೂ ಕಾವ್ಯವಾಗಬಲ್ಲುದು ಎಂದು. ಆದರೆ ಛಂದಸ್ಸು ಪದ್ಯಕ್ಕೆ ಯಾವ ಘನತೆಯನ್ನೊದಗಿ ಸಿದ್ದಿತೋ ಅದನ್ನು ಗದ್ಯಕ್ಕೂ ಬೇರೆಯ ರೀತಿಯಲ್ಲಿ ತರುವುದರ ಅವಶ್ಯಕತೆಯೇ, ಅನುಪ್ರಾಸ, ಯಮಕ, ಶ್ಲೇಷೆ, ವಿಪುಲವಾದ ವಿಶೇಷಣ ಉಪವಿಶೇಷಣಗಳು, ಅಮಿತ ವಾದ ದೀರ್ಘಸಮಾಸ ಇವುಗಳ ಪ್ರಯೋಗವು ಗದ್ಯಕಾವ್ಯದಲ್ಲಿ ಪಡೆದ ವಿಶೇಷ ಸ್ಥಾನಕ್ಕೆ ಕಾರಣವಾಯಿತು. ಅಲಂಕಾರಮಯಗದ್ಯ ಅಥವಾ ಗದ್ಯಕಾವ್ಯದ ನಿಜವಾದ

ಉತ್ಪತ್ತಿ ಇಲ್ಲಿಯೇ. ಅನುಪ್ರಾಸವೇ ಮೊದಲಾದ ಈ ಅಲಂಕಾರಗಳು ಗದ್ಯಕಾವ್ಯಕ್ಕೆ ಒಂದು ವಿಚಿತ್ರವಾದ ಶ್ರುತಿ ಮಾಧುರ್ಯವನ್ನೊದಗಿಸಿ ಛಂದಸ್ಸಿನ ಅಭಾವದಿಂದ ಗದ್ಯಕ್ಕೆ ಉಂಟಾಗುವ ಕೊರತೆಯನ್ನು ನಿವಾರಿಸಿರುವುದೇನೋ ಸರಿ; ಆದರೆ ಈ ಸೂತ್ರವನ್ನು ಬಳಸುವುದರಲ್ಲಿ ಮಿತಿ ಇಲ್ಲದೆ ಕೆಲವು ವೇಳೆ ವಾಕ್ಯಾರ್ಥದ ಸ್ಪಷ್ಟತೆಯೇ ಬಲಿಯಾಗುವುದುಂಟು. ಬಾಣನ ಶೈಲಿಯಲ್ಲಿ ಈ ದೋಷವಿಲ್ಲದೆ ಇಲ್ಲ.

ಬಾಣನ ಶೈಲಿಯನ್ನು ಅನೇಕ ಆಧುನಿಕ ವಿಮರ್ಶಕರು ಕಟುವಾಗಿ ಟೀಕಿಸಿದ್ದಾರೆ. ಪಾಶ್ಚಾತ್ಯರಲ್ಲಿ ವೀಬರ್ ಮಹಾಶಯನು ಬಾಣನ ಗದ್ಯವನ್ನು ಅರಣ್ಯಕ್ಕೆ ಹೋಲಿಸಿದ್ದಾನೆ; ಆತನ ಟೀಕೆಯ ಮುಖ್ಯಾಂಶಗಳನ್ನು ಈ ರೀತಿ ಸಂಗ್ರಹಿಸಬಹುದು: ಅಸಹ್ಯವಾಗುವಂತಹ ಸೂಕ್ಷ್ಮಚಮತ್ಕಾರ ಮತ್ತು ಪುನರುಕ್ತಿ, ಒಂದೊಂದು ಪದಕ್ಕೂ ಹುಚ್ಚು ಹುಚ್ಚಾಗಿ ತುಂಬಿಸಿರುವ ವಿಶೇಷಣಗಳು ಇವುಗಳಿಂದ ಕಥನವು ಅರ್ಥವಿಲ್ಲದ ಶಬ್ದಾಡಂಬರದ ಧಾಟಿಯಲ್ಲಿ ನಡೆದು, ಕಥನ ಇಲ್ಲವೇ ವಾಚಕನ ಸಹನೆಯೇ ಕುಸಿದು ಬೀಳುವ ಭಯವೆ ಒದಗುತ್ತದೆ. ಪಾಂಡಿತ್ಯದ ಪೊದರುಗಳ ಮಧ್ಯದಲ್ಲಿ ದಾರಿಸಾಗದು; ದಾರಿಗನು ಹೆಜ್ಜೆಹೆಜ್ಜೆಗೂ ತಾನೇ ಕಷ್ಟದಿಂದ ದಾರಿ ಮಾಡಿಕೊಳ್ಳಬೇಕು. ತಂಡ ತಂಡವಾಗಿ ನುಗ್ಗುವ ಶ್ಲೇಷೆಗಳು ಉಪಮೆಗಳು ಅತಿಶಯೋಕ್ತಿಗಳು ಯಮಕ ಮತ್ತು ಅನುಪ್ರಾಸಗಳು ಪಾಂಥನಿಗಾಗಿ ಹೊಂಚು ಹಾಕುತ್ತಿರುವ ಕ್ರೂರ ಮೃಗಗಳೇ. ಕ್ರಿಯಾಪದವು ಅನೇಕ ಪುಟಗಳ ಕೊನೆಗೆ ಬರುವುದಿದ್ದು, ಮಧ್ಯದ ಅವಕಾಶವೆಲ್ಲ ವಿಶೇಷಣಗಳು ಮತ್ತು ಪಂಕ್ತಿಗಟ್ಟಲೆ ಓಡುವ ಸಮಸ್ತಪದಗಳಿಂದ ಕೂಡಿದ ಉಪವಿಶೇಷಣಗಳು ಇವುಗಳಿಂದ ತುಂಬಲ್ಪಟ್ಟಿದೆ; ಇನ್ನೂ ಮುಂತಾಗಿ ಬಾಣನ ಶೈಲಿಯನ್ನು ಬಾಣನ ಶೈಲಿಯಲ್ಲಿಯೇ ಬೈದಿದ್ದಾನೆ! ಉಗ್ರವಾದ ಈ ಟೀಕೆಯಲ್ಲಿ ಸಹಾನುಭೂತಿ ಸ್ವಲ್ಪ ಸಾಲದೆಂದು ಒಪ್ಪಿದರೂ, ಇದರಲ್ಲಿ ನಿಜಾಂಶವಿಲ್ಲದೇ ಇಲ್ಲ. ದ್ವಂದ್ವಾರ್ಥಕ್ಕಾಗಿ ನಡೆಯುವ ಬುದ್ಧಿಪೂರ್ವಕವಾದ ಅನ್ವೇಷಣೆ, ಅಪ್ರಸಿದ್ಧ ಮತ್ತು ಸಂದೇಹಾಸ್ಪದವಾದ ಪದಗಳು ಉದ್ದೇಶಪೂರ್ವಕವಾಗಿ ಉಪಯೋಗಿಸಿರುವ ದೀರ್ಘಸಮಾಸಗಳು ಮತ್ತು ಅಸಂಖ್ಯವಾದ ವಿಶೇಷಣಗಳು ಒಟ್ಟಿಗೆ ಸೇರಿದರೆ ಎಂತಹ ಉತ್ತಮವಾದ ಕಾವ್ಯಕಲಾಸೃಷ್ಟಿಯೂ ವಿರೂಪಗೊಳ್ಳುತ್ತದೆ. ಪ್ರೊ|| ರಿಡ್ಡಿಂಗ್‌ರವರ ಅಭಿಪ್ರಾಯ ಮೇಲಿನ ಟೀಕೆಗೆ ಉಪಷ್ಟಂಭಕವೆಂದೇ ಹೇಳಬಹುದು. ಈಚಿನ ಅನೇಕ ಶತಮಾನಗಳ ಕವಿಗಳೆಲ್ಲರಿಗೂ ಬಾಣನ ಶೈಲಿಯೇ ಮೆಲ್ಪಂಕ್ತಿ ಎಂಬುದೇನೋ ಸರಿ; ಆದರೆ, ಶೈಲಿಯ ತಳಹದಿಯೇ ಆಗಿರುವ ಪ್ರಮಾಣವಿವೇಚನೆ ಸಂಪೂರ್ಣವಾಗಿಯೇ ಲೋಪಗೊಂಡಿದೆ. ಯಾವ ವಿಷಯವನ್ನೇ ತೆಗೆದುಕೊಳ್ಳಲಿ, ಅದರ ಮೇಲೆ ಕೊನೆಯ ಮಾತನ್ನು ಹೇಳುವವರೆಗೂ ಆ

ವಿಷಯದ ನಿರೂಪಣ ಮುಗಿಯುವುದಿಲ್ಲ; ವರ್ಣನೆಗಳಲ್ಲಿ ಸಾಧ್ಯವಾದ ಪ್ರತಿಯೊಂದು ವಿವರವನ್ನು ಅದರ ಪೂರ್ಣಾವಸ್ಥೆಯಲ್ಲಿಯೇ ಕೊಡಲಾಗಿದೆ. ಮೇಲಿಂದ ಮೇಲೆ ಬರುವ ಉಪಮೆಗಳಿಗೆ ಮಿತಿಯಿಲ್ಲ, ಶ್ಲೇಷೆಗಳಿಗೆ ಕೊನೆಯಿಲ್ಲ. ಭಾಷಣವಾಗಲೀ ವಿಲಾಪವಾಗಲೀ ಉಪದೇಶವಾಗಲೀ, ಭಾಷೆಯಲ್ಲಿ ದೊರೆಯುವ ಸಮಾನಾರ್ಥ ಪದದ ಒಂದೊಂದು ಪ್ರಕಾರದಿಂದಲೂ ಹೇಳಿದ್ದನ್ನೇ ಅನೇಕ ಸಾರಿ ಹೇಳುವ ತನಕ ಭಾಷಣ ಮುಗಿಯದು, ದುಃಖ ಶಮನಗೊಳ್ಳದು, ಉಪದೇಶ ಕೊನೆಮುಟ್ಟದು.

ಪ್ರೊ॥ ಡೇಯವರ ದೃಷ್ಟಿಯಲ್ಲಿ: ಬಾಣನ ಕೃತಿಗಳಲ್ಲಿ ಕಂಡುಬರುವ ಗುಣಗಳೆಂದರೆ ವಸ್ತುಸಮೀಕ್ಷಾ ಶಕ್ತಿ, ಕಣ್ಣಿಗೆ ಕಟ್ಟಿದಂತೆ ಬೆಳೆಸಿರುವ ವರ್ಣನೆಗಳು ಪ್ರಕೃತಿಸೌಂದರ್ಯದ ಕಡೆಗಿರುವ ಒಲವು, ವರ್ಣಕ್ಕೆ ಸೋತಕಣ್ಣು, ಗೀತಧ್ವನಿಗೆ ಒಲಿದಕಿವಿ, ಕಲ್ಪನಾವೈಪುಲ್ಯ, ಶಬ್ದಸಂಪತ್ತಿ. ಆದರೆ ಇವುಗಳೊಂದೂ ಸಾಧಾರಣವಾದ ಮಿತಿಗೆ ಒಳಪಟ್ಟಿಲ್ಲ. ಇದರಿಂದಾಗಿ ವಿಷಯದ ಆಯ್ಕೆ ಮನೋಹಾರಿ ಆದರೆ ಅಳವಡಿಸಿರುವ ಪರಿಮಾಣ ಪ್ರಾಣಹಾರಿ. ಶಾಸ್ತ್ರಪಾಂಡಿತ್ಯರೂಪವಾದ ಸಾಧನ ಸಾಮಗ್ರಿಯ ಸಿದ್ಧತೆ ಆಶ್ಚರ್ಯಕರ, ಆದರೆ ಮಿತಿಮೀರಿದ ಅತಿಶಯೋಕ್ತಿಯು ವರ್ಣಿಸಿರುವ ವಿಷಯಗಳ ವಾಸ್ತವಿಕತೆಯನ್ನೇ ಅಲುಗಿಸಿಬಿಡುತ್ತದೆ. ಪದ್ಯಕ್ಕೆ ಸ್ವಾಭಾವಿಕವಾದ ರಮ್ಯತೆಯನ್ನು ಗದ್ಯದಲ್ಲಿ ತರಬೇಕೆಂಬ ವಿಪರೀತಾಭಿಲಾಷೆಯ ಪ್ರಭಾವಕ್ಕೆ ಸಿಕ್ಕಿರುವುದು ಸ್ಪಷ್ಟವಾಗಿಯೇ ಕಂಡುಬರುತ್ತದೆ. ದುರ್ಭರವಾದ ಪಾಂಡಿತ್ಯ ದೂರಾನ್ವಯದ ಪೂರ್ವಕಥಾಸೂಚನೆ ಇವುಗಳಿಂದ ಶೈಲಿಯ ವೈಭವವು ಜುಗುಪ್ಸಾವಹವೂ ಮತ್ತು ಕೃತಕವೂ ಆಗಿ ಅನೇಕಸಲ ಬರಿಯ ಶಬ್ದಾಡಂಬರವೇ ಆಗಿಬಿಡುತ್ತದೆ. ಹೀಗೆ ಗದ್ಯಕಾರನೊಬ್ಬನಿಗೆ ವಿಶೇಷ ಲಕ್ಷಣವಾಗಬಹುದಾದ, ವಾಚಿಕ ಮತ್ತು ಮಾನಸಿಕ ಆಡಂಬರದ ಅತ್ಯಂತ ಹೇಯವಾದ ದೋಷಗಳೆಲ್ಲವೂ ಬಾಣನಲ್ಲಿ ಸೇರಿವೆ.

ಪ್ರೊ॥ ಕಾಣೆಯವರು ಇನ್ನೊಂದು ರೀತಿಯಲ್ಲಿ ಬಾಣನನ್ನು ವಿಮರ್ಶಿಸುತ್ತಾರೆ: ಬಾಣನ ಇನ್ನೊಂದು ಪ್ರಬಲವಾದ ದೋಷವೆಂದರೆ ರಚನಕಲೆಯಲ್ಲಿ ಕಂಡುಬರುವ ಕುಂದು. ಇದಕ್ಕೆ ಕಾರಣ ಕಥೆಗಳಲ್ಲಿ ಕಥೆಯನ್ನು ಸೇರಿಸಿ ನೇಯುವ ವಿಧಾನದ ಪ್ರಯೋಗ. ಓದುಗನು ಕಥೆಯಲ್ಲಿ ಮಿತಿಯಿಲ್ಲದೆ ಬರುವ ಪರಿವರ್ತನೆಗಳನ್ನೂ ಆವರ್ತನೆಗಳನ್ನೂ ಶಾಪಪ್ರತಿಶಾಪಗಳ ಗೊಂದಲವನ್ನೂ ನೆನಪಿನಲ್ಲಿಟ್ಟುಕೊಳ್ಳುವುದೇ ಕಷ್ಟವಾಗುತ್ತದೆ. ಕಥೆಯಲ್ಲಿ ಮುಖ್ಯಭಾಗವನ್ನು ಗಿಳಿಯಿಂದ ಹೇಳಿಸಿರುವುದೇ, ಕೃತಿಯಲ್ಲಿ ಬರುವ ಪ್ರಸಂಗಗಳ ಸಂಭಾವ್ಯತೆಯ ವಿಷಯದಲ್ಲಿ ಉಂಟಾಗಿರುವ ಒಂದು ದೊಡ್ಡ ದೋಷ. ಬಾಣನಲ್ಲಿ ಈ ದೋಷಗಳನ್ನು ಹೇಳಿ ಕೊನೆಯಲ್ಲಿ: ಆದರೆ ಶ್ಲಕ್ಷ್ಣವೂ, ಸಮೃದ್ಧವೂ ಆದ ವಾಕ್ಸರಣಿ, ಪರಿಣಾಮಕಾರಿಯಾದಶೈಲಿ, ಸಾಕಷ್ಟು ತಂದಿರುವ

ಅಲಂಕಾರವೈವಿಧ್ಯ, ಬರಿಯ ಇಂದ್ರಿಯ ಚಾಪಲ್ಯವಲ್ಲದ, ಆದರೂ ಗಾಢವಾದ, ಪರಿಶುದ್ಧಪ್ರೇಮದ ಉಜ್ವಲವರ್ಣನೆಗಳು, ಪಾತ್ರಸಂವಿಧಾನಕೌಶಲ್ಯ ಮತ್ತು ಪ್ರಕೃತಿ ಸೌಂದರ್ಯದ ಮನೋಹರ ಚಿತ್ರಗಳು ಅವನ ಕೆಲವು ದೋಷಗಳನ್ನು ಮುಚ್ಚಿ ಬಾಣನು ನಿಜವಾಗಿಯೂ ಮಹಾಕವಿಯೆಂದು ನಮ್ಮ ಮನಸ್ಸಿಗೆ ಗೋಚರವಾಗುವಂತೆ ಮಾಡುತ್ತವೆ ಎಂದು ಹೇಳುತ್ತಾರೆ.

ಇನ್ನು ಕಾಳೆಯವರ ಅಭಿಪ್ರಾಯ, ವಿದ್ಯಾರ್ಥಿಗಳಿಗೆ ಅಭಿರುಚಿಹುಟ್ಟಿಸ ಲೋಸುಗ ಬರೆದಿರುವ ಕಾರಣದಿಂದಿರಬಹುದು, ಕೇವಲ ಪ್ರಶಂಸಾತ್ಮಕವಾದುದು: ರಚನಕಲೆಯಲ್ಲಿ ಕಂಡುಬರುವ ಕೌಶಲವೆಂದರೆ ಕಥಾವಸ್ತುವನ್ನು ಚಾತುರ್ಯದಿಂದ ಹೊಂದಿಸಿಕೊಂಡಿರುವುದು ಮತ್ತು ಸುಸಂಗತವಾಗಿ ಅದನ್ನು ಬೆಳೆಸಿರುವುದು. ಕಥೆಯು ತುಂಬಾ ತೊಡಕಾದುದಾದರೂ ಅದರ ನಿರ್ವಾಹದಲ್ಲಿ ಮನೋಹರತೆಯಿದೆ. ಕಥೆಯನ್ನು ಆವರಿಸಿರುವ ರಹಸ್ಯವು ಓದುಗನ ಕುತೂಹಲವನ್ನು ಕೊನೆತನಕ ಬೆಳಸುತ್ತದೆ. ಕಥೆಯ ಮಧ್ಯದವರೆವಿಗೂ ತಡವಾಗುವ ನಾಯಿಕಾಪ್ರವೇಶಕ್ಕೆ ಮೊದಲಲ್ಲಿ ಬರುವ ಮಹಾಶ್ವೇತಾವೃತ್ತಾನ್ತವು ಹಿನ್ನೆಲೆ. ಶೂದ್ರಕನ ವರ್ಣನೆಯೊಡನೆ ಆಗುವ ಕಥೆಯ ಆರಂಭ, ಕಲ್ಪನಾಶಕ್ತಿಯುಳ್ಳ ಮತ್ತು ಗ್ರಂಥದ ಕೊನೆಯಲ್ಲಿ ತೃಪ್ತಿಕರವಾಗಿ ವಿವರಿಸಲ್ಪಡುವುದೆಂದು ಅರಿತಿರುವ ಮನಸ್ಸಿನ ಮೇಲೆ ಬಲವಾದ ಪರಿಣಾಮವನ್ನುಂಟು ಮಾಡುತ್ತದೆ. ದೊರೆ ಶೂದ್ರಕನೂ ಮತ್ತು ಗಿಳಿ ವೈಶಂಪಾಯನನೂ ತಮ್ಮ ಮೂರನೆಯ ಜನ್ಮದಲ್ಲಿರುವರೆಂದು ಗೊತ್ತಾಗುವ್ದುದು ಕೊನೆಯಲ್ಲಿ. ಹಕ್ಕಿಗಳ ಅಥವಾ ಮುನಿಗಳ ಸರಳ ಜೀವನ ಹಾಗೂ ಶೂದ್ರಕ ಅಥವಾ ತಾರಾಪೀಡರ ಆಡಂಬರಾನ್ವಿತವೂ ವೈಭವಯುತವೂ ಆದ ರಾಜಾಸ್ಥಾನ ಇವೆರಡಕ್ಕೂ ಮಧ್ಯೆ ಇರುವ ಅಂತರವು ಗಮನವನ್ನು ಸೆಳೆಯುವಂತಹುದು. ಎರಡು ಕಥೆಗಳನ್ನು ಒಂದರೊಡನೊಂದು ಹೆಣೆದಿರುವ ಚಾತುರ್ಯವು, ಕಥೆಯನ್ನು ಬೆಳೆಸುವುದರಲ್ಲಿ ಕವಿಯು ಪಡೆದಿರುವ ಉತ್ತಮ ಕೌಶಲವನ್ನು ನಿದರ್ಶಿಸುತ್ತದೆ. ಮುಖ್ಯ ಪಾತ್ರಗಳು ಅದ್ಭುತವಾದ ನೈಪುಣ್ಯ ಮತ್ತು ಸಾಮಂಜಸ್ಯಗಳಿಂದ ಚಿತ್ರಿಸಲ್ಪಟ್ಟಿವೆ. ತ್ಯಾಗಶೀಲನಾದ ತಾರಾಪೀಡ, ಪ್ರೀತಿಯೇ ಮೈವೆತ್ತಂತಿರುವ ವಿಲಾಸವತಿ, ವಿವೇಕಿಯಾದ ಮಂತ್ರಿ ಶುಕನಾಸ ವಿಧೇಯಳಾದ ಪತ್ರಲೇಖೆ ಈ ಪಾತ್ರಗಳು ಓದುಗನ ಎದೆಯನ್ನು ಕರಗಿಸುವಂತಹವುಗಳಾಗಿವೆ, ಸತ್ವಪೂರ್ಣಗಳಾಗಿವೆ, ಜೀವಂತವಾಗಿವೆ. ಪ್ರಬಲವಾದ ಅನುರಾಗ ಮತ್ತು ಕನ್ಯಾಸಹಜವಾದ ಲಜ್ಜೆ ಇವು ಕವಿಯ ಅಮಿತವಾದ ಕಲ್ಪನಾಶಕ್ತಿ ಮತ್ತು ಸೂಕ್ಷ್ಮ ಹಾಗು ಸರ್ವಾತಿಶಾಯಿನಿಯಾದ ಸಮೀಕ್ಷೆಯನ್ನು ವ್ಯಕ್ತಗೊಳಿಸುತ್ತವೆ. ಶೃಂಗಾರರಸವನ್ನು ಹತ್ತು ಅವಸ್ಥೆಗಳಲ್ಲಿ ಮರಣದಲ್ಲಿಯೂ ಸಹ, ಬೆಳಸಿರುವವನು ಇವನೊಬ್ಬನೇ.

ಇದಕ್ಕಾಗಿ ಅಮಾನುಷ ಶಕ್ತಿಯ ಕರ್ತೃತ್ವವನ್ನೂ ಘಟನೆಗಳ ವಿಚಿತ್ರ ವ್ಯವಸ್ಥೆಯನ್ನೂ ಕವಿ ಕಲ್ಪಿಸಿಕೊಂಡಿದ್ದಾನೆ. ಅರಮನೆ ಮತ್ತು ನಗರಗಳ ಹಾಗು ತಪೋವನ ಮತ್ತು ಕಾಡುಗಳ ವಿಶದವಾದ ವರ್ಣನೆಗಳಲ್ಲಿ ಕಂಡುಬರುವ, ಸಮೃದ್ಧವಾದ ಮತ್ತು ವಿವಿಧ ವಾದ ಅನುಭವಗಳ ಪೂರ್ಣತೆ ಮತ್ತು ಸಾಮಾನ್ಯ ಮಾನವ ಜೀವನದ ಚುರುಕಾದ ಸಮೀಕ್ಷಣ ಇವುಗಳ ಹೊನಲುಗಳೇ ಕಾದಂಬರಿಯ ದೃಶ್ಯಗಳು. ಶುಕನಾಸನ ಉಪದೇಶವು ರಾಜ್ಯಾಧಿಕಾರಿಯೊಬ್ಬನು ಗುರಿಯಾಗಬಹುದಾದ ಅನೇಕ ಅಪಾಯಗಳ ಅದ್ಭುತವಾದ ಚಿತ್ರವಾಗಿದೆ. ಹಿಮಾಲಯ ಪರ್ವತಗಳು, ದಟ್ಟವಾದ ಕಾಡಿನ ಮಧ್ಯದಲ್ಲಿರುವ ಅಚ್ಛೋದ ಸರಸ್ಸು ಮತ್ತು ಮಹಾಶ್ವೇತೆಯ ಆವಾಸ ಇವುಗಳ ಮನೋಹರ ವರ್ಣನೆಗಳು ಸಾಮಾನ್ಯನಾದೊಬ್ಬ ಕವಿಯ ಕೃತಿಗಳೇನಲ್ಲ. ಬಾಣನ ಮಾತುಗಳು ಆತನ ಸ್ಪಷ್ಟವಾದ ಪ್ರಕೃತಿವಸ್ತುವರ್ಣನೆ ಮತ್ತು ಕಲ್ಪನೆಗಳಲ್ಲಿನ ನವ್ಯತೆ ಮತ್ತು ಉತ್ಸಾಹಗಳನ್ನು ಸೂಚಿಸುತ್ತವೆ, ಭಾರತದ ಅರಣ್ಯದೃಶ್ಯಗಳು ಒದಗಿಸುವ ಪ್ರಕೃತಿಸೌಂದರ್ಯದ ವಿಷಯದಲ್ಲಿ ಉತ್ಸಾಹಪೂರ್ಣವೂ ಹೃತ್ಪೂರ್ವಕವೂ ಆದ ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತವೆ.

ಅಮಾನುಷ ವ್ಯಕ್ತಿಗಳ ಕಥೆಯನ್ನು ಸಾಮಾನ್ಯ ಮಾನವಸ್ವಭಾವದ ನಿತ್ಯ ವ್ಯಾಪಾರಗಳಿಗೆ ಹೊಂದಿಸಿಕೊಂಡಿರುವುದರಲ್ಲಿ ನೈಪುಣ್ಯವಿದೆ. ಓದುಗನಿಗೆ ಬರುವ ಮೊದಲಭಾವನೆ ಕಥಾವಿಷಯಕ್ಕೂ ಮನುಷ್ಯಲೋಕಕ್ಕೂ ಯಾವ ಸಂಬಂಧವೂ ಇಲ್ಲವೆಂದು ; ಆದರೆ ಮುಂದುವರೆದಂತೆಲ್ಲ ಈ ಭಾವನೆ ಮಾಯವಾಗಿ, ಕಾದಂಬರಿಯು ಮಾನವನ ದುಃಖ ಮತ್ತು ದೈವದಿಂದ ಒದಗುವ ದುಃಖಶಮನ, ಮರಣ ಮತ್ತು ಮರಣಾನಂತರವೂ ಒಂದುಗೂಡಬೇಕೆಂಬ ಹೆಬ್ಬಯಕೆ ಇವುಗಳ ಕಥೆಯೆಂದು ಅರಿವಾಗುತ್ತದೆ. ವಿಷಯಲಂಪಟತ್ವವಿಮುಕ್ತವಾದ ಪ್ರೇಮದ ನಿರೂಪಣೆಯಲ್ಲಿ ಬಾಣನನ್ನು ಕಾಲಿದಾಸನೊಬ್ಬನಿಗೆ ಹೋಲಿಸಬಹುದು. ಮಹಾಶ್ವೇತಾಪುಂಡರೀಕರು ಒಬ್ಬರನ್ನೊಬ್ಬರು ಮೊದಲಬಾರಿ ಕಂಡಾಗ ಅವರಿಗೊದಗಿದ ಪ್ರೇಮಭಾವಗಳು ಗಂಧರ್ವಕನ್ಯೆ ಕಾದಂಬರಿಯು ಚಂದ್ರಾಪೀಡನನ್ನು ನೋಡಲು ಉಪ್ಪರಿಗೆಯ ಮಾಳಿಗೆಯನ್ನು ಹತ್ತುವುದು ಮತ್ತು ಆಗ ಅವಳಿಗುಂಟಾದ ಮನಃಸ್ಥಿತಿ, ಇವು ಕಾದಂಬರಿಯಲ್ಲಿ ಶೃಂಗಾರರಸದ ಅದ್ಭುತಚಿತ್ರಗಳು. ಚಂದ್ರ ಮತ್ತು ಪುಂಡರೀಕರು ಜನ್ಮಾಂತರಗಳನ್ನು ಧರಿಸುವುದು ಹಾಗು ಕಾದಂಬರಿ ಮತ್ತು ಮಹಾಶ್ವೇತೆಯರು, ತಮ್ಮ ಪ್ರೇಮಿಗಳ ಮೃತಿಸಮಯದಲ್ಲಿ ಹೊಂದಿದ ಅವಸ್ಥೆ ಇವು ಅದ್ಭುತ ಮತ್ತು ಕರುಣ ರಸದ ಚಿತ್ರಗಳು.

'ಓಜಸ್ಸಮಾಸ ಭೂಯಸ್ತ್ವಮೇತದ್ಗದ್ಯಸ್ಯ ಜೀವಿತಂ' ಎಂದು ಕಾವ್ಯಾದರ್ಶ

ಕಾರನು ಹೇಳುವುದಕ್ಕೆ ಕಾರಣ ಬಹುಶಃ ಬಾಣನ ಗದ್ಯವೇ ಇರಬೇಕು. ಬಾಣನು ಓಜಸ್ಸು ಮತ್ತು ಶ್ಲೇಷೆಗಳನ್ನು ತನ್ನ ಗದ್ಯದಲ್ಲಿ ಅತಿಯಾಗಿಯೇ ಪ್ರಯೋಗಿಸಿದ್ದಾನೆ. ಬಾಣನ ರೀತಿಯು ಇದರಿಂದ ಕೇವಲರೀತಿಯಲ್ಲ, ಚಾಳಿ. ಆದರೂ ಈ ವಿಷಯದಲ್ಲಿ ಬಾಣನು ಸುಬಂಧುವಿನಷ್ಟುಗರ್ಹ್ಯನಲ್ಲ. ಆಧುನಿಕ ಪಂಡಿತರ ಅಭಿಪ್ರಾಯದಲ್ಲಿ ಬಾಣನ ಶೈಲಿ ಬಹುಮಟ್ಟಿಗೆ ದೋಷಪೂರ್ಣವಾದುದು, ಬಾಣನು ಪಂಡಿತಕವಿ; ಇವನಲ್ಲಿ ಪ್ರತಿಭೆಗಿಂತ ಪಾಂಡಿತ್ಯ ಹೆಚ್ಚು ಸರಳತೆಗಿಂತ ಕೃತಕತೆ ಹೆಚ್ಚು ಆಡಂಬರ ಹೆಚ್ಚು.

ಪ್ರಾಚೀನ ಭಾರತೀಯ ವಿಮರ್ಶಕರಾದರೋ 'ಗದ್ಯಂ ಕವೀನಾಂ ನಿಕಷಂ ವದಂತಿ' ಎಂದರಿತು ಬಾಣನನ್ನು ಬಹಳ ಗೌರವಿಸಿದ್ದಾರೆ; ಮಾತು ಅರ್ಥ ಮತ್ತು ರಸ ಇವು ಮೂರರಮೇಲೂ ಬಾಣನು ಸ್ವಾಮ್ಯವನ್ನು ಪಡೆದಿರುವನೆಂದು ಹೇಳಿದ್ದಾರೆ. 'ವಾಗೀಶ್ವರಂ ಹನ್ತ ಭಜೇಽಭಿನಂದಂ, ಅರ್ಥೇಶ್ವರಂ ವಾಕ್ಪತಿ ರಾಜಮೀಡೇ | ರಸೇಶ್ವರಂ ಸ್ತೌಮಿಚ ಕಾಲಿದಾಸಂ ಬಾಣಂತು ಸರ್ವೇಶ್ವರಮಾನತೋಽಸ್ಮಿ ||' (ದಂಡಿಯದೆಂದು ಹೇಳಲಾದ ಅವನ್ತಿಸುನ್ದರೀ ಕಥೆ.) ಬಾಣನ ಕಾದಂಬರಿಯನ್ನು ಗದ್ಯರೂಪದಲ್ಲಿರುವ ಪದ್ಯವೆಂದೇ ಹೇಳಬಹುದು; ಪದ್ಯದ ಹೃದ್ಯತೆಯೂ ಗದ್ಯದ ಸ್ವಾತಂತ್ರ್ಯವೂ ಇದರಲ್ಲಿ ಸಂಗಮಿಸಿವೆ. ಅಕ್ಷರಸಂಖ್ಯಾದಿ ನಿಯಮ ಬದ್ಧವಾದ ಪದ್ಯವು ಲಯಮಾಧುರ್ಯವನ್ನು ಹೊಂದುವುದಾದರೂ, ಲಯದ ನಷ್ಟವನ್ನು ಬೇರೊಂದು ವಿಧದಲ್ಲಿ ಸರಿಪಡಿಸಿಕೊಳ್ಳುವುದಾದರೆ ಕಾವ್ಯಗುಣಗಳು ಪದ್ಯಕ್ಕಿಂತ ಗದ್ಯದಲ್ಲಿಯೇ ಹೆಚ್ಚಿನ ಸ್ಥಾನವನ್ನಾಕ್ರಮಿಸಬಹುದು. ಆಗ ಲಯದ ನಷ್ಟ ತಾನಾಗಿಯೇ ಕೂಡಿಕೊಳ್ಳುವುದು.

ಶಬ್ದಾರ್ಥಗಳೆರಡಕ್ಕೂ ಸಮಾನಸ್ಥಾನವನ್ನು ಕೊಡುವ ಪಾಂಚಾಲೀ ರೀತಿಯಲ್ಲಿ ಬಾಣನು ತನ್ನ ಕಾವ್ಯವನ್ನು ಬರೆದಿದ್ದಾನೆ. ಬಾಣನ ವರ್ಣನೆಯಲ್ಲಿ ಬರುವ ದೀರ್ಘ ಸಮಾಸಗಳು ತುಂಬ ಶ್ರುತಿಮನೋಹರಗಳಾಗುತ್ತವೆಯೆಂಬುದರಲ್ಲಿ ಸಂದೇಹವಿಲ್ಲ; ಅಲೆಅಲೆಯಾಗಿ ಬರುವ ರಾಗಭಾವಗಳ ಅರ್ಥಲಯಾನ್ವಿತವಾದ ತಾನದಂತೆ ಅಕ್ಷರ ಸಂಖ್ಯಾದಿನಿಯಮರಹಿತವಾದ ಈ ಗದ್ಯವು ಶ್ರವಣಮನೋಹರವಾಗುತ್ತದೆಯೆಂದು ಹೇಳಬಹುದು. ಬಾಣನ ಒಂದೊಂದು ವರ್ಣನೆಯೂ ಒಂದೊಂದು ಸ್ವಯಂಪೂರ್ಣ ಕೃತಿ. ವರ್ಣ್ಯ ವಿಷಯವನ್ನು ಎತ್ತಿಕೊಂಡ ಕೂಡಲೇ ಅವನ ಕಾಲದ ಪಂಡಿತ ವರ್ಗವು ವಿಷಯವನ್ನು ಮರೆತು ವರ್ಣನೆಯ ಚಾತುರ್ಯವನ್ನು ಅನುಭವಿಸುವುದರಲ್ಲಿಯೇ ಮಗ್ನವಾಗುತ್ತಿತ್ತೆಂದು ಊಹಿಸಿಕೊಳ್ಳಬಹುದು. ಗಾಯಕಶ್ರೇಷ್ಠನ ಪಲ್ಲವಿಯಲ್ಲಿ ಸಾಹಿತ್ಯ ಬಹಳ ಅಲ್ಪ, ಸ್ವರವಿನ್ಯಾಸ ಅಧಿಕ; ಸ್ವರವಿನ್ಯಾಸವೇ ಕಾರ್ಯ,

ಪಲ್ಲವಿಯ ಸಾಹಿತ್ಯ ಕೇವಲ ವ್ಯಾಜ. ಅದರಂತೆಯೇ ಇಲ್ಲಿಯೂ ವರ್ಣ್ಯವಿಷಯ
ವ್ಯಾಜ, ವರ್ಣನೆಯೇ ಕಾರ್ಯ; ಉದಾಹರಣೆಗಾಗಿ ವಿಂಧ್ಯಾಟವಿಯ ವರ್ಣನೆ:

"ಅಸ್ತಿ ಪೂರ್ವಾಪರಜಲನಿಧಿವೇಲಾವಲಗ್ನಾ ಮಧ್ಯದೇಶಾಲಂಕಾರಭೂತಾ ಮೇಖಲೇವ ಭುವಃ
ವನಕರಿಕುಲಮದಜಲಸೇಕಸಂವರ್ಧಿತೈರತಿವಿಕಚಕುಸುಮನಿಕರಮತ್ಯುಚ್ಚತಯಾ ತಾರಾಗಣಮಿವ
ಶಿಖರದೇಶಲಗ್ನಮುದ್ವಹದ್ಭಿಃ ಪಾದಪೈರುಪಶೋಭಿತಾ, ಮದಕಲಕುರರಕುಲದಶ್ಯಮಾನಮರಿಚ
ಪಲ್ಲವಾ, ಕರಿಕಲಭಕರಮೃದಿತತಮಾಲಕಿಸಲಯಾಮೋದಿನೀ, ಮಧುಮದೋಪರಕ್ತಕೇರಲೀಕಪೋಲ
ಕೋಮಲಚ್ಛವಿನಾ ಸಂಚರದ್ವನದೇವತಾಚರಣಾಲಕ್ತಕರಸರಞ್ಜಿತೇನೇವ ಪಲ್ಲವಪ್ರಚಯೇನ
ಸಂಛಾದಿತಾ ಶುಕಕುಲದಲಿತದಾಡಿಮೀಫಲದ್ರವಾರ್ದ್ರೀಕೃತತಲೈರತಿಚಪಲಕಪಿಕಮ್ಪಿತಕಕ್ಕೋಲ
ಚ್ಯುತಪಲ್ಲವಫಲಶಬಲೈರನವರತನಿಪತಿತಕುಸುಮರೇಣುಪಾಂಸುಲೈಃ ಪಥಿಕಜನರಚಿತಲವಂಗಪಲ್ಲವ
ಸ್ರಸ್ತರೈರತಿಕಠೋರನಾಲಿಕೇರಕೇತಕೀಕರೀರಕೇಸರಪರಿಗತಪ್ರಾನ್ತೈಸ್ತಾಂಬೂಲೀಲತಾವನದ್ಧಪೂಗ
ಖಣ್ಡಮಣ್ಡಿತೈರ್ವನಲಕ್ಷ್ಮೀವಾಸಭವನೈರಿವ ವಿರಾಜಿತಾ ಲತಾಮಂಡಪೈಃ, ಉನ್ಮದಮಾತಂಗ
ಕಪೋಲಸ್ಥಲಗಲಿತಮದಸಲಿಲಸಿಕ್ತೇನೇವ ನಿರನ್ತರಮೇಲಾಲತಾವನೇನ ಮದಗನ್ಧಿನಾನ್ಧಕಾರಿತಾ,
ನಖಮುಖಲಗ್ನೇಭಕುಮ್ಭಮುಕ್ತಾಫಲಲುಬ್ಧೈಃ ಶಬರಸೇನಾಪತಿಭಿರಭಿಹನ್ಯಮಾನಕೇಸರಿಶತಾ,
ಪ್ರೇತಾಧಿಪನಗರೀವ ಸದಾಸನ್ನಿಹಿತಮೃತ್ಯುಭೀಷಣಾ ಮಹಿಷಾಧಿಷ್ಠಿತಾಚ, ಸಮರೋದ್ಯತಪತಾಕಿ
ನೀವ ಬಾಣಾಸನಾರೋಪಿತಶಿಲೀಮುಖಾ, ವಿಮುಕ್ತಸಿಂಹನಾದಾಚ. ಕಾತ್ಯಾಯನೀವ ಪ್ರಚಲಿತ
ಖಡ್ಗಭೀಷಣಾ ರಕ್ತಚಂದನಾಲಂಕೃತಾಚ, ಕರ್ಣೀಸುತಕಥೇವ ಸನ್ನಿಹಿತವಿಪುಲಾಚಲಾ ಶಶೋಪ
ಗತಾಚ, ಕಲ್ಪಾನ್ತಪ್ರದೋಷಸನ್ಧ್ಯೇವ ಪ್ರನೃತ್ತನೀಲಕಣ್ಠಾ ಪಲ್ಲವಾರುಣಾಚ, ಅಮೃತಮಥನ
ವೇಲೇವ ಶ್ರೀ ದ್ರುಮೋಪಶೋಭಿತಾ ವಾರುಣೀಪರಿಗತಾಚ, ಪ್ರಾವೃಡಿವ ಘನಶ್ಯಾಮಲಾನೇಕ
ಶತಹ್ರದಾಲಂಕೃತಾ ಚ, ಚನ್ದ್ರಮೂರ್ತಿರಿವ ಸತತಮೃಕ್ಷಸಾರ್ಥಾನುಗತಾ ಹರಿಣಾಧ್ಯಾಸಿತಾ ಚ,
ರಾಜ್ಯಸ್ಥಿತಿರಿವ ಚಮರಮೃಗಬಾಲವ್ಯಜನೋಪಶೋಭಿತಾ ಸಮದಗಜಘಟಾಪರಿಪಾಲಿತಾ ಚ, ಗಿರಿತನ
ಯೇವ ಸ್ಥಾಣುಸಂಗತಾ ಮೃಗಪತಿಸೇವಿತಾಚ, ಜಾನಕೀವ ಪ್ರಸೂತಕುಶಲವಾ ನಿಶಾಚರಪರಿ
ಗೃಹೀತಾ ಚ, ಕಾಮಿನೀವ ಚನ್ದನಮೃಗಮದಪರಿಮಲವಾಹಿನೀ ರುಚಿರಾಗುರುತಿಲಕಭೂಷಿತಾ ಚ,
ಸೋತ್ಕಣ್ಠೇವ ವಿವಿಧಪಲ್ಲವಾನಿಲವೀಜಿತಾ ಸಮದನಾ ಚ, ಬಾಲಗ್ರೀವೇವ ವ್ಯಾಘ್ರನಖಪಂಕ್ತಿ
ಮಣ್ಡಿತಾ ಗಣ್ಡಕಾಭರಣಾ ಚ, ಪಾನಭೂಮಿರಿವ ಪ್ರಕಟಿತಮಧುಕೋಷಕಶತಾ ಪ್ರಕೀರ್ಣವಿವಿಧ
ಕುಸುಮಾಚ, ಕ್ವಚಿತ್ಪ್ರಲಯವೇಲೇವ ಮಹಾವರಾಹದಂಷ್ಟ್ರಾಸಮುತ್ಖಾತಧರಣಿಮಣ್ಡಲಾ,
ಕ್ವಚಿದ್ದಶಮುಖನಗರೀವ ಚಟುಲವಾನರವೃನ್ದಭಜ್ಯಮಾನತುಂಗಶಾಲಾಕುಲಾ ಕ್ವಚಿದಚಿರನಿರ್ವೃತ್ತ
ವಿವಾಹಭೂಮಿರಿವ ಹರಿತಕುಶಸಮಿತ್ಕುಸುಮಶಮೀಪಲಾಶಶೋಭಿತಾ, ಕ್ವಚಿದುದ್ವೃತ್ತಮೃಗಪತಿ,
ನಾದಭೀತೇವ ಕಣ್ಟಕಿತಾ ಕ್ವಚಿನ್ಮತ್ತೇವ ಕೋಕಿಲಕುಲಪ್ರಲಾಪಿನೀ ಕ್ವಚಿದುನ್ಮತ್ತೇವ ವಾಯುವೇಗ
ಕೃತತಾಲಶಬ್ದಾ, ಕ್ವಚಿದ್ವಿಧವೇವೋನ್ಮುಕ್ತತಾಲಪತ್ರಾ ಕ್ವಚಿತ್ಸಮರಭೂಮಿರಿವ ಶರಶತನಿಚಿತಾ
ಕ್ವಚಿದಮರಪತಿತನುರಿವ ನೇತ್ರಸಹಸ್ರಸಂಕುಲಾ, ಕ್ವಚಿನ್ನಾರಾಯಣಮೂರ್ತಿರಿವ ತಮಾಲನೀಲಾ
ಕ್ವಚಿತ್ಪಾರ್ಥರಥಪತಾಕೇವ ವಾನರಾಕ್ರಾನ್ತಾ ಕ್ವಚಿದವನಿಪತಿದ್ವಾರಭೂಮಿರಿವ ನೇತ್ರಲತಾಶತ
ದುಷ್ಪ್ರವೇಶಾ, ಕ್ವಚಿದ್ವಿರಾಟನಗರೀವ ಕೀಚಕಶತಾವೃತಾ ಕ್ವಚಿದಂಬರಶ್ರೀರಿವ ವ್ಯಾಧಾನುಗಮ್ಯ
ಮಾನತರಲತಾರಕಮೃಗಾ ಕ್ವಚಿದ್ಗೃಹೀತವ್ರತೇವ ದರ್ಭಚೀರಜಟಾವಲ್ಕಲಧಾರಿಣೀ ಅಪರಿಮಿತ

ಬಹುಲಪತ್ರಸಂಚಯಾಪಿ ಸಪ್ತಪರ್ಣಭೂಷಿತಾ, ಕ್ರೂರಸತ್ತ್ವಾಪಿ ಮುನಿಜನಸೇವಿತಾ, ಪುಷ್ಪವತ್ಯಪಿ ಪವಿತ್ರಾ, ವಿಂಧ್ಯಾಟವೀನಾಮ ||"

[ಪೂರ್ವ ಸಮುದ್ರತೀರದಿಂದ ಪಶ್ಚಿಮ ಸಮುದ್ರತೀರದವರೆಗೆ ನಿಬಿಡವಾಗಿ ಹಬ್ಬಿ ಮಧ್ಯದೇಶಕ್ಕೆ ಆಭರಣದಂತೆ ಸೊಗಯಿಸುವ ವಿಂಧ್ಯಾಟವಿಯೆಂಬ ಅಡವಿಯಿದೆ. ಕಾಡಾನೆಗಳ ಮದೋದಕದಿಂದ ಪೋಷಿಸಲ್ಪಟ್ಟು ತುಂಬ ಎತ್ತರವಾಗಿರುವುದರಿಂದ ನಕ್ಷತ್ರಗಳ ಗೊಂಚಲುಗಳನ್ನೊ ಎಂಬಂತೆ ಕೊಂಬೆಗಳ ತುದಿಯಲ್ಲಿ ಚನ್ನಾಗಿ ಅರಳಿರುವ ಬಿಳಿದಾದ ಹೂಗಳನ್ನು ಹೊತ್ತಿರುವ ಮರಗಳು ಆ ಅಡವಿಗೆ ಶೋಭೆಯನ್ನುಂಟು ಮಾಡಿರುವುವು. ಅದರಲ್ಲಿ ಮದದಿಂದ ಇಂಪಾಗಿ ದನಿಗೈಯುವ ಕುರವಕ್ಕಿಗಳ ಹಿಂಡು ಮೆಣಸುಬಳ್ಳಿಯ ಚಿಗುರುಗಳನ್ನು (ಯಾವಾಗಲೂ) ಮೆಲ್ಲುತ್ತಿರುವುವು. ಆನೆ ಮರಿಗಳು ತಮ್ಮ ಸೊಂಡಿಲುಗಳಿಂದ ಹಿಸುಕಿಹಾಕಿದ ಹೊಂಗೆಯ ಚಿಗುರುಗಳ ವಾಸನೆ (ಅಲ್ಲಲ್ಲಿ) ಹರಡಿರುವುದು. ಆಸವದ ಮದದಿಂದ ಕೆಂಪಡರಿದ ಕೇರಳಸ್ತ್ರೀಕಪೋಲದಂತೆ ಕೋಮಲ ಕಾಂತಿಯುತವಾಗಿ, ಅಲ್ಲಲ್ಲಿ ವಿಹರಿಸುತ್ತಿರುವ ವನದೇವತೆಗಳ ಪಾದಾಲಕ್ತಕದಿಂದ ಕೆಂಪಾಯಿತೋ ಎನ್ನುವಂತಿರುವ (ಕೆಂಪಾದ) ಚಿಗುರುಗಳ ಸಮೂಹದಿಂದ ಆ ಅಟವಿಯು ಚನ್ನಾಗಿ ಆಚ್ಛಾದಿಸಲ್ಪಟ್ಟಿರುವುದು. ಲವಂಗ ಲತೆಯ ಚಿಗುರುಗಳಿಂದ ಪಾಂಥರು ನಿರ್ಮಿಸಿದ ಸೆಜ್ಜೆಗಳಿಂದೊಪ್ಪುವ ಅದರ ಲತಾಮಂಟಪಗಳ ನೆಲವು, ಗಿಳಿವಿಂಡುಗಳು ತುಂಡರಿಸಿದ ದಾಡಿಂಬರೆಯ ಹಣ್ಣುಗಳ ರಸದಿಂದ (ಸದಾ) ಒದ್ದೆಯಾಗಿರುವುದು. ಒಂದೇಸವನೆ ಸುರಿದ ಪುಷ್ಪಪರಾಗದಿಂದ ಧೂಸರಿತಗಳಾದ ಆ ಲತಾಮಂಟಪಗಳು ಅತ್ಯಂತ ಚಪಲಗಳಾದ ಕೋತಿಗಳು ಅಳ್ಳಾಡಿಸಿದ ಕಕ್ಕೋಲ ವೃಕ್ಷಗಳ ದೆಶೆಯಿಂದ ಉದುರಿದ ಚಿಗುರು ಮತ್ತು ಹಣ್ಣುಗಳಿಂದ ನಾನಾವರ್ಣರಂಜಿತಗಳಾಗಿರುವವು. ಚನ್ನಾಗಿ ಬಲಿತ ತೆಂಗು, ತಾಳೆ, ಕರೀರ ಮತ್ತು ಸುರಹೊನ್ನೆ ಮರಗಳು ಇವುಗಳ ಸುತ್ತಲೂ ಅಂಚಿನಲ್ಲಿ ಇರುವುವು. ವಿಳೇಯದೆಲೆಯ ಬಳ್ಳಿಗಳು ಸುತ್ತಬಳಸಿ ಬಿಗಿದಿರುವ ಅಡಕೆಯ ಮರಗಳಿಂದ ರಮ್ಯವಾಗಿರುವ ಈ ಲತಾ ಮಂಟಪಗಳು ವನಲಕ್ಷ್ಮಿಯರ ವಾಸಭವನಗಳಂತೆ (ಆ ಅಟವಿಯ) ರಾಮಣೀಯಕವನ್ನು ಹೆಚ್ಚಿಸಿರುವುವು. ಮದವೇರಿದ ಆನೆಗಳು ತಮ್ಮ ಗಂಡಸ್ಥಲಗಳಿಂದ ಸುರಿಸಿದ ಮದೋದಕದಿಂದ ತೋಯ್ದಿರುವುವೋ ಎಂಬಂತೆ, ಉನ್ಮಾದಕರವಾದ ಸುಗಂಧವನ್ನು ಬೀರುವ ಏಲಕ್ಕಿಯ ಬಳ್ಳಿಗಳ ವನದಿಂದ (ಆ ಕಾಡಿನ ಒಂದೊಂದು ಪ್ರದೇಶದಲ್ಲಿ) ದಟ್ಟವಾದ ಕತ್ತಲು ಹಬ್ಬಿರುವುದು. ಉಗುರುಗಳ ಮೊನೆಗಳಲ್ಲಿ ತಗುಲಿಕೊಂಡಿರುವ ಆನೆ ತಲೆಯಾಣೆಮುತ್ತುಗಳ ಲೋಭವಶದಿಂದ ಬೇಡಪಡೆಯೊಡೆಯರು ನಿರಂತರವೂ ಕೊಲ್ಲುತ್ತಿರುವ ಅಸಂಖ್ಯಸಿಂಹಭರಿತವಾದ ಆ ಕಾಡು :*

* ಇಲ್ಲಿಗೆ ಪ್ರತಿಭೆಯ ಕಾರ್ಯ ಮುಗಿದು ಪಾಂಡಿತ್ಯಪ್ರದರ್ಶನ ಪ್ರಾರಂಭಿಸುತ್ತದೆ.

ಯಮನಗರಿಯಂತೆ—ಯಾವಾಗಲೂ ಸಮೀಪದಲ್ಲಿರುವ ಮೃತ್ಯುವಿನಿಂದ ಭಯಂಕರವಾದುದೂ ಮಹಿಷಾಧ್ಯುಷಿತವೂ ಎಂದರೆ ಯಮನ ವಾಹನವಾದ ಕೋಣಕ್ಕೆ ವಾಸಸ್ಥಾನವೂ (ಕಾಡು ಕೋಣಗಳ ಸಮೂಹಕ್ಕೆ ವಾಸಸ್ಥಾನವೂ)

ಯುದ್ಧಸನ್ನದ್ಧವಾದ ಸೇನೆಯಂತೆ—ಬಾಣಾಸನಾರೋಪಿತ ಶಿಲೀಮುಖವೂ ಎಂದರೆ ಧನುಸ್ಸಿನಲ್ಲಿ ಏರಿಸಿದ ಬಾಣಗಳುಳ್ಳದ್ದೂ (ಬಾಣ ಮತ್ತು ಆಸನ ವೃಕ್ಷಗಳ ಮೇಲೆ ಕುಳಿತಿರುವ ದುಂಬಿಗಳುಳ್ಳದ್ದೂ) ವಿಮುಕ್ತಸಿಂಹನಾದಾ ಚ ಎಂದರೆ ಬಿಡಲ್ಪಟ್ಟ ಸಿಂಹನಾದ ಉಳ್ಳದ್ದೂ (ಸಿಂಹಗಳಿಂದ ಮಾಡಲ್ಪಟ್ಟ ಗರ್ಜನೆಯುಳ್ಳದ್ದೂ)

ಚೌರ್ಯಶಾಸ್ತ್ರಪ್ರವಕ್ತೃವಾದ **ಕರ್ಣೀಸುತನ ಕಥೆಯಂತೆ** ಸನ್ನಿಹಿತ ವಿಪುಲಾಚಲವೂ ಎಂದರೆ (ಕರ್ಣೀಸುತನ ಗೆಳೆಯರಾದ) ವಿಪುಲ ಮತ್ತು ಅಚಲರನ್ನು (ಸಮೀಪವರ್ತಿಗಳನ್ನಾಗಿ) ಹೊಂದಿರುವುದೂ (ಬೃಹದಾಕಾರಗಳಾದ ಬೆಟ್ಟಗಳನ್ನು ಸಮೀಪದಲ್ಲಿ ಹೊಂದಿರುವುದೂ) ಶಶೋಪಗತವೂ ಎಂದರೆ (ಕರ್ಣೀಸುತನ ಮಂತ್ರಿಯಾದ) ಶಶನನ್ನು ಹೊಂದಿರುವುದೂ (ಮೊಲಗಳಿಂದ ತುಂಬಿರುವುದೂ).

ಕಾತ್ಯಾಯನಿಯಂತೆ—ಪ್ರಚಲಿತಖಡ್ಗಭೀಷಣವೂ ಎಂದರೆ ಝಳಪಿಸಿದ ಕತ್ತಿಯಿಂದ ಭಯಂಕರವಾಗಿ (ಓಡಾಡುತ್ತಿರುವ ಖಡ್ಗಮೃಗಗಳಿಂದ ಭಯಾನಕವೂ) ರಕ್ತಚಂದನಾಲಂಕೃತಾ ಚ ಎಂದರೆ ರಕ್ತವೇ ಚಂದನ, ಅದರಿಂದ ಅಲಂಕೃತವೂ (ರಕ್ತಚಂದನ ವೃಕ್ಷಗಳಿಂದ ಅಲಂಕೃತವೂ)

ಕಲ್ಪಾಂತ ಪ್ರದೋಷ ಸಂಧ್ಯೆಯಂತೆ ಪ್ರನೃತ್ತನೀಲಕಂಠವೂ ಎಂದರೆ ಶ್ರೇಷ್ಠವಾದ ನರ್ತನವನ್ನುಳ್ಳ ಶಂಕರನನ್ನು ಹೊಂದಿರುವುದೂ (ಚನ್ನಾಗಿ ನರ್ತಿಸುವ ನವಿಲುಗಳನ್ನುಳ್ಳದ್ದೂ) ಪಲ್ಲವಾರುಣವೂ ಎಂದರೆ ಚಿಗುರಿನಂತೆ ಕೆಂಪಾಗಿರುವುದೂ (ಚಿಗುರುಗಳಿಂದ ಕೆಂಪಾಗಿರುವುದೂ).

ಅಮೃತ ಮಥನ ವೇಳೆಯಂತೆ ಶ್ರೀ ದ್ರುಮೋಪಶೋಭಿತವೂ ಎಂದರೆ ಲಕ್ಷ್ಮೀ ಮತ್ತು ಪಾರಿಜಾತಗಳಿಂದ ಅಲಂಕೃತವೂ (ಅಶ್ವತ್ಥ ಅಥವಾ ಬಿಲ್ವವೃಕ್ಷಗಳಿಂದ ಮನೋಹರವಾಗಿರುವುದೂ) ವಾರುಣೀಪರಿಗತವೂ ಎಂದರೆ ಸುರೆಯಿಂದ ಕೂಡಿದುದೂ (ವರುಣ ವೃಕ್ಷಗಳ ಸಾಲಿನಿಂದ ಕೂಡಿದುದೂ).

ಮಳೆಗಾಲದಂತೆ ಘನಶ್ಯಾಮಲವೂ ಎಂದರೆ ಮೇಘಗಳಿಂದ ಕಪ್ಪಾಗಿರುವುದೂ (ಮೇಘಗಳಂತೆ ಕಪ್ಪಾಗಿರುವುದೂ), ಅನೇಕ ಶತಹ್ರದಾಲಂಕೃತವೂ ಎಂದರೆ ಅಸಂಖ್ಯಗಳಾದ ಮಿಂಚುಗಳಿಂದ ಕೂಡಿದುದೂ (ನೂರಾರು ಮಡುಗಳಿಂದ ಕೂಡಿದುದೂ).

ಚಂದ್ರನ ಆಕೃತಿಯಂತೆ ಸತತಮೃಕ್ಷ ಸಾರ್ಥಾನುಗತವೂ ಎಂದರೆ ನಿರಂತರವೂ ಹಿಂದೆ ಬರುತ್ತಿರುವ ನಕ್ಷತ್ರಗಣಗಳಿಂದ ಕೂಡಿದುದೂ (ಯಾವಾಗಲೂ ಕರಡಿಗಳ

ಹಿಂಡುಗಳಿಂದ ತುಂಬಿದುದೂ) ಹರಿಣಾಧ್ಯಾಸಿತವೂ ಎಂದರೆ ಭ್ರಮಾತ್ಮಕವಾದ ಜಿಂಕೆಯನ್ನುಳ್ಳದ್ದೂ (ಜಿಂಕೆಗಳಿಂದ ಕೂಡಿರುವುದೂ).

ರಾಜಮರ್ಯಾದೆಯಂತೆ ಚಮರಮೃಗಬಾಲವ್ಯಜನೋಪಶೋಭಿತವೂ ಎಂದರೆ ಚಮರೀಮೃಗಗಳ ಬಾಲಗಳಿಂದ ಮಾಡಿದ ವ್ಯಜನಗಳಿಂದ ಮನೋಹರವೂ (ಚಮರೀ ಮೃಗಗಳ ಬಾಲಗಳೇ ವ್ಯಜನಗಳು; ಇವುಗಳಿಂದ ಮನೋಹರವೂ) ಸಮದಗಜ ಘಟಾಪರಿಪಾಲಿತವೂ ಎಂದರೆ ಮದಿಸಿದ ಆನೆಗಳ ಹಿಂಡಿನಿಂದ ಪಾಲಿಸಲ್ಪಟ್ಟುದೂ.

ಪಾರ್ವತಿಯಂತೆ ಸ್ಥಾಣುಸಂಗತವೂ ಎಂದರೆ ಶಿವನೊಡಗೂಡಿರುವುದೂ (ಮರಗಳ ಮೋಟುಗಳಿಂದ ಕೂಡಿರುವುದೂ!) ಮೃಗಪತಿಸೇವಿತವೂ ಎಂದರೆ ವಾಹನವಾದ ಸಿಂಹದಿಂದ ಸೇವಿಸಲ್ಪಡುತ್ತಿರುವುದೂ (ಸಿಂಹಗಳಿಗೆ ಆಶ್ರಯವೂ).

ಸೀತೆಯಂತೆ ಪ್ರಸೂತ ಕುಶಲವವೂ ಎಂದರೆ ಕುಶ ಮತ್ತು ಲವರನ್ನು ಹಡೆದಿರುವುದೂ (ಪುಷ್ಪ ಮತ್ತು ದರ್ಭೆಗಳ ಕಾಂಡಗಳಿಂದ ತುಂಬಿದುದೂ) ನಿಶಾಚರ ಪರಿಗೃಹೀತವೂ ಎಂದರೆ ರಾವಣನಿಂದ ಹಿಡಿಯಲ್ಪಟ್ಟದ್ದೂ (ಗೂಬೆಗಳೇ ಮೊದಲಾದ ನಿಶಾಚರ ಜನ್ತುಗಳಿಗೆ ಆಶ್ರಯವೂ).

ಕಾಮಿನಿಯಂತೆ ಚಂದನಮೃಗಮದಪರಿಮಲವಾಹಿನಿಯೂ ಎಂದರೆ ಗಂಧ ಮತ್ತು ಕಸ್ತೂರಿಗಳ ಸುಗಂಧವನ್ನು ಲೇಪಿಸಿಕೊಂಡಿರುವುದೂ (ಎಲ್ಲೆಡೆಗೂ ಬೀರುತ್ತಿರುವುದೂ) ರುಚಿರಾಗುರುತಿಲಕಭೂಷಿತವೂ ಎಂದರೆ ರುಚಿರಾ+ಗುರುತಿಲಕ ಭೂಷಿತಾ ಮನೋಹರವೂ ದೊಡ್ಡದಾದ ತಿಲಕವೃಕ್ಷಗಳಿಂದ ಅಲಂಕೃತವೂ (ರಮ್ಯವಾದ ಅಗುರು ಮತ್ತು ತಿಲಕ ವೃಕ್ಷಗಳಿಂದ ಶೋಭಿತವೂ).

ವಿರಹ ಪೀಡಿತೆಯಂತೆ ವಿವಿಧ ಪಲ್ಲವಾನಿಲ ವೀಜಿತವೂ ಎಂದರೆ ಅನೇಕ ವಿಧವಾದ ಚಿಗುರುಗಳ ಗಾಳಿಯಿಂದ ವೀಜಿಸಲ್ಪಟ್ಟುದೂ (ವಿವಿಧಪಲ್ಲವಾ+ಅನಿಲ ವೀಜಿತಾ ಅನೇಕ ವಿಧವಾದ ಚಿಗುರುಗಳುಳ್ಳದ್ದೂ ಮಲಯಾನಿಲ ವೀಜಿತವೂ) ಸಮದನವೂ ಎಂದರೆ ಮದನಪರವಶವೂ (ಮದನವೃಕ್ಷಭರಿತವೂ).

ಬಾಲಕನ ಕೊರಳಿನಂತೆ ವ್ಯಾಘ್ರನಖಪಂಕ್ತಿಮಣ್ಡಿತವೂ ಎಂದರೆ ಹುಲಿಯ ಉಗುರುಗಳ ಹಾರದಿಂದ ಅಲಂಕೃತವೂ (ಹುಲಿಯ ಉಗುರುಗಳ ಸಾಲುಗಳಿಂದ ಶೋಭಿಸುವುದೂ) ಗಣ್ಡಕಾಭರಣವೂ ಎಂದರೆ ಗಂಡಕವೆಂಬ ಆಭರಣವನ್ನು ಹೊಂದಿರುವುದೂ (ಖಡ್ಗಮೃಗಗಳಿಂದ ಅಲಂಕೃತವೂ).

ಪಾನ ಭೂಮಿಯಂತೆ—ಪ್ರಕಟಿತ ಮಧುಕೋಷಕಶತವೂ ಎಂದರೆ ಕಾಣುವಂತೆ ಇರಿಸಿರುವ ನೂರಾರು ಹೆಂಡದ ಚೀಲಗಳನ್ನುಳ್ಳದ್ದೂ (ಜೇನುಕೊಡಗಳನ್ನುಳ್ಳದ್ದೂ) ಪ್ರಕೀರ್ಣ ವಿವಿಧ ಕುಸುಮವೂ ಎಂದರೆ ಹರಡಿದ ಅನೇಕವಿಧ ಪುಷ್ಪಗಳನ್ನುಳ್ಳದ್ದೂ ಆಗಿ,

ಕೆಲವೆಡೆ, **ಪ್ರಲಯಕಾಲದಂತೆ** ಆದಿವರಾಹನು ಕೋರೆದಾಡೆಗಳಿಂದ ಎತ್ತಿದ ಭೂಮಂಡಲವನ್ನುಳ್ಳದ್ದಾಗಿದೆ (ಎಂದರೆ ದೊಡ್ಡದೊಡ್ಡ ಹಂದಿಗಳು ತಮ್ಮ ದಾಡೆಗಳಿಂದ ಗೂಟಾಡಿದ ಭೂಪ್ರದೇಶವನ್ನು ಹೊಂದಿದೆ).

ಹಲವೆಡೆ, **ಲಂಕೆಯಂತೆ** ಚಟುಲವಾನರವೃಂದಭಜ್ಯಮಾನತುಙ್ಗಶಾಲಾಕುಲಾ ಎಂದರೆ (ಸುಗ್ರೀವನೇ ಮೊದಲಾದ) ಚಪಲಕಪಿಗಳಿಂದ ಮುರಿಯಲ್ಪಡುತ್ತಿರುವ ಎತ್ತರವಾದ ಪ್ರಾಕಾರಗಳಿಂದ ವ್ಯಗ್ರವಾಗಿದೆ (ಚಪಲಗಳಾದ ಕಪಿಗಳು ಮುರಿಯುತ್ತಿದ್ದ ಎತ್ತರವಾದ ಶಾಲವೃಕ್ಷಗಳಿಂದ ಅಸ್ತವ್ಯಸ್ತವಾಗಿದೆ).

ಇನ್ನೊಂದೊಂದು ಕಡೆ, **ಆಗತಾನೆ ರಚಿಸಿರುವ ವಿವಾಹ ಭೂಮಿಯಂತೆ** ಹರಡಿರುವ ಹಸಿಯ ದರ್ಭೆ, ಸಮಿತ್ತು, ಪುಷ್ಪ ಮತ್ತು ಬನ್ನಿ ಮತ್ತು ಮುತ್ತುಗದ ಕೊಂಬೆಗಳಿಂದ ಶೋಭಿತವಾಗಿದೆ.

ಮತ್ತೊಂದು ಕಡೆ **ರೇಗಿದ ಸಿಂಹಗರ್ಜನೆಯನ್ನು ಕೇಳಿ ಹೆದರಿ ರೋಮಾಂಚ ಹೊಂದಿತೋ** ಎಂಬಂತೆ, ಮುಳ್ಳುಗಳಿಂದ ಆವೃತವಾಗಿದೆ. ಇನ್ನೊಂದು ಕಡೆ **ಮಧುಪಾನದಿಂದ ಮತ್ತವಾಗಿರುವುದೋ** ಎಂಬಂತೆ ಕೋಗಿಲೆಗಳ ಸಮೂಹದ ಪ್ರಲಾಪವನ್ನು ಹೊಂದಿದೆ—ಮಗುದೊಂದು ಕಡೆ, **ಹುಚ್ಚು ಹಿಡಿದು ವಾತರೋಗವಶದಿಂದ ತಾಲಹೊಡೆಯುವ ಶಬ್ದವನ್ನುಂಟುಮಾಡುತ್ತಿದೆಯೋ** ಎಂಬಂತೆ ತಾಲವೃಕ್ಷಗಳ ಶಬ್ದದಿಂದ ಕೂಡಿದೆ. ಎಲ್ಲೋ ಒಂದು ಕಡೆ **ವಿಧವೆಯಂತೆ** ತ್ಯಜಿಸಿದ ತಾಲಪತ್ರ (ವೆಂಬಕರ್ಣಾಭರಣ) ವುಳ್ಳದ್ದಾಗಿರುವುದು ಎಂದರೆ ತಾಲಪತ್ರಗಳು ನೆಲದಮೇಲೆ ಉದುರಿರುವುವು. ಒಂದು ಬಳಿ **ಸಮರಭೂಮಿಯಂತೆ** ನೂರಾರು ಬಾಣಗಳನ್ನು ಹರಡಿದೆ (ಶರಶತನಿಚಿತಾ) ಎಂದರೆ ಅನೇಕ ವಿಧವಾದ ಹುಲ್ಲು ನೆಲದಮೇಲೆ ಬಿದ್ದಿದೆ. ಇನ್ನೊಂದು ಬಳಿ **ಇಂದ್ರನ ಶರೀರದಂತೆ** ಸಾವಿರ ಕಣ್ಣುಗಳಿಂದ ಕೂಡಿದೆ (ನೇತ್ರಸಹಸ್ರಸಂಕುಲಾ) ಎಂದರೆ ನೇತ್ರವೆಂಬ ಸಾವಿರಾರು ಮರಗಳಿಂದ ನಿಬಿಡವಾಗಿದೆ. ಕೆಲವು ಪ್ರದೇಶಗಳಲ್ಲಿ, **ನಾರಾಯಣನ ದೇಹದಂತೆ** ಹೊಂಗೆಯ ಮರದ ಹಾಗೆ ನೀಲ (ತಮಾಲನೀಲಾ) ಎಂದರೆ ಹೊಂಗೆಯ ಮರಗಳಿಂದ ನೀಲವರ್ಣವನ್ನು ಹೊಂದಿದೆ. ಕೆಲವು ಭಾಗಗಳಲ್ಲಿ **ಅರ್ಜುನನ ರಥದ ಬಾವುಟದಂತೆ,** (ಆಂಜನೇಯನೆಂಬ) ಕಪಿಯಿಂದ ಆಕ್ರಮಿಸಲ್ಪಟ್ಟಿದೆ ಎಂದರೆ ಕೋತಿಗಳಿಂದ ತುಂಬಿದೆ. ಇನ್ನೊಂದು ಬಳಿ **ರಾಜನ ಅರಮನೆಯ ದ್ವಾರದಂತೆ** (ಪ್ರತೀಹಾರಿಗಳು ಹಿಡಿದಿರುವ) ಅನೇಕ ವೇತ್ರಲತೆಗಳಿಂದ ಪ್ರವೇಶವಿಲ್ಲದುದು (ವೇತ್ರಲತಾಶತದುಷ್ಪ್ರವೇಶಾ) ಎಂದರೆ ನೂರಾರು ವಿಧವಾದ ಬೆತ್ತಗಳು ಬೆಳೆದು ಪ್ರವೇಶಕ್ಕೆ ಎಡೆಯಿಲ್ಲದಂತಾಗಿದೆ. ಇನ್ನು ಹಲವು ಭಾಗಗಳಲ್ಲಿ, **ವಿರಾಟ**

ನಗರಿಯಂತೆ ನೂರು ಕೀಚಕರಿಂದ ಕೂಡಿದೆ (ಕೀಚಕ ಶತಾವೃತಾ) ಎಂದರೆ ನೂರಾರು ವಿಧವಾದ ಬಿದಿರುಗಳಿಂದ ಕೂಡಿದೆ. ಕೆಲವೆಡೆ **ಆಕಾಶ ಲಕ್ಷ್ಮಿಯಂತೆ** ವ್ಯಾಧರೂಪಿಯಾದ ರುದ್ರನು ಬೆನ್ನು ಹತ್ತಿ ಭೀತಿಯಿಂದ ಚಂಚಲವಾದ ನೇತ್ರ ತಾರಕೆಗಳನ್ನುಳ್ಳ ಮೃಗರೂಪಿಯಾದ ಪ್ರಜಾಪತಿಯನ್ನು ಹೊಂದಿದೆ, (ವ್ಯಾಧಾನು ಗಮ್ಯಮಾನತರಲತಾರಕಮೃಗಾ,) ಎಂದರೆ ಬೇಡರು ಬೆನ್ನಟ್ಟಿದಾಗ ಭಯದಿಂದ ಚಂಚಲವಾದ ಕಣ್ಣುಗಳನ್ನುಳ್ಳ ಜಿಂಕೆಗಳಿಂದ ಕೂಡಿರುತ್ತದೆ. ಒಂದೊಂದು ಕಡೆ **ವ್ರತವನ್ನು ಕೈಗೊಂಡಿರುವ ತಪಸ್ವಿನಿಯಂತೆ** ದರ್ಭೆ, ಚೀರ, ಜಟಾ, ವಲ್ಕಲಗಳನ್ನು ಧರಿಸಿದೆ, ಎಂದರೆ ದರ್ಭೆ, ಚೀರವೆಂಬ ಒಂದು ಜಾತಿಯ ತೃಣ, ಬಿಳಿಲು ಮತ್ತು ತೊಗಟೆಗಳು ಹರಡಿವೆ. **ತುಂಬ ಹೆಚ್ಚಾದ ಎಲೆಗಳ ರಾಶಿಯಿಂದ ಕೂಡಿದ್ದರೂ ಏಳು ಎಲೆಗಳಿಂದ ಕೂಡಿದೆ** (ವಿರೋಧ) ಎಂದರೆ ಸಪ್ತಪರ್ಣವೆಂಬ ವೃಕ್ಷಗಳು ಹೇರಳವಾಗಿವೆ (ಪರಿಹಾರ). **ಕ್ರೂರ ಸ್ವಭಾವವುಳ್ಳದ್ದಾದರೂ ಮುನಿ ಜನರಿಗೆ ಅರ್ಹವಾದುದು** (ವಿರೋಧ) ಎಂದರೆ ಕ್ರೂರ ಮೃಗಗಳಿಂದ ತುಂಬಿದ್ದರೂ ಋಷಿಗಳು ವಾಸಿಸುತ್ತಾರೆ (ಪರಿಹಾರ). **ಮುಟ್ಟಾ (ದವಳಾ) ಗಿದ್ದರೂ ಪವಿತ್ರವಾದುದಾಗಿದೆ** (ವಿರೋಧ). ಹೂಗಳಿಂದ ತುಂಬಿದ್ದರೂ (ಪುಷ್ಪವತ್ಯಪಿ) ಪವಿತ್ರವಾಗಿದೆ (ಪರಿಹಾರ).

ದಂಡಿ : ಕಾಲ ಮತ್ತು ಕೃತಿ

ದಂಡಿಯ ದಶಕುಮಾರಚರಿತೆಯು ಸಂಸ್ಕೃತ ಗದ್ಯಕಾವ್ಯದ ಕೆಲವು ಅಸಾಧಾರಣ ಧರ್ಮಗಳನ್ನು ಚನ್ನಾಗಿ ವ್ಯಕ್ತಪಡಿಸುತ್ತದೆ; ಅಲ್ಲದೆ ಲಾಕ್ಷಣಿಕರ ಎಲ್ಲ ನಿಯಮಗಳನ್ನೂ ಅಷ್ಟಾಗಿ ಅನುಸರಿಸುವುದಿಲ್ಲ. ಇದರಿಂದ ಕಥಾ ಮತ್ತು ಆಖ್ಯಾಯಿಕಾ ಲಕ್ಷಣಗತವಾದ ಭೇದಗಳನ್ನು ತಿರಸ್ಕರಿಸಿರುವ ಕಾವ್ಯಾದರ್ಶಕರ್ತೃವೂ ಈತನೂ ಒಬ್ಬನೇ ಎಂದು ಕಾಣಬಹುದು. ಆದರೆ ಗದ್ಯಕಾವ್ಯ ಕರ್ತೃವು ಗದ್ಯಕಾವ್ಯವನ್ನು ಬರೆಯುವಾಗ ಲಕ್ಷಣಗಳನ್ನು ಲೆಕ್ಕಿಸದೆ ಸ್ವತಂತ್ರವಾಗಿ ಬೇರೆ ಜಾತಿಯ ಕಾವ್ಯವನ್ನೇ ಸೃಷ್ಟಿಸಲೂ ಬಹುದಾದುದರಿಂದ, ಕರ್ತೃೈಕ್ಯವನ್ನು ಸಾಧಿಸಲು ಈ ಕಾರಣವು ತುಂಬ ಕೃಶವಾದುದು. ಇದುವರೆಗೂ ಈ ವಿಷಯದಲ್ಲಿ ಏಕಾಭಿಪ್ರಾಯವಾಗಲೀ ದೃಢವಾದ ಸಾಕ್ಷ್ಯವಾಗಲೀ ದೊರೆತಿಲ್ಲ. ಕೆಲ ವಿಮರ್ಶಕರು ಎರಡು ಕೃತಿಗಳಿಗೂ ಒಬ್ಬನೇ ಕರ್ತೃವೆಂಬ ಸಾಂಪ್ರದಾಯಿಕವಾದ ತಮ್ಮ ನಂಬಿಕೆಗೆ ಅನುಕೂಲವಾದ ಕಾರಣಗಳನ್ನು ಅವಿಶ್ರಾಂತವಾಗಿ ಹುಡುಕತೊಡಗಿದ್ದಾರೆ. ದಂಡವನ್ನು ಧರಿಸಿದ ಸನ್ಯಾಸಿ ಎಂಬ ಅರ್ಥದಲ್ಲಿ ದಂಡಿಪದವು ಕೇವಲ ಅನ್ವರ್ಥನಾಮವೇ ಆಗಿದ್ದರೆ ಅಂಕಿತನಾಮ ಬೇರೆಯದಿದ್ದರೂ ಇರಬಹುದು. ಅಲ್ಲದೆ ದಶಕುಮಾರಚರಿತೆಯು

ಕಾವ್ಯಾದರ್ಶದಲ್ಲಿನ ಲಕ್ಷಣಗಳಿಗೇ ವಿರುದ್ಧವಾಗಿದೆಯೆಂದು ತೋರಿಸಲು ಸಿಕ್ಕುವ ನಿದರ್ಶನಗಳು ಅಷ್ಟೇನು ಉಪೇಕ್ಷಣೀಯಗಳಲ್ಲ; ಕಡಮೆಯಾಗಿಯೂ ಇಲ್ಲ. ನುಡಿದಂತೆ ನಡೆದುಕೊಳ್ಳದಿರಬಹುದೆಂಬ ವಾದವು ಈ ಸಂದರ್ಭದಲ್ಲಿ ಬಹಳ ದುರ್ಬಲವಾದುದು. ಏಕೆಂದರೆ ನಿಯಮಗಳನ್ನು ಯಾಂತ್ರಿಕವಾಗಿ ಅನುಸರಿಸುವುದು ಮಾತ್ರವೇ ಇಲ್ಲಿನ ವಿಷಯವಲ್ಲ. ಮನೋಹರವಾದ ಶಬ್ದಗಳ ಗುಮ್ಫನ, ಅಭಿರುಚಿ ಮತ್ತು ಅಭಿಪ್ರಾಯಸಾಮಾನ್ಯ ಇವುಗಳೂ ಸೇರಿಕೊಂಡೇ ಇವೆ. ದಂಡಿಯು ದಶಕುಮಾರಚರಿತೆಯನ್ನು ಯೌವನದಲ್ಲಿಯೂ, ಕಾವ್ಯಾದರ್ಶವನ್ನು ಜ್ಞಾನಪರಿಪಾಕ ಸಮನ್ವಿತವಾದ ವೃದ್ಧಾಪ್ಯದಲ್ಲಿಯೂ ಬರೆದಿರಬೇಕೆಂಬ ವಾದವು ಸಯುಕ್ತಿಕವಾದುದಾದರೂ ಇದನ್ನು ಸಮರ್ಥಿಸುವ ಅಪಕ್ವತೆ ಇವೆರಡು ಕೃತಿಗಳಲ್ಲಿ ಒಂದರಲ್ಲಿಯೂ ಇಲ್ಲ. ಕಾವ್ಯಾದರ್ಶದಲ್ಲಿ ಸರ್ವೋತ್ಕೃಷ್ಟವೆಂದು ಹೊಗಳಿರುವ ವೈದರ್ಭಮಾರ್ಗವೇ ದಶಕುಮಾರಚರಿತೆಯಲ್ಲಿ ಕಂಡುಬರುವುದರಿಂದ ಎರಡೂ ಏಕಕರ್ತೃಕವೆಂಬವಾದ ಸಂಶಯಾಸ್ಪದ ಮತ್ತು ಅಷ್ಟು ಗಮನಾರ್ಹವಾದುದಲ್ಲ. ಇಬ್ಬರೂ ದಕ್ಷಿಣ ದೇಶದವರೆಂಬ ಸೂಚನೆಯಿದೆ, ಆದರೆ ಸಾಧಿಸಲು ಸಾಧ್ಯವಾಗಿಲ್ಲ. ದಶಕುಮಾರಚರಿತೆಯಲ್ಲಿ ಕಂಡುಬರುವ ಹದಿನೆಂಟು ದೇಶಗಳ ಹೆಸರುಗಳು ಕೇವಲ ಸಾಂಪ್ರದಾಯಿಕವೆಂದು ಕಾಣುವುದೇ ಹೊರತು ಕರ್ತೃವು ಆ ಪ್ರದೇಶಗಳನ್ನು ಚನ್ನಾಗಿ ತಿಳಿದಿದ್ದನೆಂಬುದಕ್ಕೆ ಯಾವ ಆಧಾರವೂ ಇಲ್ಲ; ಕಾವ್ಯಾದರ್ಶದಲ್ಲಿ ಸಿಕ್ಕುವ ಸೂಚನೆಗಳಿಂದ ಏನೂ ಸಾಧಿಸಲಾಗುವುದಿಲ್ಲ. ದಶಕುಮಾರಚರಿತೆಯಲ್ಲಿ ಸಿಕ್ಕುವ ಭೂವಿವರಣೆಯ ಆಧಾರದಿಂದ ಹರ್ಷಚಕ್ರಾಧಿಪತ್ಯದ ಕಾಲಕ್ಕೆ ಹಿಂದೆ ಇದ್ದ ದೇಶದ ಪರಿಸ್ಥಿತಿ ಸೂಚಿತವಾಗುವುದರಿಂದ ಎಂಟನೆಯ ಶತಮಾನದ ಆದಿಭಾಗದ ಕಾವ್ಯಾದರ್ಶಕ್ಕಿಂತಲೂ ದಶಕುಮಾರಚರಿತೆಯು ಹಿಂದಿನದೆಂದು ಭಾಸವಾಗುತ್ತದೆ. ಹೆಚ್ಚು ಬಳಕೆಯಲ್ಲಿಲ್ಲದ ಶಬ್ದಗಳ ಉಪಯೋಗ, ಅಪಶಬ್ದ ಪ್ರಯೋಗ ಮತ್ತು ಶೈಲಿವಿಶೇಷಗಳು ದಶಕುಮಾರಚರಿತೆಯ ಪ್ರಾಚೀನತೆಯನ್ನೇ ತೋರಿಸುವುವು. ಸುಬಂಧು ಮತ್ತು ಬಾಣರಲ್ಲಿ ಕಂಡುಬರುವ ಗದ್ಯಕಾವ್ಯದ ಕೃತ್ರಿಮತೆ ಮತ್ತು ರಂಜನೆ ದಶಕುಮಾರಚರಿತೆಯಲ್ಲಿಲ್ಲದಿರುವುದು ಇದನ್ನೇ ಸಮರ್ಥಿಸುತ್ತದೆ. ದಂಡಿಯು ವರ್ಣಿಸಿರುವ ಆಗಿನ ಕಾಲದ ಸಮಾಜದ ನೈತಿಕವಾದ ಅಧೋಗತಿ ಮೃಚ್ಛಕಟಿಕ ಮುಂತಾದುವುಗಳಲ್ಲಿಯೂ ಪ್ರತಿಬಿಂಬಿತವಾಗಿರುವುದರಿಂದ ದಶಕುಮಾರಚರಿತೆಯು ಈ ಕಾರಣದಿಂದ ಈಚಿನದೆಂದು ಹೇಳಲು ಸಾಧ್ಯವಿಲ್ಲ. ಭಾವ, ರೀತಿ ಮತ್ತು ಭಾಷೆ ಇವುಗಳ ದೃಷ್ಟಿಯಿಂದಲೂ ದಶಕುಮಾರಚರಿತೆಯು ಪ್ರಾಚೀನವೆಂದು ಹೇಳಬೇಕಾಗುತ್ತದೆ. ಆದರೆ ಡಾ|| ಎಂ. ಕೃಷ್ಣಮಾಚಾರಿಯವರು ದಂಡಿಯನ್ನು ಬಾಣನ ಸಮಕಾಲೀನನೆಂದು ಅಭಿಪ್ರಾಯಪಡುತ್ತಾರೆ.

ದಂಡಿಯದೆಂದು ಹೇಳಲಾದ ಅವನ್ತಿಸುಂದರೀಕಥೆಯ ಕಾದಂಬರೀ ಕಥೆಯು ಬಾಣನ ಕಾದಂಬರಿಯ ಪೂರ್ವಾರ್ಧದ ಅನುಬಂಧದಂತಿರುವುದರಿಂದ ದಂಡಿಯು ಕಾದಂಬರಿಯ ಪೂರ್ವಾರ್ಧವನ್ನು ಓದಿ ಮೆಚ್ಚಿ ಅದರ ಕಥೆಯನ್ನೇ ತನ್ನ ಕಾವ್ಯದಲ್ಲಿ ಮುಂದುವರೆಸಿರಬೇಕೆಂದು ಊಹಿಸುತ್ತಾರೆ.

ದಶಕುಮಾರಚರಿತೆಯ ಕಥೆ

ದಶಕುಮಾರಚರಿತೆಯು ಬಾಣನ ಕೃತಿಗಳಂತೆಯೇ ಅಪೂರ್ಣ, ಜೊತೆಗೆ ಆರಂಭ ಸಂದೇಹಾಸ್ಪದ. ದಶಕುಮಾರಚರಿತೆ ಭಾಗತ್ರಯಾತ್ಮಕವಾದುದು. ಮೊದಲನೆಯ ಭಾಗವು ಪೂರ್ವಪೀಠಿಕೆ ಎಂದೂ ಎರಡನೆಯದು ದಶಕುಮಾರಚರಿತೆಯೆಂದೂ ಮೂರನೆಯದು ಉತ್ತರಪೀಠಿಕೆಯೆಂದೂ ಕರೆಯಲ್ಪಟ್ಟಿದೆ. ಐದು ಉಚ್ಛ್ವಾಸಗಳನ್ನುಳ್ಳ ಪೂರ್ವಪೀಠಿಕೆಯು ಬಲವಾದ ಕಾರಣಗಳಮೇಲೆ ಬೇರೆಯವರಿಂದ ರಚಿಸಲ್ಪಟ್ಟಿರ ಬೇಕೆಂದು ಊಹಿಸಲಾಗಿದೆ. ಎಂಟು ಉಚ್ಛ್ವಾಸಗಳಲ್ಲಿ ಎಂಟೇ ಜನ ರಾಜಪುತ್ರರ ಕಥೆಗಳನ್ನೊಳಗೊಂಡಿರುವ 'ದಶಕುಮಾರ ಚರಿತೆ'ಯ ದೆಸೆಯಿಂದ ತಪ್ಪಿಸಿಕೊಂಡಿರ ಬಹುದಾದ ಇನ್ನಿಬ್ಬರು ರಾಜಪುತ್ರರ ಕಥೆಗಳನ್ನೂ ಎಲ್ಲ ಕಥೆಗಳ ಭೂಮಿಕೆಯನ್ನೂ ಒದಗಿಸುವಸಲುವಾಗಿಯೇ ಪೂರ್ವಪೀಠಿಕೆಯು ಬರೆದು ಸೇರಿಸಲ್ಪಟ್ಟಿರಬೇಕು. ಅಲ್ಲದೆ ಈ ಪೂರ್ವಪೀಠಿಕೆಯು ವಿವರಗಳಲ್ಲಿ ಪರಸ್ಪರ ವಿರುದ್ಧವಾದ ಮತ್ತು ದಂಡಿಯು ತಾನೇ ಬರೆದಿರುವ ಕಥೆಗೆ ಹೊಂದದ ಕಥೆಗಳನ್ನುಳ್ಳ ಅನೇಕ ರೂಪಗಳಲ್ಲಿ ಸಿಕ್ಕುವುದು. ಎಂ. ಆರ್. ಕವಿ ಎಂಬುವರಿಂದ ಪರಿಷ್ಕೃತವಾಗಿ ಪ್ರಕಾಶಿಸಲ್ಪಟ್ಟಿರುವ, ದಂಡಿಕೃತ ವೆಂದು ಹೇಳಲಾದ, ಅವಂತಿಸುಂದರೀಕಥೆಯೆಂಬ ಗದ್ಯಕಾವ್ಯವು ದಶಕುಮಾರ ಚರಿತೆಯ ವಿನಷ್ಟಪೂರ್ವಪೀಠಿಕೆಯೆಂದು ಕೆಲವರ ವಾದ. ದಶಕುಮಾರಚರಿತೆಯ ಎಂಟನೆಯ ಉಚ್ಛ್ವಾಸದಲ್ಲಿ ಅಪೂರ್ಣವಾಗಿ ನಿಂತಿರುವ ವಿಶ್ರುತನ ಕಥೆಯನ್ನು ಪೂರ್ತಿ ಗೊಳಿಸುವ ಕಾರ್ಯವು ಉತ್ತರಪೀಠಿಕೆಯಲ್ಲಿ ನಡೆದಿದೆ. ಪೂರ್ವ ಪೀಠಿಕೆಯಂತೆಯೇ ಉತ್ತರಪೀಠಿಕೆಯೂ ಅನೇಕ ರೂಪಾಂತರಗಳಲ್ಲಿ ದೊರೆಯುತ್ತದೆ. ಇವುಗಳಲ್ಲಿ ಒಂದು, ಉತ್ತರಪೀಠಿಕಾ ಅಥವಾ ಶೇಷವೆಂಬ ನಾಲ್ಕು ಉಚ್ಛ್ವಾಸಗಳನ್ನುಳ್ಳ ಪರಿಶಿಷ್ಟ; ಇದನ್ನು ಚನ್ದ್ರ ಮೌಳಿದೀಕ್ಷಿತನ ಮಗ ಚಕ್ರಪಾಣಿ ದೀಕ್ಷಿತನೆಂಬ, ಇದರ ದೃಷ್ಟಿ ಯಿಂದ ಆಧುನಿಕನಾದ ಪಂಡಿತನಿಂದ ರಚಿಸಲ್ಪಟ್ಟದ್ದೆಂದು ಈಗ ಗೊತ್ತಾಗಿದೆ. ಇನ್ನೊಂದು ಪದ್ಮನಾಭನಿಂದ ರಚಿತವಾದ ಉಪಸಂಹಾರರೂಪವಾದ ಒಂಬತ್ತನೆಯ ಉಚ್ಛ್ವಾಸವೂ ಮತ್ತು ಮಹಾರಾಜಾಧಿರಾಜ ಗೋಪೀನಾಥನಿಂದ ರಚಿತವಾದ ಇದರ ಅನುಬಂಧವೂ ಇವೆಯೆಂದು ತಿಳಿದುಬಂದಿದೆ.

ಪೂರ್ವಪೀಠಿಕೆಯ ಮೊದಲ ಉಚ್ಛ್ವಾಸದಲ್ಲಿ ರಾಜಕುಮಾರರ ಉತ್ಪತ್ತಿಯೇ

ಕಥೆ. ದಶಕುಮಾರಚರಿತೆಯ ಪ್ರಧಾನನಾಯಕನಾದ ರಾಜವಾಹನನ ಜನನವೂ ಮತ್ತು ಉಪನಾಯಕರಲ್ಲಿ ಇಬ್ಬರು ಅರ್ಥಪಾಲ ಮತ್ತು ಸೋಮದತ್ತ ಇವರ ಪ್ರಾಪ್ತಿಯೂ ಬರುತ್ತವೆ. ಎರಡನೆಯದರಲ್ಲಿ ಮನ್ತ್ರಿಕುಮಾರರೂ ಮತ್ತು ರಾಜಕುಮಾರನೂ ವಿಜಯ ಯಾತ್ರೆಗೆಂದು ಹೊರಡುತ್ತಾರೆ. ರಾಜಕುಮಾರನು ವಿಂಧ್ಯಾಟವಿಯಲ್ಲಿ ಮಾತಂಗನೆಂಬ ಬ್ರಾಹ್ಮಣಬ್ರುವನಿಗೆ ಸಹಾಯಮಾಡುವ ಸಲುವಾಗಿ ತನ್ನ ಮಿತ್ರರಿಗೆ ತಿಳಿಸದೆ ವನಾಂತರದಲ್ಲಿದ್ದ ಗುಹಾದ್ವಾರದ ಮೂಲಕ ಮಾತಂಗನೊಡನೆ ರಸಾತಲವನ್ನು ಸೇರುತ್ತಾನೆ. ರಾಕ್ಷಸರಾಜಕುಮಾರಿಯಾದ ಕಾಲಿಂದಿಯೊಡನೆ ಮಾತಂಗನ ವಿವಾಹಾನಂತರ, ಆಕೆಯಿಂದ ಕ್ಷುತ್ಪಿಪಾಸಾದಿಕ್ಲೇಶನಾಶಕವಾದ ಮಣಿಯೊಂದನ್ನು ಪಡೆದು ಹಿಂತಿರುಗಿ ತನ್ನ ಮಿತ್ರರನ್ನು ಕಾಣದೆ, ಭೂಮಿಯನ್ನು ಸುತ್ತುತ್ತಾನೆ. ಮೂರನೆಯ ಉಚ್ಛ್ವಾಸವು ಸೋಮದತ್ತಚರಿತೆ. ನಾಲ್ಕನೆಯದು ಪುಷ್ಪೋದ್ಭವ ಚರಿತೆ. ಐದನೆಯದು ಅವನ್ತಿಸುನ್ದರೀ ಪರಿಣಯ: ವಿದ್ಯೇಶ್ವರನೆಂಬ ಐಂದ್ರಜಾಲಿಕನ ಸಾಹಾಯ್ಯದಿಂದ ರಾಜವಾಹನ ಮತ್ತು ಅವನ್ತಿಸುನ್ದರಿಯರ ವಿವಾಹ. ಪೂರ್ವಪೀಠಿಕೆಯಲ್ಲಿಯೂ ದಶಕುಮಾರಚರಿತೆಯಲ್ಲಿರುವಂತೆಯೇ ದೈವ ಮತ್ತು ಮಾನುಷ ತಂತ್ರಗಳಿಂದ ಮನೋರಥ ಸಿದ್ಧಿಸುತ್ತದೆ. ತಪೋಧನಸಮಾಗಮ, ತಪಶ್ಶಕ್ತಿ, ವರ, ಪ್ರಭಾತಸುಖಸ್ವಪ್ನ, ಅಶರೀರವಾಣೀ, ಕಪಟಕಲಾಪ್ರೌಢತ್ವ, ಸಿದ್ಧತಾಪಸಾದೇಶ, ಪತ್ನೀಪುತ್ರವಿಯೋಗ, ಕಾಲಾಂತರ ಸಂಗಮ, ಸಿದ್ಧಾಂಜನ, ಶಕುನ ಇಂದ್ರಜಾಲ ಇತ್ಯಾದಿ ಕೌತುಕಾವಹವಾದ ಪ್ರಸಂಗಗಳು ಬರುತ್ತವೆ. ಶಬ್ದಾಲಂಕಾರಗಳೂ ವಿಶೇಷವಾಗಿ ಯೋಜಿಸಲ್ಪಟ್ಟಿವೆ. ಹಂಸವಾಹನನು ಶತ್ರುಗಳಿಂದ ಹತನಾಗಿರಬೇಕೆಂದು ಯೋಚಿಸಿದ ವಸುಮತಿಯು ಆತ್ಮಹತ್ಯೆಗೆ ಉದ್ಯುಕ್ತಳಾಗಿ ಹೇಳುವ ಮಾತು 'ಲಾವಣ್ಯೋಪಮಿತ ಪುಷ್ಪಸಾಯಕ, ಭೂನಾಯಕ, ಭವಾನೇವ ಭಾವಿನ್ಯಪಿ ಜನ್ಮನಿ ವಲ್ಲಭೋ ಭವತು.' ಕುಮಾರರು ವಿಜಯ ಯಾತ್ರೆಗೆ ಹೊರಡುವುದನ್ನು ವರ್ಣಿಸುವ ಒಂದು ವಾಕ್ಯ 'ಕುಮಾರಾ ಮಾರಾಭಿರಾಮಾ ರಾಮಾದ್ಯಪೌರುಷಾ ರುಷಾಭಸ್ಮೀಕೃತಾರಯೋ ರಯೋಪಹಸಿತಸಮೀರಣಾ ರಣಾಭಿಯಾನೇನ ಯಾನೇನಾಭ್ಯುದಯಾಶಂಸಂ ರಾಜಾನಮಕಾರ್ಷುಃ:'

ದಶಕುಮಾರಚರಿತೆಯ ಮೊದಲನೆಯ ಉಚ್ಛ್ವಾಸ ರಾಜವಾಹನನ ಚರಿತೆ. ಉಳಿದ ಏಳು ಉಚ್ಛ್ವಾಸಗಳಲ್ಲಿ ದಂಡಿಯ ಕಥನ ಪ್ರಕಾರ, ಪ್ರಧಾನ ನಾಯಕನಾದ ರಾಜವಾಹನನಿಗೆ ಆತನ ಮಿತ್ರರೂ ಅನುಯಾಯಿಗಳೂ ಆದ ಏಳು ಜನ ರಾಜಪುತ್ರರಲ್ಲಿ ಒಬ್ಬೊಬ್ಬನೂ ತನ್ನ ತನ್ನ ಗತಿಯನ್ನು ಸಾಧಿಸಿಕೊಂಡು ಒಬ್ಬೊಬ್ಬ ರಾಜಪುತ್ರಿಯನ್ನು ಮದುವೆಮಾಡಿಕೊಂಡ ಸಾಹಸಪ್ರಸಂಗವನ್ನು ಹೇಳುತ್ತಾನೆ.

ಇಂದ್ರಜಾಲ ವಿವಾಹಚ್ಛದ್ಮದಿಂದ ರಾಜವಾಹನನು ಅವನ್ತಿಸುಂದರಿಯನ್ನು ಅಗ್ನಿಸಾಕ್ಷಿಕವಾಗಿಯೇ ವಿವಾಹ ಮಾಡಿಕೊಂಡು ಅವಳೊಡನೆ ಕನ್ಯಾಂತಃಪುರವನ್ನು ಸೇರಿ ಆಕೆಗೆ ಚತುರ್ದಶಭುವನವೃತ್ತಾಂತವನ್ನು ಮನೋಹರವಾಗಿ ವಿಸ್ತರಿಸಿ ಮೆಲ್ಲಮೆಲ್ಲನೆ ಕನ್ಯಾಸಹಜವಾದ ಆಕೆಯ ಲಜ್ಜೆಯನ್ನು ಅಪನಯನಗೊಳಿಸಿದನೆಂಬಲ್ಲಿ ನಿಂದ ಮುಂದಿನ ಕಥೆಯು ಮೊದಲನೆಯ ಉಚ್ಛ್ವಾಸದ ವಿಷಯ. ಪೂರ್ವಜನ್ಮದ ಶಾಪದಿಂದ ಕನ್ಯಾಂತಃಪುರದಲ್ಲಿಯೇ ರಾಜವಾಹನನು ರಜತಶೃಂಖಲಾನಿಬದ್ಧ ಚರಣನಾಗುತ್ತಾನೆ. ರಾಜನಾದ ಚಣ್ಡವರ್ಮನು ದಾರುಪಂಜರದಲ್ಲಿ ಬಂದಿಯನ್ನು ಇರಿಸಿಕೊಂಡು ಚಮ್ಪಾಪುರಿಗೆ ಬಂದು ರಾಜನಾದ ಸಿಂಹವರ್ಮನನ್ನು ಸೆರೆಹಿಡಿಯು ತ್ತಾನೆ. ಅನಂತರ ರಾಜವಾಹನನ್ನು ಆನೆಯ ಕಾಲಿನಿಂದ ತುಳಿಸಬೇಕೆಂದು ಸಿದ್ಧ ಗೊಳಿಸುತ್ತಿರುವಷ್ಟರಲ್ಲಿ ರಾಜವಾಹನನ ರಜತಶೃಂಖಲೆ ಕಾಲಿನಿಂದ ತಾನಾಗಿಯೇ ಕಳಚಿಕೊಂಡು ಬಿದ್ದು ಮಾಯವಾಗುತ್ತದೆ. ಅದರ ಸ್ಥಾನದಲ್ಲಿ ಸುರತ ಮಞ್ಜರಿ ಯೆಂಬ ಅಪ್ಸರೆ! ಬಳಿಕ ತುಮುಲ ಮಧ್ಯದಲ್ಲಿಯೇ ಸರ್ವಮಿತ್ರ ಸಮಾಗಮ! ರಾಜ ವಾಹನನ ಅಭಿಲಾಷೆಯಂತೆ, ಅವರೆಲ್ಲರೂ ತಮ್ಮ ತಮ್ಮ ಸಾಹಸ ಕಥೆಗಳನ್ನು ಹೇಳು ತ್ತಾರೆ. ಎರಡನೆಯ ಉಚ್ಛ್ವಾಸದ ಅಪಹಾರವರ್ಮಕಥೆಯು ಸ್ವಲ್ಪಮಟ್ಟಿಗೆ·ಗಹನ ವಾದುದು ; ಈ ಕಥಾ ಸಂಚಯದಲ್ಲೆಲ್ಲಾ ದೊಡ್ಡದು ಮತ್ತು ಮನೋಹರವಾದುದು. ವಿವಿಧವಾದ ಪ್ರಸಂಗಗಳಿಂದಲೂ ಮನೋಹರವಾದ ಪಾತ್ರಗಳಿಂದಲೂ ತುಂಬಿದೆ. ಚತುರೆಯಾದ ವೇಶ್ಯೆ ಕಾಮಮಂಜರಿಯು ಮೋಸದಿಂದ ವಸ್ತುಪಾಲಿತನೆಂಬ ವರ್ತಕ ನನ್ನು ಜೈನ ಸನ್ಯಾಸಿಯಾಗುವಂತೆ ಮಾಡುತ್ತಾಳೆ. ಮರೀಚಿ ಎಂಬ ಸನ್ಯಾಸಿಯನ್ನು ಶೀಲಭ್ರಷ್ಟನನ್ನಾಗಿ ಮಾಡುತ್ತಾಳೆ. ಇವುಗಳಲ್ಲದೆ, ದ್ಯೂತಭವನದಲ್ಲಿ ನಡೆದ ಸಾಹಸ, ಪ್ರಾಚೀನ ಚೌರ್ಯಕಲೆಯಲ್ಲಿ ನಾಯಕನ ನೈಪುಣ್ಯ, ಚಮ್ಪಾಪುರಿಯ ಜಿಪುಣರಿಗೆ ಜಗತ್ತಿನ ಸರ್ವವಸ್ತುಗಳೂ ಕೊನೆಗೆ ನಾಶವಾಗಲೇ ತೀರುವುವೆಂಬ ಪಾಠವನ್ನು ಕಲಿಸಿದ್ದೂ, ಅವ್ಯಯವಾದ ಧನಕೋಶದ ಸಂಗತಿ ಇವೆಲ್ಲ ಅತ್ಯಂತ ಪಾಂಡಿತ್ಯ ವೈಶದ್ಯಗಳಿಂದ ಕಥೆಯೊಳಗೆ ಸೇರಿಸಿ ನೇಯಲ್ಪಟ್ಟಿವೆ. ಮೂರನೆಯ ಉಚ್ಛ್ವಾಸದ ಉಪಹಾರವರ್ಮಕಥೆಯು ಅಷ್ಟು ಮನೋಹರವಾಗಿಲ್ಲದಿದ್ದರೂ, ಪ್ರಸಂಗಭರಿತವಾಗಿದೆ. ಕಳೆದುಹೋಗಿದ್ದ ರಾಜ್ಯವನ್ನು ಪುನಃ ಸಂಪಾದಿಸಿದ ಕಥೆ: ವಿಕಟವರ್ಮನ ರಾಣಿಯಾದ ಕಲ್ಪಸುನ್ದರಿಯನ್ನು ಒಲಿಸಿಕೊಳ್ಳುವುದು, ಕಪಟ ಪರ ಕಾಯಪ್ರವೇಶ, ಹತ್ಯೆ ಇತ್ಯಾದಿ. ಅನಂತರ ಅರ್ಥಪಾಲನ ಕಥೆ. ತಂದೆ ಕಳೆದು ಕೊಂಡಿದ್ದ ಪದವಿಯ ಪುನಃ ಪ್ರಾಪ್ತಿ. ಮಣಿಕರ್ಣಿಕೆಯೆಂಬ ರಾಜಪುತ್ರಿಯ ಲಾಭ. ಐದನೆಯದು ಪ್ರಮತಿಯ ಕಥೆ: ನಾಯಕನು ಸ್ತ್ರೀವೇಷಧಾರಿಯಾಗಿ ಕನ್ಯಾಂತಃಪುರ

ವನ್ನು ಪ್ರವೇಶಿಸುವುದು, ಪ್ರಾಸಂಗಿಕವಾಗಿ ಬ್ರಾಹ್ಮಣನೊಬ್ಬನು ಸಂಪ್ರದಾಯ ವಿರುದ್ಧವಾದ ರೀತಿಯಲ್ಲಿ ಹುಂಜನ ಕಾಳಗವನ್ನು ವೀಕ್ಷಿಸುವುದು. ಮಿತ್ರಗುಪ್ತನು ದಾಮಲಿಪ್ತದ ರಾಜಕುಮಾರಿಯಾದ ಕನ್ದುಕಾವತಿಯನ್ನು ಪಡೆಯುವುದು ಆರನೆಯ ಕಥೆ. ಇದರಲ್ಲಿ ಸಾಗರ ಮತ್ತು ದ್ವೀಪಾಂತರಗಳಲ್ಲಿ ನಡೆಸುವ ಸಾಹಸ ಮತ್ತು ವೇತಾಲ ಪಂಚವಿಂಶತಿಯಲ್ಲಿರುವಂತೆ ನಾಲ್ಕು ಯುಕ್ತಿಪೂರ್ಣವಾದ ಕಥೆಗಳು: ಧೂಮಿನೀ ಗೋಮಿನೀ ನಿಂಬವತೀ ಮತ್ತು ನಿತಮ್ಬವತೀ ಎಂಬುವರನ್ನು ವಿಷಯೀಕರಿಸುತ್ತವೆ. ಕೊನೆಯ ಕಥೆಯಲ್ಲಿ 'ಮೋಸವೇ ಜಯದ ದಾರಿ' ಎಂಬ ತತ್ವಪ್ರತಿಪಾದನೆ. ಮನ್ತ್ರಗುಪ್ತನ ಕಥೆಯು ಏಳನೆಯ ಉಚ್ಛ್ವಾಸ. ಕವಿಯು ಇದರಲ್ಲಿ ತನ್ನ ಶಬ್ದ ಚಾತುರ್ಯವನ್ನು ಪ್ರದರ್ಶಿಸಿಕೊಂಡಿದ್ದಾನೆ. ನಾಯಕನು ತನ್ನ ಸಾಹಸ ಕಥೆಯನ್ನು ಹೇಳುವಾಗ ಓಷ್ಠ್ಯವರ್ಣಗಳನ್ನು ಉಪಯೋಗಿಸುವುದೇ ಇಲ್ಲ. ಪ್ರೇಯಸಿಯು ಕೆಳದುಟಿಯನ್ನು ಕಚ್ಚಿಬಿಟ್ಟಿದ್ದಾಳೆ; ಪ್ರೀತ್ಯುದ್ರೇಕದಲ್ಲಿ ನೋವೂ ಸಂತೋಷವನ್ನೇ ಉಂಟುಮಾಡುತ್ತದೆ! ಕಲಿಂಗ ಮತ್ತು ಆಂಧ್ರ ಸಮುದ್ರ ತೀರದಲ್ಲಿ ನಡೆದ ಸಂಗತಿ ಗಳನ್ನು ಚಿತ್ರಿಸಲಾಗಿದೆ. ಭಾಗ್ಯವಶದಿಂದ ದೊರಕಿದ ಮಾಂತ್ರಿಕ ಮತ್ತು ಅವನ ಸಹಾಯಕರಾದ ಇಬ್ಬರು ಪಿಶಾಚಿಗಳು ಇವರ ಕಥೆ. ಎಂಟನೆಯ ಉಚ್ಛ್ವಾಸದಲ್ಲಿ ಕಥೆಯೇ ಅಪೂರ್ಣ. ವಿದರ್ಭದೇಶದ ರಾಜಪುತ್ರನು ಕಳೆದುಕೊಂಡಿದ್ದ ರಾಜ್ಯವನ್ನು ಪುನಃ ಪಡೆಯುವುದು. ನಾಯಕನಾದ ವಿಶ್ರುತನೇ ಇದನ್ನು ಹೇಳುತ್ತಾನೆ. ಉಪ ಸಂಹಾರವೇ ಉತ್ತರ ಪೀಠಿಕೆ.

ದಂಡಿಯ ವೈಶಿಷ್ಟ್ಯ

ಸುಬಂಧು ಮತ್ತು ಬಾಣರ ಗದ್ಯಕಾವ್ಯಗಳಿಗೂ ದಂಡಿಯ ಗದ್ಯಕಾವ್ಯಕ್ಕೂ ತುಂಬ ಜಾತ್ಯಂತರವಿದೆ. ಸುಬಂಧು ಮತ್ತು ಬಾಣರು ಸ್ವಲ್ಪಮಟ್ಟಿಗೆ ಸಂಪ್ರದಾಯಾನು ವರ್ತಿಗಳು; ದಂಡಿ ಸ್ವತಂತ್ರನು. ಈ ಕಾರಣದಿಂದಲೋ ಏನೋ ಲಕ್ಷಣಕಾರರು ಹನ್ನೊಂದನೆಯ ಶತಮಾನದವರೆಗೆ ದಂಡಿಯ ಹೆಸರನ್ನೇ ಎತ್ತುವುದಿಲ್ಲ. ದಶಕುಮಾರ ಚರಿತೆಯು ನಿಜವಾಗಿಯೂ ಧೂರ್ತಕಥೆ. ಚತುರ್ಭಾಣಿ ಮೃಚ್ಛಕಟಿಕಗಳಿಗೂ ಇದಕ್ಕೂ ಸಾಮ್ಯವಿದೆ. ಆದರೂ ಅವುಗಳಲ್ಲಿ ಧೂರ್ತತೆ ಪ್ರಧಾನವಾದುದಲ್ಲ. ದಶಕುಮಾರಚರಿತೆಯಲ್ಲಿ ಧೂರ್ತತೆಗೇ ಪ್ರಾಧಾನ್ಯ. ನಿರತಿಶಯರಸಾಸ್ವಾದವು ಧೂರ್ತ ಪಾತ್ರ ಮತ್ತು ಧೂರ್ತ ವಸ್ತುಗಳ ರಮ್ಯ ಮತ್ತು ಉಜ್ವಲವರ್ಣನೆಗಳಿಂದಲೇ ಇಲ್ಲಿ ನಿಷ್ಪಾದ್ಯ. ಅದ್ಭುತರಸಾಕರ್ಷಣೆ ಸುತರಾಂ ಇಲ್ಲವೆಂದೇನಲ್ಲ: ಆಶ್ಚರ್ಯ, ಮಂತ್ರ ಶಕ್ತಿ ಮತ್ತು ಕನ್ಯಾಲಾಭ ಇವೆಲ್ಲವೂ ಸಾಕಷ್ಟು ತುಂಬಿವೆ. ಆದರೂ ಪ್ರಧಾನ

ವಾದುದು ಯುಕ್ತಿವಂತರಾದ ವಂಚಕರ ಸಾಹಸಗಳು. ಇಲ್ಲಿ ದಂಡಿಯು ಉದ್ದೇಶ ಪೂರ್ವಕವಾಗಿಯೇ 'ಕಾವ್ಯ ಸದಾಶ್ರಯವಾಗಿರಬೇಕು ನಾಯಕನು ಸತ್ಕುಲ ಪ್ರಸೂತನಾಗಿರಬೇಕು, ಸತ್ಪುರುಷನಾಗಿರಬೇಕು ಉದಾರಿಯಾಗಿರಬೇಕು' ಎಂಬ ಸಂಪ್ರದಾಯವನ್ನು ಉಲ್ಲಂಘಿಸಿದ್ದಾನೆ. ದ್ಯೂತ, ಚೌರ್ಯ, ತಂತ್ರ, ಮೋಸ, ಹಿಂಸೆ, ಹತ್ಯೆ, ವೇಷ, ಪಾರದಾರ್ಯ, ವನಿತಾಪಹಾರ ಇವು ಒಂದೊಂದಾಗಿಯೂ, ಒಟ್ಟಾಗಿಯೂ, ಪ್ರತಿಯೊಂದು ಕಥೆಯಲ್ಲಿಯೂ ಪ್ರಮುಖ ಪಾತ್ರವನ್ನು ವಹಿಸುತ್ತವೆ, ನೀತಿಗಿಂತಲೂ ಉದ್ದೇಶಪೂರ್ವಕವಾದ ದುರಾಚಾರವೇ ಇಲ್ಲಿನ ವಸ್ತುವಾಗಿರುವುದರಿಂದ ಇದೆಲ್ಲವೂ ಕ್ಷಮ್ಯ ಅಥವಾ ಇದೊಂದೂ ಗಮನಾರ್ಹವಾದುದಲ್ಲ. ದಶಕುಮಾರಚರಿತೆಯು ಕಾಲ್ಪನಿಕ ಕಾದಂಬರಿ; ಆಧುನಿಕ ಯೂರೋಪಿನ (picaresque romance) ಧೂರ್ತ ಕಥೆಯನ್ನು ಹೋಲುತ್ತದೆ. ಮಹಾ ನಗರದಲ್ಲಿ ಭಯೋತ್ಪಾದಕರಾದ, ಭಯಾರ್ಹರಾದ ಲಂಪಟರ ಆತತಾಯಿಗಳ ಮತ್ತು ಆಧುನಿಕ ಪತ್ತೇದಾರಿ ಕಾದಂಬರಿಗಳಲ್ಲಿ ಬರುವ ಕೇಡಿಗಳ ಕಥೆಗೂ ಇದಕ್ಕೂ ಅನೇಕ ವಿಧದ ಸಾಮ್ಯವಿದೆ. ಇದು ನೇರವಾದ ಅಣಕವಲ್ಲ; ಅರುಸ್ತುದ ಕಾವ್ಯವೇನಲ್ಲ. ಆದರೂ ಎಲ್ಲ ಔನ್ಮುಖ್ಯವೂ, ಪ್ರಾವಣ್ಯವೂ ಸಾವಕ್ಷೇಪ. ಅಸಂಸ್ಕಾರ್ಯರಾದ ಲಂಪಟರೂ, ವಿವೇಕಶೂನ್ಯರಾದ ಧೂರ್ತರೂ, ಕಪಟಸನ್ಯಾಸಿಗಳೂ, ಕಳ್ಳಪೂಜಾರಿಗಳೂ, ಲಘು ಚೇತಸರಾದ ನಿರುದ್ಯೋಗಿಗಳೂ, ಯಥಾಜಾತರಾದ ಅಲಸರೂ, ಗಾಢಪ್ರೇಮಿಗಳೂ, ತಂತ್ರಿಣಿಯರಾದ ತಲೆಹಿಡುಕಿಯರೂ, ವ್ಯಭಿಚಾರಿಣಿಯರೂ, ನಿರ್ದಯರಾದ ವೇಶ್ಯೆಯರೂ ರಸವತ್ತಾದ, ಅದ್ಭುತ ಸೂಕ್ಷ್ಮಾವಲೋಕನಸಮನ್ವಿತವಾದ ವರ್ಣನೆಗಳ ಮಧ್ಯೆ, ತತ್ಕಾಲೀನಸಮಾಜವ್ಯಂಗ್ಯಚಿತ್ರಣದ ಸಲುವಾಗಿಯೇ, ಒಬ್ಬರ ಮೇಲೊಬ್ಬರು ನುಗ್ಗುತ್ತಾರೆ. ಸಮಾಜದ ಮತ್ತು ಗ್ರಾಮಗಳ ಕೊಳೆ, ಹೊಲಸು ಸೇರುವ ನಗರಗಳೇ ದೃಶ್ಯ. ಕ್ಷತ್ರಿಯರೂ, ಬ್ರಾಹ್ಮಣರೂ, ದೇವತೆಗಳೂ ಯಾರಿಗೂ ಗೌರವವಿಲ್ಲ. ರಾಜಪುತ್ರರು ಕೈಗೊಂಡಿರುವ ಹೇಯಕೃತ್ಯಗಳನೆಲ್ಲಾ ಸಮರ್ಥಿಸಲು ದೇವತೆಗಳನ್ನು ಉಪಯೋಗಿಸಲಾಗಿದೆ! ಉಪಹಾರವರ್ಮನು ವಿಕಟವರ್ಮನ ರಾಜ್ಞಿಯಾದ ಕಲ್ಪಸುಂದರಿಯ ಸಂಗಮಕ್ಕಾಗಿ ಹವಣಿಸುತ್ತಿರುವಾಗ ಪರದಾರಾಭಿಮರ್ಶ ಕಲುಷಭೀತಿಯನ್ನು ಪರಿಹರಿಸಲು 'ಅದೃಶ್ಯತಚ ಸ್ವಪ್ನೇ ಹಸ್ತಿವಕ್ತ್ರೋ ಭಗವಾನ್'! ಎಲ್ಲಾ ದೇವತೆಗಳನ್ನು ಬಿಟ್ಟು ಗಣಪತಿಯನ್ನೇ ಈ ಪವಿತ್ರಕಾರ್ಯಕ್ಕಾಗಿ ಆರಿಸಿಕೊಳ್ಳಲಾಗಿದೆ! ಬಹುಶಃ ನಿರ್ವಿಘ್ನವಾಗಿ ನಡೆಯಲೆಂದು. ಬೌದ್ಧಸನ್ಯಾಸಿನಿಯರು ತಲೆಹಿಡುಕಿಯರಾಗುತ್ತಾರೆ. ಜೈನ ಸನ್ಯಾಸಿಯೊಬ್ಬನು ತಾನೇ ಜೈನಧರ್ಮವನ್ನು ಒಂದು ಮೋಸವೆಂದು ಕರೆದುಬಿಡುತ್ತಾನೆ! ಬ್ರಾಹ್ಮಣನಿಗೆ ಚಿನ್ನದಮೇಲಿರುವ ಪ್ರೀತಿ, ಹುಂಜನ ಕಾಳಗ

ದಲ್ಲಿರುವ ಮಮತೆ ಅವಹೇಳನಾಸ್ಪದವಾಗುವಷ್ಟು ಮುಂದುವರೆದಿದೆ. ರಾಜಕುಮಾರರ ಸಾಹಸಗಳಿಗೆ ಪ್ರಚೋದನೆ ಇಷ್ಟೆ: ರಾಣಿಯರು ಬೇಕು ರಾಜ್ಯಬೇಕು, ಆದರೆ ಮಾರ್ಗ ಉಪಾಯ ಇಂತಹುದೇ ಎಂಬ ನಿಯಮವಿಲ್ಲ. 'ಯೇನಕೇನಾಪ್ಯುಪಾಯೇನ ಪ್ರಸಿದ್ಧ ಪುರುಷೋ ಭವ' ಎಂಬುದೇ ಇಲ್ಲಿನ ಮೂಲ ಮಂತ್ರವಿದ್ದಂತೆ ಕಾಣುತ್ತದೆ.

ಈ ವಿಚಿತ್ರ ಪ್ರಪಂಚಕ್ಕೆ—ಜನಪದ ಕಥೆಗಳಲ್ಲಿ ಕಂಡುಬರುವ ಅದೃಶ್ಯಾಂಜನ, ಬಂದಿಯ ಕಾಲು ಬಳೆಯೇ ದಿವ್ಯಸುಂದರಿಯಾಗುವಿಕೆ, ಭಿಕ್ಷೇಶ್ವರನನ್ನು ಲಕ್ಷೇಶ್ವರನನ್ನಾಗಿ ಪರಿವರ್ತಿಸುವ ಚೌರ್ಯಕಲಾಪ್ರಾವೀಣ್ಯ, ಕನ್ಯೆಯರನ್ನು ತಿರೋಧಾನಗೊಳಿಸುವ ಮಾಂತ್ರಿಕನ ಪವಾಡ, ಇವೆಲ್ಲವನ್ನೂ ಬೃಹತ್ಕಥೆಯಿಂದಲೇ ದಂಡಿಯು ತೆಗೆದುಕೊಂಡಿರಬಹುದೆಂದು ಸಂಶೋಧಕರ ಅಭಿಪ್ರಾಯ. ಆದರೂ ಕಥಾ ಸಂವಿಧಾನ ದಂಡಿಯದೇ. ಜನಪ್ರಿಯ ಕಥಾ ಸಾಹಿತ್ಯದಿಂದ ತೆಗೆದುಕೊಂಡ ವಸ್ತುವಿಗೆ ಕಾವ್ಯ ಪುಷ್ಟಿಯನ್ನಿತ್ತು ಸಾಧಾರಣವಾದ ಕಥೆಗಳನ್ನು ವಿದ್ವತ್ಪ್ರಿಯವನ್ನಾಗಿ ಮಾರ್ಪಡಿಸಿ ಜಯಶಾಲಿಯಾಗಿದ್ದಾನೆ ಕವಿ. ಅಲ್ಲದೆ ವಿದ್ವತ್ಪ್ರಿಯವಾದ ಕಾವ್ಯಸೌಂದರ್ಯವೂ, ಜನಪ್ರಿಯವಾದ ಅದ್ಭುತ ಶೃಂಗಾರರಸಗಳೂ ಒಂದನ್ನೊಂದು ಮೀರದೆ ಇರುವಂತೆ ಏರ್ಪಡಿಸಿದ್ದಾನೆ. ದಂಡಿಯೊಡನೆ ಹೋಲಿಸಿದಾಗ, ಸುಬಂಧು ಮತ್ತು ಬಾಣರಲ್ಲಿ ಕಾವ್ಯಕೌಶಲ ತಾನೇ ತಾನಾಗಿ ಮೇಲೆದ್ದು ಕಥೆಯ ಸ್ವಾರಸ್ಯವನ್ನೂ ವಿನೋದವನ್ನೂ ಬಹುಮಟ್ಟಿಗೆ ಕೆಳಗಿಳಿಸಿರುವ ದೋಷವೇ ಕಾಣುತ್ತದೆ. ದಂಡಿಯು ಆ ಕಾಲದ ಸಮಾಜದೋಷಗಳನ್ನು ತೆಗೆದುಕೊಂಡು ಅವುಗಳಿಗೆ ಉದ್ದೇಶಪೂರ್ವಕವಾಗಿಯೇ ವಿಶೇಷಪ್ರಾಧಾನ್ಯವನ್ನು ಕೊಟ್ಟು ತನ್ನ ವ್ಯಂಗ್ಯಲೇಖನದ ಮೂಲಕ ಬಹಳ ನಯವಾದ ಅಣಕವನ್ನು ತನ್ನ ಕಾವ್ಯದಲ್ಲಿ ಹುದುಗಿಸಿರುವನೆಂದರೆ ಯಾರಿಗೂ ಅರ್ಥವಾಗದೇ ಇರುವ ವಿಷಯವಲ್ಲ. ದಶಕುಮಾರಚರಿತೆಯಲ್ಲಿ ಬರುವ ಪಾತ್ರಗಳು ವಿವಿಧ ರೀತಿಯವು ಅಲ್ಲದೆ ಅಸಂಖ್ಯಾತ; ರಸಪುಷ್ಟವಾಗಿಯೂ, ಸ್ವೈಜವಾಗಿಯೂ ಕಡೆಯಲ್ಪಟ್ಟಿವೆ. ಇವೆಲ್ಲವೂ ಜೀವನದಲ್ಲಿ ಆತನು ಕಂಡಿರುವ ವ್ಯಕ್ತಿಗಳ ಛಾಯೆಯೆಂಬುದರಲ್ಲಿ ಸಂದೇಹವಿಲ್ಲ. ದಂಡಿಯು ತುಂಬ ಪರಿಹಾಸಶೀಲನೆಂಬುದಕ್ಕೆ ಸಾಕಷ್ಟು ಕಾರಣಗಳಿವೆ. ಮೃದುವಾದ ತರ್ಜನೆ, ಉಪಹಾಸ, ಚಮತ್ಕಾರ ಇವೆಲ್ಲ ಅವನ ಕಾವ್ಯದಲ್ಲಿ ತುಂಬಿವೆ. ಒಟ್ಟಿನಲ್ಲಿ ದಶಕುಮಾರಚರಿತೆಯು ಸಂಪ್ರದಾಯಕ್ಕೆ ಒಳಪಟ್ಟ ಕೃತಿಯಲ್ಲ; ವೈಶಿಷ್ಟ್ಯಪೂರ್ಣವಾದ ಸ್ವತಂತ್ರಕೃತಿ. ಪ್ರಾಚೀನ ವಿಮರ್ಶಕರೂ ಸಹೃದಯರೂ ಕವಿಗಳೂ ದಂಡಿಯನ್ನು ಕವಿರ್ದಂಡೀ ಕವಿರ್ದಂಡೀ ಕವಿರ್ದಂಡೀ ನಸಂಶಯ: ಎಂದು ವಿದ್ಯಾಧಿದೇವತೆಯಾದ ಸರಸ್ವತಿಯಿಂದಲೇ, ತಮ್ಮ ಮೆಚ್ಚುಗೆಯನ್ನು ಮೂರೂ ಮೂರು ಸಾರೆ ಹೇಳಿಸಿದ್ದಾರೆ. ದಂಡಿ ಅದೆಷ್ಟು ದೊಡ್ಡ ಕವಿ!

ದಂಡಿಯ ಶೈಲಿ

ದಶಕುಮಾರಚರಿತೆಯಲ್ಲಿ ಕಥೆ ತಡೆಯಿಲ್ಲದೆ ಮುಂದೆ ಸಾಗುತ್ತದೆ. ಅಲಂಕಾರ ಭಾರದಿಂದ ಕಥಾವನಿತೆಯ ಗತಿಯು ದುರ್ಬಲವಾಗುವುದಿಲ್ಲ; ಗಾಂಭೀರ್ಯ ವನ್ನೂ ಬಿಡುವುದಿಲ್ಲ. ಸ್ವಾಭಾವಿಕವಾದ ಮನೋಹರ ಮಂದಗಮನ; ಸಮ ಯೋಚಿತವಾದ ದ್ರುತವಿಲಂಬಿತಗತಿ ಕಥಾವನಿತೆಯನ್ನು ಸಜೀವಳನ್ನಾಗಿಯೂ ಮನೋಹರೆಯನ್ನಾಗಿಯೂ ಮಾಡಿದೆ. ವರ್ಣನೆ ಮಿತ ಹಿತ. ನಿದ್ರಿಸುತ್ತಿರುವ ಅಮ್ಬಾಲಿಕೆ ಅಥವಾ ನರ್ತಿಸುತ್ತಿರುವ ಕನ್ದುಕಾವತೀ ಇವರ ವರ್ಣನೆಗಳಂತಹ ವರ್ಣನೆ ಗಳೂ ಇವೆ. ಆದರೂ ಅವು ಎಲ್ಲೆ ಮೀರಿಲ್ಲ. ಕಥೆಗಳ ಜೋಡಣೆ ಅರ್ಥಪೂರ್ಣ ವಾಗಿದೆ; ಯುಕ್ತಿಪೂರ್ಣವಾಗಿದೆ. ಕಥೆಯ ಮಧ್ಯೆ ಕಥೆಗಳನ್ನು ಸೇರಿಸುವ ಪ್ರಾಚೀನ ಕಥಕಸಂಪ್ರದಾಯ ರಾಮಾಯಣ ಮಹಾಭಾರತಗಳಿಂದಲೇ ಹೊರಟಿದೆ. ದಶಕುಮಾರ ರಚರಿತೆಯಲ್ಲಿ ಮುಖ್ಯ ಕಥೆಗಳಿಗೆ ಉಪಕಥೆಗಳ ಉಪಟಳ ಅಷ್ಟಿಲ್ಲ; ರಾಜವಾಹನ ಅಥವಾ ಅವನ ತಂದೆ ಹಂಸವಾನನ ಕಥೆಗೆ ಉಳಿದ ಕಥೆಗಳು ಉಪಕಥೆಗಳೆಂದು ಭಾವಿಸಿದರೂ ಆ ಉಪಕಥೆಗಳು ಸುಬಂಧು ಬಾಣರ ಉಪಕಥೆಗಳಂತಲ್ಲ. ಆರನೆಯ ಉಚ್ಛ್ವಾಸದ ಚಮತ್ಕಾರ ಪೂರ್ಣವಾದ ಕಥೆಯಲ್ಲಿ ನಾಲ್ಕು ಉಪಕಥೆಗಳು ಸಮಂಜಸ ವಾದ ರೀತಿಯಲ್ಲಿ ಸೇರಿಸಲ್ಪಟ್ಟಿವೆ. ಶೈಲಿಯೂ ಭಾಷೆಯೂ ಪ್ರಮಾಣಾನುಗುಣ ವಾಗಿಯೂ ನಿಯಮಬದ್ಧವಾಗಿಯೂ ಇವೆ. ದಂಡಿಯ ಶೈಲಿ ಸರಳವೇನಲ್ಲ. ಆದರೂ ಅವನ ಭಾಷೆ ಆಯಾಸವನ್ನೆಂದಿಗೂ ಉಂಟುಮಾಡದು. ಬಿಗಿಯಾದರೂ ಸೊಗ ಸಾಗಿದೆ. ಸುದೀರ್ಘವಾದ ಸಮಾಸಗಳಾಗಲೀ ಅತಿ ದೀರ್ಘವಾದ ವಾಕ್ಯಗಳಾಗಲೀ ಅನವಶ್ಯಕವಾದ ಪೂರ್ವಕಥೆಗಳಾಗಲೀ ಕ್ಲಿಷ್ಟವಾದ ಶ್ಲೇಷೆಗಳಾಗಲೀ ಅನರ್ಥಶಬ್ದ ಗಳ ಅನವಶ್ಯಕವಾದ ಆಡಂಬರವಾಗಲೀ ಕಂಡುಬರುವುದಿಲ್ಲ. ದಂಡಿಯ ಶೈಲಿಯನ್ನು ಪಂಡಿತರು ಮನಸಾರೆ ಮೆಚ್ಚಿ 'ದಂಡಿನ: ಪದ ಲಾಲಿತ್ಯಂ' ಲಲಿತ ಪದ ಯೋಜ ನೆಯು ದಂಡಿಯ ವೈಶಿಷ್ಟ್ಯವೆಂದಿದ್ದಾರೆ.

ಸುಬಂಧು: ಕಾಲ

ಸುಬಂಧುವಿನ ಕಾಲ ತುಂಬ ಸಂದಿಗ್ಧವಾಗಿದೆ. ವಾಸವದತ್ತೆಯ ನ್ಯಾಯಸ್ಥಿತಿ ಮಿವೋದ್ಯೋತಕರಸ್ವರೂಪಾಮ್ ಮತ್ತು ಬೌದ್ಧಸಂಗತಿಮಿವಾಲಂಕಾರಭೂಷಿ ತಾಮ್ ಎಂಬೆಡೆಗಳಲ್ಲಿ ಶ್ಲೇಷೆಯಿಂದ ಉದ್ಯೋತಕರನಿಗೂ ಮತ್ತು ಧರ್ಮ ಕೀರ್ತಿಯದೆಂದು ಹೇಳಲಾದ ಬೌದ್ಧಸಂಗತ್ಯಲಂಕಾರಕೃತಿಗೂ ಅನ್ವಯವಿರುವುದೆಂಬ ವಾಖ್ಯಾನದ ಪ್ರಕಾರ ವಾಸದತ್ತೆಯು ಆರನೆಯ ಶತಮಾನದ ಮಧ್ಯಭಾಗಕ್ಕೆ

ಈಚಿನದೆಂದೂ, ಬಾಣನು ವಾಸದತ್ತಾ ಎಂಬ ಗದ್ಯಕಾವ್ಯವನ್ನು ಕುರಿತು ಹರ್ಷ ಚರಿತೆಯ ಪೂರ್ವಪೀಠಿಕೆಯಲ್ಲಿ ಹೇಳಿರುವುದರಿಂದ ಏಳನೆಯ ಶತಮಾನದ ಆದಿಭಾಗ ದ್ದೆಂದೂ ಊಹಿಸಲಾಗಿದೆ. ಆದರೆ, ಉದ್ಯೋತಕರ ಮತ್ತು ಧರ್ಮಕೀರ್ತಿ ಇವರ ಕಾಲವೇ ಸಂದಿಗ್ಧ ; ಮತ್ತು ಕರ್ತೃವಿನ ಹೆಸರಿಲ್ಲದಿರುವುದರಿಂದ, ಬಾಣನು ಹೇಳಿರುವ ವಾಸವದತ್ತೆಯು ಸುಬಂಧುವಿನ ವಾಸವದತ್ತೆಯೋ ಪತಂಜಲಿಯು ತನ್ನ ಭಾಷ್ಯದಲ್ಲಿ ಕರ್ತೃವನ್ನು ತಿಳಿಸದೆ ತಿಳಿಸಿರುವ ವಾಸವದತ್ತೆಯೋ ಎಂಬ ಸಂಶಯ ಬೇರೆ ಉಳಿದೇ ಇರುತ್ತದೆ. ಏಳನೆಯ ಶತಮಾನದ ಆದಿಭಾಗದಲ್ಲಿ ಧರ್ಮಕೀರ್ತಿ ಮತ್ತು ಉದ್ಯೋತ ಕರರು ಇದ್ದರೆಂದು ಒಪ್ಪಿಕೊಂಡರೂ ಸುಬಂಧುವು ಬಾಣನ ಸಮಕಾಲೀನನಾಗುವನೇ ಹೊರತು ಹಿಂದಿನವನಾಗಲಾರ. ಬಾಣನು ತನ್ನ ಕಾದಂಬರಿಯನ್ನು ಧಿಯಾ ನಿಬದ್ಧೇಯ ಮತಿದ್ವಯಿೀ ಕಥಾ ಎಂಬಲ್ಲಿ ಅತಿದ್ವಯೀ ಎಂದು ವಿಶೇಷಿಸಿದ್ದಾನೆ. ಈ ವಿಶೇಷಣದ ಅರ್ಥ ನಾಸ್ತಿದ್ವಯಂ ಯಸ್ಯಾಃ ಎಂದರೆ 'ಅತಿದ್ವಯೀ' ಎಂದಾಗುತ್ತದೆ. ಸಂಪ್ರದಾಯದ ಪ್ರಕಾರ ಗೂಢಾರ್ಥವೂ ಇದೆ 'ದ್ವಯಾಂ ಬೃಹತ್ಕಥಾಂ ವಾಸವದತ್ತಾಂ ಚಾತಿಕ್ರಾನ್ತಾ' ಎಂದರೆ ಬೃಹತ್ಕಥಾ ಮತ್ತು ವಾಸವದತ್ತಾ ಇವೆರಡನ್ನು ಮೀರಿದುದೆಂದು. ಆದರೆ ಹೀಗೆ ಅರ್ಥಮಾಡುವ ವ್ಯಾಖ್ಯಾಕಾರನಾದ ಭಾನುದತ್ತನು ತುಂಬ ಈಚಿನವನು, ಹದಿನಾರನೆಯ ಶತಮಾನಕ್ಕೆ ಸೇರುತ್ತಾನೆ. ಬೇರೆಯ ವ್ಯಾಖ್ಯಾತೃಗಳು ಅನಿದ್ಧಯಾ (ಧಿಯಾ ಎಂಬುದರ ವಿಶೇಷಣ) ಎಂದು ಹೇಳುವುದರಿಂದ ಅತಿದ್ವಯೀ ಎಂಬುದು ಲೇಖಕ ಪ್ರಮಾದವಿರಬಹುದು. ಭವಭೂತಿಯು ತನ್ನ ಮಾಲತೀ ಮಾಧವದಲ್ಲಿ

> ಲೀನೇವ ಪ್ರತಿಬಿಂಬಿತೇವ ಲಿಖಿತೇವೋತ್ಕೀರ್ಣರೂಪೇವ ಚ
> ಪ್ರತ್ಯುಪ್ತೇವ ಚ ವಜ್ರಲೇಪ ಘಟಿತೇವಾನ್ತರ್ನಿಖಾತೇವ ಚ |
> ಸಾನಶ್ಚೇತಸಿ ಕೀಲಿತೇವ ವಿಶಿಖೈಶ್ಚೇತೋಭುವಃ ಪಂಚಭಿಃ
> ಚಿನ್ತಾಸನ್ತತಿತನ್ತುಜಾಲನಿಬಿಡಸ್ಯೂತೇವ ಲಗ್ನಾ ಪ್ರಿಯಾ ||

ಎಂಬ ಪದ್ಯದ ಭಾವವನ್ನು, ವಾಸವದತ್ತೆಯು ಕಂದರ್ಪಕೇತುವನ್ನು ನೋಡಿದಾಗ ಉಂಟಾದ ಅವಳ ಅವಸ್ಥೆಯನ್ನು ವರ್ಣಿಸಲು ಸುಬಂಧುವು ಹೇಳಿರುವ "ಹೃದಯೇ ವಿಲಿಖಿತಮಿವ ಉತ್ಕೀರ್ಣಮಿವ ಪ್ರತ್ಯುಪ್ತಮಿವ ಕೀಲಿತಮಿವ ವಜ್ರಲೇಪ ಘಟಿತಮಿವ ಅಸ್ಥಿಪಂಜರಪ್ರವಿಷ್ಟಮಿವ ಮರ್ಮಾಂತರಸ್ಥಿತಮಿವ ಮಜ್ಜಾರಸ ಶಬಳಿತಮಿವ ಕಂದರ್ಪ ಕೇತುಂಮನ್ಯಮಾನಾ" ಎಂಬ ಮಾತುಗಳಿಂದಲೇ ತೆಗೆದುಕೊಂಡಿದ್ದಾನೆಂಬುದರಲ್ಲಿ ಹೆಚ್ಚು ಸಂದೇಹಕ್ಕೆ ಕಾರಣವಿಲ್ಲ. ಇದರಿಂದ ಈತನು ಏಳನೆಯ ಶತಮಾನದವನೆಂದು

ಸ್ಪಷ್ಟವಾಗುತ್ತದೆ. ದಶಕುಮಾರಚರಿತೆಯಲ್ಲಿ ಬರುವ ವಾಸವದತ್ತೆಯು ಉದಯನ ವಾಸವದತ್ತಾ ಕಥೆಯ ವಾಸವದತ್ತೆ; ಸುಬಂಧುಕೃತಿಯಾದ ವಾಸವದತ್ತೆಯಲ್ಲ. ಇನ್ನು ಅಭಿರುಚಿ ಮತ್ತು ನೀತಿಯ ಮಟ್ಟಗಳ ಆಧಾರದ ಮೇಲೆ ತರ್ಕಿಸುವುದೂ ತಪ್ಪಾಗುವುದು. ಸುಬಂಧುವು ಬಾಣನಿಗಿಂತ ಹೆಚ್ಚು ಶ್ಲೇಷೆಯನ್ನು ಬಳಸಿದ್ದಾನೆ; ಇಷ್ಟರಿಂದ ಆ ಕಾಲದಲ್ಲಿ ಶ್ಲೇಷೆಯು ತುಂಬ ಜನಪ್ರಿಯವಾಗಿತ್ತೆಂದು ಮಾತ್ರ ತಿಳಿಯುತ್ತದೆಯೇ ಹೊರತು ಬಾಣ ಸುಬಂಧುಗಳಲ್ಲಿ ಹಿಂದಿನವನು ಯಾರು ಎಂಬ ಸಮಸ್ಯೆ ಪರಿಹೃತವಾಗುವುದೇ ಇಲ್ಲ. ಸುಬಂಧುವಿನ ಕಾಲನಿರ್ಧಾರಕ್ಕೆ ಬಹಳ ಸಹಾಯವಾಗುವ ವಿಷಯವೆಂದರೆ, ಎಂಟನೆಯ ಶತಮಾನದ ಪೂರ್ವಾರ್ಧಕ್ಕೆ ಸೇರಿದ ವಾಕ್ಪತಿರಾಜನು ಗೌಡವಹೋ ಎಂಬ ತನ್ನ ಪ್ರಾಕೃತ ಕಾವ್ಯದಲ್ಲಿ ಸುಬಂಧುವನ್ನು ಭಾಸ ಕಾಲಿದಾಸ ಹರಿಚನ್ದ್ರರ ಜೊತೆಯಲ್ಲಿ ಸೇರಿಸಿದ್ದಾನೆ. ವಾಮನನು ತನ್ನ ಕಾವ್ಯಾಲಂಕಾರದಲ್ಲಿ ಸುಬಂಧುವಿನ ವಾಸವದತ್ತೆಯಿಂದ ಇಂತಹ ಕಡೆಯಿಂದ ಎಂಬುದನ್ನು ತಿಳಿಸದೆ ಸ್ವಲ್ಪ ವ್ಯತ್ಯಸ್ತವಾದ ರೀತಿಯಲ್ಲಿ ಕುಲಿಶಶಿಖರಖರನಖರ . . . ಎಂಬ ಪದ್ಯವನ್ನು ಉದ್ಧರಿಸಿದ್ದಾನೆ. ಇದರಿಂದ ಸುಬಂಧುವು ಬಾಣನ ಸಮಕಾಲೀನನಾಗಿದ್ದರೂ ಇರಬಹುದು. ಎಂ. ಕೃಷ್ಣಮಾಚಾರಿಯವರು ಆಂತರಿಕವಾದ ಆಧಾರಗಳ ಮೇಲೆ ವಾದಿಸಿ ಸುಬಂಧುವು ಬಾಣನಿಗಿಂತ ಈಚಿನವನೆಂದು ನಿರ್ಣಯಿಸಿದ್ದಾರೆ. ಅವರ ವಾದದ ಸಾರಾಂಶ: ಸುಬಂಧುವು ಅನೇಕ ಪದಗಳನ್ನು, ಮಾತುಗಳನ್ನು ಮತ್ತು ಸನ್ನಿವೇಶಗಳನ್ನು ಕಾದಂಬರಿಯಿಂದಲೇ ತೆಗೆದುಕೊಂಡಿದ್ದಾನೆ. ಇಂದ್ರಾಯುಧವೆಂಬ ಹೆಸರನ್ನು ಕಾದಂಬರಿಯಲ್ಲಿ ಬರುವ ಇಂದ್ರಾಯುಧವೆಂಬ ಕುದುರೆಯಿಂದ ತೆಗೆದುಕೊಂಡಿದ್ದಾನೆ: ವಜ್ರೇಣೇವೇಂದ್ರಾಯುಧೇನ ಮನೋಜವನಾಮ್ನಾ ತುರಗೇಣ ಸಹ ನಗರಾನ್ನಿರ್ಜಗಾಮ ಎಂದರೆ ಇಂದ್ರನ ಆಯುಧವಾದ ವಜ್ರಾಯುಧದೊಡನೆಯೋ ಎಂಬಂತೆ, ಮನೋಜವವೆಂಬ ಕುದುರೆಯೊಡನೆ ನಗರದಿಂದ (ಪ್ರತಿಬಿಂಬಿತೇನ) ಹೊರಟನು ಎಂದು. ಅಲ್ಲದೆ ಇವರ ವಾದದ ಪ್ರಕಾರ ಭವಭೂತಿಯಲೀನೇವ ಎಂಬ ಪದ್ಯದ ಆಧಾರದಿಂದಲೇ ಸುಬಂಧುವಿನ ಹೃದಯೇ ವಿಲಿಖಿತಮಿವ ಎಂಬುದು ಬಂದಿದೆ. ಇದರಿಂದ ಸುಬಂಧುವು ಬಾಣಗಿನಿಗೆ ಮಾತ್ರವಲ್ಲ, ಭವಭೂತಿಗೂ ಈಚಿನವನು. ಅಲ್ಲದೆ ಹರ್ಷಚರಿತೆಯಲ್ಲಿ ಆಖ್ಯಾಯಿಕಾಕಾರರನ್ನು ಭಕ್ತಿಯಿಂದ ಸ್ಮರಿಸಿದ ಕೂಡಲೇ ಮುಂದಿನ ಪದ್ಯದಲ್ಲಿ ಕವೀನಾಮಗಲದ್ದರ್ಪೋ ನೂನಂ ವಾಸವದತ್ತಯಾ ಎಂಬುದಾಗಿ ಹೇಳಿರುವುದರಿಂದ ಪತಂಜಲಿಯು ತನ್ನ ಮಹಾಭಾಷ್ಯದಲ್ಲಿ ಆಖ್ಯಾಯಿಕೆಯ ಉದಾಹರಣೆಯಾಗಿ ಕೊಟ್ಟಿರುವ ವಾಸವದತ್ತಾ ಎಂಬ ಆಖ್ಯಾಯಿಕೆಯೇ ಅಲ್ಲಿ ಉದ್ದಿಷ್ಟವಾಗಿದೆಯೆಂದು ಸ್ಪಷ್ಟವಾಗುತ್ತದೆ. ಉದಯನನು ಸ್ವಲ್ಪಮಟ್ಟಿಗೆ

ಚಾರಿತ್ರಿಕ ವ್ಯಕ್ತಿಯಾದುದರಿಂದ ಅವನನ್ನು ಕುರಿತು ಬರೆದಿರುವ ವಾಸವದತ್ತಾ ಗದ್ಯಕಾವ್ಯವು ಆಖ್ಯಾಯಿಕೆಯೇ ಆಗುತ್ತದೆ. ಸುಬಂಧುವಿನ ಗದ್ಯಕಾವ್ಯವು ಕಥೆ, ವಸ್ತು ಕವಿಕಪೋಲಕಲ್ಪಿತ. ಈ ಕಾರಣಗಳಿಂದ ಬಾಣನು 'ವಾಸವದತ್ತಯಾ' ಎಂಬ ಪದದಿಂದ ಸುಬಂಧುವಿನ ವಾಸವದತ್ತಾ ಕಥೆಯನ್ನು ಉದ್ದೇಶಿಸಿಲ್ಲವೆಂದು ಗ್ರಾಹ್ಯವಾಗುತ್ತದೆ. ಸುಬಂಧುವು ಬಾಣನಿಗಿಂತ ಈಚಿನವನೇ ಇರಬೇಕೆಂದು ಇದರಿಂದ ಊಹಿಸಬಹುದಾಗಿದೆ.

ವಾಸವದತ್ತೆಯ ಕಥೆ

ಸುಬಂಧುವಿನ ವಾಸವದತ್ತಾಕಥೆಯು ಉದಯನಕಥೆಗೆ ಸಂಬಂಧಿಸಿದುದಲ್ಲ. ಈ ಕಥೆಯನ್ನು ಸುಬಂಧುವು ಎಲ್ಲಿಂದ ತೆಗೆದುಕೊಂಡಿರುವನೆಂಬುದು ತಿಳಿಯದು. ಸುಬಂಧುವೇ ಕಲ್ಪಿಸಿಕೊಂಡಿರಬೇಕು. ಚಿಂತಾಮಣಿಯೆಂಬ ರಾಜನ ಮಗ ಕಂದರ್ಪಕೇತುವು ಸ್ವಪ್ನದಲ್ಲಿ ಒಬ್ಬ ಸುಂದರಿಯನ್ನು ಕಾಣುತ್ತಾನೆ. ಮಿತ್ರನಾದ ಮಕರಂದನೊಡನೆ ಅಜ್ಞಾತಳಾದ ತನ್ನ ಪ್ರೇಯಸಿಯನ್ನರಸುತ್ತಾ ಹೊರಡುತ್ತಾನೆ. ಒಂದು ರಾತ್ರಿ ವಿಂಧ್ಯಪರ್ವತದ ಮರವೊಂದರ ಕೆಳಗೆ ಮಲಗಿದ್ದಾಗ ಮರದ ಮೇಲೆ ಎರಡು ಗಿಳಿಗಳ ಸಂಭಾಷಣೆ ಕಿವಿಗೆ ಬೀಳುತ್ತದೆ. ಪಾಟಲಿಪುತ್ರನಗರದ ರಾಜಪುತ್ರಿಯಾದ ವಾಸವದತ್ತೆಯು ತನ್ನ ಕನಸಿನಲ್ಲಿ ಕಂದರ್ಪಕೇತುವನ್ನು ಕಂಡು ಆತನನ್ನು ಹುಡುಕಿ ತರಲು ತಮಾಲಿಕೆಯೆಂಬ ಆ ಗಿಳಿಯನ್ನು ಕಳಿಸಿರುವಳೆಂದು ಸಂಭಾಷಣೆಯಿಂದ ಗೊತ್ತಾಗುತ್ತದೆ. ಆ ಗಿಳಿಯ ಸಹಾಯದಿಂದ ಪ್ರಿಯ ಪ್ರೇಯಸಿಯರು ಸೇರುತ್ತಾರೆ. ಆದರೆ ವಾಸವದತ್ತೆಯ ತಂದೆಯಾದ ಶೃಂಗಾರಶೇಖರನು ಆಕೆಯನ್ನು ಪುಷ್ಪಕೇತುವೆಂಬೊಬ್ಬ ವಿದ್ಯಾಧರನಿಗೆ ಕೊಟ್ಟು ಮದುವೆಮಾಡ ಯತ್ನಿಸಲು, ಈ ಪ್ರೇಮಿಗಳು ಮಾಯದ ಕುದುರೆಯ ಸಹಾಯದಿಂದ ತಪ್ಪಿಸಿಕೊಂಡು ವಿಂಧ್ಯಪರ್ವತವನ್ನು ಸೇರುತ್ತಾರೆ. ಅರುಣೋದಯಕ್ಕೆ ಮುಂಚೆ ಕಂದರ್ಪಕೇತುವಿನ್ನೂ ನಿದ್ರಿಸುತ್ತಿರುವಾಗಲೇ, ವಾಸವದತ್ತೆಯು ಪುಷ್ಪಫಲಾವಚಯಕ್ಕಾಗಿ ವನವನ್ನು ಪ್ರವೇಶಿಸುತ್ತಾಳೆ. ಇವಳನ್ನು ವಶಪಡಿಸಿಕೊಳ್ಳಬೇಕೆಂದು ಹಿಂದೆಬಿದ್ದ ಎರಡು ಕಿರಾತರ ಪಡೆಗಳು ತಮ್ಮಲ್ಲಿಯೇ ಜಗಳ ಹುಟ್ಟಿ ಕಾದಾಡ ತೊಡಗಲು ಇವಳು ಅವರಿಂದ ತಪ್ಪಿಸಿಕೊಳ್ಳುತ್ತಾಳೆ. ಆದರೆ ದುರ್ದೈವದಿಂದ, ಕಾಣದೆ ಆಶ್ರಮವೊಂದನ್ನು ಪ್ರವೇಶಿಸಿ ಅಲ್ಲಿನ ಋಷಿಯ ಶಾಪದಿಂದ ಕಲ್ಲಾಗುತ್ತಾಳೆ. ಇತ್ತ ಕಂದರ್ಪಕೇತುವು ಎದ್ದು ಪ್ರೇಯಸಿಯನ್ನು ಕಾಣದೆ ಹತಾಶನಾಗಿ ಆತ್ಮಹತ್ಯೆಗೆ ಉದ್ಯುಕ್ತನಾಗಲು ಅಶರೀರವಾಣಿಯೊಂದು ಪ್ರಿಯಾಸಮಾಗಮದ ಆಶ್ವಾಸನವನ್ನು ನೀಡುತ್ತದೆ.

ಬಹಳ ಅಲೆದಮೇಲೆ ಆತನ ಸ್ಪರ್ಶದಿಂದಲೇ ಆಕೆಯ ಶಾಪ ಮುಗಿದು ಪೂರ್ವಾವಸ್ಥೆಯನ್ನು ಹೊಂದುತ್ತಾಳೆ.

ಕಥೆಯ ವಿಮರ್ಶೆ

ಕಥೆಯಲ್ಲಿ ಜೀವಾಳವಿರಲಿ, ಕಥೆಯೇ ಇಲ್ಲವೆನ್ನಬಹುದು. ಸ್ವಪ್ನದರ್ಶನ, ಮಾತಾಡುವ ಗಿಳಿಗಳು, ಮಾಯದ ಕುದುರೆ, ಶಾಪ, ರೂಪಾನ್ತರ, ಅಶರೀರವಾಣಿ ಇವುಗಳನ್ನು ಯಥೇಷ್ಟವಾಗಿ ಉಪಯೋಗಿಸಿಕೊಳ್ಳಲಾಗಿದೆ. ಪ್ರಣಯಿಗಳ ಸೌಂದರ್ಯ ವರ್ಣನೆ, ಔದಾರ್ಯ, ಪರಸ್ಪರ ಗಾಢಾನುರಾಗ, ದುರ್ವಿಧಿಯಿಂದ ಒದಗಿದ ವಿಯೋಗ, ಸಂಗಮಕ್ಕೆ ಒದಗಿದ ಆತಂಕಗಳು, ದುಃಖ ಮತ್ತು ವಿಪತ್ತುಗಳು ಮೇಲಿಂದ ಮೇಲೆ ಬರುತ್ತಿದ್ದರೂ ಚಲಿಸದಿರುವ ಪ್ರೇಮ, ಸಂಗಮ ಇವುಗಳೇ ಇಲ್ಲಿಯ ಆಕರ್ಷಣೀಯ ವಿಷಯುಗಳು. ಕಾವ್ಯಸಾಮಗ್ರಿಗಳಾದ, ನಗರ, ಯುದ್ಧ, ಸಾಗರ, ಪರ್ವತ, ನದಿ, ಋತುಗಳು, ಸೂರ್ಯಾಸ್ತಮಯ, ಚಂದ್ರೋದಯ ಇವುಗಳ ಮನೋಹರವಾದ ವಿಸ್ತಾರವಾದ ವರ್ಣನೆಗಳೂ, ಅಲ್ಲಲ್ಲಿ ಕಂಡುಬರುವ ವಿವಿಧ ಶಾಸ್ತ್ರಪರಿಚಯ, ಕಲಾಭಿಜ್ಞತೆ, ಇವುಗಳೂ ವಸ್ತುವನ್ನು ರಸವತ್ತಾಗುವಂತೆ ಮಾಡಿವೆ. ಪಾತ್ರನಿರೂಪಣೆಯಶಕ್ತಿ ಸುಬಂಧುವಿಗೆ ಇಲ್ಲವೆಂದು ಆಶ್ಚರ್ಯಪಡುವಂತಿಲ್ಲ. ಕಥೆಯಲ್ಲಿ ಅಸಂಬದ್ಧತೆ ಸಾಕಷ್ಟುಸಿಕ್ಕುತ್ತದೆ. ಕಾರಣ, ಸುಬಂಧುವಿನ ದೃಷ್ಟಿ ಕಥೆಯ ಕಡೆಗಿಲ್ಲ. ಕಥೆ ಒಂದು ವ್ಯಾಜಮಾತ್ರ; ಉದ್ದೇಶ ವರ್ಣನೆ ಮತ್ತು ವರ್ಣನೆಯ ವಿಸ್ತಾರ. ಸುಬಂಧುವಿನ ವರ್ಣನಸಾಮರ್ಥ್ಯ ನಿಜವಾಗಿಯೂ ಅಮಿತವಾದುದು. ರೀತಿ ಸಾಂಪ್ರದಾಯಿಕ. ವಿಷಯಾಂತರವರ್ಣನೆಯೊಡನೆ ಕಾವ್ಯಕ್ಕಿರುವ ಸಾಂಪ್ರದಾಯಿಕವಾದ ಅವಿನಾಭಾವ ಸಂಬಂಧವನ್ನು ಸುಬಂಧುವು ಕಾವ್ಯದಲ್ಲಿ ತನ್ನ ವಿಪುಲಕಲ್ಪನಾಕೌಶಲ ಮತ್ತು ಶಾಸ್ತ್ರಪಾಂಡಿತ್ಯಗಳನ್ನು ಪ್ರದರ್ಶಿಸಲು ಸಾಧನವನ್ನಾಗಿ ಮಾಡಿಕೊಂಡಿದ್ದಾನೆ. ಕಂದರ್ಪಕೇತುವಿಗೆ ಸ್ವಪ್ನದಲ್ಲಿ ದರ್ಶನವಿತ್ತ ವಾಸವದತ್ತೆಯನ್ನು ವರ್ಣಿಸಿರುವ ಒಂದು ಸಣ್ಣವಾಕ್ಯ ಕೇವಲ ನೂರಿಪ್ಪತ್ತು ಪಙ್ಕ್ತಿಗಳು ಮಾತ್ರ! ಕವಿಗಳು ಅನೇಕಸಲ ಶಬ್ದಾಡಂಬರಕ್ಕೆ ಮನಸೋತು ವಿಷಯ ಗೌರವವನ್ನು ಮರೆಯುತ್ತಾರೆಂದು ಆನಂದವರ್ಧನನು ಹೇಳಿರುವುದು ಈ ಸನ್ನಿವೇಶದಲ್ಲಿ ಚನ್ನಾಗಿ ಅನ್ವಯಿಸುತ್ತದೆ.

ಸುಬಂಧುವಿನ ಶೈಲಿ

ಸುಬಂಧುವು ದೀರ್ಘಸಮಾಸಗಳನ್ನು ಉಪಯೋಗಿಸಿರುವುದೇನೋ ನಿಜ. ಆದರೆ ಆತನು ಅವನ್ನು ಬರಿಯ ಗೀಳಿನಿಂದ ಉಪಯೋಗಿಸಿಲ್ಲ. ಸಮಾಸಗಳೆಲ್ಲವೂ

ಗಮ್ಭೀರವಾಗಿಯೂ ಶ್ರಾವ್ಯವಾಗಿಯೂ ಪರಿಣಾಮಕಾರಿಗಳಾಗಿಯೂ ಇವೆ. ಶಬ್ದಗಳು ಮೃದುವಾಗಿಯೂ ರಮ್ಯಗಳಾಗಿಯೂ ಇವೆ. ಆದರೆ ಶ್ಲೇಷೆಗಳೂ, ವಿರೋಧಾಭಾಸಗಳೂ ವಿಶೇಷಣಗಳೂ ಉಪಮೆಗಳೂ ಓದುಗರಿಗೆ ತುಂಬ ಆಯಾಸವನ್ನುಂಟುಮಾಡುತ್ತವೆ; ಅಲ್ಲದೆ ಸ್ವಾಭಾವಿಕವಾಗಿಯೇ ಉಜ್ವಲಗಳಾದ ಅವನ ಕಲ್ಪನೆಗಳೂ ಪಾತ್ರಗಳೂ ಇವುಗಳ ದೆಸೆಯಿಂದ ಅತಿಯಾಗಿಯೇ ಜ್ವಲಿಸಿ ಮನೋಹರಗಳಾಗುವುದಕ್ಕಿಂತ ಕ್ಲೇಶಕರಗಳೇ ಆಗುತ್ತವೆ. ಅಲಕ್ತದಿಂದ ಕೆಂಪಾದ ಪಾದಗಳುಳ್ಳ ಸುಂದರಿಗೆ ರಕ್ತಪಾದ ಶಬ್ದವನ್ನು ವಿಶೇಷಣವನ್ನಾಗಿಕೊಟ್ಟು ವ್ಯಾಕರಣ ಶಾಸ್ತ್ರವನ್ನು ಉಪಮಾನವನ್ನಾಗಿ ಕೊಡುತ್ತಾನೆ. ವ್ಯಾಕರಣಶಾಸ್ತ್ರದ ಭಾಗಗಳು ಅಡಿಯಲ್ಲಿ ಕೆಂಪುಗೆರೆಗಳಿಂದ ಕೂಡಿವೆ ಎಂಬುದರಿಂದ ಇಲ್ಲಿನ ವಿರೋಧ ಪರಿಹೃತವಾಗುತ್ತದೆ; ಉಪಮೆ ಸಾರ್ಥಕವಾಗುತ್ತದೆ. ಇಂತಹ ಶ್ಲೇಷೆಗಳು ಪುಟಪುಟಕ್ಕೂ ಬರುವುದೀಗ ಇಲ್ಲಿನ ತೊಂದರೆ. ತನ್ನ ಕಾವ್ಯದ ಪ್ರತ್ಯಕ್ಷರದಲ್ಲಿಯೂ ಶ್ಲೇಷೆಯಿದೆಯೆಂದು, ಸುಬಂಧುವಿನ ಹೆಮ್ಮೆ: 'ಪ್ರತ್ಯಕ್ಷರ ಶ್ಲೇಷಮಯ ಪ್ರಪಂಚವಿನ್ಯಾಸ ವೈದಗ್ಧ್ಯನಿಧಿಂ' ಎಂಬುದು ಈತನು ತನ್ನ ಕಾವ್ಯಕ್ಕೆ ಕೊಡುವ ವಿಶೇಷಣ. ಶ್ಲೇಷಾಲಂಕಾರವು ಕಾವ್ಯಸೌಂದರ್ಯವನ್ನು ಹೆಚ್ಚಿಸುವುದೆಂಬುದೇನೋ ಸರಿ, ಆದರೆ ಶ್ಲೇಷೆ ತಾನೂ ತಾನೇ ಆಗಿ ಉಳಿದೆಲ್ಲವನ್ನೂ ಮರೆ ಮಾಡಿದರೆ ಅನರ್ಥವಲ್ಲದೆ ಮತ್ತೇನು! ಸುಬಂಧುವಿನ ಹೆಮ್ಮೆ ಸಕಾರಣವಾದುದೆ; ಅವನ ಕಾವ್ಯದಲ್ಲಿ ಶ್ಲೇಷೆಯನ್ನು ಹುಡುಕಬೇಕಾದುದಿಲ್ಲ; ಆದರೆ ಅದನ್ನು ಉಪಯೋಗಿಸುವ ಮೊದಲು ಸುಬಂಧುವು ಪ್ರಮಾಣದ ವಿಷಯದಲ್ಲಾಗಲೀ ಔಚಿತ್ಯದ ವಿಷಯದಲ್ಲಾಗಲೀ ಒಮ್ಮೆ ಯೋಚಿಸಿರುವನೇ ಎಂದು ನಾವೇ ಅನೇಕ ಸಾರಿ ಯೋಚಿಸಬೇಕಾಗುತ್ತದೆ: ಶ್ಲೇಷೆಯನ್ನು ಸೌಂದರ್ಯಕ್ಕಾಗಿಯಲ್ಲ, ಶ್ಲೇಷೆಗೋಸ್ಕರವೇ ಉಪಯೋಗಿಸಿರುವನೆಂದರೆ ತಪ್ಪಾಗುವುದಿಲ್ಲ. ಸಮಸ್ತ ಚಾತುರ್ಯವನ್ನೂ ಶ್ಲೇಷೆಯಕಡೆಗೆ ತಿರುಗಿಸಿರುವುದರಿಂದ ಭಾಷೆಗೆ ತುಂಬ ಹಿಂಸೆಯಾಗಿದೆ; ಓದುಗರಿಗೆ ಹಿಂಸೆಯಾಗುತ್ತಿದೆ! ಈ ರೀತಿ ಶ್ಲೇಷೆಯನ್ನು ಬಳಸಿರುವವನು ಸುಬಂಧುವೊಬ್ಬನೇ ಅಲ್ಲ. ಬಾಣನೂ, ಸುಬಂಧುವಷ್ಟಲ್ಲದಿದ್ದರೂ, ಈ ತಪ್ಪನ್ನು ಮಾಡಿಯೇ ಇದ್ದಾನೆ; ಕಥೆಯು 'ನಿರಂತರ ಶ್ಲೇಷಘನ'ವಾಗಿರುವುದರಿಂದಲೇ ಸಹೃದಯಮನೋಹಾರಿಣಿಯೆಂದು ಅವನ ಆಶಯ. ಆದರೆ ಶ್ಲೇಷೆಯಿಂದುಂಟಾಗುವ ನಷ್ಟವನ್ನು ಕಟ್ಟಿಕೊಡುವ ಶಕ್ತಿ ಬಾಣನ ಉದಾತ್ತ ಕಲ್ಪನೆಗೂ, ವರ್ಣನಕಲೆಗೂ ಇದೆ. ಸುಬಂಧುವಿನಲ್ಲಿ ಇವೆರಡೂ ಇಲ್ಲ; ಜೊತೆಗೆ ದಂಡಿಯ ಮೃದುಹಾಸ್ಯ, ವೇಗ ಮತ್ತು ವೈವಿಧ್ಯವೂ ಇಲ್ಲ.

ಕಲ್ಪನೆ, ಕರುಣರಸ ಮತ್ತು ಭಾವಗಳಿದ್ದರೂ ಸುಬಂಧುವಿನ ಕೃತಿ ಕಾವ್ಯ

ಗೌರವವನ್ನು ಕೆಳಗಿಳಿಸುವ ಕೇವಲ ಶಬ್ದಾಲಂಕಾರಮಯವಾದ ಕೈಚಳಕದಿಂದ ಕೂಡಿದೆ. ಆದರೂ ಒಂದೊಂದು ಯಮಕ ಸೊಗಸಾಗಿದೆ: 'ಆನ್ದೋಲಿತ ಕುಸುಮ ಕೇಸರೇ, ಕೇಶರೇಣುಮುಷಿ ರಣಿತ ಮಧುರ ಮಣೀನಾಂ, ರಮಣೀನಾಂ ವಿಕಚ ಕುಮುದಾಕರೇ ಮುದಾಕರೇ.' ಕವಿಯು ಇಲ್ಲಿ ಪ್ರಭಾತ ಮಾರುತನ ಲಲಿತ ಲೀಲೆಗಳನ್ನು ಪ್ರಾಸಂಗಿಕವಾಗಿ ವರ್ಣಿಸಿದ್ದಾನೆ 'ಪುಷ್ಪ ಕೇಸರಗಳನ್ನು ಅಲುಗಾಡಿಸುತ್ತಾ, ಮುಖರಮಣಿಭೂಷಣಾಲಂಕೃತರಾದ ಸುಂದರಿಯರು ತಲೆಯಲ್ಲಿ ಮುಡಿದಿರುವ ಪುಷ್ಪಗಳ ರೇಣುಗಳನ್ನು ಕದ್ದೊಯ್ಯುತ್ತಾ, ನೈದಿಲೆಗಳನ್ನರಳಿಸುತ್ತಾ, ಆನಂದಗೊಳಿಸುತ್ತಿರಲು . .' ಆದರೆ ರೇವಾನದೀ ವರ್ಣನೆಯ ಅನುಪ್ರಾಸವು ಸ್ವಲ್ಪ ಶ್ರಮಾವಹ: 'ಸಮದಕಲಕಲಹಂಸಸಾರಸರಸಿತೋದ್ಭ್ರಾಂತ ಭಾ: ಕೂಟ ವಿಕಟ ಪುಚ್ಛಚ್ಛಟಾವ್ಯಾಧೂತವಿಕಚಕಮಲಖಂಡವಿಗಲಿತಮಕರನ್ದಬಿನ್ದುಸನ್ದೋಹ ಸುರಭಿತ ಸಲಿಲಯಾ' ಕಾಮೋನ್ಮಾದದಿಂದ ಅಸ್ಫುಟಮನೋಹರವಾಗಿ ದನಿಗೈಯುತ್ತಿರುವ ಕಲಹಂಸ ಮತ್ತು ಸಾರಸಗಳ ಕೂಗುಗಳಿಂದ ಭಯವನ್ನು ಹೊಂದಿದ ಮೀನುಗಳ ವಿಕಟಪುಚ್ಛಾಗ್ರಗಳಿಂದ ಬಲವಾಗಿ ಅಲುಗಿಸಲ್ಪಟ್ಟ ಅರಳಿದ ಕಮಲಗಳಿಂದುದುರಿದ ಮಕರನ್ದಬಿನ್ದುಗಳಿಂದ ಸುವಾಸನೆಯನ್ನು ಹೊಂದಿದ ನೀರುಳ್ಳ . .'

ಇಷ್ಟಾದರೂ ಅನೇಕ ಕವಿಗಳೂ ವಿಮರ್ಶಕರೂ ಸುಬಂಧುವನ್ನು ತುಂಬ ಗೌರವಿಸಿದ್ದಾರೆ. ವಾಮನಭಟ್ಟಬಾಣನು ಇವನನ್ನು 'ಸಹೃದಯ ಲೋಕ ಬಂಧು'ವೆಂದು ಕರೆದಿದ್ದಾನೆ. ರಾಘವಪಾಂಡವೀಯಕಾರನಾದ ಕವಿರಾಜನು ಸುಬಂಧುವನ್ನು ವಕ್ರೋಕ್ತಿಮಾರ್ಗನಿಪುಣರಲ್ಲಿ ಮೊದಲನೆಯವನನ್ನಾಗಿ ಪರಿಗಣಿಸಿದ್ದಾನೆ: "ಸುಬಂಧುರ್ಬಾಣಭಟ್ಟಶ್ಚ ಕವಿರಾಜ ಇತಿತ್ರಯಃ ವಕ್ರೋಕ್ತಿ ಮಾರ್ಗ ನಿಪುಣಾಶ್ಚತುರ್ಥೋ ವಿದ್ಯತೇ ನವಾ"

ಶೈಲಿಯ ದೃಷ್ಟಿಯಿಂದ ಸುಬಂಧುವಿನ ಕಾವ್ಯವು ಗೌಡೀರೀತಿಯದು. ಇದರಿಂದ ಈತನನ್ನು ಪೂರ್ವ ದೇಶಕ್ಕೆ ಸೇರಿದವನೆಂದು ಹೇಳುತ್ತಾರೆ. ಕುಸುಮಪುರದ ವರ್ಣನೆಯು ಇದಕ್ಕೆ ಸಹಾಯವಾಗುತ್ತದೆ. ಆದರೆ ಈ ಕೃತಿಯಲ್ಲಿ ಕಂಡುಬರುವ ಭೂವಿವರಣೆಯು ಬಲುಮಟ್ಟಿಗೆ ಸಾಂಪ್ರದಾಯಿಕವಾದುದರಿಂದ ನಿರ್ಣಯವು ಸುಲಭವಲ್ಲ.

ಸಿ. ರಾಮಾಚಾರಿ

ಪ್ರಮಾಣ ಗ್ರಂಥಗಳು

1. *A History of Sanskrit Literature*—A. B. KEITH
2. *Classical Sanskrit Literature*—A. B. KEITH
3. *History of Classical Sanskrit Literature*—M. KRISHNAMACHARIAR
4. *A History of Sanskrit Literature*—S. N. DASAGUPTA and S. K. DE
5. *Kādambarī by Bāṇa and his Son*—PETER PETERSON
6. *The Kādambarī of Bāṇa*—C. M. RIDDING
7. *Bāṇa's Kādambarī*—P. V. KANE
8. *Bāṇa's Kādambarī*—M. R. KALE
9. *Harṣacarita*—COWELL

ವಿಪ್ಲವ ಮೂರ್ತಿಃ

ವಿಲಯಜ-ವಿಪ್ಲವ-ಮೂರ್ತಿಸ್ಸಾಹಂ,
    ಕಾಳೀ ಚಾಹಂ,
    ರುದ್ರಶ್ಚಾಹಂ,
ತಾಂಡವಮಗ್ನಸ್ಸ ಭೈರವೋಽಹಂ !
ಬ್ರಹ್ಮವಿಭೇದಕ-ಭಿದುರಂ ಚಾಹಂ,
ಕಾಲಘನೋದ್ಭವ-ವಿದ್ಯುಚ್ಚಾಹಂ ;
ರಮಣೀ-ಸುಮಧುರ-ಕಂಠೋಽಹಂ
    ನಯನ-ತಟಿಚ್ಚಾಹಂ !
ಶ್ಮಶಾನ-ಚೈತ್ಯಾಗ್ನಿಶ್ಚ ಕಿಲಾಹಂ,
    ಮೃತ್ಯುಶ್ಚಾಹಂ,
ಮೃತ್ಯುಂಜಯಸ್ತ್ವಹಂ !
ರುದ್ರಶಿರಸ್ಥಶ್ಚಂದ್ರಶ್ಚಾಹಂ,
    ಗಂಗಾ ಸಾಽಹಂ,
    ರಕ್ತಾಕ್ಷ್ಯಪಿ ಚಾಹಂ !
    ಅಶನೇಶ್ಶಕ್ತಿಸ್ಸಾಽಹಂ !
    ವಿದ್ಯುದ್ದೀಪ್ತಿಶ್ಚಾಹಂ !
ವಧೂಜನಾನನ-ಮಂದಹಸೋಽಹಂ,
    ಮುಖಪಾಟಲಿಮಾಽಹಂ,
    ನಯನವಿಲಾಸೋಽಹಂ,
ತನ್ಮಂಜುಲ-ಕಂಠ್ಯಾ-ವೀಣಾಽಹಂ !
ಶ್ಮಶಾನ-ಪೈಶಾಚ-ರುತಂ ಚಾಹಂ,
ಸುಬೃಹತ್-ಸ್ಫೋಟಕ-ಗೋಲಶ್ಚಾಹಂ ;
ಪರಿಸ್ಫುಟಂತೀ ಲೌಹಸುಷಿಶ್ಚಾಹಂ !
    ಅಶನಿ-ಕ್ಷೋದೋಽಹಂ,
    ತಟಿತ್-ಸ್ಫುಲಿಂಗೋಽಹಂ !
ಆಶೀವಿಷ-ಮುಖ-ವಿಷಂ ತ್ವಹಂ !
ಮಾತೃ-ಪಯೋಧರ-ಪಯಸ್ತ್ವಹಂ !

ಕಾಲಶ್ಚಾಹಂ,
ದೇಶಶ್ಚಾಹಂ,
ಅಗುಣೀ ಚಾಹಂ!
ಸೃಷ್ಟಿ-ಸ್ಥಿತಿ-ಲಯಸರ್ವಂ ಚಾಹಂ!
ಪರಮಶಿವೋಽಹಂ,
ಹರಿಶ್ಚ ಸೋಽಹಂ
ಹಹ್ ಹಹ್ ಹಹ್ ಹಾ!
ಅನ್ನಂ ಚಾಹಂ,
ನೀರಂ ಚಾಹಂ,
ಅಂಬರ-ಚುಂಬಿತ-ಶುಭ್ರ-ಹಿಮಾವೃತ—
ದಿವ್ಯೋ ಹಿಮಾಲಯೋಽಹಂ!
ವಿದ್ಯುತ್-ಶರಧೇರ್ಮಥನಾಯೋತ್ಥಿತ—
ಭೈದುರ-ಸಿಂಹಶ್ಚಾಹಂ!
ಕನ್ನಡ ವಾಣ್ಯಹಂ,
ಸ ಸಾಗರೋಽಹಂ,
ಕುಲಪರ್ವತೋಽಪ್ಯಹಂ!
ಶ್ರೀ ಕೃಷ್ಣಸ್ಯ ಚ ಚಕ್ರಮಹಂ!
ನಿದ್ರಾ ಚಾಹಂ!
ಮಾದಕ-ಪಿಂಡಶ್ಚಾಹಂ!
ಪಾಪಂ ಚಾಹಂ;
ನರಕಶ್ಚಾಹಂ,
ವೈಕುಂಠಂ ತದಹಂ,
ಸ್ವರ್ಗಶ್ಚಾಹಂ!
ತಾಂಡವಮಗ್ನಸ್ಸ ಭೈರವೋಽಹಂ,
ಕಾಳೀ ಸಾಽಹಂ
ರುದ್ರಸ್ಸೋಽಹಂ,
ವಿಲಯಜ-ವಿಪ್ಲವ-ಮೂರ್ತಿಸ್ಸಾಽಹಂ!

ಮೂಲ: ಕುವೆಂಪು. (ಪಾಂಚಜನ್ಯ) ಅನು: ಸಿ. ಜಿ. ಪುರುಷೋತ್ತಮ

ಗಾಂಧಿ

೧

ಸಿಡಿದ ಸದ್ದು :
ಗುಡುಗೋ ಸಿಡಿಲೋ ಇರಲೆಬೇಕೆಂದವನೆ ಪರದೆ ಸರಿಸುತ ಆಚೆ ನೋಡಿದೆನು ಕದ್ದು
ಸುತ್ತ ಬರಿದೋ ಬರಿದು—
ಥಿಕ್ಕಿ ಹೊಡೆದಿರಬೇಕು ಭೂಮಿ ಬಾನಿನ ಎತ್ತರಕ್ಕೆ ನೆಗೆದು;
ಇಲ್ಲದಿದ್ದರೆ ಇಲ್ಲಿ ಆ ಅಮೇರಿಕ ಇಲ್ಲ ರಷ್ಯ ತಾಳ್ಮೆ ಪರೀಕ್ಷೆಗಾಗಿ ಸಿಡಿಸಿರಬೇಕು
ಸ್ಫೋಟವೊಂದ.

ಅಲ್ಲ? ಎಂಥ ಸೋಜಿಗ ದೃಶ್ಯವಣ್ಣ ಇದು :
ನಮ್ಮ ಜನರಳುವೆ? ಹೌದು!
ಮನೆಯವರೆ ಪರಲೋಕಯಾತ್ರೆ ನಡೆಸಿದರಿವರು ಶಾಸ್ತ್ರಕಾದರು ಅಳುವ, ಅಥವ
ಅಳಲನು ತೋರುವಂಥ ಹಿಂದಿನ ಆ ಅನಾಗರಿಕರೆ ಅಲ್ಲ
ಇಂದು ಕಣ್ಣುಗಳಿಂದ ಆಚೆ ಸುರಿದಿದೆ ಏಕೊ ಕೊಳಾಯಿ-ಧಾರೆ.
ಚೆನ್ನಾಗಿದೆ, ಚೆನ್ನಾಗಿದೆ, ಕಾರಣವ ಕೇಳಿದೆಯಾ?
ಯಾರೋ ಮುದಿಗೊಡ್ಡಂತೆ, ಮೈಸೂರಿನವನಂತು ಅಲ್ಲವಂತೆ
ಬಿಚ್ಚಿ ತನ್ನಯ ಕಂತೆ, ಗುಂಡಿಗಾಹುತಿಯಾಗಿ ಬಿದ್ದನಂತೆ
ಅವನ ನೆನೆದೂ ನೆನೆದು ಬಿಕ್ಕಿ ಅಳುತಿಹರಂತೆ!
ಅವನು ಸತ್ತರೆ ಇವರು ಏಕೆ ಸಂತಾಪದಲಿ ಮುಳುಗಬೇಕೋ ನಾನು ಬೇರೆ ಕಾಣೆ
ನಾವಿರುವ ನೆಲವೆಲ್ಲ ಬಂಜರಾಯಿತೆ? ಸೂರ್ಯ ಮೂಡನೆ ಇನ್ನು ಮುಂದೆಂದಿಗೂ?
ಇಲ್ಲ, ಭೂಮಿಯ ಬಸಿರ ಬಗೆದು ಲಾವದ ಹೊನಲು ಹರಿಯಬಹುದೆ?
ಕೋಟಿಕಲ್ಪಗಳಿನ್ನು ಕಳೆದುಹೋದರು ಅಂಥ ಭೀತಿಗೆಡೆಯೇ ನಮಗೆ ಇಲ್ಲವೆಂದಿಹ
ಭೂಮಿ-ವಿಜ್ಞಾನಿ ಮಾತುಗಳ ಸಟೆಯೆನುವೆಯಾ?
ನಮ್ಮ ಮುಖ್ಯ ಪ್ರವಾದಿ ಅವನೆ ಅಲ್ಲವೆ ಗೆಳೆಯ?

೨

ಒಂದೆ ತಾಯಿಯ ತೊಡೆಯ ಮೇಲಾಡಿ ಬೆಳೆದವರು ನಾನು ನೀನೂ ಮತ್ತೆ ಅವನು
ಕೂಡ;

ಆದರವನಾದರ್ಶ ಆಕಾಂಕ್ಷೆಗಳೆ ಬೇರೆ; ನಾವು ಇಲ್ಲಿಯೆ ಕೊಳೆತರವನೋ ಏರಿದ
ಮೋಡ!
ಗಾಳಿಯೊಂದೇ, ನೀರು ಬೆಳಕು ಒಂದೇ ಕೊನೆಗೆ ಇಲ್ಲೆಲ್ಲರಿಗು ಒಂದೆ ಒಂದಾವರಣ
ಎಂಥ ಅಚ್ಚರಿಯಣ್ಣಾ—
ನಾವು ಮೊದ್ದುಗಳಾದರವನೊ ಸಕಲಜ್ಞಾನ ಪಾನಮಾಡಿದ ಜಾಣ!
ನೀನೆ ಹೇಳು:
ಯಾವುದರಲೋ ನೀನವನಿಗಿಂತಲು ಕೀಳು?
ಅವನಿಗಿಂತಲು ಹತ್ತೊ ಹನ್ನೆರಡೊ ವರ್ಷಗಳು ಹೆಚ್ಚು ಬಾಳಿದೆ; ಇನ್ನೂ
'ಬಾಳು'ತಿರುವೆ
ನಾಲ್ಕು ಮಕ್ಕಳ ಕೊಟ್ಟೆ ಸುಸ್ವಾದನವಸಂತು; ನಿನಗಿನ್ನು ಮೂಡಿಲ್ಲ ಅಂಥ ಭೀತಿ;
ನಲವತ್ತು ವರ್ಷಕ್ಕೆ ಕುರುಡಾಗಿ ಆ ಪ್ರಾಣಿ ಕನ್ನಡಕ ಕೊಂಡ ಸೋತು—
ನಿನ್ನಳಿನ್ನೂ ಆರದಂತೆ ಝಗಮಗಿಸುತಿದೆ ದೂರದರ್ಶಕ ಯಂತ್ರ ಕೂಡ ನಾಚುವ
ಎರಡು ನಯನಜ್ಯೋತಿ.
ತಪ್ಪು ಯಾರದೆ?
ಒಂದು ಕಣ್ಣಿಗೆ ತಂಪುಕಾಡಿಗೆಯನಿನ್ನೊಂದರೊಳಗೆ ಎಣ್ಣೆ ಬಿಟ್ಟಂಥ, ನಾವು
ತಾಯಿಯೇ ಎಂದು ಭ್ರಮಿಸಿದ ಡಾಕಿನಿಯದಲ್ಲವೇನೋ ಪೆದ್ದೆ!
ಚಂದ್ರಿಕೆಯ ನಗುತಿರುವ ಬೆಳಕ ಮರಿ ಅಪನಾದರಿಲ್ಲೆ ಹಸುರೆಲ್ಲವನು ದಹಿಸುವಗ್ನಿ
ಗಳಾಗಿ ಮೆರೆದಿಹೆವು ನಾವು;
ಸತ್ತು ಬದುಕಿದರವನು ಬದುಕಿ ಸಾಯುತಲಿಹೆವು ಪ್ರತಿ ದಿವಸವೂ!

೩

ಕಡೆದ ಬೆಳಗಿನ ಜೇನು!
ಒಂದೊಂದು ಮರಗಿಡವೂ ಶಹನಾಯ್, ವಯೊಲೀನು,
ಮಂದಾರವನಗಳಲಿ ಸುಳಿದು ಗಂಧವ ಹೀರಿ ಬಂದ ಮಂದಾನಿಲನ ಕಂಡೆಯೇನು?
ರಾತ್ರಿಯೆಲ್ಲಾ ನಿದ್ದೆಗೆಟ್ಟು ಯಾರೋ ಹಸಿರ ಮೇಲೆ ಸುಣ್ಣಾವ ಬಳಿದು ಹೋದರೇನು?
ದೇವರೂರಿನ ಗಂಗೆ ದಾರಿತಪ್ಪಿದಳೇನು?
ಬೆಳಕು ಧುಮುಕಿನ ಕೊಡೆಯ ಹಿಡಿದು ಇಳಿಯುವನಾರೋ ಬೆಳ್ಳಿಕಣ್ಣಿನ ಚಿಣ್ಣಾ
ಗೇಣುದ್ದನಿವನಿನ್ನು ಆಗಲೇ ಕೈಯೊಳಗೆ ಅಂಕುಶವ ಹಿಡಿದಿರುವನಲ್ಲೊ ಅಣ್ಣಾ!
ಕಾಲಿಟ್ಟ ಕಡೆಯೆಲ್ಲ ಸಂಗೀತ ತನನಾನ . . .

ಫುಟಿದು ಬೇಲಿಯ ಹಾರಿ ಬಿಳಿಯಾನೆ ಬಳಿಸಾರಿ ನಗೆಬೀರಿದ—
ಎಲ ಎಲಾ! ನಾವೆಲ್ಲ ಹಗಲು ಇರುಳೂ ಯತ್ನ ನಡೆಸಿ ಸೊರಗಿದರೂವೆ
ಬನಬಿಟ್ಟೆ ಅಲ್ಲಾಡದಂಥ ಪೀಡೆಯ ಪಾಡ ನೋಡೊ ಮೂಢ!
ಬೆದರಿ ದೇಶಾವರಿಯ ಮಂದಹಾಸವ ಬೀರಿ ಕೊಳವೆ-ಸೊಂಡಿಲನೆತ್ತಿ ಹೊಡೆದು
ಮಿಲ್ಟ್ರಿಸಲಾಮು ಮಾಯವಾಯಿತು ಕಪ್ಪು ನೀರ ದಾಟಿ!
ರವಿ ತಾರೆ ಚಂದ್ರಮರು ನಮ್ಮವರೊ ಇನ್ನು:
ಬೀದಿ ತಿರುಕನ ಮನಸು ಕೂಡ ಪಡೆಯುವುದಿಂದು ಹೊಸತನದ ಬದುಕ ಹೊನ್ನು!
ಬೆಂಗಾಡ ಹೆಣವೆಲ್ಲೊ ಒಳಗೆ ಹೂತು,
ಕಾಣಿಸದೆ ಗೆಳೆಯ ಇಲ್ಲೆಲ್ಲೆಲ್ಲು ಬೆಳಗುತಿದೆ ಚೆಲುವಿನೊಂದೇ ಒಂದು ಜಾಹಿರಾತು!
ತನ್ನ ನಲವಿನ ಗೆರೆಯ ತಾನೆ ರಚಿಸುತ ಸುತ್ತ,
ಮುಂಗಾರ ಮೋಡಗಳ ಕೆಳಗೆ ಅಹ! ಬಂಗಾರಿ ನವಿಲ ಕುಣಿತ,
ಹಸಿರು ನಗರಗಳಿಂದ ನಕ್ಕ ಹಕ್ಕಿಯ ರಾಗ-ಹಾರ
ಗಾಳಿಯ ಕೊರಳ ಸಿಂಗರಿಸಿದೆ;
ಮುಗ್ಧ ಮಲ್ಲಿಗೆ ತುಟಿಯ ತೆರೆದು ಮೆಲ್ಲಗೆ ಕಂಪ—
ತೊದಲಿನಿಂದೆಲ್ಲರನು ನಗಿಸುತ್ತಿದೆ.
ರವಿ ಬಂದು ಮೂಡಣದ ಅಂಗಡಿಯ ತೆರದವನೆ
ಜೋಡಿಸಿದ ಸೌಂದರ್ಯ, ಸೊಬಗ ಸರಕ;
ಮೂಕವಾಗದೆ ನಾಚಿ ಇದರ ಮುಂದೆ ಅದೆಲ್ಲೊ ಇರುವ ನಾಕ?
ಐದು ಗೊಂಚಲ ಮಿಂಚುಗಂಬ ತೂಗಿದೆ ನೋಡೋ
ಸರ್ಕಲ್ಲಿನಂಚಿನಲ್ಲಿ;
ಇಂದು ದೀಪಾವಳಿಯೊ ಗೆಳೆಯ, ಸತ್ತಿತೊ ಇನ್ನು
ಹುಬ್ಬುಗಂಟಿನ ಹಾಳು ತಿಮಿರಾವಳಿ!

೪

ಅಳುವರೇ ಬೆಪ್ಪೆ, ಇಷ್ಟು ಸಣ್ಣ ಸಂಗತಿಗೆಲ್ಲ! ಹೋಗಿ ಕಣ್ಣೀರನೊರಸು
"ಗುಂಡಿಕ್ಕಿಕೊಂದ ಹಾ! ದುಷ್ಟವೆ"ನುತಿಹೆಯಲ್ಲೊ, ಶುಭಗಳಿಗೆಯಲ್ಲೇಕೆ ಮೂಡಿ
ಬಂತು ಅನಿಷ್ಟ!
ಪಂಜರದ ಕಿರುಬಾಗಿಲೊಡೆದು ಗಿಣಿಯನು ನೀಲಿಬಾನಿನಾಳಕೆ ತೇಲಿ ಬಿಟ್ಟನಷ್ಟೆ;
ಅವನ ಬಾಲವ ಹಿಡಿದು ನೆರಳಿನಂತೆಯೆ ನಡೆದ
ನಿನಗಂತು ಆ ವಿಷಯ ಹೊಳೆಯಲಿಲ್ಲ!

ಕಷ್ಟಕ್ಕೆ ಕೈಯಾಗಿ ಅವನಾದರೂ ಬಂದ; ನಿನಗೆ ತಿಳಿಯದ ಕೆಲಸ ಪೂರೈಸಿದ—
ಅದಕಾದರೂ ನೀನು ಮೆಚ್ಚಿ ಸಂತೋಷವನು ಸೂಚಿಸಿದೆಯಾ?
ಉಪಕಾರಗೈದವಗೆ ಎರಡು ಬಗೆಯುವ ಕೆಟ್ಟ ಮನಸೊ ನಿನ್ನದು ಗೆಳೆಯ
ಅತ್ತು ಬೈದರೆ ಮತ್ತೆ ಸತ್ತವನು ಎದ್ದಿಲ್ಲಿ ಬರುವುದಿಲ್ಲ;
ಹಠಹಿಡಿದು ಲೋಕವನೆ ತಿದ್ದಲೆಳಸಿದ ಅವನ ಗತಿಯ ನೋಡಿದೆಯಲ್ಲ;
ನಿಜವ ಸಾರಲು ಹೋಗಿ ತಂದುಕೊಂಡನು ತನ್ನ ಬಾಳಿಗಂತ—
ಸಾಲದೇ ಹೇಳಯ್ಯ ಈ ಒಂದೆ ದೃಷ್ಟಾಂತ?

ಎಚ್ಚರಾಗೊ ಹುಚ್ಚ, ಅಡ್ಡದಾರಿಯ ಹಿಡಿದು ಸಾಗಬೇಡ:
ರಕ್ತ ನೋಡಿದ ಒಡನೆ ಜನವಿದಮೃತವೆಂದರದಕೆ ತಲೆಯನು ತೂಗು
ಕತ್ತೆ ಕಿರುಚೇ ಇಲ್ಲಿ ವಿಜಯ ದುಂದುಭಿ—ನೀನೂ ಹಾಗೆ ಕೂಗು.
ಇದ್ದಿಲನು ವಜ್ರವೆಂದೆನ್ನಬಹುದು—ಊಂ, ಅದಕೂ ಸೈ ಎಂದವನೆ, ಅವರೊಡನೆ
ಕೊರಳೆತ್ತಿ ಹಾಡುತ್ತಿರು.
ಸುಳ್ಳು, ಅನ್ಯಾಯಗಳು ಇಲ್ಲಿಯವರಿಗೆ ಮಂತ್ರ—ನಿಮಿಷ ನಿಮಿಷಕು ಅವನೆ ಜಪಿ
ಸುತ್ತಿರು.
ಮನೆಯೊಳಗೆ ದಿನದಿನವೂ ಇದ್ದೆ ಇದೇ ರಾದ್ಧಾಂತ—ಅಜೆ, ಶಾಶ್ವತವಲ್ಲ ಬಾಳೆಂದು
ಏಕ್‌ದಿನ್‌ಕ ಸುಲ್ತಾನನಾದರ್ಶವನ್ನೇ ಮೆಚ್ಚಿ ಮಜ ಉಡಾಯಿಸೊ ಮರುಳೆ!
ಫುಟ್‌ಪಾತ್ ಮೇಲುಗಡೆ ಕೋಟಿ ಕ್ರಿಮಿಗಳು ಭಿಕ್ಷೆಬೇಡುತಿದ್ದರು ಕೂಡ
ಹೋಟೆಲಿಗೆ ನಡೆದವನೆ ತಿನ್ನು ಸಿಕ್ಕಿದ ಹಾಗೆ,
ಅಣುಬಾಂಬು ನಮ್ಮವರ ಸಂಸ್ಕೃತಿಗೆ ಕುರುಹೆಂದು ನುಡಿದವರ ಮಾತುಗಳ ಮೇಲೆ
ಜಿಜ್ಞಾಸೆಯನು ನಡೆಸುತ್ತಿರು.
ತೇಲಿಬಿಟ್ಟರು ನೋಡು, ದೆಹಲಿ ಮೇಲಿಂದೊಂದು ಶಾಂತಿ ಪಾರಿವವನ್ನು ಕಡಲಾಚೆಗೆ
ನಮ್ಮ ನಾಡಿನ ಗಡಿಯ ದಾಟಲಿಹ ಮುನ್ನವೇ ಗಿಡುಗವೊಂದನು ಹಾರಿಸಯ್ಯ ಬೇಗ!
ಗುಂಡಿಗಾಹುತಿಯಾದ ಮುದುಕ ತನ್ನಯ ಅರಳು-ಮರುಳಿನಲಿ
ನುಡಿದಂಥ ತತ್ತ್ವಗಳನನುಸರಿಸಿ ನಡೆಯಬೇಡ.
ಜನರಿಗೆದುರಾದೆಯೋ ಅವನ ಗತಿಯೇ ನಿನಗು ಕೇಳೊ ಮೂಢ!

—ಕೆ. ಎಸ್. ನಿಸಾರ್ ಅಹಮದ್

ಅನುಮಾನದ ಪ್ರಾಣಿ*

ಭಗವಂತನು ಸರ್ವವ್ಯಾಪಿಯೆಂದು ಭಾಗವತರು ಬಾಯೊಣಗುವಂತೆ ಹೇಳುತ್ತಿರುತ್ತಾರೆ. ಅದು ನಿಜವೋ ಸುಳ್ಳೋ ಹೇಳುವುದು ಕಷ್ಟ. ಭಗವಂತನನ್ನು ಕಂಡವರು ವಿರಳ. ಆದರೆ ಅನುಮಾನ ಎಲ್ಲೆಲ್ಲಿಯೂ ಅನಂತವಾಗಿದೆಯೆಂಬುದು ಮಾತ್ರ ಸ್ವಯಂಸಿದ್ಧವಾದ ಮಾತು! ಅನುಮಾನವಿಲ್ಲದವರು ಯಾರು? ನಿಜವಾಗಿಯೂ ಯಾರಾದರೂ ಅಂಥವರು ಇದ್ದರೆ ಈ ಕಲಿ ಕಾಲದಲ್ಲಿ ಅವರು ಬಾಳುವುದು ನಿಜವಾಗಿಯೂ ಬಹಳ ಅನುಮಾನದ ವಿಚಾರ. ಈ ಪ್ರಪಂಚಕ್ಕೆ 'ಅನುಮಾನ' ಎಂಬುದು ಹೇಗೆ ಬಂತು? ಈ ಪ್ರಶ್ನೆಗೆ ಉತ್ತರವೇ ಇಲ್ಲ. ಇದರ ಮೂಲಪುರುಷನಾರೆಂಬುದು ಸರ್ವಜ್ಞನೆನಿಸಿದ ಆ ಭಗವಂತನಿಗಾದರೂ ಗೊತ್ತಿದೆಯೋ, ಇಲ್ಲವೋ ಅನುಮಾನ. ನಿಮಗೆ ನನ್ನ ಈ ಮಾತಿನಲ್ಲಿ ಅನುಮಾನವಾದರೆ ಆ ಭಗವಂತನ ವಿಳಾಸ ಪತ್ತೆಹಚ್ಚಿ ಅವನಿಗೊಂದು ಕಾಗದ ಬರೆಯಿರಿ. ನಿಮಗೆ ಉತ್ತರ ಬರುವುದು ನನಗೇನೋ ತುಂಬಾ ಅನುಮಾನ.

ಆಯಿತು, ಅನುಮಾನದ ಅವತಾರಕಾಲದ ಚರ್ಚೆ ಅನಾವಶ್ಯಕ. ಏಕೆಂದರೆ ಅದು ಈಗ ನಮ್ಮ ಕಣ್ಣೆದುರಿಗೆ ಬೃಹದಾಕಾರವಾಗಿ, ಅಣೋರಣೀಯವಾಗಿ, ಅನಂತವಾಗಿ, ಸರ್ವವ್ಯಾಪಿಯಾಗಿ, ಸರ್ವತೋಮುಖವಾಗಿ ಆವರಿಸಿಕೊಂಡು ವಿಜೃಂಭಿಸುತ್ತಿದೆ! ಎತ್ತ ನೋಡಿದಡತ್ತ ಅನುಮಾನ! ಯಾರನ್ನು ಮಾತನಾಡಿಸಿದರೂ ಅನುಮಾನ! ಅನುಮಾನವೇ ಈ ಕಾಲದ ಮುಖ್ಯ ತತ್ವ. ಇದು ನಿಜವಾಗಿಯೂ ಅನುಮಾನಯುಗ! ಅಣುಯುಗ, ಯುದ್ಧಯುಗ, ಮುಂತಾದ ಹೆಸರುಗಳು ಸಲ್ಲವು. ಇದು ಅನುಮಾನ ಯುಗವೆಂಬ ವಿಚಾರದಲ್ಲಿ ಎಷ್ಟು ಮಾತ್ರವೂ ಅನುಮಾನವೇ ಇಲ್ಲ. ಯಾವ ಕಾರ್ಯಕ್ಷೇತ್ರ ನೋಡಿದರೂ ನಿಮಗೆ ಅನುಮಾನದ ತಾಂಡವ ನಾಟ್ಯ ಕಾಣ ಬರುತ್ತದೆ. ನಾವು ಬರೆದಕಾಗದ ತಲಪುವುದೋ ಇಲ್ಲವೋ ಎಂಬ ಅನುಮಾನದಿಂದಲೇ ಅಲ್ಲವೇ, ಇನ್ಶೂರ್ ಮಾಡುವುದು? ಸಾಲ ತೆಗೆದುಕೊಂಡವನು ಹಿಂತಿರುಗಿ ಕೊಡುವನೋ ಇಲ್ಲವೋ ಎಂಬ ಅನುಮಾನದಿಂದಲೇ ಬ್ಯಾಂಕಿನವರು ಜಂಟೀ ಕೇಳುತ್ತಾರೆ. ಮಗ ಸ್ಕೂಲಿಗೆ ಪೀಸು ಕಟ್ಟುವನೋ ಇಲ್ಲವೋ ಎಂಬ ಅನುಮಾನ ದಿಂದಲೇ ತಂದೆ ನೇರವಾಗಿ ಹೆಡ್ಮಾಸ್ಟರಿಗೇ ಹಣ ಕಳುಹಿಸುವುದು! ಅಂತು ಮಗನಿಗೆ

* ಬೆಂಗಳೂರು ಆಕಾಶವಾಣಿಯ (All India Radio) ಕೃಪೆಯಿಂದ.

ತಂದೆಯ ಮೇಲೆ ಅನುಮಾನ, ತಂದೆಗೆ ಮಗನ ಮೇಲೆ ಅನುಮಾನ! ಒಂದೇ ಮಾತಿನಲ್ಲಿ ಹೇಳುವುದಾದರೆ ಅನುಮಾನವೇ ಈಗ ಜನಕ್ಕೆ ಮನೆದೇವರು!

ಅನುಮಾನಪ್ರಾಣಿ ಅಡಿಗೆ ಮಾಡಿದರೆ ಮಾಡಿದ ಅಡಿಗೆ ಸಾಕಾದೀತೋ ಆಗದೋ ಎಂಬ ಅನುಮಾನದಿಂದ ಹುಚ್ಚು ಹುಚ್ಚಾಗಿ ಪದಾರ್ಥ ದಂಡಮಾಡಿ ಹೆಚ್ಚು ಅಡಿಗೆ ಮಾಡುತ್ತಾನೆ. ಕೆಲವು ವೇಳೆ ಹಾಕಿದ ಮಸಾಲೆ ಸಾಕಾಯಿತೋ ಇಲ್ಲವೋ, ಎಂಬ ಅನುಮಾನ ಬಂದು ಎರಡೆರಡು ಸಲ ಹಾಕಿ ಪದಾರ್ಥ ತಿನ್ನುವುದಕ್ಕಾಗದಂತೆ ಮಾಡಿ ಊಟಕ್ಕೆ ಕುಳಿತ ಅತಿಥಿಗಳು ಬೇಡಬೇಡವೆಂದು ಮೊರೆಯಿಟ್ಟರೂ ಅವರು ಸಂಕೋಚದಿಂದಲೇ ಹಾಗೆ ಮಾಡುತ್ತಿರುವರೆಂದು ಅನುಮಾನಿಸಿ ಬಲವಂತವಾಗಿ ಹೆಚ್ಚುಹೆಚ್ಚಾಗಿ ಬಡಿಸಿ ಅವರನ್ನು ಸತಾಯಿಸುತ್ತಾನೆ. ಅವರು ತಿನ್ನಲು ಸಾಧ್ಯವಿಲ್ಲದೆ ಬಿಸಾಡಲು ಮನಸ್ಸು ಒಪ್ಪದೆ ಒದ್ದಾಡಬೇಕಾಗುತ್ತದೆ!

ಒಬ್ಬ ನಿತ್ಯ ಶಂಕಿತನಿಗೆ ತನ್ನ ಹೆಂಡತಿಯ ಮೇಲೆಯೇ ಅನುಮಾನ. ಅದನ್ನು ಅವಳ ಸಂಗಡ ಹೇಳುವುದಕ್ಕೂ ಅನುಮಾನ! ಇತರರ ಸಂಗಡ ಹೇಳುವಂತೆಯೋ ಇಲ್ಲವಲ್ಲ! ಆ ಅನುಮಾನ ಅವನ ಅಂತರಂಗವನ್ನು ಹೊಕ್ಕು ಮನೆಮಾಡಿಕೊಂಡು ನೆಲಸಿಬಿಟ್ಟು ಕುಟ್ಟೀ ಹುಳುವಿನಂತೆ ಕೊರೆಯುತ್ತಿದ್ದಿತು. ಅವಳು ನಕ್ಕರೆ ಇವನಿಗೆ ಅನುಮಾನ. "ಯಾಕೆ ನಕ್ಕಳು? ನನ್ನ ಮೇಲಿನ ತಿರಸ್ಕಾರದಿಂದಲೇ?" ಎಂದೇ ಅವನ ಅನುಮಾನದ ಯೋಚನೆ. ಅವಳು ಅತ್ತರೆ ಅದೇನೋ ಕಳ್ಳ ಅಳುವಿರಬಹುದೆಂದೇ ಅವನ ಅನುಮಾನ. ಅವಳು ಯಾರ ಹತ್ತಿರ ಮಾತನಾಡಿದರೂ ಅನುಮಾನ! ಈ ಅನುಮಾನ ರೋಗದಿಂದಾಗಿ ಆ ದಂಪತಿಗಳು ಎಲ್ಲಿ ಪ್ರಯಾಣ ಹೊರಡಬೇಕಾದರೂ ರಾತ್ರಿಯಹೊತ್ತೇ ಹೊರಡುತ್ತಿದ್ದರು. ಹಗಲುಹೊತ್ತು ಹೊರಟರೆ ಯಾರು ನೋಡುವರೋ ಏನು ಮಾತನಾಡುವರೋ ಎಂಬ ಅನುಮಾನ. ಯಾವ ಊರಿಗೆ ರಾತ್ರಿ ರೈಲು ಇಲ್ಲವೋ ಆ ಊರಿಗೆ ಆ ದಂಪತಿಗಳ ಪ್ರಯಾಣವೇ ಇಲ್ಲ!

ಅನುಮಾನದ ಪ್ರಾಣಿಯೊಬ್ಬನಿಗೆ ಬೇರೆ ಊರಿಗೆ ವರ್ಗವಾಯಿತು. ಮನೆ ಹುಡುಕ ಹೊರಟಾಗ ದೈವವಶದಿಂದ ಅವನಿಗೆ ಒಂದು ಒಳ್ಳೆಯ ಮನೆಯೇ ಸಿಕ್ಕಿತು; ಕಡಿಮೆ ಬಾಡಿಗೆಗೇ ಸಿಕ್ಕಿತು! ಆದರೆ ಅವನ ಹುಟ್ಟುಗುಣವಾದ ಅನುಮಾನ ತನ್ನ ಕೆಲಸ ಮಾಡದೆ ಬಿಡಲಿಲ್ಲ. "ಅಲ್ಲಾ, ಇಂಥ ಒಳ್ಳೇ ಜಾಗದಲ್ಲಿ ಇಷ್ಟು ಅಚ್ಚುಕಟ್ಟಾದ ಮನೆ ಇಷ್ಟು ಕೊಂಚ ಬಾಡಿಗೆಗೆ ಸಿಕ್ಕುವುದೆಂದರೇನು? ಇದು ಇಷ್ಟು ದಿವಸ ಏಕೆ ಖಾಲಿಯಾಗಿತ್ತು? ಇದರಲ್ಲೇನಾದರೂ ದೆವ್ವ ಇರಬಹುದೆ? ಅಥವಾ ಯಾರಾದರೂ ಕೆಟ್ಟ ನಕ್ಷತ್ರದಲ್ಲಿ ಸತ್ತಿರಬಹುದೇ? ಅಥವಾ ಈಗ ಬಾಡಿಗೆಗೆ ಕೊಡುತ್ತಿರುವವನು ಈ ಮನೆಯ ನಿಜವಾದ ಮಾಲೀಕನಲ್ಲವೋ ಏನೋ! ಇವನಿಗೆ ಅಡ್ವಾನ್ಸ್ ಕೊಟ್ಟಮೇಲೆ

ನಿಜವಾದ ಮನೆಯಾತ ಬಂದು ತಗಾದೆ ಮಾಡಿದರೆ ಗತಿಯೇನು? ಇದೇನೋ ಮೋಸವೇ ಇರಬೇಕು" ಎಂಬ ಸಿದ್ಧಾಂತಕ್ಕೆ ಬಂದು ಆ ಮನೆಯನ್ನು ಬಿಟ್ಟುಬಿಟ್ಟನು!

ಒಬ್ಬ ಆಫೀಸರು (Officer) ತುಂಬಾ ಅನುಮಾನದ ಪ್ರಾಣಿಯಾಗಿದ್ದರು. ಅವರಿಗೆ ಎಲ್ಲ ಗುಮಾಸ್ತೆಗಳೂ ಮೋಸಗಾರರಿರಬಹುದೆಂದೇ ಅನುಮಾನ—ಅದೊಂದು ವಿಧವಾದ 'ನಂಬಿಕೆ.' ಈ 'ನಂಬಿಕೆ'ಯೇ ತಾಯಿ ತಂದೆ, ಎಂದು ನಂಬಿದ್ದ ಅವರು ಎಲ್ಲ ಗುಮಾಸ್ತರನ್ನೂ ಅವರ ಎಲ್ಲ ಕೆಲಸಗಳನ್ನೂ ಅನುಮಾನದಿಂದಲೇ ನೋಡುತ್ತಿದ್ದರು. ತನ್ನ ತಂದೆಯ ಶ್ರಾದ್ಧಕ್ಕೆಂದು ರಜಾ ಕೇಳಿದ ಗುಮಾಸ್ತನೊಬ್ಬನನ್ನು ಅವರು "ಹೋದ ವರ್ಷ ನಿಮ್ಮ ತಂದೆಯ ಶ್ರಾದ್ಧಕ್ಕೆ ರಜಾ ಕೇಳಲಿಲ್ಲವಲ್ಲಾ?" ಎಂದರು. "ಹೋದ ವರ್ಷ ಅದು ಭಾನುವಾರ ಬಂತು" ಎಂಬ ಉತ್ತರ ಬಂದರೆ, "ಮೊನ್ನೆ ರಜಾ ತೆಗೆದುಕೊಂಡೆಯಲ್ಲಾ, ಅದು ಯಾರ ಶ್ರಾದ್ಧಕ್ಕೆ?" ಎಂದು ಪ್ರಶ್ನೆ. ಈ ಅನುಮಾನದ ಪ್ರಾಣಿಯಿಂದ ರಜಾ ಪಡೆಯಲು ಬೇರೇನೂ ದಾರಿ ತೋರದೆ ಆ ಗುಮಾಸ್ತರು ಅನಿವಾರ್ಯವಾಗಿ ಈ "ಶ್ರಾದ್ಧ" ಮಂತ್ರವನ್ನೇ ಅವಲಂಬಿಸಿದ್ದರು! ಆಗ ಅವನು "ಅದು ನಮ್ಮ ಚಿಕ್ಕ ತಂದೆಯ ಶ್ರಾದ್ಧಕ್ಕೆ" ಎಂದರೆ "ನಿಮ್ಮ ಚಿಕ್ಕಪ್ಪನಿಗೆ ಮಕ್ಕಳಿಲ್ಲವೆ? ನೀವೇಕೆ ಅವನಿಗೆ ಶ್ರಾದ್ಧ ಮಾಡಬೇಕು? ನಿಮ್ಮ ಚಿಕ್ಕ ತಂದೆ ಸತ್ತದ್ದು ಯಾವಾಗ? ಯಾಕೆ ಸತ್ತರು?" ಎಂದೆಲ್ಲ ವಿಚಾರಣೆ ಮಾಡಿ ರಜಾ ಕೊಡುವ ವೇಳೆಗೆ ಆ ಗುಮಾಸ್ತೆ ತನಗೇ ಶ್ರಾದ್ಧವಾದಷ್ಟು ಸಂಕಟಪಟ್ಟುಕೊಳ್ಳುತ್ತಿದ್ದನು.

ಅನುಮಾನದ ಪ್ರಾಣಿ ಬಸ್‌ಸ್ಟ್ಯಾಂಡಿಗೆ (Bus Stand) ಹೋದರೆ ಅವನಿಗೆ ಯಾವ ಬಸ್ಸಿನಲ್ಲಿ ಕುಳಿತುಕೊಳ್ಳುವುದಕ್ಕೂ ಅನುಮಾನ. ಇದು ಯಾವ ಊರಿಗೆ ಹೋಗುತ್ತೆ? ಎಂದು ಎಲ್ಲ ಪ್ರಯಾಣಿಕರನ್ನೂ ಎರಡೆರಡು ಸಲ ಕೇಳಿದರೂ ಅವನಿಗೆ ತೃಪ್ತಿಯಿಲ್ಲ. "ಇದು ಆನೆಕಲ್ಲಿಗೆ ಹೋಗುತ್ತೆಯೆ?" "ದೇವನಹಳ್ಳೀಗಲ್ಲವೇ?" "ಇದು ದೇವನಹಳ್ಳೀ ಬಸ್ಸು ಅಂತ ಯಾರೋ ಅಂದರಲ್ಲಾ!" "ನಿಮಗೆ ಸರಿಯಾಗಿ ಗೊತ್ತೆ, ಇದು ಆನೆಕಲ್ಲು ಬಸ್ಸು ಅಂತ?" "ನೀವು ಯಾವ ಊರಿಗೆ ಹೋಗಬೇಕು?" "ನಿಮ್ಮ ಸ್ಥಳ ಆನೆಕಲ್ಲೆ?" "ಹಾಗಾದರೆ ಅಲ್ಲೇನು ಕೆಲಸ ನಿಮಗೆ?" "ಈಗ ಯಾಕೆ ಹೋಗುತ್ತೀರಿ ಆನೆಕಲ್ಲಿಗೆ?" "ಅಂತು ಇದು ಆನೆಕಲ್ಲು ಬಸ್ಸೇ ತಾನೆ?" ಹೀಗೆ ಅನುಮಾನಿಸಿ ಅನುಮಾನಿಸಿ ಪುನಃ ಪುನಃ ಪ್ರಶ್ನೆ ಕೇಳಿ ಕೇಳಿ ನಿಮಗೂ ಕಂಡಕ್ಟರಿಗೂ ಡ್ರೈವರಿಗೂ ಎಲ್ಲರಿಗೂ ರೇಗಿಹೋಗಿ ಗದರಿಸಿಕೊಂಡಾದ ಮೇಲೆ ಅನುಮಾನದಿಂದಲೇ ಬಸ್ಸು ಹತ್ತಿ "ಹಾಗಾದರೆ ಚಂದಾಪುರಕ್ಕೊಂದು ಟಿಕೆಟ್ ಕೊಡು" ಅಂತಾನೆ ಪ್ರಾಣಿ! "ಇದು ಚಂದಾಪುರಕ್ಕೆ

ಹೋಗೊಲ್ಲ; ಬನ್ನೇರು ಘಟ್ಟದ ಮೇಲೆ ಹೋಗುತ್ತೆ" ಅಂದಾಗ "ಆ! ಅದೇ! ಅದಕ್ಕೇ ನನಗೆ ಅನುಮಾನ" ಎಂದು ಹೇಳುತ್ತಾ ಬಸ್ಸು ಇಳಿಯಲೋ ಬೇಡವೋ ಎಂದು ಅನುಮಾನಿಸುತ್ತಾ "ಹಂಗಾದ್ರೆ ಇದು ಚಂದಾಪುರಕ್ಕೆ ಹೋಗೊಲ್ಲವಾ?" ಎಂದು ಕೇಳುತ್ತಾನೆ, ಅನುಮಾನದ ಪ್ರಾಣಿ!

ಇಂಥಾ ಅನುಮಾನದ ಪ್ರಾಣಿಯೊಬ್ಬನಿಗೆ ಒಂದು ಸಲ ಮದುವೆ ನಿಷ್ಕರ್ಷೆಯಾಯಿತಂತೆ. ಎಲ್ಲ ನೆಂಟರೂ ಕಲೆತರು. ವರಪೂಜೆ ಆಯಿತು. ಮದುವೆಯ ಮುಹೂರ್ತ ಹತ್ತಿರಬಂತು. ಆಗ ಅವನಿಗೆ ಅನುಮಾನ, ಇನ್ನೂ ವರದಕ್ಷಿಣೆ ಹಣ ಬರಲಿಲ್ಲವಲ್ಲಾ ಎಂದು. ಆದರೆ ಆ ಕನ್ಯಾಪಿತೃವೂ ಒಬ್ಬ ಅನುಮಾನದ ಪ್ರಾಣಿ! ವರದಕ್ಷಿಣೆ ಮೊದಲೇ ಕೊಟ್ಟುಬಿಟ್ಟರೆ ಮದುವೆ ನಡೆಯುವುದೋ ಇಲ್ಲವೋ ಎಂದು ಅವನಿಗೆ ಅನುಮಾನ. ಇವರಿಬ್ಬರ ಅನುಮಾನಗಳ ಇಕ್ಕಳಕ್ಕೆ ಸಿಕ್ಕಿದ್ದ ಆ ಪುರೋಹಿತನಿಗೆ ಭಾರಿ ಅನುಮಾನ, "ಈ ಮದುವೆ ನಡೆಯುವುದೋ ಇಲ್ಲವೋ ನನಗೆ ದಕ್ಷಿಣೆ ದಕ್ಕುವುದೋ ಇಲ್ಲವೋ" ಎಂದು. ಈ ಅನುಮಾನದ ಬಲೆಗೆ ಸಿಕ್ಕಿಬಿದ್ದಿದ್ದ ಆ ಮದುವೆ ಹೇಗೆ ಆಯಿತೆಂಬುದೇ ನಿಜವಾಗಿ ದೊಡ್ಡ ಅನುಮಾನದ ವಿಚಾರವೇ ಸರಿ!

ಅಯ್ಯಾ, ಈ ಅನುಮಾನಪ್ರಪಂಚ ಅಗಾಧವಾದದ್ದು. ಇದರ ಮೇರೆಗಳನ್ನರಿತ ಮಹಾಮಹಿಮರು ಯಾರೂ ಇಲ್ಲ. ಅನುಮಾನ ಬಹಳ ವಿಚಿತ್ರ ರೀತಿಯಲ್ಲಿ ಪ್ರಕಟಗೊಳ್ಳುತ್ತದೆ, ಒಂದೊಂದು ಸಲ. ಮೊನ್ನೆ ನಮ್ಮ ಹಳೆಯ ಮೇಷ್ಟರೊಬ್ಬರನ್ನು ನೋಡಲು ಹೋಗಿದ್ದೆ. ಅವರಿಗೆ ಅದೇಕೊ ಏನೋ ಅಂದು ನನ್ನ ಪರಿಚಯದ ವಿಷಯದಲ್ಲಿಯೇ ಅನುಮಾನ ಹುಟ್ಟಿತು. "ನೀನೇ? ನೀನೇಯೆ? ಇದೇನಪ್ಪಾ ಹೀಗೆ ಹೇಳ್ತಿ? ಅಯ್ಯೋ, ಹೋದಸಲ ನೋಡಿದಾಗ ಅಷ್ಟು ಸಣ್ಣಕ್ಕೆ ಇದ್ದೆ? ಅಲ್ಲ. ನೀನು ಅವನಲ್ಲ. ಸುಳ್ಳು ಹೇಳುತ್ತಿದ್ದೀಯೆ," ಎಂದು ಅನುಮಾನದಿಂದ ಬಡಬಡಿಸಿದರು. "ಇಲ್ಲಾ ಸಾರ್, ನಾನೇ ಸಾರ್. ನಾನು ಬೇರೆ ಯಾರೂ ಅಲ್ಲ ಸಾರ್" ಎಂದು ಎಷ್ಟು ಕಳಕಳಿಯಿಂದ ಹೇಳಿದರೂ ಅವರು ತಮ್ಮ ಅನುಮಾನವನ್ನು ಬಿಡಲೇ ಇಲ್ಲ. "ಯಾಕೆ ಸಾರ್, ಹೀಗೆ ಅನುಮಾನಿಸ್ತೀರಿ? ನಾನೇ ಸಾರ್, ನಿಮ್ಮ ಹಳೆಯ ಶಿಷ್ಯ. ನಾಲ್ಕುವರ್ಷವಾಯಿತು ಸಾರ್, ನಿಮ್ಮನ್ನು ನೋಡಿ. ಆಗ ಸಣ್ಣಕ್ಕೆ ಇದ್ದೆ ಸಾರ್. ಈಚೆಗೆ ಕೊಂಚ ದಪ್ಪವಾಗಿದ್ದೇನೆ ಸಾರ್. ಅಷ್ಟೇ ಹೊರತು ನಾನು ಬೇರೆಯವನಲ್ಲ ಸಾರ್" ಎಂದು ಅಂಗಲಾಚಿದೆ. ಆದರೆ ನನ್ನದು ದುರ್ದೈವ, ಆ ಅನುಮಾನಪ್ರಾಣಿಗೆ ನಂಬಿಕೆಯೇ ಹುಟ್ಟಲಿಲ್ಲ. ಅವರು "ಸುಳ್ಳು, ಸುಳ್ಳು, ಎಲ್ಲಾದರೂ ಉಂಟೆ? ನಾಲ್ಕು ವರ್ಷದಲ್ಲಿ ಇಷ್ಟು ದಪ್ಪನಾಗುವುದುಂಟೆ? ನನಗೆ ಅನುಮಾನ, ನೀನು ಯಾರೋ ಏನೋ" ಎಂದು ತಮ್ಮ ಅನುಮಾನವನ್ನೇ ಬಿಗಿಯಾಗಿ ಅಪ್ಪಿ

ಕೊಂಡರು. ನಾನು ಏನೇನು ರುಜುವಾತು ಕೊಟ್ಟರೂ ಪ್ರಯೋಜನವಾಗಲಿಲ್ಲ. "ನಾನು ಅವನನ್ನು ಈ ನಲವತ್ತು ವರ್ಷಗಳಿಂದ ಬಲ್ಲೆ, ಅವನು ಎಂದೂ ಹೀಗೆ ದಪ್ಪನಾಗಿರಲಿಲ್ಲ. ನೀನು ಅವನಾಗುವುದು ಸಾಧ್ಯವಿಲ್ಲ" ಎಂದು ಹೇಳಿ ನನ್ನನ್ನು ಅಟ್ಟಿಬಿಟ್ಟರು. ಅನುಮಾನದ ಅಗಾಧಶಕ್ತಿಯು ಅನುಭವವಾಯಿತು, ನನಗೆ. ಅದು ಮಹಾಶಕ್ತಿ. ವಾಯುಶಕ್ತಿ, ವಿದ್ಯುಚ್ಛಕ್ತಿ, ಅಣುಶಕ್ತಿ ಯಾವುದೂ ಅದಕ್ಕೆ ಸಮನಲ್ಲ. ಅನುಮಾನ ತನ್ನ ಶಕ್ತಿಗೊಳಗಾದ ಮಾನವನ ಬುದ್ಧಿಶಕ್ತಿಯನ್ನೂ ಮಂಕಾಗಿಸಿ ಬಿಡುತ್ತದೆ!

ಕೆ. ವೆಂಕಟರಾಮಪ್ಪ

ಆಕ್ಟೋಬರ ಎರಡು*

೧

ಉದಯಿಸಿತು ಆಕ್ಟೋಬರ ಎರಡು!
ಮೂಡಣತ್ತಣ ಬೆಳಕು ಕಿಟಕಿಯಲಿ ಕಿಂಡಿ ಕೊರಕಲು ಕೊರೆದು
ಬಿಸಿಲ ಕೋಲಿನಗುಂಟ ಒಳನುಗ್ಗಿತು!
ಜನಗಣದ ಮನದ ಮೋಹನ ಮೋಹನನ ಜನನ!
ಮನೆ—ಕಲ್ಲು—ಮರ—ಮತ್ತೆ ಈ ಗಟಾರ್ ಈ ರಸ್ತೆ
ಬೆಳಕನೀಂಟುವುದರಲಿ ಮಗ್ನ ಮಗ್ನ!
ಬಳ್ಳಿಯೆಲೆ—ಹುಲ್ಲು—ಗಿಡೆ—ಹೂವ ಹೂವಿನಲೂನು ಚೈತ್ರಸ್ಫುರಣ.
ಹಸುರ ಬೇಲಿಯ ದಪ್ಪ ಒರಟು ತುಟಿಯಂಚಿನಲು
ತಿಳಿನೀಲ ನಗೆ ತೇಲಿ ತೇಲಿ ಬಂತು.
ನಾಡಗುಡಿ ನಭಕೇರಿ ಝಟಪಟಿಸಿ ಝಲಿಸಿ
ಧರ್ಮಚಕ್ರದ ಹ್ರಸ್ವದೀರ್ಘವನು
ಮಿಡಿದಾಡಿತು.
ರಾಮಕೃಷ್ಣರ ಬೆನ್ನ ಹೆಗಲೇರಿ ಇಳಿದು,
ಬುದ್ಧನೆದೆಗಡರಿ ಏಸುವಿನ ತೊಡೆಯೇರಿ,
ಮಮ್ಮದನ ತೋಳಿನಲಿ ಆಡಿ ನಲಿದಾಡಿ
ಧರ್ಮಧರ್ಮಗಳ ಬಿಗಿದಪ್ಪಿ ಮೊಲೆಯನು ಹೀರಿ
ಯುಗಯುಗದ ಕಡಲಾಳದಲಿ ಇಣಿಕಿ ಈಸಾಡಿ
ರಾಮರಾಜ್ಯದ ಕನಸ ನಕ್ಷೆ ರೂಪಿಸಿ ರಚಿಸಿ
ನಮ್ಮ ತೊಟ್ಟಿಲದೊಳೀ ಬೆಳಕಿನೊಡೆಯ,
ಜನಿಸಿ ಬಂದ!
ಮೂಡಣತ್ತಣ ಬೆಳಕು ಕಿಟಕಿಯಲಿ ಕಿಂಡಿಕೊರಕಲು ಕೊರೆದು
ಬಿಸಿಲ ಕೋಲಿನಗುಂಟ ಒಳನುಗ್ಗಿತು :—
ಉಕ್ಕಿ ಬಂತು!

* (" ಧಾರವಾಡ ಆಕಾಶವಾಣಿಯ ಕೃಪೆಯಿಂದ ")

೨

ಮಕ್ಕಳಿದ್ದರು ಇವಳು ಬಂಜೆ ಭಾರತಿ ಎಂದು
ನೆರೆಯ ಮುತ್ತೈದೆಯರು ನಗುವ ಕಾಲವೂ ಬಂದಿತ್ತು!
ಕಣ್ಣು ನಮಗಿದ್ದರೂ ಸುತ್ತು ಕತ್ತಲೆ ಬೇರೆ—
ದಟ್ಟಡವಿ—ಕ್ರೂರ ಮೃಗ—ದಾರಿಯಿಲ್ಲ.
ಹಸುಳೆಗಳು ನಾವೆಲ್ಲ;
ಆಗ—

ಬೆಳಕಶ್ರೀಯನು ಹೊದೆದು ಚೇತನೆಯನುಟ್ಟು
ಸರಿ ಇರುಳ ಉಡಿಗೆ ಹಗಲಿಳಿದಂತೆ
ಚಿಜ್ಜ್ಯೋತಿ ಕೋಲೂರಿ ನಡೆದು ಬಂತು!
ಕಾನನವ ಕೊರೆದು ಗಿಡಗಂಟೆಗಳ ಸವರಿ ಸರಿಸಿ
ತಗ್ಗನೆತ್ತರಿಸಿ ದಿನ್ನೆಯ ನೆಲಕೆ ಕುಕ್ಕರಿಸಿ
ರಾಜ ಮಾರ್ಗವನಯೋಧ್ಯೆಗೆ ಮುಟ್ಟಿಸಿ
ದೀಪ ಕಂಬಗಳನ್ನು ಅಲ್ಲಲ್ಲಿ ನೆಡಿಸಿ
ಬರುವ ಹಗಲಿನ ಬಿಸಿಲ ಬಿಸಿ ತಾಗದಿರಲೆಂದು
ಇಕ್ಕೆಡೆಗು ಸಾಲುಮರ ಬೆಳಿಸಿ
ನಡೆದಾಡಿ ಸರಿದು ಹೋಯ್ತು!
ಮಲಗಿದಿತಿಹಾಸ ಮೈ ಮುರಿದೆದ್ದು ಆಕಳಿಸಿ
ಲೇಖನಿಯ ಸ್ವರ್ಣದಾತಿಯಲದ್ದಿತು.

೩

ಮತ್ತೆ ಸಂಭವಿಸುತಿಹನಿಂದು ಗಾಂಧಿ.
ಅಂದು—ಹುಟ್ಟಿದ ದಿವಸ
ಬಾನಂತಿಗಿರಲಿಲ್ಲ ತಲೆಗೆ ಎಣ್ಣೆ.
ಹೆಸರನಿಡುವುದಕೆ ಕುಂಕುಮವಿಟ್ಟು ಕರೆದಾಗ
ನೆರೆಯ ಮುತ್ತೈದೆಯರು ಮೂಗು ಮುರಿದರು, ಕೊನೆಗು ಬರಲೆ ಇಲ್ಲ.
ಆದರಿಂದು—
ಎಣ್ಣೆಗೆರಡಾಣೆಯಿವೆ, ಉಡಲುಂಟು-ಉಣ್ಣಲಿದೆ-
ಮೂಗು ಮುರಿದವರಿಂದು ಕರೆಯದಿದ್ದರು ಬಂದು

ಅಪ್ಪಿ ಮುದ್ದಾಡುವರು ಅಕ್ಕರಿಂದೆ.
ಬೇಡದಿದ್ದರು ಅಂಗಿ ಚಡ್ಡಿ ಕಾಣಿಕೆಯಿತ್ತು
ಮುಡಿ ತೀಡಿಕೊಳ್ಳುವರು ಭಕ್ತಿಯಿಂದೆ.
ಅಜ್ಜ—
ಅಜ್ಜ—
ಮುದಿ ಅಜ್ಜ—ಮಗುವಾಗಿ ಮತ್ತೆ ಸಂಭವಿಸುತಿಹೆ,
ಹುಡುಗ ಹರಸುವದಕ್ಕೆ ನಿಂದಿರುವೆನು—
ನಾನು ಮೊಮ್ಮಗ ಹೌದು—ನೀನಜ್ಜ ಅದೂ ಹೌದು
ಕೇಳು ಎಳೆ ನಾಲಗೆಯ ಜೋಗುಳವನು:
ಬರುವ ಅಕ್ಟೋಬರಕೆ ಸ್ವರ್ಗವನ್ನೇ ಹಾಸಿ
ರಾಮರಾಜ್ಯವ ಹೊದಿಸುವಂತಾಗಲಿ
ದಿಶೆಯು ತೊಟ್ಟಿಲ ಕಟ್ಟಿ ಗ್ರಹತಾರೆಗಳು ಸೇರಿ
ಜೋ ಜೋಗುಳವ ಹಾಡುವಂತಾಗಲಿ.

—ಚಂದ್ರಶೇಖರ ಕಂಬಾರ

ಕುಮಾರವ್ಯಾಸನ ಅರ್ಜುನ-ಊರ್ವಶೀ ಪ್ರಸಂಗ*

ಕುಮಾರವ್ಯಾಸ ಭಾರತದ ಮಹತ್ತ್ವನ್ನು ಉಜ್ವಲಾಕ್ಷರಗಳಲ್ಲಿ ಕೆತ್ತಿರುವ ಮಹಾ ಸನ್ನಿವೇಶಗಳಲ್ಲಿ ಈ ಅರ್ಜುನ ಊರ್ವಶೀ ಪ್ರಕರಣವೂ ಒಂದು. ಭೀಷ್ಮ ಸುಂದರವಾಗಿರುವ, ಕವಿಯ ಮಾತಿನಲ್ಲೆ ಹೇಳುವುದಾದರೆ ಸುಮನೋಹರ ಭಯಂಕರವಾಗಿರುವ ಆ ಊರ್ವಶಿಯ ಮಧುಲಿಪ್ತ ಖಡ್ಗಧಾರಾ ಸೌಂದರ್ಯವಾಗಲಿ, ತಿರಸ್ಕೃತ ಪ್ರಣಯವಾಗಲಿ ; ಅಂತಹ ಸುಮನೋಹರ ಅಪ್ಸರಾಪ್ರಣಯಾಗ್ನಿಯಲ್ಲೂ ಮೈಸುಟ್ಟುಕೊಳ್ಳದೆ ದಾಟಿಕೊಂಡು ಹೊರಬರುವ ಶಿವಶಿವಾ ಕೃಪಾಸ್ತ್ರಗಳನ್ನು ಬೆನ್ನೊಳಗೆ ಹೊತ್ತ ಧನಂಜಯನಾಗಲಿ ಕನ್ನಡ ಸಾಹಿತ್ಯದಲ್ಲಿ ಅನನ್ಯ ಚಿರಂಜೀವಿಗಳಾಗಿ ಉಳಿಯುತ್ತಾರೆ, ಕುಮಾರವ್ಯಾಸನ ಪ್ರತಿಭೆಯ ಧವಳದೀಪ್ತ ಸ್ತೂಪಗಳಾಗಿ ನಿಲ್ಲುತ್ತಾರೆ. ವಿಶೇಷವೇನೆಂದರೆ ಮೂಲ ವ್ಯಾಸಭಾರತದಲ್ಲಿ ಈ ಪ್ರಸಂಗವೆ ಇಲ್ಲ; ಪಂಪನಲ್ಲಿ ಅತ್ಯಂತ ಅಸ್ಪಷ್ಟವಾಗಿ, ಸೃಷ್ಟಿಪ್ರಾರಂಭದ ಅಸ್ಪಷ್ಟತೆಯಿಂದೊಡಗೂಡಿರುವ ಈ ಪ್ರಸಂಗ ಇಲ್ಲಿ ಮಹಾಶಕ್ತಿ ಕೇಂದ್ರವಾಗಿದೆ.

ಈ ಪ್ರಸಂಗದಲ್ಲಿ ಒಡಮೂಡಿರುವ ಭಿನ್ನಭಿನ್ನ ಅಂಶಗಳನ್ನು ಗಮನಿಸಬೇಕು : ಅಲ್ಲಿ ಕವಿ ತೋರಿಸಿರುವ ಮಾನವ ಸ್ವಭಾವದ ಅಸಾಧಾರಣ ಪ್ರಜ್ಞೆ ; ಪರಿತ್ಯಕ್ತ ಪ್ರಣಯ, ಅದರಲ್ಲೂ ಸ್ತ್ರೀ ಪ್ರಣಯ—ಭುವನಪ್ರಾರ್ಥಿತಳಾದ ಊರ್ವಶಿಯಂಥವಳ ಪ್ರಣಯ—ಏನೆಂಥ ಭಯಂಕರ ಆದರೂ ಸುಮನೋಹರ ಪಾವಕವಾಗಬಲ್ಲದೆಂಬ ಅರಿವು ; ಇಂಥೆಲ್ಲ ಅಗ್ನಿ ಪರೀಕ್ಷೆಯನ್ನು ಗೆದ್ದು ಬರಬೇಕಾದವನು ಅರ್ಜುನನೆ ಆದರೂ ಅವನಿಗೆ ಎಂಥೆಲ್ಲ ಪೂರ್ವಸಿದ್ಧಿ, ಪೂರ್ವಸಿದ್ಧತೆಗಳು, ವರಗಳು ಅಗ್ನಿಸ್ತಂಭ ಮಂತ್ರಗಳಾಗಿ ನೆರವಾಗಬೇಕಾದೀತು ಎನ್ನುವ ದಿವ್ಯವಿವೇಕ, ಈ ಎಲ್ಲವೂ ಅವನ ಮಹಾಕವಿತ್ವದ ಧ್ವನಿಪ್ರತಿಮೆಗಳಾಗಿವೆ. ಇಂದ್ರನಂದನನ ಈ ಇಂದ್ರಿಯ-ದಿಗ್ವಿಜಯ, ಅದೂ ಭೋಗ ಭೂಮಿಯಲ್ಲೆ ಪಡೆದ ಜಯ, ಮಹಾಭಾರತದ

* ಈ ಪ್ರಕರಣದ ವಿಷಯವಾಗಿ ಮೊದಲಾಗಲೇ ಶ್ರೀ ತೀ. ನಂ. ಶ್ರೀ. ಅವರು ಸುಂದರ ಸಂಕ್ಷಿಪ್ತವಾಗಿ ನಿರೂಪಿಸಿದ್ದಾರೆ. ನನಗೆ ಆ ಪ್ರಸಂಗದ ವಿಷಯವಾಗಿ ಮತ್ತೂ ಕುತೂಹಲ ತಂದದ್ದು ಶ್ರೀ ಡಿ. ಎಲ್. ನರಸಿಂಹಾಚಾರ್ಯರ ಒಂದು ಮಾತು : "ನೋಡಯ್ಯ, ಕುಮಾರವ್ಯಾಸನ ಆ ಊರ್ವಶೀ ಪ್ರಸಂಗ ಇದೆಯಲ್ಲ ಅದು White-hot spot ಕಣಯ್ಯ ಅವನ ಭಾರತದಲ್ಲಿ. ಅಹ ! ಹಾಗೆ ಬರೀಬೇಕಯ್ಯ ಬರ್ದ್ರೆ" ಎಂದು ಒಂದು ಬಾರಿ ಸಂಭಾಷಣೆಯಲ್ಲಿ ಹೇಳಿದ ಮಾತು. ಮತ್ತೆ ಆಮೇಲೆ 'White-hot' ಎನ್ನುವ ದೃಷ್ಟಿಯಿಂದಲೇ ಓದಿದೆ. ಈಗೀಗ ಅನಿಸಿದೆ, ಎಷ್ಟು ಸತ್ಯ ಆ ಮಾತು ಎಂದು. ಆ ಅನಿಸಿಕೆಯ ಒಡಮೂಡಿಕೆ ಈ ಲೇಖನ, ಅಷ್ಟೆ.

ಅವನ ಉಳಿದೆಲ್ಲ ವಿಜಯಗಳಿಗಿಂತಲೂ ನೂರುಮಡಿ ಹಿರಿಯದಾದುದು. ಸಹಜ ವಿರಾಗಿಯಾದವನು, ಇಲ್ಲವೆ ಪ್ರತಿಜ್ಞಾ ಪರಿಪಾಲಕನಾದ ಭೀಷ್ಮನಂಥವನು, ಅಥವಾ ಸತ್ತ್ವಮೂರ್ತಿಯಾದ ಧರ್ಮಜನಂತಹವನು ಇಂತಹ ವಿಷಯದಲ್ಲಿ ಜಯಶಾಲಿಯಾದನೆಂದಿದ್ದರೆ ಆಶ್ಚರ್ಯವೇ ಆಗುತ್ತಿರಲಿಲ್ಲ. ಕೃಷ್ಣ ಶಿಷ್ಯನಾದ ಇವನಿಗೆ ಅವನ ಬಹುಪ್ರಿಯತ್ವವೂ ಕೊಂಚಮಟ್ಟಿಗೆ ಬಳುವಳಿಯಾಗಿ ಬಂದಿದ್ದಂತೆ ತೋರುತ್ತದೆ. ಸಂನ್ಯಾಸಿ ವೇಷಧಾರಿಯಾಗಿ ಪ್ರಾಯಶ್ಚಿತ್ತ ರೂಪದ ತೀರ್ಥಯಾತ್ರೆಯನ್ನು ಕೈಕೊಂಡಾಗಲೆ ಎಷ್ಟೋ ಜನರನ್ನು ಮದುವೆಯಾಗುವ, ಶ್ರೀಕೃಷ್ಣಸಹೋದರಿ ಸುಭದ್ರೆಯನ್ನೂ ಅಪಹರಿಸಿಕೊಂಡೆ ಹೋಗುವ ಈ ರಮಣ, ಭೋಗ ಭೂಮಿಯಲ್ಲಿ ಅದೂ ಅಪ್ರಾರ್ಥಿತಳಾಗಿ ಬಂದ ಅತ್ಯಭಿಮಾನಿಯಾದ ಅನ್ಯ ದುರ್ಲಭಳಾದ ದೇವ ರಮಣಿ ಊರ್ವಶಿಯನ್ನೂ ಅವಳ ಅದಮ್ಯ ಸನ್‌ಮೋಹಕತೆಯನ್ನೂ, ಭಯಂಕರ ಕೋಪವನ್ನೂ ನಿವಾರಿಸುವುದೆಂದರೆ ಹೇಗೆ ತಾನೆ ಸಾಧ್ಯವಾಯಿತು ? ಕುಮಾರವ್ಯಾಸ ಈ ಸನ್ನಿವೇಶಕ್ಕೆ ದಿವ್ಯವಾದ ಹೈಮಾಚಲವೇದಿಕೆಯನ್ನೆ ರಚಿಸಿದ್ದಾನೆ. ಸೂಚನೆಯ ಪದ್ಯಾರ್ಧದಲ್ಲಿ ಹೇಳುವುದನ್ನು ನೋಡಿ :

"ಭಯ ಭರಿತ ಭಕ್ತಿಯಲಿ ಕಾಮಾ
ರಿಯನು ಗೆಲಿದರ್ಜುನನು ಹರವೈ
ರಿಯನು ಗೆಲಿದನು ಧೈರ್ಯದಿಂದೂರ್ವಶಿಯ ಶಾಪದಲಿ."

ಹಿಂದಿನ ಸಂಧಿಗಳಲ್ಲೆ ಈ ವೇದಿಕೆಯನ್ನು ನಿರ್ಮಿಸುವ ಕೆಲಸವನ್ನೂ ಮಾಡಿದ್ದಾನೆ.

ದೇವಲೋಕಕ್ಕೆ ಅರ್ಜುನ ಹೋಗಿದ್ದುದು ಕೇವಲ ವಿಹಾರಾರ್ಥವಾಗಿಯಾಗಲಿ, ಅಥವಾ ಅಲ್ಲಿಯ ಭೋಗಕ್ಕೆ ವಿಸ್ಮಿತನಾಗಿಯಾಗಲಿ ಆಗಿದ್ದಿದ್ದರೆ ಪ್ರಸಂಗವೆ ಬೇರೆ ಯಾಗುತ್ತಿತ್ತು. ಕಾಮಾರಿ ಪಾರ್ವತೀಪರಮೇಶ್ವರನೊಡನೆ ಹೋರಾಡಿ ಭಯಭರಿತ ಭಕ್ತಿಯಲ್ಲಿ ಗೆದ್ದು ಪಾಶುಪತ ಅಂಜನಾ ಇತ್ಯಾದಿ ಮಹಾಸ್ತ್ರಗಳನ್ನು ಗಳಿಸಿಕೊಂಡು ಅವುಗಳನ್ನು ತನ್ನ ಬೆನ್ನಲ್ಲಿ ಹೊತ್ತು, ಕೃಪಾಗ್ನಿ ಕವಚವನ್ನು ಧರಿಸಿ ಹೊರಟ ಧನಂಜಯನನ್ನು ಅಪ್ಸರಾಮೋಹಾಗ್ನಿ ಹೇಗೆ ತಾನೆ ತಾಕೀತು ? ಸೆಕ್ಕಿ ಸುಡಲು ಬಂದ ಅದರ ರಕ್ತಾಗ್ನಿ ಜಿಹ್ವೆಯ ನಿಶಿತಧಾರೆಯೆ ಮೊಂಡಾಗಿ ಹಲ್ಲುಡಿದು ಹೋದಂತೆ ತೋರುತ್ತದೆ. ಇಲ್ಲಿ, ಅಲ್ಲಿಯ ತನಕ ತನ್ನ ಜೀವನದಲ್ಲೆಂದೂ ತಿರಸ್ಕಾರವನ್ನೆ ಕಂಡಿ ರದ, ಕೇವಲ ಪ್ರಾರ್ಥನೆಗಳಿಂದಲೆ ಉಬ್ಬಿ ಕೊಬ್ಬಿಹೋಗಿದ್ದ, ದೇವೇಂದ್ರನಿಂದ ಮನುಜೇಂದ್ರನ ತನಕ ಎಲ್ಲರನ್ನು ತೀರದ ಬಯಕೆಯಿಂದಲೆ, ಕೈಗೂಡದ ಎಟುಕದ ಮೋಹದಿಂದಲೆ ಕಟ್ಟಿ ಆಳುತ್ತಿದ್ದ, ಎಂದೂ ಬತ್ತದ ಉಬ್ಬು ನೆರೆಯ ಆ ಚೆಲುವೆ ಆ ಊರ್ವಶಿಗೆ ಅರ್ಜುನನ ತಿರಸ್ಕಾರ ಮೊಟ್ಟಮೊದಲ, ಬಹುಶಃ ಕಡೆಯ, ಅಶನ್ಯಾ

ಘಾತವಾಗಿದ್ದಿರಬೇಕು. ಸುಕ್ಕುಗಾಣದ ಅವಳ ರೂಪ ಕಾಂತಿಗರ್ವಕ್ಕೆ ಸುಕ್ಕುತಂದಿತೇನೊ ಅದು.

ಕುಮಾರವ್ಯಾಸ ಅದಕ್ಕೋಸ್ಕರವೇ ಈ ಮಹಾ ಪ್ರಸಂಗಕ್ಕೆ ಮತ್ತೊಂದು ದಿವ್ಯತರ ಪ್ರಸಂಗವನ್ನು ತರಬೇಕಾಯಿತು. ಪ್ರಾತಿಭಸೃಷ್ಟಿಯ ದೃಷ್ಟಿಯಿಂದಲೂ ಆ ಹಿಂದಿನ ಪ್ರಸಂಗ ಈ ಪ್ರಸಂಗಕ್ಕೆ ಹೊಯ್‌ಕಯ್ಯಾಗಿಯೆ ಇದೆ. ಒಂದರಲ್ಲಿ ವೀರಭಕ್ತಿಯ ಗೆಲವು, ಮತ್ತೊಂದರಲ್ಲಿ ವೀರ ವಿರಕ್ತಿಯ ದಿಗ್ವಿಜಯ. ಒಂದರ ಗೆಲವು ಸುಸ್ಪಷ್ಟ ವರಪರಂಪರೆಯಾಗಿ ವ್ಯೈದೋರುತ್ತದೆ; ಮತ್ತೊಂದೆಡೆ ಶಾಪವಾಗಿ ಅದು ತನ್ನ ಅಗ್ನಿಪರೀಕ್ಷಕ ಮುದ್ರೆಯನ್ನೊತ್ತಿ ಅವನ ವಿಜಯವನ್ನು ಸಾರಿಹೋಗುತ್ತದೆ.

ಇಂದ್ರಕೀಲದಲ್ಲಿ ಅರ್ಜುನ ಗೌರೀವರನ ಕೃಪಾದರ್ಶನ ಪಡೆದನಂತರ ತಾನು ಮುಂದೇನುಮಾಡಬೇಕೆಂದು ಆ ಕೃಪಾಳುವಿನ ದಿಗ್ದರ್ಶನವನ್ನೆ ಪಡೆಯುತ್ತಾನೆ.

> ಸರಳ ಸಾಂಗೋಪಾಂಗವನು ನಿನಗರುಹಿದೆನು, **ನೀನಿನ್ನು ಶಕ್ರನ**
> **ಪುರಕೆ ನಡೆ,** ನಿನ್ನುತ್ತರೋತ್ತರ ಕಾರ್ಯಗತಿಗಳಿಗೆ
> ಹರಿ ಸಹಾಯನು, ನಮ್ಮ ಸತ್ವದ ಪರಮರೂಪಾತನು ಕಣಾ ನೀ
> ನರಿದಿರೆಂದು ಮಹೇಶ ಬೀಳ್ಕೊಟ್ಟನು ಧನಂಜಯನ—ಇ. ೬. ೧೦೮. ೧೭೯

ವಿಶ್ವೇಶ್ವರನಿಗೆ ತನ್ನ ಆಜ್ಞಾಪನೆಯ ಉದ್ದೇಶ ತಿಳಿದಿಲ್ಲದೆ ಇರುವುದು ಸುಳ್ಳು. ತಾನೆ ಹೋಗೆಂದು ಹೇಳಿದ ಮೇಲೆ ಯಾವ ಅಪಾಯವನ್ನು ತಾನೆ ಬರಗೊಡುತ್ತಾನೆ? ಜತೆಗೆ ಬೇರೆ, ತನ್ನ ಸತ್ತ್ವದ ಪರಮರೂಪಾದ ಹರಿ ಅವನ ಎಲ್ಲಾ ಉತ್ತರೋತ್ತರ ಕಾರ್ಯಕ್ಕೂ ಸಹಾಯನಾಗಿದ್ದಾನೆ. ಹೀಗೆಂದು ಹೇಳಿ ಮರೆಯಾದ ಶಿವಶಿವೆಯರನ್ನು ನೆನೆದು ಹಂಬಲಿಸುತ್ತಾನೆ ಅರ್ಜುನ.

> **ಮರುಳ ದೇವಾರ್ಚನೆಯೊ, ಕನಸಿನ ಸಿರಿಯೋ, ಶಿಶುವಿನ ಕೈಯ ರತ್ನವೋ**
> **ಹರಿಯ ಹೂಮಾಲೆಯೊ ಮದೀಯ ವಿವೇಕ ವಿಭ್ರಮವೊ**
> **ಹರನನೀ ಚರ್ಮಾಕ್ಷಿಯಲಿ ಗೋಚರಿಸೆ ಬೇಡಿದುದಂಬು ಮರ್ತ್ಯದೊ**
> **ಳಿರವು ಮಝು ಭಾಪೆನ್ನ ಪುಣ್ಯವೆನುತ್ತ ಬಿಸುಸುಯ್ದು.**

ದೇವರ ದೇವನಾದವನು, ಬೆಳಕಿಗೆ ಬೆಳಕೆರೆಯುವ ಪರಂಜ್ಯೋತಿ ಸ್ವರೂಪನು ಬಂದು ತನ್ನ ಚರ್ಮಾಕ್ಷಿಗೆ ಕಾಣಿಸಿಕೊಂಡರೆ ತಾ ಬೇಡಿದುದಾದರೂ ಏನು, ಬಾಣ! ಅಯ್ಯೋ ಮರ್ತ್ಯಬುದ್ಧಿಯೆ, ಎಂದು ಪರಿತಪಿಸುತ್ತಾನೆ. ಯಾವುದು ಪಾರ್ಥಿವದೃಷ್ಟಿಯಿಂದ ಅಸಾಧಾರಣವಾದುದೊ ಅದೂ ಅವನಿಗೆ ತುಚ್ಛವಾಯಿತು; ಮೋಕ್ಷದಾಯಿಯ ಮುಂದೆ ಹುಲು ಬಾಣವನ್ನು ಬೇಡುವಂತಾಯಿತಲ್ಲಾ ಎಂದು ಬೇಸರವಾಯಿತು. ಇಂಥ ಮಹಾದರ್ಶನ ಪರಿಪುಷ್ಟನಾದವನು ದೇವಲೋಕಕ್ಕೆ ಹೋದಾಗ

ದಾರಿತಪ್ಪುವುದು ಹೇಗೆ? ಬಿಡುಗಣ್ಣರಾಗಿದ್ದೂ ಆ ದೇವತೆಗಳು ದೇವಲೋಕದ ಜಾರುದಾರಿಗಳಲ್ಲಿ ಜಾರಿರುವುದುಂಟು. ಆದರೆ ಈ ನಿಮೇಷ ಹೇಗೆ ಅಸ್ಖಲಿತಚಿತ್ತನಾಗಿ ಬರುತ್ತಾನೆ ಎಂಬುದಕ್ಕೆ ಇದೂ ಸಾಕ್ಷಿ.

ಇಂತಹವನು ತಪಸ್ಸಿಗೆ ಬರುವ ಮುನ್ನ ಅಣ್ಣ ಧರ್ಮಜ, ಸತಿ ದ್ರೌಪದಿಯರಿಂದ ದೊರೆತ ಪ್ರೀತಿಯ ಹಾರೈಕೆಯ ರಕ್ಷೆಯೆಂತಹುದು ನೋಡಿ :

" ಮುಗ್ಗದಿರು ಮಾಯೆಯಲಿ ಮದದಲಿ ನೆಗ್ಗದಿರು. . . ."
" ಸೋಲದಿರು ಸುರಸತಿಯರಿಗೆ ಸಮ್ಮೇಳವಾಗದಿರವರೊಡನೆ ಕೈ
ಮೇಳವಿಸುವುದು ಕಾಮವೈರಿಯ ಚರಣಕಮಲದಲಿ."

೩. ೪. ೨೨—೨೧. ೧೬೬

" ನೆನೆಯದಿರು ತನುಸುಖವ, ಮನದಲಿ ನೆನೆ ವಿರೋಧಿಯ ಸಿರಿಯನೆನ್ನಯ
ಘನತರದ ಪರಿಭವವ, ನೆನೆ ನಿಮ್ಮಗ್ರಜರ ನುಡಿಯ ;
ಮುನಿವರನ ಮಂತ್ರೋಪದೇಶವ ನೆನೆವುದಭವನ ಚರಣಕಮಲವ
ನೆನುತ ದುರುಪದಿಯೆರಗಿದಳು ಪಾರ್ಥನ ಪದಾಬ್ಜದಲಿ " ೩. ೪. ೩೦. ೧೬೭.

ಅಣ್ಣ, ಸತಿಯರು ಎಚ್ಚರಿಸಿದ್ದಂತೆಯೆ ನಡೆದುಕೊಂಡುಬರಲು ಅರ್ಜುನ ಆಶಿಸಿದ್ದ. ಶಿವನೊಡನೆ ಕೈಮೇಳವೂ ಅಣ್ಣ ಹೇಳಿದಂತೆಯೆ ಆಯಿತು. ಆದರೆ ಯಾವ ದೇವಾಂಗನೆಯೂ ಬಂದು ಬಟ್ಟೆದಪ್ಪಿಸಲು ಯತ್ನಿಸಲಿಲ್ಲ. ಸಾಮಾನ್ಯವಾಗಿ ದೇವಾಪ್ಸರೆಯರು ತಪಸ್ಸನ್ನು ಸಿದ್ಧಿಪೂರ್ವದಲ್ಲೆ ಕೆಡಿಸಲು ಬರುವುದುಂಟು. ಹಾಗಾಗಬೇಕಿದ್ದುದು ಇಲ್ಲಿ ಅರ್ಜುನನ ತಪಸ್ಸಿನಲ್ಲಿ ಏಕೊ ಏನೊ ಆಗಲಿಲ್ಲ. ಅದು ಅದೃಷ್ಟವೆ ಸರಿ. ಆದರೆ ಮತ್ತೊಂದು ವಿಧದ ಪರೀಕ್ಷೆ ತಪೋನಂತರದಲ್ಲಿ ಬರುತ್ತದೆ. ಅದು ಸಿದ್ಧಿವಿಘ್ನವಾಗಿ ಬಂತೊ, ಸಿದ್ಧಿಪರೀಕ್ಷೆಗೆ ಬಂತೊ ಬೇರೆ ಹೇಳಬೇಕಾಗಿಲ್ಲ.

ಶಿವವಿಯೋಗದಿಂದ ಹಾಗೂ ತನ್ನ ಪಾರ್ಥಿವ ಕ್ಷುದ್ರೇಚ್ಛೆ ಮಾಡಿದ ಅಲ್ಪ ಪ್ರಾರ್ಥನೆಯಿಂದ ನೊಂದು ಪರಿತಪಿಸುತ್ತಿದ್ದ ಅರ್ಜುನನನ್ನು ಅಭಿನಂದಿಸುವುದಕ್ಕಾಗಿ ಇಳಿದುಬರುತ್ತಾನೆ ದೇವೇಂದ್ರ. ಅವನ ಭಕ್ತಿಯನ್ನು ಹೊಗಳಿ ತಮ್ಮ ದೇವಲೋಕಕ್ಕೆ ಬಂದು ತಪಸ್ಸಿನಿಂದಾದ ಗಾಸಿಯನ್ನು ನೀಗಿಕೊಳ್ಳೆಂದು ಅವನಿಗೆ ಕರೆ ನೀಡುತ್ತಾನೆ.

" ಕೃತತಪಸ್ಸಿಂ ಭಿನ್ನಖೇದಕ್ಷತ ಶರೀರ ವ್ಯಥೆಯನಮರಾ
ವತಿಯೊಳಗೆ ಕಳೆ, ರಥ ಸಹಿತ ಕಳುಹುವೆನು ಮಾತಲಿಯ.
ಕ್ರತುಶತದ ಕೈಗಾಣಿಕೆಯ ದೀಕ್ಷಿತರ ಸಿರಿಯಂತರವ ಮನವಾ
ರತೆಯದೆಂತುಟೊ ಕಾಣಬೇಹುದು ಪಾರ್ಥ ನೀನೆಂದ." ೩. ೭. ೯. ೧೮೦.

ಪಾರ್ಥನಿಗೆ ತನ್ನ ದೇವಪಿತನ ಮಾತಿನ ಹೂರಣ ತಿಳಿಯಿತೊ ಇಲ್ಲವೊ. ತನಗೆ ಸಹಜವಾದ, ಮೇಲಾಗಿ ದಿವ್ಯಕೃಪಾಭರಿತನಾದ ಮಹಿಮನಿಗೆ ಸಹಜವಾದ, ವಿನಯದಿಂದ ಹೀಗೆ ಹೇಳುತ್ತಾನೆ:

ಹೈ ಹಸಾದವು ನೂರು ಯಜ್ಞದ ಮೇಹುನಾಡನು ಮೆಟ್ಟಲೆವಿಸ್ಮಾ
ಹೂಹೆಗಳಿಗಳವಡುವದೊಲ್ಲಿವೆ ನಿಮ್ಮ ಕರುಣದಲಿ
ಐಹಿಕದಲಾಮುಷ್ಮಿಕದ ಸಂಸ್ನಾಹ ಸಂಭವಿಸುವುದೆ ನಿಷ್ಪ್ರ
ತ್ಯೂಹವೆಂದೆರಗಿದನು ಫಲುಗುಣನಿಂದ್ರನಂಘ್ರಿಯಲಿ—೩. ೭. ೧೦. ೧೮೦.

ಜೀವಂತವಾಗಿಯೆ ಸ್ವರ್ಗಕ್ಕೆ ಹೋಗುವುದು ಅಪೂರ್ವಸಂಗತಿಯೇನಲ್ಲ. ತಂದೆ ದೇವೇಂದ್ರನ ಕರುಣೆಯಿಂದ ಅರ್ಜುನನಿಗೆ ಐಹಿಕದಲ್ಲೆ ಆಮುಷ್ಮಿಕದ ಸನ್ನಾಹದ ಸಂಭವವಾಗುತ್ತಿದೆ, ನಿಷ್ಪ್ರತ್ಯೂಹವಾಗಿ ಆಗುತ್ತಿದೆ. ಆದರೆ ಹಾಗಾಗುವುದರಿಂದ, ಅಂದರೆ ಭೂಮಿಯಲ್ಲಿನ್ನೂ ಜೀವಂತನಾಗಿದ್ದು ದೇವಲೋಕಕ್ಕೆ ಸದೇಹಿಯಾಗಿ ಹೋಗಿ ಬರಲು ಹೊರಟಾಗ ಜೀವಿಗೆ ಒಮ್ಮೊಮ್ಮೆ ಕೈಸುಡುವುದೂ ಉಂಟು. ಅದಕ್ಕೆ ಊರ್ವಶೀ ಶಾಪಗ್ರಸ್ತನಾದ ಅರ್ಜುನನೆ ಸಾಕ್ಷಿ. ಅದನ್ನು ಮುಂದೆ ನೋಡೋಣ. ಈಗ ದೇವೇಂದ್ರ ಸೂತ ಇಳಿದುಬರುತ್ತಾನೆ ಅರ್ಜುನನನ್ನು ಕರೆದೊಯ್ಯಲು. ಅವನ ದೃಷ್ಟಿಯಲ್ಲಿ ಅರ್ಜುನ ಮಹಿಮನಾದರೂ ಅಮರಪುರಿಯ ವೈಭವವೆ ಅವನಿಗೆ ದೊಡ್ಡದೆಂಬಂತೆ ತೋರುತ್ತದೆ. ಅದಕ್ಕಾಗಿಯೆ ಏನೊ, "ಎಂಥ ಪುಣ್ಯಾವಯ್ಯ ನಿನ್ನದು, ಅಂಥ ಸ್ವರ್ಗಕ್ಕೆ ನೀನು ಬರೋಹಾಗಾದಲ್ಲ" ಎಂಬ ಧ್ವನಿಬರುವಂತೆ ಮಾತನಾಡುತ್ತಾನೆ. ದೇವೇಂದ್ರನಾದರೊ ತನ್ನ ನಗರದ ವೈಭವವನ್ನು ಅರ್ಜುನನ ಮನೋರಂಜನೆಗೆ ಮೀಸಲಾಗಿ ನೀಡುತ್ತಾನೆ,—ಅವನು ಶಿವಕಟಾಕ್ಷಸ್ನಾತನೆಂದು, ಹಾಗೂ ತನ್ನ ವರಪುತ್ರನೆಂದು. ಸಹಜವಾಗಿಯೆ ಸೂತನ ದೃಷ್ಟಿ ಸ್ವಲ್ಪ ಭಿನ್ನ:

"ಏಳು ಫಲುಗುಣ ಹರಿ ವರೂಥದ ಮೇಲೆ ಬಿಜಯಂಗೈವ ಬಹಳ ಫ
ಲಾಳಿಯಿದೆಲಾ ನಿನ್ನ ಪುಣ್ಯದ್ರುಮದ ಬೇರೊಡೆದು
ಸಾಲಕುರಿದರಿಹಿಗಳ ಕರ್ಮದ ಕೂಲಿಗರ ಜಡ ಜಂಝು ಪೂಗರ
ಜಾಲ ಸಿರಿಯನಿಮಿಷರ ಪುರಿ ವಶವಾಯ್ತು ನಿನಗೆಂದ!"

ದೇವೇಂದ್ರ ಸಾರಥಿಗೆ ಈ ಅರ್ಜುನ ತನ್ನ ಸ್ವಾಮಿಯ ರಥವೇರುವಂತಹ ಪುಣ್ಯಾ ಪಡೆದನಲ್ಲಾ, ಎಂದು ಆಶ್ಚರ್ಯ. ಅವನ ದೃಷ್ಟಿಯಲ್ಲಿ ಮರ್ತ್ಯರಿಗೆ ದೇವಲೋಕದರ್ಶನ ದುರ್ಲಭ. ಅಂತಿರುವಾಗ ತನ್ನ ಸಾರಥ್ಯ ಪಡೆದು ದೇವೇಂದ್ರ ವರೂಥವನ್ನಡರುವು

ದಂತೂ ಅತ್ಯಪೂರ್ವವೆ. **'ಸಾಲಕುರಿದರಿಹಿಗಳು,' 'ಕರ್ಮದ ಕೂಲಿಗರು'** ಎಂದು ನಮ್ಮ ರಾಜರಾಜರನ್ನು ರಾಜಸೂಯಾಧ್ವರ್ಯುಗಳನ್ನು ಸಂಬೋಧಿಸುತ್ತಾನೆ. ಅಂದಮೇಲೆ ಸಾಧಾರಣ ಮರ್ತ್ಯರು ಅವನಿಗೆ ಅಂಥ ಗಮನಾರ್ಹರೇನೂ ಅಲ್ಲ. ಹೀಗೆ ಹೇಳಿದ ಅವನಿಗೆ ಅರ್ಜುನ ಕೊಡುವ ಉತ್ತರ ನೋಡಿ :

> "ಬಲ್ಲರಾರದನಶ್ವಮೇಧದ ಮಲ್ಲರನು ಕೃತರಾಜಸೂಯರು
> ಬಲ್ಲರೇ ಕಡೆಬೀಡ ಕೋಟೆಯ ಗುಡಿಯ ಬೊಡ್ಡಿಯರ.
> ಎಲ್ಲಿಯಮರಾವತಿ ನರಾಧಮರೆಲ್ಲಿ **ನಾವೀಶ್ವರನ ಕರುಣದ
> ಭುಲ್ಲವಣೆಯಲಿ ಭಾಗ್ಯನೆಂದನು ನಗುತ ಕಲಿಪಾರ್ಥ."**

ಅವನ ನಗೆ ಅರ್ಥಪೂರ್ಣವಾಗಿಯೆ ಇದೆ. ಕೃತರಾಜಸೂಯರೂ, ಅಶ್ವಮೇಧದ ಮಲ್ಲರೂ ಆ ದೇವಲೋಕದ ಕೋಟೆಯ ಕಡೆಬೀಡ ಗುಡಿಯ ಬೊಡ್ಡಿಯರನ್ನೂ ಕಾಣರಂತೆ. ಬಹುಶಃ, ಮಾತಲಿಯ ಧೋರಣೆಗೆ ಇವನ ಮಾತು ಅರ್ಥವ್ಯಂಗ್ಯವಾಗಿರ ಬಹುದು. ಆದರೂ ಹೀಗೆಂದವನೂ ಕೂಡ ದೇವಲೋಕದ ಮಹಾಭೋಗ ರಮಣಿ ಯಾದ ಆ ಊರ್ವಶಿಯನ್ನು ಹೇಗೆ ತಲೆಯೆತ್ತಿಯೂ ನೋಡದೆ ನಿವಾರಿಸುತ್ತಾನೆ? ಅವನೆ ಹೇಳುತ್ತಾನೆ: "ನಾವೀಶ್ವರನ ಕರುಣದ ಭುಲ್ಲವಣೆಯಲಿ ಭಾಗ್ಯ" ಎಂದು.

ಈಗ ಇನ್ನೇನು ದೇವೇಂದ್ರರಥವೇರಿ ಸ್ವರ್ಗಾಭಿಮುಖಿಯಾಗಿ ಅರ್ಜುನ ಹೊರಡಬೇಕು. ಅವನ ಹೃದಯಸ್ಪರ್ಶಿಯಾದ ಪ್ರಾರ್ಥನೆಯನ್ನು ಕೇಳಿ :

> "ಎನುತ ತೇರಿನೊಳೊಂದು ಕಾಲಿಟ್ಟನು ಧನಂಜಯ ಇಂದ್ರಕೀಲದ
> ವನಕೆ ಕೈಮುಗಿದೆರಗಿದನು ಮಧುರ ವಚನದಲಿ :
> ಮುನಿಜನವೆ! ಪರ್ವತವೆ! ಪಂಕಜ ವನವೆ! ತರು ಲತೆ ಗುಲ್ಮ ಖಗ ಮೃಗ
> ವನಚರವೆ! **ನಾ ಹೋಗಿ ಬಹೆನೇ ನಿಮ್ಮನುಜ್ಞೆಯಲಿ"**

ತನ್ನ ತಪಸ್ಸಿಗೆ ಭಂಗ ತಾರದೆ ಶಿವಸಾಕ್ಷಾತ್ಕಾರ ಮಾಡಿಸಿಕೊಟ್ಟ ಆ ಪವಿತ್ರ ಭೂಮಿಯನ್ನು ಬೀಳ್ಕೊಡುವುದು ಅವನಿಗೂ ಕಷ್ಟ. ಅಲ್ಲಿನ ವನಚರವೂ ಪ್ರಿಯ ವಾಗಿತ್ತು ; ಅವುಗಳ ಅಗಲಿಕೆಯಂತೂ ಕರ ಕಷ್ಟ. ದೇವಲೋಕಕ್ಕೆ ಹೋಗುತ್ತಿರುವೆ ನಲ್ಲ ಎಂಬ ಉಬ್ಬಿನಿಂದ ಕೊಬ್ಬಿ ಮೈಮರೆತಿಲ್ಲ ಅವನು. ಶಿವದರ್ಶನ ಪಡೆದ ಕಣ್ಣಿಗೆ ದೇವ ಲೋಕದ ವೈಭವ ಮತ್ತನ್ನು ತಾರದಾಗಿದೆ. ಆದ್ದರಿಂದಲೆ ಅವರೆಲ್ಲರ ಅನುಜ್ಞೆಯನ್ನು ಬೇಡಿ **'ಹೋಗಿ ಬರುವಂತೆ'** ಹರಸಿರೆಂದು ಕೇಳಿಕೊಳ್ಳುತ್ತಾನೆ. 'ಹೋಗಿ ಬಾ' ಎಂದು ಶಿವನೆ ಆಜ್ಞಾಪಿಸಿದ್ದ ; ಆ ಪುಣ್ಯಸ್ನೇಹಿತರೂ ಹರಸಿದಮೇಲೆ ಇನ್ನೇನು ಭೀತಿ. ಹೀಗೆ ಎಲ್ಲರ ಹರಕೆ ಹೊತ್ತು ಪಾಶುಪತವೆ ಮೊದಲಾದ ದಿವ್ಯಾಸ್ತ್ರಗಳನ್ನು ಹೊತ್ತು ಶಿವಶಿವೆ ಗಣಪರ ಕೃಪಾಶಕ್ತಿಯನ್ನು ಧರಿಸಿ, ಆದರೂ ಅವಾವುದರಿಂದಲೂ

ತಲೆ ತಿರುಗದೆ ನಮ್ರನಾಗಿಯೆ ದೇವಲೋಕಕ್ಕೆ ಹೊರಡುತ್ತಾನೆ. ಕುಮಾರವ್ಯಾಸ ಅರ್ಜುನನ ಮತ್ತೊಂದು ಮಹಾ ವಿಜಯಕ್ಕೆ ಇಂಥ ಹಿನ್ನೆಲೆ ನೆಯ್ದಿದ್ದಾನೆ! ಇದಲ್ಲದೆಯೆ ಮತ್ತೊಂದು ಧ್ವನಿಪೂರ್ವಕವಾದ ಸಿದ್ಧತೆಯನ್ನು ಮಾಡುತ್ತಾನೆ ಕವಿ. ಅದು ಮಾತಲಿಯೊಡನೆ ಅರ್ಜುನ ಅಂತರಿಕ್ಷಯಾನ ಮಾಡುತ್ತ, ತನಗೆ ಅವನು ತೋರಿಸುತ್ತಾ ವರ್ಣಿಸುವ ಲೋಕ ಲೋಕಾಂತರಗಳನ್ನೆಲ್ಲ ದರ್ಶಿಸಿ ಸ್ವರ್ಗಾಭಿಮುಖವಾಗಿ ಹೋಗುವ ಚಿತ್ರ. ಪಾತಾಲ ರಸಾತಲವೇ ಮೊದಲಾದ ಹದಿನಾಲ್ಕು ಲೋಕಗಳನ್ನೆಲ್ಲ, ಸಪ್ತರ್ಷಿಮಂಡಲವೆ ಮುಂತಾದ ನಕ್ಷತ್ರ ಲೋಕಗಳನ್ನೆಲ್ಲ, ದಿಕ್ಪಾಲಕರಿಂದ ಹಿಡಿದು ಕ್ಷೀರಸಾಗರಶಾಯಿಯ ತನಕ, ಸೃಷ್ಟಿಸ್ಥಿತಿ ಸಂಬಂಧ ಶಕ್ತರನ್ನೆಲ್ಲ; ಹಾಗೂ ಸ್ವಪುಣ್ಯ ಫಲವಾಗಿ, ಯಜ್ಞಸಂಬಂಧ ಫಲದಿಂದ, ಮೇಲಡರುತ್ತಿರುವ ಮರ್ತ್ಯಾತ್ಮರನ್ನೂ, " **ಇಂದ್ರಿಯ ವಿಜಯಿ** "ಗಳೆ ಮುಂತಾದ ದಿವ್ಯಚೇತಸರನ್ನೂ ಮಾತಲಿ ಅರ್ಜುನನಿಗೆ ತೋರಿಸುತ್ತಾ ಹೋಗುತ್ತಾನೆ. ಕವಿ ದೀರ್ಘವಾಗಿಯೆ ಈ ಚಿತ್ರವನ್ನು, ಬೇಸರ ತರುವಂತಾದರೂ, ಸುಮಾರು ೬೦ ಪದ್ಯಗಳಿಗೂ ಮೇಲಾಗಿ ವರ್ಣಿಸಿದ್ದಾನೆ. ಹೀಗೆ ಸವಿಸ್ಮಯನಾಗಿ ಅರ್ಜುನ ಭಿನ್ನ ಭಿನ್ನ ಲೋಕದರ್ಶನವನ್ನು, ದಿವ್ಯಜೀವಿ ಸಂದರ್ಶನವನ್ನು ಮಾಡುತ್ತ ಅಮರೇಂದ್ರನ ಭೋಗಪುರಿಗೆ ಹೋಗುತ್ತಾನೆ. ಶಿವದರ್ಶನವಾದ ಮೇಲೆ ಅವನಿಗಾದ ದರ್ಶನವೆಂತಹದು ನೋಡಿ. ಈ ಎಲ್ಲ ಪೂರ್ವಸಿದ್ಧತೆಯನ್ನು ಸಿದ್ಧಿಯನ್ನು ಪಡೆದ ಅರ್ಜುನ ಅಮರ್ತ್ಯಪುರಿಯಲ್ಲಿ ಕಾಲಿಡುತ್ತಾನೆ. ಇಲ್ಲದಿದ್ದರೆ ಆ ಅನಿಮೇಷ ಪುರಿಯಲ್ಲಿ ಈ ನಿಮೇಷನಿಗೆ ಕಾಲುಜಾರುವುದು ಕಷ್ಟವಿರಲಿಲ್ಲ.

ಅಮರಾವತಿಯನ್ನು ಮುಟ್ಟಿದ ಅರ್ಜುನನನ್ನು ದೇವೇಂದ್ರನರಮನೆಗೆ ಕರೆದೊಯ್ಯುವುದು 'ಲಾವಣ್ಯಲಹರಿಯ ಸೊಕ್ಕುಗಳ ಸುರಸೂಳೆಗೇರಿಗಳೊಳಗೆ!'. ಮಗನನ್ನು, ಪಾಶುಪತ ಶ್ರೀಮಂತನನ್ನು ಎದುರುಗೊಂಡು ಕೈಕುಲಕಿ ('ಕರದಲಿ ತುಳುಕಿ ಕರವನು') ಬಿಗಿದಪ್ಪಿಕೊಂಡು ತನ್ನ ಗದ್ದುಗೆಯ ಮೇಲಕ್ಕೊಯ್ದು ತನ್ನ ಪಕ್ಕದಲ್ಲಿ ಕೂರಿಸಿಕೊಳ್ಳುತ್ತಾನೆ ದೇವರಾಜ. ನೂರು ಯಜ್ಞದ ವಿಭವದರಸರಿಗೆ ಮಾತ್ರ ಮಾರುವ ಆ ಸಿಂಹಾಸನವನ್ನು ಇಂದು ಏನಿಲ್ಲದೆಯೆ ಅರ್ಜುನ ಗೆಲ್ಲುತ್ತಾನೆ. ದೇವತೆಗಳಿಗೆ ಅಚ್ಚರಿ: 'ಈ ನುಸಿಗಳು ಈ ಮರ್ತ್ಯರು' ಎಂಬವರು ಒಸಗೆಯ ಅಮರಾವತಿಯಲ್ಲಿ ಸನ್ಮಾನಗೊಳ್ಳುವುದೆಂದರೇನು! ಎಂತಹ ಅಪೂರ್ವಘಟನೆ ನಡೆದಿದೆ ಎಂದು (—ಮುಂದೆ ಇನ್ನೂ ಅಪೂರ್ವವಾದುದು ನಡೆಯಲಿದೆ ಎಂಬುದಕ್ಕೆ ಮುನ್ನುಡಿಯಾಗಿದೆ ಎಂದರಿಯದೆ—) ವಸುಗಳೆಲ್ಲ ಮಹಾಶ್ಚರ್ಯದಿಂದ ನೆರೆಯುತ್ತಾರೆ. ಅಂದಿನ ವೈಭವೋತ್ಸವಕ್ಕೆ ದೇವತೆಗಳಿಗೂ ಆಹ್ವಾನವಿಲ್ಲ, ಅವಕಾಶವೂ ಇಲ್ಲ.

"ನೂಕು ಬಾಗಿಲ ಚಾಚು ಬಣಗು ದಿವೌಕಸರ ನಿಲಿಸಲ್ಪ ಪುಣ್ಯರ
ನೇಕೆ ಹೊಗಿಸಿದೆ ಬಹಳ ದಾನ ತಪೋ ವಿವರ್ಜಿತರ
ಓಕುಳಿಯ ನೆವದಿಂದ ತೆಕ್ಕೆಯ ಬಾಕುಳಿಗಳುರವಣಿಸಿತೇ ತವ
ಗೇಕೆ ರಂಭಾದಿಗಳ ಸೋಂಕೆಂದುದು ಸುರಸ್ತೋಮ"

ರಂಭಾದಿಗಳ ಸೋಂಕು, ಅದಿರಲಿ ಬರಿ ನೋಟ, ಎಲ್ಲ ದೇವತೆಗಳಿಗೂ ಇಲ್ಲ. ಹೀಗಿರುವಾಗ ಅಂಥ ಸುಂದರೀ ಕದಂಬವೇ ಬಂದು ವರ್ಣವರ್ಣದ ಪರಿಮಳೋಜ್ವಲ ಸೌಂದರ್ಯದ ಸುರನರ್ತನವನ್ನು ಮಾಡುತ್ತಾರೆ ಅರ್ಜುನನ ಮುಂದೆ. ಅವರ ಗಾನ ರಸದಲ್ಲಿ ಆ ಅಮರಾಸ್ಥಾನವೇ ಮುಳುಗಿಹೋಯಿತಂತೆ. ಆದರೆ

**"ಈ ಅಮಾನುಷ ನೃತ್ಯ ವಾದ್ಯ ಸುಗೇಯ ರಸದಲಿ ಮುಳುಗಿ ಕರಣದ
ಲಾಯು ತೊಡಕದೆ ಪಾರ್ಥನಿದ್ದನು ಧೈರ್ಯಶಿಖರದಲಿ!"**

ದೇವತೆಗಳು ತಮ್ಮ ನಾಡಿನ ಸೌಂದರ್ಯವನ್ನು ಕಂಡೇ ಕರಗಿ ಮುಳುಗಿಹೋಗುತ್ತಾರೆ. ಈ ಮರ್ತ್ಯ—ಅಂದು ಆ ಬಾಲೆ ಸುಭದ್ರೆಯನ್ನು ಸಂನ್ಯಾಸಿಯಾಗಿದ್ದಂದು ಕಂಡೆ ಕರಗಿಹೋದ ಈ ಭಾರತ—ಇಲ್ಲಿ ಅಪ್ಸರೆಯರ ನೃತ್ಯ ಗಾನರಸದಲ್ಲಿ ಮುಳುಗದೆ, ಅಲ್ಲ, ಮುಳುಗಿಯೂ ಕರಣದ ಲಾಯ ತಪ್ಪದೆ ಧೈರ್ಯಶಿಖರದಲ್ಲಿ ಮಂಡಿತನಾಗಿರುತ್ತಾನೆ, ಅಡಿಯಲ್ಲಿ ಅಪ್ಪಳಿಸುವ ಯಾವ ಅಲೆಯೂ ತನ್ನನ್ನು ತಾಕದಂತೆ. ಹಾಗಿದ್ದು ರಸಾನುಭವ ವಿಸ್ಮಯವನ್ನು ಮಾತ್ರ ಪಡೆಯುತ್ತಾನೆ:

"ಈ ಯುವತಿ ತಾನಾವಳೋ ಕುಸುಮಾಯುಧನ ಖಂಡಯವಲಾ, ಮಝು!
ಮಾಯೆಯೆನುತೂರ್ವಶಿಯನೆವೆಯಿಕ್ಕದೆ ನಿರೀಕ್ಷಿಸಿದ."

ಸುಂದರಿ ಆಕೆ; ಶೃಂಗಾರ ಖಡ್ಗ; ಸೌಂದರ್ಯ ದರ್ಶನಾನುಭವ ಯೋಗ್ಯೆ, ಆದರೆ **ಮಾಯೆ.** ಅರ್ಜುನ ಸೌಂದರ್ಯಕ್ಕೆ ಕಣ್ಣುಮುಚ್ಚುವ ಮೂಢನಾಗಿರಲಿಲ್ಲ. ಆದರೆ ಅದನ್ನು ಮುಟ್ಟಹೋದರೆ ಮಾಯೆಯಾದೀತು, ಆದ್ದರಿಂದ ಅದನ್ನು ಭವದೂರ ಸ್ಥಿತಿಯಿಂದಲೆ ನೋಡಿ ನಲಿಯಬೇಕು ಎಂದು ಅರಿತಿದ್ದ. ಆದರೆ ಅರ್ಜುನನ ರಸವಿಸ್ಮಯ ದೃಷ್ಟಿ ಭೋಗೀಂದ್ರ ದೇವೇಂದ್ರನಿಗೆ ಭೋಗಾಭಿಲಾಷೆಯಾಗಿ ತೋರಿತು. ಓಲಗ ಹರಿಯುತ್ತದೆ:

"ಸುರಪನಿತ್ತಲು ಚಿತ್ರಸೇನನ ಕರೆಸಿದನು; **ಫಲುಗುಣನ ಭಾವವ**
ನರುಹಿದನು, ನಮ್ಮೂರ್ವಶಿಯ ಕಳುಹೆಂದು ನೇಮಿಸಿದ."

ಒಂದೆ ದೃಷ್ಟಿ ಅವನ ದೃಷ್ಟಿಗೆ ಹೇಗೆ ಕಾಣಿಸಿತು! ಅವನು ಫಲುಗುಣನ **ಭಾವವನ್ನು** ಮಾತ್ರ ತಿಳಿದ. ಆದರೆ ಅದು ತನ್ನ ಭಾವವಾಗಿತ್ತಷ್ಟೆ. ತನ್ನ ಮಗ

ತನ್ನಂತೆಯೆ ಎಂದೊ, ಭೋಗಭೂಮಿಯಲ್ಲಿ ಯಾವ ವಿಸ್ಮಯಾನುಭವವೂ ಭೋಗಾಭಿಮುಖವಾದದ್ದೆ ಎಂದುಕೊಂಡೊ ಏನೊ ಆ ಇಂದ್ರ ಹಾಗೆ ಹೇಳುತ್ತಾನೆ.

ಇನ್ನು ಮೇಲೆ ರಮ್ಯಭಯಂಕರ ದೃಶ್ಯ ಪ್ರಾರಂಭವಾಗುತ್ತದೆ. ಚಿತ್ರಸೇನನಿಗೆ ಲಜ್ಜೆ. ಊರ್ವಶಿಯ ಹತ್ತಿರವೂ ಲಜ್ಜೆ! ಆಕೆಗೆ ಗೊತ್ತು ಅಂತಹ ಲಜ್ಜೆಯ ಉದ್ದೇಶವೇನಿದ್ದೀತೆಂದು. ಆದ್ದರಿಂದಲೆ

"ಅಣಕವಲ್ಲದು ? ರಾಯನಟ್ಟಿದ ವಣಿಹವೊ, ನಿಜಕಾರ್ಯಗತಿಗಳ
ಕುಣಿಕೆಯೋ ? ಕರ್ತವ್ಯವಾವುದು ನಿಮಗೆ ನಮ್ಮಲ್ಲಿ ?
ಗುಣಭರಿತ, ಹೇಳು!"

ಎಂದು ತಾನೇ ಪ್ರಸ್ತಾಪಿಸುತ್ತಾಳೆ. ಆತ ನಸುನಗೆ ಕುಣಿಯೆ ಮುಖದಲಿ, ಮಾನಿನಿಗೆ ವೆಂಟಣಿಸಿ ಲಜ್ಜಾಭರದಿ ನುಡಿದ—ಅರ್ಧಗಂಭೀರವಾಗಿ, ಅರ್ಧ ತಮಗೆ ಸಹಜವಾದ ವ್ಯವಹಾರ ಭಾಷೆಯಲ್ಲಿ :

"ಎಮಗೆ ಮಗನರ್ಜುನನು, ನೀನಿಂದೆಮಗೆ ಸೊಸೆಯಹುದು ! ಆತನಂತ
ಸ್ತ್ರಿವಿರವನು ಕಳೆ ನಿನ್ನ ಕುಚಯುಗ ಕಾಂತಿ ಲಹರಿಯಲಿ.
ಕಮಲಮುಖಿ ! ನೀ ಕಮಲ, ಆತನು ಭ್ರಮರ ; ನೀ ಸುರವನದ ಸಿರಿ, ಮಧು
ಸಮಯ ಅರ್ಜುನ—ಎಂದು ಬೆಸಸಿದನಮರಪತಿಯೆಂದ."

ಇದನ್ನು ಕೇಳಿದಾಗ ಅವಳ ಹೃದಯದಲ್ಲಿ ಏನೆಲ್ಲ ಭಾವಗಳು ಮೂಡಿದವು, ಕವಿಯನ್ನೆ ಕೇಳಿ :

"ಕೇಳುತವೆ ರೋಮಾಂಚ ಲಜ್ಜೆಯ ಜೋಳಿಯೆದ್ದುದು ಝೋಂಪಿಸಿತು ಪುಳ
ಕಾಳಿ ಭಯವನು ಪಂಟಿಸಿದುದನುರಾಗದಭಿಮಾನ
ಮೇಲೆ ಮೇಲಭಿಲಾಷೆ ಧೈರ್ಯವ ಚಾಳವಿಸೆ ಪರಿತೋಷ ಪೂರಣ
ದೇಳುಮುಳುಗಾಯ್ತುತ್ತರಕೆ ನಸುಬಾಗಿದಳು ಶಿರವ."

ಮೊದಲು ರೋಮಾಂಚ, ಲಜ್ಜೆ, ಪುಳಕಾಳಿ ; ಜೊತೆಯಲ್ಲೆ ಸಹಜಭಯ ; ಆ ಭಯವನ್ನು ಪಂಟಿಸಿದ ಅನುರಾಗದ ಅಭಿಮಾನ. ಧೈರ್ಯವನ್ನೆಲ್ಲಾ ಮೇಲುಕ್ಕುವ ಅಭಿಲಾಷೆ ಚಾಳವಿಸುತ್ತಿದೆ. ಇಂತಹ ಪರಿತೋಷಪೂರಣದ ಏಳುಮುಳುಗಿನಲ್ಲಿ ಉತ್ತರಕ್ಕೆ ನಸುಬಾಗಿದಳಂತೆ ಊರ್ವಶಿ. ಎಂತಹ ಸಂಕೀರ್ಣಭಾವಚಿತ್ರಣ. ಅದಿರಲಿ, ಆ ಊರ್ವಶಿಗೂ ನಾಚಿಕೆಯೆ ? ಮರ್ತ್ಯಮುಗ್ಧವಧೂಸಹಜವಾದ ಆ ಲಜ್ಜೆ, ಅರೋಚಿವಿದಗ್ಧ ದೇವಾಂಗನೆಗೆ ಬಂದುದು ಅಪೂರ್ವ ಸುಯೋಗವೆ ಸರಿ. ಸಹಜವಾಗಿದ್ದಿರಬೇಕಾದ ರೂಪಮದವಂದು ಲಜ್ಜೆಗೆ ಎಡೆಗೊಟ್ಟಿದೆ. ಅವಳಿಗಾದ ಅರ್ಜುನ ಮೋಹದ ದುರ್ದಮ್ಯತೆಗೆ ಇದೆ ಸಾಕ್ಷಿ.

ಅವಳ ಲಜ್ಜಾತಿಶಯವನ್ನೂ, ಮಾತಿಲಿತನವನ್ನೂ ನೋಡಿ ಚಿತ್ರಸೇನ ಮತ್ತೇನನ್ನೊ ಊಹಿಸಿಕೊಳ್ಳುತ್ತಾನೆ. ಆದ್ದರಿಂದಲೆ

"ಆತನುತ್ತಮ ನಾಯಕನು, ವಿಖ್ಯಾತೆ ನೀ ಸುರಲೋಕದಲಿ ಲ
ಜ್ಜಾತಿಶಯವೇಕಿಲ್ಲಿ ನಾವೇ ನಿಮ್ಮ ಪರಿವಾರ
ಸೋತಡೆಯು ದಿಟ ಭಂಗವಲ್ಲ, ಪುರಾತನದ ನಳ ನಹುಷ ಭರತ ಯ
ಯಾತಿ ನೃಪರೊಳಗೀತನಗ್ಗಳನಬಲೆ ಕೇಳೆಂದ."

'ಮರ್ತ್ಯನಾದ ಆ ಅರ್ಜುನನೊಡನೆ ತನ್ನ ಪ್ರಣಯವೆ' ಎಂದೆಲ್ಲೊ ಆಕೆ ಭಾವಿಸಿರಬೇಕೆಂದುಕೊಂಡು 'ಆತನುತ್ತಮನಾಯಕನು,' 'ಪುರಾತನದ ನಳ ನಹುಷ ಭರತ ಯಯಾತಿ ನೃಪರೊಳಗೀತನಗ್ಗಳನು,' 'ಸೋತಡೆಯು ದಿಟ ಭಂಗವಲ್ಲ' ಎಂದು ಚಿತ್ರಸೇನ ಸಮಾಧಾನಪಡಿಸಬೇಕಾಗುತ್ತದೆ. ತನ್ನ ಮನದ ಉಬ್ಬನ್ನು ಅವಳು ಹೇಳದೆಯೆ ಗಂಭೀರವಾಗಿಯೆ:

"ರಾಯನಟ್ಟಿದ ನೇಮ ಗಡ! ಕಮನೀಯವಲ್ಲಾ ನಿನ್ನ ನುಡಿ! ರಮ
ಣೀಯತರವಿದು ನಿನ್ನ ರಚನೆ! ಮಹಾನುಭಾವವಲಿ
ಆಯಿತಿದು ನೀ ಹೋಗು!"

ಎನ್ನುತ್ತಾಳೆ. 'ಹ್ಞು! ಆಗಲಿ; ರಾಜನ ನೇಮ,' ಎಂದು ತನ್ನ ಬಗೆ ತೋರದಂತೆ ಹೇಳಿದರೂ ಆ ಪ್ರಿಯವಾರ್ತೆಯನ್ನು ತಂದ ಅವನನ್ನು, ಅವನ ನುಡಿಯನ್ನು ಆಕೆ ಮೆಚ್ಚಿಕೊಂಡು ಹೊಗಳುವುದರಿಂದಲೆ ತಿಳಿಯುತ್ತದೆ, ಅವಳಿಗೆ ಆ ನೇಮಕದಿಂದ ಮಹೋತ್ಸವವೇ ಆಗಿತ್ತು ಎಂದು. ಒಳ್ಳೆಯ ಸುದ್ದಿಯನ್ನು ಕೇಳಿದ ಯಾರೂ ಆ ಸುದ್ದಿತಂದವನನ್ನು ಬಾಯ್ತುಂಬ ಹೊಗಳದಿರಲಾರರಲ್ಲ. ಅವನತ್ತ ಹೋಗುತ್ತಾನೆ. ಇವಳು, ಈ 'ಅಬುಜಾಯತಾಕ್ಷಿ, **ಮಹೋತ್ಸವದಿ ನಾರಾಯಣನ ಮೈದುನನ ಬರೆದಳು ಚಿತ್ತಭಿತ್ತಿಯಲಿ.'** ಎಷ್ಟು ರಮ್ಯವಾಗಿದೆ ಚಿತ್ರ! ತನ್ನ ಪ್ರಣಯಿಯನ್ನು ಮೊದಲ ಬಾರಿಗೆ ಕಾಣಲಿರುವ ನವವಧು ಏನೇನೋ ಚಿತ್ರಗಳನ್ನು ಚಿತ್ರಿಸಿಕೊಳ್ಳುತ್ತ ಆ ತನ್ನ ಪ್ರಣಯಿಯ ಚಿತ್ರವನ್ನು ಬರೆದು ಬರೆದು ತೃಪ್ತಿಗೊಳ್ಳದಂತೆ ಈ ಮಹಾ ಪ್ರಣಯಪಟು ತನ್ನ ಚಿತ್ತ ಭಿತ್ತಿಯಲ್ಲೆ—ಬೇರೆ ಹೊರಗಿನ ಭಿತ್ತಿಯ ಮೇಲೇನಲ್ಲ—ತನ್ನ ಅಂದಿನ ಪ್ರಿಯನಾದ ನಾರಾಯಣನ ಮೈದುನನನ್ನು ಬರೆದುಕೊಳ್ಳುತ್ತಾಳೆ. ಬಹು ಮನೋಹರವಾಗಿದೆ ಈ ಚಿತ್ರ. ಇಷ್ಟು ಗಾಢವಾಗಿತ್ತು ಅವಳ ಮೋಹ.

ಮಜ್ಜನಗೊಂಡು ಅಮಲದುಕೂಲವನ್ನು ಧರಿಸಿ ವಿವಿಧ ರತ್ನಾಭರಣಗಳನ್ನು ತೊಟ್ಟು ತನ್ನ ಸಿರಿಮುಡಿಗೆ ಕುಸುಮದ ಮೊಗ್ಗೆಗಳನ್ನು ಮುಡಿಸಿಕೊಂಡು 'ಹೊಗರ

ಹೊಸ ಜವ್ವನದ ಜೋಡಿಯು ಜಾಡಿ ಇಮ್ಮಡಿಸು'ತ್ತಿರಬೇಕಾದರೆ 'ಉಗಿದೊರೆಯ ಕೂರಲಗಿ'ನಂತೆ '**ಧಾರೆಯ ಮಿಗೆ ಹಿಡಿದ ಖಂಡೆಯ**'ದಂತೆ '**ಕಾಮದ ಹಗೆಗೆ ಹುಟ್ಟಿದ ಧೂಮಕೇತುವಿನಂತೆ**' ಈ '**ನಾಕಸುಖಸಾಕಾರ**'ವಾದ ಊರ್ವಶಿ ಅರ್ಜುನನಲ್ಲಿಗೆ ಹೊರಡುತ್ತಾಳೆ. ಸುಂದರಿಯರನ್ನು ವರ್ಣಿಸುವೆಡೆಯಲ್ಲೆಲ್ಲ ಬರುವಂತೆ ಇಲ್ಲೂ ಈ ವಿಶೇಷಣಗಳು ಬಂದಿವೆಯೆಂದು ಭಾವಿಸಲಾಗದು. ಅವುಗಳ ಔಚಿತ್ಯ ಕೊನೆಯಲ್ಲಿ ತಿಳಿಯುತ್ತದೆ.

ಇಂಥ 'ಕಾಮಾರಿ ಧೂಮಕೇತು'ವನ್ನು ಸುತ್ತುಗಟ್ಟಿ ಸುರನಾರಿಯರು ಅವಳ ಮಹಾಕೀರ್ತಿಯನ್ನೂ ಅರ್ಜುನನ ಪರಮಪುಣ್ಯವನ್ನೂ ಹೊಗಳುತ್ತ ಮುನ್ನಡೆಯುತ್ತಾರೆ.

'ತುರಗ ಮೇಧದ ರಾಜಸೂಯದ ವರ ಮಹಾಕ್ರತುಕಾರರೀಕೆಯ
ಚರಣದುಂಗುಟ ತುದಿಯ ಕಾಂಬರೆ ಪೂತು ಫಲುಗುಣನ
ಪರಮಪುಣ್ಯವದೇನು ತಾನಿದ್ದರಮನೆಗೆ ಸತಿ ಬಂದಳೇನ
ಚ್ಚರಿಯೆನುತ ಹೊಗಳಿದರು ಇಂದ್ರನಂದನನ.'
'ಧರಣಿಪತಿ ಕೇಳವರ ತೊತ್ತಿರ ಹೊರಗೆಲಸದವದಿರ ಪಸಾಯಿತೆ
ಯರಿಗೆ ಪಡಿಗವ ನೀಡಸಲ್ಲರು ಸೋಮಯಾಜಿಗಳು!
ವರುಣಸೂನು, ಜಯಂತ, ನಳಕೂಬರರು ಸಮಯವನೊಮ್ಮೆ ಕಾಣದೆ
ವರುಷವೋಲೈಸುವರು, ಸೌಧದ ದಾರವಟ್ಟದಲಿ!'

ಇಷ್ಟೆಲ್ಲ ವೈಭವೋನ್ಮತ್ತಳಾದ ಚಿರನವೀನ ಸುಂದರಿಯಾದ ಊರ್ವಶಿ ತಾನೆ ಅರ್ಜುನನನ್ನು ಅರಸಿಕೊಂಡು ಹೊರಟಳು ಎಂಬುದಕ್ಕೆ ಕಾರಣ ಕೇವಲ ಇಂದ್ರಾಜ್ಞೆಯೂ ಅಲ್ಲ; ಅರ್ಜುನ ಪುಣ್ಯವೂ ಅಲ್ಲ; ಅವಳಲ್ಲೆ ಅವನ ವಿಷಯವಾಗಿ ಉದಿಸಿದ ಮೋಹ. ಹೀಗೆ ಈ ಎಲ್ಲವೂ ಮುಪ್ಪುರಿಗೊಂಡು ಅವಳ ರಾಗಭಾವಗಳನ್ನು ಬಯಕೆಗಳನ್ನು ನಿಶಿತೋಜ್ವಲಮಾಡುತ್ತವೆ.

ಅರ್ಜುನನರಮನೆಯನ್ನು ಸಮೀಪಿಸಿದಂತೆ ಈ ಚಿತ್ರಣ ನಾಟಕೀಯವಾಗಿ ಚಲನಚಿತ್ರವಾಗಿ ಕಣ್ಣಿಗೆ ಕಟ್ಟಿದಂತೆ ನಡೆಯತೊಡುಗುತ್ತದೆ. ಬಳ್ಳಿ ಮಿಂಚಿನ ಮಂದಿಯಲಿ ಮುರಿದಿಳಿವ ಮರಿಮುಗಿಲಿನಂತೆ ದಂಡಿಗೆಯನ್ನಿಳಿದು, ಝುಲಿ ಝುಲಿಝುಲಿ ರೆನ್ನುವ ಗೆಜ್ಜೆಯುಲಿಯ ಮಧ್ಯೆ 'ಶಬ್ದಬ್ರಹ್ಮ'ವನ್ನು ಸೋಲಿಸುವ ಪಾಯವಧಾರು ಎನ್ನುವ ಸತಿಯರ ಸಂದಣಿಯ ಸಿಂಜಾರವದ ಸೊಗಸಿನಿಂದ ಅಡಿಯಿಡುತ್ತಾ ಒಳಬರುತ್ತಾಳೆ. ತಟತಟ್ಟನೆ ಅವಳನ್ನು ಹಿಂಬಾಲಿಸಿ ಬಂದಿದ್ದ ಸೋಗೆಗಣ್ಣಬಲೆಯರು ಬಾಗಿಲು ಬಾಗಿಲುಗಳಲ್ಲಿ ಚಾಮರವಿಕ್ಕುತ್ತಾ ಕಾವಲಾಗಿ ನಿಂತುಕೊಳ್ಳುತ್ತಾರೆ. ಅಂಥ

ಮೇಳದಲ್ಲಿ ಆಕೆ ಒಳಬಂದು ನೋಡುತ್ತಾಳೆ: 'ಮಣಿಮಂಚದ'ಲ್ಲಿದ್ದ **'ಮಹಾಹಿಯ ಭೋಗತಲ್ಪದ ಹರಿಯೊಲಿಹ ಶತಯಾಗಸುತ'**ನನ್ನು.

ಅಲ್ಲಿ ಹೊಳೆಹೊಳೆಯುತ್ತಲಿದ್ದ ಮಣಿದೀಪದ ಶೀತಕಾಂತಿಯನ್ನೂ ಮುಕ್ಕುಳಿಸುವಂತಹ ಅವಳ ಕಡೆಗಣ್ಣ ಕುಡಿ, ಅಲ್ಲಿನ ಇಂದೂಪಲದ ಭಿತ್ತಿಗಳ ಬೆಳಗನ್ನೂ ಅಣಿಯುವಂತಹ ಅವಳ ತನುಕಾಂತಿ ಆ ಮಂದಿರವನ್ನೆಲ್ಲ ಮತ್ತೂ ಕಾಂತಗೊಳಿಸುತ್ತದೆ. ಹಾಗಿರುವಾಗ 'ಕೆಳದಿಯರ ಕಂಠದಲಿ ಕೈಗಳನಿಳುಹಿ' ನಿಂತುಕೊಂಡು, 'ನೃಪಕುಲತಿಲಕನಂಗೋಪಾಂಗದಲಿ' ತನ್ನ 'ಕಣ್ಮನವ'ನ್ನು ಹರಹುತ್ತಾಳೆ. ಆಕೆಯ ಚಂದ್ರಮುಖದಿಂದ ಸೂಸುವ ತಿಂಗಳಿನ ಸೌರಭಪೂರದಲ್ಲಿ ಅರ್ಜುನನ ನಿದ್ರೆ ತಿಳಿಯುತ್ತದೆ. ಅವನ ಕರಣಾವಳಿಗಳೆಲ್ಲ ಪರಮ ಪ್ರೀತಿಯ ರಸದಲ್ಲಿ ಮುಳುಗಿ ಭುಲ್ಲವಿಸುತ್ತವೆ. 'ಹರ ಮಹಾದೇವ ಈ ಅಘಾಟದ ಪರಿಮಳವಿದೆತ್ತಣದು' ಎನ್ನುತ್ತ **ಮೈಮುರಿಯುತ್ತೆ** ಎದ್ದು ಕಾಣುತ್ತಾನೆ: 'ಅಪೂರ್ವಪರಿಮಳ ಸಾರದಲಿ, . . . ಕಿರಣ ಲಹರಿಯ ದಿವ್ಯರತ್ನಾಭರಣರುಚಿರತರಪ್ರಭಾಪಂಜರದೊಳಗೆ ಹೊಳೆಹೊಳೆವ **ಮದನಾಲಸೆಯನೂರ್ವಶಿಯ.'**

ಇಂತಹ ಮನಮೋಹಕ ಚಿತ್ತೋನ್ಮಾದಕ ಆವರಣ-ದೃಶ್ಯಗಳಿರುವಾಗ ಯಾರಿಗೂ ಬಗೆ ಕದಡದಿರದು. ಆದರೆ ಅರ್ಜುನನಿಗಾದ ಅನುಭವ ಬೇರೆ: 'ಹಾ ಮಹಾದೇವಿಯರಲಾ! ಸುತ್ರಾಮನೋಲಗದೊಳಗೆ ನರ್ತನ ರಾಮಣೀಯಕ ರಚನೆಯಲಿ ರಂಜಿಸಿದಳಾ ಸಭೆಯ!' ಎಂದು. ಇವಳು ಅಷ್ಟೆ ಆಗಿದ್ದರೆ ಅಭಿನಂದನೀಯೆ ಮಾತ್ರವಾಗುತ್ತಿದ್ದಳು. ಆದರೆ "ಈ ಮಹಿಳೆ **ಅಭಿವಂದನೀಯೆ**;" ಕಾರಣ: 'ನಿರಾಮಯದ ಶಶಿವಂಶಜನನಿ' ಎನ್ನುವ ಭಾವ ಪ್ರಧಾನವಾದುದು. ಆದ್ದರಿಂದಲೆ ಮಣಿಮಂಚದಿಂದಿಳಿದು

> "ಏನು ಬಿಜಯಂಗೈದಿರಿತ್ತಲು? ಮಾನನಿಧಿ! ಕುಳ್ಳಿರಿ; ಸುರೇಂದ್ರನ
> **ಮಾನಿನಿಯರಭಿವಂದನೀಯರು!** ನಾವು ಕೃತಾರ್ಥರಲ!
> ಏನು ಬೆಸಸೆನಗೇನು ಹದ? ನಿಮಗಾನು **ಮಗನುಪಚಾರವೇಕೆ ಮ**
> ನೋನುರಾಗದಲರುಹಿ"

ಎಂದು ಹೇಳುತ್ತಾನೆ. ತನಗನಿಸಿದುದನ್ನೆ ಆತ ಹೇಳಿದ. ಆದರೆ ಅವಳಿಗೇನಾಗಿರಲಿಕ್ಕಿಲ್ಲ! ಅವಳ ಬಯಕೆಯ ಕಾಮನಬಿಲ್ಲುಗಳಿಗೆ ಆಲಿಕಲ್ ಮಳೆಸುರಿದಂತಾಯಿತಲ್ಲ ಅವನ ಶೀತಲೋಪಚಾರದಿಂದ! ಏನು ಹೇಳುವುದೀಗ?

> 'ನುಡಿಗೆ ಬೆರಗಾದಳು, ಮನೋಜನ ಸಡಗರಕೆ **ತೆಕ್ಕಿದಳು,** ಪಾರ್ಥನ
> ನಡವಳಿಗೆ **ಮೆಚ್ಚಿದಳು, ಬೆಚ್ಚಿದ**ಳಂಗಜಾಸ್ತ್ರದಲಿ.

ಕಡುಗಿದಳು ಖಾತಿಯಲಿ, ಲಜ್ಜೆಯ ಬಿಡೆಯದಲಿ ಭಯಗೊಂಡಳಂಗನೆ
ಮಿಡುಕಿದಳು ವಿವಿಧಾನುಭಾವದ ರಸದ ಭಂಗಿಯಲಿ "—ಆ. ೮. ೨೦. ೧೮೯.

ಅವಳಿಗಾದ ಸಂಕೀರ್ಣತಮವಾದ ಅನುಭವವನ್ನು ಇದಕ್ಕಿಂತ ವರ್ಣಿಸಬೇಕೆ? ಕೋಪವೆ, ಲಜ್ಜೆಯೆ, ಮಿಡುಕೆ, ಸಿಡುಕೆ, ಮೆಚ್ಚಿಕೆಯೆ, ಅಭಿಮಾನಭಂಗವೆ ಏನೇನು ಅದು? ಒಂದು ಭಾವವನ್ನು ಮೆಟ್ಟಿಕ್ಕಿ ಮತ್ತೊಂದು ಭಾವತರಂಗ ಅಪ್ಪಳಿಸುತ್ತದೆ ಅವಳ ಚಿತ್ತದ ಸೈಕತವೇಲೆಯನ್ನು. ಪಾಪ! "**ಮಿಡುಕಿದಳು ವಿವಿಧಾನುಭಾವದ ರಸದ ಭಂಗಿಯಲಿ**". ಅಂತಹ ವಿದಗ್ಧ ದೇವವಾರಾಂಗನೆಗೇ ಆ ಮಿಡುಕಾಟ ಉಂಟಾಗಿರಬೇಕಾದರೆ ಅವಳಿಗಾಗಿರುವ ಅರ್ಜುನ ಮೋಹದ ತೀವ್ರತೆಯನ್ನು ಬೇರೆ ಹೇಳಬೇಕಾಗಿಲ್ಲ. ಹಾಗೂ, ಅಂಥ ವಿಲಕ್ಷಣವಾದ ವರ್ತನೆ ಉತ್ತರಗಳನ್ನವಳು ತನ್ನ ಜೀವಿತದಲ್ಲಿ ಕೇಳಿಯೆ ಇದ್ದಿರಲಾರಳು; ಅದೂ ಆ ಮರ್ತ್ಯಜ ಮನುಷ್ಯನಿಂದ. ಹಿಂದೆಯೆ ಇದನ್ನು ಕವಿ ನಿರೂಪಿಸಿದ್ದಾನೆ. ಆದ್ದರಿಂದಲೆ ಅವಳು ಮೊದಲು ಅವನ 'ನುಡಿಗೆ ಬೆರಗಾದಳು'; ಆಮೇಲೆ ಅವನ ಅನನ್ಯ ಧೃತಿಗೆ 'ಮೆಚ್ಚಿದಳು'; ಆದರೆ ತನಗಾಗಿರುವ ಮನೋಜವಿಕಾರದ ದುರ್ದಮ್ಯತೆಯು 'ಸಡಗರಕೆ ತೆಕ್ಕಿದಳು', 'ಭಯಗೊಂಡಳು,' 'ಮಿಡುಕಿದಳು'; ಹಾಗೂ, ಮನುಜತಿರಸ್ಕೃತೆಯಾದೆನಲ್ಲ ಎಂದು ಪ್ರಪ್ರಥಮ ಅಭಿಮಾನ ಭಂಗದಿಂದ 'ಕಡುಗಿದಳು ಖಾತಿಯಲಿ'. ತನ್ನ ಅಂದಿನ ದುಸ್ಥಿತಿಯನ್ನು ಕಂಡು ಹೀಗೆ ಎಷ್ಟು ನೊಂದುಕೊಂಡಳೊ, ಎಷ್ಟು ಮಿಡುಕಿದಳೊ.

'ಏಕೆ ನುಡಿದನೊ ಚಿತ್ರಸೇನನದೇಕೆ ನಾ ಕೈಕೊಂಡೆನೆತ್ತಣ
ಕಾಕು ಮೂಳಗೆ ಕೋಳು ಹೋದೆನೊ ಕಾಮನೆಂಬವಗೆ
ಲೋಕವರ್ತಕವಲ್ಲದಿವನನದೇಕೆ ವಿಧಿ ನಿರ್ಮಿಸಿದನೋ ನಾ
ನೇಕೆ ನರನೇಕೆನುತ ಸುಯ್ದಳು ಬೈದು ಕಮಲಜನ.'

ಒಳ್ಳೆಯದಾಗಲಿ, ಕೇಡಾಗಲಿ ಎಲ್ಲಕ್ಕೂ ಆ ಮಾಟಗಾರನನ್ನು ತಾನೆ ಬೈಯು ವುದು! ಇಂಥ 'ಲೋಕವರ್ತಕನಲ್ಲದವನ'ನ್ನು ಏಕೆ ಆ ವಿಧಿ ಸೃಷ್ಟಿಸಿದ'? (ಅವಳು ಅಂದಿನತನಕ ತಿಳಿದ ಲೋಕದಲ್ಲಿ ಯಾರೂ ಅವನಂತೆ ಎಂದೂ ವರ್ತಿಸಿರಲಿಲ್ಲವೆಂಬು ದಕ್ಕೆ ಇದೇ ಸಾಕ್ಷಿ.) ಅಷ್ಟೆ ಏಕೆ, ತನ್ನಂಥ ತಿರಸ್ಕೃತೆ, ನರನಂತ ಮೂಢ ಏಕೆ ತಾನೆ ಇರಬೇಕು ಎಂದು ನಿಡುಸುಯ್ಯುತ್ತಾಳೆ. 'ವಿಕಳ ಮತಿಯೋ ಮೇಣಿವ ನಪುಂಸಕನೊ ಜಡನೋ ಶ್ರೋತ್ರಿಯನೊ ಬಾಧಕನೊ ಖಳನೊ ಖೂಳನೊ ಮಾನವವಿಕಾರವಿದೋ' ಎಂದು ಆ ನರನ ಬಗ್ಗೆ ಕೋಪ ಜಿಗುಪ್ಸೆ, ಹಾಗೂ ತನಗಾದ ಅವಮಾನಕ್ಕೆ ಒಂದು ಬಗೆಯ ಕೃತಕ ಸಮಾಧಾನ ಉಂಟಾಗುತ್ತೆ. 'ವಿಕಟ ತಪಸಿನ ದೇವ ದೈತ್ಯರ ಮಕುಟವಾಂತುದು ವಾಮಪಾದವನಕಟ ಕೆಟ್ಟೆನಲಾಯೆನುತ ಕರಗಿ!

ಮರುಗುತ್ತಾಳೆ ಆ ಹೆಣ್ಣು, ಅಪೂರ್ವ ಅಭಿಮಾನಹತಿಯಿಂದ. ಇನ್ನು ತಲೆಯೆತ್ತಿ ಬದುಕುವುದೆಂತು? ನಿತ್ಯ ಪ್ರಾರ್ಥನೆಯಿಂದಲೆ ನೀರೆರೆಸಿಕೊಂಡು ಚಿಗುರಿಡುತ್ತಿದ್ದ ಅವಳ ಪಲ್ಲವಾಧರ ಕುಸುಮಾನನ ಎಲ್ಲವೂ ಇಂದು ಮೊದಲಬಾರಿಗೆ ಬಿಸಿ ತಾಕಿಸಿ ಕೊಂಡಂತಾಯಿತಲ್ಲ. ತನಗಾದ ಆ ಹತಿಯನ್ನು ದರ್ಪಕೋಪಗಳ ಮಾತಿನಿಂದ ವ್ಯಕ್ತಗೊಳಿಸುತ್ತಾಳೆ, ಹಾಗೂ ಪರಿಹಾರ ಮಾಡಿಕೊಳ್ಳುತ್ತಾಳೆ.

'ಎಲವೊ ರಾಯನ ಹೇಳಿಕೆಯಲಂಡಲೆದನೆನ್ನನು ಚಿತ್ರಸೇನಕ
ನಲುಗಿ ನಟ್ಟವು ಕಾಮಶರವೆನ್ನಂತರಂಗದಲಿ
ಒಲಿದುಬಂದಬಲೆಯರ ಡೆಕ್ಕರಿಗಳೆವುದೇ ವಿಟಧರ್ಮವಕಟಾ
ತಿಳಿಯಲಾ ತಾನಾವಳೆಂಬುದನು'

ಎಂದು ಹೇಳುತ್ತಾಳೆ. ಅರ್ಜುನನಿಗೆ ಆಗ ಊರ್ವಶಿಯ ಬರವಿನ ಅರ್ಥ ಸ್ಪಷ್ಟವಾಗಿ ಆಶ್ಚರ್ಯವುಂಟುಮಾಡುತ್ತದೆ.

"ಶಿವ ಶಿವೀ ಮಾತೇಕೆ? ಕಾಮನ ಬವಣೆಯಲಿ ಡೀವರಿಯದಿರೆ ವಾ
ಸವನ ನೇಮವು ಚಿತ್ರಸೇನನ ನುಡಿಗಳಂತಿರಲಿ
ಎವಗಕರ್ತವ್ಯದಲಿ ಮನ ಸಂಭವಿಸುವುದೆ ನೀವೆಮ್ಮ ವಂಶೋ
ದ್ಭವಕೆ ಜನನಿಯಲಾ ಎನುತ ವಿನಯದಲಿ ನರ ನುಡಿದ."

ತನ್ನ ಮುಂದೆ ಈ 'ವಾವೆ' ಸಂಬಂಧಗಳನ್ನು ಹೇಳುವ ಮೂಢನನ್ನು ಕಂಡು ಮರುಗಬೇಕೊ ಕೋಪಿಸಿಕೊಳ್ಳಬೇಕೊ ತಿಳಿಯದು ಅವಳಿಗೆ;

'ಪ್ರಣವದರ್ಥವಿಚಾರವೆತ್ತಲು, ಗಣಿಕೆಯರಮನೆಯ ಸ್ವರಾಕ್ಷರ
ಗಣಿತ ಲಕ್ಷಣವೆತ್ತ ರತಿಕೇಳೀವಿಧಾನದಲಿ
ಬಣಗು ಭಾರತ ವರ್ಷದವದಿರ ಭಣಿತ ನವಿಮ್ಮಾ ದೇವಲೋಕಕೆ
ಸಣಬಿನಾರವೆ ಚೈತ್ರರಥದೊಳಗೆ'

ಎಂದು ಸ್ಪಷ್ಟವಾಗಿಯೆ ಹೇಳುತ್ತಾಳೆ. ಅಷ್ಟೇ ಅಲ್ಲ:

"ಅಯ್ಯನಯ್ಯನು ನಿಮ್ಮವರ ಮುತ್ತಯ್ಯನಾತನ ಭಾವಮೈದುನ
ನಯ್ಯನಗ್ರಜರನುಜರೆಂಬೀ ಜ್ಞಾತಿಬಾಂಧವರ
ಕೈಯಲರಿಗಳ ಹೊಯ್ದು ಶಿರನರಿದುಯ್ಯಲಾಡಿದವರ್ಗೆ ಮೇಣ್ ಮುಖ
ದಯ್ಯಗಳಿಗಾನೊಬ್ಬಳೆಂದಳು ನಗುತ ನಳಿನಾಕ್ಷಿ."

ಅಜ್ಜ ಮುತ್ತಜ್ಜರಿಗೆಲ್ಲ, ಲೆಕ್ಕಪಕ್ಕವಿಲ್ಲದಷ್ಟು ಮಂದಿಗೆಲ್ಲ ತಾನೊಬ್ಬಳೆ ಎಂದು ಹೇಳಿಕೊಳ್ಳುವಾಗ ತನ್ನ ಘನತೆ, ಸಾಮಾನ್ಯ ಅಲಭ್ಯತೆ ಅಥವಾ ದುರ್ಲಭತೆಯನ್ನೂ ಆಕೆ ಮರೆಯುತ್ತಾಳೆ. ತನ್ನ ಸಹಜೀವಿಗಳೂ ಎಷ್ಟೊ ಜನರಿದ್ದಾರೆಂಬುದನ್ನು ಕಡೆಗಣಿಸುತ್ತಾಳೆ. ಹಾಗೂ ಅವಳ ನಗೆ ಅರ್ಥಪೂರ್ಣವಾದುದು. ಮತ್ತೂ ಸ್ಪಷ್ಟವಾಗಿ:

"ಮರೆಯ ಮಾತಂತಿರಲಿ ಸಾಕದ ಮರೆದು ಕಳೆ, ಮಾನಿನಿಯರಿಚ್ಛೆಯ
ನರಿಯದವನು ಸುರೇಂದ್ರನಾಗಲಿ ಚಂದ್ರನಾಗಲಿ
ಕುರಿ ಕಣಾ ಫಡ ಖೂಳ ನೀನೆಂತರಿವೆ"

ಎಂದು ಜಂಕಿಸಿ ಮಾತನಾಡಿ ನೋಡುತ್ತಾಳೆ. ಇರಬಹುದು, ಆಕೆ ದೇವಲೋಕಕ್ಕೆ ಬಂದ ಪುಣ್ಯಾತ್ಮರಿಗೆಲ್ಲಾ ಭೋಗ್ಯವಾಗಿಯೆ ಇರಬಹುದು. ಆದರೆ ಮರ್ತ್ಯಜೀವಿಯಾಗಿ, ಅಲ್ಲಿನ ಶರೀರವನ್ನೆ ಹೊತ್ತುಕೊಂಡು, ಅಲ್ಲಿನ ಋತಕ್ಕೆ ಇನ್ನೂ ಒಳಪಟ್ಟಿದ್ದು ದೇವಲೋಕಕ್ಕೆ ಬಂದವನು ಅದನ್ನು ಹೇಗೆ ಒಪ್ಪಬಹುದು? ಅರ್ಜುನನಿಗೆ ಬರುವ ಪ್ರಶ್ನೆ ಅದು. ಒಂದೆ ಬಾರಿ ಎರಡು ಭಿನ್ನ ಋತಗಳಲ್ಲಿ ಪ್ರಜೆಯಾಗಿ ಬಾಳುವುದು ಕಷ್ಟ ಎಂದು ಆಗ ತೋರುತ್ತದೆ.

ಇದು ಮನುಷ್ಯ ಶರೀರ, ತದ್ಧರ್ಮದಲಿ ತನ್ನವಸಾನ ಪರಿಯಂ
ತಿದರೊಳವ್ಯಭಿಚಾರದಲಿ ವರ್ತಿಸಿದ ಬಳಿಕಿನಲಿ
ತ್ರಿದಶರಲ್ಲಿಗೆ ಬಂದರಾ ಮಾರ್ಗದಲಿ ನಡೆವುದು ದೇವತಾದೇ
ಹದಲಿ ಬಲವತ್ತರವು ದೇಹ ವಿಶೇಷವಿಧಿಯೆಂದ.

ಮನುಷ್ಯಶರೀರ ಮನುಷ್ಯಧರ್ಮದಂತೆಯೆ ವರ್ತಿಸಬೇಕು, ಅದರ ನಡೆಯಲ್ಲಿ ವ್ಯಭಿಚಾರ ಬೇಡ. ಹಾಗೆ ಅವ್ಯಭಿಚಾರದಲ್ಲಿ ನಡೆದ ಬಳಿಕ ದೇವಲೋಕಕ್ಕೆ ಬಂದಾಗ ಆ ದಾರಿಯಲ್ಲೆ ನಡೆಯಬಹುದು; ಕಾರಣ ಆಗ ದೇವತಾದೇಹವಿರುತ್ತೆ. ಈ ದೇಹ ವಿಶೇಷವಿಧಿಯಂತೂ ಬಲವತ್ತರವಾದದ್ದು ಮನುಷ್ಯರಿಗೆ.

ಈ ತತ್ತ್ವದೃಷ್ಟಿ ಸದ್ಯೋನ್ಮತ್ತ ದೇವವಾರಾಂಗನೆಗೆ, ತಿಳಿಯುವುದು ಹೇಗೆ? ತನಗೆ ತೋರಿದ ರೀತಿಯೆ ವಾದಿಸುತ್ತಾಳೆ. ಅವನು ಹೇಳುವುದೆಂಥ ಧರ್ಮ? ಹಾಗಾದರೆ ಅವರು ಭೂಮಿಯಲ್ಲಿ ಮಾಡುತ್ತಿರುವುದಾದರೂ ಏನು ಧರ್ಮ, ಎಂದೆನಿಸುತ್ತೆ. ಕಟುವ್ಯಂಗದಿಂದ:

"ಅಹುದಹುದು! ಶ್ರೌತಪಥದಲಿ ಬಹಿರಿ! ನೀವೇ ಸ್ಮಾರ್ತವಿಧಿಸ
ನ್ನಿಹಿತರೆಂಬುದನರಿಯದೇ ಮೂಜಗದ ಜನವೆಲ್ಲ!"

ಎಂದೂ ವ್ಯಕ್ತ ತಿರಸ್ಕಾರದಿಂದ:

"ಮಹಿಳೆಯೊಬ್ಬಳೊಳೈವರೊಡಗೂಡಿಹರು ನೀವೇನಲ್ಲಲೇ?
ನಿಸ್ಪೃಹರು ನೀವ್ ನಮ್ಮಲ್ಲಿ!? ಹರಹರ!"

ಎಂದೂ ಹಂಗಿಸಿ ಭಂಗಿಸುತ್ತಾಳೆ.

ಈ ಆರೋಪವನ್ನು ಆಗಲೆ ಎಷ್ಟು ಜನರ ಬಾಯಿಂದ ಕೇಳಿದ್ದನೊ ಅರ್ಜುನ.

ಅವಕ್ಕೆಲ್ಲ ಅವನಲ್ಲಿ ಸಿದ್ಧ ಉತ್ತರವೆ ಇತ್ತು. ಅದು ಬುದ್ಧಿಸಿದ್ಧ ಉತ್ತರವಾಗಿರಲಿಲ್ಲ. ಸ್ವಜೀವನ ಧರ್ಮವೆಂದು ಒಪ್ಪಿಕೊಂಡು ಹಾಗೆಯೆ ಬದುಕುತ್ತಿದ್ದುದರಿಂದ ಬಂದ ಸಿದ್ಧ ಉತ್ತರವಾಗಿತ್ತು :—

> 'ತಾಯ ನೇಮದಲಂದು ಕಮಲದಳಾಯತಾಕ್ಷಿಯ ಕೂಟವೈವರಿ
> ಗಾಯಿತದು ತಪ್ಪೇನು ; ಜನನಿಯ ನುಡಿಯಲಂಘ್ಯವಲೆ—' ಎಂಬುದು.

ಆದರೆ ಈಗ

> 'ಕಾಯಸೌಖ್ಯಕೆ ಕಾಮಸುಖದ ವಿಡಾಯತತುವಕೆ ವೇಡೆಗೊಂಡುನ'
> 'ವಾಯಿಯಲಿ ದುರ್ಗತಿಗೆ ದುವ್ವಾಳಿಸುವನಲ್ಲ'

ಎನ್ನುತ್ತಾನೆ. ಕಾಮಸುಖ ತನ್ನದೇ ತರ್ಕ ತತ್ತ್ವಗಳನ್ನು ಮಾಡಿಕೊಳ್ಳುತ್ತೆ. ಅದನ್ನನುಸರಿಸಿ ತಾನು **'ದುರ್ಗತಿಗೆ ದುವ್ವಾಳಿಸುವನಲ್ಲ'** ಎಂದು ಅರ್ಜುನ ಸ್ಪಷ್ಟಪಡಿಸುತ್ತಾನೆ.

ಇಷ್ಟೆ ಸಾಕು ಊರ್ವಶಿಗೆ. ತಾಯ ಮಾತನ್ನು ಒಪ್ಪುವಾತ ತಂದೆಯ ಮಾತನ್ನೂ ಒಪ್ಪಬೇಕಲ್ಲ! ಎಂಥ ತರ್ಕ!

> "ತಾಯ ನೇಮದಲ್ಲೈವರಿಗೆ ಕಮಲಾಯತಾಕ್ಷಿಯ ಕೂಟವೇ, ಸುರ
> ರಾಯ ನಿಮ್ಮಯ್ಯನು, ವಿಲಂಘ್ಯವೆ ನಿನಗೆ ಪಿತೃವಚನ ?
> ರಾಯನಟ್ಟಲು ಬಂದೆ!"

ಎಂದು ಹೇಳಿ ಅವನ ಧರ್ಮಗುಣಗಳನ್ನು ಕೆದಕುತ್ತಾಳೆ.

ಹಾಗೂ ವಿನಯವಾಗಿ

> "... ಕುಸುಮಾಯುಧನ ಕಗ್ಗೊಲೆಯ ಕೆದರುವುಪಾಯವನು ನೀ ಬಲ್ಲೆ"

ಎನ್ನುತ್ತಾಳೆ, ತನ್ನ ಹಮ್ಮುಳಿದು. ಆದರೂ ತನಗೆಂಥ ಸ್ಥಿತಿ ಬಂತು ಅಯ್ಯೋ, ಎಂದು ಮರುಗುತ್ತಾಳೆ :

> "ಸರಸಿಜದ ಮಧು ಮಧುಕರನನನುಕರಿಸಿದೊಡೆ, ಚಂದ್ರಿಕೆ ಚಕೋರನ
> ವರಿಸಿದರೆ, ನಿಧಿಲಕ್ಷ್ಮಿ ಸುಳಿದರೆ ನಯನವೀಥಿಯಲಿ
> **ಗರುವೆಯರು ಮೇಲಿಕ್ಕಿ ಪುರುಷನನರಸಿದರೆ ಜಾರುವರೆ ಸುಡಲಾ**
> ಸರಸಿಜವನಾ ಚಂದ್ರಿಕೆಯನಾ ನಿಧಿಯನಾ **ವಧುವ."**

ತನ್ನ ಬದುಕನ್ನು ಸುಡಬೇಕು, ಸುಟ್ಟುಕೊಳ್ಳಬೇಕು ಎಂಬಷ್ಟು ಜಿಗುಪ್ಸೆ, ನೋವು, ಅಭಿಮಾನಭಂಗ ಆಗುತ್ತದೆ. ಇನ್ನೂ ಒಂದು ಹಜ್ಜೆ ಮುಂದೆ ಹೋಗಿ ತನ್ನ ಕಾಮಹತ ದುಃಸ್ಥಿತಿಯನ್ನು ಹೇಳಿಕೊಳ್ಳುತ್ತಾಳೆ :

"ತಿಳುಹಿದೊಡೆ ಸುರಲೋಕದವರತಿಗಳಹೆಯರಲಾಯೆಂಬೆ, ಮನ್ಮಥ
ಖಳ ಕಣಾ! ನಿಷ್ಕರುಣಿ ನೀ ಸೌಭಾಗ್ಯ ಗರ್ವದಲಿ!
ಬಲುಮೆ ಬಿದ್ದುದು ವಾಸಿಯಲಿ, ಕಂದೊಳಸುಗೊಂಡುದು ಕಾಮಶರ, ಮನ
ವಳುಕೆ ಕೆಡಹಿತು ವಿರಹತಾಪದಲಿ"

ಎಂದು ತನ್ನ ಕಾಮದಗ್ಧ ಸ್ಥಿತಿಯನ್ನು ಕಂಡು ಅವಳಿಗೆ ದುಃಖ; ಅದಕ್ಕಿಂತ ಹೆಚ್ಚಾಗಿ ವಿಲಿವಿಲಿಗೊಂಡಿರುವ ತನ್ನ ಮುಂದೆ 'ಸೌಭಾಗ್ಯಗರ್ವಿತ' ನಾಗಿದ್ದಾನಲ್ಲ ಅರ್ಜುನ, ನಿಷ್ಕರುಣಿಯಾಗಿದ್ದಾನಲ್ಲ, ಎಂಬ ಸಹಿಸಲಾಗದ ಭಾವ ಅವಳನ್ನು ಸುಡುತ್ತಿದೆ. ಜಾರಿದವನಿಗೆ ಜಾರದಿರುವವನನ್ನು ಕಂಡರಾಗುವ ಅಸಹನೆ ಇದು. ಅರ್ಜುನ ಅವಳ ಸ್ಥಿತಿಗೆ ಕರಗದಿದ್ದರೂ ಮನಗರಗಿ, ಕಾಮಮೂಢಳಾದ ಅವಳಿಗೆ ಧೈರ್ಯಶಕ್ತಿಯನ್ನು ತುಂಬುತ್ತಾನೆ. ಲೋಕ ಅವಳ ಅಭಿಮಾನಹತಿಯನ್ನು ಆಡಿಕೊಳ್ಳಲು ಕಾರಣ ವಿಲ್ಲದಂತೆ ನೋಡಿಕೊಳ್ಳಬಹುದು ಎಂದು ಸಮಾಧಾನಪಡಿಸುತ್ತಾನೆ:

"ಕಾಡಲಾಗದು, ನಿಮ್ಮೊಡನೆ ಮುರಿದಾಡಲಮ್ಮೆನು, ಮನಕೆ ಧೈರ್ಯದ
ಜೋಡ ತೊಟ್ಟದಿರಾಗಿ ನಿಲೆ ನನೆಯಂಬು ನಾಟುವುವೆ?
ಖೋಡಿಯೇಕವ್ವೆ ಮಕ್ಕಳ ನೋಡ ಬಂದರೆ ಬೇರೆ ಕಷ್ಟವ
ನಾಡುವರೆ ಬಲ್ಲವರು? ಬಿಜಯಂಗೈಯಿ ನೀವೆಂದ."

ಇನ್ನಿದನ್ನು ಸಹಿಸದಾಯಿತು ಅವಳಿಗೆ. ಅವನಿಂದ ತನಗೆ ಉಪದೇಶ ದೊರೆಯು ವಂತಾಯಿತೆ? ಅದಕ್ಕಿಂತ ಬೇಕೆ ಇನ್ನು ಆಘಾತ?

"ರೋಷವೀರೆಲೆಯಾಯ್ತು, ಲಜ್ಜೆಯ ವಿಾಸಲಳಿದುದು, ಬಹು ವಿಧದ ಬಹು
ವಾಸಿಗಳು ಪಲ್ಲವಿಸಿದವು, ಕೆಲ್ಲವಿಸಿತನುತಾಪ;
ಆಸೆ ಪೈಸರವೋಯ್ತು, ಕಡುಝುಳ ಸೂಸಿದುದು ಸುಯ್ಲಿನಲಿ, ಕಂಗಳು
ಕೇಸುರಿಯ ಮುಕ್ಕುಳಿಸಿದವು, ಹೆಕ್ಕಳಿಸಿ ಕಾಮಿನಿಯ."
"ಸೊಂಪಡಗಿತು ಮುಖೇಂದು, ತನುಲತೆ ಕಂಪಿಸಿದುದಡಿಗಡಿಗೆ, ಮೈ ತನಿ
ಗಂಪಿನಲಿ ಮಘು ಮಘಿಸಿತಮಲ ಸ್ವೇದದಲಿ.
ತಂಪಿನಲಿ ಶಿಖಿ, ಮಧುರದಲಿ ಕಟು, ನುಂಪಿನಲಿ ಬಿರಿಸಮೃತದಲಿ ವಿಷ,—
ಗುಂಪಿನಲಿ ನೆಲೆಯಾದ ವೋಲ್ ಸತಿಗಾಯ್ತು ಘನರೋಷ!"

ಅವಳ ಪ್ರಣಯವಿಂದು ರೋಷಾಗ್ನಿಯಾಗಿದೆ; ಅವಳ ಸೌಂದರ್ಯವೆ ಭಯಾನಕ ವಾಗಿ ಹೋಗಿದೆ: ಕಡುಗಾಹಿನ ಅಮೃತದಂತೆ, ಕುಪಿತಸಿಂಹದ ಗವಿಯ ಕಸ್ತೂರಿ ಯಂತೆ, ಕಳಿತ ಹಲಾಹಳದ ಕಜ್ಜಾಯದಂತೆ, ಲೋಹಧಾರೆಯ ಮಧುವಿನಂತೆ, ರೌದ್ರಾಹಿಮಸ್ತಕದ ಮಣಿಯಂತೆ, ರಾಹು ತುಡುಕಿದ ಶಶಿಯಂತೆ! ಅಬಲತಾಸಹಜ

ವಾದ ಅಶ್ರುಧಾರೆ ಉಕ್ಕುತ್ತದೆ ಕಟ್ಟಕಡೆಗೆ—ತನ್ನ ಅಯಾಚಿತ-ಭಗ್ನ ಪ್ರಣಯಕ್ಕೆ ಹಾಗೂ ಅದರಿಂದುಂಟಾದ ಅವಮಾನಕ್ಕೆ ನೊಂದಂತೆ, ಅದರಿಂದ ಅಸಹಾಯಳಾದಂತೆ, ಹಾಗೂ ಅವೆಲ್ಲಕ್ಕೂ ಕಡೆಗೆ ತಿಲೋದಕವಿತ್ತಂತೆ! ಆದರೆ ಆ ಭಾವವನ್ನು ಮೆಟ್ಟಿಕ್ಕಿ ಉರಿದೆದ್ದು ನಿಲ್ಲುತ್ತದೆ ಅಹಂಜ್ವಾಲೆ. ಆ ಅಶ್ರುಧಾರೆಯಲ್ಲೆ ತನ್ನ ರೋಷ ಧಾರೆಯನ್ನು ಮಸೆಯುತ್ತಾಳೆ.

"ಕೆತ್ತಿದವು ತುಟಿ, ಕದಪಿನಲಿ ಕೈ ಹತ್ತಿಸುತ ತೂಗಿದಳು ಶಿರವನು,
ತತ್ತ ರೋಷಾಯುಧವ ಮಸೆದಳು ಧಾರೆಗಂಗಳಲಿ
ಎತ್ತಿದುಬ್ಬೇಗದ ವಿಕಾರದ ಚಿತ್ತ ಬುದ್ಧಿ ಮನಂಗಳಾತ್ಮನ
ಜೊತ್ತಿಸಿದವದ್ಭುತದಹಂಕಾರದಲಿ ಕಾಮಿನಿಯು."

ಅದಮ್ಯ ಕಾಮ ತಿರಸ್ಕೃತವಾದಾಗ ಅದಮ್ಯ ರೋಷಾಗ್ನಿಯಾಗುವುದರಲ್ಲಿ ಆಶ್ಚರ್ಯವೇನೂ ಇಲ್ಲ. ಪ್ರೇಮವಾಗಿದ್ದಿದ್ದರೆ ಅದು ಮಂಗಳಕಾರಕವೇ ಆಗುತ್ತಿತ್ತು. ಇಲ್ಲಿಯ ಊರ್ವಶಿಯೇನೊ ಶಕ್ತಳೆ; ಅವಳು ಲೌಕಿಕ ನಿಯಮದೂರೆ; ಎಂದೂ ತಿರಸ್ಕಾರವರಿಯದ ಸರ್ವ ಪ್ರಾರ್ಥನಾಗರ್ವಿತೆ. ಅಲ್ಲಿ ಅಂಬೆ, ಭೀಷ್ಮಧಿಃಕೃತೆಯಾದಾಗ, ಮರ್ತ್ಯಳಾಗಿದ್ದರೂ ತಾನೊಲಿದವನನ್ನೆ ಕೊಲ್ಲಲು, ಮರುಭವದಲ್ಲಾದರೂ ತನ್ನಿನಿಯನಿಗೇ ಮೃತ್ಯುಚುಂಬನ ನೀಡಲು ತಪಸ್ಸನ್ನು ಮಾಡುತ್ತಾಳೆ. ಮಹಾಭಾರತದ ರೌದ್ರಕ್ಕೆ ಉಚಿತವಾದ ಭಯಂಕರ ತಿರಸ್ಕೃತ ಪ್ರಣಯಶಕ್ತಿಗಳು ಇವು.

"ಎಲವೊ ಭಂಡರ ಭಾವ, ಖೂಳರ ನಿಳಯ, ಖಳರಧಿನಾಥ, ವಂಚಕ
ತಿಲಕ, ಗಾವಿಲರೊಡೆಯ, ಬಂಧುವೆ ದುಷ್ಟನಾಯಕರ"

ಎಂದೆಲ್ಲ ಬೈದೂ ತೃಪ್ತಿಗೊಳ್ಳದೆ

"ಎಲೆ ಮರುಳೆ! ತಾನಾವಳೆಂಬುದ ತಿಳಿಯಲಾ? ನೀನಾವನೆಂಬುದ
ನಿಳಿಯರಿಯದೇ ಭಂಡ ಫಡ ಹೋಗೆಂದಳಿಂದುಮುಖಿ."
'ಒಲಿದು ಬಂದವರಾವು, ಸೊಬಗಿನೊಳೊಲಿಸಿ ಮರುಗಿಪ ವಿಂಡ ನೀನತಿ
ಸುಲಭರಾವ್ ದುರ್ಲಭನು ನೀ ದೇವೇಂದ್ರ ಕಟಕದಲಿ."
"ಎಲೆ ನಪುಂಸಕ! ಗಂಡುವೇಷದ ಸುಳಿವು ನಿನಗೇಕೆನುತ ಕಳ
ವಳಿಸಿ ಕರವೆತ್ತಿದಳು ಹಿಡಿ ಹಿಡಿ ಶಾಪವಿದೆಯೆನುತ."

ಹಾಗೆ ಮೇಲೆತ್ತಿದ ಆ ಮೃದುಕೋಮಲಕರ, ಸ್ನಿಗ್ಧ ಶೀತಲ ನಾಗರಭೋಗದಂತಿದೆ!

'ತುಳಿಕಿತದ್ಭುತ ರೋಷ, ಸುಯ್ಲಿನ ಝುಳ ಹೊಡೆದು ಮೂಗುತಿಯ ಮುತ್ತಿನ
ಬೆಳಕು ಕುಂದಿತಮಳಚ್ಛವಿ ಮುಖಾಂಬುಜದ
ಹೊಳೆ ಹೊಳೆವ ಕೆಂದಳದ ಸೆಳ್ಳುಗುರೊಳಮಯೂಖದ ಮಣಿಯ ಮುದ್ರಿಕೆ
ಗಳ ಮರೀಚಿಯಲೆಸೆದುದೆತ್ತಿದ ಹಸ್ತವೂರ್ವಶಿಯ.

ಪದ್ಯವಂತೂ ಅತ್ಯಂತ ಪರಿಣಾಮಕಾರಿಯಾಗಿದೆ. ಮೂಗುತಿಯ ಮುತ್ತಿನ ಬೆಳಕು, ಹೆಣ್ಣಿನ ಕೋಮಲಕಾಂತಿ ಎಲ್ಲಾ ಆ ರೋಷಜ್ವಾಲೆಯಲ್ಲಿ ಮಸುಕಾಗಿಹೋಗುತ್ತದೆ. ಅತ್ಯಸಾಧಾರಣ ಮೋಹಕ ಸೌಂದರ್ಯವತಿ ಆದ ಅವಳು, ಆ ಕೋಮಲೆ, ಎಷ್ಟೆಲ್ಲ ಕೋಪಿಸಿಕೊಂಡರೂ ಕೇವಲ ಜ್ವಾಲೆ, ಕೇವಲ ಭಯಾನಕತೆ ಆಗಲಾರಳು. ಭಯಂಕರವಾದರೂ ಸುಮನೋಹರವಾಗಿಯೇ ತೋರುತ್ತಾಳೆ. ಕವಿಗೆ ಅತ್ತಕಡೆ ನಮ್ಮ ಗಮನ ಹರಿಸುವ ಬಯಕೆ.

"ರಾಹು ತುಡುಕಿದ ಶಶಿಯೊ? ಮೇಣ್ ರೌದ್ರಾಹಿ ಮಸ್ತಕ ಮಾಣಿಕವೊ? ಕಡು
ಗಾಹಿನಮೃತವೊ? ಕುಪಿತ ಸಿಂಹದ ಗುಹೆಯ ಮೃಗಮದವೊ?
ಲೋಹಧಾರೆಯ ಮಧುವೊ? ಕಳಿತ ಹಲಾಹಳದ ಕಜ್ಜಾಯವೆನಿಸಿತು
ರೂಪು ಸುಮನೋಹರ ಭಯಂಕರವಾಯ್ತು ಸುರಸತಿಯ."

"ನರಮೃಗಾಧಮ! ನಿಮ್ಮ ಭಾರತ ವರುಷ ಭೂಮಿಯೊಳೊಂದು ವರುಷಾಂ
ತರ ನಪುಂಸಕನಾಗಿ ಚರಿಸು ನಿರಂತರಾಯದಲಿ
ಹರಿಯ ಮರೆಯೊಗು, ಹರನ ನೀನನುಸರಿಸು, ನಿಮ್ಮಯ್ಯಂಗೆ ಹೇಳಿದು
ನಿರುತ, ತಪ್ಪದು, ಹೋಗೆನುತ ಮೊಗದಿರುಹಿದಳು ಚಪಲೆ."

ಅವಳ ಶಾಪಕ್ಕಿಂತಲೂ ಆ ಭಂಗಿಯೆ ಮರ್ಮೋದ್ಘಾಟನ ಸಾಮರ್ಥ್ಯವುಳ್ಳುದಾಗಿದೆ. ಆ ಕೊನೆಯ ಭಂಗಿಯಲ್ಲಿ ಏನೆಲ್ಲ ಪ್ರತೀಕಾರ ತಿರಸ್ಕಾರ ಅಸಹ್ಯಗಳು ತುಂಬಿವೆ! ಇಷ್ಟಾದ ಮೇಲೆ, ಅವಳ ಕೋಪಜ್ವಾಲೆ ಅವನನ್ನು ಸುಟ್ಟು ಆರಿಹೋದ ಮೇಲೆ ಅನನ್ಯ ಅಭಿಮಾನಭಂಗದ ಪರಿತಾಪಭಸ್ಮವೊಂದೆ ಉಳಿದು ಅವಳನ್ನು ನಿತ್ಯವೂ ಸುಟ್ಟಿರಬೇಕು. ಹಾಗೂ ಅವಳು ತನ್ನ ತಪ್ಪಿಗಾಗಿ ಮರುಗಿರಬೇಕು. ಅದಕ್ಕಾಗಿಯೂ ಏಕಾಂತದಲ್ಲಿ ಕಂಬನಿ ಮಿಡಿದಿರಬೇಕು. ಅಂತೂ ಅದನ್ನು ಕವಿ ಹೇಳಹೋಗಿಲ್ಲ. ಅವನ ಗಮನವೆಲ್ಲ ಪಾಪ, ಅರ್ಜುನನ ಕಡೆಗೆ. ಅವನ ಸ್ಥಿತಿಯೊ ಸಿಡಿಲೆರಗಿದ ಧೈರ್ಯದ್ರುಮವಾಗಿದೆ.

"ಮೂಗನಾದನು, ಬಹಳ ಧೈರ್ಯದ ಬೇಗಡೆಯ ಬಿಡೆ ಬಿಗಿದ ಬೆರಗಿನ
ಮೂಗಿನಂಗುಲಿಗಳ ಧನಂಜಯನೊಲೆದು ನಿಜ ಶಿರವ;
ಆಗಲಿದು ಸುರಭವನ ವಧುಗಳು ನಾಗರಿಗರವರೆತ್ತ ಭಾರತ
ಭೂಗತರು ತಾವೆತ್ತಲಿದು ಘಟಿಸಿದುದು ವಿಧಿಯೆಂದ."

ಇಂದ್ರನಿಗೂ ಹೇಳಲಿಲ್ಲ, ಆಕೆಯನ್ನು ಬಯಸಲೂ ಇಲ್ಲ, ಆದರೂ ಹೀಗೆಲ್ಲ ಆಯಿತಲ್ಲ.

ಒಂದು ವರ್ಷದ ತನಕ ನಪುಂಸಕನಾದೆನಲ್ಲ, ದೇಹಾಂತರವನ್ನು ಅಂಗೀಕರಿಸುವೆನಲ್ಲ, ಸುಡಲಿ ನನ್ನ ಬದುಕನ್ನು ಎಂದು ನೋಯುತ್ತಾನೆ.

ಅದಿರಲಿ, ಇದೇನೆಂಥ ನ್ಯಾಯ ? ಯಾವ ತಪ್ಪಿಗೆ ಏನು ಶಿಕ್ಷೆ? ತಪಸ್ಸನ್ನು ಆಚರಿಸಿದುದರಿಂದ ಪಾಶುಪತ ಶರ ಬಂದಿತು ; ಅದೆ ಧರ್ಮವೆ ತಪ ಎಂದು ಅರಿತು ನಡೆದರೆ ಹೀಗೆ ಷಂಡತನವಾಯಿತಲ್ಲ. ಏನಿದು ? ತಪವೇನೊ ಎರಡೂ ಅಹುದು ; ಆದರೆ ಫಲದಲ್ಲಿ ವಿಪರೀತವಾದುವಲ್ಲ ? **'ಗಹನತರವೇ ವಿಪುಳಕರ್ಮಸ್ಥಿತಿ'** ಎನ್ನುತ್ತ ತಲೆ ತೂಗುತ್ತಾನೆ. ಎಲ್ಲಕ್ಕಿಂತ ಹೃದಯ ವಿದ್ರಾವಕವಾದುದೆಂದರೆ ಈ ಮುಂದಿನದು.

> **"ಶಿವನ ಶರವೆನಗಾಯ್ತು ರಿಪುಕೌರವನ ರಕುತದ ರಾಟಳವನೆ**
> **ತ್ತುವೆನು, ಕಟ್ಟಾ ಮುಡಿಯನೆಂಬೆನು ದುರುಪದೀ ಸತಿಗೆ ;**
> **ಇವಳು ಭಂಗಿಸಿ ಭೂತುಗೆಡಹಿದ ಹವಣನಾರಿಗೆ ಹೇಳುವೆನು ವರ**
> **ಯುವತಿಗೀ ನುಡಿಯೊಸಗೆಯೇ ಹಾಯೆನುತ ಬಿಸುಸುಯ್ದ "**

ಈ ಸನ್ನಿವೇಶದ ಹೃದಯವಿದ್ರಾವಕತೆಯನ್ನು ಈ ಮಾತುಗಳಿಗಿಂತ ಬೇರೆಯೆಂತು ಹೇಳುವುದು ? ತಾನು ಊರಿಗೆ ಹಿಂತಿರುಗಿ ನಂತರ ತನ್ನ ಅಣ್ಣತಮ್ಮಂದಿರಿಗೆ ಅದರಲ್ಲೂ ತನ್ನನ್ನು ಪ್ರಚೋದಿಸಿ ಕಳಿಸಿದ, ತನ್ನ ಸಾಧನೆಗೆ ಮೂಲಭೂತಕಾರಣವಾದ ಆ ದ್ರೌಪದಿಗೆ ತನ್ನ ಸಾಧನಾಫಲವನ್ನು ತೋರುವ ಆಸೆಯಿತ್ತು. ಅವಳ ಬತ್ತದ ಕಂಬನಿಯನ್ನು ಒರಸುವಾಸೆಯಿತ್ತು. ತನ್ನ ಮಹಾಸ್ತ್ರಗಳನ್ನು ತೋರಿಸಿ ತಾನಿನ್ನು ಆಕೆಯ ಶತ್ರುಗಳ ರಕ್ತದ ರಾಟಳವೆತ್ತುವುದಾಗಿ ಧೈರ್ಯಾಲಾಪಮಾಡುವ ಇನಿಬಯಕೆಯಿತ್ತು. ಅದಕ್ಕೆ ದ್ರೌಪದಿಯೂ ತನ್ನ ತನಿಯೊಲ್ಮೆಯನ್ನು ನೀಡುವುದಾಗಿಯೂ ತಿಳಿದಿತ್ತು. ಆಕೆ ತಾನು ತಪಸ್ಸಿಗೆ ಬರುವಾಗ ಏನೇನನ್ನು ಏಕಾಂತದಲ್ಲಿ ಹೇಳಿದ್ದಳೊ ! ಕುಮಾರವ್ಯಾಸ ಹೇಳದೆ ಬಿಟ್ಟಿರುವ ಆ ಅವಳ ಏಕಾಂತೋಕ್ತಿಗಳನ್ನು ಭಾರವಿಯು ಮಾತಿನಲ್ಲಿ ಕೇಳಿ :

> **ಭರದಿಂ ಮುನಿವಚನವ ನೀನೆಸಗುತೆ**
> **ಸಫಲಂಗೊಳಿಸೆಮ್ಮಾಸೆಯನು ;**
> **ಕಾರ್ಯವ ಸಾಧಿಸಿ ಮರಳಿದ ನಿನ್ನನು**
> **ಅಪ್ಪುತೆ ನಾಂ ಮೊಲೆಯೊತ್ತುವೆನು.**
>
> **ಕನ್ನಡ ಕಿರಾತಾರ್ಜುನೀಯ, ಮೂರನೆಯ ಸರ್ಗ; ಪದ್ಯ ೫೪.**

ಈಗ ಪಾಶುಪತವನ್ನು ಕಂಡೊಡನೆಯೆ ತನ್ನ ಕೃತಜ್ಞತಾ ಪ್ರೀತಿಯನ್ನು ಆ ಸತಿ ತೋರಬಂದರೆ ಏನೆಂದು ಹೇಳುವುದು ? ನಿಜಸಂಗತಿಯನ್ನು ಹೇಳಿದರೆ 'ಆ ನುಡಿ ಒಸಗೆಯೇ ? ಹಾ ! ಎನುತ ಬಿಸುಸುಯ್ದು !' ಇನ್ನು ಹೆಚ್ಚು ಆ ಮಾತುಗಳನ್ನು ವರ್ಣಿಸಹೊರಟರೆ ಅಪರಾಧವಾಗುತ್ತದೆ.

ಇತ್ತಕಡೆ ಚಿತ್ರಸೇನನ ಮೂಲಕ ಅರ್ಜುನನಿಗಾದ ಗತಿಯನ್ನರಿಯುತ್ತಾನೆ ದೇವೇಂದ್ರ. ನೇರವಾಗಿ ಬಂದು ಮಗನನ್ನು ಸಂತೈಸಲೆಳಸುತ್ತಾನೆ. ಅವನನ್ನಪ್ಪಿಕೊಂಡು ಮುಂಡಾಡಿ ಬೇಡಿಕೊಳ್ಳುತ್ತಾನೆ: "ಮೊಗದ ತನಿ ಹಳಹಳಿಕೆ ನೇತ್ರಾಂಬುಗಳೊಳದ್ದುದು, ನಿಜ ಮನೋವೃತ್ತಿಗಳೊಳಗೆ ನುಡಿ ಮುಳುಗಿತೇನಿದು ವಿಚಿತ್ರವಾಯ್ತು" ಎಂದು ಕೇಳುತ್ತಾನೆ. ಲೋಕೈಕವೀರ ಅರ್ಜುನ, ಷಂಡನಾಗೆಂದು ಶಾಪಗೊಂಡ ಧೀರ ಧನಂಜಯ ತನ್ನ ಸ್ಥಿತಿಗೆ ನಾಚಿ "ತಲೆವಾಗಿದನು, ಲಜ್ಜೆಯ ಝುಡಿತೆಯಲಿ ಝೊಮ್ಮೇರಿದಂತೆವೆ ಮಿಡುಕದೆ" ತಟಸ್ಥನಾದನು. ಮತ್ತೆ ಮತ್ತೆ ಅವನನ್ನು ಸಂತೈಸಿ ಇಂದ್ರ ಬೇಡಿಕೊಳ್ಳುತ್ತಾನೆ:

> "ಬಿಡು ಮನೋಗ್ಲಾನಿಯನು, ಸತಿ **ಕೆಡೆನುಡಿದುದೆಲ್ಲವನೆನಗೆ ಸೈರಿಸು,**
> ಮಡದಿಯರಲೇನುಂಟು ಗುಣ! ಎನ್ನಾಣೆ!" ಎಂದು.

ಹಾಗೂ ಅವಳ ಶಾಪವೆ ಅವನಿಗೆ ವರವಾಯಿತು ಎಂದು ಆಶ್ವಾಸ ನೀಡುತ್ತಾನೆ. "ನಿಮ್ಮಜ್ಞಾತವಾಸದಲಿ ನೆರೆಜೋಡಲಾ ಜಾಣಾಯ್ಲು ರಿಪುಜನ ಶರಹತಿಗೆ. . . ಕೂಡಿತಿದು ಪುಣ್ಯದಲಿ, ಸುರಸತಿ ಮಾಡಿದಪಕೃತಿ ನಿನ್ನ ಭಾಷೆಯ ಬೀಡ ಸಲಹಿದು ದರಿಯೆ ನೀ ಸಾಹಿತ್ಯನಲ್ಲೆಂದ." ಹೀಗೆ ಅರ್ಜುನನನ್ನು ಸಂತೈಸಿ ತನ್ನರಮನೆಗೆ ಒಯ್ದು ವಿನೋದ ವಿಭವದಲ್ಲಿ ದುಃಖವನ್ನು ಮರೆಯುವಂತೆ ಮಾಡುತ್ತಾನೆ. ದಿಕ್ಪಾಲಕರು ಶಕ್ತ್ಯಸ್ತ್ರಗಳನ್ನು ನೀಡುತ್ತಾರೆ. ಹೀಗೆ ಕಥೆ ಮುಂದೆ ಬೇರೆದಾರಿ ಹಿಡಿಯುತ್ತದೆ. ಮತ್ತೆಲ್ಲಾದರೂ ತನಿಯಾಗಿ ಬಂದಿದ್ದರೆ ಇನ್ನೂ ಬೇರೆ ರೂಪವನ್ನೆ ತಾಳಬಹುದಿತ್ತೇನೊ.

ಮಹಾಭಾರತದ ಆ ಮಹಾವಿಸ್ತಾರದಲ್ಲಿ ವೈದೋರುವ ಈ ಭೀಷಣ ಪ್ರಣಯಕಥೆ ಪ್ರಣಯಕಥೆ ಮಾತ್ರವಾಗಿಯೆ ಮುಖ್ಯವಾಗಿಲ್ಲ. ಈ ಹಿಂದೆ ತೋರಿಸಲು ಯತ್ನಿಸಿರುವ ನಾನಾ ಕಾರಣಗಳಿಂದಾಗಿ ಅದು ಮುಖ್ಯ ಕಥೆಯ ಘಟನೆಯೊಳಗೆ ಸೇರಿಕೊಂಡುಹೋಗಿದೆ. ಹಾಗಾಗಿ ಆ ಪ್ರಧಾನಕಾವ್ಯದ ಭೀಷಣತೆಯೆ ಇದಕ್ಕೂ ಅಂಟುಕೊಂಡಿದೆ. ಇದೊಂದೆ ಏಕೆ ಮಹಾಭಾರತದಲ್ಲಿ ಬರುವ ಒಂದೊಂದು ಶೃಂಗಾರ ಸನ್ನಿವೇಶವೂ ರುದ್ರಚ್ಛಾಯೆಯಿಂದಲೇ ಆವೃತವಾಗಿದೆ.* ದುರಂತವಾಗಬಹುದಿದ್ದ ಈ ಪ್ರಸಂಗ ಶಿವಾವರಣದಿಂದಾಗಿ ಮಂಗಳಾಂತವೇ ಆಗಿದೆ, ರೌದ್ರಾಚ್ಛಾದಿತವಾಗಿದ್ದರೂ.

---

* ಶ್ರೀ ತೀ. ನಂ. ಶ್ರೀ ಅವರ "ಕನ್ನಡ ಭಾರತದಲ್ಲಿ ಶೃಂಗಾರ ಸನ್ನಿವೇಶಗಳು" ಎಂಬ ಲೇಖನವನ್ನು ನೋಡಿ.—'ಕಾವ್ಯಸಮೀಕ್ಷೆ'.

ಮಹಾಭಾರತ ರೌದ್ರಮಯ ಕರ್ಮಜಾಲದ ಒಂದು ಮಹಾಕಥೆ. ಕೌರವರಿಂದ ಹಿಡಿದು ಕೃಷ್ಣನವರೆಗೂ ಯಾರೂ ಆ ಕರ್ಮಗರ್ತದಿಂದ ಒಂದಲ್ಲ ಒಂದು ಕಾರಣ ದಿಂದಾಗಿ ತಪ್ಪಿಸಿಕೊಳ್ಳಲಾಗಿಲ್ಲ. ಆ ಅದೆ ಕರ್ಮ ವರ್ತುಲದಲ್ಲೆ ಈ ಊರ್ವಶೀ ಕೂಡ ಬಂಧಿತಳಾಗಿದ್ದಾಳೆ. ಆಗ, ಬಹುಹಿಂದೆ ಆ ಪ್ರಣಯಾರ್ತ ಪುರೂರವನನ್ನು ತನ್ನ ಮಿಂಚಿನ ತೋಳಿಂದಪ್ಪಿ ಸಿಡಲ ತುಟಿಯಿಂದ ಚುಂಬಿಸಿ ಸುಟ್ಟು ತಿರಸ್ಕರಿಸಿ ಬಿಸುಟ್ಟು

"ನ ವೈ ಸ್ತ್ರೈಣಾನಿ ಸಖ್ಯಾನಿ ಸಂತಿ
ಸಾಲಾವೃಕಾಣಾಂ ಹೃದಯಾನ್ಯೇತಾ—"

ಎಂದು ಹೋದ ಆ ಕ್ಷಣಭಂಗುರ ಕಾಮಿನಿ ಊರ್ವಶಿ ಇಂದು ಅದೆ ಆ ಪುರೂರವ ವಂಶೋದ್ಭವನಾದ ಅರ್ಜುನನಿಂದಲೆ ಪ್ರತ್ಯಾಘಾತಗೊಳ್ಳುತ್ತಿರುವುದು, (ಇಲ್ಲಿನ ಕಾರಣ ಎಷ್ಟೇ ಮಹೋನ್ನತವಾದುದಾದರೂ—) ಎಂಥ ವಿಚಿತ್ರಕರ್ಮ ವಿಧಿಯಿರ ಬೇಕು. 'ಕರ್ಮದ ಪಾಂಗು: ಮರಿಗೆ ಮರಿ: ಮರಿಗೆ ಮರಿ: ಬೆರಳ್ಗೆ ಕೊರಳ್!' ಎನ್ನುವ ಶ್ರೀಕವಿ ಕುವೆಂಪು ಅವರ ಮಹಾಭಾರತ ದರ್ಶನಭಾಷ್ಯ ಇದಕ್ಕೂ ಒಪ್ಪುತ್ತದಲ್ಲವೆ?

ಆದರೆ ಆಮೇಲೆ ಊರ್ವಶಿಯು ಪಾಡೇನಾಯಿತು? ಅರ್ಜುನನಿಗೊದಗಿದ ಶಾಪ ಹೇಳಿಕೊಳ್ಳಲು ಬಾರದಂತುದಾದರೂ, ಅದು ಯಾರಿಗಾದರು ತಿಳಿದರೂ ಅದರಿಂದ ಅವನಿಗೆ ಕೀರ್ತಿಯೆ ಬರುತ್ತಿತ್ತು; ಹಾಗೂ ಅದು ಅವನನ್ನು ಅಜ್ಞಾತವಾಸದಲ್ಲಿ ಜಾಣಾಯ್ಲರ ಕಣ್ಣಿನಿಂದ ಕಾಯುವ ಜೋಡಾಯಿತು. ಆದರೀ ಊರ್ವಶಿಗಾದ ಬೆಂಕಿಯ ಬೊಟ್ಟು ಮಾಯಿತೇನು? ಮಾದರೂ ಆ ಸುಟ್ಟ ಗಾಯದ ಗುರುತು ಅವಳ ಕನ್ನಡಿಗೆನ್ನೆಯಿಂದ ಮರೆಯಾಯಿತೇನು? ಯಾರಾದರೂ ಆ ಗುರುತನ್ನು ಕಂಡರೆ? ಅದು ಯಾರಿಗೂ ಕಾಣದಿರಲೆಂದು ಏನಾದರೂ ಅವಳು ಅವಕುಂಠನವತಿಯಾದಳೇನು? ಅವಳ ಚಿರನೂತನ ಉಷಃಸೌಂದರ್ಯವನ್ನು ಸುಂಗಬಂದ ಈ ಸೂರ್ಯೋದಯ ಛಾಯೆ ಯಾರ ಕಣ್ಣಿಗಾದರೂ ಬಿದ್ದಿತೆ? ತನ್ನ ಏಕಾಂತದಲ್ಲಿ ಅವಳು ಅತ್ತತ್ತು ಸುರಿಸಿದ ಕಂಬನಿಯ ಕರೆಯ ಗೆರೆ ಅವಳ ಕಣ್ಣಂಚಿನಲ್ಲಿ ಕಂಡೂ ಕಾಣದಂತಿದ್ದು ದನ್ನು ಯಾರಾದರೂ ಗುರುತಿಸಿದರೇನು? ಅವಳು ಇನ್ನೂ ಉಷೆಯಾಗಿಯೆ ಉಳಿದಳೆ, ಹಗಲಾಗಿ ಕರಗಿ ಬಾನ್ತುಂಬಿಕೊಂಡಳೆ? ಈ ಎಲ್ಲ ಠಾಕೂರರಂತಹ ಭಾವುಕ ಕವಿಗಾಗಿ ಕಾದಿದೆ.

ಸುಜನಾ

ಭಾರತದಲ್ಲಿ ದಾಸ್ಯ ಪದ್ಧತಿ

ಭಾರತೀಯರ ಪ್ರಾಚೀನ ಸಂಸ್ಕೃತಿ ಹಾಗೂ ಅದರ ವೈವಿಧ್ಯವನ್ನು ಕೂಲಂಕಷ ವಾಗಿ ಚರ್ಚಿಸಿದಲ್ಲಿ, ಅದೇ ಕಾಲಕ್ಕೆ ಬಾಳಿದ ಬ್ಯಾಬಿಲೋನ್, ಈಜಿಪ್ಟ್ ದೇಶ ಗಳ ನಾಗರಿಕತೆಗಿಂತಲೂ ಅದು ಶ್ರೇಷ್ಠವಿತ್ತೆಂದು ಸಿದ್ಧವಾಗುತ್ತದೆ. ಕ್ರಿ. ಪೂ. ೩೨೬ ರಲ್ಲಿ ಹಿಂದೂಸ್ಥಾನಕ್ಕೆ ದಂಡೆತ್ತಿ ಬಂದ ಅಲೆಗ್ಝಾಂಡರನ ಇತಿಹಾಸಕಾರನಾದ ಮೆಗಾಸ್ಥನೀಸನು ಗ್ರೀಕರಷ್ಟೇ ಶ್ರೇಷ್ಠ ಸಂಸ್ಕೃತಿಯುಳ್ಳ ಜನಾಂಗವು ಸಿಂಧೂತೀರ ದಲ್ಲಿ ವಾಸಿಸುತ್ತಿರುವುದನ್ನು ಕಂಡು ಬೆರಗಾಗಿದ್ದಾನೆ. ಬುದ್ಧ, ಶಂಕರ, ರಾಮಕೃಷ್ಣ ಮುಂತಾದ ಮಹಾ ವಿಭೂತಿಗಳಿಗೆ ಜನ್ಮವಿತ್ತ ಸಂಸ್ಕೃತಿ ಭಾರತ ಸಂಸ್ಕೃತಿ. ವೇದ ಉಪನಿಷತ್ತುಗಳ ತತ್ತ್ವಜ್ಞಾನವನ್ನು ಹೆತ್ತು ವಿಶ್ವದಲ್ಲಿ ಸ್ಫೂರ್ತಿಯನ್ನು ಉಂಟು ಮಾಡಿದ ಭೂಮಿ ಭಾರತ. ತತ್ತ್ವಜ್ಞಾನದಲ್ಲಿ ಭಾರತಕ್ಕಿರುವ ಸ್ಥಾನವು ಯಾವ ಪಾಶ್ಚಾತ್ಯ ರಾಷ್ಟ್ರಗಳಿಗೂ ಇಲ್ಲವೆಂದು ಸೊಫೆನ್ ಹಾರ್, ಬರ್ಗ್‌ಸನ್, ಥೋರೋ, ಕೈಸರಲಿಂಗ್, ಮುಂತಾದ ವಿದೇಶಿಯರೇ ಹೊಗಳಿದ್ದಾರೆ. ಆ ಕಾಲದ ಸಂಪತ್ತಿನ ವಿಷಯವಾಗಿ ಸಂಡರ್ಲಂಡರ ಅಭಿಪ್ರಾಯ ಹೀಗಿದೆ :

"ಭಾರತೀಯರು ತಮ್ಮ ವಿವಿಧ ಕೈಗಾರಿಕೆಗಳಿಂದಲೂ, ಉದ್ಯೋಗಗಳಿಂದಲೂ ಅಪಾರವಾದ ಸಂಪತ್ತನ್ನು ನಿರ್ಮಿಸಿದ್ದರು. ಜಗತ್ತಿನಲ್ಲೆಲ್ಲಾ ಕಲಾಕೃತಿಗಳಿಂದು ಹೆಸರುವಾಸಿಯಾದಂಥ, ಸುಖೋಪಭೋಗಕ್ಕೆ ಬೇಕಾಗುವ ಎಲ್ಲ ಬಗೆಯ ಬೆಲೆಯುಳ್ಳ ವಸ್ತು-ವಡವೆಗಳು ಹಿಂದುಸ್ಥಾನದಲ್ಲಿ ಬಹುಕಾಲದ ಹಿಂದೆಯೇ ನಿರ್ಮಾಣವಾಗು ತ್ತಿದ್ದವು. ಯೂರೋಪ್ ಅಥವಾ ಏಷಿಯಾದಲ್ಲಿ ಭಾರತದಲ್ಲಿದ್ದಷ್ಟು ಉಪಯುಕ್ತ ವಾದ ವಸ್ತು-ವಡವೆಗಳನ್ನು ನಿರ್ಮಿಸುವ ಉದ್ಯೋಗಗಳು ಯಾವ ರಾಷ್ಟ್ರದಲ್ಲಿಯೂ ಇದ್ದಿಲ್ಲ. . . . ಅವರ ಶಿಲ್ಪಕಲೆಯನ್ನಂತೂ, ಯಾರೂ ಸರಿಗಟ್ಟಲು ಸಾಧ್ಯವೇ ಇಲ್ಲ. ಸೌಂದರ್ಯದಲ್ಲಿ ಪ್ರಪಂಚದಲ್ಲಿಯ ಯಾವ ಕೃತಿಗಳಿಗೂ ಹಿಂದೆ ಬೀಳುವಂತಹುದಲ್ಲ. ಅವರ ಪ್ರತಿಯೊಂದು ಕೃತಿಯೂ ಅಷ್ಟೇ ಪ್ರಸಿದ್ಧವಾದುದು. ಧನಕನಕಗಳಿಂದ ಸಮೃದ್ಧರಾದ ವ್ಯಾಪಾರಸ್ಥರಿಂದಲೂ, ಶೆಟ್ಟಿಸಾವುಕಾರರಿಂದಲೂ ಪ್ರಸಿದ್ಧ ವಾದುದು."

ಇಂತಹ ಉಜ್ವಲ ಭಾರತದಲ್ಲಿಯೂ ಸಹ ಹಲಕೆಲವು ಆಸುರೀವೃತ್ತಿಗಳು ಆಚರಣೆಯಲ್ಲಿತ್ತೆಂದರೆ ನಂಬಲಸಾಧ್ಯವಾದ ಮಾತಾದೀತು ಹೆಣ್ಣು-ಹೊನ್ನುಗಳಿಗೆ

ಮಾನಮರ್ಯಾದೆಗಳನ್ನು ತೊರೆದ ಪ್ರಸಂಗಗಳು, ಮಾನವ ಮಾನವನೆಂಬುದನ್ನು ಮರೆತು ಮಾನವ ಜಾತಿಯನ್ನೇ ಮಾರುಕಟ್ಟೆಯಲ್ಲಿ ಮಾರುತ್ತಿದ್ದ ದೃಶ್ಯಗಳನ್ನು ಕಂಡು ಅಚ್ಚರಿಯೇ ಆದೀತು. ಆದರೆ, ಸತ್ಯದ ಜ್ಯೋತಿಯಲ್ಲಿ ವಾಸ್ತವಿಕತೆಯನ್ನು ವಿವೇಚನೆಮಾಡಿದಲ್ಲಿ 'ಮಾನವನ ಕ್ರಯ-ವಿಕ್ರಯ' ಭಾರತಕ್ಕೆ ಹೊಸತಲ್ಲ ಎಂಬುದು ಖಚಿತವಾಗುತ್ತದೆ. ಅನಾದಿಕಾಲದಿಂದಲೂ ಬೆಳೆದು ಬಂದ ಈ ಪದ್ಧತಿ ಭಾರತದ ಇತಿಹಾಸದಲ್ಲಿ ಸಾಕಷ್ಟು ಸ್ಥಳವನ್ನು ಆಕ್ರಮಿಸಿಕೊಂಡಿದೆ.

ಭಾರತಕ್ಕೆ ಅತಿ ಪ್ರಾಚೀನ ನಾಗರಿಕತೆಯೆಂದರೆ ಸಿಂಧೂ ನದೀ ತೀರದ ನಾಗರಿಕತೆ. ಅತಿ ಪ್ರಾಚೀನವಾದ ಆ ನಾಗರಿಕತೆಯಲ್ಲೇ ಭಾರತ ದೇಶವು ವ್ಯಾಪಾರವನ್ನು ಬೆಳೆಸಿಕೊಂಡು ದೂರದಲ್ಲಿದ್ದ ಅರಬ್, ಇರಾನ್, ಈಜಿಪ್ಟ್, ಆಫ್ರಿಕಾ ಮುಂತಾದ ದೇಶಗಳೊಡನೆ ಸಂಪರ್ಕವನ್ನು ಕಲ್ಪಿಸಿಕೊಂಡಿದ್ದಿತು. ಆಗಿನ ಕಾಲದಲ್ಲಿ ಆ ದೇಶಗಳಲ್ಲಿ ದಾಸ್ಯಪದ್ಧತಿಯು ಜಾರಿಯಲ್ಲಿತ್ತೆಂಬುದು ಖಚಿತವಾಗಿದೆ. ಪ್ರೊ|| ಜಾಡ್ರನ್ ಚಾಯಿಲ್ಡರು ವಿವಿಧ ದೇಶಗಳ ದಾಸ್ಯವನ್ನು ಚರ್ಚಿಸುತ್ತ "೫,೧೫,೦೦೦ ನಾಗರಿಕರಿದ್ದ ಅಥೆನ್ಸ್ ನಗರದಲ್ಲಿ ೩,೬೫,೦೦೦ ಜನರು ಗುಲಾಮರಿದ್ದರು. ಇಟಲಿ ಜನಗಣಿಕೆಯಲ್ಲಿ ಶೇ. ೪೬ ಗುಲಾಮರಿದ್ದರು. ಮೆಸಪೊಟೇಮಿಯಾದ ಜನಸಂಖ್ಯೆಯಲ್ಲಿ ಶೇ. ೨೭ ಸ್ತ್ರೀಯರೇ ಗುಲಾಮರಿದ್ದರು" ಎಂದು ಹೇಳುವ ವಾಕ್ಯಗಳೇ ಅದಕ್ಕೆ ಸಾಕ್ಷಿ. ಈ ರೀತಿ ಪರದೇಶಗಳಲ್ಲಿ ದಾಸ್ಯವು ಜಾರಿಯಲ್ಲಿದ್ದು ಅನ್ಯದೇಶಗಳಿಗೂ ಸಹ ಹರಡಲು **ಯೋಗದಾ**ನವನ್ನು ನೀಡಿತ್ತು. ಭಾರತವು ವ್ಯಾಪಾರದಲ್ಲಿ ಮುಂದುವರಿದಿದ್ದು, ಆ ದೇಶಗಳ ಸಂಪರ್ಕಕ್ಕೆ ಬಂದು ದಾಸ್ಯದ ಜಾಡ್ಯವನ್ನು ಅಂಟಿಸಿಕೊಂಡಿದ್ದರೆ ಆಶ್ಚರ್ಯವೇನು !

ಭಾರತದಲ್ಲಿನ ದಾಸ್ಯದ ಪ್ರಥಮ ಉಲ್ಲೇಖ ಸಿಂಧೂನದಿಯ ಬಯಲಿನಲ್ಲಿ ದೊರೆತಿರುವ ಒಂದು ಮುದ್ರೆಯನ್ನು ಅವಲಂಬಿಸಿದೆ. ಜಾನ್ ಮಾರ್ಶಲರು ಆ ಮುದ್ರೆಯಲ್ಲಿನ ಅಂಕಿತ ಚಿತ್ರವನ್ನು ಈ ರೀತಿ ವಿವರಿಸುತ್ತಾರೆ: "ಓರ್ವ ನಗ್ನಸ್ತ್ರೀ ತಲೆಯನ್ನು ಕೆದರಿಕೊಂಡು, ಎರಡು ಕೈಗಳನ್ನೂ ಮೇಲೆತ್ತಿ ಕೂಗಿಕೊಳ್ಳುತ್ತಿರುವಂತೆಯೂ, ಅವಳ ಹತ್ತಿರದಲ್ಲೇ ಒಬ್ಬ ಮನುಷ್ಯನು ದಂಡವನ್ನೋ ಅಥವಾ ಖಡ್ಗವನ್ನೋ ಹಿಡಿದು ಅವಳನ್ನು ದಂಡಿಸುತ್ತಿರುವಂತಿದೆ. ಆ ಸ್ತ್ರೀಯ ನೋಟ ಮತ್ತು ಹಾವ ಭಾವಗಳು ದೈನ್ಯದಿಂದ ಭಿಕ್ಷೆ ಬೇಡುವಂತಿದೆ." ಕ್ರಿ. ಪೂ. ೩೫೦೦ ರ ಆ ಮುದ್ರೆಯ ಮೇಲಿನ ಅಂಕಿತ ಚಿತ್ರ ದಾಸ್ಯ ಪದ್ಧತಿಯ ಕುರುಹಾಗಿರಬಹುದೆಂದು ಅನುಮಾನಿಸಲಾಗಿದೆ. ಈ ಅನುಮಾನವನ್ನು ಸ್ವಲ್ಪ ಮಟ್ಟಿಗೆ ಪರಿಹಾರಮಾಡಲು ಸ್ಟುಅರ್ಟ್ ಪಿಗೋಟ್‌ರ ಕೆಲವು ಅಭಿಪ್ರಾಯಗಳು ಬೆಂಬಲವೀಯುತ್ತವೆ.

ಪಿಗೋೀಟರು ತಮ್ಮ Pre-Hitstoric India ದಲ್ಲಿ ಸಮೆರ ಮತ್ತು ಭಾರತಗಳ ನಡುವೆ ಕನ್ಯೆಯರ ವ್ಯಾಪಾರವಾಗುತ್ತಿತ್ತೆಂದೂ, ಈ ವಿಕ್ರಯಿತ ಕನ್ಯೆಯರು ಒಂಟೆಯ ಮೇಲೆ ಬರುತ್ತಿದ್ದ ಯಾತ್ರಿಕರ ಜೊತೆಯಲ್ಲಿ ಹೊರಟು ಕಣಿವೆ ಮಾರ್ಗವಾಗಿ ಹರಪ್ಪಾ ಮತ್ತು ಕುಲ್ಲಿಗಳಿಗೆ ಬರುತ್ತಿದ್ದರೆಂತಲೂ, ಭಾರತದ ವ್ಯಾಪಾರಸ್ಥರು ಮೆಸಪೊಟೇಮಿಯಾದಿಂದ ಹತ್ತಿ ತರುವುದರ ಬದಲು ನರ್ತಕಿಯರನ್ನು ಕೊಂಡು ತರುತ್ತಿದ್ದರೆಂದೂ ತಿಳಿಸುತ್ತಾರೆ. ಹೋಲ್ಟರರೂ ಸಹ ಇದನ್ನೇ ಪ್ರತಿಪಾದಿಸುತ್ತ "ಸಿಂಧೂನದಿಯ ನಾಗರಿಕತೆಯಲ್ಲಿ ಪ್ರತಿಯೊಂದು ಧನಿಕ ಗೃಹದಲ್ಲೂ ಅನೇಕ ದಾಸ ದಾಸಿಯರು ಇರುತ್ತಿದ್ದರು. ಅವರುಗಳನ್ನು ನೀರು ತುಂಬುವುದಕ್ಕೆ, ಮನೆಕಟ್ಟುವುದಕ್ಕೆ ಮತ್ತು ಹೊಲ ಗದ್ದೆಗಳ ಕೆಲಸಕ್ಕೆ ನಿಯಮಿಸುತ್ತಿದ್ದರು" ಎನ್ನುತ್ತಾರೆ. ಪಿಗೋೀಟರ ವಾಕ್ಯಗಳಿಂದ ವಿದೇಶದಿಂದ ದಾಸಿಯರನ್ನು ಕೊಂಡುತರುವ ಉಲ್ಲೇಖವೇನೋ ಸಿಕ್ಕುತ್ತದೆ. ಆದರೆ ದಾಸ ದಾಸಿಯರ ವಿಕ್ರಯ ಸಿಂಧೂನದಿಯ ಬಯಲಿನಲ್ಲೇ ನಡೆಯುತ್ತಿತ್ತೆಂಬುದಕ್ಕೆ ಆಧಾರವಿಲ್ಲ. ಹೋಲ್ಟರರ ವಾಕ್ಯಗಳಿಂದ ಸಿಂಧೂನದಿಯ ಬಯಲಿನಲ್ಲಿ ದಾಸದಾಸಿಯರ ಕ್ರಯ-ವಿಕ್ರಯದ ಅಂಶಗಳು ಅಂಕಿತವಿಲ್ಲದಿದ್ದರೂ ಸಹ, ಅಲ್ಲಿ ದಾಸ ದಾಸಿಯರ ಪಂಗಡವಿತ್ತೆಂಬುದಕ್ಕೆ ಸಾಕಷ್ಟು ಪ್ರಮಾಣಗಳು ಸಿಗುತ್ತವೆ. ಹೋಲ್ಟರರು 'ಅಲ್ಲಿಯ ಧನಿಕರು ದಾಸ ದಾಸಿಯರನ್ನು ಪೂರ್ಣನಗ್ನವಾಗಿಡುತ್ತಿದ್ದರು' ಎನ್ನುತ್ತಾರೆ. ಈ ಮಾತಿನಿಂದ 'ಮನೆಗೆಲಸಕ್ಕೋಸ್ಕರ ನಿಯಮಿಸಿದ ದಾಸಿಯರಿಗೆ ಕಾಮತೃಷೆಯನ್ನು ಪೂರ್ಣಗೊಳಿಸುವ ಕೆಲಸವನ್ನೂ ಅಂಟಿಸಿದ್ದರು' ಎಂಬುದಾಗಿ ಊಹೆ ಮಾಡಬಹುದು. ಹೋಲ್ಟರರು 'ನಗ್ನವಾಗಿಡುತ್ತಿದ್ದರು' ಎಂಬ ಅಂಶವನ್ನು ಅಲ್ಲಿ ಸಿಕ್ಕಿರುವ ಮುದ್ರೆಗಳಿಂದ ಅನುಮಾನಿಸಿ ಹೇಳಿರಬಹುದು. ಆದರೆ ಆ ನಾಗರಿಕತೆಯಲ್ಲಿ ಸಿಕ್ಕಿರುವ ಪ್ರಾಯಃ ಎಲ್ಲಾ ಮುದ್ರೆಗಳೂ ನಗ್ನವಾದ ಆಕೃತಿಯನ್ನೇ ಹೊಂದಿರುವುದರಿಂದ ದಾಸ ದಾಸಿಯರನ್ನು ನಗ್ನವಾಗಿಡುತ್ತಿದ್ದರೆಂದು ಹೇಳಲಾಗುವುದಿಲ್ಲ.

ಏಕೆಂದರೆ, ಅಲ್ಲಿ ದೊರಕಿರುವ ಅನೇಕ ಮುದ್ರೆಯ ಚಿತ್ರಗಳು ನಗ್ನವಾಗಿದ್ದರೂ ಸಹ, ಅದನ್ನು ದೇವತೆಯ ರೂಪದಲ್ಲಿ ಅಂಕಿಸಿರಬಹುದೆಂಬುದಕ್ಕೆ ಅಲ್ಲಿ ದೊರೆತ ಒಂದು ಭೂದೇವಿಯ ಮುದ್ರೆಯೇ ಪ್ರಮಾಣ. ಆ ಮುದ್ರೆಯಲ್ಲಿ ಚಿತ್ರಿತವಾಗಿರುವ ಓರ್ವ ನಗ್ನಸ್ತ್ರೀಯ ಚಿತ್ರ ತಲೆಕೆಳಗಾಗಿ ಮಲಗಿರುವಂತೆಯೂ, ಅವಳ ಬಸಿರಿನಿಂದ ಒಂದು ಗಿಡವು ಬೆಳೆದು ಬಂದಂತೆ ಇದೆ. ಬಸಿರಿನಿಂದ ಉದ್ಭವಿಸಿದ ಗಿಡದಿಂದ ಯಾವುದೋ ದೇವಿಯ ರೂಪನ್ನು ಕಲ್ಪಿಸಿ ಕಡೆದಿರಬಹುದು ಎಂದು ಊಹಿಸಿ, ಭೂದೇವಿಯೇ ಇರಬಹುದೆಂದು ಬಲ್ಲವರು ಅರುಹಿದ್ದಾರೆ. ಇದರಿಂದ ಆಗಿನ ಕಾಲದಲ್ಲಿ ದಾಸಿಯರನ್ನು

ನಗ್ನವಾಗಿಡುತ್ತಿದ್ದರೆಂಬುದು ಅಷ್ಟು ಯುಕ್ತವಾಗಿ ಕಾಣಿಸದಿದ್ದರೂ ಮುಂದೆ ಕ್ರಿ. ಪೂ. ೫ನೇ ಶತಮಾನದಲ್ಲಿ ಕೌಟಿಲ್ಯನು ತನ್ನ ಅರ್ಥಶಾಸ್ತ್ರದಲ್ಲಿ ದಾಸಿಯರನ್ನು ನಗ್ನವಾಗಿಡಬಾರದೆಂತಲೂ, ಅವರನ್ನು ಆದಷ್ಟು ಕಡಿಮೆ ದಂಡಿಸಬೇಕೆಂತಲೂ ಹೇಳಿರುವುದರಿಂದ ಜಾನ್ ಮಾರ್ಶಲ್ಲರ ಮತ್ತು ಹೋಲ್ಟರ ಅಭಿಪ್ರಾಯಗಳು ಯುಕ್ತವಾದುವೆಂದು ಒಪ್ಪಿಕೊಳ್ಳಬೇಕಾಗುವುದು.

ಭಾರತದ ವೇದಗಳಲ್ಲಿ ಅತ್ಯಂತ ಪ್ರಾಚೀನ ವೇದವೆನಿಸಿಕೊಂಡ ಋಗ್ವೇದದಲ್ಲೂ ಸಹ ದಾಸದಾಸಿಯರನ್ನು ದಕ್ಷಿಣೆಯ ರೂಪದಲ್ಲಿ ಕೊಟ್ಟಂತೆ ಹೇಳಿದೆ. ಡಾ|| ತ್ರಿಪಾಟಿ ಯವರು ತಮ್ಮ *History of Asiatic India* ದಲ್ಲಿ 'ದಸ್ಯೂ ಅಥವಾ ದಾಸರು ದ್ರಾವಿಡರಾಗಿದ್ದರು. ಇವರು ಭಾರತದ ಒಂದು ಭಾಗದಲ್ಲಿ ವಾಸವಾಗಿದ್ದರು. ಅವರ ಮೇಲೆ ಆರ್ಯರು ತಮ್ಮ ಅಧಿಕಾರ ಚಲಾಯಿಸುತ್ತಿದ್ದರು. ದ್ರಾವಿಡರು ತಮ್ಮ ಭೂಮಿಗಾಗಿ ಕಾದಾಡಿ ಜೀವ ಬಿಟ್ಟರು. ದ್ರಾವಿಡರ ದುರ್ಗಗಳನ್ನು ತಮ್ಮ ವಶಪಡಿಸಿಕೊಂಡಾಗ ಜೀವಂತವಾಗಿ ಉಳಿದಿದ್ದವರನ್ನು ತಮ್ಮ ಗುಲಾಮರನ್ನಾಗಿ ಪರಿಗಣಿಸಿ ಯಜ್ಞಸಮಯದಲ್ಲಿ ಪುರೋಹಿತರಿಗೆ ಸಂಭಾವನಾ ರೂಪದಲ್ಲಿ ಕೊಡುತ್ತಿದ್ದರು. ಈ ದಾಸಿಯರಿಂದಲೇ ಕಕ್ಷೀವನ, ಕಶ್ಯಪ ಮುಂತಾದ ಋಷಿಗಳು ಜನ್ಮವೆತ್ತಿದರು' ಎಂದು ಹೇಳುತ್ತಾರೆ. ಈ ರೀತಿ ವೈದಿಕ ಯುಗದಲ್ಲಿ ಯುದ್ಧದಲ್ಲಿ ಸೋತವರನ್ನು ಮತ್ತು ಅವರ ಸ್ತ್ರೀಯರನ್ನು ಗುಲಾಮರನ್ನಾಗಿ ಪರಿಗಣಿಸುತ್ತಿದ್ದರು. ಇದು ಒಂದು ಬಗೆಯದಾದರೆ ಇನ್ನೊಂದು ಬಗೆಯದು ಡಾ|| ಎ. ಸಿ. ದಾಸ್ ರವರು Rigvedic Culture ನಲ್ಲಿ (೨೫೭-೮) ಪಂಕ್ತಿಗಳು :

"ಆರ್ಯರಾಗಿದ್ದ ಪಣಿ ಎಂಬುವರು ಇಟಲಿ, ಯುನಾನ್, ಇತ್ಯಾದಿ ದೇಶಗಳಿಂದ ಸ್ತ್ರೀಯರನ್ನು ಲೂಟಿಮಾಡಿ ತೆಗೆದುಕೊಂಡು ಬರುತ್ತಿದ್ದರೆಂದೂ, ಮಧ್ಯ ಏಷ್ಯಾ ಮತ್ತು ಭಾರತದಲ್ಲಿ ಮಾರುತ್ತಿದ್ದರೆಂದೂ, ಇಲ್ಲಿ ವಿದೇಶ ಸ್ತ್ರೀಯರಿಗೆ ಒಳ್ಳೆ ಬೆಲೆ ಸಿಗುತ್ತಿತ್ತೆಂದೂ" ತಿಳಿಸಿದ್ದಾರೆ. ಇವಲ್ಲದೆ, ಡಾ|| ತ್ರಿಪಾಟಿ ಯವರ ಅಭಿಪ್ರಾಯವನ್ನು ಹೋಲುವಂತೆ, ಆರ್ಯರು ತಮ್ಮ ಸೇನೆಯ ಜೊತೆಯಲ್ಲಿ ಅನಾರ್ಯರ ಊರುಗಳನ್ನು ಮುತ್ತಿ ಸ್ತ್ರೀ ಪುರುಷರನ್ನು ಹಿಡಿದುತಂದು ಪುರುಷರನ್ನು ಬೇಸಾಯ ಮಾಡಿಸಲೂ ಮತ್ತು ಸ್ತ್ರೀಯರನ್ನು ವೇಶ್ಯೆಯ ರೂಪದಲ್ಲೂ ಇಟ್ಟುಕೊಂಡು ಯಜ್ಞಯಾಗಾದಿಗಳಲ್ಲಿ ದಾನ ಮಾಡುತ್ತಿದ್ದರು ಎಂದು, ಡಾ|| ದಾಸ್‌ರವರೂ ವ್ಯಕ್ತಪಡಿಸುತ್ತಾರೆ. ಈ ರೀತಿ ವೈದಿಕ ಕಾಲದಲ್ಲೂ ಸಹ ದಾಸ ದಾಸಿಯರ ವ್ಯಾಪಾರವಿತ್ತೆಂದು ಅನುಮಾನಿಸಲು ಆಧಾರಗಳಿವೆ.

ದಾಸ ದಾಸಿಯರ ದಾನಗಳು ಯಜ್ಞಗಳಲ್ಲಿ ನಡೆಯುತ್ತಿತ್ತೆಂಬುದೇನೋ ಒಪ್ಪಿಕೊಳ್ಳುವ ಮಾತು. ಆದರೆ, ಧರ್ಮ ಮತ್ತು ಕರ್ಮದ ಸ್ಥಾಪಕರು, ಸಾತ್ತ್ವಿಕ ಮತ್ತು ಬ್ರಹ್ಮಚರ್ಯ ಜೀವನವನ್ನು ವ್ಯತೀತ ಮಾಡುತ್ತಿದ್ದ ಋಷಿಮುನಿಗಳೇ ದಾಸಿಯರನ್ನು ದಾನರೂಪವಾಗಿ ಸ್ವೀಕರಿಸಿ, ಅವರಿಂದ ಅವೈಧ್ಯ ಸಂತಾನ ಉತ್ಪನ್ನ ಮಾಡುತ್ತಿದ್ದರೆಂಬುದು ಅಷ್ಟು ಸಮ್ಮತವಾಗಿ ಕಂಡುಬರುವುದಿಲ್ಲ. ಆದರೂ ಒಬ್ಬೊಬ್ಬ ಪುರೋಹಿತರ ಬಳಿಯಲ್ಲೂ ೪೦ ರಿಂದ ೫೦ ರ ವರೆಗೆ ದಾಸಿಯರಿದ್ದರೆಂಬುದಕ್ಕೆ ಉಲ್ಲಿಖಿತ ಆಧಾರಗಳಿವೆ. ಡಾ|| ಎಸ್. ಶ್ರೀಕಂಠಶಾಸ್ತ್ರಿಗಳು ತಮ್ಮ 'ಭಾರತೀಯ ಸಂಸ್ಕೃತಿ'ಯಲ್ಲಿ ಹೇಳಿರುವ—'ತನಗೆ ಅಧೀನರಾದ ಗುಲಾಮರನ್ನು ದಾನಕೊಡಲು ಅವನಿಗೆ ಹಕ್ಕಿಲ್ಲವೆಂದು ಜೈಮಿನಿಯು ಹೇಳಿರುವನು' ಎಂಬ ವಾಕ್ಯವೂ ಗಮನಾರ್ಹವಾದದ್ದೇ. ಇದರಿಂದ ವೈದಿಕಕಾಲದಲ್ಲಿ ದಾಸ್ಯವಿತ್ತೆಂದೂ ಮತ್ತು ಶರಣಾಗತರಾದವರನ್ನು ಗುಲಾಮರನ್ನಾಗಿ ಪರಿಗಣಿಸುತ್ತಿದ್ದರು ಎಂದೂ ತಿಳಿದುಬರುತ್ತದೆ. ಗುಲಾಮ ಸ್ತ್ರೀಯರನ್ನು ವೇಶ್ಯೆಯರನ್ನಾಗಿಟ್ಟುಕೊಳ್ಳುತ್ತಿದ್ದರೆಂಬದಕ್ಕೆ ನಮ್ಮ ಪ್ರಾಚೀನ ಸಂಸ್ಕೃತಿಯಲ್ಲಿ ವೇಶ್ಯೆಯರಿಗೆ ಸ್ಥಾನವಿತ್ತೆಂಬುದೇ ತಿಳಿಸುತ್ತದೆ. ಭಾರತದಲ್ಲಿ ಸ್ತ್ರೀಯರನ್ನು ಸ್ವೀಯ ಪರಕೀಯ ಮತ್ತು ಸಾಧಾರಣ ಎಂದು ವಿಭಾಗಿಸಿ, ಸಾಧಾರಣ ಸ್ತ್ರೀಯರಲ್ಲಿ ಗಣಿಕಾ, ವೇಶ್ಯಾ, ಅಭಿಸಾರಿಕಾ ಎಂಬ ಭೇದಗಳನ್ನು ಕಲ್ಪಿಸಿದ್ದರು. ಈ ವೇಶ್ಯಾ ಸ್ತ್ರೀಯರೇ ಅಗ್ನಿಯ ಸುತ್ತಲೂ ನರ್ತನ ಮಾಡುತ್ತಿದ್ದರು. ಇದರಿಂದ ವೈದಿಕಯುಗದಲ್ಲೂ ದಾಸ್ಯವಿದ್ದು ಸಿಂಧೂ ನಾಗರಿಕತೆಗಿಂತ ಅದು ಸುಧಾರಿಸಿತ್ತೆಂದು ಗೊತ್ತಾಗುತ್ತದೆ.

ಉತ್ತರ ವೈದಿಕ ಕಾಲದಲ್ಲಿ ದಾಸ್ಯದ ವರ್ಣನೆಯು ಮನುಚಕ್ರವರ್ತಿಯ ಸ್ಮೃತಿಗಳ ವಿವರಣೆಗಳಿಂದ ವಿದಿತವಾಗುತ್ತದೆ. ದಾಸರನ್ನು ಮಾರಲು ಒಂದು ಪೇಟೆ ಇತ್ತೆಂದೂ ಕೊಂಡ ದಾಸಿಗೆ ಸಂತಾನವಿದ್ದರೆ ಆ ಸಂತಾನವು ಮಾಲಿಕನ ವಶದಲ್ಲಿ ಬಂದುಬಿಡುತ್ತಿತ್ತೆಂದೂ ಹೇಳಿರುವನು. (ಮನುಸ್ಮೃತಿ : ೩೩೮, ೪೨೪). ಮನುಸ್ಮೃತಿಯ ಆಧಾರದಮೇಲೆ ದಾಸರನ್ನು ಏಳು ವಿಧವಾಗಿ ವಿಂಗಡಿಸಲಾಗಿತ್ತು. ಮನುವಿನ ಪ್ರಕಾರ ದಾಸರೆಂದರೆ ಜೀವನಪರ್ಯಂತ ದಾಸರಾಗಿದ್ದು, ಯಾವ ರೀತಿಯಿಂದಲೂ ಸ್ವತಂತ್ರರಾಗಿರದಿದ್ದವರು (೮. ೪೨೬) ದೇಶದಲ್ಲಿ ಅಕಾಲವುಂಟಾದರೆ ತಮ್ಮ ಜೀವಿಕೆಗೋಸ್ಕರ ತಮ್ಮನ್ನು ತಾವೇ ಮಾರಿಕೊಂಡು ಬಿಡುತ್ತಿದ್ದರು. ಇಂತಹ ಸಮಯದಲ್ಲಿ ಅತ್ಯಂತ ಕಡಿಮೆ ಬೆಲೆಯಲ್ಲಿ ದಾಸ-ದಾಸಿಯರು ಸಿಕ್ಕುತ್ತಿದ್ದರು. ಹೀಗೆ ಕೊಂಡ ದಾಸ-ದಾಸಿಯರನ್ನೂ ಜೂಜಿನಲ್ಲಿ ಪಂದ್ಯದಲ್ಲಿ ಇಡುತ್ತಿದ್ದರು. ಇದರ ಸಮರ್ಥನೆಗೆ ಧರ್ಮರಾಯನು ಜೂಜಿನಲ್ಲಿ ದಾಸಿಯರನ್ನು ಪಣವಿಟ್ಟ ಪ್ರಸಂಗಗಳೇ

ಸಾಕು. ಮಹಾಭಾರತದಲ್ಲಿ ಅಂಕಿತವಾಗಿರುವಂತೆ (ಸಭಾಪರ್ವ) ಗುಲಾಮರ ಬಲಿ ಕೂಡ ಪ್ರಚಾರದಲ್ಲಿತ್ತು. ಗಿರಿವ್ರಜ ದುರ್ಗದಲ್ಲಿ ಸಾವಿರಾರು ದಾಸ ದಾಸಿಯರನ್ನು ಬಲಿ ಕೊಡಲೋಸುಗವೇ ಇಟ್ಟಿದ್ದರು. ಇವರನ್ನು ಶ್ರೀಕೃಷ್ಣನು ಬಿಡುಗಡೆ ಮಾಡಿದ ವಿಷಯ ಎಲ್ಲರಿಗೂ ತಿಳಿದದ್ದೇ ಆಗಿದೆ. ರಾಮಾಯಣದಲ್ಲೂ ಕೂಡ ಅಯೋಧ್ಯೆ ಮತ್ತು ಲಂಕೆಯಲ್ಲಿ ಸಾವಿರಾರು ದಾಸದಾಸಿಯರಿದ್ದ ವೃತ್ತಾಂತ ತಿಳಿಯುತ್ತದೆ. ಇವೆಲ್ಲವನ್ನು ಕಂಡ ಮೇಲೆ ಉತ್ತರವೈದಿಕ ಕಾಲದಲ್ಲೂ ದಾಸ್ಯಪದ್ಧತಿ ಇತ್ತೆಂಬುದನ್ನು ಒಪ್ಪಬೇಕಾಗುತ್ತದೆ.

ನಾರದ ಸ್ಮೃತಿಯಲ್ಲಿ ಕೂಡ ಕನ್ಯೆಯರ ಮಾರಾಟದ ವಿಷಯ ಅಂಕಿತವಾಗಿದೆ. ಬಳುವಳಿಕೊಡಲು ಅಸಮರ್ಥರಾದ ಮಾತಾಪಿತೃಗಳು ಕನ್ಯೆಯರನ್ನು ಮಾರಿಬಿಡುತ್ತಿದ್ದರು. ಈ ಆಚಾರವನ್ನು ಟೀಕಿಸಿ 'ಕನ್ಯೆಯರನ್ನು ವಿಕ್ರಯ ಮಾಡಕೂಡದು' ಎಂದು ನಾರದಸ್ಮೃತಿಯಲ್ಲಿ ಹೇಳಲಾಗಿದೆ. ಪಂಜಾಬಿನಲ್ಲಿ ನಡೆಯುತ್ತಿದ್ದ ವಿವಾಹಯೋಗ್ಯ ಸ್ತ್ರೀಯರ ಕ್ರಯ ವಿಕ್ರಯವನ್ನು ಮೆಗಾಸ್ಥನೀಸನು ಟೀಕಿಸಿದ್ದರೂ ಸಹ, ಭರತಖಂಡದಲ್ಲಿ ದಾಸ್ಯಪದ್ಧತಿಯಿತ್ತೆಂಬುದನ್ನು ಅವನು ಪ್ರತಿಪಾದಿಸಿಲ್ಲ. ಇದಕ್ಕೆ ಕಾರಣವನ್ನು ಕೊಡುತ್ತಾ ಪಂಡಿತ್ ನೆಹರೂರವರು ತಮ್ಮ Discovery of India ದಲ್ಲಿ ಈ ರೀತಿ ಹೇಳುತ್ತಾರೆ :

"But in this he was wrong as there were certainly domestic slaves, and there are references in Indian books of the period to improving the lot of the slaves. It is clear, however, that there was no large-scale slavery and no slave gangs for purposes, as were common in many countries then, and this may have led Megasthenes to believe that slavery was completely absent."

ಅನ್ಯದೇಶಗಳಲ್ಲಿದ್ದಂತೆ ಭಾರತದಲ್ಲಿ ದಾಸ್ಯಪದ್ಧತಿಯು ಉಲ್ಬಣ ಅವಸ್ಥೆಗೆ ಏರಿರದ ಕಾರಣ ಮೆಗಾಸ್ಥನೀಸನು ನಿರಾಕರಿಸಿರಬಹುದು. ಆದರೂ ದಾಸ್ಯಪದ್ಧತಿಯು ಪ್ರಚಲಿತವಾಗಿತ್ತೆಂಬುದಕ್ಕೆ ನಿದರ್ಶನಗಳಿವೆ.

ಕ್ರಿ. ಪೂ. ೩ ರಿಂದ ೫ ನೇ ಶತಮಾನದವರೆಗೆ ಬುದ್ಧಕಾಲೀನ ಭಾರತದಲ್ಲೂ ದಾಸ್ಯವಿತ್ತೆಂಬುದಕ್ಕೆ ಆಧಾರಗಳು ದೊರೆತಿವೆ. ಡೇವಿಸ್‌ರವರ "Dialogues of Buddha" ಎಂಬ ಗ್ರಂಥದಲ್ಲಿ ಬುದ್ಧನ ಕಾಲದಲ್ಲಿದ್ದ ದಾಸ್ಯಪದ್ಧತಿಯ ವಿಷಯಗಳು ಅಡಗಿವೆ. ಇನ್ನು, ಜಾತಕಕಾಲದಲ್ಲೂ ರಾಜರುಗಳು ಅಪರಾಧಿಗಳನ್ನು ದಂಡಿಸುವ ರೂಪದಲ್ಲಿ ವಿಕ್ರಯಿಸಿಬಿಡುತ್ತಿದ್ದರು. ಈ ಅಪರಾಧಿಗಳು ಗುಲಾಮರಾಗಿ ತಮ್ಮ ಜೀವನ ಕಳೆಯುತ್ತಿದ್ದರು ಎಂಬ ಉಲ್ಲೇಖಗಳು ದಾಸ್ಯಪದ್ಧತಿಗೆ ಬೆಂಬಲವಾಗಿವೆ.

ಬೌದ್ಧಗ್ರಂಥವಾದ 'ವಿನಯಸೂತ್ರ'ದಲ್ಲೂ ನಿಸ್ಸಹಾಯದಾಸರ ಉಲ್ಲೇಖವಿದೆ. ಅವರು ತಮ್ಮನ್ನು ತಾವೇ ವಿಕ್ರಯಿಸಿಕೊಂಡು ಬಿಡುತ್ತಿದ್ದರು.

ಶಂಕು ಜಾತಕದಲ್ಲಿ ಬ್ರಾಹ್ಮಣನೋರ್ವನು ವ್ಯಾಪಾರ ಮಾಡುವ ಅನೇಕ ಸರಕುಗಳ ಜೊತೆಗೆ ದಾಸ ದಾಸಿಯರನ್ನು ಹಡಗಿನಲ್ಲಿ ತಂದ ಎಂಬ ಒಂದು ಕಥೆ ಇದೆ. ಇದರಿಂದ ಆ ಕಾಲದಲ್ಲೂ ದಾಸ ದಾಸಿಯರ ಮಾರಾಟವಾಗುತ್ತಿತ್ತೆಂದು ವಿದಿತವಾಗುತ್ತಿದೆ. ಡಾ|| ಮೋತೀಚಂದ್‌ರವರು 'ತಿಬೆಟ್ ಮತ್ತು ಅದರ ಗಡಿಯಲ್ಲಿರುವ ಪ್ರಾಂತಗಳಲ್ಲೂ ಮತ್ತು ಅಸ್ಸಾಂ ಮತ್ತು ಸುವರ್ಣ ಭೂಮಿಗಳಲ್ಲಿ (ಬರ್ಮದಲ್ಲಿ) ಕ್ರಯ ವಿಕ್ರಯವಾಗುತ್ತಿತ್ತು' ಎಂದು ಹೇಳುತ್ತಾರೆ. ಇದಲ್ಲದೆ 'ಅಂತಗಡದಾಸ್' ಎಂಬ ಗ್ರಂಥದಿಂದ ಸೋಮಲಿದ್ವೀಪ, ಯುನಾನ್, ಸಿಂಹಳ, ಅರಬ್ ಮತ್ತು ಪಾರಸೀ ಇತ್ಯಾದಿ ದೇಶಗಳಿಂದ ದಾಸ ದಾಸಿಯರು ಬರುತ್ತಿದ್ದರೆಂದೂ, ಈ ದಾಸಿಯರು ತಮ್ಮ ದೇಶಕ್ಕೆ ಅನುಗುಣವಾದ ಬಟ್ಟೆಗಳನ್ನು ಧರಿಸುತ್ತಿದ್ದರೆಂದೂ ಮತ್ತು ಇಲ್ಲಿನ ಭಾಷೆಯ ಜ್ಞಾನವಿಲ್ಲದ್ದರಿಂದ ಕೇವಲ ಸನ್ನೆಗಳ ಮೂಲಕ ಮಾತನಾಡುತ್ತಿದ್ದರೆಂದೂ ತಿಳಿದು ಬರುತ್ತದೆ. ದಕ್ಷಿಣಭಾರತದ 'ಕನಕಸಭೈ' ಎಂಬ ಗ್ರಂಥದಿಂದ ತತ್ಕಾಲೀನ ಯುಗದ ದಾಸ್ಯಪದ್ಧತಿಯ ಒಂದು ತುಣುಕು ಸಿಗುತ್ತದೆ. ರಾಜರುಗಳು ವಿದೇಶದಿಂದ ಪಾನೀಯವನ್ನು ತರಿಸುವುದರ ಜೊತೆಗೆ ಸ್ತ್ರೀಯರನ್ನೂ ತರಿಸುತ್ತಿದ್ದ ವಿಷಯವು ಆ ಗ್ರಂಥದಲ್ಲಿ ಸಿಗುತ್ತದೆ. ಬೌದ್ಧಸಾಹಿತ್ಯದಲ್ಲಿ ವಿರುದ್ಧಕನಿಗೂ ದಾಸಿಯ ಪುತ್ರನೆಂದೇ ಹೇಳಿರುತ್ತೆ. ಅಂದಮೇಲೆ, ಬೌದ್ಧಕಾಲಕ್ಕೂ ಈ ಪದ್ಧತಿಯ ಜಾಡು ತಪ್ಪಿದ್ದಲ್ಲ.

ಇನ್ನು ಮೌರ್ಯಕಾಲದಲ್ಲಿಯ ದಾಸ್ಯ ಪದ್ಧತಿಯ ವಿಚಾರ ಕೌಟಿಲ್ಯ, ಸ್ಟ್ರೆಬೋ, ಮೆಗಾಸ್ಥನೀಸ್ ಇವರ ವಾಕ್ಯಗಳಿಂದಲೂ ಮತ್ತು ಅಶೋಕನ ೧೩ ನೇ ಶಿಲಾಲೇಖದಿಂದಲೂ ತಿಳಿದುಬರುತ್ತದೆ. 'ಡಾ|| ಆರ್. ಶಾಮಾಶಾಸ್ತ್ರಿಗಳು ತಮ್ಮ Kautilya's Arthasastra ದಲ್ಲಿ ದಾಸ್ಯಪದ್ಧತಿ ಇತ್ತೆಂದೂ ಮತ್ತು ಅವರ ಬಗ್ಗೆ ಧನಿಕರ ವರ್ತನೆಯು ವಿವಿಧವಾಗಿತ್ತೆಂದೂ ಹೇಳುತ್ತಾರೆ. ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ 'ಶೂದ್ರನಾಗಿ ಅವನು ಗುಲಾಮ ಸಂತತಿಗೆ ಸೇರಿದ್ದಲ್ಲಿ ಮಾತ್ರ ವಿಕ್ರಯಕ್ಕೆ ಯೋಗ್ಯ' ಎಂಬ ಮಾತು ಗಮನಾರ್ಹವಾದದ್ದು. 'ಗುಲಾಮರನ್ನು ಹೆಣ ಹೊರಲಿಕ್ಕೆ, ಅಥವಾ ಜಾಡುಮಾಲಿ ಕೆಲಸಕ್ಕಾಗಲಿ ಅಥವಾ ದಾಸಿಯರನ್ನು ಅವರ ಸ್ವಾಮಿ (ಧಣಿ) ಯು ಬೆತ್ತಲೆಯಲ್ಲಿ ಸ್ನಾನಮಾಡುವಾಗ ತನ್ನ ಶುಶ್ರೂಷೆಗಾಗಲಿ, ಅಥವಾ ದಾಸಿಯರ ಮಾನಾಪಹಾರ ಮುಂತಾದುವುಗಳಿಗಾಗಲಿ ಉಪಯೋಗಿಸುವುದರಿಂದ ದಾಸ ಅಥವಾ ದಾಸಿಯ ಧಣಿಯು ಅವರನ್ನು ವಿಕ್ರಯಿಸಿದ ಕ್ರಯದೊಂದಿಗೆ ದಂಡವನ್ನು ತೆರಬೇಕಾಗುವುದು; ಮತ್ತು ಒಬ್ಬ ಮನುಷ್ಯನು ದಾಸಿಯೊಂದಿಗೆ

ಬಲಾತ್ಕಾರದಿಂದ ವರ್ತಿಸಿದಲ್ಲೂ ಕೂಡ ಇದೇ ಶಿಕ್ಷೆಗೆ ಒಳಗಾಗಬೇಕಾಗುವುದು' ಎಂದು ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ಹೇಳಿದೆ. ಇನ್ನೂ ಮುಂದುವರಿದು ಕೌಟಿಲ್ಯನು ದಾಸಿಯರ ಬಗ್ಗೆ 'ಅವರು ರಾಜನ ಆಡಳಿತದಲ್ಲಿದ್ದರು. ಅವರು ವೇಶ್ಯಾ ವೃತ್ತಿಯನ್ನು ಮಾಡಲಿಚ್ಛಿಸದಿದ್ದರೂ ಸಹ ಪ್ರಭುತ್ವದ ಕ್ರೌರ್ಯದಿಂದಾಗಿ ಮಾಡಲೇ ಬೇಕಾಗಿತ್ತು. ಹಾಗೆ ಒಪ್ಪದಿದ್ದ ಪಕ್ಷದಲ್ಲಿ ದಂಡನೆಗೆ ಒಳಗಾಗುತ್ತಿದ್ದರು' ಎಂದು ಹೇಳಿದ್ದಾನೆ. ಇದರಿಂದ ತತ್ಕಾಲೀನ ಗುಲಾಮಸ್ಥಿತಿಯ ಬೀಭತ್ಸ ವರ್ಣನೆ ದೊರಕಿದರೂ, ಮೌರ್ಯ ಕಾಲದಲ್ಲಿ ದಾಸ್ಯಪದ್ಧತಿಯ ಸುಧಾರಣೆಗೆ ಅಧಿಕ ಗಮನ ಕೊಡಲಾಗಿತ್ತೆಂಬುದಕ್ಕೆ ಕೌಟಿಲ್ಯನ ಅರ್ಥಶಾಸ್ತ್ರದ ಈ ಮಾತುಗಳೇ ಸಾಕ್ಷಿ: "ಮಾತೆಯು ಗುಲಾಮಳಾಗಿ, ತನ್ನ ಧಣಿಯ ಮೂಲಕ ಸಂತಾನ ಹೊಂದಿದಲ್ಲಿ ಆ ಸಂತಾನವನ್ನು ಗುಲಾಮರೆಂದು ಪರಿಗಣಿಸಲಾಗದು, ಮತ್ತು ಗುಲಾಮ ಹಾಗೂ ದಾಸಿಯು ತಾವು ಸ್ವತಂತ್ರರಾಗಿರಲು ಬಯಸಿದ್ದಲ್ಲಿ, ತಮ್ಮನ್ನು ವಿಕ್ರಯಮಾಡಿದಷ್ಟು ಮೊಬಲಗನ್ನು ಕೊಟ್ಟು ಸ್ವಾತಂತ್ರ್ಯವನ್ನು ಪಡೆಯಬಹುದಾಗಿತ್ತು. ಈ ರೀತಿ ಸ್ವಾತಂತ್ರ್ಯಪಡೆದವರನ್ನು ಮತ್ತೆ ವಿಕ್ರಯಮಾಡಿದವರು ಶಿಕ್ಷೆಗೆ ಗುರಿಯಾಗುತ್ತಿದ್ದರು."

ಸ್ಟ್ರಿಬೋ ಸಹ ಪಂಜಾಬಿನಲ್ಲಿ ನಡೆಯುತ್ತಿದ್ದ ವಿವಾಹಯೋಗ್ಯ ಸ್ತ್ರೀಯರ ಕ್ರಯ-ವಿಕ್ರಯದ ವೃತ್ತಾಂತವನ್ನು ಕೊಟ್ಟು 'ರಾಜ್ಯವು ತಂದೆತಾಯಿಗಳಿಂದ ಹುಡುಗಿಯರನ್ನು ಕೊಂಡು, ಅವರು ವಯಸ್ಕರಾದ ಮೇಲೆ ಅರಮನೆಯಲ್ಲಿ ಅಂಗರಕ್ಷಕರನ್ನಾಗಿ ನಿಯಮಿಸುತ್ತಿತ್ತು' ಎಂದಿದ್ದಾನೆ. ಇದೇ ಅಭಿಪ್ರಾಯವನ್ನು ಮೆಗಾಸ್ಥನೀಸನೂ ಕೂಡ 'ಸ್ತ್ರೀಯರು ಚಂದ್ರಗುಪ್ತಮೌರ್ಯರ ಆಸ್ಥಾನದಲ್ಲಿ ರಾಜರಿಗೆ ಅಂಗರಕ್ಷಕರಾಗಿಯೂ, ಅಂತಃಪುರದಲ್ಲಿ ಸೇವಕರಾಗಿಯೂ ಇರುತ್ತಿದ್ದರು. ಇವರಲ್ಲಿ ಯವನ ಕನ್ಯೆಯರೇ ಅಧಿಕವಾಗಿದ್ದರು,' ಎಂದು ಪ್ರತಿಪಾದಿಸುತ್ತಾನೆ.

ಅಶೋಕನ ೧೩ ನೇ ಶಿಲಾಲೇಖದಲ್ಲಿ 'ಇದೇ ರೀತಿ ಮಿತ್ರರು, ಪರಿಚಿತರು, ಜೊತೆಗಾರರು, ಸಂಬಂಧಿಗಳು, ಗುಲಾಮರು, ಸೇವಕರು ಮತ್ತು ಭೃತ್ಯರು ಇವರಿಂದ ಬೇರೊಂದು. . . .' ಎಂದು ಅಂಕಿತವಾಗಿದೆ. ಇಲ್ಲಿ ಹೇಳಿರುವ ಗುಲಾಮ ಮತ್ತು ಸೇವಕ ಮತ್ತು ಭೃತ್ಯ ಎಂಬುದಕ್ಕೆ ವಿವಿಧ ಅರ್ಥವನ್ನು ಕಲ್ಪಿಸಿದಲ್ಲಿ ಸೇವಕರೆಂದರೆ ಮನೆಯ ಊಳಿಗದವರೆಂತಲೂ, ಗುಲಾಮರು ಭೃತ್ಯರು ಶರಣಾಗತರಾಗಿ ಬಂದವರೋ ಅಥವಾ ಕೊಂಡುತಂದ ದಾಸರೋ ಇರಬಹುದು ಎಂದು ತಿಳಿದು ಬರುತ್ತದೆ.

ಡಾ|| ಮೋತೀಚಂದ್‌ರವರೂ ಸಹ ಮೌರ್ಯಯುಗದಲ್ಲಿ ಭಾರತ ಮತ್ತು ರೋಂ ಸಾಮ್ರಾಜ್ಯದಲ್ಲಿ ಸಾಗುತ್ತಿದ್ದ ದಾಸರ ವ್ಯಾಪಾರ ತೀವ್ರಗತಿಯಲ್ಲಿತ್ತು ಎಂದು ಉಸುರುತ್ತಾರೆ. ಇಟಲಿಯ ಮಾರುಕಟ್ಟೆಯಲ್ಲಿ ಭಾರತದ ಗುಲಾಮರ

ಮಾರಾಟವನ್ನು ಸಾಧಿಸುತ್ತಾರೆ. ಪೆರಿಪ್ಲಸನು ಒಂದೆಡೆ ಭಾರತದ ಜ್ಯೋತಿಷಿಯೊಬ್ಬನ ಮಾರಾಟವನ್ನು ಇಟಲಿಯಲ್ಲಿ ನಡೆಸಿದ ಪ್ರಸಂಗವೊಂದನ್ನು ಹೇಳುತ್ತಾನೆ. ಇದರಿಂದ ದಾಸರ ಮಾರಾಟವು ಭಾರತದಲ್ಲಿದ್ದು ಭಾರತದ ಸುತ್ತುಮುತ್ತಲೂ ಸಾಗಿತ್ತೆಂಬುದು ಖಚಿತವಾಗುತ್ತದೆ.

ಕುಶಾನರ ಕಾಲದಲ್ಲೂ ವಿದೇಶಗಳಿಂದ ಅಧಿಕ ಸಂಖ್ಯೆಯಲ್ಲಿ ಗುಲಾಮರನ್ನು ತರಿಸಿಕೊಳ್ಳುತ್ತಿದ್ದರು. ಆ ಕಾಲದಲ್ಲಿ ಭಾರತದ ಗುಲಾಮರ ಕ್ರಯ-ವಿಕ್ರಯದ ವಿಷಯವಾಗಿ ಯಾವ ವಿವರಣೆಯೂ ಸಿಗುವುದಿಲ್ಲ. ಆದರೂ 'ಅಂತಗಡದಾಸ್' ಎಂಬ ಜೈನಗ್ರಂಥದಲ್ಲಿ ದಾಸಿಯರು ವಿಕ್ರಯವಾಗುತ್ತಿದ್ದ ಅಂಶವು ಅಂಕಿತವಾಗಿದೆ. ಯುನಾನ್, ತಮಿಳುನಾಡು, ಸಿಂಹಳ, ಅರಬ್ ದೇಶಗಳಿಂದ ದಾಸಿಯರ ಮಾರಾಟವಾಗುತ್ತಿತ್ತು; ಮತ್ತು ಹೇಮಚಂದ್ರವರ 'ಅಫ್‌ಘಾನಿಸ್ಥಾನದಿಂದಲೂ ದಾಸಿಯರು ಬರುತ್ತಿದ್ದರು' ಎಂಬ ಮಾತಿನಿಂದ ಬಹುವಾಗಿ ದಕ್ಷಿಣದ ದಾಸಿಯರ ಮಾರಾಟವೇ ಉತ್ತರದಲ್ಲಿ ನಡೆಯುತ್ತಿತ್ತೆಂದು ಸ್ಪಷ್ಟವಾಗುತ್ತದೆ.

ದಕ್ಷಿಣ ಭಾರತದಲ್ಲಿ ನಡೆಯುತ್ತಿದ್ದ ದಾಸ್ಯದ ವಿಷಯವಾಗಿ ಎಲ್. ಡಿ. ಬರ್ನಿಟ್‌ರವರು ಅನುವಾದಿಸಿರುವ 'ನಯಾಧಂಬ್' ಎಂಬ ಗ್ರಂಥದಲ್ಲಿ ಕೆಲವು ವಿಷಯಗಳು ಪ್ರಾಪ್ತವಾಗುತ್ತವೆ. ಕಚ್ ಗುಲಾಮರ ವ್ಯಾಪಾರ ಕೇಂದ್ರವಾಗಿತ್ತೆಂತಲೂ ಇದೇ ಜಾಗದಲ್ಲಿ ದೇಶವಿದೇಶದ ಗುಲಾಮರ ಮಾರಾಟ ಸಾಗುತ್ತಿತ್ತೆಂತಲೂ ಹೇಳಿದ್ದಾರೆ. ಪೆರಿಪ್ಲಸನು ಬೇಡಾಚ್ ರಾಜ್ಯಕ್ಕೆಂದು ಬರುತ್ತಿದ್ದ ಸುಶ್ರಾವ್ಯವಾಗಿ ಹಾಡಬಲ್ಲ ಅನೇಕ ದಾಸದಾಸಿಯರು ದೇಶದ ರಾಜಮಹಲಿನಲ್ಲಿ ತುಂಬಿರುವುದರ ವಿವರಣೆಕೊಡುತ್ತಾ, 'ಇದು ಒಂದು ಕರಾರಿನ ಮೂಲಕ ಇರಾನ್ ರಾಜನು ತಾನು ಬೇಡಾಚ್ ರಾಜ್ಯದಿಂದ ಕೊಂಡ ಸರಕುಗಳಿಗೆ ತನ್ನ ದೇಶದಿಂದ ಎರಡು ಹಡಗಿನ ತುಂಬ ಕಳಿಸಿಕೊಟ್ಟ ಹಣದ ರೂಪದ ಸುಂದರಯುವತಿಯರು,' ಎನ್ನುತ್ತಾನೆ. ಇದರಿಂದ ದಾಸ್ಯವು ಸ್ಪಷ್ಟವಾಗಿ ಕಾಣುವುದು.

ಗುಪ್ತಕಾಲದ ಮುಂಚೆ ಬ್ರಾಹ್ಮಣ ಜಾತಿಯ ಸ್ತ್ರೀ ಪುರುಷರು ಗುಲಾಮರಾಗಿರುತ್ತಿದ್ದರೆಂತಲೂ, ಹಾಗೂ ಕ್ರಯ ವಿಕ್ರಯವಾಗುತ್ತಿತ್ತೆಂತಲೂ ಕಾತ್ಯಾಯನ ತನ್ನ ಗ್ರಂಥದಲ್ಲಿ ಹೇಳಿ ಬಹಳ ವಿರೋಧಿಸಿರುವನು. ಬ್ರಾಹ್ಮಣ ಸ್ತ್ರೀಯರನ್ನು ಗುಲಾಮರನ್ನಾಗಿ ಮಾರಕೂಡದು, ಕ್ಷತ್ರಿಯ ಮತ್ತು ವೈಶ್ಯರನ್ನು ಗುಲಾಮರನ್ನಾಗಿ ಮಾರಾಟ ಮಾಡುವುದು ಪಾಪಕರವೆಂತಲೂ ಹೇಳಿರುವನು. ಕಾತ್ಯಾಯನನು ಸ್ವಯಂ ಬ್ರಾಹ್ಮಣನಾಗಿದ್ದುದರಿಂದ ತನ್ನ ಜಾತಿಯ ಗುಲಾಮರನ್ನು ಮುಕ್ತಗೊಳಿಸಲು ಹೇಳಿದ್ದರೂ ಹೇಳಿರಬಹುದು. ಆದರೆ ಎಲ್ಲ ಜಾತಿಯ ಗುಲಾಮರೂ ಗುಪ್ತಕಾಲದ

ಮುಂಚೆ ಇದ್ದರೆಂಬುದು ಖಚಿತವಾದ ಮಾತು. 'ಒಂದು ವೇಳೆ ಒಬ್ಬ ಸ್ವತಂತ್ರ ಸ್ತ್ರೀ ಒಬ್ಬ ಗುಲಾಮನಲ್ಲಿ ಅನುರಕ್ತಳಾಗಿ ವಿವಾಹವಾದರೆ, ಆ ಸ್ತ್ರೀಯು ಗುಲಾಮಳಾಗುವಳು. ಆದರೆ ಒಬ್ಬ ಗುಲಾಮಸ್ತ್ರೀಯಲ್ಲಿ ಅವಳ ಮಾಲಿಕನು ಸಂಭೋಗಿಸಿ ಸಂತಾನ ಉತ್ಪನ್ನ ಮಾಡಿದಲ್ಲಿ, ಆ ಸಂತಾನವನ್ನು ಸ್ವತಂತ್ರಸಂತಾನವೆಂದು ಪರಿಗಣಿಸುತ್ತಿದ್ದರು' ಎಂದು ಕಾತ್ಯಾಯನನು ಹೇಳಿದ್ದಾನೆ. ಆದರೆ ಮನುಚಕ್ರವರ್ತಿಯು ಇದರ ವ್ಯತಿರಿಕ್ತವಾಗಿ 'ಗುಲಾಮಸಂತಾನವೂ ಗುಲಾಮರೇ' ಎನ್ನುವುದರಿಂದ ಕಾತ್ಯಾಯನನು ಗುಲಾಮ ಪದ್ಧತಿಯನ್ನು ಸುಧಾರಿಸಲು ಪ್ರಯತ್ನಿಸಿ ಹಾಗೆ ಹೇಳಿದ್ದಿರಬಹುದೆಂದು ಊಹಿಸಬಹುದು.

ಗುಪ್ತಯುಗದಲ್ಲೂ ಸಹ ತತ್ಕಾಲೀನ ದಾಸ್ಯಪದ್ಧತಿಯ ವಿವರಣೆಗಳು ಆ ಯುಗದ ಸಾಹಿತ್ಯಗಳ ಮೂಲಕ ದೊರೆಯುತ್ತವೆ. ಗುಪ್ತಯುಗದ ಒಬ್ಬ ದೊಡ್ಡ ಸಾಹಿತಿಯಾದ ನಾರದನ ಕೆಲವು ಮಾತುಗಳು ದಾಸ್ಯಪದ್ಧತಿಯನ್ನು ಪ್ರತಿಪಾದಿಸುತ್ತವೆ. ಗುಪ್ತಯುಗದಲ್ಲಿ ಪರಾಜಯ ಹೊಂದಿದವರನ್ನು ಗುಲಾಮರನ್ನಾಗಿ ಇಟ್ಟುಕೊಳ್ಳುತ್ತಿದ್ದರು. ತಾವು ಮಾಡಿದ ಋಣಗಳನ್ನು ತೀರಿಸಲು ಆಗದಿದ್ದವರು ತಮ್ಮ ಸಾಮಾನುಗಳೊಂದಿಗೆ ತಮ್ಮನ್ನೇ ಮಾರಿಕೊಳ್ಳುತ್ತಿದ್ದರು. ಧನಿಕರು ಹಾಗೆ ಕೊಂಡವರನ್ನು ಮಾರಿ ತಮ್ಮ ಹಣ ವಾಪಸ್ಸು ಪಡೆಯುವ ಹಕ್ಕಿದ್ದಿತು. ಹೀಗೆ ತಮ್ಮನ್ನು ತಾವೇ ಮಾರಿಕೊಳ್ಳುತ್ತಿದ್ದ ಸಮಯದಲ್ಲಿ ನೆಂಟರಿಷ್ಟರು ಯಾರಾದರೂ ಕೊಂಡುಕೊಂಡು ಆ ಹಣವನ್ನು ಮಾಲೀಕನಿಗೆ ಒಪ್ಪಿಸಿದಲ್ಲಿ ಆ ವಿಕ್ರೀತವ್ಯಕ್ತಿ ಸ್ವತಂತ್ರನಾಗುತ್ತಿದ್ದನು. ಗುಪ್ತಕಾಲದ ದಾಸ್ಯಪದ್ಧತಿಯು ಒಂದು ವಿಶೇಷ ರೂಪವನ್ನು ಧರಿಸಿದ್ದಿತು. ಗುಲಾಮರು ಒಂದುವೇಳೆ ತಮ್ಮ ಕಾರ್ಯಗಳಿಂದ ಮಾಲೀಕರನ್ನು ಸಂತೋಷ ಪಡಿಸಿದಲ್ಲಿ ಮಾಲೀಕನು ಅವನನ್ನು ಸ್ವತಂತ್ರನನ್ನಾಗಿ ಮಾಡುತ್ತಿದ್ದನು. ಅಂದಿನಿಂದ ಅವನು ಮತ್ತು ಅವನ ವಂಶವೇ ಸ್ವತಂತ್ರವಾಗುತ್ತಿತ್ತು. ಗುಲಾಮರನ್ನು ಸ್ವತಂತ್ರಪಡಿಸುವುದು ಸಭೆಯಲ್ಲಿ ನಡೆಯುತ್ತಿತ್ತು. ಈ ಸ್ವತಂತ್ರಪಡಿಸುವ ಪದ್ಧತಿಯನ್ನು ನಾರದನು ಈ ರೀತಿ ಬಣ್ಣಿಸುವನು: "ಮಾಲೀಕನು ಗುಲಾಮನನ್ನು ಸ್ವತಂತ್ರಮಾಡಲೆನಿಸಿದಾಗ ಅವನು ಜನಸಮೂಹದ ಮುಂದೆ ಬಂದು ತನ್ನ ಭುಜದ ಮೇಲೆ ನೀರಿನ ಕುಂಭವನ್ನಿಟ್ಟುಕೊಂಡು ಅಕ್ಕಪಕ್ಕದಲ್ಲಿದ್ದವರಿಂದ ಸ್ಪರ್ಶಮಾಡಿ, ಪುಷ್ಪ ಮತ್ತು ಎಲೆಗಳಿಂದ ಆ ನೀರನ್ನು ಗುಲಾಮನ ಮೇಲೆ ಮೂರು ಬಾರಿ ಎರಚಿ ನಿನ್ನನ್ನು ನಾನು ಸ್ವತಂತ್ರಮಾಡಿದ್ದೇನೆ ಎಂದು ಉಸುರಬೇಕು." ನಂತರ ಅವನನ್ನು ಸ್ವತಂತ್ರಮಾಡುತ್ತಿದ್ದರು. ವೀರಸೇನನ ಉದಯಗಿರಿಯ ಅಭಿಲೇಖದಲ್ಲೂ ಸಹ ೨ನೇ ಚಂದ್ರಗುಪ್ತನ ಯುದ್ಧ ಒಂದರ ಉಲ್ಲೇಖವಿದೆ. ಅಜಂತಾದ ಭಿತ್ತಿ ಚಿತ್ರ

ಗಳ ಆಧಾರ ಕಥೆಯಿಂದ ನಾಗರಾಜ ಕಾಶಿಯ ಪೇಟೆಯಲ್ಲಿ ಮಾರಲು ಬಂದಿದ್ದರೆಂದೂ ಕಾಶೀರಾಜನು ಅವನನ್ನು ವರಿಸಿ ಉದ್ಧಾರಮಾಡಿದನೆಂದೂ ತಿಳಿದುಬಂದಿದೆ.

ಗುಪ್ತರ ಅಂತಿಮಕಾಲ ಅಥವಾ ಪೂರ್ವ ಮಧ್ಯಕಾಲದಲ್ಲೂ ಸಹ 'ಹರ್ಷಚರಿತೆ' ಮತ್ತು 'ಬೃಹತ್ಕಥಾಕೋಶ'ದ ಆಧಾರದ ಮೇಲೆ ೧೧ ನೇ ಶತಮಾನದವರೆಗೂ ಗುಲಾಮ ಪದ್ಧತಿ ಇತ್ತೆಂದು ವರ್ಣಿತವಾಗಿದೆ. 'ಹರ್ಷಚರಿತೆ'ಯಲ್ಲಿ ಸೈನ್ಯದೊಂದಿಗೆ ಗುಲಾಮರು ಹೋಗುವ ಉಲ್ಲೇಖವಿದೆ. 'ಬೃಹತ್ಕಥಾಕೋಶ'ದಲ್ಲಿ ಕನ್ಯೆಯನ್ನು ಮಾರುವ ಉಲ್ಲೇಖವಿದೆ. ಆ ಕಥೆಯ ಅಂಶವೊಂದರಲ್ಲಿ ಪಾರ್ಸಿಯು ಕನ್ಯೆಯೊಬ್ಬಳನ್ನು ಕೊಂಡು ೭ ತಿಂಗಳವರೆಗೂ ಅವಳಿಗೆ ಚೆನ್ನಾಗಿ ಆರೈಕೆ ಮಾಡಿ ಅನಂತರ ಅವಳನ್ನು ಕೊಂದು ರಕ್ತವನ್ನು ಒಣಗಿಸಿ ಉಣ್ಣೆ ಬಟ್ಟೆಗಳಿಗೆ ಬಣ್ಣ ಹಾಕಲು ಉಪಯೋಗಿಸಿದ್ದ ಪ್ರಸಂಗವಿದೆ. ಇದರಿಂದ ವಿದೇಶಿಯರು ಭಾರತದ ಗುಲಾಮರನ್ನು ಕೊಂಡು ತಮ್ಮ ಮನಬಂದಂತೆ ವರ್ತಿಸುತ್ತಿದ್ದರೆಂಬುದು ಸ್ಪಷ್ಟವಾಗುತ್ತದೆ. 'ಭಗವತಿ ಆರಾಧನ'ದ ೫೭೭ ನೇ ಕಥೆಯಲ್ಲೂ ಗುಲಾಮರಿಂದ ರಕ್ತ ತೆಗೆಯುವುದರ ಉಲ್ಲೇಖವಿದೆ.

ವೈದಿಕ ಯುಗದಲ್ಲಿದ್ದ ದಾಸದಾಸಿಯರನ್ನು ದಾನಮಾಡುವ ಪದ್ಧತಿ ವೈದಿಕ ಯುಗದ ನಂತರ ರಜಪೂತರ ಯುಗದಲ್ಲಿ ಮತ್ತೆ ಕಾಣಿಸಿಕೊಳ್ಳುತ್ತದೆ. ಇದು ರಜಪೂತರ ಸಾಮಾಜಿಕ ಜೀವನದ ಒಂದು ಅಂಗವೇ ಆಗಿಹೋಗಿದ್ದಿತು. ಅವರ ಕಾಲದಲ್ಲಿ ವೇಶ್ಯೆಯರ ಮಾರಾಟವು ಕಂಡುಬರುತ್ತದೆ. ಅಂದಮೇಲೆ ರಜಪೂತರ ಕಾಲದಲ್ಲೂ ಗುಲಾಮ ಪದ್ಧತಿಯನ್ನು ಕಾಣಬಹುದು.

ಈ ರೀತಿ ಭಾರತದಲ್ಲಿ ಸಿಂಧೂ ನದಿಯ ನಾಗರಿಕತೆಯಿಂದ ಮೊದಲಿಟ್ಟು ರಜಪೂತರ ಯುಗದವರೆವಿಗೂ ದಾಸ್ಯ ಪದ್ಧತಿಯನ್ನು ಕಾಣಬಹುದು. ಆದರೆ ಕ್ರಿ. ಶ. ೫ ರಿಂದ ೯ ನೇ ಶತಮಾನದವರೆಗೂ ಶ್ರೀ ಶಂಕರರ ಆತ್ಮ ಸ್ವಾತಂತ್ರ್ಯ ಉಪದೇಶದಿಂದ ಭರತಖಂಡವು ತೇಜೋಮುಖಿಯಾಗಿದ್ದು ನಂತರ ಮುಸ್ಲೀಮರ ಧಾಳಿಯಿಂದಾಗಿ ಜಾತಿ ಕಲಹಗಳಿಗೆ ಎಡೆಕೊಟ್ಟು ಪರದೇಶದ ಆಡಳಿತಕಾರರಿಗೆ ದಾಸಿಯಾಯಿತು. ಅಲ್ಲಿಂದ ಮತ್ತೆ ದಾಸ್ಯದ ರೂಪು ೧೯ ನೇ ಶತಮಾನದ ಅಂತ್ಯದವರೆಗೂ ಮುಂದು ವರೆಯಿತು.

ಮೇಲೆ ಹೇಳಿದ ಹಲವು ದೃಷ್ಟಾಂತಗಳಿಂದ ದಾಸ್ಯಪದ್ಧತಿಯು ಭಾರತದಲ್ಲಿ ಕಂಡುಬಂದರೂ ಅದು ಕಲಾಪ್ರೇಮಿಗಳ ಕಲಾರಾಧನೆಯ ಒಂದು ಅಂಶವಾಗಿತ್ತೋ, ಅಥವಾ ಭೋಗಜೀವಿಗಳ ಸುಖೋಪ ಭೋಗಕ್ಕೆ ಬೇಕಾಗುವ ಸಾಮಗ್ರಿಯಾಗಿತ್ತೋ, ಅಥವಾ ಸೌಂದರ್ಯ ಸಾಧನೆಯ ಒಂದು ಅಂಗವಾಗಿತ್ತೋ, ನಿರ್ಧರಿಸಲು ಅಸಾಧ್ಯ.

ಆಧಾರಗ್ರಂಥಗಳು

1. *Prehistoric India* by PIGOT.
2. *Slavery in British India* by BENARJI.
3. ಭಾರತೀಯ ಸಂಸ್ಕೃತಿ—ಎಸ್. ಶ್ರೀಕಂಠಶಾಸ್ತ್ರೀ.
4. *Sindhu Ghatika Sabhyata*—Dr. MOTICHAND.
5. ಹರಪ್ಪಾ ಸಂಸ್ಕೃತಿ—ಎಂ. ಶೇಷಾದ್ರಿ.
6. *History of Asiatic India*—Dr. TRIPATI.
7. *Rigvedic Culture*—A. C. DASS.
8. *Kautilya's Arthasastra*—R. SHAMASASTRY.

ಅ. ನಾ. ಸಿಂಧೆ

ಮುಗಿಲ ಮೀನರು

ಶಿವನ ಜಡೆಯ ಮಡು ನೀರೊಳು ಆಡುವ ಮೀನರೆ!
ನಮ್ಮಾ ಕಿರುಹೊಂಡಕೆ ನೀವೇಕೇ ಬಂದಿರೆ?

ಅಲೆಯುವ ಬಿನದಕೆ ಬಂದಿರೆ?
ದಾರಿಯನರಸುತ ಬಂದಿರೆ?
ಬೀಳ್ನೀರೊಳು ಧುಮುಕುವ ಬಿನದಕೆ ಬಂದಿರೆ?
ಮೊಟ್ಟೆಯ ಕಾಪಿಡೆ ನಿಲುನೀರಿಗೆ ಬಂದಿರೆ?
ಬನ್ನಿರಿ ಗೆಳೆಯರೆ ಬನ್ನಿರೆ
ನಮ್ಮೂರಿನ ಬಡತನಕೋ ಇದೊ ಸ್ವಾಗತ ಬನ್ನಿರೆ!

ಶಿವನ ಜಡೆಯ ಮಡು ನೀರೊಳು ಆಡುವ ಮೀನರೆ!
ಬೀಳ್ನೀರೊಳು ಧುಮುಕಾಡುವ ಬಿನದಿಗರೆ!
ಧುಮುಕುವ ಗಂಗಾ ಸ್ರೋತಪ್ರಪಾತದಿ ಎದುರೀಜುವ ಧೀರರೆ!
ನಮ್ಮಾ ಕಿರುಹೊಂಡಕೆ ನೀವೇಕೇ ಬಂದಿರೆ?

ಬುವಿ ಬಾನ್ಗಳ ನಡುವಣ ನಣ್ಪಿಗರೆ, ವಣಿಜಿಗರೆ!
ಬನ್ನಿರೆ, ಬನ್ನಿರೆ, ನಮ್ಮೂರಿನ ಬಡತನಕಿದೊ ಬನ್ನಿರೆ.
ಹೇಳಿರೆ, ಹೇಳಿರೆ, ನಿಮ್ಮೂರಿನ ಸಿರಿಯೊಗೆತನವನು ಹೇಳಿರೆ,
ನಿಮ್ಮೂರಿನ ಬುತ್ತಿಯ ಸವಿಯನು ನಮ್ಮೊಡನಿದೊ ಉಣ್ಣಿರೆ
ತನ್ನಿರೆ ಗೆಳೆಯರೆ, ತನ್ನಿರೆ, ತುಂಬಿರೆ—
ಬತ್ತುವ ನೆರೆಯುಕ್ಕುವ ನಮ್ಮಾ ಕೆರೆಗಾ ಇಂಗಡಲಿನ ಸಿರಿಯ.

ಕಡಲಿನ ಭರತದ ನೀರುಬ್ಬಿನ ಏರಲೆ ತೂಗುಯ್ಯಾಲೆಗಳನೇರಿ
ದೂರದ ಒಳ ಭೂನಿಮ್ನ ಪ್ರದೇಶದ ತಾವರೆ ಮಡುವನು ಸೇರಿ
ಪರಿಮಿತ ಜಲರಾಶಿಯ ಸುಂದರ ರಕ್ಷೆಗೆ ಮೊದಲಾನಂದಿಸಿರೆ,
ಒಯ್ಯನೆ ಹಿಂಗುವ ಆ ಹುಸಿನೀರಿನ ಕ್ಷಣದ ಸ್ವರಾಜ್ಯಭ್ರಾಂತಿಯು
ನಂದುತಿರೆ
ಉಸಿರ್ಕಟ್ಟುತೆ ವಿಲಿಗುಡುವೀ ಸಾಸಿರ ಮತ್ಸ್ಯ ಸಹೋದರರ
ರಕ್ಷಿಸಿರೇ ರಕ್ಷಿಸಿರೇ ರಕ್ಷಿಸಿರೇ ಓ ನೇಹಿಗರೆ! ದಾಯಿಗರೆ!

ಬಲೆಗಿಂತಲು ಮಿಗಿಲೀ ಬತ್ತುವ ಉಕ್ಕುವ ಅಗಳೇ
ಬಂಧನವಾಗಿರೆ ನಮಗೆ,
ನೆರೆಹೊರೆ ಎರೆಗಾಳಕು ಮಿಗಿಲೀ ನಮ್ಮೊಡನಾಡಿಗರೆ
ಭಯವಾಗಿರೆ ನಮಗೆ,
ಒಯ್ಯಿರೆ ಗೆಳೆಯರೆ ಒಯ್ಯಿರೆ
ನಿಮ್ಮೊಡನೆಮ್ಮನು ಒಯ್ಯಿರೆ:
ನೆಗಳಿಲ್ಲದ ಕೆಸರಿಲ್ಲದ ಅಮೃತಧಿಗೆ!

ಕೆರೆ ತೊರೆಯೀ ತಾವರೆ ಕೆಸರಿನ ಉಸಿರ್ಕಟ್ಟುವ ಬಲೆಯಿಂದೆಮ್ಮನು
ಕಾಪಿಡಿರೆ!

ಮುನ್ ಬಾಳಿನ ನೇಹಿಗರೇ, ಒಡನಾಡಿಗರೆ
ತವರಿಂಗಡಲಿನ ಹರಿಕಾರರೆ, ಸ್ಮೃತಿಕಾರರೆ,
ತಪ್ಪಿದ ದಾರಿಯ ಅರಸುತೆ ಬಂದವರೆ,
ತೋರಲು ಬಂದವರೆ, ಒಯ್ಯಲು ನಿಂದವರೆ!
ಬಲೆಯೊಳು ಬೀಳುತೆ ಗಾಳಕೆ ಸಿಲುಕುತೆ
ಬಿಡುಗಡೆಯಾಟವ ನಟಿಸಿದರೇ
ಬಿಡುಗಡೆಯೂಟವ ತೋರಿದರೇ!
ಅವತಾರರೆ ಅವತಾರರೆ ಅವತಾರರೆ!
ಶಿವನ ಜಡೆಯ ಸ್ತ್ರೈಣ್ಯ ಸರೋವರದೊಳು ಉಸಿರಾಡುವ ಜೀವರೆ
ಅನಿಮೇಷರೆ, ಚಿರಜೀವರೆ!

—ಸುಜನಾ.

ಶ್ರೀ ಶಂಕರಾಚಾರರ್ಯ ಕಾವ್ಯಪ್ರತಿಭೆ

ಶ್ರೀ ಶಂಕರಾಚಾರ್ಯರ ಹೆಸರನ್ನು ಕೇಳಿದೊಡನೆಯೆ ನಮ್ಮ ಮನಸ್ಸಿಗೆ ಹೊಳೆಯುವುದೇ ಷಣ್ಮತ ಸ್ಥಾಪನಾಚಾರ್ಯರೂ, ಮಹಾ ತತ್ತ್ವಜ್ಞಾನಿಗಳೂ ಅಪ್ರತಿಮ ವಿಚಾರವೇತ್ತರೂ, ಅದ್ವೈತ ಸಿದ್ಧಾಂತವನ್ನು ಒಂದು ವಜ್ರೋಪಮ ತಳಹದಿಯ ಮೇಲೆ ನಿಲ್ಲಿಸಿದ ಒಂದು ಮೇರು ಸಮನಾದ ವ್ಯಕ್ತಿ. ಇಂತಹ ವ್ಯಕ್ತಿಗೂ ಕಾವ್ಯ ಪ್ರತಿಭೆಗೂ ಏನು ಸಂಬಂಧವೆಂದು ನಮಗೆ ಆಶ್ಚರ್ಯವಾಗಬಹುದು. ಆದರೆ ಇದೇ ಅವರ ವ್ಯಕ್ತಿತ್ವದ ವೈಶಿಷ್ಟ್ಯ. ಅವರದು ಸರ್ವತೋಮುಖವಾದ ವ್ಯಕ್ತಿತ್ವ. ಅವರು ಶ್ರೇಷ್ಠ ಜ್ಞಾನಿಗಳು ಹೇಗೋ ಹಾಗೆಯೇ ಶ್ರೇಷ್ಠ ಭಕ್ತರು ಮತ್ತು ಪ್ರಚಂಡ ಕರ್ಮಯೋಗಿಗಳೂ ಆಗಿದ್ದರು. ಅವರು ಎಷ್ಟು ದೊಡ್ಡ ತತ್ತ್ವಜ್ಞಾನಿಗಳಾಗಿದ್ದರೊ ಅಷ್ಟೇ ದೊಡ್ಡ ಕವಿಗಳಾಗಿದ್ದರು. ತತ್ತ್ವ ಮತ್ತು ಕವಿತ್ವ ಒಂದನ್ನೊಂದು ಅನುಸರಿಸಿಕೊಂಡು ಹೋಗುವುದು ಬಹಳ ಅಪರೂಪ. ಆದರೆ ಇವೆರಡೂ ಶ್ರೀ ಶಂಕರಾಚಾರ್ಯರಲ್ಲಿ ಸಂಧಿಸಿವೆ. "ರಸೋ ವೈ ಸಃ" "ಆನಂದೋ ಬ್ರಹ್ಮೇತಿ ವ್ಯಜಾನಾತ್" ಎಂದು ಸಾರಿದ ಉಪನಿಷತ್ತಿನ ಋಷಿಗಳ ಪಂಕ್ತಿಗೆ ಸೇರಿದ ಶಂಕರಾಚಾರ್ಯರ ತತ್ತ್ವದಲ್ಲಿ ಕಾವ್ಯಶ್ರೀ ಮನೆ ಮಾಡಿಕೊಂಡಿರುವಳು. ಇಂತಹವರ ಜೀವನವೇ ಸೃಷ್ಟಿಕರ್ತನ ಒಂದು ಮಹಾಕಾವ್ಯ. ಅವರೇನು ಆಡಲಿ ಮಾಡಲಿ ಅಲ್ಲೆಲ್ಲ ಕಾವ್ಯದ ಒಂದು ಹಿನ್ನಲೆ ಇದ್ದೇ ಇರುವುದು.

ಶ್ರೀ ಶಂಕರಾಚಾರ್ಯರ ಸಾಹಿತ್ಯವನ್ನು ಮೂರು ಭಾಗ ಮಾಡಬಹುದು. ಮೊದಲನೆಯದೆ ಭಾಷ್ಯ ಸಾಹಿತ್ಯ. ಪ್ರಸ್ಥಾನತ್ರಯಗಳಿಗೆ ಬರೆದ ಭಾಷ್ಯಗಳು ಈ ಗುಂಪಿಗೆ ಬರುವುದು. ಎರಡನೆಯದೆ ಪ್ರಕರಣ ಗ್ರಂಥಗಳು. ಇಲ್ಲಿ ಅದ್ವೈತ ವೇದಾಂತವನ್ನು ಸ್ವತಂತ್ರವಾಗಿ ಪ್ರತಿಪಾದಿಸುವರು. ಆದರೆ ಕಾವ್ಯಾಂಶಕ್ಕೆ ಅಷ್ಟು ಸ್ಥಳವಿಲ್ಲ. ಉದ್ದೇಶ ಒಂದು ಸಿದ್ಧಾಂತವನ್ನು ಪ್ರತಿಪಾದಿಸುವುದು, ಅದನ್ನು ವಿರೋಧಿಸುವವರನ್ನು ಸೋಲಿಸುವುದು. ಶಂಕರಾಚಾರ್ಯರು ಅತಿ ಗಹನವಾದ ಅದ್ವೈತ ತತ್ತ್ವವನ್ನು ಪ್ರತಿಪಾದಿಸುತ್ತಿದ್ದರೂ ಅವರು ಇಲ್ಲಿ ಉಪಯೋಗಿಸುವ ಭಾಷೆ ಸರಳವಾಗಿದೆ, ನೇರವಾಗಿದೆ, ಓಜಸ್ಸಿನಿಂದ ಕೂಡಿದೆ. ಅನುಮಾನಕ್ಕೆ ಎಡೆಯಿಲ್ಲ. ವೃಥಾ ಶಬ್ದಾಡಂಬರವೇ ಇಲ್ಲ. ಏನು ಹೇಳಬೇಕೋ ಅದನ್ನು ಅದ್ಭುತ ಪರಿಣಾಮಕಾರಿಯಾಗುವಂತೆ ಹಿತಮಿತವಾಗಿ ಹೇಳುವರು. ಸಂಸ್ಕೃತದಲ್ಲಿ ಶಂಕರಾಚಾರ್ಯರ ಶೈಲಿಯನ್ನು "ಪ್ರಸನ್ನಗಂಭೀರ" ಎನ್ನುವರು. ಮೂರನೆಯದೇ ಅವರ ಸ್ತೋತ್ರ ಸಾಹಿತ್ಯ.

ಇಲ್ಲಿಯೇ ಕವಿಯ ಪ್ರತಿಭೆ ಸ್ಪಷ್ಟವಾಗಿ ಎದ್ದು ತೋರುವುದು. ಇಲ್ಲಿಯೇ ಅವರು ತಾವು ತತ್ತ್ವಜ್ಞಾನಿಯೆಂಬುದನ್ನೂ ಮರೆತು, ಅದ್ವೈತಿಗಳು ಎಂಬುದನ್ನೂ ಮರೆತು, ದ್ವೈತಿಗಳಲ್ಲಿ ದ್ವೈತರಾಗಿ, ಭಕ್ತರಲ್ಲಿ ಭಕ್ತರಾಗಿ, ತನ್ನಂತಹ ಪಾಪಿಯೇ ಇನ್ನಿಲ್ಲವೆಂದು ಭಾವಿಸಿಕೊಂಡು, ಭಗವಂತನ ಮೇಲೆ ಹಲವು ಶ್ಲೋಕಗಳನ್ನು ರಚಿಸುವರು. ಇವುಗಳ ಮಾಧುರ್ಯ, ಸೌಂದರ್ಯ, ಲಾಲಿತ್ಯ, ಕಲ್ಪನೆಗಳನ್ನು ಒಮ್ಮೆ ಸವಿದರೆ ಎಂದೆಂದಿಗೂ ನಾವು ಅಧನ್ನು ಮರೆಯುವಂತೆ ಇಲ್ಲ. ಇದೊಂದು ಅಂತ್ಯವಿಲ್ಲದ ಆಕರ್ಷಣೆ. ಜ್ಞಾನಿ ಶಂಕರಾಚಾರ್ಯರು ನಮಗೆ ದೂರವಿದ್ದಂತೆ ಕಂಡರೂ, ಕವಿ ಶಂಕರಾಚಾರ್ಯರು, ಭಕ್ತ ಶಂಕರಾಚಾರ್ಯರು ನಮ್ಮಲ್ಲಿ ಒಬ್ಬರು. ಅಷ್ಟೇ ಏಕೆ ಭಗವಂತನ ಸಮೀಪದಲ್ಲಿ ಅವರೇ ನಮ್ಮ ಪ್ರತಿನಿಧಿಗಳಂತೆ ಇರುವರು.

ಕಾವ್ಯ ಪ್ರಧಾನವಾದ ಶ್ಲೋಕಗಳನ್ನು ಸ್ಥೂಲವಾಗಿ ಹೀಗೆ ವಿಂಗಡಿಸಬಹುದು. ವೇದಾಂತ ಸ್ತೋತ್ರಗಳು, ಶಿವ, ವಿಷ್ಣು, ದೇವಿ ಸ್ತೋತ್ರಗಳು ಮತ್ತು ಸಂಕೀರ್ಣ ಸ್ತೋತ್ರಗಳು. ವೇದಾಂತ ಸ್ತೋತ್ರಗಳಲ್ಲಿ ಅವರ ಮನಸ್ಸು ಕಾಲ ದೇಶ ನಿಮಿತ್ತಾತೀತವಾಗಿ ಬ್ರಹ್ಮಾನಂದ ಆಕಾಶದಲ್ಲಿ ಗರಿಗೆದರಿ ಸ್ವಚ್ಛಂದವಾಗಿ ಹಾರುವುದನ್ನು ಕೆಳಗಿನ ಶ್ಲೋಕದಲ್ಲಿ ನೋಡುವೆವು.

ಮನೋ ಬುದ್ಧ್ಯಹಂಕಾರ ಚಿತ್ತಾನಿನಾಹಂ
ನ ಚ ಶ್ರೋತ್ರಜಿಹ್ವೇ ನ ಚ ಘ್ರಾಣನೇತ್ರೇ
ನ ಚ ವ್ಯೋಮ ಭೂಮಿರ್ನ ತೇಜೋ ನ ವಾಯುಃ
ಚಿದಾನಂದರೂಪಃ ಶಿವೋऽಹಂ ಶಿವೋऽಹಂ.

ನಿತ್ಯಾನಂದ ಬ್ರಹ್ಮಸ್ವರೂಪವನ್ನು ಪಡೆದ ಜ್ಞಾನಿ ಸರ್ವ ಪೂಜ್ಯನು ಎಂಬುದನ್ನು ಮನೀಷ ಪಂಚಕದಲ್ಲಿ ಹೀಗೆ ಹೇಳುವರು: "ಯಾವ ಆನಂದ ಬಿಂದು ಮಾತ್ರದಿಂದ ಇಂದ್ರಾದಿಗಳು ತೃಪ್ತರೆನಿಸುವರೋ, ಕಲ್ಪನಾಶೂನ್ಯವಾದ ಚಿತ್ತದಲ್ಲಿ ಯಾವುದನ್ನು ಪಡೆದುಕೊಂಡ ಮುನಿ ಸುಖಿಯಾಗಿರುವನೋ, ಯಾವ ನಿತ್ಯಾನಂದದಲ್ಲಿ ಅಹಂಕಾರವನ್ನು ಲಯಗೊಳಿಸಿಕೊಂಡವನು ಬ್ರಹ್ಮವೇತ್ತನು ಮಾತ್ರವಲ್ಲ ಬ್ರಹ್ಮನೇ ಆಗಿರುವನೋ, ಅವನು ಯಾರಾದರೂ ಆಗಿರಲಿ ಸುರೇಂದ್ರನಿಂದಲೂ ನಮಸ್ಕಾರ ಮಾಡಿಸಿಕೊಳ್ಳುವುದಕ್ಕೆ ಯೋಗ್ಯವಾದ ಪಾದಗಳುಳ್ಳವನು."

ನರ್ಮದಾ, ಯಮುನಾ, ಗಂಗಾಸ್ತೋತ್ರಗಳಲ್ಲಿ ಕಾಲಿಗೆ ಕಿರುಗೆಜ್ಜೆಯನ್ನು ಕಟ್ಟಿಕೊಂಡು ನೃತ್ಯ ಮಾಡುತ್ತಿರುವ ನರ್ತಕಿಯ ಚಲನವಲನಗಳು ನಮ್ಮ ಕಣ್ಣು ಮುಂದೆ ಕಟ್ಟಿದಂತಾಗುವುದು.

ವಿಷ್ಣು, ಶಿವ, ದೇವಿಯರ ಮೇಲೆ ಬರೆದ ಶ್ಲೋಕಗಳನ್ನು ಓದುವಾಗ ಇವರೇ

" ಶಿವೋಽಹಂ ಶಿವೋಽಹಂ " ಎಂದು ಘರ್ಜಿಸಿದವರು, " ಜೀವ ಬ್ರಹ್ಮೈವ ನ ಪರಃ " ಎಂಬುದನ್ನು ಸಮರ್ಥಿಸಿದವರು ಎಂಬುದನ್ನು ಮರೆಯುವೆವು.

" ಭಜ ಗೋವಿಂದಂ, ಭಜ ಗೋವಿಂದಂ, ಭಜ ಗೋವಿಂದಂ ಭಜ ಮೂಢಮತೆ, ಸಂಪ್ರಾಪ್ತೇ ಸನ್ನಿಹಿತೇ ಕಾಲೇ ನಹಿ ನಹಿ ರಕ್ಷತಿ ಡುಕೃಞ್ಕರಣೇ " ಎನ್ನುವುದು ಯಾರಿಗೆ ನೆನಪಿಲ್ಲ. ನರಸಿಂಹ ಕರಾವಲಂಬನ ಸ್ತೋತ್ರದಲ್ಲಿ ಎಷ್ಟು ದೈನ್ಯದಿಂದ ಕಲ್ಲೂ ಕರಗುವಂತಹ ರೀತಿಯಲ್ಲಿ ನರಸಿಂಹನ ಕರಾವಲಂಬನವನ್ನು ಯಾಚಿಸುವರು. "ಸಂಸಾರ ವೆಂಬ ಕಾಳ್ಗಿಚ್ಚಿನ ಭಯಂಕರವಾದ ಜ್ವಾಲೆಗಳಿಂದ ಬೆಂದು ನೊಂದವನಾಗಿ, ತಂಪಾದ ಸರಸ್ಸಿನಂತಿರುವ ನಿನ್ನ ಚರಣಗಳೆಡೆಗೆ ಶರಣುಹೊಂದಲು ಬಂದಿರುವೆ. ಹೇ ಲಕ್ಷ್ಮೀ ನರಸಿಂಹ, ನನಗೆ ನಿನ್ನ ಕರಗಳ ಆಸರೆಯನ್ನು ನೀಡು " ಎಂದು ಯಾಚಿಸುವರು. ಈ ಸ್ತೋತ್ರಗಳನ್ನು ಓದುವಾಗಲಂತೂ ಸಂಸಾರದ ದುಃಖತಾಪತ್ರಯಗಳು ಕಣ್ಣಿಗೆ ಕಟ್ಟಿದಂತಾಗುವುದು. ದೈನ್ಯದಿಂದ ಅವರು ಭಗವಂತನನ್ನು ಯಾಚಿಸುವಾಗ ದೇಹವೆಲ್ಲ ಕಣ್ಣೀರಿನ ರೂಪನ್ನೇ ಧರಿಸಿತೋ ಎಂದು ಭಾಸವಾಗುವುದು.

ಶಿವನಮೇಲೆ ರಚಿಸಿರುವ ಶಿವಾನಂದಲಹರಿಯಲ್ಲಿ ಬರುವ ನೂರು ಶ್ಲೋಕ ಗಳಂತೂ ಸುಂದರ ಉಪಮಾನಗಳ ತೋರಣದಂತಿದೆ. ಎಲ್ಲದರಲ್ಲಿಯೂ ಶಿವನನ್ನೇ ಕೇಂದ್ರವಾಗಿ ಮಾಡಿಕೊಂಡು ಕಟ್ಟಿರುವರು. ಮುಂದೆ ಬರುವ ಭಾವನೆಗಳು ಎಷ್ಟು ಹೃದಯಂಗಮವಾಗಿವೆ: " ಶಿವ, ನನ್ನ ಮನಸ್ಸೆಂಬ ಮರ್ಕಟವನ್ನು ಭಕ್ತಿಯ ದಾರದಿಂದ ಕಟ್ಟಿಹಾಕು " ಎನ್ನುವರು. " ನೀನು ಆದಿ ಕಿರಾತ, ನನ್ನ ಮನಸ್ಸಿನೊಳಗೆ ಬಂದು ವಾಸಿಸು. ಇಲ್ಲಿ ಕಾಮಕ್ರೋಧಾದಿಗಳೆಂಬ ಮೃಗಗಳಿವೆ. ಅವನ್ನು ಬೇಟೆ ಯಾಡಿ ಆನಂದದಿಂದ ವಿಹರಿಸು." ನಮ್ಮ ಲಲಾಟದ ಮೇಲೆ ಬರೆದಿರುವುದನ್ನು ಅಳಿಸು ವುದು ಶಿವನಿಗೆ ಸುಲಭ ಎಂದು ಹೀಗೆ ಬೇಡುವರು: " ಬ್ರಹ್ಮನ ಒಂದು ತಲೆಯನ್ನೇ ತನ್ನ ಉಗುರಿನಿಂದ ತೆಗೆದವನಿಗೆ ಅವನ ಬರಹವನ್ನು ಅಳಿಸುವುದು ಸಾಧ್ಯವಿಲ್ಲವೆ? " ಶಿವ ಕೈಲಾಸದ ಕಲ್ಲಿನ ಮೇಲೆ ಏತಕ್ಕೆ ನಡೆಯುವದನ್ನು ಅಭ್ಯಾಸ ಮಾಡುತ್ತಿರುವನು ಎಂಬುದನ್ನು ಎಷ್ಟು ಮನೋಹರವಾಗಿ ಆಚಾರ್ಯರು ಬಣ್ಣಿಸುವರು: " ಮುಂದೆ ಭಕ್ತರ ಹೃದಯದಲ್ಲಿ ಸಂಚರಿಸಬೇಕಾಗುವುದು. ಅವರ ಹೃದಯ ಬಹಳ ಒರಟು. ಅದಕ್ಕಾಗಿ ಕೈಲಾಸದ ಕಲ್ಲಿನ ಮೇಲೆ ಈಗಿನಿಂದ ನಡೆದು ಅಭ್ಯಾಸ ಮಾಡಿಕೊಳ್ಳುತ್ತಿರು ವನು! " ಶಿವನ ಲೋಕಾನುಕಂಪವನ್ನು ವಿವರಿಸುವ ಶ್ಲೋಕವಂತೂ ಭವ್ಯತೆಯ ಶಿಖರವನ್ನೇ ಮುಟ್ಟುವುದು. ಸಮುದ್ರವನ್ನು ಕಡೆಯುತ್ತಿದ್ದಾಗ ಹಾಲಾಹಲವೆಂಬ ವಿಷ ಉದಿಸಲು, ಅದಕ್ಕೆ ಅಂಜಿ ದೇವದಾನವರು ಪಲಾಯನ ಮಾಡುತ್ತಿದ್ದಾಗ ಶಿವ ಮುಂದೆ ಬಂದು ಪ್ರಪಂಚವನ್ನು ರಕ್ಷಿಸಲು ತಾನು ಅದನ್ನು ಸ್ವೀಕರಿಸಿದನು. ಆದರೆ

ಪೂರ್ತಿ ನುಂಗಲೂ ಇಲ್ಲ. ಏಕೆಂದರೆ ಒಳಗೆ ಇರುವ ಲೋಕವೆಲ್ಲಿ ನಾಶವಾಗುವುದೋ ಎಂಬ ಕರುಣೆಯಿಂದ! ಅದು ಕೊರಳ ಮಧ್ಯದಲ್ಲಿ ನಿಂತು ಶಿವ ನೀಲಕಂಠನಾದನು!

ಶ್ರೀ ಶಂಕರಾಚಾರ್ಯರು ದೊಡ್ಡ ದೇವೀ ಉಪಾಸಕರು. ಜಗಜ್ಜನನಿಯನ್ನು ಹಲವು ಹೆಸರಿನಿಂದ ಕರೆದು, ಅವಳನ್ನು ಭಕ್ತಿಯ ಶ್ರೇಷ್ಠ ಪುಷ್ಪಗಳಿಂದ ಅರ್ಚಿಸಿರುವರು. ದೇವಿ ಅಪರಾಧ ಕ್ಷಮಾಪಣ ಸ್ತೋತ್ರದಲ್ಲಿ ಕೆಟ್ಟಮಕ್ಕಳು ಹುಟ್ಟಬಹುದು, ಎಂದಿಗೂ ಕೆಟ್ಟ ತಾಯಿ ಹುಟ್ಟಲಾರಳು ಎಂದು ಹೇಳುವರು. ಅನ್ನಪೂರ್ಣ ಸ್ತೋತ್ರದಲ್ಲಿ ತಾಯಿಯ ಮುಂದೆ ನಿಂತುಕೊಂಡು "ಭಿಕ್ಷಾಂದೇಹಿ ಕೃಪಾವಲಂಬನಕರೀ, ಮಾತಾನ್ನ ಪೂರ್ಣೇಶ್ವರಿ" ಎಂದು ಯಾಚಿಸುವರು. ಹೊಟ್ಟೆಗೆ ಬಟ್ಟೆಗೆ ಬೇಡುವುದಿಲ್ಲ. ಜ್ಞಾನ ವೈರಾಗ್ಯಗಳನ್ನು ನೀಡೆಂದು ಕೇಳುವರು. ಇನ್ನು ಶ್ರೀ ಶಂಕರಾಚಾರ್ಯರು ದೇವಿಯ ಮೇಲೆ ರಚಿಸಿದ ಸೌಂದರ್ಯಲಹರೀ. ಇಲ್ಲಿ ಅತಿ ಪ್ರೌಢವಾದ ಕವಿತ್ವದಲ್ಲಿ ಅವರ ದೇವೀಭಕ್ತಿ ಹರಿಯುವುದು. ಶಂಕರಾಚಾರ್ಯರು ಸೃಷ್ಟಿಯನ್ನು ವಿರಚಿಸಿದ ಬ್ರಹ್ಮಮಯಿಯನ್ನು ವರ್ಣಿಸುವರು. ಸೌಂದರ್ಯದ ಆಗರವೇ ಅವಳು. ಸೌಂದರ್ಯದ ಮಹೋದಧಿ ಅವಳು. ಅದರಿಂದ ಒಂದೆರಡು ಬಿಂದುಗಳನ್ನು ಮಾನವರ ಮೇಲೆ ಪ್ರೋಕ್ಷಿಸಿದರೆ ಅವರು ರತಿ ಮನ್ಮಥರಂತೆ ಆಗುವರು. ಆ ಆದಿಶಕ್ತಿ ಕೇವಲ ಸ್ತ್ರೀ ಸೌಂದರ್ಯ ಮಾತ್ರವಲ್ಲ. ಆ ಸೌಂದರ್ಯದ ಸಾಗರದಲ್ಲಿ ಜಗದ ಹಲವು ಬಗೆಯ ಸೌಂದರ್ಯ ನದಿಗಳೆಲ್ಲ ಸೇರಿವೆ. ಅರುಣ ಸಂಧ್ಯಾರಾಗದ ಸೌಂದರ್ಯ ಅವಳು; ತರುಲತೆ ಪುಷ್ಪಗಳ ಸೌಂದರ್ಯ ಅವಳು; ಸ್ತ್ರೀ ಪುರುಷರ ಸೌಂದರ್ಯದ ಹಿಂದೆ ಇರುವುದು ಅವಳ ಛಾಯೆ; ನೀತಿ ಸೌಂದರ್ಯ ಅವಳು; ಧರ್ಮ ಸೌಂದರ್ಯ ಅವಳು; ಯೋಗ ಸೌಂದರ್ಯ ಅವಳು; ಸಾಕ್ಷಾತ್ಕಾರ ಸೌಂದರ್ಯವೂ ಅವಳೇ. ಸೌಂದರ್ಯವನ್ನು ಅದರ ಪರಾಕಾಷ್ಠತೆಗೆ ಏರಿಸಿ ಅದಕ್ಕೆ ಬ್ರಹ್ಮತ್ವದ ಪಟ್ಟವನ್ನೇ ಕಟ್ಟಿರುವರು. ಯಾವುದು ಸತ್ಯವಾಗಿದೆಯೋ ಅದು ಶಿವಮಯವಾಗಿದೆ ಮತ್ತು ಸುಂದರವಾಗಿದೆ ಎಂಬ ಸಿದ್ಧಾಂತ ಉದಾಹರಿತವಾಗಿದೆ ಇಲ್ಲಿ. ಸ್ತೋತ್ರದ ಕೊನೆಯಲ್ಲಿ ಇದನ್ನು ತಾಯಿಗೆ ಅರ್ಪಿಸುವಾಗ ಎಷ್ಟು ಸುಂದರವಾಗಿ ಹೀಗೆ ವಿವರಿಸುವರು: "ತಾಯಿ ನಿನ್ನ ಕೃಪೆಯಿಂದ ಸ್ಫುರಿಸಿದ ಮಾತುಗಳಿಂದಲೇ ನಿನ್ನನ್ನು ಸ್ತುತಿಸುತ್ತಿರುವೆನು. ಇದು ದೀವಟಿಗೆಯಿಂದ ರವಿಗೆ ಆರತಿಯನ್ನು ಎತ್ತಿದಂತೆ, ಚಂದ್ರನ ಕಾಂತಿಯಿಂದ ಜಿನುಗಿದ ಅಮೃತಶಿಲೆಯ ಜಲದಿಂದ ಚಂದ್ರನಿಗೆ ಅರ್ಘ್ಯವನ್ನು ಕೊಟ್ಟಂತೆ, ಸಮುದ್ರೋದಕವನ್ನೇ ಸಮುದ್ರಕ್ಕೆ ಅರ್ಪಿಸಿದಂತೆ."

ಶಂಕರಾಚಾರ್ಯರ ಸ್ತೋತ್ರಗಳಲ್ಲಿ ಮತಭ್ರಾಂತಿಗೆ ಎಡೆಯಿಲ್ಲ. ಶಿವ ವಿಷ್ಣು ದೇವಿಯರೆಂಬ ಪಕ್ಷಪಾತವೇ ಇಲ್ಲ. ಯಾವ ದೇವರನ್ನು ನುತಿಸಲಿ ಅದು ತತ್ಕಾಲಕ್ಕೆ

ಪರಬ್ರಹ್ಮನೇ ಎಂದು ನೋಡುವರು. ಬೇರೆ ಬೇರೆ ದೇವ ದೇವಿಯರಿಗೆ ಬರೆದ ಸ್ತೋತ್ರಗಳನ್ನು ಓದುತ್ತಿದ್ದರೆ ಇದೇ ಇವರ ಇಷ್ಟದೇವತೆ ಇರಬೇಕು ಎಂದು ತೋರುವಂತೆ ನಮಗೆ ಮಾಡಬಲ್ಲರು. ತತ್ತ್ವದ ಅಸ್ತಿಪಂಜರಕ್ಕೆ ಕಾವ್ಯದ ರೂಪವನ್ನು ತೊಡಿಸಿ, ಅದಕ್ಕೆ ಭಕ್ತಿಯ ಪ್ರಾಣವನ್ನು ಆವಾಹನೆ ಮಾಡಿರುವರು. ಇವೇ ಭವಜೀವಿಗಳನ್ನು ಭಗವಂತನೆಡೆಗೆ ಒಯ್ಯಲು ಅವರು ಬಿಟ್ಟ ದೇವದೂತರು. ಇದುವರೆಗೆ ಎಷ್ಟೋ ಮಂದಿ ಇವರ ಮೂಲಕ ದೇವರೆಡೆಗೆ ಹೋಗಿರುವರು, ಮುಂದೆ ಎಷ್ಟೋ ಮಂದಿ ಇವರ ಮೂಲಕ ಹೋಗಲಿರುವರು.

—ಸ್ವಾಮಿ ಸೋಮನಾಥಾನಂದ

ಯಕ್ಷಗಾನ*

ಬುವಿಗೆ ಯಕ್ಷ ಇಳಿದು ಬರೆ
ಕಿನ್ನರಿಯನು ನುಡಿಸುತ;
ಹರುಷ ಭರದಿ ಹಿಗ್ಗಿ ತಿರೆ
ಮೌನದಿ ತಲೆದೂಗುತ. ೧

ತಂತಿಯುಲಿಗೆ ಗಾನವೆರಸೆ
ಜಡವು ಕ್ಷಣದಿ ಪುಳಕಿತ.
ಧವಲಗಿರಿಯು ಶಿರವ ಬಾಗಿ
ಮಣಿಯದಿಹುದೆ ಹಿಗ್ಗುತ. ೨

ಪಕ್ಷಿಕುಲವು ಮೌನವಾಂತು
ಕೇಳುತಿಹುದು ನಲಿಯುತ;
ಗಿಡ ಬಳ್ಳಿಯು ಚಿಗಿತು ಹೂತು
ಲಾಲಿಸುತಿದೆ ಕುಣಿಯುತ. ೩

ಭ್ರಮರ ಕುಲಕೆ ದೀರ್ಘ ನಿದ್ರೆ
ಜೋಂಪಿಸುತಿದೆ ಗಾಳಿಯು;
ಕಡಲ ಎದೆಯು ತುಂಬಿ ಬರೆ
ಅಲೆ ಅಲೆಗೂ ಮೌನವು. ೪

ಯಕ್ಷಗಾನ ಮೋಡಿಯಿಂದೆ
ವಸಂತ ಋತುವೆ ನಿತ್ಯವು;
ಗಾನ ಸೊದೆಯ ಸವಿಯನೂಡೆ
ಅಮೃತತ್ವವು ಸತ್ಯವು. ೫

ಅನಂತ ಬುರ್ಲಿ

---

* (ವಿಲಿಯಮ್ ಷೇಕ್‌ಸ್ಪಿಯರ್ ಮಹಾಕವಿಯ 'The Power of Song' ಎಂಬ ಕವನದ ಭಾವಾನುವಾದ).

ಶಬ್ದ ಸಂಚಯ

೧

ಇಂದು ಹಲವರಲ್ಲಿ ಊಹಾರ್ಥಗಳೇ ಶಬ್ದಾರ್ಥಗಳಾಗಿಬಿಟ್ಟಿವೆ! ತಿಳಿಯದಿದ್ದರೆ ತಿಳಿದಿಲ್ಲ ಎಂದು ಹೇಳುವುದು ನಾಚಿಕೆಗೇಡು ಎಂಬ ಭಾವನೆ ಬೆಳೆದುಬಿಟ್ಟಿದೆ. ಬೆಳೆದ ಬೆಳೆಯಲ್ಲಿ, ಇಂದು ಎಷ್ಟು ಕಿತ್ತರೂ ಕಳೆ ಬೆಳೆಯುತ್ತಿದೆ. ಸಾಹಿತ್ಯದ ಬೇರೆ ಕ್ಷೇತ್ರಗಳಲ್ಲಿ ಹಾಗಿರಲಿ; ಊಹಾಪ್ರಪಂಚದ ಎಲ್ಲೆ ಪಾಂಡಿತ್ಯ ಪ್ರಪಂಚಕ್ಕೂ ಕಾಲಿಟ್ಟಿದೆ. ಮೈಸೂರಿನ ಕಾವ್ಯಾಲಯವು ಪ್ರಕಟಿಸಿದ ಶ್ರೀ ರಾಮಾಶ್ವಮೇಧದಲ್ಲಿ ಬರುವ ಕೆಲವು ಶಬ್ದಗಳನ್ನು ತೆಗೆದುಕೊಂಡು ಶ್ರೀ ತೆಕ್ಕುಂಜೆ ಗೋಪಾಲಕೃಷ್ಣ ಭಟ್ಟರು ಅವುಗಳ ಅರ್ಥನಿರ್ಣಯವನ್ನು ವಿವೇಚಿಸಿದ್ದಾರೆ.[1] ಅವುಗಳಲ್ಲಿ ಹಲವನ್ನು ನಿಷ್ಕೃಷ್ಟವಾಗಿ ನಿರ್ಣಯಿಸಿರುವುದು ಸಂತೋಷದ ಸಂಗತಿ. ಆದರೆ, ಕೆಲವು ಶಬ್ದಗಳ ಅರ್ಥವನ್ನು ಊಹಿಸಿ ಹೇಳಿದ್ದಾರೆ. ಅವುಗಳ ಅರ್ಥವನ್ನೂ, ಇನ್ನೂ ಕೆಲವು ಶಬ್ದಗಳ ಅರ್ಥವನ್ನೂ ನಿಷ್ಕರ್ಷಿಸುವುದೇ ಪ್ರಸ್ತುತ ಲೇಖನದ ಉದ್ದೇಶ.

೧. ಕಪ್ಪುರವಾಡೆ

"....ನೆಟ್ಟನೆ ಬೀಸುವ ಬಿರುಗಾಳಿಯ ಪೊಯ್ಲಿಗರೆಮುಱಿದು ಬಾಡುವ ಕಪ್ಪುರವಾಡೆಯಂತೆ ..."[2] ಎಂಬಲ್ಲಿ ಪ್ರಯೋಗಿಸಿದ 'ಕಪ್ಪುರವಾಡೆ' ಎಂಬ ಶಬ್ದಕ್ಕೆ, ಪ್ರಕಾಶಕರು ತಮ್ಮ ಗ್ರಂಥದ ಅಂತ್ಯದಲ್ಲಿರುವ ಅರ್ಥಕೋಶದಲ್ಲಿ ಅರ್ಥ ಕೊಟ್ಟಿಲ್ಲ. ಕಿಟ್ಟೆಲ್ ಮಹಾಶಯರ ಅರ್ಥಕೋಶದಲ್ಲಿ 'ಕರ್ಪೂರಬಾಡೆ'ಗೆ 'A kind of wild plantain' ಎಂದು, 'ಒಂದು ಜಾತಿಯ ಕಾಡುಬಾಳೆ' ಎಂಬಂತೆ ಅರ್ಥಕೊಟ್ಟಿದ್ದಾರೆ. ಇದಕ್ಕೆ ಕಾರಣ, ಅವರಿಗೆ ಕರ್ಪೂರ ಬಾಳೆಯ ಸರಿಯಾದ ಪರಿಚಯವಿಲ್ಲದಿರುವುದಿರಬೇಕು. ಕರ್ಪೂರ ಎಂಬ ಶಬ್ದಕ್ಕೆ ಕಪ್ಪೂರ, ಕಪ್ಪುರ, ಕಪ್ರ, ಕರ್ಪುರ ಎಂಬ ತದ್ಭವ ರೂಪಗಳನ್ನು ಅವರು ಕೊಟ್ಟಿದ್ದಾರೆ. ಕೇಶಿರಾಜನ ಶಬ್ದಮಣಿದರ್ಪಣದ ಅಪಭ್ರಂಶ ಪ್ರಕರಣದಲ್ಲಿಯೂ ಕರ್ಪೂರದ ತದ್ಭವ ಕಪ್ಪುರ ಎಂದು ಹೇಳಿದ್ದಾನೆ.

---

[1] ಪ್ರಬುದ್ಧ ಕರ್ಣಾಟಕ. ಸಂಪುಟ ೪೦—ಸಂಚಿಕೆ ೧—"ಶ್ರೀ ರಾಮಾಶ್ವಮೇಧದ ಕೆಲವು ಪದಗಳು"

[2] 'ಶ್ರೀ ರಾಮಾಶ್ವಮೇಧಂ'—ಪುಟ ೩೫, ಪಂಕ್ತಿ ೬.

ಏಲಕಿವಾಟೆ, ಕರ್ಬಾಟೆ, ಕಲ್ಲುಬಾಳೆ, ಪಚ್ಚೆಬಾಳೆ, ಪುಟ್ಟಬಾಳೆ, ನೇಂದ್ರಬಾಳೆ, ಚಂದ್ರಬಾಳೆ, ಮರಬಾಳೆ, ರಸಬಾಳೆ, ಹೊಂಬಾಳೆ (ಪೊಂಬಾಟೆ), ಕಾಡುಬಾಳೆ ಎಂದು ಮೊದಲಾದ ಅನೇಕ ಜಾತಿಗಳಿವೆ. ತೆಕ್ಕುಂಜೆಯವರು ಹೇಳುವ ಮಂಗಳೂರು ಕಡೆಯ 'ಗಾಳಿಬಾಳೆ' ಯೇ ಬೇರೆ; ಕಪ್ಪುರ ಬಾಟೆಯೇ ಬೇರೆ. ಕುಂದಾಪುರದ ಕಡೆ ಕರೆಯುವ ಕಪ್ರಬಾಳೆ (ಕರ್ಪ್ರಬಾಳೆ) ಯೂ ಕರ್ಪೂರ ಬಾಳೆಯೂ ಒಂದೇ. ಕಪ್ಪರ, ಕಪ್ಪುರ, ಕರ್ಪುರ ಮೊದಲಾದ ತದ್ಭವ ರೂಪಗಳನ್ನು ಉಚ್ಚಾರಣಾ ಭೇದದಿಂದ ಕರ್ಪ್ರ, ಕಪ್ರ ಮೊದಲಾದ ರೀತಿಯಲ್ಲಿ ಕರೆಯುತ್ತಾರೆ. 'ಕಪ್ರ' ಎಂಬುದೂ ಕರ್ಪೂರದ ತದ್ಭವ ಎಂದು ಕಿಟ್ಟೆಲ್ ಅವರೇ ಹೇಳಿದ್ದಾರೆ. "ಉಳಿದ ಜಾತಿಯ ಬಾಳೆಗಳು ಗಾಳಿಯಿಂದಾಗಿ ಕೆಳಗೆ ಬೀಳುವುದಿದ್ದರೆ, ಬುಡ ಮಗುಚಿ ಬೀಳುತ್ತವೆ. ಈ ಜಾತಿಯವು (ಗಾಳಿಬಾಳೆ) ಅರೆಮುರಿದು ಬೀಳುವುವೇ ಹೆಚ್ಚು" ಎಂದು ಶ್ರೀಯುತರು ತಮ್ಮ ವಾದವನ್ನು ಸಮರ್ಥಿಸಿಕೊಂಡಿದ್ದಾರೆ. ಬಲವಾದ ಗಾಳಿಗೆ ಬಾಳೆ ಮುರಿಯುವುದಿರಲಿ; ದೊಡ್ಡ ದೊಡ್ಡ ಹೆಮ್ಮರಗಳೂ ಮುರಿಯುವುದನ್ನು ನೋಡಿದ್ದೇವೆ. ಮುರಿಯದೆ ಬಿದ್ದರೂ ಅದು ಗಾಳಿ ಬಾಳೆಯೇ ಆಗಬೇಕೆಂದೇನಿಲ್ಲ. ಮಲೆನಾಡ ಕಡೆಗಳಲ್ಲಿಯೂ, ದಕ್ಷಿಣ ಕನ್ನಡ ಜಿಲ್ಲೆಯ ಘಟ್ಟದ ಬರೆ ಪ್ರದೇಶಗಳಲ್ಲಿಯೂ ಇಂದಿಗೂ ಈ ಕರ್ಪುರಬಾಳೆ ಸುಪರಿಚಿತ. ಈ ಜಾತಿಯ ಬಾಳೆಯನ್ನು ಆ ಜನರು 'ಕರ್ಪುರಬಾಳೆ' ಎಂದು ರೂಢಿಯಲ್ಲಿ ಕರೆಯುತ್ತಾರೆ. ಈ ಜಾತಿಯ ಬಾಳೆಯನ್ನು ನೆಟ್ಟು, ಹಣ್ಣು ಕೊಟ್ಟು, 'ಇದರಲ್ಲಿ ಸ್ವಲ್ಪ ಕರ್ಪೂರದ ಪರಿಮಳ ಬರುತ್ತದೆ ನೋಡಿ!' ಎನ್ನುತ್ತಾರೆ. ರಸಬಾಳೆ ಹಣ್ಣಿನ ರುಚಿ, ಬೇರೆ ಬಾಳೆಹಣ್ಣಿನಲ್ಲಿ ಸಿಗದಂತೆ, ಈ ಕರ್ಪುರಬಾಳೆಗೂ ಬೇರೆ ಬಾಳೆ ಹಣ್ಣಿನಲ್ಲಿ ಕಂಡುಬರದ ಕರ್ಪೂರದ ಪರಿಮಳ (ಸೆಗಡು) ಬರುತ್ತದೆ. ಇದೇ ರೀತಿ, ಕರ್ಪುರ ಸುಂ (ಶುಂ) ಠಿ ಎಂಬುದೂ ಇದೆ. ಕರ್ಪುರ ಬ (ವ) ಳ್ಳಿ, ಕರ್ಪುರ ವೀಳೆಯ ದೆಲೆ ಎಂಬುವೂ ಮಲೆನಾಡಿನಲ್ಲಿ ಸುಪ್ರಸಿದ್ಧ. ಕರ್ಪುರ ಸುಂಟಿಯೂ, ಕರ್ಪುರ ವಳ್ಳಿಯೂ ಕರ್ಪೂರದ ಪರಿಮಳವನ್ನು ಹೊಂದಿರುವುದರಿಂದ ಅವಕ್ಕೆ ಆ ಹೆಸರು ಬಂದಿವೆ. ಕರ್ಪೂರಬಾಳೆಯ ಹಣ್ಣು 'ವಿಶಿಷ್ಟ ಪರಿಮಳದಿಂದ ಕೂಡಿರುತ್ತದೆ' ಎಂದು ಶ್ರೀಯುತರು ಹೇಳಿದ್ದಾರೆ. ಆ 'ವಿಶಿಷ್ಟ ಪರಿಮಳವೇ' ಕರ್ಪೂರದ ಪರಿಮಳ! ಮುದ್ದಣನು ಕುಂದಾಪುರದಲ್ಲಿ ಬಹಳ ಕಾಲ ಉಪಾಧ್ಯಾಯನಾಗಿದ್ದ ಮಾತ್ರದಿಂದಲೇ ಅವನ ಅನುಭವಕ್ಕೆ ಬಂದ ಬಾಳೆಯೆಲ್ಲ 'ಕಪ್ರಬಾಳೆ'ಯಾಗಬೇಕೆಂದಿಲ್ಲ. 'ಅರೆ ಮುಱಿದು' ಎಂಬುದು ಮುದ್ದಣನ ಪ್ರಾಸಂಗಿಕ ಪ್ರಯೋಗ; 'ಅರ್ಧಕ್ಕೇ ಮುರಿದು' ಎಂಬರ್ಥವಲ್ಲ. ಮುದ್ದಣಕವಿ 'ಕಪ್ಪುರವಾಟೆ'ಯನ್ನು ಕಂಡು ಬರೆದಿದ್ದಾನೆ; ಅದರ ಪರಿಮಳವನ್ನು ಅನುಭವಿಸಿದ್ದಾನೆ. 'ಕಪ್ಪುರವಾಟೆ' ಎಂದರೆ ಕರ್ಪೂರಬಾಳೆ ಎಂದೇ

ಅರ್ಥ. ಅದು ಗಾಳಿಬಾಳೆಯೂ ಅಲ್ಲ, ಕಾಡುಬಾಳೆಯೂ ಅಲ್ಲ; ಮಲೆನಾಡಿನವರಿಗೆ ಸುಪರಿಚಿತವಾದ ಕರ್ಪುರ ಬಾಳೆ.

೨. ಕುಱುಂಬುಲ್

"ಕೆಯ್ವೊಲಸೊಳ್ ಬೆಳೆದ ಕುಱುಂಬುಲ್ಲಂ ಕಿೞ್ತುಬಿಸುಡುವಂತಿರೆ ಸೀತೆಯಂ ಬಿಡುವೆಂ . . ."[3] ಎಂಬಲ್ಲಿನ 'ಕುಱುಂಬುಲ್' ಎಂಬ ಶಬ್ದಕ್ಕೆ ಕಾವ್ಯಾಲಯದಿಂದ ಪ್ರಕಟಿತ ಶ್ರೀರಾಮಾಶ್ವಮೇಧದ ಪ್ರತಿಯ ಅರ್ಥಕೋಶದಲ್ಲಿ, 'ಕುರುಚಲು ಹುಲ್ಲು' ಎಂಬ ಅರ್ಥ ಕೊಟ್ಟಿದೆ. ಶ್ರೀ ತೆಕ್ಕುಂಜೆಯವರು ಈ ಅರ್ಥವನ್ನು ಅಲ್ಲಗಳೆದು, 'ಕಳೆ ಹುಲ್ಲು ಎಂಬ ಅರ್ಥವು ಪ್ರಶಸ್ತ' ಎಂಬ ನಿರ್ಧಾರಕ್ಕೆ ಬಂದಿದ್ದಾರೆ. ತಮ್ಮ ನಿರ್ಣಯವನ್ನು ಸಮರ್ಥಿಸುತ್ತ, 'ಬತ್ತದ ಗದ್ದೆಗಳಲ್ಲಿ ತಾನಾಗಿ ಬೆಳೆಯುವ ಕಳೆಹುಲ್ಲನ್ನು ಈ ಕಡೆ ಕುರುಂಬುಲ್ ಎಂದು ಕರೆಯುತ್ತಾರೆ' ಎಂದಿದ್ದಾರೆ. ಇದಕ್ಕೆ ಉಚ್ಚಾರಣಾ ಭೇದಗಳಿಂದ ಕುರುಂಬಿಲಿ, ಕುರುಂಬಿಲು ಎಂಬ ರೂಪಗಳಿವೆ ಎಂದು ತಿಳಿಸಿದ್ದಾರೆ.

ಮೊದಲಾಗಿ, ಕಿಟ್ಟೆಲ್ಲರ ಅರ್ಥಕೋಶದಲ್ಲಿ ಕುಱುಂಬುಲ್ ಎಂಬ ಶಬ್ದ ಕೊಟ್ಟಿಲ್ಲ. ಕಾವ್ಯಾಲಯದ ಪ್ರತಿಯ ಅರ್ಥಕೋಶದಲ್ಲಿ ಊಹಾರ್ಥ ಹೇಳಿದರೂ ಧೈರ್ಯವಾಗಿ ಹಾಕಿದ್ದಾರೆ! 'ಕುಱುಂಬುಲ್' ಎಂಬುದಕ್ಕೆ ಕುರುಂಬಿಲಿ, ಕುರುಂಬಿಲು ಎಂಬ ಉಚ್ಚಾರಣಾಭೇದಗಳಲ್ಲದೆ, ಕುರುಂಬುಲು, ಕುರುಬುಲು, ಕುರುಬ್ಲು ಎಂಬ ರೂಪ ಭೇದಗಳೂ ನಮ್ಮೂರಿನಲ್ಲಿವೆ. ಇನ್ನೂ ಅನೇಕ ಅವತಾರಗಳನ್ನು ತಾಳಿದರೂ ಭಾಷಾ ಪ್ರಪಂಚದಲ್ಲಿ ಆಶ್ಚರ್ಯವಿಲ್ಲ.

ನಮ್ಮೂರಿನಲ್ಲಿ ಕಳೆಹುಲ್ಲು ಹೇರಳ; ಸಾಲದುದಕ್ಕೆ ಅವುಗಳಲ್ಲಿಯೇ ನಾನಾ ಜಾತಿಗಳು ಬೇರೆ!—ನಳಿಯು, ಓಟೆಕೀಲು, (ವಾಂಟ್‌ಕೀಲ್) ಕುರುಬುಲು, ಹಿಟ್ಟುಂಬೆ, (ಇಟ್ಟುಂಬೆ), ಚಂಚಮಿ, ಮೊದಲಾದುವುಗಳು. ಇವುಗಳಲ್ಲಿ ನಳಿಯು, ಓಟೆಕೀಲು ಕುರುಬುಲುಗಳು ಭತ್ತದಬೆಳೆಯ ಜೊತೆಯಲ್ಲಿಯೇ ಒಡನಾಡಿಗಳಾಗಿ ಬೆಳೆಯುವ ಕಳೆಗಳು. ಹಿಟ್ಟುಂಬೆ, ಚಂಚಮಿಗಳು,—ಉದ್ದು, ಹುರುಳಿ ಮುಂತಾದ ಧಾನ್ಯದ ಬೆಳೆಯ ಜೊತೆಯಲ್ಲಿಯೂ, 'ಸುಗ್ಗಿ ಬೆಳೆ'ಯ ಜೊತೆಯಲ್ಲಿಯೂ ಬೆಳೆಯುವ ಕಳೆಗಳು. 'ಬತ್ತದ ಗದ್ದೆಗಳಲ್ಲಿ ತಾನಾಗಿ ಬೆಳೆಯುವ ಕಳೆಹುಲ್ಲು' ಎಂದು ಶ್ರೀಯುತರೆಂದಂತೆ ಅದು ಕೇವಲ ಕುರುಬುಲು ಮಾತ್ರವಲ್ಲ; ನಳಿಯು, ಓಟೆಕೀಲು, ಮುಂತಾದ ಇತರ ಜಾತಿಯ ಕಳೆಗಿಡಗಳೂ ಹುಟ್ಟುತ್ತವೆ. ಕುರುಬುಲು ಕಳೆಗಿಡ ಮಾತ್ರವಲ್ಲ; ಕಳೆಗಿಡಗಳಲ್ಲಿ ಒಂದು ಜಾತಿ. ಕುರುಚಲು ಹುಲ್ಲು ಭತ್ತದ ಗದ್ದೆಯಲ್ಲಿ ಮಾತ್ರವಲ್ಲ; ಎಲ್ಲಿಯೂ

[3] 'ಶ್ರೀರಾಮಾಶ್ವಮೇಧಂ'—ಪುಟ ೨೫, ಪಂಕ್ತಿ ೨.

ಬೆಳೆಯುತ್ತದೆ. 'ಕುಱುಂಬುಲ್' ಶಬ್ದದ ವ್ಯುತ್ಪತ್ತಿ, ರೂಪ, ನಿಷ್ಪತ್ತಿ ಇಲ್ಲಿ ಪ್ರಕೃತವಲ್ಲ. 'ಕುಱುಂಬುಲ್' ಎಂಬ ಶಬ್ದದ ಮಧ್ಯೆಯ ಅನುಸ್ವಾರ ಮಾತ್ರ ಲೋಪವಾಗಿ ಕುರುಬುಲು ಎಂದು ಉಳಿದಿದೆ. ಇದು ಕನ್ನಡಕ್ಕೆ ಅಪರೂಪವೇನಲ್ಲ. ಉದಾ: ಬೆಡಂಗು—ಬೆಡಗು, ಕದಂಪು—ಕದಪು ಇತ್ಯಾದಿ. ಕುಱುಂಬುಲ್ ಎಂಬ ಶಬ್ದ 'ಕುರುಬುಲು' ಎಂಬ ಹೊಸಗನ್ನಡ ಶಬ್ದದ ಹಳಗನ್ನಡ ರೂಪ. 'ಕುಱುಂಬುಲ್' ಭತ್ತದ ಬೆಳೆಯೊಡನೆಯೂ ಬೆಳೆಯುತ್ತದೆ, ಧಾನ್ಯದೊಡನೆಯೂ ಬೆಳೆಯುತ್ತದೆ. ಅದರದು ದುರ್ಬೀಜ. ಸಾಸಿವೆ ಕಾಳಿನಂತಹ ಚಿಕ್ಕ ಚಿಕ್ಕ ಬೀಜಗಳು ಒಂದು ಗಿಡದಲ್ಲಿ ಸಾವಿರಾರು ಬಿಡುತ್ತವೆ. ಒಂದು ಬೀಜ ಒಂದು ಗದ್ದೆಯಲ್ಲಿ ನಿಂತಿತೆಂದರೆ ಅದರ ಸಂತತಿಯನ್ನು ನಿರ್ಮೂಲಮಾಡುವುದು ಬಹಳ ಕಷ್ಟ. 'ಕುಱುಂಬುಲ್' ಎಂಬುದು ಕುರುಬುಲು ಮುಂತಾಗಿ ರೂಢಿಯಲ್ಲಿ ಕರೆಯುವ, ಭತ್ತದಗದ್ದೆಗಳಲ್ಲಿಯೂ, ಧಾನ್ಯದ ಗದ್ದೆಗಳಲ್ಲಿಯೂ ಬೆಳೆಯುವ ಕಳೆಗಿಡಗಳಲ್ಲಿ ಒಂದು. ಅದು ಕುರುಚಲು ಹುಲ್ಲೂ ಅಲ್ಲ; 'ಬತ್ತದಗದ್ದೆಗಳಲ್ಲಿ ತಾನಾಗಿ ಬೆಳೆಯುವ' ಎಲ್ಲ ಕಳೆಹುಲ್ಲೂ ಅಲ್ಲ.

ಶ್ರೀರಾಮಾಶ್ವಮೇಧದಲ್ಲಿ ಇನ್ನೂ ಕೆಲವು ಶಬ್ದಗಳಿಗೆ ನಿಷ್ಕೃಷ್ಟವಾಗಿ ಅರ್ಥ ತಿಳಿಯದಿರಬಹುದು; ತಿಳಿದರೂ ನಿಷ್ಕೃಷ್ಟತೆ, ಸಂದೇಹ, ಅಸಂಪೂರ್ಣಗಳಾಗಬಹುದು. ಅಂಥ ಎರಡು—ಮೂರು ಶಬ್ದಗಳ ಅರ್ಥಗಳನ್ನು ಕೊಡುವುದು ಪ್ರಸ್ತುತ ಉದ್ದೇಶ.

೩. ಪಾಲ್ಗೋಡು

"....ಪಾಲ್ಗೋಡಿನ ಜೋಲ್ಗೆಚ್ಚಲ ತೋರಮೊಲೆಯ ಎಳಗಂದಿ ಕರ್ದುಱುವಿನ ತೊಱೆದ ತಂಬಾಲಂ ಬೆರೆದು ಹನಿಸಿ ಕೊನೆನಾಲಗೆಯೊಸೆಱೆ ಬಾಯ್ಗಿನಿದಿನಿದಾಗೆ ಸವಿವ ಸವಿಯಂ ಲೋಗರಱಿವಂತು ...."[4]—ಇಲ್ಲಿ ಬರುವ 'ಪಾಲ್ಗೋಡು' ಎಂಬ ಶಬ್ದಕ್ಕೆ ಕಿಟ್ಟೆಲ್ಲರ ಅರ್ಥಕೋಶದಲ್ಲಿ ಅರ್ಥಕೊಟ್ಟಿಲ್ಲ. ಕಾವ್ಯಾಲಯದ ಪ್ರತಿಯಲ್ಲಿ ಕೊಟ್ಟ ಅರ್ಥಕೋಶದಲ್ಲಿ, 'ಹಾಲು ಹೆಚ್ಚಾಗಿ ಕೊಡುವ ಕೋಡುಳ್ಳ' ಎಂದು ಅರ್ಥ ಕೊಟ್ಟಿದೆ. 'ಪಾಲ್ಗೋಡು' ಎಂಬ ಶಬ್ದಕ್ಕೆ ಈ ಅರ್ಥವಲ್ಲ. ಕೆಲವು ಹಸುಗಳ ಕೊಂಬು ಮಿದುವಾಗಿದ್ದು, ಮುಟ್ಟಿದರೆ ಅಲುಗುತ್ತಿರುತ್ತವೆ. ಇದು ಅವುಗಳ ವಯಸ್ಸಿನಿಂದ ಅಲುಗುವುದಲ್ಲ; ಎಳಗಂದಿಯಲ್ಲೂ ಕಂಡು ಬರುತ್ತವೆ. ಇಂತಹ ಹಸುಗಳ ಕೊಂಬುಗಳಿಗೆ ನಾವು 'ಹಾಲುಗೋಡು' ಎಂದು ರೂಢಿಯಲ್ಲಿ ಕರೆಯುತ್ತೇವೆ. ಹಸುಗಳಿಗೆ ಪಾಲ್ಗೋಡು ಇದ್ದ ಮಾತ್ರಕ್ಕೆ ಅವು ಹೆಚ್ಚು ಹಾಲು ಕೊಡಬೇಕೆಂದಿಲ್ಲ;

4 'ಶ್ರೀರಾಮಾಶ್ವಮೇಧಂ'—ಪುಟ ೧೦೦, ಪಂಕ್ತಿ ೩೦.

ಸೊಲಿಗೆ ಮಹಾಲಕ್ಷ್ಮಿಗಳಿಗೂ ಈ ಪಾಲ್ಗೋಡುಗಳು ಬರುವುದುಂಟು! ಚಿಕ್ಕ ಮಕ್ಕಳಿಗೆ ಬರುವ ಹಲ್ಲನ್ನು 'ಹಾಲು ಹಲ್ಲು' ಎಂದು ಕರೆಯುತ್ತೇವೆ. ಇಲ್ಲಿ, ಅದರ ಬಿಳಿಯ ಬಣ್ಣ, ಮೊದಲು ಬಂದ ಹಲ್ಲು ಎಂಬ ಅರ್ಥದಲ್ಲಿ ಆ ಹೆಸರನ್ನಿಟ್ಟಿದ್ದಾರೆ. ಈ ಪಾಲ್ಗೋಡುಗಳು ನಸುಬಿಳುಪಾಗಿರುವುದರಿಂದಲೂ ಆ ಹೆಸರು ಬಂದಿರಬಹುದು; ಆದರೆ ಎಲ್ಲ ಬಿಳಿ ಕೋಡುಗಳಿಗೆ ಪಾಲ್ಗೋಡು ಎನ್ನುವುದಿಲ್ಲ. 'ಹಾಲುಗಲ್ಲು,' 'ಹಾಲು ಕಾಗದ' ಎಂಬ ಶಬ್ದಗಳಲ್ಲೆಲ್ಲ ಅದರ ಸ್ವಚ್ಛತೆಯನ್ನೂ, ಅದರ ಮೃದುತೆಯನ್ನೂ 'ಹಾಲು' ಎಂಬ ಶಬ್ದ ಸೂಚಿಸಿದಂತಿದೆ.

೧. 'ನಮ್ಮ ಕಪಿಲೆದನದ ಕೊಂಬು ಹಾಲುಗೋಡು.'

೨. 'ನೆರೆಮನೆಯ ಗಂಗೆದನ ನಮ್ಮ ಮನೆಯ ಕಪಿಲೆಯನ್ನು ಗುದ್ದಿ ಅದರ ಹಾಲುಗೋಡನ್ನು ಮುರಿದು ಹಾಕಿತು,'

೩. 'ನಮ್ಮ ಮನೆಯ ಕಾವೇರಿಯ ಕೊಂಬು ಅಲುಗುತ್ತದೆ; ಅದು ಹಾಲುಗೋಡಿರಬೇಕು'

ಇವೆಲ್ಲ ದಿನಬಳಕೆಯ ಮಾತುಕತೆಗಳು. ಸಸ್ಯವಾಚಕ ಶಬ್ದಗಳಲ್ಲೂ ಈ ರೀತಿಯ ಶಬ್ದಗಳುಂಟು. ಉದಾ: ಪಾಲ್ಕಳ್ಳಿ, ಹಾಲುಗುಂಬಳ, ಹಾಲುಸೋರೆ; ಇತ್ಯಾದಿ. ಆದರೂ, ಸಸ್ಯವಾಚಕವಾಗಿ 'ಪಾಲ್ಗೋಡು' ಎಂಬ ಶಬ್ದ ಪ್ರಯೋಗದಲ್ಲಿಲ್ಲ. 'ಪಾಲ್ಗೋಡು' ಎಂದರೆ ಹಸುವಿನ ಮಿದುವಾದ, ನಸುಬಿಳುಪಾದ, ಅಲುಗುತ್ತಿರುವ ಹಾಲುಗೋಡು ಎಂಬ ಒಂದೇ ಅರ್ಥ.

೪. ಮೆಟ್ಟಡಿ

"ಇಂತು ಬಂದ ಕಡೆಯ ಕಡುಬೇಸಗೆಯೊಳಂ ತುರಂಗಂ ಮುಂತೆ ಮುಂತೆ ಪೋಗೆಪೋಗೆ ಅಂದಂದು ಚಾಟಿ ಪೇರೊಡಲಿಸುಗಿದುಂ ಬಿಗಿದುಂ ಪೊಱವೆಗೆದ ಬೆಳ್ವಕ್ಕದ ತುಂಬುವೆಱೆಗಳನೊಟ್ಟಿಸಿ ಮೂಸೆಯೊಳಿಟ್ಟು ತಿದಿಯೊತ್ತಿ ಕರಗಿಸಿಯು ಮೆಱೆದುಂ ಕಂಡರಸಿಯುಂ ಹಳಿದುಂ ಕೆತ್ತಿಯುಂ ಬೆಚ್ಚಂ ನಯಸಾಣೆವಿಡಿದುಂ ಸಮೆದುದೆಂಬಂತಿರೆ ತಟತಟನೆ ಪೊಳೆದು ಬಿತ್ತರಂ ಬಡೆದ ಬಿದುಗಲ್ಲ ಸುತ್ತಣ ಮೆಟ್ಟಡಿಯಿಂ . . ."[5] ಎಂಬಲ್ಲಿನ 'ಮೆಟ್ಟಡಿ' ಎಂಬ ಶಬ್ದಕ್ಕೆ ಕಾವ್ಯಾಲಯ ಪ್ರತಿಯ ಅರ್ಥಕೋಶದಲ್ಲಿ 'ಸೋಪಾನ' ಎಂದು ಊಹಾರ್ಥ ಕೊಟ್ಟು, ಪಕ್ಕದಲ್ಲಿಯೇ ಪ್ರಶ್ನಾರ್ಥಕ ಚಿಹ್ನೆ ಹಾಕಿ ಕೈಬಿಟ್ಟಿದೆ. ಕಿಟ್ಟೆಲ್ಲರ ಅರ್ಥಕೋಶದಲ್ಲಿ 'ಮೆಟ್ಟಡಿ' ಎಂಬ ಶಬ್ದಕ್ಕೆ ಅರ್ಥ ಕೊಟ್ಟಿಲ್ಲ. ಈ ಕೆಳಗಿನ ಪ್ರಯೋಗಗಳನ್ನು ನೋಡಿ:

[5] 'ಶ್ರೀ ರಾಮಾಶ್ವಮೇಧಂ'—ಪುಟ ೫೨, ಪಂಕ್ತಿ ೧೯.

೧. 'ಅಗೇಡಿ[6] ತುಂಬ ಕರುಗಳು, ಒಂದುಸಾರಿ ಓಡಿಸಿ ಬಾ.'

೨. 'ಅಗೇಡಿ ನೀರಿಲ್ಲದೆ ಕರಟಿ ಹೋಗಿದೆ.'

೩. 'ಜೋಯಿಸರೆ, ಸ್ವಲ್ಪ ಮನೆಅಡಿ, ಹಟ್ಟಿಯಡಿ ಕಂಡ್ ಹೇಳೀನಿ ಕಾಂಬೋ.'

೪. 'ಕತ್ತ್ಲು ಮ್ಗೂ, ಕಾಲಡಿ ಕಂಡ್‌ಕೊಂಡು ಹೋಗು; ಏನಾದರೂ ಹರೆಯುವುದು ಇದ್ದೀತು.'

೫. 'ಇವತ್ತು ನಾಗರಪಂಚಮಿ; ನಾಗನಅಡಿಯನ್ನು ಶುದ್ಧಮಾಡಬೇಕು.'

೬. 'ಬಯಲಲ್ಲೆಲ್ಲ ಮುಳ್ಳಡಿ ಜಾಸ್ತಿ, ಅಲ್ಲಿಗೆ ಹೋಗಬೇಡ.'

೭. 'ಹೇಲಡಿ ಮೆಟ್ಟಿಕೊಂಡು ಮನೆಯೊಳಗೆ ನುಗ್ಗುತ್ತೀಯಾ, ಕಳ್ಳ!'

೮. 'ಕುರಿ ಮೆಂದಡಿ (ಮೇದಡಿ) ಗರಿಕೆ ಎಳೆಯೂ ಸಿಗದು.'

ಮೇಲೆ ಹೇಳಿದ ಪ್ರಯೋಗಗಳೆಲ್ಲ ದಿನಬಳಕೆಯಲ್ಲಿವೆ. ಇನ್ನೂ ನೂರಾರು ಪ್ರಯೋಗಗಳನ್ನು ಕೊಡಬಹುದು. ಮನೆಯಡಿ, ಹಟ್ಟಿಯಡಿ, ಬಾವಿಯಡಿ—ಇಲ್ಲೆಲ್ಲ ಆ ಸ್ಥಳಗಳಲ್ಲಿ ಮನೆ, ಬಾವಿ, ಹಟ್ಟಿಗಳನ್ನು ಕಟ್ಟುವಾಗ ಆ ಸ್ಥಳಗಳು ಅವಕ್ಕೆ ಯೋಗ್ಯವೇ ಎಂದು ಸ್ಥಳಪರೀಕ್ಷಕರಾದ ಜೋಯಿಸರಿಂದ ಹಳ್ಳಿಯ ಜನರು ಆಲೋಚನೆ ಕೇಳುತ್ತಾರೆ. ಅವರು ಬಂದು, ಅಲ್ಲಿಯ ಮಣ್ಣಿನ ಗುಣ, ನೀರಾಶ್ರಯಗಳನ್ನು ಪರೀಕ್ಷಿಸಿ ಯಾವುದು ಯಾವುದಕ್ಕೆ ಯೋಗ್ಯ ಎಂದು ತಿಳಿಸುತ್ತಾರೆ. ಕಾಲಡಿ ಎಂದರೆ ಕಾಲು ನಡೆದುಕೊಂಡು ಹೋಗುವ ಪ್ರದೇಶ, ದಾರಿ ಎಂದರ್ಥ. ನಾಗನ ಅಡಿ ಎಂದರೆ ನಾಗನ ಕಲ್ಲಿರುವ ಪ್ರದೇಶ, ಸ್ಥಳ ಎಂಬರ್ಥ. ಮುಳ್ಳಡಿ ಎಂದರೆ ಮುಳ್ಳು ಬೆಳೆದ ಸ್ಥಳ ಎಂದು. ಹೇಲಡಿ ಎಂದರೆ ಮನುಷ್ಯರು ಬಯಲಲ್ಲೋ, ಮೈದಾನದಲ್ಲೋ, ಹಾಡಿ ಹಕ್ಕಲುಗಳಲ್ಲೋ ಮಲವಿಸರ್ಜನೆಮಾಡಿದ ಸ್ಥಳ. ಮೆಂದಡಿ (ಮೇದಡಿ) ಎಂದರೆ ಹುಲ್ಲುಮೆದ್ದ, ಹುಲ್ಲುಬೆಳೆದ ಜಾಗಗಳು. ಇಲ್ಲೆಲ್ಲ 'ಅಡಿ' ಎಂದರೆ ಸ್ಥಳ, ಜಾಗ, ಪ್ರದೇಶ ಎಂದು ಅರ್ಥ. ಕಿಟ್ಟೆಲ್ಲರ ಅರ್ಥಕೋಶದಲ್ಲಿಯೂ 'ಅಡಿ' ಎಂಬುದಕ್ಕೆ ಇದೇ ಅರ್ಥವನ್ನು ಕೊಟ್ಟಿದ್ದಾರೆ. 'The bottom or base of any thing,' 'Under,' 'ಅಧಃಸ್ಥಾನ,' 'ಕೆಳಗು' ಎಂಬವುಗಳೆಲ್ಲ ಇದೇ ಅರ್ಥವನ್ನು ಹೇಳುತ್ತವೆ. ಆದರೆ ಸಮಾಸಪದದ ಅಂತ್ಯದಲ್ಲಿ 'ಅಡಿ' ಶಬ್ದಬಂದ ಪ್ರಯೋಗವನ್ನು ಕಿಟ್ಟೆಲ್ಲರು ಕೊಟ್ಟಿಲ್ಲ. 'ಮೆಟ್ಟಡಿ' ಶಬ್ದದ ರೂಪಸಾಮ್ಯವನ್ನು 'ಮೆಂದಡಿ' ಎಂಬ ಶಬ್ದದಲ್ಲಿ ಕಾಣಬಹುದು. ಜನರೆಲ್ಲ ತಿರುತಿರುಗಿ ಸವೆದು ನುಣುಪಾದ ಆ ಬಿದುಗಲ್ಲನ್ನು

---

[6] ಅಗೆ=ಭತ್ತದ ಸಸಿ. ಅಡಿ=ತಳ. ಅಗೇಡಿ=ಅಗೆಯಡಿ, ಮಡಿ. ನೇಜಿನೆಡುವ ಮೊದಲು ಅದಕ್ಕೆ ಬೇಕಾಗುವ ಭತ್ತದ ಸಸಿಗಳನ್ನು ಬೇರೆ ಗದ್ದೆಯಲ್ಲಿ ಬೀಜ ಬಿತ್ತಿ ತಯಾರಿಸುತ್ತಾರೆ. ಆ ಗದ್ದೆಗೆ ಮಾತ್ರ ಅಗೇಡಿ ಎಂದು ಹೆಸರು.

ಮೆಟ್ಟಡಿ ಎಂದು ಮುದ್ದಣ ವರ್ಣಿಸಿದ್ದಾನೆ. ಮೆಟ್ಟಡಿ ಎಂಬುದಕ್ಕೆ ಮೆಟ್ಟಿದ ಪ್ರದೇಶ, ಮೆಟ್ಟಿದ ಸ್ಥಳ, ಮೆಟ್ಟಿದ ಜಾಗ ಎಂಬ ಅರ್ಥವೇ ವಿನಾ ಸೋಪಾನ, ಮೆಟ್ಟಿಲು ಎಂಬರ್ಥವಲ್ಲ. ಮೆಟ್ಟಿದ ಪ್ರದೇಶ ಮೆಟ್ಟಿಲಾಗಿರಲೂ ಸಾಧ್ಯ ವಿನಾ ಮೆಟ್ಟಿಲೇ ಅಲ್ಲ. 'ಮೆಟ್ಟಡಿಯಿಂ' ಎಂಬ ಏಕವಚನ ಪ್ರಯೋಗ ಅದು ಮೆಟ್ಟಿಲಲ್ಲ ಎಂದು ಸ್ಪಷ್ಟೀಕರಿಸುತ್ತದೆ. ಮೆಟ್ಟಿಲು, ಸೋಪಾನ ಎಂಬರ್ಥದಲ್ಲಿ ಎಲ್ಲಿಯೂ 'ಮೆಟ್ಟಡಿ' ಎಂಬ ಪ್ರಯೋಗವಿಲ್ಲ. ಈ ಮೆಟ್ಟಡಿಯೇ ಹೊಸಗನ್ನಡದ ಬಳಕೆಯ ಮಾತಿನಲ್ಲಿ ಮೆಟ್ಟಿದಡಿ ಎಂದಾಗಿದೆ:

೧. 'ಬಸವ ಮೆಟ್ಟಿದಡಿ ಅಗೆ ಸತ್ತುಹೋಯಿತು.'

೨. 'ದನ ಮೆಟ್ಟಿದಡಿ ಹರಿವೆಮಡಿಯೆಲ್ಲ ಹಾಳಾಯಿತು.'

೩. 'ನೀನು ಮೆಟ್ಟಿದಡಿ ಎಂದೂ ಉದ್ಧಾರವಾಗಲಿಕ್ಕಿಲ್ಲ!'

ಮೆಟ್ಟಡಿ ಎಂದರೆ ಮೆಟ್ಟಿದ ಅಡಿ, ಮೆಟ್ಟಿದಜಾಗ, ಮೆಟ್ಟಿದ ಪ್ರದೇಶ, ಮೆಟ್ಟಿದ ಸ್ಥಳ ಎಂಬ ಅರ್ಥವೇ ವಿನಾ ಬೇರೆ ಅರ್ಥವಲ್ಲ.

೫. ನೆಸೆ

(i) "ಕಟ್ಟಿದಿರೊಳೊಂದು ಜಟಿಕೆ ನೀಡದೋಳಿರ್ದುಂ ಕಿಱುಮಱಿಯುಂ ಕುಟುಂಕಿತ್ತಿಱಂಕೆಯೊಳ್ ಪುದುಗಿಸಿಯುಂ ಕೊಕ್ಕಿಂ ಮೆಲ್ದು ಪ್ಪುಬನೊಸೆದು ನೆಸೆದುಂ ಲಲ್ಲೆಗೈಯ್ವುದಂ ನಟ್ಟಾಲಿಯೊಳಭೀಕ್ಷಿಸಿ ಮಕ್ಕಳ ಬಯಕೆಯಿಂ ಜಾನಕಿ ಸಖಿಗಿಂತೆಂದಳ್ . . ."[7] ಇಲ್ಲಿ ಬರುವ 'ನೆಸೆ' ಶಬ್ದಕ್ಕೆ ಯಾವ ಅರ್ಥವೇ ಇರಲಿ; ಅದು ಇಲ್ಲಿ ಪ್ರಕೃತವಲ್ಲ. ಅದಕ್ಕೆ ಇರುವ ಇನ್ನೆರಡು ಅರ್ಥಗಳನ್ನು ಹೇಳುವುದೇ ನನ್ನ ಉದ್ದೇಶ.

ಇಲ್ಲಿ ಪ್ರಯೋಗವಾಗಿರುವ ನೆಸೆ ಎಂಬ ಶಬ್ದಕ್ಕೆ ಕಾವ್ಯಾಲಯದ ಪ್ರತಿಯ ಅರ್ಥಕೋಶದಲ್ಲಿ 'ಮೇಲಕ್ಕೆ ಎತ್ತು' ಎಂಬರ್ಥವನ್ನು ಕಿಟ್ಟೆಲ್ಲರ ಅರ್ಥಕೋಶದಿಂದ ತೆಗೆದುಕೊಟ್ಟಿದೆ. ಕೇಶಿರಾಜನ ಶಬ್ದಮಣಿದರ್ಪಣದ ಧಾತುಪಾಠದಲ್ಲಿ, 'ಉತ್ಪವನೇ, To be purified' ಎಂಬ ಒಂದೇ ಅರ್ಥವನ್ನು ಕೊಟ್ಟಿದೆ. ಕಿಟ್ಟೆಲ್ಲರ ಅರ್ಥಕೋಶದಲ್ಲಿ ಕೇಶಿರಾಜನ ಅರ್ಥವನ್ನೂ ಉದ್ಧರಿಸಿ, ಇನ್ನೂ ಕೆಲವು ಬೇರೆ ಅರ್ಥಗಳನ್ನು ಕೊಟ್ಟಿದ್ದಾರೆ. ಅದರಲ್ಲಿ, ನೆಸೆ=ನೆಗೆ To go upwards, To jump or fly about, ಎಂಬ ಅರ್ಥಗಳನ್ನು ಕೊಟ್ಟಿದ್ದಾರೆ.

'ನೆಸೆ' ಶಬ್ದಕ್ಕೆ ಕಿಟ್ಟೆಲ್‌ಅವರು ನಿರೂಪಿಸಿದಂತೆ ಅವರಿಗೆ ಸಿಕ್ಕಿದ ಗ್ರಾಂಥಿಕ ಆಧಾರ ಒಂದೇ ಒಂದು; ಅದು ಬಸವಪುರಾಣ. ಆದರೆ, ಕೇಶಿರಾಜ ಒಂದೇ ಅರ್ಥ

---

[7] 'ಶ್ರೀರಾಮಶ್ವಮೇಧಂ'—ಪುಟ ೧೮, ಪಂಕ್ತಿ ೩.

ಕೊಡಲು ಕಾರಣವೇನು ? 'To be purified' ಎಂಬುದು 'ಉತ್ಪವನೇ' ಎಂಬುದರ ವ್ಯಾಪಕಾರ್ಥ ಅಷ್ಟೆ. ಸಾಮಾನ್ಯವಾಗಿ ಕೇಶಿರಾಜನ ಶಬ್ದಮಣಿದರ್ಪಣದ ಧಾತುಪಾಠದಲ್ಲಿ ಶಬ್ದದ ಮೂಲಾರ್ಥವನ್ನು ಮಾತ್ರ ಕೊಟ್ಟಿರುತ್ತಾನೆ. ಬಸವ ಪುರಾಣದಲ್ಲಿ ಕಿಟ್ಟೆಲ್ಲರು ಕೊಟ್ಟ ಅರ್ಥಗಳಿಗೆಲ್ಲ ಆಧಾರ ಸಿಕ್ಕುತ್ತದೆ. ಆದರೂ ಅವೆಲ್ಲ 'ಉತ್ಪವನೇ' ಎಂಬರ್ಥದ ವ್ಯಾಪ್ತಿಗಳು. ಆದರೂ ಯಾವ ಕಾರಣದಿಂದಲೋ ಏನೋ ಬಸವಪುರಾಣದಲ್ಲಿಯೇ ಆಧಾರವಿದ್ದರೂ 'ನೆಸೆ' ಎಂಬ ಶಬ್ದದ ಇನ್ನೊಂದು ಅರ್ಥವನ್ನು ಕೊಟ್ಟಿಲ್ಲ; ಕೊಟ್ಟಿದ್ದರೂ, ಅವರ ಭಾವನೆ ಅವರು ಮೇಲೆ ಹೇಳಿದ ಅರ್ಥವೆಂದೇ ತಿಳಿಯುತ್ತದೆ. ಬಸವಪುರಾಣದ ಈ ಪ್ರಯೋಗಗಳನ್ನು ನೋಡಿ :—

೧. ....
ಮತ್ತೆ ಕಂಬಿಯೊಳೊಂದು ದಿನದಲಿ
ಹೊತ್ತುದಕವಂ ಶೀಘ್ರದಿಂದ ತ
ರುತ್ತ ಹಳ್ಳವನಾಚೆದಾಟಲು ಬೆನ್ನು ಮುರಿದಿರಲು ||
(ಬ. ಪು. ಸಂಧಿ ೪೪, ಪದ್ಯ ೫.)

ಹೆಗಲ ಮೇಲಣ ಕಂಬಿನಾಲ್ವೆರ—
ಳುಗಳು ಹವಣಿಗೆ ನೆಸೆದು ಬರುತಿರೆ
ಜಗವರಿಯಲೊಸೆದಿತ್ತ ಶಬರಾಕೃತಿಯ ಶಂಕರನೋ |
....
(ಬ. ಪು. ಸಂ. ೪೪, ಪ. ೭.)

೨. ....
ವಿಷಮ ವಿಷದಲಿ ಕಟ್ಟಿ ಹಾಯ್ಕಲು
ವಿಷಕೆ ಮುಳುಗದೆ ನೆಸೆದು ವಂದನು
ವಿಷ ಕಪರ್ದನ ಭಕ್ತನಂ ವಿಷವೇನ ಮಾಡುವುದು ||
(ಬ. ಪು. ಸಂ. ೪೯, ಪ. ೩೯.)

೩. ಮಿಸುಪ ಕುಂಡಲವೊಲೆಯೆ ಅರಳೆಲೆ
ನೆಸೆಯೆ ಚಂಡಿಕೆ ಮಿಡಿಯೆ ತೊಡಗೆಗೆ
ಳೆಸೆಯೆ ನಡೆ ಸಡಗರಿಸೆ ನಸುನಗೆ ಮೊಳೆಯೆ ಮೊಗವಲರೆ |
....
(ಬ. ಪು. ಸಂ. ೨೪, ಪ. ೪೪.)

ಇಲ್ಲೆಲ್ಲ 'ನೆಸೆ' ಧಾತುವಿನ ಅರ್ಥವೇನು ? ಕಿಟ್ಟೆಲ್ಲರು ಕೊಟ್ಟ ಯಾವ ಅರ್ಥವೂ

ಇಲ್ಲಿ ಹೊಂದಿಕೊಳ್ಳುವುದಿಲ್ಲ. ದಕ್ಷಿಣ ಕನ್ನಡದ 'ಕೋಟ' ಎಂಬ ಪ್ರಾದೇಶಿಕ ಕನ್ನಡ ಭಾಷೆಯಲ್ಲಿ ಈ 'ನೆಸೆ' ಎಂಬ ಶಬ್ದ ಮನೆಮಾತಾಗಿರುವುದನ್ನು ನೋಡಿ :

೧. 'ಕೆರೆಯಲ್ಲಿ ಬಟ್ಟಲು ನೆಸೆಯುತ್ತದೆ.'

೨. 'ಹೊಳೆಯಲ್ಲಿ ಹೆಣ ನೆಸೆದು (ನೆಸ್ತು) ಬಂತು.'

೩. 'ಬಾವಿಗೆ ಬಿದ್ದ ಕೊಡಪಾನ ನೆಸೆಯುತ್ತಿದೆ.'

೪. 'ಹೊಟ್ಟು ನೀರಿನಲ್ಲಿ ನೆಸೆಯುತ್ತದೆ.'

೫. 'ನೆಸ್ರಾಟ (ನೆಸೆದಾಟ) ಕ್ಕೆ ಹೋಗಿ ಮಸ್ರಾಟ ಹೆಚ್ಚಿತು.'

ಇಂಥ ನೂರಾರು ಮಾತುಗಳನ್ನು ಕೊಡಬಹುದು. ಇಲ್ಲೆಲ್ಲ ನೆಸೆ ಎಂಬ ಧಾತುವಿನ ಅರ್ಥವೇನು? 'ನೆಸೆ' ಎಂಬ ಧಾತು ಉಚ್ಚಾರಣಾ ಭೇದದಿಂದ 'ನೆಸಿ' ಎಂಬ ರೂಪವನ್ನೂ ತಾಳುವುದುಂಟು. ಭೂತನ್ಯೂನ ರೂಪಗಳಾಗಿ, ನೆಸೆದು, ನಸೆದು, ನೆಸ್ತು, ನೆಸ್ದು, ನಸ್ದು, ನಸ್ತು ಎಂಬ ರೂಪಗಳಿವೆ. ಇಲ್ಲಿಯ ಮೊದಲ ಮೂರನ್ನು ಕಿಟ್ಟೆಲ್ ಹೇಳಿದ್ದಾರೆ. ಕಿಟ್ಟೆಲ್ ಅವರು, 'ನೆಸ್ರಾಟ' ಎಂಬುದಕ್ಕೆ ಮಾತ್ರ to jump about ಎಂಬ ಊಹಾರ್ಥ ಕೊಟ್ಟಿದ್ದಾರೆ. ಆದರೆ, ಅವರೇ ಉದ್ಧರಿಸಿರುವ, 'ನೆಸ್ರಾಟಕ್ಕೆ ಹೋಗಿ ಮಸ್ರಾಟ ಹೆಚ್ಚಿತು' ಎಂಬಲ್ಲಿ, 'ನೆಸ್ರಾಟ' ಎಂಬ ಮಾತಿಗೆ ಆ ಅರ್ಥವಲ್ಲ. ಇಲ್ಲೆಲ್ಲ 'ನೆಸೆ' ಎಂಬ ಧಾತುವಿಗೆ, 'ಉತ್ಪ್ಲವನೇ'—to float upon ಎಂಬರ್ಥ ವಿನಾ ಬೇರೆಯಲ್ಲ. 'ನೆಸ್ರಾಟ' ಎಂದರೆ floating ಎಂಬರ್ಥ. ಇದು 'ನೆಸೆ' ಎಂಬ ಧಾತುವಿನ ನಾಮರೂಪ. ಇದೊಂದೇ ನಾಮರೂಪವಲ್ಲ; ನೆಸೆತ, ನೆಸೆದಾಟ ಎಂಬ ರೂಪಗಳೂ ಇವೆ. ಮೇಲಿನ ೧, ೨, ೩, ೪, ೫ ನೇ ಪ್ರಯೋಗಗಳಲ್ಲೂ, ಮೇಲೆ ಉದ್ಧರಿಸಿದ ಬಸವಪುರಾಣದ ಮೂರು ಪ್ರಯೋಗಗಳಲ್ಲೂ 'ನೆಸೆ' ಎಂಬ ಧಾತುವಿಗೆ ಮೇಲೆ ತೇಲಾಡು, ಮೇಲಕ್ಕೆ ಬರು, ಮೇಲೆ ಬಳಿಯು ಎಂಬ ಅರ್ಥವೇ ಹೊರತು ಕಿಟ್ಟೆಲ್ಲರು ಕೊಟ್ಟ ಉಳಿದ ಅರ್ಥಗಳಲ್ಲ. ಪ್ರಕೃತ, ರಾಮಾಶ್ವಮೇಧದ 'ಕೊಕ್ಕಿಂ ಮೆಲ್ಲುವ್ಪುಬನೊಸೆದು ನೆಸೆದುಂ' ಎಂಬಲ್ಲಿ to be purified, ಮೇಲಕ್ಕೆ ಎತ್ತು, ಮತ್ತು ತೇಲಾಡು ಎಂಬ ಮೂರು ಅರ್ಥಗಳು ಅನ್ವಯಿಸುತ್ತವೆ.

(ii) 'ನೆಸೆ' ಎಂಬ ರೂಪ ನಾಮಪದವಾಗಿದ್ದರೆ ಅದಕ್ಕೆ ಬೇರೊಂದು ಸ್ವಾರಸ್ಯಪೂರ್ಣ ಅರ್ಥವಿದೆ. ಅದರ ಪ್ರಯೋಗವನ್ನು ಕಿಟ್ಟೆಲ್ ಮಹಾಶಯರು ಒಂದು ಗಾದೆಯನ್ನು ಉದ್ಧರಿಸಿ ಅಷ್ಟಕ್ಕೇ ಅದರ ಅರ್ಥವಿವರಣೆಯನ್ನು, ಏಕೋ ಏನೋ, ಕೈಬಿಟ್ಟಿದ್ದಾರೆ. ಅವರು ಉದ್ಧರಿಸಿದ ಗಾದೆ, 'ನೆಸೆಕೊಟ್ಟವ ಹಸೆಕದ್ದುಕೊಂಡು ಹೋದ' ಎಂಬುದು. ಈ ಗಾದೆಯಲ್ಲಿ 'ನೆಸೆ' ಎಂಬ ಶಬ್ದದ ಅರ್ಥವೇನು? ನಮ್ಮ ಪ್ರಾದೇಶಿಕ ಕನ್ನಡದಲ್ಲಿ ಇನ್ನೊಂದು ಇಂಥ ಗಾದೆ ತುಂಬ ಪ್ರಸಿದ್ಧವಾಗಿದೆ.

ಇದನ್ನು ಮನೆಮನೆಯಲ್ಲಿ ಪ್ರತಿನಿತ್ಯ ಒಂದು ಬಾರಿಯಾದರೂ ಹೇಳದಿದ್ದರೆ ನಮ್ಮ ಜನರಿಗೆ ಮನಸ್ಸು ಕೇಳದು: 'ನೆಸೆಕೊಟ್ಟ ನಾಯಿ ನೆಸಲು (ನೊಸಲು) ನೆಕ್ಕುತ್ತದೆ.' ಕಿಟ್ಟೆಲ್ ಮಹಾಶಯರಿಗೆ ಈ ಗಾದೆ ಸಿಕ್ಕದುದು ಆಶ್ಚರ್ಯ. ಇಲ್ಲಿ 'ನೆಸೆ' ಎಂದರೆ ಸಲಿಗೆ, ವಿಶೇಷಪ್ರೀತಿ ಎಂಬರ್ಥ. ಯಾರಾದರೂ, ಏನಾದರೂ ಅನಾಹುತವನ್ನು ಮಾಡಿದಾಗ ಈ ಗಾದೆಯನ್ನು ಎತ್ತಿಹೇಳಿ ಅವರ ಅಧಿಕಪ್ರಸಂಗವನ್ನು ಹಳಿಯುವುದು ಸರ್ವಸಾಮಾನ್ಯ. 'ಸಲಿಗೆಕೊಟ್ಟ ನಾಯಿ ಹಣೆ ನೆಕ್ಕುತ್ತದೆ' ಎಂಬುದು ಅದರ ಅರ್ಥ. ನಸೆಗಾರ್ತಿ (ರತಿ), ನಸೆಗಾಱ (ಮನ್ಮಥ) ಎಂಬ ಶಬ್ದಗಳಲ್ಲಿ 'ನೆಸೆ' 'ನಸೆ' ಗಳ ಪ್ರೀತ್ಯರ್ಥದ ಪ್ರಭಾವ ಕಂಡುಬರುವುದನ್ನು ಗಮನಿಸಬಹುದು. ಅಂತೂ, 'ನೆಸೆ' (ಧಾತು) ಎಂದರೆ ತೇಲಾಡು, ಬಳಿಯು, ಮೇಲಕ್ಕೆ ಬರು ಎಂಬ ಅರ್ಥವೂ, 'ನೆಸೆ'ಗೆ (ನಾಮಪದ) ಸಲಿಗೆ, ವಿಶೇಷ ಪ್ರೀತಿ ಎಂಬ ಅರ್ಥವೂ ರೂಢಿಯಲ್ಲಿವೆ.

—ಗುಂಡ್ಮಿ ಚಂದ್ರಶೇಖರ ಐತಾಳ.

ಸ್ಮೃತಿ ದೇವತಾಸ್ತವ*

ಉತ್ತರವೆ ಹೊಳೆಯಲಿಲ್ಲ,
ಬರೆಯಲು ವಿಷಯ ಸಿಕ್ಕಲಿಲ್ಲ.
ಏನೂ ನೆನಪಿಗೆ ಬರಲಿಲ್ಲ!
ಕಣ್ಣುಬಿಟ್ಟರೂ ಕಣ್ಣುಮುಚ್ಚಿದರು
ಕಣ್‌ಕಣ್‌ಬಿಟ್ಟರೂ ಹೊಳೆಯದದು.
ಆಕಳಿಸಿದರೂ, ವಾಕರಿಸಿದರೂ,
ಪೆನ್ನು ಕೊಡಹಿದರು, ಪೆನ್ಸಿಲ್ ಕಡಿದರು,
ರಬ್ಬರ್ ಚೂರನು ಅಗಿದು ನುಂಗಿದರು,
ಅದುವೆ ತೋರದಾಯ್ತು.
ತಲೆಯು ಕೆರೆದುದಾಯ್ತು,
ಒಳನೆಲವ ಕೊರೆದುದಾಯ್ತು.
ಸುಪ್ತ ಮಾನಸದ ಕಮರಿ ಕಮರಿಯಲಿ
ಸ್ಮೃತಿ-ಸೆಲೆಯೆ ಕಾಣದಾಯ್ತು.
ಉರಿಯುವ ಹೊಟ್ಟೆಯು ಕೆರೆಯ ಅಂಗಳಕೆ
ತಣ್-ನೀರನು ಸುರಿದಾಯ್ತು.
ಪೂರ ಬಂದು ಕೆರೆ ತುಂಬಿ ತುಳುಕಿದರು,
ನೆನಪೇರಿ ಬಾರದಾಯ್ತು;
ಉತ್ತರ ತೇಲಿ ಬಾರದಾಯ್ತು.
ಕತ್ತಿನ ವರೆಗೂ ಕಲ್ಲುತುಂಬಿದರು,
ಕಾಣದಾಯ್ತು ನೀರು,
ಉಗುರು ಕಡಿದುದಾಯ್ತು,
ಬೆರಳನು ಸವಿನೋಡಿದುದಾಯ್ತು.
ಕೊರಳಿನ ಬೆವರು ಒರೆಸಿಯಾಯ್ತು.
ಪ್ರಶ್ನೆಪತ್ರಿಕೆಯ ಪ್ರತಿಮಾಡಿದುದೂ ಆಯ್ತು,
ಇಲಿಯ ಬರೆದುದಾಯ್ತು,
ಬೆನ್ನಲಿ, ಹುಲಿಯ ಕೊರೆದುದಾಯ್ತು.

* ಪರೀಕ್ಷೆಯಲ್ಲಿ ಏನೂ ನೆನಪಿಗೆ ಬಾರದಿದ್ದಾಗ.

ತಲೆಯ ಕೂದಲೊಂದೊಂದನು ಕಿತ್ತು
ಸರಿ ಹುರಿ ಮಾಡಿದುದಾಯ್ತು.
ತೂಗುಹಾಕಿರುವ ಭಾವಚಿತ್ರಗಳ
ಬಿಡಿಬಿಡಿ ಎಣಿಸಾಯ್ತು,
ಅದರ ಮೊತ್ತದಲಿ,
ಹತ್ತನು ಕಳೆದಾಯ್ತು,
ಉಳಿದ ಶೇಷವನು
ಬರಿಯ ಎಂಟರಿಂದ
ಗುಣಿಸಿದುದೂ ಆಯ್ತು.
ಕಾಲನು ಕುಣಿಸೀ, ಗೋಣನು ಮಣಿಸೀ,
ದೇಹವ ಸುರಳಿಸಿ, ಮತ್ತದ ಸೆರಳಿಸಿ,
ಸರ್ವಾಂಗಾಸನ ಹೂಡಿ,
ಪ್ರಾಣಾಯಾಮವ ಮತ್ತೆ ಮಾಡಿದರು
ಎಚ್ಚರಾಗದಾಯ್ತು,
ಸ್ಮೃತಿ ಕುಂಡಲಿನಿಯು ತಾ
ಸುಪ್ತವಾಗೆ ಇತ್ತು.
ಮಡ್ಡತನದ ಆ ಸೋಸ್ಟು ಕಾಗದವು
ರಸವನು ಬಿಟ್ಟಿತ್ತು,
ಬರಿ ಕಸವನು ಹಿಡಿದಿತ್ತು.

ವಾದಕ್ಕೊದಗದ ವಿದ್ಯವದೇಕೆ?
ಯುದ್ಧಕ್ಕೊದಗದ ಆಯುಧ ಬೇಕೆ?
"ವಿಂಧ್ಯಾಟವಿಯಾ ಹೆಪ್ಪುಗತ್ತಲೆಗೆ
ಸೊಡರಿನ ಬೆಳಕದು ಸಾಕೆ!"

ಈ ಕವಿತಾ ಬಂಧದಿ ಬಂದು ನಿಂತ
ಆ ಪ್ರತಿಭಾಲತಾಂಗಿ, ಸ್ಮೃತಿಕನ್ಯೆ
ಉತ್ತರ ಬರೆಯುವ ಹೊತ್ತಿನಲ್ಲಿ
ತಾ ಬಾರದಾದಳೇಕೆ?
ತೋರದಾದಳೇಕೆ?

ಎಸ್. ಪ್ರಹ್ಲಾದರಾವ್

ಆಟದ ಗುಟ್ಟು

ಜನಜೀವನದಲ್ಲಿ ಆಟಪಾಠಗಳು ಬಹುಮುಖ್ಯ ಸ್ಥಾನವನ್ನು ಗಳಿಸಿವೆ. ಬಾಲಕರಿಂದ ಹಿಡಿದು ವೃದ್ಧರವರೆಗೂ ಜನರು ಯಾವುದಾದರೊಂದು ವಿಧವಾದ ಆಟದಲ್ಲಿ ಆಸಕ್ತಿಯನ್ನು ಹೊಂದಿರುತ್ತಾರೆ. ಅನಾದಿಕಾಲದಿಂದಲೂ ಮಾನವರು ಆಟಪಾಠಗಳಲ್ಲಿ ಅಭಿರುಚಿ ಹೊಂದಿರುತ್ತಾರೆ. ಪುರಾಣ, ಇತಿಹಾಸಗಳಲ್ಲಿ ಆಟಗಳ ವಿವರಣೆ ಬರುತ್ತದೆ. ನಮ್ಮ ಸಂಸ್ಕೃತಿಯಲ್ಲಿ ಆಟಪಾಠಗಳು ಮಾನವನೊಬ್ಬನಿಗೇ ಮೀಸಲಾಗಿಲ್ಲ. ದೇವತೆಗಳು ಮತ್ತು ದೇವರುಗಳ ಕೈಯಲ್ಲೂ ಆಟಗಳನ್ನಾಡಿಸುತ್ತೇವೆ. ಶ್ರೀಕೃಷ್ಣನ ಬಾಲಲೀಲೆಗಳೆಲ್ಲವೂ ಆಟಗಳಿಂದ ತುಂಬಿರುತ್ತವೆ.

ಆಟಗಳನ್ನು ವಿವರಿಸುವಾಗ ಈಗಿನ ಕ್ರೀಡಾರಂಗದಲ್ಲಿ ಬಳಕೆಯಲ್ಲಿರುವ ಆಟಗಳನ್ನಲ್ಲದೆ ಮಾನವ ಜೀವನದಲ್ಲಿ ಕಂಡುಬರುವ ಅನೇಕ ವಿಧವಾದ ಮನೋರಂಜಕ ಕಾರ್ಯಗಳನ್ನು ಕ್ರೀಡೆಗಳನ್ನಾಗಿ ಪರಿಗಣಿಸಬಹುದು. ಕ್ರಿಕೆಟ್, ಟೆನ್ನಿಸ್, ಫುಟ್‌ಬಾಲ್ ಮೊದಲಾದ ಚೆಂಡಾಟಗಳು, ಓಡುವುದು, ಕುಪ್ಪಳಿಸುವುದು, ಈಜುವುದು ಮೊದಲಾದ ವ್ಯಾಯಾಮ ಕ್ರೀಡೆಗಳು, ಕೋಲಾಟ, ಸುಗ್ಗಿಯ ಕುಣಿತ, ಯಕ್ಷಗಾನ ಮೊದಲಾದ ನೃತ್ಯಗಳು, ಕೇರಂ, ಡ್ರಾಫ್ಟ್ಸ್, ಇಸ್ಪೀಟು, ಟೇಬಲ್‌ಟೆನ್ನಿಸ್ ಬಿಲಿಯರ್ಡ್ಸ್ ಮೊದಲಾದ ಒಳಾಂಗಣದ ಆಟಗಳು, ಪದಜೋಡಣೆ, ವಿವಿಧದೇಶಗಳ ನಾಣ್ಯಗಳ ಶೇಖರಣೆ, ಅಂಚೆ ಸ್ಟಾಂಪುಗಳ ಕೂಡಿಡುವಿಕೆ, ಚಿತ್ರಸಂಗ್ರಹ ಮೊದಲಾದ ಜ್ಞಾನಾರ್ಜನೆಗೆ ಸಂಬಂಧಪಟ್ಟವು, ಇನ್ನೂ ಅನೇಕ ವಿಧವಾದ ಕ್ರೀಡೆಗಳನ್ನು ಆಟಗಳ ಗುಂಪಿಗೆ ಸೇರಿಸಬಹುದು.

ದೇಶದಲ್ಲಿ ಕಂಡುಬರುವ ಆಟಗಳನ್ನೆಲ್ಲಾ ಎಲ್ಲಾ ವಯಸ್ಸಿನಲ್ಲೂ ಜನರು ಆಡುವುದಿಲ್ಲ. ದೈಹಿಕ ವಯಸ್ಸಿಗೂ ಮತ್ತು ಆಟಗಳ ಸ್ವರೂಪಕ್ಕೂ ನಿಕಟಸಂಬಂಧವಿರುತ್ತದೆ. ಎಳೆಮಕ್ಕಳ ಆಟಗಳನ್ನು ವಯಸ್ಕರು ಆಡಲು ಇಷ್ಟಪಡುವುದಿಲ್ಲ. ನಮ್ಮ ದೈಹಿಕ ಮತ್ತು ಮಾನಸಿಕ ಬೆಳವಣಿಗೆ ಮುಂದುವರಿದಂತೆ ಆಟಗಳ ಸ್ವರೂಪ ಬದಲಾಯಿಸುತ್ತದೆ. ಮಕ್ಕಳಲ್ಲೂ ಕೂಡ ಪ್ರತಿಭಾವಂತ ಮಕ್ಕಳು, ಸಾಮಾನ್ಯ ಮಕ್ಕಳ ಆಟಗಳನ್ನು ಆಡಿದರೂ ಬುದ್ಧಿಶಕ್ತಿ ಪ್ರದರ್ಶನಕ್ಕೆ ಎಡೆಗೊಡುವ ಆಟಗಳಿಗೆ ಹೆಚ್ಚು ಗಮನವನ್ನು ಕೊಡುತ್ತಾರೆ ಮತ್ತು ತಮಗಿಂತಲೂ ಹೆಚ್ಚು ವಯಸ್ಸಾದವರೊಂದಿಗೆ ಆಡಲು ಬಯಸುತ್ತಾರೆ. ಹಲವಾರು ಪರಿಶೋಧನೆಗಳು ಇದನ್ನು ಸಮರ್ಥಿಸುತ್ತವೆ. ದೈಹಿಕ

ವಯಸ್ಸಿಗೂ ಬುದ್ಧಿಶಕ್ತಿಯು ಮಟ್ಟಕ್ಕೂ ಆಟಗಳ ರೂಪ ಬದಲಾಯಿಸುವಂತೆ, ಪುರುಷ ಮತ್ತು ಸ್ತ್ರೀ ಲಿಂಗಭೇದಕ್ಕೂ ಆಟಗಳು ಒಳಪಟ್ಟಿವೆ. ಅನೇಕ ಆಟಗಳಲ್ಲಿ ಸ್ತ್ರೀ ಪುರುಷರು ಒಟ್ಟಿಗೆ ಭಾಗವಹಿಸಿ ಆಟವಾಡಿದರೂ ಕೆಲವು ಆಟಗಳು ಗಂಡಸರಿಗೂ ಮತ್ತೆ ಕೆಲವು ಹೆಂಗಸರಿಗೂ ಮೀಸಲಾಗಿವೆ.

ಪ್ರಾಣಿಜೀವನದಲ್ಲಾಗಲಿ ಮಾನವರ ಜೀವನದಲ್ಲಾಗಲಿ ಆಟಗಳ ಪ್ರಾಮುಖ್ಯತೆಗೆ ಕಾರಣವೇನೆಂಬುದನ್ನು ತಿಳಿಯಲು ಬಹಳ ಹಿಂದಿನಿಂದಲೂ ಜಿಜ್ಞಾಸೆ ನಡೆದಿದೆ. ಗ್ರೀಕ್ ದಾರ್ಶನಿಕ ಅರಿಸ್ಟಾಟಲ್‌ನಿಂದ ಹಿಡಿದು ಆಧುನಿಕ ಮನಶ್ಶಾಸ್ತ್ರಜ್ಞ ಮತ್ತು ಶಿಕ್ಷಣವೇತ್ತರವರಿವಿಗೂ ಆಟದ ಗುಟ್ಟನ್ನು ತಿಳಿಯಲು ಪ್ರಯತ್ನಪಟ್ಟಿದ್ದಾರೆ. ವೈಜ್ಞಾನಿಕ ದೃಷ್ಟಿಯಿಂದ ಆಟದ ಗುಟ್ಟನ್ನು ತಿಳಿಯಲು ಪ್ರಾರಂಭಿಸಿದ್ದು ೧೯ ನೇ ಶತಮಾನದಿಂದೀಚೆಗೆ ಮಾತ್ರ. ಷಿಲ್ಲರ್ ಎಂಬ ಕವಿ ಹೇಳಿದ ಕೆಲವು ಮಾತುಗಳನ್ನು ಗಮನಿಸಿ ಹರ್ಬರ್ಟ್ ಸ್ಪೆನ್ಸರ್‌ರವರು ಆಟಗಳ ವಿಚಾರವಾಗಿ ತಮ್ಮ ಅಭಿಪ್ರಾಯವನ್ನು ಹೀಗೆಂದು ಸೂಚಿಸಿದ್ದಾರೆ. "Play is the result of the discharge of surplus nervous energy." ತನ್ನ ದಿನದ ಕೆಲಸಗಳಿಗೆ ಉಪಯೋಗಿಸಿಯಾದಮೇಲೆ ಮನುಷ್ಯನಲ್ಲಿ ದೈಹಿಕಶಕ್ತಿ ಇನ್ನೂ ಮಿಕ್ಕಿರುತ್ತದೆ. ಆ ಉಳಿಕೆಯಾದ ಶಕ್ತಿ ಆಟಗಳ ರೂಪದಲ್ಲಿ ತೋರ್ಪಡಿಸಿಕೊಳ್ಳುತ್ತದೆ. ಜೀವಸಂತಾನದಲ್ಲಿ ಮೇಲ್ಮಟ್ಟದ ಪ್ರಾಣಿಗಳು ಬಾಲ್ಯಾವಸ್ಥೆಯಲ್ಲಿ ತಂದೆತಾಯಿಗಳ ಆಸರೆಯನ್ನು ಹೊಂದಿರುವುದರಿಂದ ಕೆಳಮಟ್ಟದ ಪ್ರಾಣಿಗಳಿಗಿಂತಲೂ ಅವು ಬಹಳ ಕಾಲ ಆಟಗಳಲ್ಲಿ ತೊಡಗಿರುತ್ತವೆ. ಕೆಳಮಟ್ಟದ ಪ್ರಾಣಿಗಳಾದರೋ ತಂದೆತಾಯಿಗಳ ಆಸರೆ ಬಹಳ ಕಾಲ ಸಿಗದೆ ಇರುವುದರಿಂದ ಬದುಕಿಗೆ ಅತ್ಯವಶ್ಯಕವಾದ ಕೆಲಸಗಳ ಕಡೆ ಗಮನವನ್ನು ತಿರುಗಿಸುತ್ತವೆ. ಇವರ ಸಿದ್ಧಾಂತದ ಪ್ರಕಾರ ಆಟಗಳಲ್ಲಿ ಭಾಗವಹಿಸಲು ಉಳಿಕೆಯ ದೈಹಿಕಶಕ್ತಿ ಆವಶ್ಯಕವೆಂಬುದು ಮುಖ್ಯ ಅಂಶವಾಗಿರುತ್ತದೆ. ಆದರೆ ಇದು ಆಟ ಯಾವ ರೂಪ ತಾಳುತ್ತದೆ ಎಂಬುದನ್ನು ಸೂಚಿಸುವುದಿಲ್ಲ. ಮತ್ತೆ ಕೆಲವರು ಆಟದ ಮೂಲಕಾರಣ ಮನೋರಂಜನೆ ಎಂದು ತಿಳಿಸುತ್ತಾರೆ. ಆಯಾಸವಾಗಿರುತ್ತದೆ; ಆಸರ, ಬೇಸರಗಳನ್ನು ನಿವಾರಿಸಿಕೊಳ್ಳಲು ಮತ್ತೊಂದು ಕಾರ್ಯದಲ್ಲಿ ತೊಡಗಬೇಕು. ಬೇರೆ ಕಾರ್ಯದಲ್ಲಿ ತೊಡಗುವುದರಿಂದ, ಮೊದಲನೆಯ ಕೆಲಸದ ಪರಿಣಾಮವಾಗಿ ನಮ್ಮಲ್ಲುಂಟಾದ ಬಳಲಿಕೆ ಬೇಸರ ನೀಗುತ್ತದೆ; ಮನಸ್ಸಿಗೆ ಉಲ್ಲಾಸವುಂಟಾಗುತ್ತದೆ. ಆಟಗಳು ಈ ಕೆಲಸವನ್ನು ಸಮರ್ಪಕವಾಗಿ ಮಾಡುತ್ತವೆ ಎಂದು ಮಾರಿಟ್ಸ್ ಲಜಾರಸ್‌ರವರು ತಿಳಿಸುತ್ತಾರೆ. ವ್ಯಾಯಾಮ ಶಿಕ್ಷಣದ ಮೂಲಭೂತರಾದ ಗಸ್‌ಮತ್ಸ್‌ರವರು ಕೂಡ ಮನೋರಂಜನೆಯ ಅಭಿಪ್ರಾಯವನ್ನೇ ಜನರ ಮುಂದಿಡು

ತ್ತಾರೆ. ಅವರ ಪ್ರಕಾರ ಸೋಮಾರಿಗಳಾಗಿ ಕಾಲ ಕಳೆಯುವುದಕ್ಕಿಂತಲೂ, ಚಟುವಟಿಕೆಯಿಂದ ಕೂಡಿದ, ಆಹ್ಲಾದವನ್ನುಂಟುಮಾಡುವ ಆಟಗಳನ್ನಾಡುವುದು ಒಳ್ಳೆಯದೆಂದು ತಿಳಿಸುತ್ತಾರೆ. ಇದರಿಂದ ದೇಹ ಮತ್ತು ಮನಸ್ಸು ಪುಷ್ಟಿಹೊಂದಿ ಆರೋಗ್ಯದಿಂದ ಕೂಡಿರುತ್ತದೆ. ಇವರ ವಾದ ಸ್ಪೆನ್ಸರ್‌ರವರ ವಾದಕ್ಕೆ ವ್ಯತಿರಿಕ್ತವಾಗಿರುತ್ತದೆ. ಸ್ಪೆನ್ಸರ್‌ರವರು ಆಟ ಉಳಿಕೆಯ ಶಕ್ತಿಯನ್ನು ಖರ್ಚುಮಾಡುತ್ತದೆ ಎಂದು ಹೇಳಿದರೆ ಮಾರಿಟ್ಸ್ ಮತ್ತು ಗಸ್‌ಮುತ್ಸ್‌ರವರು ಆಟ ಮನೋರಂಜನೆಯ ಮೂಲಕ ನಿಶ್ಶಕ್ತಿಯನ್ನು ಹೋಗಲಾಡಿಸುತ್ತದೆ ಎಂದು ತಿಳಿಸುತ್ತಾರೆ.

ಆಟಗಳನ್ನು ವೈಜ್ಞಾನಿಕ ದೃಷ್ಟಿಯಿಂದ ವಿಶದವಾಗಿ ಪರಿಶೀಲಿಸಿದ ವ್ಯಕ್ತಿಗಳಲ್ಲಿ ಕಾರ್ಲ್ ಗ್ರೂಸ್‌ರವರು ಪ್ರಮುಖರಾಗಿರುತ್ತಾರೆ. ಅವರು ಹೇಳುವಂತೆ ಆಟ ಸ್ವಾಭಾವಿಕ ಪ್ರವೃತ್ತಿಗಳಲ್ಲಿ ಒಂದು. ಮುಂದಿನ ಸ್ವತಂತ್ರ ವಯಸ್ಕಜೀವನ ಸಂಗ್ರಾಮಕ್ಕೆ ಒಳ್ಳೆಯ ತರಪೇತನ್ನು ಅದು ಕೊಡುತ್ತದೆ. ಚಿಕ್ಕ ವಯಸ್ಸಿನಲ್ಲೇ ಸಹಜ ಪ್ರವೃತ್ತಿಗಳು ನೈಜ ಸ್ವರೂಪವನ್ನು ಬದಲಾಯಿಸಿ ಒಳ್ಳೆಯ ಸಾಮಾಜಿಕ ಜೀವನಕ್ಕೆ ಸರಿಹೋಗುವ ಅಭ್ಯಾಸಗಳ ತಳಹದಿಯನ್ನು ಹಾಕುತ್ತದೆ. The battle of Waterloo was fought in the play fields of Eton. ಫ್ರಾನ್ಸಿನಲ್ಲಿ ನಡೆದ ವಾಟರ್ಲೂ ಕದನದ ಜಯ, ನೆಲ್ಸನ್ ಮೊದಲಾದ ವೀರರು ಈಟನ್ ಪಾಠಶಾಲೆಯ ಆಟದ ಮೈದಾನದಲ್ಲಿ ತಾವು ವಿದ್ಯಾರ್ಥಿಗಳಾಗಿ ಆಟಗಳನ್ನಾಡುತ್ತಿರುವಾಗಲೇ ನಿರ್ಧರಿಸಲ್ಪಟ್ಟಿತಂತೆ. ಅಂದರೆ ಆಟಗಳನ್ನಾಡುವಾಗ ಹುಡುಗರು ಸಂಯಮ, ಧೈರ್ಯ, ಮುಂದಾಲೋಚನೆ, ಮುಂದಾಳುತನ, ಕಷ್ಟ ಸಹಿಷ್ಣುತೆ, ಸ್ನೇಹ, ಸಾಮಾಜಿಕ ಜೀವನ ಇವೇ ಮೊದಲಾದ ನಡತೆ ಮತ್ತು ವ್ಯಕ್ತಿತ್ವಕ್ಕೆ ಸಂಬಂಧಪಟ್ಟ ಸದಭ್ಯಾಸಗಳನ್ನು ಕಲಿಯುತ್ತಾರೆ. ತಮ್ಮ ಮುಂದಿನ ಜೀವನ ಸಂಗ್ರಾಮದಲ್ಲಿ ಇವು ಬಹುಮಟ್ಟಿಗೆ ಸಹಾಯಕವಾಗಿರುತ್ತವೆ. ಶ್ರೀ ರಾಮಕೃಷ್ಣ ಪರಮಹಂಸರು ಒಂದು ಕಡೆ ಈ ಮಾತನ್ನು ಹೇಳುತ್ತಾರೆ. "ಚಿಕ್ಕ ಹೆಣ್ಣುಮಕ್ಕಳು ಗೊಂಬೆಗಳನ್ನು ಹೊಂದಿರುತ್ತಾರೆ. ಎಂದಿನವರೆಗೆ ಅವರು ಗೊಂಬೆಗಳೊಡನೆ ಆಡುತ್ತಾರೆ? ತಮ್ಮ ಮದುವೆಯಾಗುವವರೆಗೂ." ಬಹುಶಃ ಅವರ ದೃಷ್ಟಿಯೂ ಕೂಡ "ಆಟ ವಯಸ್ಕಜೀವನಕ್ಕೆ ಒಂದು ತರಪೇತು" ಎನ್ನುವಂತೆ ಕಾಣುತ್ತದೆ.

ಅಮೆರಿಕಾದ ಮನೋವೈಜ್ಞಾನಿಕರಾದ ಜಿ. ಯಸ್. ಹಾಲ್‌ರವರ ದೃಷ್ಟಿಯೇ ಬೇರೆ. ಮಕ್ಕಳು ತಮ್ಮ ಆಟಗಳ ಮುಖಾಂತರ ಮಾನವವರ್ಗದ ಬೆಳವಣಿಗೆಯ ಇತಿಹಾಸವನ್ನು ಮತ್ತೆ ಜೀವಿಸುತ್ತಾರೆ ಎಂದು ತಿಳಿಸುತ್ತಾರೆ. ಇದಕ್ಕೆ Recapitulation theory—ಮನನವಾದವೆಂದು ಹೆಸರು. ಇಂದಿನ ಮಕ್ಕಳ ಆಟ ಹಿಂದಿನ

ಬುಡಕಟ್ಟಿನ ಮಾನವರ ದೈನಂದಿನ ಹಲವು ಕೆಲವು ಮುಖ್ಯ ಕಾರ್ಯಗಳಾಗಿದ್ದವು. ಇದರಿಂದ ಆದಿಯಲ್ಲಿ ಮಾನವನ ವರ್ತನೆ ಹೇಗಿದ್ದಿತೆಂಬುದನ್ನು ಸುಲಭವಾಗಿ ಊಹಿಸಬಹುದೆಂದು ಹಾಲ್‌ರವರ ಅಭಿಪ್ರಾಯ. ಇವರ ವಾದ ಮಕ್ಕಳ ಮನೋವೈಜ್ಞಾನಿಕರನ್ನು ಪ್ರಚೋದಿಸಿ ಮಕ್ಕಳ ಆಟಗಳ ವಿಚಾರವಾಗಿ ಪರಿಶೋಧನೆ ನಡೆಯಿಸಲು ಸಾಧ್ಯವಾಯಿತು.

ಮತ್ತೊಂದು ವಾದ ಮಾನಸಿಕ ಆರೋಗ್ಯದ ದೃಷ್ಟಿಯಿಂದ ಮುಖ್ಯವಾದುದಾಗಿದೆ. ಇದಕ್ಕೆ "Catharsis Theory of play," ಆಟದ ಮೂಲಕ ಭಾವಶುದ್ಧಿ ಎಂದು ಹೆಸರು. ಇದರ ಪ್ರಕಾರ ಆಟ ಒಂದು ಸ್ವಭಾವಜನ್ಯವಾದ ಪ್ರವೃತ್ತಿಯಲ್ಲ. ಅಥವಾ ವಯಸ್ಕಜೀವನಕ್ಕೆ ತರಪೇತನ್ನು ಕೊಡುವ ಒಂದು ಸಾಧನವೂ ಅಲ್ಲ. ಆಟ ಪ್ರಕೃತಿಯು ನೀಡಿದ ಒಂದು ಸುರಕ್ಷಿತ ಸಾಧನ. ದೈನಂದಿನ ಜೀವನದಲ್ಲಿ ಮಕ್ಕಳಾಗಲಿ, ವಯಸ್ಕರಾಗಲಿ, ವೃದ್ಧರಾಗಲಿ, ಭಾವೋದ್ರೇಕಗಳ ಸೆಳೆತಕ್ಕೆ ಸಿಕ್ಕುತ್ತಾರೆ. ಅನೇಕವೇಳೆ ಈ ಭಾವೋದ್ರೇಕಗಳನ್ನು ನಾನಾ ಕಾರಣಗಳಿಂದ ವ್ಯಕ್ತಪಡಿಸಲಾಗುವುದಿಲ್ಲ. ಅವುಗಳನ್ನು ತಡೆಯಬೇಕಾಗುತ್ತದೆ. ಅನೇಕವೇಳೆ ಜಾಗ್ರತಾವಸ್ಥೆಯಲ್ಲಿ ತಡೆಗಟ್ಟಿದ ಭಾವೋದ್ರೇಕಗಳು ತಮ್ಮ ಪ್ರಕಾಶನೆಗೆ ಅವಕಾಶವಿಲ್ಲದೆ ಸುಪ್ತಚೇತನಕ್ಕೆ ತಳ್ಳಲ್ಪಡುತ್ತವೆ. ಅವು ಬಹಿರಂಗವಾದ ಹೊರತು ಮನಸ್ಸಿನ ಸ್ಥಿತಿ ಸೆಟ್ಟಗಿರುವುದಿಲ್ಲ. ಮನಸ್ಸಿನ ವಿಕಾರ ಹೆಚ್ಚುತ್ತದೆ. ಸುಪ್ತಚೇತನದಲ್ಲಿ ಗುಪ್ತವಾಗಿ ಅಡಗಿಸಲ್ಪಟ್ಟಿರುವ ಭಾವೋದ್ರೇಕಗಳು ಹೊರಕ್ಕೆ ಬರಲು ಆಟಗಳು ಸಾಧನಗಳಾಗಿರುತ್ತವೆ. ಮಕ್ಕಳು ಆಟಕ್ಕಾಗಿ ಜಗಳವಾಡುತ್ತಿರುವಾಗ ಕೋಪದ ತಾಪ ಬಹಳಮಟ್ಟಿಗೆ ಇಳಿದುಹೋಗುತ್ತದೆ. ಇಲ್ಲದಿದ್ದರೆ ಇದೇ ಕೋಪದ ತಾಪ ವಸ್ತುಗಳನ್ನು ನಾಶಪಡಿಸುವುದರಲ್ಲಾಗಲಿ, ಇತರರನ್ನು ಕಾಡಿಸುವುದರಲ್ಲಾಗಲಿ ತೋರ್ಪಡಿಸಿಕೊಳ್ಳಬಹುದು. ಆಟಗಳ ಮುಖೇಣ ಕೋಪದ ಪ್ರಕಾಶನಕ್ಕೆ ಮಾರ್ಗ ದೊರೆತು ಅದರ ಬಲ ಕುಗ್ಗಿ ಅದರಿಂದ ತೊಂದರೆ ಕಡಿಮೆಯಾಗುತ್ತದೆ. ಹೀಗೆಯೇ ತಡೆಗಟ್ಟಿದ್ದ ಭಾವೋದ್ರೇಕಗಳು ಸನ್ನಿವೇಶಕ್ಕೆ ಸರಿಯಾಗಿ ಆಟಗಳಲ್ಲಿ ಪ್ರದರ್ಶನ ಹೊಂದಿ, ಮಾನಸಿಕ ಆರೋಗ್ಯಕ್ಕೆ ಹಾನಿಕಾರಕಗಳಾಗಿರುವುದಿಲ್ಲ. ಆಟಗಳ ಈ ಉಪಯೋಗವನ್ನು ಗ್ರೀಕ್ ದಾರ್ಶನಿಕ ಅರಿಸ್ಟಾಟಲ್ ಮನಗಂಡಿದ್ದನಂತೆ. ಆದ್ದರಿಂದ ಈ ವಾದದ ಮೂಲ ನಾಯಕ ಅರಿಸ್ಟಾಟಲ್‌ನೆಂದೇ ಹಲವರ ಅಭಿಪ್ರಾಯವಾಗಿದೆ.

ಮನೋವೈಜ್ಞಾನಿಕರು ಮಕ್ಕಳ ಆಟಗಳನ್ನು ಒಂದು ಪರಿಶೋಧನೆಯ ವಿಧಾನವಾಗಿಯೂ ಮತ್ತು ಮಾನಸಿಕ ರೋಗಗಳನ್ನು ಗುಣಪಡಿಸುವ ಒಂದು ಸಾಧನೆಯನ್ನಾಗಿಯೂ ಉಪಯೋಗಿಸುತ್ತಿದ್ದಾರೆ. ಚಿಕ್ಕ ಮಕ್ಕಳು ತಮ್ಮ ಮನೋಭಾವನೆ

ಗಳನ್ನು ವ್ಯಕ್ತಪಡಿಸಲು ಆಗದಿರುವಾಗ, ಅವುಗಳನ್ನು ಆಟವಾಡುವ ವಿಧಾನದಲ್ಲಿ ತೋರಿಸುತ್ತಾರೆ. ಆಡಲು ಗೊಂಬೆಗಳನ್ನು ಕೊಟ್ಟಾಗ ಮಗುವಿನ ವರ್ತನೆಯನ್ನೀಕ್ಷಿಸಿ ತಂದೆತಾಯಿಗಳ ಮೇಲಿನ ಪ್ರೇಮ, ಸ್ನೇಹ, ಕೋಪ, ಅಸೂಯೆ ಮೊದಲಾದುವು ಗಳನ್ನು ತಿಳಿಯಬಹುದು. ಹೀಗೆಯೇ ಮನೆಯಲ್ಲಿರುವ ಇತರರೊಡನೆ ಯಾವ ಸಂಬಂಧ ವನ್ನು ಹೊಂದಿರುವುದೆಂದು ಕಂಡು ಹಿಡಿಯಬಹುದು. ಮನೆಯಲ್ಲಿ ಮಕ್ಕಳ ವ್ಯಕ್ತಿತ್ವದ ಬೆಳವಣಿಗೆಗೆ ಸರಿಯಾದ ವಾತಾವರಣವಿಲ್ಲದಿದ್ದರೆ ತೊಂದರೆಯುಂಟಾಗುತ್ತದೆ.

ಆಟಗಳ ವಿಚಾರವಾಗಿ ವೈಜ್ಞಾನಿಕರು ವಿವಿಧ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದರೂ ವ್ಯಕ್ತಿಯ ದೃಷ್ಟಿಯಿಂದ ಅವುಗಳ ಉಪಯುಕ್ತತೆಯನ್ನು ಎಲ್ಲರೂ ಒಪ್ಪಿದ್ದಾರೆ. ಆಟಗಳ ಒಂದೊಂದು ಗುಣವನ್ನು ಒಬ್ಬೊಬ್ಬರು ಒತ್ತಿ ಹೇಳಿದ್ದಾರೆ. ಆಟಗಳನ್ನಾಡಲು ದೈಹಿಕ ಶಕ್ತಿ ಇರಬೇಕು. ಆಟಗಳಿಂದ ಮನೋರಂಜನೆಯುಂಟಾಗುತ್ತದೆ. ದೈಹಿಕ ಮತ್ತು ಮಾನಸಿಕ ಆರೋಗ್ಯಕ್ಕೆ ಮನೋರಂಜನೆ ಆವಶ್ಯಕ. ದೈನಂದಿನ ಜೀವನದ ಬೇಸರಿಕೆಯನ್ನು ಆಟಗಳು ಹೋಗಲಾಡಿಸುತ್ತವೆ. ಮುಂದಿನ ಜೀವನದ ರಂಗಕ್ಕೆ ಆಟಗಳು ಒಳ್ಳೆಯ ತರಬೇತನ್ನು ಕೊಡುತ್ತವೆ. ಮಕ್ಕಳು ಆಟವಾಡುವಾಗ ವಯಸ್ಕರು ಮಾಡುವ ಕೆಲಸಗಳನ್ನೆಲ್ಲಾ ಸಾಂಕೇತಿಕವಾಗಿ ಅನುಕರಣೆ ಮಾಡುತ್ತವೆ. ಭಾವೋದ್ರೇಕಗಳ ತಡೆಕಟ್ಟೆಯನ್ನು ಸಡಿಲಿಸಿ ಅವುಗಳು ಬಹಿರಂಗವಾಗುವಂತೆ ಮಾಡಿ, ಆರೋಗ್ಯವನ್ನು ಆಟಗಳು ಕಾಪಾಡುತ್ತವೆ. ಮುಖ್ಯವಾಗಿ ಆಟಗಳು ವ್ಯಕ್ತಿತ್ವದ ವಿಕಾಸಕ್ಕೆ ಬಹಳ ಸಹಕಾರಿಯಾಗಿರುತ್ತವೆ. ಮಕ್ಕಳು ಬೆಳೆದಂತೆ ಅವರ ದೈಹಿಕ ಚಲನೆ ಹೆಚ್ಚಾಗುತ್ತದೆ. ಚಟುವಟಿಕೆ ಹೆಚ್ಚುತ್ತದೆ. ಹಲವಾರು ಕೆಲಸಗಳಲ್ಲಿ ತೊಡಗಲು ತೀವ್ರವಾದ ಆಸಕ್ತಿಯುಂಟಾಗುತ್ತದೆ. ತನ್ನ ಇಚ್ಛೆಗಳನ್ನು ವ್ಯಕ್ತಪಡಿಸಲು ತವಕ ಉಂಟಾಗುತ್ತದೆ. ಇವುಗಳನ್ನು ಸಮರ್ಪಕವಾಗಿ ನಡೆಯಿಸಲು ಆಟಪಾಠಗಳು ನಿರ್ಮಿತವಾಗಿರುವಂತೆ ಕಾಣುತ್ತದೆ.*

ಬಿ. ಕೃಷ್ಣನ್

---

* ಎ. ಐ. ಆರ್ ಕೃಪೆಯಿಂದ.

ಪರೀಕ್ಷಕನಿಗೆ

ಓ ಪರೀಕ್ಷಕ ಪ್ರಭುವೆ, ನಮ್ಮ ಬಾಳಿನ ವಿಭುವೆ,
ನೀನೆ ಗತಿ ನೀನೆ ಮತಿ ಕಾಯಿ ತಂದೆ,
ನನ್ನ ಉತ್ತರಕುವರ ನಿನ್ನಡಿಗಳಲ್ಲಿರಲಿ
ಹೊತ್ತು ತಂದಿಹೆನಿದನು,
ಹೆತ್ತು ತಂದಿಹೆನಿದನು,
ಒಲವಿನಿಂದೆ.
ಕುರುಸೇನೆಗಿದಿರಾಗಿ ಭೀಷ್ಮದ್ರೋಣಾದಿಗಳ
ಗೆಲಲಾರದೀ ಕೂಸು, ಬಲ್ಲೆನದನು.
ಅಬಲೆಯರ ಮುಂದಿದುವೆ ಸಬಲನೆನಿಸಿತು ಕೇಳ!
ಮೆಚ್ಚದರ ಪೌರುಷವ, ಅದುವೆ ಸಾಕು,
ನಡಸಬಹುದೀ ಹಸುಳೆ ನರನ ರಥವ!

ಬೆಳವಣಿಗೆ ಸಾಲದೊ? ಆರುತಿಂಗಳ ಕೂಸು,
ತೊಟ್ಟುಕಳಚಿದ ಹೀಚು, ಒಗರು ಪೀಚು!
ಕಪ್ಪು ತಾನೆಂಬೆಯೋ? ನಿನ್ನದೇ ತಪ್ಪು.
ತಿಳಿದಿಲ್ಲ ತೊದಳು ನುಡಿ, ರೀತಿ ನೀತಿಗಳಿಲ್ಲ
ಬಲವಿಲ್ಲ ತೂಕವಿಲ್ಲ,
ಎಂದೆಂಬೆಯೋ ನೀನು?
ತಪ್ಪು ನನ್ನದೆ ಏನು!
'ನೀ ಹೇಳೆ ನಾ ಬರೆದೆ ನನ್ನ ತಪ್ಪೇನು!"
ಕವಿ ನೀನು ಬರಿಯ ಲಿಪಿಕಾರ ನಾನು.
ನಿನ್ನದೀ ಘೃತಕುಂಭ, ನಿನ್ನದೀ ಪ್ರತಿಬಿಂಬ,
ಪ್ರತಿಕೃತಿಯ ಕಾಣಿಸುವ ಕನ್ನಡಿ ಇದು.

ಮೇನಕೆಯ ಮೆಚ್ಚಿದ್ದೈ ಎಲೆ ವಿಶ್ವಮಿತ್ರ!
ಬೇಡವಾಯಿತೆ ಮಗುವು? ಏನು ಚಿತ್ರ!

ಕಣ್ಣುಮುಚ್ಚಿದ ಕೈಯ
ತೆಗೆಯಾಚೆ ಎಲೆ ಅಯ್ಯ
ನಿನ್ನ ತೊಡೆಯೊಳಗಿರಿಸು, ನಿನ್ನದೀ ಕೂಸು.
ಫೇಲು ಎಂಬೆಯೋ ನೀನು ?
ಪಾಲು ನಿನ್ನದು ! ಮಾಣು.
ಪಾಸೆಂಬೆಯೋ ಏನು ?
ಪಾಸು ನೀನೂ ! ಕಾಣು !
ಎಲೆ ಪರೀಕ್ಷಕ ಪ್ರಭುವೆ, ನಮ್ಮ ಬಾಳಿನ ವಿಭುವೆ,
ಹಾಕು ನಂಬರನು !
ಮೇಲ್ ನಾಕು ನಂಬರನು !

ಎ. ಪ್ರಹ್ಲಾದರಾವ್

ಮಾಘಯೋಗಿ

ಮೊದಲು ಬುಡಸಹಿತ ಎಲ್ಲವನು ಕಿತ್ತೆಸೆದ;
ಬಿತ್ತು ಕಾಲಡಿಯಲ್ಲಿ ತರಗೆಲೆಯ ಮೊತ್ತ,
ಸುತ್ತ ಬೆಳೆಯಿತು ಮೌನಗಳ ಹುತ್ತ.

ಕೊಂಬೆ ರೆಂಬೆಯ ರಸವ ಸೆಳೆದು ಬತ್ತಿಸಿದ;
ತೊಟ್ಟು ಕಳಚಿತು ಎಲ್ಲ ಹಿಡಿತಗಳಿಗೆ,
ಮೂಕವಾಯಿತು ಹೃದಯ ತುಡಿತಗಳಿಗೆ.

ತಲೆಯ ಮೇಲಿನ ಬಾನು ತಿಳಿಯಾಯ್ತು,
ನಿರ್ಭಾವ ನಿಸ್ತರಂಗ ನೀಲಿಯ ಸಾಗರ,
ಇರುಳ ನಭ ರತ್ನಗಳ ಹೆಡೆ ತೆರೆದ ನಾಗರ!

ಸಂಜೆಮುಂಜಾನೆಯಲಿ ಮುತ್ತು ಚೆಲ್ಲುವ ಬೆಳಕು,
ಸುತ್ತಲೂ ರಜತಮಯ ಹೇಮ ಧೂಪ.
ನಗ್ನ ನೀರವ ಶ್ರವಣ ತಪಸ್ಸಿನಾವರಣ
ಗರ್ಭಗುಡಿಯಲಿ ಸ್ತಿಮಿತ ಸ್ನಿಗ್ಧಪ್ರದೀಪ.

ಜಿ. ಎಸ್. ಶಿವರುದ್ರಪ್ಪ

ರತ್ನಾಕರ ಸಿದ್ಧನ ಹಂಸಕಲೆ

ಭರತೇಶ ವೈಭವದಲ್ಲಿ ಆಗಾಗ ಧ್ಯಾನದ ಬಗ್ಗೆ ರತ್ನಾಕರ ಹೃದಯಂಗಮವಾಗಿ ಬಣ್ಣಿಸಿರುವನು. ಜೀವ ತನ್ನ ಸ್ವಸ್ವರೂಪವನ್ನು ಅರಿಯುವುದು ತನ್ನನ್ನು ತಾನು ನಿಟ್ಟಿಸಿದಾಗ! ತನ್ನನ್ನು ತಾನು ನಿಟ್ಟಿಸುವುದೇ ತಪಸ್ಸು! ಇಂದ್ರಿಯ ಮನ ಬುದ್ಧಿಗಳ ಸೀಮೆಯನ್ನು ದಾಟಿ ಆತ್ಮಾನುಸಂಧಾನದಲ್ಲಿ ನಿರತನಾದವನೇ ತಪಸ್ವಿ. ಚಿತ್ತವೃತ್ತಿಯನ್ನು ನಿರೋಧಿಸುವ ಸಲುವಾಗಿ ಧ್ಯಾನದ ಆವಶ್ಯಕತೆ; ಮತ್ತೆ ಮತ್ತೆ ರಾಗದ್ವೇಷದೊಡನೆ ಸಖ್ಯ ಬೆಳಸುವ ಮನಸ್ಸು ವೃಥಾ ಕರ್ಮಾಣುಗಳನ್ನು ಆತ್ಮಪ್ರದೇಶಕ್ಕೆ ಆಹ್ವಾನಿಸುವುದು. ಇದರಿಂದ ದಾರಿಯಲ್ಲಿ ಹೋಗುವ ಮಾರಿಯನ್ನು ಮನೆಗೆ ಕರೆದಂತಾಗುವುದು. ಹರಿದ ಮನವನ್ನು ಬಂಧಿಸಿ ಅಧ್ಯಾತ್ಮದತ್ತ ತಿರುಗಿ ಬರುವ ಕರ್ಮವನ್ನು ತಡೆಯಬೇಕು, ಇರುವ ಕರ್ಮವನ್ನು ಧ್ಯಾನದಿಂದ ಓಡಿಸಬೇಕು. ಈ ಕಾರ್ಯ ಪೂರ್ಣಗೊಂಡಾಗ ಆತ್ಮವಿಕಾಸ ಪೂರ್ಣವಾಗುವುದು; ಮಾನವ ಆಗ ದೇವನಾಗುವನು.

ರತ್ನಾಕರನ ಅಧ್ಯಾತ್ಮ ಕ್ರಮವಾಗಿ ವಿಕಾಸಗೊಂಡಿರುವುದನ್ನು ಭರತೇಶ ವೈಭವ ದುದ್ದಕ್ಕೂ ಪರೀಕ್ಷಿಸಬಹುದು. ವಿಷಯ ಸುಖದಿಂದ ಮೇಲೇರಿ ರಸಾನಂದವನ್ನು ಅನುಭವಿಸಿ ಅದನ್ನೂ ಮೀರಿ ಬ್ರಹ್ಮಾನಂದದತ್ತ ಭರತೇಶ ಪಯಣಗೊಂಡುದನ್ನು ರತ್ನಾಕರನಂತೆ ರಸವತ್ತಾಗಿ ಬಣ್ಣಿಸಿದವರು ಅಪರೂಪ. ಎಲ್ಲ ಕಲೆಗಳನ್ನೂ ಕಣ್ಣಿಗೆ ಕಟ್ಟುವಂತೆ ಚಿತ್ರಿಸುವ ಪ್ರತಿಭೆ ಕವಿರತ್ನಾಕರನಿಗಿರುವಂತೆ ಆತ್ಮಕಲೆಯನ್ನೂ ಬಣ್ಣಿಸುವ ಕುಶಲತೆ ಇದೆ.

ಆತ್ಮ ಸ್ವರೂಪವನ್ನು ಕಲಾತ್ಮಕವಾಗಿ ಚಿತ್ರಿಸಿದವರಲ್ಲಿ ರತ್ನಾಕರ ಅಗ್ರಗಣ್ಯ.

ಆರು ಬಲ್ಲರು ಹಂಸತತ್ತ್ವವ ತಮ್ಮ ಶರೀರ ತುಂಬಿರುತಿಹುದದನು ||
ಹ್ಯಾರದೆ ಸಾರದೆ ಹೊರ ಹೊರಗಾಡಿ ಸಂಸಾರ ದುಃಖವನುಣುತಿಹರು || ಆಸ್ಥಾನ ಸಂಧಿ || ೧೦೩ ||
"ಒಳಗಿದ್ದ ಚಿದ್ರೂಪ ನೋಡದೆ ಜಗವೆಲ್ಲ! ಬಳಲುತಿಹುದು ಹೊರಗಾಡಿ" || ೧೦೪ ||
ಮನೆಯಲ್ಲಿ ಹೂಳಿದ್ದ ನಿಧಿಯ ಕಾಣದೆ ಹೋಗಿ! ಧನಿಕರ ಯಾಚಿಸುವಂತೆ ||
ತನುವಿನೊಳಿದ್ದಾತ್ಮರೂಪ ನಿಟ್ಟಿಸದೆ ಮೇದಿನಿಯ ತೊಳಲಿ ನೋಡುತಿಹರು || ೧೦೫ ||
"ಒಡಲೊಳಿದ್ದಾತ್ಮನ ನೋಡಲೊಲ್ಲದೆ ಮೂರು ಪೊಡವಿಯ ಚಿಂತಿಸುತಿಹರು" || ೧೦೬ ||

ಆತ್ಮನ ಸಾಮಾನ್ಯಸ್ವರೂಪವನ್ನು ವಿವರಿಸಿ, ಅದನ್ನರಿಯದವರ ತಿಳಿಗೇಡಿತನ

ವನ್ನು ಎತ್ತಿ ತೋರುವನು. ಪ್ರಾರಂಭದಲ್ಲೇ ಓದುಗರ ಕುತೂಹಲವನ್ನು ಕೆರಳಿಸಿ ಮುಂದೆ ಆತ್ಮಸ್ವರೂಪವನ್ನು ರಮಣೀಯವಾಗಿ ಚಿತ್ರಿಸುವನು.

ಒರೆಯೊಳಿದ್ದಾಯುಧದಂತೆ ಕಾರ್ಮುಗಿಲಿನ | ಮರೆಯೊಳಿಹ ಸೂರ್ಯನಂತೆ ||
ಹೊರಗೆ ಕಲ್ಮಷದ ಮೈಯಹುದೊಳಗಾತ್ಮನು | ಕರೆವುತಿಹನು ತಿಳಿವೆಳಗಾ || ೧೦೮ ||
ತಿಳಿವೆ ಶರೀರ ತಿಳಿವೆ ರೂಪು ಬೆಳಗೆ ಮೈ | ಬೆಳಗೆ ತಾನಾಗಿರುತಿಹುದು ||
ತಿಳಿವು ಬೆಳಗುಗಳೆ ಹಂಸನ ಕುರುಹೆಂದು! ತಿಳಿದುನೋಳ್ಪವನೀಗ ಧನ್ಯಾ || ೧೦೯ ||

ತಿಳಿವೆಳಗಿನ ಲೇಪವಿಟ್ಟು ನಿರಾಕಾರನಾದ ಆತ್ಮಕ್ಕೆ ರತ್ನಾಕರ ಕಾವ್ಯಮಯ ವಾದ ಆಕಾರವಿತ್ತು ಬಣ್ಣಿಸಿರುವನು. ಇಷ್ಟಕ್ಕೆ ಇವನ ಬಣ್ಣನೆ ಮುಗಿಯಲಾರದು. ಇದು ಕೇವಲ ರೇಖಾಚಿತ್ರವೆಂಬುದನ್ನು ನಾವು ಮರೆಯಬಾರದು.

ಜ್ಞಾನಿಯ ಕಡೆ ಓದುಗರ ಗಮನವನ್ನು ಸೆಳೆದು ಜ್ಞಾನಿಯ ನಿರ್ಲಿಪ್ತತೆಯ ಹಾಗೂ ಅದರ ಪರಿಣಾಮದ ಪರಿಚಯ ಮಾಡಿಕೊಡುವನು.

ಜ್ಞಾನಿಯ ಮುಟ್ಟಲಮ್ಮದು ಕರ್ಮವೆನೆಲಾ | ಜ್ಞಾನವು ತಾನಾವುದೆನಲು ||
ಜ್ಞಾನವೇ ನಾನು ಶರೀರ ನಾನಲ್ಲೆಂಬ | ಮಾನಸದನುಭವಮಲ್ತೆ || ೧೭. ಕವಿವಾಕ್ಯಸಂಧಿ
ಆಗಾಗ ದೇಹ ಬೇರಾತ್ಮ ಬೇರೆಂದು ವಿ| ಭಾಗಿಸಿ ತನ್ನ ತಾ ಸೆವ್ಮಿ ||
ಭೋಗಿಸಿದರೆ ಕರ್ಮಬಂಧವಿಲ್ಲಾಗಿಯಾ || ಭೋಗಿ ತಾನೆ ಯೋಗಿಯಲ್ತೆ ||
ನಾಗಲೋಕದೊಳಿದ್ದರೇನು ಗರುತ್ಮಗೆ | ನಾಗರ ಬಾಧೆಗಳುಂಟೆ? ||
ಭೋಗದೊಳಿದ್ದರೇನಾತ್ಮ ವಿಜ್ಞಾನಿಗೆ | ಭೋಗದಿಂದಿಹ ಕರ್ಮವುಂಟೆ? || ೩೪ ||
ಗಾನಮದ್ದಳೆ ತಾಳ ಲಯಕೆ ನರ್ತಿಪ ನುಂದ | ಯಾನೆಗೆ ಶಿರದ ಕುಂಭದೊಳು ||
ಧ್ಯಾನವಿಪ್ಪಂತೆ ರಾಜ್ಯದೊಳಿರ್ದು ಮುಕ್ತಿಸಂ | ಧಾನದೊಳಗೆ ನಿನ್ನ ನೆನಹು || ೪೨

ಭೋಗವಿಜ್ಞಾನಿ ಭೋಗದಲ್ಲಿದ್ದೂ ಕರ್ಮಾಸ್ರವಕ್ಕೆ ತುತ್ತಾಗದೆ ಚಾಕಚಕ್ಯತೆಯಿಂದ ಬಾಳಬಲ್ಲನಂತೆ! ಈ ಸಿದ್ಧಾಂತವನ್ನು ಸಾಹಿತ್ಯವಾಗಿ, ಸರಸವಾಗಿ ತೋರಲೋಸುಗ ರತ್ನಾಕರ ಭರತೇಶನ ಭವ್ಯಪಾತ್ರವನ್ನು ಸರ್ವಾಂಗ ಸುಂದರವಾಗಿ ಚಿತ್ರಿಸಿ ಕೃತಕೃತ್ಯನಾಗಿದ್ದಾನೆ. ಭೇದವಿಜ್ಞಾನದಿಂದ ಬಾಳಿದಾಗ ಕರ್ಮಾಣುಗಳು ಪೀಡಿಸಲಾರವೆಂದು ಪೂರ್ವಾಚಾರ್ಯರೂ ಹೇಳಿರುವರು. "ಜ್ಞಾನಿಯು ಎಲ್ಲಾ ದ್ರವ್ಯಗಳಲ್ಲೂ ರಾಗರಹಿತನಾಗಿರುವುದರಿಂದ ಅವನು ಕರ್ಮದ ಮಧ್ಯದಲ್ಲಿ ಇದ್ದೂ ಕೂಡ ಕೆಸರಿನೊಳಗೆ ಇದ್ದ ಸುವರ್ಣದಂತೆ ನಿರ್ಲಿಪ್ತನಾಗಿರುವನು"[1] ಎಂದು ಭಗವಾನ್ ಕುಂದು ಕುಂದಾಚಾರ್ಯರು ಹೇಳುವರು.

[1] ಣಾಣಿರಾಗಪ್ಪಜ ಹೊಸವ್ವದವ್ವೇಸುಕಮ್ಮಮಜ್ಝಗದೊ | ಣೋಲಿಪ್ಪದಿ ರಜಏಣದು ಕದ್ದಮಮಜ್ಝೆ ಜಹಾಕಣಯಂ || ೨೧೮. ಸಮಯಸಾರ. ಸಂ.: ವಿರ್ಜಿ ಅಣ್ಣಾರಾಯ.

ಪ್ರಾಥಮಿಕಾವಸ್ಥೆಯಲ್ಲಿರುವ ಧ್ಯಾನಿಯ ಕಲ್ಪನೆ ಹೇಗೆ ರೂಪಗೊಳ್ಳಬೇಕೆಂಬುದನ್ನು ರತ್ನಾಕರಯೋಗಿ ರಮಣೀಯವಾಗಿ ವಿವರಿಸುವನು.

ತನು ಜಿನಗೃಹವೆಂದು ಮನ ಸಿಂಹಪೀಠ | ವೆಂದನುಪಮಾತ್ಮನೆ ಜಿನನೆಂದು ||
ನೆನಹವೆಲ್ಲವ ಬಿಟ್ಟು ಕಣ್ಮುಚ್ಚಿ ನೋಳ್ಪಾಗ | ಜಿನನಾಥ ತೋರುವನೊಳಗೆ || ೬೯ ||
ಕಲಿತು ಮರೆದುದೊಂದು ಪದ್ಯವ ನೆನೆದುದ | ನೊಳಗೊಳಗಾಲೋಚಿಪಂತೆ ||
ತಿಳಿವು ಬೆಳಗು ನನ್ನ ರೂಪೆಂದು ನೆನಹು ಮೈ | ಯೊಳಗಾಡಲಾತ್ಮ ತೋರುವನು || ೭೧ ||
ಭೊಗ್ಗನೊಂದೇ ದಿನದೊಳು ತೋರನಾತ್ಮನು || ಬಗ್ಗಿದಾಗಳೆ ಬಾಗಿಲಹುದೇ ? ||
ನುಗ್ಗಿಯ ಮರನಲ್ಲ ಕರ್ಮನೆಂಬುದು ಕರ್ಮ |ಜಗ್ಗಲೊಯ್ಯನೆ ತೋರುತಿಹನು || ೭೬ ||
ಎಳೆಮಿಂಚಿನಂದದ ಬೊಂಬೆಯೊ ತಿಂಗಳ | ತಿಳಿವೆಳಗಿನೊಳಾದ ರೂಪೋ ||
ಪಳಕಿನ ಪುತ್ತಳಿಯೋಯೆನೆ ಕ್ರಮದಿಂದ | ಹೊಳೆವುದೊಳಗೆ ತನ್ನ ರೂಪು || ೭೭ ||
ತನ್ನ ತಾ ನೋಳ್ಪಾಗ ನೋಡು ಚಿತ್ರವ ಕರ್ಮ | ತನ್ನ ತಾ ಜರಿದೋಡುತಿಹುದು ||
ಮುನ್ನೆಂದು ಕಂಡು ಕೇಳಿದ ತೆರನಲ್ಲದೊಂ | ದುನ್ನತ ಸುಖ ಹುಟ್ಟುತಿಹುದು || ೮೦ ||

ಅಧ್ಯಾತ್ಮ ಅನಿರ್ವಚನೀಯವಾದುದು ನಿಜವಾದರೂ ರತ್ನಾಕರ ಅದರ ಸೊಗಸನ್ನು ಅನುಭವಿಸಿದವನು. ಯೋಗಿಯಾದ ಈತ ಮಹಾ ಕವಿಯೂ ಆಗಿರುವುದರಿಂದ ಅಲೌಕಿಕವಾದ ಅನುಭವಕ್ಕೆ ವಿಮಲಕಲೆಯ ಬಣ್ಣ ಕಟ್ಟಿರುವನು. ಸಾಧಕ ಪ್ರಾರಂಭದಲ್ಲಿ ಈ ಕಲ್ಪನಾವಿಲಾಸದಿಂದಲೇ ಸಾಗಬೇಕಾಗುವುದು. ಕಲ್ಪನೆ ಮತ್ತೆ ಮತ್ತೆ ಸ್ಫುಟಗೊಂಡು ರಸವಾಗುವುದು.

ಯೋಗಿಯಾಗುವವನು ಮೊದಲು ರಸಋಷಿಯಾಗಬೇಕೆಂದು ಹೇಳುವುದು ಈ ಅರ್ಥದಲ್ಲಿ.

ಕುಸುಮಾಜಿಯೊಡನೆ ರತಿಕ್ರೀಡೆಯಾದ ಮೇಲೆ ತುಸು ವಿಶ್ರಾಂತಿ ತೆಗೆದುಕೊಂಡು ಭರತೇಶ ಆತ್ಮ ಚಿಂತನೆಯಲ್ಲಿ ಅಂತರ್ಮುಖಿಯಾಗುವನು.

ಮರೆದನಾಗಳೆಯಿಷ್ಟು ಹೊತ್ತು ನಲ್ಲಳ ಕೂಡೆ | ಮೆರೆದುದು ಹಳೆಮೆರಹಾಯ್ತು ||
ಅರಿದನಾಗಳೆ ಕಂಡನಾಗಳೆ ಹಂಸನ | ಕುರುಹನಾ ರಾಜಯೋಗೀಂದ್ರ ||

ವೀಣಾಸಂಧಿ ೧೩೦

ಸಂದು ಭೋಗದೊಳಿದ್ದು ಯೋಗಕೆ ಸಲುವಾಗ | ಹಿಂದಣ ವಾಸನೆಯಿಲ್ಲ ||
ಒಂದು ಬಿಟ್ಟೊಂದು ವಸ್ತ್ರವ ಹೊದೆವಂತಿಹು | ದೆಂದೆಂದು ಭಾವವಾನೃಪಗೆ ||

ವೀ. ಸಂ. ೧೩೧

ದೃಷ್ಟಿಗಳೆರಡನು ಮುಚ್ಚಿ ಭೂಪತಿ ಭಾವ | ದೃಷ್ಟಿಯಿಂದೊಳಗೆ ನೋಡಿದನು ||
ಅಷ್ಟಗುಣವೆ ತನುವಾಗಿ ತನುವಿನೊಳ | ಗಿಷ್ಟಾತ್ಮ ಹೊಳೆದನಾಕ್ಷಣವೆ || ೧೩೨
ಜಾರುತಿದ್ದುದು ಕರ್ಮ ಹಾರುತಿದ್ದುದು ಕಾಂಕ್ಷೆ | ಮೀರುತಿದ್ದುದು ಚಿತ್ಪ್ರಕಾಶ ||

ತೋರುತ ಮರೆಸುತ ಕೂಡೆ ತೋರುತ ಸುಖ | ದೋರುತಿದ್ದನು ಹಂಸನಾಥ || ೧೩೪ ||
ಬುದ್ಧಿಯೊಳಾರಾಯ ಬೆಳದಿಂಗಳೊಳಗೊಂದು | ಸಿದ್ಧಬಿಂಬವ ರಚಿಸಿದನು ||
ಸಿದ್ಧೋಹಮೆಂದಲ್ಲಿ ಸುಖದೊಳಿದ್ದನು ಜಿನ | ಸಿದ್ಧರಿಹಂತೆ ಮುಕ್ತಿಯೊಳು || ೧೩೫ ||

ಭರತೇಶ ಇನ್ನೂ ಸಾಧಕ; ತನ್ನ ಪ್ರತಿಭಾನೇತ್ರದಿಂದ ಆತ್ಮನನ್ನು ನೋಡಲು ಯತ್ನಿಸುವನು; ತನ್ನ ಕಲ್ಪನಾಕರದಿಂದ ಬೆಳದಿಂಗಳಲ್ಲಿ ಕಡೆದಂತೆ, ಅಂತರಾತ್ಮವನ್ನು ಸಾಕಾರಗೊಳಿಸಿಕೊಳ್ಳುವನು, ರಸಲೋಕ ವಿಹಾರಿಯಾಗಿ ಬ್ರಹ್ಮಲೋಕಕ್ಕೆ ಹಾರಲು ತರಪೇತು ಪಡೆಯುತ್ತಿರುವನು !

ಭರತೇಶ ತನ್ನ ರಮಣಿಯರಿಗೆ ತತ್ತ್ವಸ್ವರೂಪವನ್ನು ವಿವರಿಸಿ ಆತ್ಮೋದ್ಧಾರ ಮಾರ್ಗವನ್ನು ತೋರುವಾಗ ಧ್ಯಾನದ ಬಗ್ಗೆ ಮಾತಾಡಿರುವನು.

ಇದರಿಂಟ್ಟು ಜಿನಸಿದ್ಧರುಗಳ ಪೂಜಿಪದು ನೋ | ಳ್ಪದು ಪೊಗಳ್ವುದು ಭೇದಭಕ್ತಿ ||
ಪದೆದು ತನ್ನಾತ್ಮರೂಪಿನೊಳಿಟ್ಟು ನೋಡಿದ | ರದು ಭೇದವಿಲ್ಲದ ಭಕ್ತಿ ||

ತತ್ತ್ವೋಪದೇಶ ಸಂಧಿ ೪೩

ಧೂಳರಾಶಿಯಲೊಂದು ಸ್ಫಟಿಕದ ಪ್ರತಿಮೆಯ | ಹೂಳಿದಂತೀ ದೇಹದೊಳಗೆ ||
ಹೂಳಿರ್ದನೆನ್ನಾತ್ಮನೆಂದು ನೋಡಿದರಲ್ಲಿ | ಥಳಿಸುತಾತ್ಮ ತೋರುವನು || ೪೮ ||
ಸ್ಫಟಿಕದ ಪ್ರತಿಮೆಯು ಚರ್ಮದೃಷ್ಟಿಗೆ ಹಸ್ತ | ಪುಟಕೆ ಸಂಧಿಸುವುದಂತಲ್ಲ ||
ಘಟದೊಳಾತ್ಮನ ರೂಪು ಬಯಲರೂಪಿನದೊಂದು | ಸ್ಫಟಿಕದ ಪ್ರತಿಮೆಯೆಂದೆಣಿಸು || ೪೯ ||
ಆಸೆ ಎಲ್ಲವ ಬಿಟ್ಟು ಕಣ್ಮುಚ್ಚಿ ಏಕಾಂತ | ವಾಸದೊಳಗೆ ನೋಡಿದರೆ ||
ಮಾಸದೆ ಬೆಳಗೆ ಮೈಯಾಗಿ ಸುಜ್ಞಾನವ | ಸೂಸುತ ತೋರುವನಾತ್ಮಾ || ೫೦ ||
ಸೀರೆಯ ಮೈಲಿಗೆ ಜಾರ್ವಂತೆ ರಜಕನು | ಖಾರದ ಮಸಿಯೊಳಗದ್ದಿ ||
ನೀರೊಳಾ ಮಸಿಯನು ತೊಳೆಯದಿದ್ದರೆ ವಸ್ತ್ರ | ಧಾರಿಣಿಯೊಳು ಪೂಜ್ಯವಹುದೆ ? || ೭೫ ||
ಪಾಪ ವಾಸನೆಯನು ಪುಣ್ಯವಾಸನೆಯಿಂದ | ಲೋಪಿಸಿ ತನ್ನೊಳು ನಿಂದು ||
ಆ ಪುಣ್ಯವನು ತೊಳೆಯದಿರಾತ್ಮ ತ್ರಿಭುವನ | ದೀಪನಾಗನು ವ್ರತವಂತೆ || ೭೬ ||

ತನ್ನ ರಮಣಿಯರನ್ನೂ ಭರತೇಶ ಕಲ್ಪನಾವಿಲಾಸಿಗಳಾಗಿ ಆತ್ಮವನ್ನರಿಯುವಂತೆ ಪ್ರೇರೇಪಿಸುತ್ತಿರುವನು. ಸೀರೆಯ ಮೈಲಿಗೆ ಜಾರಲು ಖಾರದ ಮಸಿಯಲ್ಲಿ ಅದ್ದುವುದು ಎಷ್ಟು ಆವಶ್ಯಕವೋ ಸಾಧಕ ಬ್ರಹ್ಮರ್ಷಿಯಾಗುವ ಮುನ್ನ ರಸಋಷಿಯಾಗುವುದು ಅಷ್ಟೇ ಆವಶ್ಯಕ! ವಿಷಯ ವಾಸನೆಯನ್ನು ತೊಳೆಯಲು ರಸಾನಂದದತ್ತ ತಿರುಗಬೇಕು. ಬ್ರಹ್ಮಾನಂದ ರುಚಿಸಬೇಕಾದರೂ ಪ್ರಾರಂಭದಲ್ಲಿ ಸಾಧಕನ ಸಲುವಾಗಿ ರಸಾನಂದವಾಗಿ ಬರಬೇಕು. ವಿಷಯ ಮಟ್ಟದಿಂದ ಸಾಧಕ ರಸಮಟ್ಟಕ್ಕೇರುವಾಗ, ಬ್ರಹ್ಮಾನಂದ ಕೆಳಗಿಳಿದು ಅವನಿಗೆ ಕೈಯಿತ್ತು ಮೇಲೆತ್ತಬೇಕು.

ಪತ್ನಿಯರಿಗೆ ತತ್ತ್ವೋಪದೇಶವೆಸಗಿ ಭರತೇಶ ತಾನೇ ಧ್ಯಾನದಲ್ಲಿ ತನ್ಮಯನಾಗುವನು. ಅಧ್ಯಾತ್ಮ ಸುಖದಲ್ಲಿ ಮುಳುಗುವನು.

ವಾಯುಗಳೀರೈದು ನಿಂದು ನೆಲೆಯ ತನ್ನ | ಕಾಯದೊಳರಿದೊಂದನೊಂದಾ ||
ದಾಯವರಿದು ತೆಗೆದೊಂದೊಂದರೊಳು ಕೂಡಿ | ಗಯ್ಯಾಳಿತನವ ನಿಲಿಸಿದ್ದಾ ||

ಪ.ಯೋ. ಸಂ. ೬

ಮೂಲಾಧಾರದಿಂದೊಡ್ಯಾಣ ಬಂಧವ | ಜಾಲಂಧ್ರ ಬಂಧವನೆಸಗಿ ||
ನೂಲನೇರುವಂತೆ ಬ್ರಹ್ಮರಂಧ್ರಕೆ ಮತ್ತೆ | ಗಾಳಿಯನೆತ್ತಿ ನಿಲಿಸಿದಾ || ೭ ||
ಕುಂಡಲಿಯನು ವಾಯುವಿಂದಿರಿದರೆ ಪುಷ್ಪ | ಕಾಂಡನ ಶಕ್ತಿ ತಗ್ಗಿದುದು ||
ಗುಂಡಿಗೆಯೊಳು ಗಾಳಿನಿಂದರೆ ನಿಂದುದು | ಕಂಡ ಕಡೆಗೆ ಹೋಹ ಚಿತ್ತಾ || ೮ ||
ಕಳ್ಳಗುಪ್ಪೆಗೆ ಗಾಳಿಯೇರಿ ನಿಂದಿರೆ ನಿದ್ರೆ || ನಿಲ್ಲದೆ ಜರಿದೋಡಿತಾಗ ||
ಎಳ್ಳಷ್ಟು ಜಡನಿರದೋಡಿತು ನಡುನೊಸಲಲ್ಲಿ ಗಾಳಿಯ ನಿಲಿಸಿದರೆ || ೯ ||
ನೆತ್ತಿಗನಿಲನೇರಿದಾಗ ಮೈಯೊಳಗಣ | ಕತ್ತಲೆ ಕೆಟ್ಟು ಪ್ರಕಾಶಾ ||
ಅತ್ತಿತ್ತ ತೋರುತಿದ್ದುದು ಪವನಾಭ್ಯಾಸ | ದುತ್ತುಂಗ ಗುಣವನೇನೆಂಬೆ || ೧೦ ||

ಇಲ್ಲಿ ಯೋಗಶಾಸ್ತ್ರದ ರೀತಿ ವಿವರಣೆಯಿದ್ದು ಸಾಮಾನ್ಯನಿಗೆ ಅರ್ಥವಾಗುವುದು ಕಷ್ಟವಾಗಿದೆ. ಯೋಗ ವಿಜ್ಞಾನವನ್ನು ಭರತೇಶ ಪ್ರಯೋಗಕ್ಕಿಟ್ಟು ನೋಡುತ್ತಿರುವನು. ಆದರೂ ರತ್ನಾಕರ ಇಂಥ ಶಾಸ್ತ್ರವಿವರಣೆಯನ್ನೂ ಬೇಕೆಂದಾಗಿ ಕಲಾತ್ಮಕವಾಗಿ ಬಣ್ಣಿಸಿ ಸಾಮಾನ್ಯನಿಗೂ ಅಷ್ಟೋ ಇಷ್ಟೋ ಅರ್ಥವಾಗುವಂತೆ ಮಾಡಬಲ್ಲ. "ವಾಯುಗಳೀರೈದನೂ ದಾಯವರಿದು ತೆಗೆದೊಂದೊಂದರೊಳು ಕೂಡಿ ಗಯ್ಯಾಳಿತನವ ನಿಲ್ಲಿಸಿದ" ಎಂಬ ಮಾತು ಕೇಳಿದಾಕ್ಷಣ ಚಿತ್ರ ಕಣ್ಣಿಗೆ ಕಟ್ಟುವಂತಿದೆ.

ಗುದ ಪ್ರದೇಶದಿಂದ ನೆತ್ತಿಯವರೆಗಿರುವ ಷಟ್ ಚಕ್ರಗಳನ್ನೂ, ಧ್ಯಾನಿಯಾದವನು ಷಟ್ ಚಕ್ರಗಳೊಡನೆ ಆಧ್ಯಾತ್ಮಿಕವಾಗಿ ಒಡನಾಡುವ ದೃಶ್ಯವನ್ನೂ ರತ್ನಾಕರ ಬಣ್ಣಿಸುವನು.

ಬಳಿಕ ಚೆನ್ನಾಗಿ ಕಂಗಳ ಮುಗಿದಾ ಭವ್ಯ | ಕುಲರತ್ನ ತನ್ನ ಮೈಯೊಳಗೆ |
ದಳಗಳ ಪಸರಿಸಿ ಸಾಲಾಗಿ ನಿಂದಾರು | ಜಲಜವ ಕಂಡನೇನೆಂಬೆ || ೧೩ ||
ಪೆಣೆಕೊರಳೆದೆ ನಾಭಿಲಿಂಗ ಮೂಲಾಧಾರ | ದೆಣಿಕೆಯೊಳಾರು ತಾವರೆಯಾ ||
ಅಣೆದಿರದೆರಡೆಂಟು ಪನ್ನೆರಳ್ಪತ್ತಾರು | ಪೆಣೆದು ನಾಲ್ಕೆಸಳಾಗಿ ಕಂಡಾ || ೧೪ ||
ಆರುಪದ್ಮಗಳೆಸಳೈವತ್ತರೊಳು ಕ್ರಮ | ದೋರಲಕ್ಷರಗಳೈವತ್ತು ||
ಬೇರೆ ಬೇರಲ್ಲಲ್ಲಿ ಸ್ಥಾಪಿಸಿ ನೃಪತಿ | ಕಣ್ಣಾರಿ ಧ್ಯಾನಿಸಿದನೇನೆಂಬೆ || ೧೫ ||

ಇಲ್ಲಿಯ ವಿವರಣೆ ಕರಾರುವಾಕಾಗಿ ಲೆಖ್ಖಾಚಾರವಾಗಿ ಬಂದಿರುವುದರಿಂದ ಇದನ್ನು ಬುದ್ಧಿಯಿಂದ ಗ್ರಹಿಸಿದರೂ ಹೃದಯದಿಂದ ಅನುಭವಿಸಬೇಕಾದರೆ ಓದುಗನೂ

ಇಲ್ಲಿಯ ಚಿತ್ರವನ್ನು ಕಲ್ಪಿಸಿಕೊಳ್ಳಬೇಕಾಗುವುದು. ಕಲ್ಪಿಸಿಕೊಂಡಾಗಲೆ ಸಾರ್ಥಕ! ಸಾಧಕನಿಗೂ ಈ ಮಾತು ಅನ್ವಯಿಸುವುದು. ಪ್ರಾರಂಭದಲ್ಲಿ ಅವನೂ ಕಲ್ಪನಾ ವಿಲಾಸಿಯಾಗಿ ಈ ಚಿತ್ರದೊಡನೆ ತನ್ಮಯನಾಗಬೇಕಾಗುವುದು.

ವನಜ ದಳಗಳಲ್ಲಿ ನಿಂದಮೃತದ ಬಟ್ಟ | ವನಿಗಳೊ ಬಟ್ಟ ಮುತ್ತುಗಳೊ ||
ತನಿವೆಳಗಿನ ಬೀಜರಾಜಿಯೊಯೆಂಬಂತೆ | ಜನಪಗಕ್ಷರ ತೋರುತಿಹವು || ೧೯ ||

ಸಾಧಕನಾದ ಭರತೇಶ ರಸಋುಷಿಯಾಗಿ ಪ್ರತಿಭಾನೇತ್ರವನ್ನಗಲಿಸಿ ಶಾಸ್ತ್ರೋಕ್ತವಾದ ನಕ್ಷೆಯಮೇಲೆ ತಾನು ಕಲ್ಪನಾಕುಂಚವಾಡಿಸಿದಾಗ ಮೂಡಿದ ಕಾವ್ಯಮಯವಾದ ಚಿತ್ರವನ್ನು ಅವಲೋಕಿಸುತ್ತಿರುವನು.

ಬ್ರಹ್ಮಾನಂದ ಸಾಗರವನ್ನು ಸೇರಿ ಸುಖಿಸಬೇಕಾದರೆ ಮೊದಲು ರಸಾನಂದದ ವಿಮಲಗಂಗಾ ಪ್ರವಾಹದಲ್ಲಿ ಮುಳುಗಿ ನಲಿಯಬೇಕು.

ಅಕ್ಷರಾವಳಿಯ ಧ್ಯಾನವ ನಿಲಿಸಿದನು ನಿ | ರೀಕ್ಷಿಸಿದನು ಪುರುಜನನ ||
ಸಾಕ್ಷಾದ್ದೇವ ತೋರಿದನು ಸಮವಸರ | ಣಾಕ್ಷಿತಿ ಸನ್ನಿಧಿಯಾಗಿ || ೨೦ ||
ಪರಮೌದಾರಿಕ ದಿವ್ಯದೇಹಪ್ರಭೆ | ಸುರರ ಸಂದಣಿ ದಿವ್ಯನಿನದಾ ||
ಬೆರಸಿ ಕೈಲಾಸದೊಳಿಸೆವಾದಿ ಜಿನನ ಭೂ|ವರ ಕಂಡನಾತ್ಮದ ದೃಷ್ಟಿಯೊಳು || ೨೧ ||
ಭಾವಪೂಜೆಯ ಮಾಡಿ ಜಿನನ ಬೀಳ್ಕೊಂಡುಸಿ | ದ್ಧಾವನಿಗಿಟ್ಟನು ನೆನಹಾ |
ಆ ವಾಯು ಸೋಂಕದೆ ನಿಂದ ಸಿದ್ಧರ ಶುದ್ಧ | ಭಾವನನೊಲ್ದು ಭಾವಿಸಿದಾ || ೨೨ ||
ಬಚ್ಚಬರಿಯ ಜ್ಞಾನದರ್ಶನ ಮೈಯಾಗಿ | ಅಚ್ಚುಗವೆಂಬುದ ನೀಗಿ ||
ನಿಚ್ಚಲು ಸುಖದೊಳೋಲಾಡುವ ಸಿದ್ಧರ | ಮೆಚ್ಚಿ ಧ್ಯಾನಿಸುವನಾ ನೃಪತಿ || ೨೩||

ದೇವರೇ ಬೇರೆ ನಾನೇ ಬೇರೆ ಎಂಬ ಭಾವನೆಯೊಡನೆ ಧ್ಯಾನಮಾಡುತ್ತಾ ಸಾಗಿದಾಗ ಭರತೇಶನಿಗೆ ಕಂಡುಬಂದ ಅಲೌಕಿಕ ಹಾಗೂ ದಿವ್ಯವಾದ ದೃಶ್ಯಗಳನ್ನು ರತ್ನಾಕರ ಸುಲಭವಾಗಿ ಸರಳವಾಗಿ ವಿವರಿಸಿರುವನು. ಸವಿಕಲ್ಪ ಸಮಾಧಿಯ ಸವಿಯನ್ನು ನಮಗೆ ಹಂಚಿರುವನು. ನಾಲಗೆಯಿದ್ದವರು ರುಚಿನೋಡಬಹುದು.

ತನ್ನಾತ್ಮವನ್ನೇ ಪರಮಾತ್ಮನೆಂದುಕೊಂಡು ನಿರ್ಭೇದಭಕ್ತಿಯಿಂದ ಭರತೇಶ ಧ್ಯಾನಿಸುವನು.

ಸುಯ್ಯಲರಿಂದ್ರಿಯ ಮನಗಳನಡಗಿಸಿ | ಮೆಯ್ಯೆಂಬ ಜಿನಗೃಹದೊಳಗೆ ||
ಒಯ್ಯನೆ ಕಂಡನಾಗಳೆ ಪರಮಾತ್ಮನ | ಕೈಯ್ಯ ಕನ್ನಡಿಯ ಕಾಂಬಂತೆ || ೨೫ ||
ರೂಪೆಲ್ಲ ಬೆಳಗು ರೂಪೆಲ್ಲ ಸುಜ್ಞಾನವಾ | ರೂಪೆಲ್ಲ ದರ್ಶನಶಕ್ತಿ ||
ಅಳತೆಗೆ ತೂಕಕ್ಕೆ ಲೆಕ್ಕಕ್ಕೆ ಬಾರದಗ್ಗಳದವಸ್ತುವ ಕಂಡನಾಗ || ೨೬ ||

ಕೊಡದೊಳಗಾಕಾಶವಿಪ್ಪಂತೆ ಮೈಯೊಳ | ಗಡಗಿರ್ದ ಬಯಲರೂಪನನು |
ನಡುನೆತ್ತಿಯಿಂದಡಿ ಮುಟ್ಟ ಕಂಡನು ಕಟ್ಟ | ಕಡೆಯ ಕಾಂಬಂತೆ ತತ್ವಗಳಾ || ೨೮ ||

ಸ್ಥೂಲವಾಗಿ ರೇಖಾಚಿತ್ರವನ್ನು ರತ್ನಾಕರ ನಮ್ಮ ಮುಂದಿಟ್ಟಿರುವನು. ನಮ್ಮ ಕಲ್ಪನಾಚೇತನವನ್ನು ಅಲೌಕಿಕ ವಾತಾವರಣವನ್ನನುಸರಿಸಲು ಎಚ್ಚರಿಸುವನು.

ಪರಿಪೂರ್ಣಚಂದ್ರಮಂಡಲದೊಳಡಗಿದಂತೆ | ಯಿರುತಿಹನಾತ್ಮಕಾಂತಿಯೊಳು ||
ಪರಿದು ಕಾರ್ಮುಗಿಲು ಚಂದ್ರಗೆ ಕವಿದಂತೆ ಮೋ | ಹರಿಸುವುದೊಡನಂಧಕಾರ || ೩೧ ||
ಇನಿಸು ಬೇಗದೊಳಂಧಕಾರ ಹರಿವುದು ಹಂ | ಸನ ಪ್ರಭೆ ಕೂಡಿ ತೋರುವುದು ||
ಅನಿತರೊಳದು ಮಾಸುವುದು ಕೂಡೆ ಹೊಳೆವುದು | ಕನಸಿನಂತಿರ್ದೆ ನಿದ್ರೆಯಂತೆ || ೩೨ ||
ಪ್ರಭೆ ತೋರಿದಾಗ ಬ್ರಹ್ಮಾನಂದವಪ್ಪುದಾ | ಪ್ರಭೆ ಮಾಸಲೊಡನೆ ನೋವಹುದು ||
ಅಭಯ ಮುಕ್ತಿಯ ಸುಖ ಸಂಸಾರ ದುಃಖವೆಂ | ಬುಭಯವ ಪರಿಕಿಸುತಿಹನು ||

ಅಂಬೆಗಾಲಿಡುವ ಹಸುಗೂಸು ನೆಟ್ಟಗೆ ಕಾಲೂರಿ ನಡೆಯಲು ಯತ್ನಿಸುವಾಗ ಒಂದೆರಡು ಹೆಜ್ಜೆ ನಡೆದು ತತ್ತರಿಸುವಂತಾಗಿ ಮತ್ತೆ ಅಂಬೆಗಾಲೂರಿ ಆಮೇಲೆ ಹಟದಿಂದ ನಡೆಯಲು ತೊಡಗಿದಾಗ ಅದರ ಮನಕ್ಕಾಗುವ ಸುಖದುಃಖವನ್ನು ನಾವು ಗಮನಿಸಬೇಕು. ಒಂದವಸ್ಥೆಯಿಂದ ಇನ್ನೊಂದವಸ್ಥೆಗೆ ಏರುವಾಗಲೂ ಧ್ಯಾನಿಗೆ ಹಿಂದಕ್ಕೂ ಮುಂದಕ್ಕೂ ತೂಗಾಡುವಂತಾಗುವುದು. ಭೇದಭಕ್ತಿಯಿಂದ ಭರತೇಶ ನಿರ್ಭೇದ ಭಕ್ತಿಗೆ ಅಡಿಯಿಡುತ್ತಿರುವನು. ಆ ವೇಳೆಯಲ್ಲಿ ಆತನ ಶ್ರದ್ಧಾಪೂರ್ಣವಾದ ಪ್ರಯತ್ನವನ್ನೂ ಆತನ ಅಂತರಾತ್ಮಕ್ಕಾಗುವ ಸುಖದುಃಖದ ಅನುಭವವನ್ನೂ ಕಣ್ಣಿಗೆ ಕಟ್ಟುವಂತೆ ರತ್ನಾಕರ ವಿವರಿಸುವನು. ರಸಋಷಿಯಾಗಿದ್ದ ಭರತೇಶ ಈಗ ಬ್ರಹ್ಮರ್ಷಿಯಾಗಲು ಹೆಣಗಾಡುತ್ತಿರುವನು. ರಸಾನಂದದಿಂದ ಬ್ರಹ್ಮಾನಂದಕ್ಕೇರಲು ಹುರುಡಿಸುತ್ತಿರುವನು.

ಪ್ರಯತ್ನಶೀಲನಾದ ಚಕ್ರೇಶ ಹಾಗೂ ಹೀಗೂ ಪಟ್ಟುಹಿಡಿದು ನಿರ್ಭೇದ ಭಕ್ತಿಯಲ್ಲಿ ನೆಲೆಗೊಂಡನು. ಅದ್ವೈತನಾಗಿ ರಾರಾಜಿಸುವಾಗ ಭೋರ್ಗರೆವ ಬ್ರಹ್ಮಾನಂದವನ್ನು ಮಹಾಯೋಗಿಯ ಬಾಯಿಂದಲೇ ಕೇಳೋಣ.

ಸುತ್ತಲು ಪ್ರಭೆಯಾಗಿ ಸುತ್ತಲು ಸುಖವಾಗಿ | ಸುತ್ತಲು ಸುಜ್ಞಾನವಾಗಿ ||
ಚಿತ್ತದೊಳಾತ್ಮ ತೋರುವನೊಂದು ಜ್ಯೋತಿಯ | ಪುತ್ತಳಿಯಂತೆ ಮೈತುಂಬಿ || ೩೪
ಬಯಲ ನೋಳ್ಪಂತೆ ಭಾವದಿ ನೋಡುವನು ಕೂಡೆ | ಬಯಲನಪ್ಪುವವೊಲಪ್ಪುವನು ||
ಬಯಲೊಳು ಚಿತ್ರವ ಬರೆವಂತೆ ಬರೆದು ಚಿ|ನ್ಮಯಗವಯವ ಶೋಭೆ ಮಾಳ್ಪಾ || ೩೫
ಬಯಲೊಳು ಮುಳುಗುವಂತೊಳಗೆ ಮುಳುಗುವನು || ಬಯಲೊಳು ನಿಲುವಂತೆ ನಿಲುವಾ ||
ಬಯಲ ಪಾಲ್ಗೊರೆಯ ಪೀರ್ವಂತೆ ಪೀರ್ದೊಂದರ | ಬಯಕೆ ಇಲ್ಲದೆ ತಣಿದಿಹನು || ೩೬

ಅನಿರ್ವಚನೀಯವಾದ ಬ್ರಹ್ಮಾನಂದವನ್ನು ಬಣ್ಣಿಸಬೇಕಾದರೆ ಇರುವುದು ಒಂದೇ ಮಾರ್ಗ. ಕಲೆಯ ಬಲೆಬೀಸಿ ಅದನ್ನು ಹಿಡಿಯಬೇಕು. ರಸಾನಂದದ ಪಾದರಸವನ್ನು ತೋರಿ ಬ್ರಹ್ಮಾನಂದದ ಬಂಗಾರದ ಧೂಳಿಯನ್ನು ಆಕರ್ಷಿಸಬೇಕು. ರತ್ನಾಕರ ಈ ಕಾರ್ಯವನ್ನು ಸೊಗಸಾಗಿ ಮಾಡಿರುವನು. ಬಯಲಿಗೆ ಬಣ್ಣಕಟ್ಟಿ ಬೆಡಗು ಮಾಡಿರುವನು.

ಈ ಸಂದರ್ಭದಲ್ಲಿ ಬಸವಣ್ಣನವರ ಒಂದು ವಚನ ನೆನಪಿಗೆ ಬರುವುದು. ಶರಣನ ಸಾಹಸವನ್ನು ಅವರು ಮನಮುಟ್ಟುವಂತೆ ವಿವರಿಸುವರು.

ಬಯಲ ರೂಪ ಮಾಡಬಲ್ಲಾತನೆ ಶರಣನು,
ಆ ರೂಪ ಬಯಲ ಮಾಡಬಲ್ಲಾತನೆ ಲಿಂಗಾನುಭವಿ-
ಬಯಲ ರೂಪ ಮಾಡಲರಿಯದಿದ್ದರೆ ಎಂತು ಶರಣನೆಂಬೆ ?
ಆ ರೂಪ ಬಯಲ ಮಾಡಲರಿಯದಿದ್ದರೆ ಎಂತು ಲಿಂಗಾನುಭವಿಯೆಂಬೆ ?
ಈ ಉಭಯ ಒಂದಾದರೆ ನಿಮ್ಮಲ್ಲಿ ತೆರಹುಂಟೆ ಕೂಡಲಸಂಗಮದೇವ ![2]

ನಿರಾಕಾರವಾದ ಆತ್ಮನನ್ನು ಸಾಕಾರವಾಗಿ ರೂಪಿಸಿಕೊಳ್ಳುವ ಪ್ರತಿಭೆ ಹಾಗು ಕಲ್ಪನೆ ಸಾಧಕನಿಗೆ ಅತ್ಯಾವಶ್ಯಕ. ಆತ್ಮನ ಪರಿಚಯ ನಿಕಟವಾಗುವವರೆಗೂ ಈ ಕವಿಕರ್ಮ ನಿರಂತರವಾಗಿ ಸಾಗಬೇಕು. ರಸಾನಂದದಲ್ಲಿ ಸಾಧಕ ತೇಲಿ ಮುಳುಗಬೇಕು. ಆದರೆ ಇಷ್ಟಕ್ಕೆ ತೃಪ್ತನಾಗಬಾರದು. ಬಯಲಿಗೆ ರೂಪವಿತ್ತಂತೆ, ಆ ರೂಪವನ್ನು ಮತ್ತೆ ಬಯಲುಗೊಳಿಸಬೇಕು. ಭರತೇಶ ಈ ಉಭಯ ಕಲೆಯನ್ನೂ ಸಾಧಿಸಿ ಶರಣನಾಗಿ ಲಿಂಗಾ (ಆತ್ಮಾ) ನುಭವಿಯಾಗಿರುವನು.

ಭರತೇಶನಿಗೆ ಸ್ವಸ್ವರೂಪ ಕ್ಷಣಕ್ಷಣಕ್ಕೂ ಸ್ಪಷ್ಟವಾಗುವಾಗ ಆತನನ್ನು ಮುತ್ತಿ ಮುಸುಕಿದ್ದ ಕರ್ಮಾವರಣ ಸಡಿಲಗೊಂಡು ಅನಿರೀಕ್ಷಿತವಾಗಿ ಬಂದೆರಗಿದ ಧ್ಯಾನ ದಾಳಿಗೆ ಬೆದರಿ ಕರ್ಮರಜಸ್ಸು ದಿಕ್ಕಾಪಾಲಾಗಿ ಚದುರಿತು. ಜೇನ್ಗೂಡನ್ನು ಕೆಣಕಿದಾಗ ಜೇನ್ನೊಣಗಳು ಪಕ್ಕನೆ ಚೆಲ್ಲಾಪಿಲ್ಲಿಯಾಗಿ ಹಾರಾಡುವಂತೆ ಕರ್ಮಧೂಳಿಯೂ ಇಳಿಯ ತೊಡಗಿತು.

ಅಂಬರದೊಳು ಬಹುವರ್ಣದ ಮುಗಿಲ ತೊ | ಡಂಬೆಗಳೆಡೆಯಾಡುವಂತೆ ||
ಬೆಂಬೀಳ್ದು ಕರ್ಮ ಕದಲುತಿರ್ದುದಾಗ ಚಿ | ದಂಬರ ಪುರುಷ ರೂಪಿನೊಳು || ೩೯ ||
ಹೊಗೆಯಂತೆ ಮಸಿಯು ಕದಡಿ ಮೀಯಲೆರೆವಂತೆ | ಜಗುಳುತಿಹುದು ಪಾಪರಜಸು ||
ಮೊಗೆದು ರಕ್ತವನೆರೆದಂತರಸಿನದಂತೆ | ದಿಗಿಲನಿಳಿವುದಾಗ ಪುಣ್ಯಾ || ೪೦ ||

---

[2] ಬ. ವ. ೯೨೨.

ನೀರು ಬೆಟ್ಟವ ಕೊರೆವಂತೆ ರಾಯನ ಧ್ಯಾನ | ವಾರಿ ಭೇದಿಸಿ ಕರ್ಮಗಿರಿಯಾ ||
ಸೋರಿಸುತಿರ್ದುದು ಜಿನಜಿನ ಹಂಸ ತ | ತ್ವಾರಾಧನೆಗೆಣೆಯುಂಟೆ ? || ೪೧ ||
ಸೂಜಿಯಂದದಿ ಮಳೆ ಸುರಿಯೆ ಹಸಿಯ ಮಣ್ಣ | ಭಾಜನ ಕರಗಿ ಹೋಹಂತೆ ||
ತೈಜಸಕಾರ್ಮಣತನು[3] ಸೋರುತಿದ್ದುವಾ | ರಾಜನಧ್ಯಾನ ಧಾರೆಯೊಳು || ೪೨ ||
ಬಿಗಿದ ಮೂಡೆಯ ಕಟ್ಟು ಸಡಿಲವಾದರೆ ಧಾನ್ಯ | ವೊಗುವಂತೆ ಬಂಧದೊಡ್ಡಳಿದು ||
ವಿಗೆಕರ್ಮಧೂಳಿಸೋರುವುದದು ಧ್ಯಾನಿಗೊ | ಬ್ಬನಿಗೆ ಗಮ್ಯ ಪರರ್ಗೆ ಕಾಣಿಸದು || ೪೪ ||
ಎಷ್ಟೆಷ್ಟು ನೋಡಿದರಷ್ಟಷ್ಟು ಕರ್ಮಾಳಿ | ನಷ್ಟವಪ್ಪುದು ಕ್ಷಣ ಕ್ಷಣಕೆ ||
ಅಷ್ಟಷ್ಟಕಾಗಾಗ ಪರಮಾತ್ಮ ಗುಣಗಳು | ತ್ಕೃಷ್ಟವಪ್ಪುದು ಧ್ಯಾನ ಸುಖಿಗೆ || ೪೬ ||
ಒಮ್ಮೊಮ್ಮೆ ಚಿದ್ರೂಪ ಕಾಂತಿವೆರಸಿ ಕಾಣ್ಬ | ನೊಮ್ಮೊಮ್ಮೆ ಮಾಸಿ ಕಾಣುವನು ||
ಗುಮ್ಮುತಿಹವು ಕಂಡಕಡೆಗೆ ಕರ್ಮಗಳೊಳ | ಗುಮ್ಮುತಿಹುವು ಸುಗುಣಗಳು || ೪೮ ||

ಕರ್ಮಾವರಣದ ಮರ್ಮಕ್ಕೆ ಧ್ಯಾನದಿಂದ ತಿವಿದಾಗ ಆಗುವ ವಿಚಿತ್ರ ಪರಿಸ್ಥಿತಿಯನ್ನು ರತ್ನಾಕರಯೋಗಿ ಕಣ್ಣಿಗೆ ಕಟ್ಟುವಂತೆ ಕಡೆದಿರುವನು. ಅಲೌಕಿಕವಾದ ಮತ್ತು ಅನಿರ್ವಚನೀಯವಾದ ನಿರ್ವಯಲ ನರ್ತನವನ್ನು ಮಹಾಕವಿ ನಮ್ಮಿದಿರಾಡಿಸಿರುವನು! ಬಯಲಿಗೆ ಬಣ್ಣ ಕಟ್ಟಿ ರತ್ನಾಕರನೂ ಬಸವಣ್ಣನವರು ಹೇಳುವಂತೆ ಶರಣನಾಗಿರುವನು!

ಬಟ್ಟಬಯಲಿಗೆ ಆಕಾರ ಕೊಡುವಾಗ ಹಾಗೂ ಕೊಟ್ಟ ರೂಪನ್ನು ಬಯಲು ಮಾಡುವಾಗ ಸಾಧಕನಿಗಾಗುವ ಆತ್ಮಾನಂದವನ್ನು ರತ್ನಾಕರ ಕವಿ, ರಸಾನಂದವಾಗಿ ಪರಿವರ್ತಿಸಿ ಸಹೃದಯರಿಗೆ ಹಂಚಿರುವನು.

ಕಂಡು ಕೇಳ್ದರಿಯದೊಂದಚ್ಚಬೆಳ್ದಿಂಗಳ | ಪಿಂಡದೊಳಗೆ ಚೆಲುವಾಗಿ ||
ಕಂಡರಿಸಿದುದೊಂದು ಪುತ್ತಳಿಯೆನೆ ರಾಯ | ಕಂಡನು ತನ್ನೊಳು ತನ್ನಾ || ೫೬ ||
ಚಂದ್ರಸೂರ್ಯರ ಗೋಷ್ಠಿಯೊಳು ಕುಳಿತಂತೆ ಜಿ | ನೇಂದ್ರ ಸಂಪದ ಸಾರಿದಂತೆ ||
ರುಂದ್ರ ಸಿದ್ಧರೊಳೈಕ್ಯವಾದಂತೆ ರಾಜಯೋ | ಗೀಂದ್ರನಿದ್ದನು ಧ್ಯಾನದಲ್ಲಿ ||
ಇಂದ್ರಿಯವೈದರ ಸೋಂಕಿಲ್ಲವಾಗ ಸು | ರೇಂದ್ರ ಸುಖವ ಸೊಪ್ಪುಗಂಡು ||
ತಂದ್ರವಳಿದು ಝುಮ್ಮಝುಮ್ಮನೆ ರಾಯಗ | ತೀಂದ್ರಿಯ ಸುಖದೋರುತಿಹುದು || ೫೮ ||
ತಂಪುದೋರಿಹುದಾಗ ಸರ್ವಾಂಗದೊಳು ಸುಖ | ಪೊಂಪುಳಿಯಾಗಿರುತಿಹುದು ||
ಅಂ ಪೆರನೆಂಬ ವಿಕಲ್ಪವಿಲ್ಲ ಧ್ಯಾನ | ದಿಂಪನದೇನ ಬಣ್ಣಿಪೆನು || ೫೯ ||

---

[3] ಜೀವಿಗೆ ಔದಾರಿಕ, ತೈಜಸ, ಮತ್ತು ಕಾರ್ಮಣ ಶರೀರಗಳೆಂದು ಮೂರು ಶರೀರಗಳಿರುತ್ತವೆ. ಸತ್ತಾಗ ಔದಾರಿಕ ದೇಹವೊಂದೇ ಸಾಯುವುದು. ಆತ್ಮನೊಡನೆ ತೈಜಸ ಕಾರ್ಮಣ ಶರೀರಗಳೂ ನಿರಂತರವಾಗಿ ಸಾಗುವುವು. ಆದರೆ ಆತ್ಮ ಸಿದ್ಧನಾದಾಗ ಮೂರು ದೇಹಗಳೂ ಬಯಲಾಗುವುವು.

ಭೋಗಿಸಬಹುದಾತ್ಮಸುಖವನಿಂತಿಹುದೆಂದು | ಲೋಗರಿಗೆರುಹಲಶಕ್ಯಾ ||
ಹೋಗಬಹುದು ಗಗನದೊಳು ಚಾರಣರು ಕ | ಣ್ಡಾಗಿಸಬಹುದೆ ಹೆಜ್ಜೆಗಳಾ || ೬೪ ||

ಅತೀಂದ್ರಿಯ ಸುಖ ಏನೇ ಮಾಡಿದರೂ ಇಂದ್ರಿಯಗಮ್ಯವಾಗಲಾರದು. ನಿರ್ವಿಕಲ್ಪ ಸಮಾಧಿಯ ಅನುಭವವನ್ನು ಸವಿಕಲ್ಪ ಸಮಾಧಿಗೂ ಏರದ ಜನಕ್ಕೆ ಹೇಗೆ ತಿಳಿಸಲಾದೀತು. ಆದರೆ ರತ್ನಾಕರ ಆಧ್ಯಾತ್ಮಿಕ ಕಲೆಯನ್ನು, ರಸವತ್ತಾಗಿ ಆಕರ್ಷಣೀಯವಾಗಿ ಮಾತಿನ ಮೋಡಿಯಲ್ಲಿ ಶೈಲಿಯ ಒಸವು ಒಯ್ಯಾರದಲ್ಲಿ ಎಷ್ಟು ಸಾಧ್ಯವೋ ಅಷ್ಟನ್ನೂ ಕಡೆದು ಕಾಣಿಸಿರುವನು.

ಭರತೇಶನ ನಿರ್ವಿಕಲ್ಪ ಸಮಾಧಿ ಪರಾಕಾಷ್ಟತೆಗೇರಿದಾಗ ಆದ ಅನ್ಯಾದೃಶವಾದ ಬ್ರಹ್ಮಾನಂದವನ್ನು ರಸಯೋಗಿಯೇ ಬಣ್ಣಿಸಬೇಕು.

ಅಡಿಗಡಿಗಾನಂದವೆಂಬ ಸಾಗರವನೊ | ಕ್ಕಡಿತಯ ಮಾಡಿ ಸೇವಿಪನು ||
ಒಡನೊಡನೀಂಟಿದಷ್ಟಕ್ಕೆ ಹೆಚ್ಚಿ ಕಡಲು ಬ | ಲ್ಗಡಲಾಗುತಿಹುದೇನನೆಂಬೆ || ೬೦ ||
ತನ್ನಲ್ಲಿ ತನಗಾಗಿ ತನ್ನ ನಿಲಿಸಿ ತಾನು | ತನ್ನಿಂದ ತನ್ನನೆ ನೋಡಿ ||
ತನ್ನೊಳುವಿಮ್ಮಿದ ನಿಜಸುಖವ ಸುಖಿಸುತ ನಿ | ಷ್ಪನ್ನನಿದ್ದನು ವಿಭವದೊಳು || ೬೫ ||
ಬೊಲ್ಲನಿಲ್ಲದೆ ವೈಹಾಳಿಮಾಳ್ಪನು ಮಿಣಿ | ಯಿಲ್ಲದುಯ್ಯಲಾಡುತಿಹನು ||
ನಲ್ಲಳಿಲ್ಲದೆ ರತಿಸುಖವ ಸುಖಿಸುವನ | ದೆಲ್ಲಿ ಕಲಿತನೋ ರಾಜೇಂದ್ರ || ೬೬ ||
ಬಾಯ ಹಂಗಿಲ್ಲದೆ ಚಿದ್ಘಣಾನ್ನವನುಂಬ | ಕಾಯವಿಲ್ಲದೆ ರೂಪದೋರ್ಪಾ ||
ಶ್ರೀಯಿಲ್ಲದತಿ ಸಿರಿವಂತನಾಗಿಹನೇನು | ಮಾಯಕಾರನೊ ಸಾರ್ವಭೌಮಾ || ೬೭ ||
ತನುವ ಸಗ್ರಂಥದೊಳಿರಿಸಿ ನಿರ್ವಾಣವ | ವಿನುತಾತ್ಮನೊಡಗೂಡಿ ನೋಡಿ ||
ಜನಿಸಿದ ಸುಖದಿಂದ ಪರಿಪೂರ್ಣನಾಗಿ ಬಿ | ಮ್ಮನೆ ಬಿಗುಹೇರಿರ್ದನಾಗ || ೭೧ ||
ಒಳಗುವಿಮ್ಮಿದಾನಂದ ಹೊರಸೂಸುವಂತೆ ಕಂ | ಗಳಲೊಗುತಿಹುದು ಮುದಾಶ್ರು ||
ಪುಳಕವೆದ್ದಿಹುದು ಸರ್ವಾಂಗದೊಳಗೆ ಹಂಸ | ಕಳೆಯೊಳಿದ್ದನು ಕಳಾರತ್ನಾ || ೭೩ ||
ಸೋನೆಯ ಮಳೆಸುರಿವಾಗ ಮಾಳಿಗೆಯಲ್ಲಿ | ಮಾನವರಿಪ್ಪ ರೀತಿಯೊಳು ||
ಏನೆಂದು ಹೊರಗನರಿಯದೊಳಗಾತ್ಮವಿ | ಜ್ಞಾನಲೋಕದೊಳಿರ್ದನಾಗ || ೭೬ ||

ಆತ್ಮ ವಿಜ್ಞಾನಲೋಕದ ಹಂಸಕಲೆಯನ್ನು ರತ್ನಾಕರನಂತೆ ರಸಕಲೆಯಾಗಿ ಬಣ್ಣಿಸಿದವರು ಅಪರೂಪ. 'ಶ್ರೀಯಲ್ಲದತಿ ಸಿರಿವಂತ' ಎಂಬಾಗ ನಮ್ಮ ಮೈ ಪುಳಕವೇರದಿರದು! ನಲ್ಲಳಿಲ್ಲದೆ ರತಿಸುಖವನ್ನು ಅನುಭವಿಸಿದ ಭರತೇಶನಂತೆ ರತ್ನಾಕರನೂ ವರ್ಣನಾತೀತವಾದ ಸಂದರ್ಭಗಳನ್ನು ತನ್ನ ಅದ್ಭುತಕಲೆಯಿಂದ ಬಣ್ಣಕಟ್ಟಿ ನೋಡುವರ ಕಣ್ಣಿಗೆ ಕಾಣಿಸುವನು! ತನ್ನ ಕಲ್ಪನಾ ಚಾತುರ್ಯದಿಂದ ದಿವ್ಯಾನುಭವವನ್ನು ಸಹೃದಯರ ಅನುಭವಗಮ್ಯವಾಗುವಂತೆ ನಿರೂಪಿಸಿರುವನು. ರತ್ನಾಕರ ಮಹಾಕವಿ

ಯಾಗಿರುವಂತೆ ವೀತರಾಗರಸಿಕನೂ ಆಗಿರುವುದರಿಂದ ಇಂಥ ಭವ್ಯಕಲ್ಪನೆಗಳು ರಸಮಯವಾಗಿ ಹೊಮ್ಮಿಬರಲು ಸಾಧ್ಯವಾಯಿತು. ಈತನ ಮಾತಿನಲ್ಲಿ ಮಾಣಿಕ್ಯದ ಹೊಗರನ್ನು ಕಂಡೇವು.

ರಸಾನಂದ ಬ್ರಹ್ಮಾನಂದಕ್ಕೆ ಪ್ರೇರಕವಾಗುವುದು. ಕೊನೆಗೆ ರಸಾನಂದವೇ ಪಕ್ವಗೊಂಡು ಬ್ರಹ್ಮಾನಂದವಾಗಿ ಪರಿವರ್ತನೆಯಾಗುವುದು. ಭರತೇಶ ದಿಗ್ವಿಜಯಕ್ಕೆ ಹೊರಟವನು ಬರುತ್ತಾ ಪೂರ್ವಸಾಗರವನ್ನು ಕಂಡಾಕ್ಷಣ ಆತನ ಆನಂದ ಉಕ್ಕೇರುವುದು; ಈ ಕಾವ್ಯಾನಂದವೇ ಈತನನ್ನು ಯೋಗಾನಂದದತ್ತ ಪ್ರೇರೇಪಿಸುವುದು.

ನಿನ್ನೆ ಸಮುದ್ರವ ಕಂಡುದು ಮೊದಲಾಗಿ | ನನ್ನೆದೆಯೊಳು ಧ್ಯಾನದರ್ಶಿ ||
ಭಿನ್ನವಿಲ್ಲದೆ ದಳವೇರುತಿದ್ದಪುದದ | ಮನ್ನಿಸಬೇಕು ನಾನೆಂದಾ || ರಾ. ಬಿ. ಸಂ. ೪. ||
ಕಾನನದೊಳು ಕಡಲೊಳು ಹೊಳೆಯೊಳು ಗಿರಿ | ಸಾನು ಮುಂತಾದವರಲ್ಲಿ ||
ಧ್ಯಾನಕೆ ಲೇಸೆಂದು ಪೇಳ್ದುದಧ್ಯಾತ್ಮದೊ | ಳಾ ನುಡಿ ಹೊಳೆದುದೆನ್ನೊಳಗೆ || ೫ ||

ಯೋಗಿಗಳು ತಪಸ್ಸನ್ನು ಮಾಡಲು ಪ್ರಕೃತಿ ಸೌಂದರ್ಯದ ಆಗರವಾದ ವನಾಂತರಗಳನ್ನೂ ಗಿರಿಗಹ್ವರಗಳನ್ನೂ ಆರಿಸುವುದರಲ್ಲಿ ಔಚಿತ್ಯವಿದೆ. ವಿಷಯ ವಾಸನೆಗಳನ್ನು ಹೊಡೆದೋಡಿಸಲು ಚೆಲುವಿನ ನೆಲೆವನೆಯಾದ ವನಗಳು ನೆರವಾಗುವುವು, ತಮ್ಮ ಸಹಜ ಸೌಂದರ್ಯದ ಸಮ್ಮೋಹನಾಸ್ತ್ರವನ್ನು ಬಿಟ್ಟು ಸಾಧಕನಿಗೆ ರಸಮೂರ್ಛೆ ಬರುವಂತೆ ಮಾಡಿ ಮೈಮರೆಸುವುವು. ಈ ರೀತಿ ಮೈಮರೆತಾಗಲೆ ಹಂಸಕಲೆಯ ಮೊಗಸಾಲೆಯ ದರ್ಶನವಾಗುವುದು! ರಸಋಷಿಯಾದವನು ವಿಷಯ ಸುಖವನ್ನು ಕಾಲಲ್ಲಿ ಮೆಟ್ಟಿ ಇನ್ನೊಂದು ಕಡೆ ತನ್ನ ಕೈಚಾಚಿ ಬ್ರಹ್ಮಾನಂದವನ್ನೆ ಟಕಿಸಿಕೊಳ್ಳಲು ಪ್ರಯತ್ನಿಸುವನು.

ಹಂಸನಾಥನ ನೋಡುವಾಗ ಕರ್ಮಾಳಿ ವಿ | ಧ್ವಂಸನವಹುದೆನಲಿವನು ||
ತಾಂ ಸಿಡಿದಳ್ಳನೆ ನೋಡಿರೈ ನಾಳೆ ತಂ | ದಾಂ ಸೇವೆಗಿಕ್ಕಿ ತೋರುವೆನು || ೧೬ ||
ಕರ್ಮಾಳಿಗಳ ಗೆಲ್ವರೆನೆಗೆ ಯೋಚನೆಯೈಸೆ | ಪೆರ್ಮಡುವಿನ ಮಧ್ಯದಲ್ಲಿ ||
ಕೂರ್ಮನಂತಿರ್ದನ ಗೆಲ್ವರೊಂದೆಣಿಕೆಯೆ | ಮರ್ಮಜ್ಞರಲ್ಲವೆ ನೀವು? ||೧೮ ||

ತನ್ನನ್ನು ತಾನು ಗೆದ್ದರೆ ಎಲ್ಲರನ್ನೂ ಗೆಲಬಹುದು! ಭರತೇಶ ಕ್ಷಾತ್ರವೃಕ್ಷಕ್ಕೆ ಬ್ರಹ್ಮವೀರ್ಯದ ನೀರೆರೆದು ಬೆಳಸಿದ ಭವ್ಯಾತ್ಮ! ಕ್ಷಾತ್ರಫಣಿ ಅಹಿಂಸೆಯ ಮಣಿಯನ್ನು ಧರಿಸಿ ರಾರಾಜಿಸಿದಾಗಲೆ ಸಾರ್ಥಕ!

ಲೋಕದವರ ಮುಂದೆ ತೋರದೆ ನಿಧಿಯ ತಂ | ದೇಕಾಂತದೊಳು ನೋಳ್ಪರಂತೆ ||
ಆ ಕಡಲೊತ್ತಿನೊಳಾತ್ಮನ ಕಂಡನಾ | ಭೂಕಾಂತ ತನ್ನ ದೇಹದೊಳು || ೨೨ ||

ಮುನ್ನ ತಾ ಮಾಡುವ ಯೋಗದಿಂದಾಗ ಮ | ಹೋನ್ನತವೆತ್ತುದಾ ಯೋಗಾ ||
ಮುನ್ನೀರ ತಡಿಯ ಯೋಗಕೆ ಸರಿಯಿಲ್ಲೆಂದು | ತನ್ನೊಳು ತಾನರ್ತಿವಟ್ಟಾ || ೨೩ ||
ಮೂರು ದಿವಸ ಮೂರು ಗಳಿಗೆಯಾಗಿದ್ದುದು | ತೋರುತಿಲ್ಲದರಾಗ್ನಿ ನೃಪಗೆ ||
ಮೂರುಲೋಕದ ಸಾರವೆನಿಪಾತ್ಮ ಸುಖದೊಳಾ | ನೀರನೋಲಾಡಿ ತಣಿದನು || ೨೫ ||

ಆತ್ಮನ ಅನಂತತೆಯನ್ನು ಅನುಭವಿಸಬೇಕಾದರೆ ಸಾಗರದ ವಿಸ್ತಾರವನ್ನು ನೋಡಿ ನೋಡಿ ತಣಿಯಬೇಕು; ಪರ್ವತದ ಬೃಹದ್ರೂಪವನ್ನು ನಿಟ್ಟಿಸಿನಿಟ್ಟಿಸಿ ನವಿರೇಳಬೇಕು; ಅಂದರೆ ಮೊದಲು ಅದ್ಭುತ ಹಾಗು ಮನೋಹರ ಚಿತ್ರಗಳ ಕಲ್ಪನೆಗಳಿಂದ ಹೃದಯ ಸಂಸ್ಕಾರಗೊಳ್ಳಬೇಕು! ರಸಋುಷಿಯಾಗಿ ಬ್ರಹ್ಮರ್ಷಿಯಾಗಬೇಕು. ಭರತೇಶ ಈ ಕ್ರಮವಿಡಿದೇ ಜಿನೇಶನಾಗುವನು!

ಒಮ್ಮೆ ರಸಋುಷಿಗಳ ಪರಿಷತ್ತಾದ ಸಮವಸರಣದಲ್ಲಿ, ಪರಿಷತ್ತಿನಧ್ಯಕ್ಷನಾದ ಬ್ರಹ್ಮರ್ಷಿ ಆದಿದೇವನ ಸಾನ್ನಿಧ್ಯದಲ್ಲಿ ರಸಿಕಾಗ್ರಣಿಯಾದ ಭರತೇಶ ಧ್ಯಾನಮಗ್ನನಾಗುವನು; ಅಂದು ಮಹಾಸಾಗರದ ತಡಿಯಲ್ಲಿ ತಪವೆಸಗಿದಂತೆ ಇಂದು ಕೇವಲಜ್ಞಾನಾರ್ಣವನ ಬಳಿ ಈ ರಸಋುಷಿ ಸಮಾಧಿಸ್ಥನಾಗುವನು!

ಮನವಾತ್ಮರೂಪಿನೊಳೈಕ್ಯವಾದರೆ ಸಾಕು | ತನುವೆಂಬುದೆಂತಿರ್ದರೇನು ||
ವಿನುವಿನುಗಾತ್ಮ ತೋರುವನದು ಸಾರಭ | ವ್ಯನ ಸೊಮ್ಮು ವಿಕ್ಕವರ್ಗಿಲ್ಲ ||

ಪಂಚೈಶ್ವರ್ಯಸಂಧಿ ೧೯

ಯೋಚಿಸಿ ಕುಳ್ಳಿರು ಕಣ್ಮುಚ್ಚಿ ನೋಡೆಂದು | ಸೂಚಿಸಿ ನಿಂದನಾ ಸ್ವಾಮಿ ||
ಆ ಚಕ್ರಧರನದಕಿಚ್ಛಾಮಿಯೆಂದು ಧ್ಯಾ | ನಾಚಾರವಿಡಿದನೇನೆಂಬೆ || ೩೭ ||
ಭೂರಿಶಾಸ್ತ್ರವನೋದಿ ತಪಸು ಮಾಡಿಯು ಧ್ಯಾನ | ದೂರವಾದರೆ ಮುಕ್ತಿಯಿಲ್ಲ ||
ಸಾರ ಭವ್ಯರ ಕೃತ್ಯವಿದು ನಿತ್ಯಧ್ಯಾನಾಲಂ | ಕಾರನಾಗೆಲೆ ಭವ್ಯಾಯೆಂದಾ || ೩೪ ||

ಆದಿದೇವ ಮಾರ್ಗದೋರುತ್ತಿರುವನು, ಭರತೇಶ ಮಾರ್ಗವಿಡಿದು ಸಾಗುತ್ತಿರುವನು. ಶುಷ್ಕವಾದ ಶಾಸ್ತ್ರಗಳಿಂದಾಗಲಿ, ಕಠಿನವಾದ ವ್ರತನಿಯಮಗಳಿಂದಾಗಲಿ ಮುಕ್ತಿ ದೊರೆಯಲಾರದು. 'ನಿತ್ಯಧ್ಯಾನಾಲಂಕಾರನಾಗೆಲೆಭವ್ಯ!' ಎಂದು ಧ್ವನಿಪೂರ್ವ ಆದಿಬ್ರಹ್ಮ ತನ್ನ ಹಿರಿಯ ಮಗನಿಗೆ ಬ್ರಹ್ಮೋಪದೇಶವೆಸಗಿರುವನು. ಧ್ಯಾನವನ್ನು ಅಲಂಕರಿಸಿಕೊಂಡು ಜ್ಞಾನಿಯಾಗಬೇಕಂತೆ. ಶುಷ್ಕಪಾಂಡಿತ್ಯಕ್ಕೆ ತಿಲಾಂಜಲಿಯಿತ್ತು ರಸಾನಂದದಲ್ಲಿ ಮುಳುಗಿ ಮೈಮರೆಯಬೇಕು! ಪೊಟ್ಟಮೊದಲು ಈ ರಸಕ್ರಿಯೆ ಎಷ್ಟೆಷ್ಟು ಗಾಢವಾಗುವುದೋ ಅಷ್ಟಷ್ಟು ಬ್ರಹ್ಮಲೋಕ ಹತ್ತಿರವಾಗುವುದು.

ಎದೆಮುಟ್ಟಪೆಗಲಿಗೇರಿದ ದುಗುಲವ ತೆಗೆ | ದದ ನಡುವಿಗೆ ಬೀಸಿಬಿಟ್ಟು ||
ವಿದಿತ ಸಿದ್ಧಾಸನದಲ್ಲಿ ಕುಳಿತನು ಚಿ | ನ್ನದ ಬೊಂಬೆ ಕುಳಿತುದೆಂಬಂತೆ || ೩೮ ||
ಗಾಳಿಯ ಬ್ರಹ್ಮರಂಧ್ರಕೆ ನಡೆಸಿದನು ಕೂ | ಡಾಲಿಯ ಮುಚ್ಚಿ ಚಿತ್ತವನು ||
ಏಳಲೀಸದೆ ಹಂಸನೊಳು ಕೂಡಿ ನೋಡಿದ | ಥಾಳಿಸಿತೊಳಗೆ ಪ್ರಕಾಶಾ || ೩೯ ||
ಅಂಶುಕ ಭೂಷಣ ಮೈಯಮೇಲಿದ್ದವು | ಹಂಸ ಬತ್ತಲೆಯಿದ್ದನೊಳಗೆ ||
ಹಂಸ ನೀರುಳಿದು ಪಾಲ್ಪಿಡಿವಂತೆ ಮೈವಿಟ್ಟು | ಹಂಸನ ಪಿಡಿದನಾ ಕುಶಲಾ || ೪೦ ||

ಭರತೇಶನು ತನ್ನ ನೈಸರ್ಗಿಕ ಸ್ವರೂಪವನ್ನೀಕ್ಷಿಸಲು ಪ್ರಾರಂಭಿಸಿದಾಕ್ಷಣ ರಸಾವೇಶಗೊಂಡು ಪುಳಕಿತನಾಗುವುದನ್ನು ರತ್ನಾಕರ ವಿವರಿಸಿದರೆ ಚೆನ್ನ.

ಉಟ್ಟುಕೊಂಡಂತೆ ಬೆಳದಿಂಗಳ ಮೈತುಂಬ | ಲಿಟ್ಟುಕೊಂಡಂತೆಳಮಿಂಚಾ ||
ಕಟ್ಟಾಣಿ ಮುಕ್ತಿಕಾಂತೆಯನಾಗ ತೋಳ್ತುಂಬ | ತೊಟ್ಟುಕೊಂಡಂತಿರ್ದುದವಗೆ || ೪೨ ||
ಆಕಾಶದೊಳು ಹರಿದಾಡುವಂತಾ ಸಿದ್ಧ | ಲೋಕದೊಳೆಡೆಯಾಡುವಂತೆ ||
ಬೇಕಾದ ಸಿದ್ಧರೊಳೇಕಾಂತ ಮಾಳ್ಪಂತೆ | ಭೂಕಾಂತನಿರ್ದನಾತ್ಮನೊಳು || ೪೩ ||
ಮಾತಿಲ್ಲ ಮನವಿಲ್ಲ ತನುವಿಲ್ಲಿಂದ್ರಿಯ | ವ್ರಾತವಿಲ್ಲ ನಿಸಿಲ್ಲ ಕರ್ಮಾ ||
ಜ್ಯೋತಿಯೆ ರೂಪು ಜ್ಞಾನವೆ ರೂಪು ತಾನಾಗಿ | ಖ್ಯಾತಾತ್ಮ ತೋರಿದನೊಳಗೆ || ೪೪ ||
ಸಮಯ ಸಮಯಕೆ ಚಿತ್ಪ್ರಭೆ ಹೆಚ್ಚಿ ಧ್ಯಾನಾಗ್ನಿ | ಸುಮತಿ ಬೋಧಾವರಣವನು ||
ನಿಮಿಷಕೆ ಸುಟ್ಟುದಾ ನೃಪಗಾಗ ಫಲಿಸಿತು | ಸುಮತಿ ವಿಜ್ಞಾನ ಸಂಪತ್ತು || ೪೯ ||
ಹಿಂದಣ ಭವಗಳ ಮುಂದಣ ಭವಗಳ | ಕುಂದದರಿವ ಕಾಣ್ಬ ಪೆಂಪು ||
ನಿಂದುದಾ ನೃಪನೆದೆಯೊಳಗೆಂದರಾ ಧ್ಯಾನ | ದಿಂದ ಹೆಚ್ಚಿನ ತಪಸುಂಟೆ || ೫೫ ||
ಮತಿ ಮೊದಲಾದ ಸುಜ್ಞಾನ ಮೂರವಧಿಶೋ | ಭಿತ ದೃಷ್ಟಿ ದಿವ್ಯಸಮಕ್ತ್ವ ||
ಕ್ಷಿತಿಪಗಿಂತೈದು ಸಂಪದವಾದುವಾ ಜಗ | ತ್ಪತಿಯ ನಿರೂಪ ತಪ್ಪುವುದೆ || ೬೩ ||
ತನ್ನ ತಾನರಿದವನೆಲ್ಲ ತಾನರಿವನು | ತನ್ನನರಿವನೆ ತಾಪಸನು ||
ತನ್ನ ಕಂಡೆಲ್ಲ ನಂಬುವದೆಂದದ | ಕನ್ನಡಿಪಂತೆ ಸಾಗಿದನು || ೭೮ ||

ಯೋಗವಾಗಲಿ ಸಿದ್ಧಾಂತವಾಗಲಿ ರತ್ನಾಕರನ ಕೈಸೋಕಿದಾಕ್ಷಣ ಕಲೆಯಾಗಿ ಬಿಡುವುದು. ಕಾವ್ಯಾವನಿಯಲ್ಲಿ ಏನೇ ಬಂದರು ಅದು ಕಾವ್ಯವಾಗಿ ಬಂದಾಗಲೆ ಸೊಗಸು. ಧ್ಯಾನಿಯಾದ ಭರತೇಶನಿಗೆ ಬೆಳದಿಂಗಳ ಪೀತಾಂಬರವನ್ನು ತೊಡಿಸಿ, ಮಿಂಚಿನ ತೊಡವುಗಳಿಂದ ಅಲಂಕಾರಮಾಡಿ ಮುಕುತಿವನಿತೆಯು ತೋಳತೆಕ್ಕೆಯಲ್ಲಿ ಭರತೇಶ ನಲಿವಂತೆ ಚಿತ್ರಿಸಿ ಮಹಾಕವಿ ಹಂಸಕಲೆಯ ಸೊಬಗನ್ನು ಸೂರೆಗೊಟ್ಟಿರುವನು.

ಭರತೇಶನ ಧ್ಯಾನ ಒಂದು ಘಟ್ಟಕ್ಕೆ ಬಂದಂತಾಯಿತು. ಅಲೌಕಿಕ ಜ್ಞಾನಸಿರಿಗೆ

ಚಕ್ರೇಶ ಅಧಿಕಾರಿಯಾದನು. ಜ್ಞಾನಕ್ಕೆ ಪೂರಕವಾಗಿ ದಿವ್ಯಸಮತ್ತ್ವವೂ ದೊರೆತು ದರಿಂದ ಈತ ವಿಜ್ಞಾನಿಯೂ ಅಹುದು ಸುಜ್ಞಾನಿಯೂ ಅಹುದು.

ಇದುವರೆವಿಗೂ ಭರತೇಶ ಸಾಧಿಸಿದ್ದು ಧರ್ಮಧ್ಯಾನವನ್ನು ಮಾತ್ರ. ಬಟ್ಟ ಬಯಲಿಗೆ ರೂಪವಿತ್ತು ಮುಟ್ಟಿನೋಡುವುದೇ ಧರ್ಮಧ್ಯಾನ. ಇದನ್ನೇ ರಸಯಾನ ವೆಂದಾದರೂ ಕರೆಯಬಹುದು. ಬ್ರಹ್ಮಲೋಕಕ್ಕೆ ಪಯಣಮಾಡುವಾಗ ದಾರಿಯ ಬಹುಭಾಗವನ್ನು ರಸಋುಷಿಯಾಗೇ ಗುವಿಸಬೇಕು. ಅನಂತರ ವೇಷವನ್ನೂ ಮಾರ್ಪಡಿಸಿಕೊಂಡು ಧ್ಯಾನವನ್ನೂ ಮಾರ್ಪಡಿಸಿಕೊಳ್ಳಬೇಕು. ಮುಂದೆ ಸಾಗ ಬೇಕಾದುದೇ ಶುಕ್ಲಧ್ಯಾನ. ದಿಗಂಬರ ಸಂಪ್ರದಾಯದಂತೆ ಧರ್ಮಧ್ಯಾನವನ್ನು ಯಾರುಬೇಕಾದರೂ ಸಾಧಿಸಬಹುದು. ಶುಕ್ಲಧ್ಯಾನವನ್ನು ಸಾಧಿಸಬೇಕಾದರೆ ಮೊದಲು ಗಂಡಾಗಿ ಅನಂತರ ಯತಿಯಾಗಿರಬೇಕು.[4]

ಭರತೇಶ ನಿರ್ವೇಗ ಹೊಂದಿ ಸರ್ವಸಂಗ ಪರಿತ್ಯಾಗಿಯಾದಮೇಲೆ ಧ್ಯಾನಾ ಸಕ್ತನಾದಾಗ ನೋಡಬೇಕು, ಶುಕ್ಲಧ್ಯಾನದ ಮಹಿಮೆಯನ್ನು.

ಕ್ಷೋಣಿಯನಗೆದಷ್ಟಕೊಳಗೆ ಹೂಳಿದುದೊಂದು | ಮಾಣಿಕಬೊಂಬೆ ತೋರ್ಪಂತೆ ||
ಕಾಣಿಸುತಿರ್ದನಾತ್ಮನು ಧ್ಯಾನಿಸಲು ಕರ್ಮ | ರೇಣು ಕದಲಿದಷ್ಟಕೊಳಗೆ || ೧೨ || ಧ್ಯಾ. ಸಾ.
ಘೋರಕರ್ಮವೆ ಕಾಷ್ಠ ತನು ಹೋಮಕುಂಡ ಧ್ಯಾ | ನಾರೂಢಶಿಖಿ ಮನವೆಂಬ ||
ಧೀರದೀಕ್ಷಿತನು ಸಂಸೃತಿಯೆಂಬ ವೈರಿಗೆ | ಮಾರಣಾಧ್ವರವನೊಡ್ಡಿದನು || ೧೩ ||
ಎರಡು ಕಂಗಳ ಮುಚ್ಚಿ ಸುಜ್ಞಾನವೆಂಬ ದೊ | ಡ್ಡುರಿಗಣ್ಣ ತೆಗೆದಾತ್ಮ ಶಿವನು ||
ಅರಿಕರ್ಮ ದನುಜರಿಪ್ಪಂಗ ಮೂರೆಂಬ ಮು | ಪ್ಪುರಗಳ ಸುಡುತಿರ್ದನಾಗಾ || ೧೬ ||
ಪ್ರಳಯ ಕಾಲಾಗ್ನಿಯಿಂದಿಳೆಯೆಲ್ಲ ಬೆಂದು ಕು | ಪ್ಪಳಿಸುವಂತಾ ತಪೋಧನನ ||
ಒಳವೆತ್ತ ಧ್ಯಾನಾಗ್ನಿಯಿಂದ ಸರ್ವಾಂಗದೊ | ಳಿಳಿವುತಿರ್ದುದು ಕರ್ಮ ಬೆಂದು ||
ಮುನ್ನ ಧರ್ಮ ಧ್ಯಾನವತಿಪ್ರಭೆಯಿಲ್ಲಾಗಿ | ಭಿನ್ನಾಕ್ಷರಂಗಳೊಪ್ಪಿದುವು ||
ಇನ್ನುಂಟೆ ಪರಮ ಶುಕ್ಲಧ್ಯಾನದಲ್ಲಿ ಹಂ | ಸೋನ್ನತ ಕಳೆಯೆ ರಾಜಿಸಿತು || ೨೬ ||
ಇನನಂತೆ ಶುಕ್ಲ ಚಂದ್ರನಂತೆ ಧರ್ಮ ಚಂ | ದ್ರನ ಮುಂದೆ ಮೆರೆವ ನಕ್ಷತ್ರಾ ||
ಇನನ ಮುಂದೆಸುವುದೆ ಅಕ್ಷರಪ್ರಭೆ ಮಸು | ಳ್ದನುಪಮವಾಯ್ತಾತ್ಮಕಾಂತಿ || ೨೭ ||

ಶುಕ್ಲಧ್ಯಾನವನ್ನು ಕಾವ್ಯಮಯವಾಗಿ ವಿವರಿಸುವುದು ಪ್ರಯಾಸವಾದ ಕಾರ್ಯ; ಪಾಂಡಿತ್ಯಕ್ಕೆ ಮೀರಿದ್ದು ಧರ್ಮಧ್ಯಾನವಾದರೆ ಇತ್ತ ಶುಕ್ಲಧ್ಯಾನವನ್ನು ಪ್ರತಿಭೆಯೂ ಗ್ರಹಿಸಲಾರದೇನೋ. ಅಥವಾ ಗ್ರಹಿಸಿದರೂ ಬೆಡಗು ಬಿನ್ನಾಣದಿಂದ ರಸವತ್ತಾಗಿ

---

[4] ಹೆಂಗಳಿಗೀ ಜನ್ಮದೊಳು ಮುಕ್ತಿಯಿಲ್ಲಾಗಿ ಸಂಗಡಿಸದು ಶುಕ್ಲಯೋಗಾ ||
ಹೆಂಗಳೆ ಧರ್ಮಯೋಗವ ಮಾಡಬಹುದು ನಂ | ಬಂಗನೆಯೆಂದನಾ ನೃಪತಿ || ತತ್ತ್ವೋಪದೇಶ ಸಂಧಿ ೭೫ ||

ವಿವರಿಸಲು ಅಸಾಧ್ಯವೋ ಏನೋ! ಎಂಥಾ ಸೂಕ್ಷ್ಮದರ್ಶಿಯಾದರೂ ಸೂರ್ಯನ ಮುಂದೆ ಕಣ್ಣಗಲಿಸಿ ನಿಲ್ಲಲಾದೀತೆ? ರತ್ನಾಕರನ ಸ್ಥಿತಿಯೂ ಶುಕ್ಲಧ್ಯಾನವನ್ನು ಬಣ್ಣಿಸುವಾಗ ಕಾವ್ಯವನ್ನು ಬದಿಗಿಟ್ಟು ಸಿದ್ಧಾಂತದ ಶರಣುಹೋಗುವನು, ಲಿಖ್ಯಾಚಾರದ ಮರೆಹೋಗುವನು.

ವಿವಿಧ ಶಬ್ದ ಬ್ರಹ್ಮವಾ ಪರಬ್ರಹ್ಮದೊ | ಳವಗತವಾಯ್ತೆಂಯೆಂಬಂತೆ ||
ವ್ಯವಹಾರ ಜಾರಿ ನಿಶ್ಚಯವೇರಿ ಹಂಸಾನು | ಭವದೊಳಿರ್ದನು ಹಂಸಯೋಗಿ || ೨೮ ||
ಧ್ಯಾನವೆಂಬುರೆ ಧ್ಯೇಯವೆಂಬ ಧ್ಯಾನಿಪನೆಂಬ | ಧ್ಯಾನದ ಫಲವೆಂಬ ನಾಲ್ಕು ||
ತಾನೊಬ್ಬನಾಗಿ ತನ್ನೊಳಗೆ ತಾನಿರ್ದನಾ | ತ್ಮಾನಂದನಾ ದಿವ್ಯ ಯೋಗಿ || ೨೯ ||
ನುಡಿಗಳೊಳ್ತೋರ್ಪುದೆಂತುಟು ನುಡಿ ಪುದ್ಗಲ | ಜಡವದು ಹಂಸನೆ ಜ್ಞಾನಿ ||
ಕಡೆಗೆ ಹಂಸವ ಹಂಸನಿಂದರಿದನುಭವ | ವಿಡಿದಾತ್ಮಗಿಹುದಾತ್ಮ ಸಿದ್ಧಿ || ೩೧ ||

ಜ್ಞಾನರೂಪಿಯಾದ ಹಂಸನನ್ನು ಪುದ್ಗಲವಾದ ಮಾತಿನಲ್ಲಿ ಬಣ್ಣಿಸಲಾರನೆಂದು ರತ್ನಾಕರಯೋಗಿ ಕೈಕೈಹಿಸಿಕಿಕೊಂಡಿದ್ದಾನೆ. ನಮ್ಮ ಹಂಸವೂ ಗರಿಗೆದರಿ ಹಾರಾಡಿದಾಗ ಈ ಹಂಸಕಲೆ ನಮಗೂ ಅನುಭವವಾದೀತು.

ಶಿರದಿಂದ ಪಜ್ಜೆಮುಟ್ಟಮಲ ಸುಜ್ಞಾನವೆ | ಪುರುಷರೂಪಾಗಿ ಮೈತುಂಬಿ ||
ಪೊರೆಯೇರುತಿರ್ದುದಾ ಧ್ಯಾನದ ಸೊಬಗನಾ | ಭರತ ಯೋಗೀಂದ್ರನೆ ಬಲ್ಲಾ || ೩೨ ||
ನಗುವಂತೆ ಮೊಗವಿರ್ದುದಲುಗದೆ ಮೈಯಿರ್ದು | ದೊಗುವೊಲಿರ್ದುದು ಹೊಸಕಾಂತಿ ||
ಪ್ರಗುಣಯೋಗಿಯ ನೋಡಿ ತುಟಿ ಮಿಸುಕದೆ ಮಂದಿ | ತೆಗೆದಿರ್ದುದುರೆ ಬೆರಗಾಗಿ || ೩೩ ||
ಬಳಬಳನುದುರುತಿರ್ದುದು ಕರ್ಮಚಿತ್ರ್ಪಭೆ | ಚಳಚಳನೊಳಗೇರುತಿಹುದು ||
ಎಳನೇಸರೊಳಗೈಕ್ಯವಾದಂತೆ ಪರಮಾತ್ಮ | ಕಳೆಯೊಳಿರ್ದನು ಯೋಗಿರತ್ನಾ || ೩೪ ||
ತೊಳಲಿ ನಾಡೆಲ್ಲವ ತನ್ನಯ ಮನೆಯ ಹೊ | ಕ್ಕಲಸಿಕೆಗೆಳೆವನಂದದೊಳು ||
ಇಳೆಯ ಚಿಂತೆಯೊಳಾಡಿದವನೀಶ ತನ್ನಾತ್ಮ | ನೊಳು ನಿಂದು ವಿಶ್ರಮಿಸಿದನು || ೩೫ ||
ತಾಳಿದ ಮೈಯಷ್ಟು ತೆರಪಿನೊಳಿಹುದಿಂದು | ನಾಳೆ ಮೂಲೋಕದಷ್ಟಿಹುದು ||
ಸಾಲದೆ ಪರಮಾತ್ಮಸಾಮ್ರಾಜ್ಯವಾ ನಾಡ | ನಾಳುತಿರ್ದನು ಯೋಗಿರಾಜಾ || ೩೯ ||
ಮಂತ್ರಿ ಸೇನಾಪತಿ ಮೊದಲಾದರಿರೆ ಪರ | ತಂತ್ರದಿ ಧರೆಯ ಮುನ್ನಾಳ್ದು ||
ಸಂತೃಪ್ತಿವಡೆದಾತ್ಮ ರಾಜ್ಯವ ತಾನೆ | ಸ್ವತಂತ್ರದೊಳೊಲಿದಾಡುತಿರ್ದಾ || ೪೦ ||
ಎರವೆಂದು ಕಂಡು ಮುನ್ನಾಳ್ದನು ರಾಜ್ಯವ | ಸ್ಥಿರವೆಂದೆ ತನ್ನ ಕಂಡಿರ್ದಾ ||
ಎರವೆಂಬುದೆರವಾಯ್ತು ಸ್ಥಿರ ತಾನೆ ಸ್ಥಿರವಾಯ್ತು | ಭರತೇಶ ಕಂಡಲ್ಲಿ ಹುಸಿಯೆ || ೪೧ ||
ಶುದ್ಧನೆಂದೀಕ್ಷಿಸಿದರೆ ಶುದ್ಧನಹನಾತ್ಮ | ಬದ್ಧನೆಂದೀಕ್ಷಿಸೆ ಬದ್ಧಾ ||
ಸಿದ್ಧಾಂತಕದು ತೋರದಾತ್ಮನಿಂದಾತ್ಮನ ನಿ | ಬದ್ಧಿಸೆ ಕಾಣ್ಬನಾ ಕಲೆಯಾ || ೪೬ ||

ರತ್ನಾಕರನ ಒಲವೆಲ್ಲ ಕಾವ್ಯದ ಕಡಗೇನೆ; ಏನಾದರೂ ಮಾಡಿ ಹೇಳುವುದನ್ನು ಸರಸವಾಗಿ ಹೇಳಬೇಕೆಂಬುದೇ ಈತನ ಗುರಿ. ವಿಧಿ ಇಲ್ಲದೆ ಹೋದಾಗ ಮಾತ್ರ

ಶಾಸ್ತ್ರೀಯವಾಗಿ ಹೇಳಿ ಮುಗಿಸುವನು. ಭರತೇಶ ತಾನೇತಾನಾಗಿರುವುದನ್ನು ಕಣ್ಣಿಗೆ ಕಟ್ಟುವಂತೆ ನಿರೂಪಿಸಿ ಕೃತಕೃತ್ಯನಾಗಿದ್ದಾನೆ. ಹಂಸಕಲೆಯನ್ನು ಸಿದ್ಧಾಂತ ದಿಂದ ಕೆಲವೊಮ್ಮೆ ವಿವರಿಸಿದರೂ ಆ ವಿವರಣೆ ಅಪೂರ್ಣವಾದುದೆಂಬುದನ್ನು ನಾವು ಮರೆಯಬಾರದು. ಸಿದ್ಧಾಂತಕ್ಕೆ ಮೀರಿದ ವಿಷಯ ಆಧ್ಯಾತ್ಮಿಕದ್ದು :

ಧ್ಯಾನಕೆ ಮುಖವಿಕ್ಕುವಾಗೊಮ್ಮೆ ಕರ್ಮ ಬೇ | ರಾನು ಬೇರೆಂದು ಯೋಚಿಸಿದಾ ||
ಧ್ಯಾನದೊಳ್ನಿಂದ ಮೇಲಾ ಚಿಂತೆ ಹೋಯ್ತುತ | ಲ್ಲೀನವಾಗಿರ್ದನಾತ್ಮನೊಳು || ೪೮ ||
ಗುರುಹಂಸನಾಥನೆಂಬಾನೆಂಬ ಸಂಕಲ್ಪ | ವೆರಡಿರು ತಿರ್ದುದು ಮತ್ತೆ ||
ಎರಡಳಿದೊಂದಾಗಿ ನಿರ್ವಿಕಲ್ಪದೊಳು ಭಾ | ಸುರಯೋಗಿ ತನ್ನೊಳಗಿರ್ದಾ || ೪೯ ||
ಮಿಡುಕಲೀಯದೆಮನವನು ತಡೆದಾತ್ಮನೊ | ಳಡಗಿಸಿ ನಿಷ್ಕಂಪನಾಗಿ ||
ಕಡುಗಲಿ ನಿಂದ ಹಂಸಧ್ಯಾನ ನಿಷ್ಠೆಗೆ | ನಡುಗದಿಹುದೆ ಮೂರು ಲೋಕಾ || ೫೧ ||
ತೀಡಿದ ಗಾಳಿಗೆ ಚಪ್ಪರಲತೆಗಳ | ಲ್ಲಾಡುವಂತಲುಗಿತು ಭೂಮಿ ||
ನಾಡು ಬೀಡಚ್ಚರಿವಟ್ಟುದೇನೆಂದು ಕೊಂ | ಡಾಡಲಾ ಧ್ಯಾನ ಶಕ್ತಿಯನು || ೫೫ ||

ಭರತೇಶ ನಿರ್ವಿಕಲ್ಪ ಸಮಾಧಿಯಲ್ಲಿ ತಲ್ಲೀನನಾದಾಗ ಆತನ ಅಂತರ್ಯದಲ್ಲಿ ಕರ್ಮಾವರಣ ಸ್ಫೋಟನಗೊಂಡು ಅವಾಂತರವೆಬ್ಬಿಸುವುದನ್ನು ರತ್ನಾಕರ ಪ್ರತಿಮಾ ರೂಪದಲ್ಲಿ ಚಿತ್ರಿಸಿರುವನು. ತೀಡಿದ ಗಾಳಿಗೆ ಚಪ್ಪರಲತೆಗಳಲ್ಲಾಡುವಂತಲುಗಿತು ಭೂಮಿ! ಈ ಒಂದೇ ವಾಕ್ಯ ಸಾಲದೆ ನಿರ್ವಿಕಲ್ಪಸಮಾಧಿಯ ಅತ್ಯದ್ಭುತ ಪರಿ ಣಾಮವನ್ನು ನಿರೂಪಿಸಲು!

ಸಿದ್ಧಾಂತಕ್ಕೆ ಬಣ್ಣಕಟ್ಟಿ ಯೋಗವನ್ನು ವಿವರಿಸಲು ಮಹಾಯೋಗಿ ರತ್ನಾಕರ ಪ್ರಯತ್ನಿಸುವನು.

ಮಾಣದೆ ಚಿತ್ಪ್ರಭೆಯೇರುತಿರ್ದುದು ಕರ್ಮ | ರೇಣು ಕೀಳ್ಪಡುತಿರ್ದುದದನು ||
ಶ್ರೇಣಿಯಾರೋಹಣವೆಂಬರಿನ್ನದರೊಳ್ಪ | ಕಾಣಿಸಿ ಪೇಳ್ವೆನೆಲ್ಲರಿಗೆ || ೫೭ ||
ಆಗಮದೊಳು ಪದಿನಾಲ್ಕು ಗುಣಸ್ಥಾನ | ಯೋಗವ ಪೇಳ್ವರಂತವನು ||
ಭಾಗಿಸಿ ಮೂರುಗುಣಸ್ಥಾನವೆಂದು ಪ್ರ | ಯೋಗಿಪರಧ್ಯಾತ್ಮದಲ್ಲಿ || ೫೮[5]
ತೊಡಗೆ ಮೂವರು ಬಹಿರಾತ್ಮರೊಂಭತ್ತಾಗೆ | ನಡುವಿರ್ದರಂತರಾತ್ಮಕರು ||
ಕಡೆಯೊಳಿಬ್ಬರು ಪರಮಾತ್ಮರು ಪದಿನಾಲ್ವ |ರಡಕ ಮೂವರೊಳಿದು ಸುಗಮಾ || ೫೯[6]

[5] ಗುಣಸ್ಥಾನಗಳು—೧. ಮಿಥ್ಯಾದೃಷ್ಟಿ, ೨. ಸಾಸಾದನ; ೩. ಸಮ್ಯಗ್ಮಿಥ್ಯಾದೃಷ್ಟಿ; ೪. ಅಸಂಯತ ಸಂಮ್ಯಗ್ದೃಷ್ಟಿ; ೫. ದೇಶಸಂಯತ; ೬. ಪ್ರಮತ್ತಸಂಯತ; ೭. ಅಪ್ರಮತ್ತ ಸಂಯತ; ೮. ಅಪೂರ್ವಕರಣ; ೯. ಅನಿವೃತ್ತಿಕರಣ; ೧೦. ಸೂಕ್ಷ್ಮಸಾಂಪರಾಯ; ೧೧. ಉಪ ಶಾಂತಕಷಾಯ; ೧೨. ಕ್ಷೀಣಕಷಾಯ ೧೩. ಸಯೋಗಕೇವಲಿ ೧೪. ಅಯೋಗಕೇವಲಿ.

[6] ೩ ನೇ ಗುಣಸ್ಥಾನದವರೆಗೆ ಬಹಿರಾತ್ಮರು, ೪ ರಿಂದ ೧೩ ನೇ ಗುಣಸ್ಥಾನಕ್ಕೇರಿದವರು ಅಂತರಾತ್ಮಕರು, ೧೩-೧೪ ನೇ ಗುಣಸ್ಥಾನಕ್ಕಡರಿದವರು ಪರಮಾತ್ಮರು.

ಬಹಿರಾತ್ಮನಲ್ಲಾಂತರಾತ್ಮನಾ ಭರತೇಶ | ಸಹಸದಿ ಪರಮಾತ್ಮನಾದಾ ||
ಲಹರಿಯ ಪೇಳ್ವೆನಾಗಮವೆಂಬುದಧ್ಯಾತ್ಮ | ಮಹಿಮೆಯೊಳಡಗಲೆಂತೆನಲು || ೬೧ ||

ಬಹಿರಾತ್ಮರ ಒಲವೆಲ್ಲ ವಿಷಯವಾಸನೆ ಕಡೆಗೆ; ಆಗಾಗ ಇವರೂ ರಸಾನಂದವನ್ನು ಅನುಭವಿಸಿ ಅಲ್ಲಿ ಸ್ಥಿರವಾಗಿ ನಿಲ್ಲದೆ ಪ್ರಾಪಂಚಿಕರಾಗಿ ಅಲೆವರು. ಅಂತರಾತ್ಮಕರು ರಸಋಷಿಗಳಿದ್ದಂತೆ; ಆತ್ಮನ ಅನುಪಮ ಸೌಂದರ್ಯೋಪಾಸಕರಿವರು! ಅಂತರಾತ್ಮಕರು ಪಕ್ವಗೊಂಡಮೇಲೆ ಆಗಾಗ ಬ್ರಹ್ಮಾನಂದದ ಮೊಗಸಾಲೆಯವರೆಗೂ ಹೋಗಿ ಮಹಾದ್ವಾರವನ್ನೂ ನೋಡಿ ಆನಂದಿಸುವರು. ರಸಾನಂದದಲ್ಲಿ ಸ್ಥಿರಗೊಂಡು ಬ್ರಹ್ಮಾನಂದಕ್ಕೇರಲು ಪ್ರಯತ್ನಿಸುವರೇ ಅಂತರಾತ್ಮಕರು. ಅಂತರಾತ್ಮಕರು ಕೊನೆ ಕೊನೆಗೆ ಶುಕ್ಲಧ್ಯಾನದ ಪ್ರಾಥಮಿಕಾವಸ್ಥೆಯನ್ನು ಸಾಧಿಸುವರು. ಸಯೋಗ ಕೇವಲಿಯೆಂದರೆ ಜೀವನ್ಮುಕ್ತಾವಸ್ಥೆ. ಇವರ ಸ್ಥಿತಿ ಬೆಂದನುಲಿಯಿದ್ದಂತೆ. ಜಿನರಾದ ಇವರು ಮತ್ತೆ ಅಂತರಾತ್ಮಾವಸ್ಥೆಗೆ ಇಳಿಯುವುದಿಲ್ಲ. ಬಹುಮಟ್ಟಿಗೆ ಪೂರ್ಣಗೊಂಡ ಚೇತನಗಳು. ಆದರೂ ಅಯೋಗ ಕೇವಲಿಯಾಗುವ ತನಕ ಆತ್ಮವಿಕಾಸ ಕಲೆ ಪರಿಪೂರ್ಣವಾಗಲಾರದು. ಸಿದ್ಧನಾದಾಗ ಎಲ್ಲವೂ ಪೂರ್ಣಗೊಂಡಂತೆ. ಆತ್ಮ ತನ್ನ ಸ್ವಸ್ವರೂಪದಲ್ಲಿ ರಾರಾಜಿಸಿದಂತೆ!

ಭರತೇಶ ಘಾತಿಕರ್ಮಗಳನ್ನು ಕೆಣಕಿ ಹೋರಾಡಿದುದನ್ನು ವೀರೋಚಿತವಾಗಿ ರತ್ನಾಕರ ಬಣ್ಣಿಸಿರುವನು.

ರಾಜಸಂಪದವ ತೊರೆದು ಯೋಗಿಯಾಗಿಯುಂ | ರಾಜವೋಡಿಯ ಬಿಟ್ಟುದಿಲ್ಲ ||
ತೇಜಸ್ವಿಯಲ್ಲವೆ ಮೊನೆದೋರಿ ಕರ್ಮದ | ಫೌಜಿಗೆ ತಾಗಿದಿರಾದಾ || ೬೨ ||
ಅಶ್ವರತ್ನವಬಿಟ್ಟನಹುದಾಗ ಚಿತ್ತವೆಂ | ಬಶ್ವವನೊಡನೆ ತಾನೇರಿ ||
ವಿಶ್ವಕರ್ಮದ ಮೇಲೆ ಧ್ಯಾನಖಡ್ಗವನಾಂತು | ವಿಶ್ವತೋನೇತ್ರನೇರಿದನು || ೬೩ ||
ಮುಖವಿಕ್ಕಲೊಡನೆ ಮೂರಾಯುಷ್ಯ ತಡೆದವಾ | ಸುಖಿ ಮುಂದೆ ತೇಜಿಯ ನೂಂಕೆ ||
ಶಿಖಿಗಂಡ ರಸದಂತೆ ಕುಗತಿ ಮುಂತಾದದು | ಮುರ್ಖಕರ್ಮಜರಿದುವೀರೆಂಟು || ೬೪ ||
ಮುಂದೊತ್ತಲೆಂಟು ಕಷಾಯ ಬಿದ್ದುವು ಕ್ಲೀಬ | ವೆಂದು ಸ್ತ್ರೀವೇದವೆಂದೆರಡು ||
ನಿಂದಿರೆ ಛೀಯೆನೆ ಸರಿದವು ಕಲಿಖಡ್ಗ | ದಿಂದಿಕ್ಕೆ ಷಂಢಗೆ ಪೆಣ್ಣೆ || ೬೫ ||
ಏರಿದನೊಡನೆ ಮುಂದರತಿ ಶೋಕಾದಿಯಾ | ದಾರು ಕಷಾಯನೆಗ್ಗಿದವು ||
ಕೇರಿ ಮುಂದೊತ್ತಲು ಪುಂವೇದ ಕಂಗೆಟ್ಟು ಹಾರಿತಾವೀರಗಾರಿದಿರು || ೬೬ ||
ಬಳಿಕ ಸಂಜ್ವಲನದ ಹಮ್ಮೊಮ್ಮೆ ಮುನಿಸೊಮ್ಮೆ | ತಲೆದೋರದೋಡಲಾಲೋಭಾ ||
ಚಲುವಾನದೊಳು ನಿಂದುದವರ ಬಾದರಗೂಡಿ | ಗಲಿಸಿತು ಮಾಯೆ ಹೋ ಧಿರುರೆ || ೬೭ ||
ಧಾಯೆಂದು ಮುಂದೊತ್ತೆ ಲಘುಲೋಭ ಹೋಯ್ತಲ್ಲಿ | ಗಾಯೋಗಿ ಮೋಹರಾಕ್ಷಸನಾ ||
ಆಯುಷ್ಯಭಾಷೆಯ ತೊತ್ತಳದುಳಿದು ವಿಡಾಯದಿಂದೆದ್ದನು ಮುಂದೆ || ೬೮ ||

ಬೋಧರೋಧಗಳು ನಾಲ್ಕವಧಿಲೋಚನದೊಂದು | ರೋಧಮುನ್ನಳಿದಿರ್ದುವುಳಿದ ||
ಪ್ರಾರ್ಥೂರ್ತ ಪ್ರಕೃತಿಯನೆರಡು ಪೆಟ್ಟಿನೊಳೊತ್ತಿ | ಬೋಧಿಪೆನೆಂದನುವಾದಾ || ೧೯ ||
ಪ್ರಚಲೆ ನಿದ್ರೆಯನೊಮ್ಮೆ ಧ್ಯಾನಖಡ್ಗದಿ ಪಾಯ್ದು | ಪ್ರಚುರಪಂಚಾಂತರಾಯವನು ||
ನಿಚಿತಾಕ್ಷಿರೋಧಮೂರೊಂದು ಚಿತ್ಪಿಹಿತವ | ಶುಚಿಪೊಯ್ದನೊಂದೆ ಪೆಟ್ಟಿನೊಳು || ೨೦ ||
ಜಾರಿದುವರವತ್ತು ಮೂರುಕರ್ಮಗಳಾಗ | ಮೀರಿದನಂತರಾತ್ಮತೆಯಾ ||
ತೋರಿತು ಪರಮಾತ್ಮ ಸಂಪತ್ತು ಮುನಿಯಲ್ಲ | ಧೀರನಾಕ್ಷಣ ಜಿನನಾದಾ || ೨೧ ||

ಭರತೇಶನ ಅಂತರಾತ್ಮಾವಸ್ಥೆಯ ಕೊನೆಕೊನೆಯ ಭಾಗವನ್ನು ಕರ್ಮ ಶತ್ರುವಿನೊಡನೆ ನಡೆದ ಪ್ರಚಂಡ ಹೋರಾಟವೆಂದು ಕಲ್ಪಿಸಿ ಆಧ್ಯಾತ್ಮಿಕ ರಂಗಭೂಮಿ ಕಣ್ಣಿಗೆ ಕಾಣುವಂತೆ ಚಿತ್ರಿಸಿ ಪ್ರತಿ ಪಕ್ಷದ ಅಪ್ರತಿಮ ಅತಿರಥಮಹಾರಥರನ್ನೆಲ್ಲ ಚಕ್ರೇಶ ತೊತ್ತಳದುಳಿದುದನ್ನು ರತ್ನಾಕರ ನಿರೂಪಿಸಿರುವನು. ಆದರೂ ಸಿದ್ಧಾಂತದ ಪಾರಿಭಾಷಕ ಪದ ಪುಂಜಗಳ ವಿಚಿತ್ರ ವಿನ್ಯಾಸವೆಂಬ ಗೊಂಡಾರಣ್ಯದಲ್ಲಿ ಅಲೆಯಲಾರದೆ ಓದುಗರು ಬೇಸರಗೊಳ್ಳದಿರಲಾರರು. ಈ ಭಾಗದಲ್ಲಿ ರತ್ನಾಕರ ಕವಿಯಾಗಿ ಕಾಣಿಸಿಕೊಳ್ಳುವುದಕ್ಕಿಂತ ಹೆಚ್ಚಾಗಿ ಕರಾರುವಾಕಿನ, ಲೆಕ್ಕಾಚಾರ ಮನೋಭಾವದ ಸಿದ್ಧಾಂತಿಯಾಗಿ ಹೋಗಿರುವನು.

ಗುಣಸ್ಥಾನಗಳಲ್ಲಿ ಆತ್ಮವಿಕಾಸ[7]—ಜೀವ ತನ್ನ ಸ್ವರೂಪದಲ್ಲಿ ನೆಲೆಗೊಳ್ಳಬೇಕಾದರೆ ತನ್ನನ್ನು ಆವರಿಸಿಕೊಂಡಿರುವ ಅನ್ಯಪುದ್ಗಲಗಳಿಂದ ಪಾರಾಗಬೇಕು. ಕರ್ಮ ಪುದ್ಗಲಗಳ ಸೆಳತಕ್ಕೆ ಸಿಕ್ಕಿದ ಜೀವಾತ್ಮ ತನ್ನ ಅನಂತಸಿರಿಗೆ ತಾನೇ ಎರವಾಗಿ ತೊಳಲಾಡುತ್ತಿರುವುದು ; ಸಮ್ಯಗ್ ದರ್ಶನ ಜ್ಞಾನ ಚಾರಿತ್ರಗಳನ್ನು ಸಾಧಿಸಿದಾಗ ಕರ್ಮಗಳಿಂದ ಬಿಡುಗಡೆಹೊಂದಿದ ಆತ್ಮಕೈವಲ್ಯ ಲಕ್ಷ್ಮಿಯ ಕರಪಿಡಿದು ವಿರಾಜಿಸುವುದು! ದರ್ಶನಜ್ಞಾನ ಚಾರಿತ್ರಗಳು ಸಮಪಾಕವಾಗಿ ಸಾಮರಸ್ಯವನ್ನು ಪಡೆವ ದಿವ್ಯ ದೃಶ್ಯ ಹದಿನಾಲ್ಕುಗುಣಸ್ಥಾನಗಳಲ್ಲಿ ನಡೆವ ಆತ್ಮದ ಹಾಗೂ ಕರ್ಮಗಳ ಹಣಾಹಣಿ ಹೋರಾಟವಾಗಿದೆ! ಮೋಹ ಮತ್ತು ಯೋಗ ಇವುಗಳ ನಿಮಿತ್ತದಿಂದ ಸಮ್ಯಗ್ದರ್ಶನ ಜ್ಞಾನಚಾರಿತ್ರರೂಪಿ ಆತ್ಮದ ಗುಣಗಳ ತಾರತಮ್ಯರೂಪಿ ಅವಸ್ಥೆಗೆ ಗುಣಸ್ಥಾನವೆನ್ನುವರು. ಮೋಹ ಮತ್ತು ಯೋಗಗಳ ವಿನ್ಯಾಸಕ್ಕನುಗುಣವಾಗಿ ಗುಣಸ್ಥಾನವನ್ನು ನಿರ್ದೇಶಿಸುವರು.

ಮೊದಲನೇ ನಾಲ್ಕು ಗುಣಸ್ಥಾನಗಳಿಗೆ ದರ್ಶನ ಮೋಹನೀಯದ ಏರಿಳಿತ ಕಾರಣವಾದರೆ ಮುಂದಿನ ಎಂಟು ಗುಣಸ್ಥಾನಗಳಿಗೆ ಚಾರಿತ್ರಮೋಹನೀಯ ನಿಮಿತ್ತ

[7] ಜೈನಧರ್ಮ ಪ್ರವೇಶಿಕ'ದ ೫ ನೇ ಅಧ್ಯಾಯ (ಪು. ೧೫೭-೨೦೪) ದಿಂದ ಈ ಭಾಗಕ್ಕೆ ನೆರವು ಪಡೆದಿರುವೆನು.

ವಾಗಿದೆ. ಯೋಗದ ನಿಮಿತ್ತದಿಂದ ಹದಿಮೂರು, ಹದಿನಾಲ್ಕನೇ ಗುಣಸ್ಥಾನಗಳು ಲಭಿಸುವುವು. ಮೊದಲನೆ ಗುಣಸ್ಥಾನವು ದರ್ಶನ ಮೋಹನೀಯ ಕರ್ಮೋದಯ ದಿಂದ ಪ್ರಾಪ್ತವಾಗುವುದು. ಇಲ್ಲಿರುವ ಜೀವಿಗೆ ನಿಜವಾದ ಧರ್ಮದ ಕಡೆ ರುಚಿ ಯುಂಟಾಗುವುದಿಲ್ಲ. ಪ್ರಥಮ ಉಪಶಮಸಮ್ಯಕ್ತ್ವದ ಅವಸ್ಥೆಯಲ್ಲಿ ಯಾವುದಾದ ರೊಂದು ಅನಂತಾನುಬಂಧಿಕಷಾಯ ಉದಯಿಸಿ ಜೀವಿಯ ಸಮ್ಯಕ್ತ್ವವನ್ನು ನಾಶಮಾಡುವುದು.[8] ಈ ಅವಸ್ಥೆಗೆ ಸಾಸಾಧನ ಗುಣಸ್ಥಾನವೆನ್ನುವರು. ಸಮ್ಯಗ್ ಮಿಥ್ಯಾತ್ವ ಪ್ರಕೃತಿಗಳುದಯದಿಂದ ಪ್ರಾಪ್ತವಾಗುವ ಅವಸ್ಥೆಗೆ ಮಿಶ್ರಗುಣಸ್ಥಾನ ವೆನ್ನುವರು. ಇಲ್ಲಿ ಸಮ್ಯಕ್ತ್ವವೂ ಇದ್ದು ಮಿಥ್ಯಾತ್ವರೂಪ ಪರಿಣಾಮಗಳೂ ಬೆರಕೆ ಯಾಗಿರುತ್ತವೆ.

ನಾಲ್ಕನೆ ಗುಣಸ್ಥಾನಕ್ಕೇರಿದ ಜೀವ ಧರ್ಮಧ್ಯಾನವನ್ನು ಪ್ರಾರಂಭಿಸುವುದು. ಕೆಳಗಿನ ಸ್ಥಾನಗಳ ಸೆಳತಕ್ಕೆ ಸಿಕ್ಕದೆ ತುಂಬಾ ಎಚ್ಚರವಹಿಸುವುದರ ಜೊತೆಗೆ ಮೇಲಿನ ಸ್ಥಾನಗಳಿಗೇರಲು ಪ್ರಯತ್ನಿಸಬೇಕು. ಸುಪ್ರಭೆ ತೋರುವಾಗ ಅಪ್ರಮತ್ತನಾಗಿ, ಸ್ವಪ್ರಭೆ ಮಾಸಿದಾಗ ಪ್ರಮತ್ತ ಸ್ಥಾನಕ್ಕಿಳಿವನು. ನಿಶ್ಚಯ ಧರ್ಮಯೋಗಿಯಾಗಲು ಆರನೆ ಗುಣಸ್ಥಾನಕ್ಕಾದರೂ ಏರಬೇಕು. ಇದುವರೆವಿಗೂ ಆಚರಿಸಿದ್ದು ಕೇವಲ ವ್ಯವಹಾರ ಧರ್ಮಧ್ಯಾನ. ಅಪ್ರಮತ್ತ ಅಪೂರ್ವ ಅನಿವೃತ್ತ ಗುಣಸ್ಥಾನಗಳಲ್ಲಿ ನಿಶ್ಚಯ ಧರ್ಮಯೋಗ ಬೆಳೆದು ಪಕ್ವಗೊಳ್ಳುವುದು. ಈ ಗುಣಸ್ಥಾನಕ್ಕೇರಿದ ಜೀವಕ್ಕೆ, ನರಕ, ದೇವ, ತಿರ್ಯಕ್‌ಗತಿಗಳ ಕರ್ಮದಿಂದ ಬಿಡುಗಡೆ ದೊರೆಯುವುದು. ಆಗ ದರ್ಶನ ಮೋಹನೀಯ ಕರ್ಮದ ಮೂರು ಪ್ರಕೃತಿ, ಮತ್ತು ಅನಂತಾನುಬಂಧಿಯ ನಾಲ್ಕು ಪ್ರಕೃತಿ ಒಟ್ಟು ಈ ಏಳು ಪ್ರಕೃತಿಗಳು ಕ್ಷಯವಾಗಿ ಕ್ಷಾಯಿಕ ಸಮ್ಯಕ್ತ್ವ ಲಭಿಸುವುದು.

ನಾಲ್ಕನೆ ಗುಣಸ್ಥಾನದಿಂದ ಪ್ರಾರಂಭವಾಗಿ ಏಳನೆ ಗುಣಸ್ಥಾನದವರೆಗೆ ಧರ್ಮಧ್ಯಾನ ಪಕ್ವಗೊಳ್ಳುವುದು. ಅಪೂರ್ವಕರಣವೆಂಬ ಎಂಟನೆ ಗುಣಸ್ಥಾನದಲ್ಲಿ ಶುಕ್ಲಧ್ಯಾನ ಅಂಕುರಾರ್ಪಣವಾಗುವುದು. ವ್ಯವಹಾರ ಶುಕ್ಲ ಸಾಧಿಸಿದರೆ ಸುರರಾಗು

---

[8] ಸಮ್ಯಕ್ತ್ವದಲ್ಲಿ ಮೂರು ಭೇದಗಳು; ಉಪಶಮ, ಕ್ಷಾಯಿಕ, ಕ್ಷಾಯೋಪಶಮಿಕ ದರ್ಶನ ಮೋಹನೀಯದ ಮೂರು ಪ್ರಕೃತಿಗಳು ಅನಂತಾನುಬಂಧಿಯ ನಾಲ್ಕು ಪ್ರಕೃತಿಗಳು ಉಪಶಮನವಾದಾಗ ಉಪಶಮಸಮ್ಯಕ್ತ್ವ. ಈ ಏಳು ಪ್ರಕೃತಿಗಳು ಕ್ಷಯವಾದಾಗ ಕ್ಷಾಯಿಕ ಸಮ್ಯಕ್ತ್ವ. ಆರು ಪ್ರಕೃತಿಗಳ ಅನುದಯ ಮತ್ತು ಸಮ್ಯಕ್ತ್ವ ಪ್ರಕೃತಿನಾಮಕ ಮಿಥ್ಯಾತ್ವದ ಉದಯದಿಂದ ಕ್ಷಾಯೋಪಶಮಿಕ, ಉಪಶಮ ಸಮ್ಯಕ್ತ್ವದಲ್ಲಿ ಪ್ರಥಮ ಮತ್ತು ದ್ವಿತಿಯೋಪ ಶಮವೆಂದು ಎರಡು ತೆರವಿದೆ.

ವರು, ನಿಶ್ಚಯ ಶುಕ್ಲದಿಂದ ಕೈವಲ್ಯ ಪದವಿ ಲಭಿಸುವುದು. ಉಪಮಶ್ರೇಣಿಗೇರಿದವರಿಗೆ ವ್ಯವಹಾರ ಶುಕ್ಲ ಲಭಿಸುವುದು.[9] ಕ್ಷಪಕಾಂತ ಶ್ರೇಣಿಹಿಡಿದು ಸಾಗುವವರೆಗೆ ನಿಶ್ಚಯ ಶುಕ್ಲ ಸಿದ್ಧಿಸುವುದು.[10] ತಲೆಯಿಂದ ಹೆಜ್ಜೆಯತನಕ ಅಚ್ಚಬೆಳದಿಂಗಳ ಬೊಂಬೆಯಾಗಿ ಆತ್ಮ ತೋರಿ ಸ್ಥಿರವಾಗದೆ, ಚಲಿಸಿದರೆ, ಅದು ವ್ಯವಹಾರ ಶುಕ್ಲ. ಅದು ಸ್ಥಿರಗೊಂಡಾಗ ನಿಶ್ಚಯಶುಕ್ಲ. ಶುಕ್ಲಧ್ಯಾನದಿಂದ ಮೂರಾಯು ಕೆಟ್ಟು ಹೋಗುವುದು.

ಅನಿವೃತ್ತಕರಣವೆಂಬ ಒಂಬತ್ತನೆಯ ಗುಣಸ್ಥಾನದಲ್ಲಿ ಮೂವತ್ತಾರು ಕರ್ಮಗಳು ಕ್ಷಯಿಸುವುವು.[11] ಸೂಕ್ಷ್ಮ ಸಂಪರಾಯವೆಂಬ ಹತ್ತನೆಯ ಸ್ಥಾನದಲ್ಲಿ ಲೋಭಗಳು ನಶಿಸುವುವು. ಮೋಹಕರ್ಮದ ೨೮ ಪ್ರಕೃತಿಗಳು ನಿರ್ಜರೆಯಾಗುವುದು. ಉಪಶಾಂತಿ ಎಂಬ ಹನ್ನೊಂದನೆ ತಾಣ ಉಪಶ್ರಮಶ್ರೇಣಿಯಲ್ಲಿ ಹೋದವರಿಗೆ ಮಾತ್ರ ಲಭಿಸುವುದು. ಕ್ಷಪಕಶ್ರೇಣಿಯವರು ಹತ್ತರಿಂದ ನೇರವಾಗಿ ಹನ್ನೆರಡನೇ ಸ್ಥಾನಕ್ಕೆ ಕುಪ್ಪಳಿಸುವರು.

ಶುಕ್ಲಧ್ಯಾನದ ಎರಡನೆ ಅವಸ್ಥೆ ಹನ್ನೆರಡನೇ ಗುಣಸ್ಥಾನದಲ್ಲಿ ಕಾಣಿಸಿಕೊಳ್ಳುವುದು. ಇಲ್ಲಿ ದರ್ಶನಾವರಣ ನಾಲ್ಕು, ಅಂತರಾಯಗಳೈದು ; ಜ್ಞಾನಾವರಣೀಯ ಐದು ; ಇದರ ಜೊತೆಗೆ ನಿದ್ರಾ ಮತ್ತು ಪ್ರಚಲ ನಾಶವಾಗಿ ಅಂತರಾತ್ಮ ಹದಿಮೂರನೆ ಗುಣಸ್ಥಾನಕ್ಕೆ ಬಂದು ಪರಮಾತ್ಮನಾಗುವನು. ಮನಸ್ಸು ಆತ್ಮದಲ್ಲಿ ಐಕ್ಯವಾಗುವುದು ಕೇವಲ ಜ್ಞಾನ ಲಭಿಸುವುದು.

ಅಯೋಗ ಕೇವಲಿಯೆಂಬ ಹದಿನಾಲ್ಕನೇ ಗುಣಸ್ಥಾನದಲ್ಲಿ ಅಘಾತಿ ಕರ್ಮಗಳು ಹೋಗಿ, ಮೂರು ದೇಹಗಳೂ ನೀಗಿದ ಜಿನೇಂದ್ರ ಸಿದ್ಧನಾಗುವನು. ಆತ್ಮವಿಕಾಸ ಕಾರ್ಯ ಪರಿಪೂರ್ಣವಾಗುವುದು.

ಸಂಯೋಗ ಕೇವಲಿಯಾಗಿದ್ದ ಪರಮಾತ್ಮ, ಅಯೋಗ ಕೇವಲಿಯಾಗಿ ರೂಪಾಂತರ ಹೊಂದುವಾಗಿನ ಅದ್ಭುತ ವ್ಯಾಪಾರದ ಬೃಹತ್ ದೃಶ್ಯಗಳನ್ನು

---

[9] ಯಾತರಲ್ಲಿ ಚಾರಿತ್ರ ಮೋಹನೀಯ ೨೧ ಪ್ರಕೃತಿಗಳು ಉಪಶಮವಾಗುವುದೋ ಅದು ಉಪಶಮಶ್ರೇಣಿ.

[10] ಚಾರಿತ್ರಮೋಹನೀಯ ೨೧ ಪ್ರಕೃತಿಗಳು ಕ್ಷಯವಾದರೆ ಅದು ಕ್ಷಪಕಾಂತಶ್ರೇಣಿ.

[11] ನಿದ್ರಾ, ಪ್ರಚಲಾ, ತೀರ್ಥಕರ, ನಿರ್ಮಾಣ, ಪ್ರಶಸ್ತವಿಹಾಯೋಗತಿ, ಪಂಚೇಂದ್ರಿಯ ಜಾತಿ ತೈಜಸ ಶರೀರ, ಕಾರ್ಮಾಣಶರೀರ, ಆಹಾರಕ ಶರೀರ, ಆಹಾರಕ ಅಂಗೋಪಾಂಗ, ಸಮಚತುಸ್ರ ಸಂಸ್ಥಾನ, ವೈಕ್ರಿಯಶರೀರ, ವೈಕ್ರಿಯಕ ಅಂಗೋಪಾಂಗ, ದೇವಗತಿ. ದೇವಗತ್ಯಾನು ಪೂರ್ವಿ ರೂಪ ರಸ, ಗಂಧ, ಸ್ಪರ್ಶ, ಅಗುರುಲಘುತ್ವ, ಉಪಘಾತ, ಪರಘಾತ, ಉಚ್ಛ್ವಾಸ, ತ್ರಸ, ಬಾದರ ಪರ್ಯಾಪ್ತ, ಪ್ರತ್ಯೇಕ ಸ್ಥಿರ, ಶುಭ, ಸುಭಗ, ಸುಸ್ವರ, ಆದೇಯ, ಹಾಸ್ಯ, ರತಿ ಜುಗುಪ್ಸಾ, ಭಯ.

ರತ್ನಾಕರ ಓದುಗರ ಮನಮುಟ್ಟುವಂತೆ ನಿರ್ಮಿಸಿ ಅಪೂರ್ವ ಕಲೆಯನ್ನು ಮೆರೆದಿರುವನು.

ಘಾತಿ ಚತುಷ್ಟಯ ಕೆಟ್ಟು ಮುನ್ನವೆ ಪರಂ | ಜ್ಯೋತಿಯಾಗಿರ್ದಾದಿಜಿನನು ||
ಘಾತಿನಿರ್ಘಾತಿ ಚತುಷ್ಟಯಗಳನಾಗ | ಘಾತಿಸಲಭಿಮುಖನಾದಾ || ಜಿನಮುಕ್ತಿಗಮನಸಂಧಿ ೪
ಅರವತ್ತುಮೂರುಕರ್ಮಗಳಂದು ಘಾತಿಯೊ | ಳ್ಬರಿದಾಗಿ ಪೋದುವಿನ್ನಿಂದು ||
ತುರುಗಿದೆಂಭತ್ತೈದ ನಿರ್ಘಾತಿ ನಾಲ್ಕರೊ | ಳೆರೆಯಟ್ಟಲೆಂದನುವಾದ || ೫ ||[12]
ಕೊಂಕದೆ ಮಿಸುಕದೆ ನೇರ ನಿಶ್ಚಲದಿ ಪ | ಲ್ಯಂಕ ಮುದ್ರೆಯೊಳಿರ್ದುದಂಗಾ ||
ತೇಂಕದುಸುರು ಮುಚ್ಚಿದಧರ ಮುಚ್ಚಿದ ಕಂಗೆ | ಳಂಕಿತವಾಯ್ತು ಯೋಗಾಂಗಾ || ೧೩ ||
ಜಗದಗ್ರವೇರಿರ್ದ ಸಿದ್ಧರು ಪರರಿನ್ನು | ಜಗದ ಜಂಜಡದ ಮಾತೇನು ||
ಜಗುಳಿಸಿ ಮೂರು ಶರೀರವ ಮುಕ್ತಿಗೆ | ನೆನೆವೆನೆಂದುದ್ಯುಕ್ತನಾದಾ || ೧೪ ||
ಪಳುಕಿನ ಕೊಡದಲ್ಲಿ ತುಂಬಿದ ಪಾಲ ನಿ | ರ್ಮಲತೆಯ ನಗುತ ದೇಹದೊಳು ||
ಜಳಜಳಿಸುವ ವಿಮಲಾತ್ಮನೊಳಗೆ ಮೂಡಿ | ಮುಳುಗಾಡುತಿರ್ದನಾ ಸ್ವಾಮಿ || ೧೬ ||

ಆದಿದೇವ ನಿರ್ವಯಲಾಗಿ ಹೋಗಲು ಪಣತೊಟ್ಟು ಸನ್ನದ್ಧನಾಗಿರುವನು. ರತ್ನಾಕರ ಈ ಅಲೌಕಿಕ ಹಾಗೂ ಅಪೂರ್ವ ಸನ್ನಿವೇಶವನ್ನು ಕಲೆ ಮತ್ತು ಸಿದ್ಧಾಂತಗಳ ಸಮಪಾಕದಿಂದ ಬಣ್ಣಿಸಿ ಓದುಗರ ಬೇಸರವನ್ನು ನೀಗಿದ್ದಾನೆ.[13]

ಆಕಾಶವನೊಂದು ಮಾರಿಕ್ಕುವಂತೆ ಮೂ | ಲೋಕವ ಚೋಟಿಕ್ಕುವಂತೆ ||
ದಾಕೊಂದರೊಳು ಕೋಟಿವಾರ್ಧಿಯ ಪಾಯ್ವ | ನಿರಾಕುಲೋನ್ನತಿಯಿರ್ದುದೊಳಗೆ || ೧೭ ||

---

[12] ಈ ಸಯೋಗ ಕೇವಲಿಗೆ ಅಂತ್ಯಸಮಯದ ಎರಡನೇ ಭಾಗದಲ್ಲಿ ಅಸಾತಾವೇದನೀಯ, ದೇವಾಗತ್ಯೌದಾರಿಕ ವೈಕ್ರಿಯಕಾಹಾರಕ ತೈಜಸಕಾರ್ಮಣಶರೀರ, ಆರು ಸಂಸ್ಥಾನ, ಮೂರು ಶರೀರಗಳ ಅಂಗೋಪಾಂಗ, ಆರು ಸಂಹನನ ಪಂಚಪ್ರಶಸ್ತವರ್ಣ, ಪಂಚ ಅಪ್ರಶಸ್ತವರ್ಣ, ಗಂಧದ್ವಯ; ಪಂಚಪ್ರಶಸ್ತರಸ, ಪಂಚ ಅಪ್ರಶಸ್ತರಸ, ಎಂಟು ಸ್ಪರ್ಶ, ದೇವಗತಿ, ಪ್ರಯೋಗಾನುಪೂರ್ವ, ಅಗುರುಲಘು, ಉಪಘಾತ, ಪರಘಾತ, ಉಚ್ಛ್ವಾಸ, ಪ್ರಶಸ್ತ, ಅಪ್ರಶಸ್ತ ವಿಹಾಯೋಗಗತ್ಯ ಪರ್ಯಾಪ್ತಕ ಪ್ರತ್ಯೇಕ ಶರೀರ, ಸ್ಥಿರಾಸ್ಥಿರ, ಶುಭಾಶುಭ, ದುರ್ಭಗ, ಸುಸ್ವರದುಸ್ವರಾನಾದೇಯಾಯಶಃ, ಕೀರ್ತಿ, ನಿರ್ಮಾಣ ನಾಮನೀಚೈಗೋತ್ರಗಳೆಂಬ ೭೨ ಕರ್ಮ ಪ್ರಕೃತಿಗಳು. ಸಾತಾವೇದನೀಯ ಮನುಷ್ಯಾಯುರ್ಮನುಷ್ಯಗತಿ, ಪಂಚೇಂದ್ರಿಯ ಜಾತಿ, ಮನುಷ್ಯಗತಿ, ಪ್ರಯೋಗ್ಯಾನುಪೂರ್ವ ತ್ರಸಭಾದರ ಪರ್ಯಾಪ್ತಕ, ಸುಭಗಾಧೆಯ ಯಶಃಕೀರ್ತಿ ತೀರ್ಥಂಕರನಾಮೋಚ್ಛೈಗೋತ್ರಗಳೆಂಬ, ೧೩ ಕರ್ಮಪ್ರಕೃತಿಗಳು : ಜಿನಸೇನರ, ಪೂರ್ವಪುರಾಣ ೫೭೪ (ಸಂ. ಎ. ಶಾಂತಿರಾಜಶಾಸ್ತ್ರಿಗಳು).

[13] ಸಿದ್ಧಾಂತ ಭಾಗವನ್ನು ಬಿಟ್ಟು ಕಾವ್ಯವಾಗಿ ಕಂಡುದನ್ನು ಮಾತ್ರ ಇಲ್ಲಿ ಸಂಗ್ರಹಿಸಿರುವೆನು ಬೇಕಾದವರು ಮೂಲಗ್ರಂಥವನ್ನು ನೋಡಬಹುದು.

ಕರ್ಮವೆ ರೂಪಾಗಿ ಕವಿದಿರ್ದ ತೈಜಸ | ಕಾರ್ಮಣ ತನುಗಳು ಮುನ್ನ ||
ಪೆರ್ಮರು ದಟ್ಟ ಜಗುಳಿ ತೆಳುಪಾಗಿರ್ದು | ಪೊರ್ಮೊದಲೊಳೆ ಸಾರುತಿಹವು || ೨೧ ||
ಬೆಳಗನೆ ಮೀವಂತೆ ಬೆಳಗನೆ ಪಾಯ್ವಂತೆ | ಬೆಳಗಿನೋಕುಳಿಯಾಡುವಂತೆ ||
ಬೆಳಗಿನೊಳೋಲಾಡಿ ತೇಂಕಾಡುವಂತೆ ತ | ನ್ನೊಳಗೆ ತಾನಿರ್ದನಾ ಪರಮ ||
'ಪರಮಶುಕ್ಲಧ್ಯಾನವದು ನಿರ್ಮಲಾತ್ಮನೆ | ಸ್ಫುರಿಸುತಿರ್ದನು ದೇಹ ತುಂಬಿ' || ೨೨ ||

ಇಲ್ಲಿ ಮಹಾಕವಿಯ ಪ್ರತಿಭೆಗೆ ಕೋಡು ಮೂಡಿದೆ. ಜಿನನ ಅಮಿತ ಸಾಹಸವನ್ನೂ ಧ್ಯಾನದ ಅಲೌಕಿಕ ಸೊಬಗನ್ನೂ ಹೃದಯಂಗಮವಾಗಿ ನಿರೂಪಿಸಿರುವನು.

ಇನ್ನು ಮುಂಬರುವ ಮಹಾದೃಶ್ಯವೆಂದರೆ ಪರಮಾತ್ಮನ ಯೋಗಲೀಲೆ; ಈ ಲೀಲೆಯಿಂದ ಜಿನೇಂದ್ರ ಬ್ರಹ್ಮಾಂಡ ವ್ಯಾಪ್ತಿಯಾಗಿ ಬ್ರಹ್ಮನಾಟ್ಯ ಲೀಲೆಯಿಂದ ಅಘಾತಿಕರ್ಮಗಳನ್ನು ಲೀಲಾಜಾಲವಾಗಿ ಧ್ವಂಸಮಾಡಿಬಿಡುವನು. ನಾಲ್ಕು ಸಮುದ್ಘಾತದುಜ್ಜ್ವಳತ್ಕಲೆಯನ್ನು ವಿಶ್ವಕವಿ ವಿರಚಿಸುವನು.[14]

ಅರಿಗಳು ಮೂವರ ದಂಡವ ಕೊಂಡೊಬ್ಬ | ಸಿರಿಗೆಟ್ಟ ಪಗೆಗೆಡೆ ಮಾಡಿ ||
ಧರೆಯಿಂದ ನಾಲರ್ವನೊಂದೇ ಬಾರಟ್ಟುವ | ಉರುತರ ತಂತ್ರಕೆತ್ತಿದನು || ೨೬ ||
ದಂಡದಾಕಾರಕೆಂದಾತ್ಮನ ಬಗೆ ಕೈ | ಕೊಂಡಾಗ ಕುಳಿತಿರ್ದುದಲ್ಲಿ ||
ಚಂಡಾಂಗವೆರಡರೊಳ್ಪೊರಪೊಣ್ಮಿ ಶುದ್ಧಾತ್ಮ | ದಂಡದಾಕಾರವಾಗಿರ್ದಾ || ೨೭ ||[15]
ತಳಲೋಕ ಮುಟ್ಟ ಸಿದ್ಧ ಕ್ಷೇತ್ರ ಮುಟ್ಟ ತಂ | ಬೆಳಗೆ ಬಿಂಬಿಸುತ ದಿವ್ಯಾತ್ಮಾ ||
ಬಲವೆತ್ತು ಪದಿನಾಲ್ಕು ರಜ್ಜುವಿನುದ್ದದಿ | ಗಳೆಯಂತೆ ನಿಂದಿರ್ದನಾಗ || ೨೮ ||
ಧರಿಸಿದ ದೇಹಕೆ ಮುಮ್ಮಡಿದಟ್ಟವಾ | ಕರಚರಣಾದಿ ರೂಪಿಲ್ಲ ||
ಪರಮಾತ್ಮನಿರ್ದನು ತ್ರಿಜಗಕೆ ಬೆಳಗಿನ | ಕರುಕಂಬ ಒಂದ ನೆಟ್ಟಂತೆ || ೨೯ ||

ಇಲ್ಲಿ ಪರಮಾತ್ಮ ವಿಶ್ವದಡಿಯಿಂದ ತುದಿಯತನಕ ಬೆಳೆದು ವಿಶ್ವೋನ್ನತನಾಗಿ ನಿಂತಿರುವನು! ಬೆಳ್ಳಂಬೆಳಕಾಗಿ ವಿರಾಜಿಸುತ್ತಿರುವನು!

ಜಿನೇಂದ್ರ ಉದ್ದುದ್ದವಾಗಿ ಬೆಳೆದಾದಮೇಲೆ ಅಡ್ಡಗಲವಾಗಿ ಹಬ್ಬುವುದಕ್ಕೆ ಕವಾಟಲೀಲೆ ಎನ್ನುವರು.

ಬಗೆದನು ಕೂಡೆ ಕವಾಟದಾಯತಕೆಂದು | ಪ್ರಗುಣಾತ್ಮನಾಕ್ಷಣದಲ್ಲಿ ||
ಧಗಧಗಿಸುತ ತೆಂಕ ಬಡಗ ನೀಳ್ದಿರ್ದನು | ಜಗಕ್ಕೊಂದು ಕದವಿಕ್ಕಿದಂತೆ || ೩೦ ||
ಏಳು ರಜ್ಜುವಿನಗಲದೊಳು ಮುತ್ತಿಳಿಯೊಳೀ | ರೇಳು ರಜ್ಜುವಿನುದ್ದವಾಗಿ ||
ತಾಳಿದ ಮೈಗೆ ಮುಮ್ಮಡಿ ದಟ್ಟತಾಗಿ ನಿ | ರಾಲಾತ್ಮನಿರ್ದನೇನೆಂಬೆ || ೩೧ ||

---

14 ದಂಡ, ಕವಾಟ, ಪ್ರತರ, ಪೂರಣ.

15 ತೈಜಸಕಾರ್ಮಣ ಶರೀರಗಳನ್ನು ಮಾತ್ರ ಬೆಳಸಿರುವನು. ಔದಾರಿಕ ದೇಹ ಇದ್ದಲ್ಲೇ ಇರುವುದು.

ವಿಶ್ವಕ್ಕೇ ಅಡ್ಡಗೋಡೆ ಹಾಕಿದಂತೆ ಪರಮಾತ್ಮ ಹಿಗ್ಗಿ ಹಬ್ಬಿದನು!

ಮೂರು ಲೋಕದ ತುಂಬ ಗಾಳಿ ಹೊರತಾಗಿ ವ್ಯಾಪಿಸುವುದಕ್ಕೆ ಪ್ರತರ ಲೀಲೆಯೆನ್ನುವರು.

ಪ್ರತರೆಗೆಂದಾತ್ಮನ ನೆನೆದನಾ ಗುರು ಲೋಕ | ತ್ರಿತಯದೊಳಗೆ ಲೋಕವೆಂಬ |
ಅತಿದೀರ್ಘ ಕುಂಭದೊಳಾತ್ಮನೆಂಬಮೃತ ತುಂ | ಬಿತು ಮಝು ತೆಕ್ಕನಾಕ್ಷಣವೆ || ೩೨ ||
ಮಂಜುಲೋಕವ ತುಂಬುವಂತೆ ಮೂಲೋಕವ | ಸಂಜೀವನಾತ್ಮ ತುಂಬಿದನು ||
ಮಾಂಜ ಮತ್ತಾಗಳೆ ಲೋಕಪೂರಣೆಗೆ ಪ | ರಂಜ್ಯೋತಿ ನೆನೆದನಾತ್ಮನನು || ೩೩ ||

ಪ್ರತರಲೀಲೆಯನ್ನು ಓದುಗರ ಹೃದಯ ಸ್ಪರ್ಶಿಯಾಗುವಂತೆ ಅದ್ಭುತ ರಮಣೀಯವಾಗಿ ಚಿತ್ರಿಸಿರುವನು.

ಗಾಳಿಯನ್ನು ಹೀರಿಕೊಂಡು ಮೂರುಲೋಕದ ತುಂಬ ತಾನೇ ತಾನಾಗಿ ವಿರಾಜಿಸುವ ವಿರಾಟಸ್ವರೂಪಕ್ಕೆ ಪೂರಣಲೀಲೆಯೆನ್ನುವರು.

ಮೊದಲು ಗಾಳಿಗಳಷ್ಟ ಬಿಟ್ಟೊಳಗಿರ್ದ ಬೇ | ಗದಿ ಗಾಳಿಗಳನೊಳಕೊಂಡು ||
ತುದಿಮೊದಲಿಗೆ ತುಂಬಿ ತ್ರಿಜಗಕೆ ಮುಸುಕನಿ | ಕ್ಕಿದ ಪೊಲಿರ್ದನು ಪರಮಾತ್ಮಾ || ೩೪ ||
ಶಿಲೆಯೊಳೌದಾರಿಕವಿರ್ದುದು ತ್ರಿಜಗವ | ಬಳಸಿ ತೈಜಸಕಾರ್ಮಣಗಳು ||
ನೆಲಸಿರ್ದುವವರ ಮುಸುಕಿನಲಿ ಪರಮಾತ್ಮ | ಕಲೆಯಿರ್ದುದತಿವಿಶಾಲದೊಳು || ೩೫ ||

ಲೋಕಾಲೋಕಗಳೆಲ್ಲ ಪರಮಾತ್ಮನ ಉದರದಲ್ಲಿ ಅಡಗಿಹೋದಂಥ ವಿರಾಟ ಲೀಲೆಯೆ ಪೂರಣಕಲೆ!

ಹೋದ ಕ್ರಮದಲ್ಲೇ ಪರಮಾತ್ಮ ಹಿಂದಿರುಗಿ ತನ್ನ ವಿಶ್ವರೂಪವನ್ನು ಸಮಾಪ್ತಿಗೊಳಿಸುವನು. ಎಲ್ಲದರಲ್ಲೂ ತಾನಿದ್ದು ಎಲ್ಲವನ್ನೂ ತನ್ನಲಿಟ್ಟುಕೊಂಡು ಮೆರೆವುದೇ ಸಮುದ್ಘಾತದುಜ್ಜ್ವಳತ್ಕಲೆ.

ನನೆದೊಂದು ವಸ್ತ್ರವ ನೀಟಿಕೆ ಹರಹೆ ಜು | ಮ್ಮನೆ ದ್ರವವಾರುವಂದದೊಳು ||
ಜಿನನಾತ್ಮವಸ್ತುವ ಪಸರಿಸೆ ಕರ್ಮಾಂಬು | ಹನಿತೆರಳಣುಗಳಾರಿದವು || ೩೭ ||
ಒಮ್ಮೆಯೆಪ್ಪತ್ತೆರಳ್ಕರ್ಮ ಜಾರಿದವು ಕೊ | ಡೊಮ್ಮೆ ಬಿದ್ದವು ಪದಿಮೂರು ||
ಜುಮ್ಮನೆ ಮೂರಂಗ ಬಯಲಾದುವಾ ಪರ | ಬೊಮ್ಮ ಲೋಕಾಗ್ರಕೆ ನೆಗೆದಾ || ೪೦ ||
ತಿರುಗದ ಪದವದು ತೀರದಘನಸುಖ | ನರಸುರೋರಗರಿಗಶಕ್ಯಾ ||
ವಿರಚಿಸಲರಿದಾದ ಮುಕ್ತಿಸಾಮ್ರಾಜ್ಯದೊ | ಳಿರುತಿರ್ದನಾ ಸಿದ್ಧನತ್ತ || ೪೭ ||

ಆತ್ಮ ವಸ್ತುವನ್ನು ಜೇನೆಂದ್ರ ಲೋಕದ ತುಂಬ ಹರಡಿದಾಗ ಇದ್ದಬದ್ದ ಕರ್ಮಗಳೆಲ್ಲ ಹಿಂಗಿಹೋದವಂತೆ! ಒಮ್ಮೆಗೆ ಏಳು ರಜ್ಜುವನ್ನು ಲಂಘಿಸಿ ಸಿದ್ಧನಾಗಿ

ಹೋದನು. ಮುಕ್ತಿಸಾಮ್ರಾಜ್ಯದಲ್ಲಿ ಅನಂತಕಾಲದವರೆಗೆ ಅನಂತಸುಖವನ್ನನು ಭವಿಸುತ್ತ ಎಂದೂ ಚ್ಯುತಿಯಾಗದೆ ರಾರಾಜಿಸುವನು!

ಹಂಸಕಲೆಯನ್ನು ರತ್ನಾಕರನಂತೆ ರಸವತ್ತಾಗಿ ಕಾವ್ಯಮಯವಾಗಿ ಚಿತ್ರಿಸಿದವರು ಅಪರೂಪ. ಸಿದ್ಧಾಂತದ ಪಾರಿಭಾಷಿಕ ಪದಪುಂಜಗಳನ್ನು ತಂದೊಟ್ಟಿ ಈ ಬ್ರಹ್ಮಕಲೆಯನ್ನು ಪಾಂಡಿತ್ಯದ ಪ್ರದರ್ಶನ ಭೂಮಿಯನ್ನಾಗಿ ಮಾಡಿ ಮುಗಿಸಿದ ಕವಿಗಳೇ ಜೈನಸಾಹಿತ್ಯದಲ್ಲಿ ಹೆಚ್ಚು. ಅಂಥ ಪ್ರದರ್ಶನದಿಂದ ಅವರಿಗೂ ಸುಖವಿಲ್ಲ, ಓದುಗರಿಗೂ ಬೇಸರವಾಗಿ ತಲೆಚಿಟುಗುಟ್ಟುವುದು. ಪೂರ್ವಾಚಾರ್ಯರು ಲೆಕ್ಕಾಚಾರವಾಗಿ ನಿರ್ಮಿಸಿ ಹೋಗಿರುವ ಆ ಪಟ್ಟಿಯನ್ನು ಇಂಥ ಸಂದರ್ಭದಲ್ಲಿ ಪುನರುಚ್ಚಾರ ಮಾಡಿದ ಮಹಾ ಕವಿಗಳಿಗೂ ನಮ್ಮಲ್ಲಿ ಕೊರತೆ ಇಲ್ಲ. ಆದರೆ ರತ್ನಾಕರ ಎಲ್ಲಾ ಸಂದರ್ಭದಲ್ಲೂ ಎಲ್ಲಾ ವಿವರಣೆಯನ್ನೂ ಕವಿಯಾಗಿ ಕಂಡು ಕಾವ್ಯಮಯವಾಗಿ ಅಂದಚಂದಗಳಿಂದ ಕಡೆದು ಕಾಣಿಸಿರುವನು. ಸಿದ್ಧಾಂತದಲ್ಲಿ ರತ್ನಾಕರ ಯಾರಿಗೂ ಕಡಿಮೆಯಿಲ್ಲ. ಕಾವ್ಯವನ್ನು ಬಲಿಗೊಡದೆ ಸಿದ್ಧಾಂತವನ್ನು ಳಿಸಿಕೊಂಡು ಸಾಗಿದ್ದಾನೆ. ಧರ್ಮಧ್ಯಾನವನ್ನು ಬೆಳಕಿನ ಹೊಳೆಯಾಗಿ ಹರಿಸಿ ಕಾವ್ಯರಸವಾಗಿ ಭೋರ್ಗರಿಸಿ ರತ್ನಾಕರ ಕೃತಕೃತ್ಯನಾಗಿದ್ದಾನೆ. ಆಗಾಗ ಸಿದ್ಧಾಂತವನ್ನು ತಂದರೂ ಕಲೆಯು ಬಣ್ಣಕಟ್ಟುವುದನ್ನು ಸಾಮಾನ್ಯವಾಗಿ ಈ ಮಹಾಕವಿ ಎಲ್ಲಿಯೂ ಮರೆತಿಲ್ಲ. ಸಿದ್ಧನಾಗುವ ಮುನ್ನ ಜಿನೇಂದ್ರ ವಿರಚಿಸುವ ವಿಶ್ವಲೀಲೆಯನ್ನಂತೂ, ಪ್ರಚಂಡ ಕಲೆಯಾಗಿ ನಿರೂಪಿಸಿ ರತ್ನಾಕರ ವಿಶ್ವಕವಿಯಾಗಿರುವನು! ಧರ್ಮಧ್ಯಾನದ ಬಣ್ಣನೆ ನಯನ ಮನೋಹರವಾಗಿ ಲಾಲಿತ್ಯದಿಂದ ಕೂಡಿ ಕುಶಲ ಕಲೆಗೆ ಮಾದರಿಯಾಗಿದೆ. ಸಮುದ್ಘಾತದುಚ್ಚಳತ್ಕಲೆ ಗಗನ ಚುಂಬಿಯಾಗಿ, ದಿಗಂತದ ತನಕ ಕೈಚಾಚಿ ಬೃಹದ್ ದೃಶ್ಯಗಳನ್ನು ನಿರ್ಮಿಸಿ ಬ್ರಹ್ಮಲೀಲೆಯ ಅದ್ಭುತ ವ್ಯಾಪಾರದಿಂದ ರಾರಾಜಿಸಿದೆ.

ಉಂಡವ ತೇಗುವಂತಾತ್ಮನ ಭಾವಿಸಿ | ಕಂಡವನದ ಪೇಳಬೇಕು ||
ಕಂಡು ಪೇಳಿದರು ನಿರ್ಭವ್ಯರೊಪ್ಪರು ಭವ್ಯ | ಪುಂಡರೀಕರು ಮೆಚ್ಚಬೇಕು || ಕವಿವಾಕ್ಯ ಸಂಧಿ ೯೬ ||

ಉಂಡವನು ತೇಗಿದಂತೆ ಕಂಡನುಭವಿಸಿದವನು ಬಣ್ಣಿಸಿದರೆ ಅದರ ಸೊಗಸೇ ಸೊಗಸು. ರತ್ನಾಕರ ಹಂಸಕಲೆಯನ್ನು ಉಂಡು ಬಣ್ಣಿಸಿರುವನು; ಒಂದೊಂದು ಮಾತಿನಲ್ಲೂ ಹಂಸಕಲೆಯ ಸ್ವಾನುಭವದ ಸೌರಭವನ್ನು ಬೆರಸಿರುವನು. ಅಷ್ಟೇಕೆ ತನಗೆ ಅನುಭವವಿಲ್ಲದ ಯಾವ ವಿಷಯವನ್ನೂ ರತ್ನಾಕರ, ಭರತೇಶ ವೈಭವದಲ್ಲಿ ತಂದಿಲ್ಲ. ಅವನು ಬಣ್ಣಿಸಿರುವುದೆಲ್ಲ ತನ್ನ ದಿವ್ಯಾನುಭವಗಳನ್ನೇ. ಅದರಿಂದಲೇ ಮಾತು ಮಾತಿನಲ್ಲೂ ಬುಗ್ಗೆಯಾಗಿ ರಸ ಚಿಮ್ಮುತ್ತಿರುವುದು. ಶೃಂಗಾರವನ್ನು ಎಷ್ಟು ರಮಣೀಯವಾಗಿ

ಚಿತ್ರಿಸಿರುವನೋ ಅದಕ್ಕಿಂತ ರಮ್ಯವಾಗಿ ಹಂಸಾನುಭವವನ್ನು ನಿರೂಪಿಸಿರುವನು. ರತ್ನಾಕರನ ಶೃಂಗಾರ ದಿವ್ಯವಾದುದಾದರೆ ಈತನ ಮೋಕ್ಷ ಶೃಂಗಾರ ಭವ್ಯವಾದುದು!

ಬರೆಯಬಾರದ ತಿದ್ದಬಾರದ ಕಡೆದರೆ | ದೊರೆಯಬಾರದ ರೂಪಿನಭವಾ ||
ಬರೆದು ಬಚ್ಚಣಿಸಿದಂತೆನ್ನೆದೆಯೊಳಗಿರು | ಗುರುವೆ ಚಿದಂಬರ ಪುರುಷ || ಆರೋಗಣೆ ಸಂಧಿ ೧೨೩ ||

ಪರಮಾತ್ಮನನ್ನು ಬರೆದು ಬಣ್ಣಿಸಲಾದೀತೆ? ತಿದ್ದಿ ಸರಿಪಡಿಸಲಳವೆ? ಕಡೆದು ಕಾಣಿಸಲು ಹಿಡಿತಕ್ಕೆ ಬಂದೀತೆ? ಇಂಥ ರೂಪಾತೀತನಾದ ಚಿದಂಬರ ಪುರುಷನನ್ನು ಬರೆದು ಬಚ್ಚಣಿಸಿದಂತೆ ರತ್ನಾಕರ ತನ್ನೆದೆಯಲ್ಲಿಟ್ಟುಕೊಂಡಿದ್ದಾನೆ. ಚಿದಂಬರ ಪುರುಷ, ಮಹಾಕವಿಯ ಹೃತ್ಕಮಲದಲ್ಲಿ ವಿರಾಜಮಾನನಾಗಿದ್ದಾನೆ. ಅದರಿಂದಲೇ ರತ್ನಾಕರನ ಹಂಸಕಲೆ ಅಪೂರ್ವಕಲೆಯಾಗಿದೆ!

ಭಗವಾನ್ ಜಿನಸೇನಾಚಾರ್ಯರ ಹಂಸತತ್ವ[16]

ಜೀವತತ್ವ ಮೊದಲಾದ ಒಂದೇ ವಸ್ತುವಿನಲ್ಲಿ ಏಕಾಗ್ರತೆಯಿಂದ ಮನಸ್ಸನ್ನು ನಿಲ್ಲಿಸುವುದು ಧ್ಯಾನವೆನಿಸುವುದು. ಸ್ಥಿರವಾದ ಪರಿಣಾಮಕ್ಕೆ ಧ್ಯಾನವೆಂದು ಹೆಸರು. ಚಂಚಲವಾದ ಪರಿಣಾಮಕ್ಕೆ ಅನುಪ್ರೇಕ್ಷಾ, ಚಿಂತಾ, ಷೋಡಷ ಭಾವನಾಯುಕ್ತ ಚಿತ್ತವೆಂದೂ ಹೇಳಬಹುದು. ಈ ಚಂಚಲವಾದ ಧ್ಯಾನವು ಛದ್ಮಸ್ಥರಲ್ಲಿ ಉಂಟಾಗುವುದು (ಹನ್ನೆರಡನೇ ಗುಣಸ್ಥಾನದವರೆಗೆ ಛದ್ಮಸ್ಥರೆಂದು ಹೆಸರು).[17]

ನಾನು ನನ್ನದು (ಅಹಂಕಾರ ಮಮಕಾರ) ಎಂಬ ಸಂಕಲ್ಪವಿಲ್ಲದೆ ಉದಾಸೀನನಾಗಿ ಧ್ಯಾನಿಸಲು ಸ್ವಸ್ವರೂಪದಲ್ಲಿರುವ ಸಮಸ್ತವಾದ ಜಗತ್ತತ್ವವು ಧ್ಯಾನಕ್ಕೆ ವಿಷಯವಾಗಿದೆ. ಇಷ್ಟಾನಿಷ್ಟ ವಸ್ತುವಿಷಯಕವಾದ ಪರಿಣಾಮದಿಂದ ದುರ್ಧ್ಯಾನವುಂಟಾಗುವುದು. ವಸ್ತುವಿನಲ್ಲಿ ಇಷ್ಟಾನಿಷ್ಟ ಗುಣಗಳಿಲ್ಲ; ಅಜ್ಞಾನಿಯು ಕಲ್ಪಿಸಿಕೊಂಡು ರಾಗದ್ವೇಷ ಪರಿಣಾಮಗಳಿಂದ ಕರ್ಮಗಳನ್ನು ಬಂಧಿಸಿಕೊಳ್ಳುವನು.

ಜನ ಶೂನ್ಯವಾದ ಮನೆಯಲ್ಲಾಗಲೀ, ಸುಡುಗಾಡಿನಲ್ಲಾಗಲೀ, ಜೀರ್ಣವಾದ ಉದ್ಯಾನದಲ್ಲಾಗಲೀ, ನದೀ ದಡದ ಮರಳಿನಲ್ಲಾಗಲಿ, ಪರ್ವತದ ತುದಿಯಲ್ಲಾಗಲೀ,

---

16 ಎ. ಶಾಂತಿರಾಜಶಾಸ್ತ್ರಿಗಳು ಸಂಪಾದಿಸಿರುವ ಪೂರ್ವ ಪುರಾಣದಿಂದ ವಿಷಯವನ್ನು ಸಂಗ್ರಹಿಸಿದೆ.

17 ಸ್ಥಿರಮಧ್ಯವಸಾನಂ ಯತ್ತದ್ಧ್ಯಾನಂ ಯಚ್ಚಲಾಚಲಂ | ಸಾನುಪ್ರೇಕ್ಷಾಥವಾ ಚಿಂತಾ ಭಾವನಾಚಿತ್ತಮೇವವಾ || XXI-೯

ಛದ್ಮಸ್ಥೇಷು ಭವೇದೇತಲ್ಲಕ್ಷಣಂ ವಿಶ್ವದೃಶ್ವನಾಂ |
ಯೋಗಾಸ್ರವಸ್ಯ ಸಂರೋಧೇ ಧ್ಯಾನತ್ವಮುಪಚರ್ಯತೇ || XXI-೧೦

ಗುಹೆಯಲ್ಲಾಗಲಿ, ಮರದಪೊಟರೆಯಲ್ಲಾಗಲಿ, ಪದ್ಮಾಸನ ಹಾಕಿ ಶರೀರವನ್ನು ಸಮನಾಗಿ, ಸರಳವಾಗಿ, ದೀರ್ಘವಾಗಿ ಮಾಡಿಕೊಂಡು, ನೆಲದಮೇಲೆ ಕುಳಿತು ಕಣ್ಣನ್ನು ಹೆಚ್ಚು ಮುಚ್ಚದೆ, ಹೆಚ್ಚು ತೆರೆಯದೆ, ಹೃದಯದಲ್ಲಾಗಲಿ, ಮಸ್ತಕದಲ್ಲಾಗಲೀ, ಹಣೆಯಲ್ಲಾಗಲೀ ನಾಭಿಯ ಮೇಲುಭಾಗದಲ್ಲಾಗಲಿ, ಕಂಠ ಮೊದಲಾದ ಬೇರೆ ಸ್ಥಾನಗಳಲ್ಲಾಗಲಿ ಮನಸ್ಸನ್ನು ಸ್ಥಿರಗೊಳಿಸಬೇಕು; ತನ್ನ ತೊಡೆಯಮೇಲೆ, ಎಡಗೈಯನ್ನು ಮೇಲ್ಮುಖವಾಗಿರಿಸಿ ಅದರ ಮೇಲೆ ಬಲಗೈಯನ್ನು ಎಡಗೈಗೆ ಸಮನಾಗಿರಿಸಿಕೊಳ್ಳಬೇಕು. ಪರೀಷಹಗಳಿಂದುಂಟಾದ ಬಾಧೆಗಳನ್ನು ವ್ಯಾಕುಲರಹಿತನಾಗಿ ಸಹಿಸಿ ಶಾಸ್ತ್ರದಲ್ಲಿ ಹೇಳಿರುವ ಅರ್ಥಕ್ಕನುಸಾರವಾಗಿ ಜೀವ ಮೊದಲಾದ ದ್ರವ್ಯಗಳ ಯಥಾರ್ಥಸ್ವರೂಪವನ್ನು ಧ್ಯಾನಿಸಬೇಕು. ಕಾಯೋತ್ಸರ್ಗವೂ, ಪದ್ಮಾಸನವೂ ಧ್ಯಾನಕ್ಕೆ ಯೋಗ್ಯವಾದ ಸುಖಾಸನಗಳಾಗಿವೆ. ಈ ಎರಡು ಆಸನಗಳು ವಿನಾ ಬೇರೆ ಆಸನಗಳೆಲ್ಲ ವಿಷಮಾಸನಗಳಾಗಿವೆ.[18]

ಉಪಸರ್ಗಾವಸ್ಥೆಯಲ್ಲಿರುವ ಯತಿ ನಿಂತು, ಕುಳಿತು, ಅಥವಾ ಮಲಗಿ ಧ್ಯಾನಿಸಬಹುದು. ಸರ್ವತ್ರ ಸಮದರ್ಶಿಯಾದ ಯತಿಗೆ ಹಗಲು ರಾತ್ರಿ ಸಂಧ್ಯಾ ಮೊದಲಾದ ಕಾಲನಿಯಮವಿಲ್ಲ. ಸರ್ವಕಾಲದಲ್ಲಿಯೂ ಧ್ಯಾನಮಾಡಬಹುದು, ಯೋಗಿಯು ಯಾವ ಕಾಲದಲ್ಲಿ ಯಾವ ದೇಶದಲ್ಲಿ ಯಾವ ಅವಸ್ಥೆಯಲ್ಲಿ ಧ್ಯಾನಮಾಡುವನೋ ಅದೇ ಕಾಲ, ಅದೇ ದೇಶ, ಅದೇ ಅವಸ್ಥೆಯು ಧ್ಯಾನಕ್ಕೆ ಯೋಗ್ಯವಾಗಿದೆ.[19] ಅಧ್ಯಾತ್ಮ

18 ಶೂನ್ಯಾಲಯೇ ಶ್ಮಶಾನೇ ವಾ ಜರದುದ್ಯಾನಕೇಽಪಿ ವಾ |
ಸರಿತ್ಪುಲಿನಗಿರ್ಯಗ್ರ ಗಹ್ವರೇ ದ್ರುಮ ಕೋಟರೇ || XXI-೫೭
ಪಲ್ಯಂಕಮಾಸನಂ ಬಧ್ವಾಸುನಿವಿಷ್ಟೋ ಮಹೀತಲೇ |
ಸಮಮೃಜ್ವಾಯತಂ ಬಿಭ್ರದ್ಗಾತ್ರ ಮಸ್ತಬ್ಧವೃತ್ತಿಕಂ || XXI-೬೦
ಸ್ವಪರ್ಯಂಕೇ ಕರಂ ವಾಮಂ ನ್ಯಸ್ಯೋತ್ತಾನತಲಂ ಪುನಃ
ತಸ್ಯೋಪರೀತರಂ ಪಾಣಿಮಪಿ ವಿನ್ಯಸ್ಯ ತತ್ಸಮಂ || XXI-೬೧
ಹೃದಿ ಮೂರ್ಧ್ನಿ ಲಲಾಟೇ ವಾ ನಾಭೇರೂರ್ಧ್ವಂ ಪರತ್ರ ವಾ |
ಸ್ವಾಭ್ಯಾಸವಶತಶ್ಚಿತ್ತಂ ನಿಧಾಯಾಧ್ಯಾತ್ಮ ವಿನ್ಮನಿಃ || XXI-೬೩

19 ಧ್ಯಾಯೇದ್ದ್ರವ್ಯಾದಿಯಾಥಾತ್ಮ್ಯಮಾಗಮಾರ್ಥಾನುಸಾರತಃ |
ಪರಿಷಹೋತ್ಥಿತಾ ಬಾಧಾಃ ಸಹಮಾನೋ ನಿರಾಕುಲಃ || XXI-೬೪
ವೈಮನಸ್ಯೇ ಚ ಕಿಂ ಧ್ಯಾಯೇತ್ತಸ್ಮಾದಿಷ್ಟಂ ಸುಖಾಸನಂ
ಕಾಯೋತ್ಸರ್ಗಶ್ಚ ಪರ್ಯಂಕಸ್ತತೋಽನ್ಯದ್ವಿಷಮಾಸನಂ || XXI-೭೧
ದೇಹಾವಸ್ಥಾ ಪುನರ್ಯೈವ ನ ಸ್ಯಾದ್ಧ್ಯಾನೋಪರೋಧಿನೀ |
ತದವಸ್ಥೋ ಮುನಿರ್ಧ್ಯಾಯೇತ್ ಸ್ಥಿತ್ವಾಸಿತ್ವಾಧಿಶಯ್ಯ ವಾ || XXI-೭೫

ಜ್ಞಾನಿಯಾದ ಮುನಿಯು ತನ್ನ ಜ್ಞಾನದೃಷ್ಟಿಯನ್ನು ಬಾಹ್ಯ ಪದಾರ್ಥಗಳ ಸಮೂಹದಿಂದ ತಪ್ಪಿಸಿ ಆತ್ಮನ ಕಡೆ ತಿರುಗಿಸಿ ತನ್ನ ಸ್ಮರಣೆಯನ್ನು ಆತ್ಮನಲ್ಲಿ ಸ್ಥಿರವಾಗಿರಿಸಿ ಧ್ಯಾನಮಾಡಬೇಕು.

ಒಂದೇ ವಸ್ತುವಿನಲ್ಲಿ ಸ್ಥಿರವೂ ಪ್ರಶಸ್ತವೂ ಆದ ಏಕಾಗ್ರಪರಿಣಾಮವೇ ಮುಕ್ತಿಗೆ ಸಾಧನವಾದ ಧ್ಯಾನವಾಗಿದೆ. ಅಂತಹ ಧ್ಯಾನವು ಧರ್ಮವೆಂದೂ ಶುಕ್ಲವೆಂದೂ ಎರಡು ತೆರನಾಗಿದೆ. ಧರ್ಮದಿಂದ ಚ್ಯುತವಾಗದಿರುವ ಪರಿಣಾಮಕ್ಕೆ ಧರ್ಮಧ್ಯಾನವೆಂದು ಹೆಸರು. ಉತ್ಪತ್ತಿ ನಾಶ ಸ್ಥಿರತ್ವ ಈ ಮೂರರಿಂದ ಕೂಡಿದ ವಸ್ತುವಿನ ನಿಜವಾದ ಸ್ವರೂಪಕ್ಕೆ ಧರ್ಮವೆಂದು ಹೆಸರು. ಆ ಧರ್ಮಧ್ಯಾನವು ಆಜ್ಞಾವಿಚಯ, ಅಪಾಯವಿಚಯ, ಸಂಸ್ಥಾನವಿಚಯ, ವಿಪಾಕವಿಚಯ ಹೀಗೆ ನಾಲ್ಕು ವಿಧವಾಗಿದೆ. ಜಿನೇಶ್ವರನ ಆಜ್ಞೆಯು ಪ್ರಮಾಣವೆಂದು ನಂಬಿ ಸೂಕ್ಷ್ಮವಾಗಿರುವ ಧರ್ಮಾಸ್ತಿಕಾಯ ಮೊದಲಾದ ಪದಾರ್ಥಗಳನ್ನು ಶಾಸ್ತ್ರದಲ್ಲಿ ಹೇಳಿರುವಂತೆ ಧ್ಯಾನ ಮಾಡಿದರೆ ಆಜ್ಞಾವಿಚಯ ಧ್ಯಾನವಾಗುವುದು. ಜನ್ಮ ಜರಾ ಮರಣ ಅಥವಾ ರಾಗ ದ್ವೇಷ, ಮೋಹಗಳಿಂದ ಕೂಡಿದ ಭವಸಾಗರದ ಅಪಾಯವನ್ನು ಚಿಂತಿಸಿದರೆ ಅಪಾಯವಿಚಯ ಧ್ಯಾನವಾಗುವುದು. ಶುಭಾಶುಭ ಕರ್ಮಗಳ ಪರಿಪಾಕದಿಂದುಂಟಾದ ಭವವನ್ನೂ ಅದರ ವಿಚಿತ್ರತೆಯನ್ನೂ ಚಿಂತಿಸಿದಾಗ ವಿಪಾಕವಿಚಯ ಧರ್ಮಧ್ಯಾನವಾಗುವುದು. ಲೋಕಾಕಾರ ಚಿಂತನೆಯು ಸಂಸ್ಥಾನ ವಿಚಯಧರ್ಮ ಧ್ಯಾನವಾಗುವುದು.[20] ಪ್ರಸನ್ನವಾದ ಮುಖಭಾವವೂ ಸೌಮ್ಯದೃಷ್ಟಿಯೂ ಧರ್ಮ ಧ್ಯಾನದ ಬಾಹ್ಯ ಚಿಹ್ನೆಗಳಾಗಿವೆ.

ನ ಚಾಹೋರಾತ್ರ ಸಂಧ್ಯಾದಿ ಲಕ್ಷಣಃ ಕಾಲಪರ್ಯಯಃ
ನಿಯತೋಸ್ತ್ಯಾಸ್ತಿದಿಧ್ಯಾಸೋಸ್ತದ್ಧ್ಯಾನಂ ಸಾರ್ವಕಾಲಿಕಂ || XXI-೮೧
ಯದಾ ಯತ್ರ ಯಥಾವಸ್ಥೋ ಯೋಗೀ ಧ್ಯಾನಮವಾಪ್ನುಯಾತ್ |
ಸ ಕಾಲಃ ಸ ಚ ದೇಶಃ ಸ್ಯಾದ್ಧ್ಯಾನೇವಸ್ಥಾ ಚ ಸಾ ಮತಾ || XXI-೮೩

[20] ಜೈನೀಂ ಪ್ರಮಾಣಯನ್ನಾಜ್ಞಾಂ ಯೋಗೀ ಯೋಗವಿದಾಂ ವಿರಃ |
ಧ್ಯಾಯೇತ್ ಧರ್ಮಾಸ್ತಿಕಾಯಾದೀನ್ಭಾವಾನ್ಸೂಕ್ಷ್ಮಾನ್ಯಥಾಗಮಂ || XXI-೧೪೦
ಆಜ್ಞಾವಿಚಯ ಏಷ ಸ್ಯಾದಪಾಯ ವಿಚಯಃ ಪುನಃ |
ತಾಪತ್ರಯಾದಿಜನ್ಮಾಬ್ಧಿಗತಾಪಾಯ ವಿಚಿಂತನಂ || XXI-೧೪೧
ಶುಭಾಶುಭ ವಿಭಕ್ತಾನಾಂ ಕರ್ಮಣಾಂ ಪರಿಪಾಕತಃ |
ಭಾವಾವರ್ತಸ್ಯ ವೈಚಿತ್ರ್ಯಮಭಿಸಂದಧತೋ ಮುನೇಃ || ೧೪೩
ವಿಪಾಕಶ್ಚ ದ್ವಿಧಾಮ್ನಾತಃ ಕರ್ಮಣಾಮಾಪ್ತ ಸೂಕ್ತಿಷು || ೧೪೪ ||
ವಿಪಾಕ ವಿಚಯಂ ಧರ್ಮ್ಯವಾಮನಂತಿ ಕೃತಾಗಮಾಃ |

ಶುಕ್ಲ ಧ್ಯಾನವು ಮುಕ್ತಿಗೆ ಸಾಧನವಾದುದು ; ಆ ಧ್ಯಾನವು ಪರಮಾಗಮದಲ್ಲಿ ಶುಕ್ಲವೆಂದೂ ಪರಮಶುಕ್ಲವೆಂದೂ ಎರಡು ತೆರನಾಗಿದೆ; ಮೊದಲನೆಯದು ಛದ್ಮಸ್ಥರಿಗೂ ಎರಡನೆ ಧ್ಯಾನವು ಕೇವಲಿಗಳಿಗೂ ಉಂಟಾಗುವುದು. ಹನ್ನೊಂದನೆ ಉಪಶಾಂತ ಕಷಾಯ ಗುಣಸ್ಥಾನದಲ್ಲಿಯೂ, ಹನ್ನೆರಡನೆಯ ಕ್ಷೀಣ ಕಷಾಯ ಗುಣಸ್ಥಾನದಲ್ಲಿಯೂ ಉಪಶಮ ಮತ್ತು ಕ್ಷಪಕ ಶ್ರೇಣಿಗಳಲ್ಲಿರುವ, ಅಪೂರ್ವ ಕರಣ, ಅನಿವೃತ್ತಿ ಕರಣ ಸೂಕ್ಷ್ಮಸಾಂಪರಾಯ ಗುಣಸ್ಥಾನಗಳಲ್ಲಿಯೂ, ಈ ಪ್ರಥಮಶುಕ್ಲ ಧ್ಯಾನವು ಲಭಿಸುತ್ತದೆ.[21] ಘಾತಿ ಚತುಷ್ಟಯವನ್ನು ಧ್ವಂಸಮಾಡಿದ ಸಯೋಗ ಕೇವಲಿ ಪರಮ ಶುಕ್ಲಕ್ಕೆ ಅಧಿಕಾರಿಯಾಗುವನು. ಮನೋವಾಕ್ಕಾಯ ಯೋಗಗಳನ್ನು ತಡೆಯುವುದಕ್ಕೋಸ್ಕರ ಕೇವಲಿ ಜಿನನು ಸ್ವಾಭಾವಿಕವಾಗಿ ಸಮುದ್ಘಾತ ವಿಧಿಯನ್ನು ಪ್ರಕಟ ಮಾಡುವನು. ಆ ಜೀವನು ಕ್ರಮವಾಗಿ ನಾಲ್ಕು ಸಮಯಗಳಲ್ಲಿ ದಂಡ, ಕವಾಟ, ಪ್ರತರ, ಪೂರಣ ಎಂಬ ನಾಲ್ಕು ಅವಸ್ಥೆಗಳನ್ನು ಹೊಂದಿ ಲೋಕವನ್ನೆಲ್ಲ ವ್ಯಾಪಿಸುವನು. ಸರ್ವವ್ಯಾಪಕನೂ ಸಮಸ್ತ ಜೀವಿಗಳಿಗೆ ಹಿತಕರನೂ, ಸರ್ವಜ್ಞನೂ ಲೋಕಪೂರ್ಣನೂ ಆಗುವನು. ಆ ಸರ್ವಜ್ಞನು ಲೋಕಪೂರಣವನ್ನು ಮಾಡಿ ಮತ್ತೆ ಕ್ರಮವಾಗಿ ಹೋದಮಾರ್ಗದಲ್ಲಿ ಹಿಂದಿರುಗುವನು. ಆಯುಷ್ಯ ಸ್ಥಿತಿಯು ಅಂತರ್ಮುಹೂರ್ತವಿದ್ದು ಇತರ ಮೂರು ಅಘಾತಿ ಕರ್ಮಗಳ ಸ್ಥಿತಿಯು ಅದಕ್ಕಿಂತ ಹೆಚ್ಚಾಗಿದ್ದರೆ ಕೇವಲಿಯು ಕ್ರಮವಾಗಿ ಒಂದೊಂದು ಸಮಯದಲ್ಲಿ, ದಂಡ, ಕವಾಟ, ಪ್ರತರ, ಲೋಕ ಪೂರಣಗಳೆಂಬ ಯೋಗವನ್ನು ಮಾಡಿ ಲೋಕವ್ಯಾಪಕನಾಗಿ ಪುನಃ ಲೋಕಪೂರಣದಿಂದ ಪ್ರತರ, ಕವಾಟ, ದಂಡ ಈ ಅವಸ್ಥೆಗಳಿಗೆ ಉಪಸಂಹರಿಸಿಕೊಳ್ಳುವನು ! ಇದಕ್ಕೆ ಕೇವಲ ಸಮುದ್ಘಾತವೆಂದು ಹೆಸರು.[22]

ಸಂಸ್ಥಾನ ವಿಚಯಂ ಪ್ರಾಹುರ್ಲೋಕಾಕಾರಾನುಚಿಂತನಂ |
ತದಂತರ್ಭೂತ ಜೀವಾದಿತತ್ತ್ವಾನ್ವೀಕ್ಷಣ ಲಕ್ಷಿತಂ || ೧೮೮ ||

21 ಪ್ರಶಾಂತ ಕ್ಷೀಣ ಮೋಹೇಷು ಶ್ರೇಣ್ಯೋಃ ಶೇಷಗುಣೇಷು ಚ |
ಯಥಾಮ್ನಾಯಮಿದಂ ಧ್ಯಾನಮಾಮನಂತಿ ಮನೀಷಿಣಃ || ೧೮೩ ||

22 ಸ್ನಾತಕಃ ಕರ್ಮವೈಕಲ್ಯಾತ್ಕೈವಲ್ಯಂ ಪದಮಾಪಿವಾನ್ |
ಸ್ವಾಮೀ ಪರಮಶುಕ್ಲಸ್ಯ ದ್ವಿಧಾ ಭೇದಮುಪೇಯುಷಃ || ೧೮೮ ||
ಸ ಹಿ ಯೋಗೆ ನಿರೋಧಾರ್ಥಮುದ್ಯತಃ ಕೇವಲೀ ಜಿನಃ |
ಸಮುದ್ಘಾತ ವಿಧಿಂ ಪೂರ್ವಮಾವಿಃ ಕುರ್ಯಾನ್ನಿ ಸರ್ಗತಃ || ೧೮೯ ||
ದಂಡಮುಚ್ಚೈಃ ಕವಾಟಂ ಚ ಪ್ರತರಂ ಲೋಕಪೂರಣಂ |
ಚತುರ್ಭಿಃ ಸಮಯೈಃ ಕುರ್ವನ್ಲೋಕವಾಪೂರ್ಯ ತಿಷ್ಠತಿ || ೧೯೦ ||
ತದಾ ಸರ್ವಗತಃ ಸಾರ್ವಃ ಸರ್ವವಿತ್ಪೂರಕೋ ಭವೇತ್ |
ತದಂತೇ ರೇಚಕಾವಸ್ಥಾಮಧಿತಿಷ್ಠನ್ಮಹೀಯತೇ || ೧೯೧ ||

ಈ ಸಮುದ್ಘಾತಾವಸ್ಥೆಯಲ್ಲಿ ಅಘಾತಿಕರ್ಮಗಳ ಅಸಂಖ್ಯಾತಭಾಗವೂ ಅಶುಭಕರ್ಮಗಳ ಅನುಭಾಗ ಬಂಧದ ಅನಂತಭಾಗವೂ ನಾಶವಾಗುವುದು.

ಆಯುಷ್ಯಸ್ಥಿತಿಯು ಅಂತಮುಹೂರ್ತವುಳಿಯುವಾಗ ಯೋಗರೂಪವಾದ ಆಸ್ರವವನ್ನು ತಡೆಯಲು ಕೇವಲಿಯು ಬಾದರ (ಸ್ಥೂಲ) ಕಾಯಯೋಗದ ಆಶ್ರಯದಿಂದ ವಾಙ್ಮನೋಯೋಗಗಳನ್ನು ಸೂಕ್ಷ್ಮಮಾಡಿ ಪುನಃ ಆ ಮನೋಯೋಗಗಳನ್ನು ಸೂಕ್ಷ್ಮಮಾಡುವುದಕ್ಕೆ ಆಶ್ರಯವಾದ ಬಾದರಕಾಯಯೋಗಗಳನ್ನು ಸೂಕ್ಷ್ಮಗೊಳಿಸಿ ಆ ಧ್ಯಾನದ ನಿಯತಕಾಲಪರ್ಯಂತ ವಿನಾಶರಹಿತವಾದ ಸೂಕ್ಷ್ಮಕ್ರಿಯಾಧ್ಯಾನವನ್ನು ಮಾಡುವನು; ಆಮೇಲೆ ಮನೋವಾಕ್ಕಾಯಯೋಗಗಳನ್ನೂ ಕರ್ಮಗಳ ಆಸ್ರವವನ್ನೂ ತಡೆದು ಅಯೋಗಿ ಕೇವಲಿ ಗುಣಸ್ಥಾನವರ್ತಿಯಾಗಿ ನಾಶರಹಿತವಾದ ಸಮುಚ್ಛಿನ್ನ ಕ್ರಿಯೆಯೆಂಬ ಪರಮ ಶುಕ್ಲಧ್ಯಾನದ ಪರಾಕಾಷ್ಟತೆಗೇರುವನು.[23] ಜಿನೇಶ್ವರನು ಅತ್ಯಂತ ನಿರ್ಮಲವಾದ ಸಮುಚ್ಛಿನ್ನ ಕ್ರಿಯೆಯೆಂಬ ಶುಕ್ಲಧ್ಯಾನವನ್ನು ಅಂತರ್ಮುಹೂರ್ತ ಕಾಲದವರೆಗೆ ಧ್ಯಾನಿಸಿ ಸಮಸ್ತ ಕರ್ಮವನ್ನೂ ನಾಶಮಾಡುವನು. ಆಗ ಕರ್ಮದ ಲೇಪವಿಲ್ಲದವನೂ ಶರೀರ ರಹಿತನೂ ಶುದ್ಧನೂ ಬಾಧಾರಹಿತನೂ ಸೂಕ್ಷ್ಮನೂ ಅವ್ಯಕ್ತನೂ (ಇಂದ್ರಿಯ ಗೋಚರನು) ವ್ಯಕ್ತನೂ (ಸ್ವಸ್ವರೂಪಪ್ರಾಪ್ತಿಯುಳ್ಳವನೂ) ಆದ ಅಯೋಗಕೇವಲಿಯು ಕರ್ಮಗಳಿಂದ ಪಾರಾಗಿ ಲೋಕದ ತುಟ್ಟತುದಿಯಲ್ಲಿ ನೆಲಸುವನು. ಕರ್ಮಮಲರಹಿತನಾದ ಆ ಶುದ್ಧಾತ್ಮನು ಮೇಲೆ ಹೋಗುವ ಸ್ವಭಾವವಿರುವುದರಿಂದ ಒಂದೇ ಸಮಯದಲ್ಲಿ ಲೋಕದ ತುದಿಗೆ ಲಂಘಿಸಿ ಸಿದ್ಧನಾಗಿ ವಿರಾಜಿಸುವನು![24]

ಧ್ಯಾನದ ಫಲವೇ ಅನಂತ ಸುಖ; ಈ ಸುಖವನ್ನು ಪಡೆಯುವುದಕ್ಕಾಗಿ ದಿಗಂಬರ ಯತಿಗಳು ತಪಸ್ಸು ಮಾಡುವರು. ಉಳಿದ ಎಲ್ಲ ತಪಸ್ಸುಗಳೂ ಯೋಗಗಳೂ ಧ್ಯಾನಕ್ಕೇನೆ ಸಾಮಗ್ರಿಗಳು. ಅದರಿಂದ ಮೋಕ್ಷಾಪೇಕ್ಷಿಗಳು ಧ್ಯಾನಾಭ್ಯಾಸದಲ್ಲಿ

---

[23] ಧರ್ಮಧ್ಯಾನದಂತೆ ಶುಕ್ಲಧ್ಯಾನವನ್ನೂ ನಾಲ್ಕು ವಿಭಾಗ ಮಾಡಿರುವರು.
ತತೋ ನಿರುದ್ಧಯೋಗಃ ಸನ್ನಯೋಗೀ ವಿಗತಾಸ್ರವಃ |

[24] ಸಮುಚ್ಛಿನ್ನಕ್ರಿಯಂ ಧ್ಯಾನಮನಿವರ್ತಿ ತದಾ ಭಜೇತ್ || ೧೯೬ ||
ಅಂತರ್ಮುಹೂರ್ತಮಾತನ್ವಂಸ್ತದ್ಧ್ಯಾನಮತಿ ನಿರ್ಮಲಂ |
ವಿಧೂತಾಶೇಷಕರ್ಮಾಂಶೋ ಜಿನೋ ನಿರ್ವಾತ್ಯನಂತರಂ || ೧೯೭ ||
ನಿರ್ಲೇಪೋ ನಿಷ್ಕಲಃ ಶುದ್ಧೋ ನಿರ್ವ್ಯಾಬಾಧೋ ನಿರಾಮಯಃ |
ಸೂಕ್ಷ್ಮೋ ವ್ಯಕ್ತಸ್ತಥಾವ್ಯಕ್ತೋ ಮುಕ್ತೋ ಲೋಕಾಂತಮಾವಸನ್ || ೧೯೯ ||
ಊರ್ಧ್ವಂ ವ್ರಜ್ಯಾಸ್ವಭಾವತ್ವಾತ್ಸಮಯೇನೈವ ನೀರಜಾಃ |
ಲೋಕಾಂತಂ ಪ್ರಾಪ್ಯ ಶುದ್ಧಾತ್ಮಾ ಸಿದ್ಧಶ್ಚೂಡಾಮಣೀಯತೇ || ೨೦೦ ||

ಮತ್ತೆ ಮತ್ತೆ ತೊಡಗಬೇಕು. ಉತ್ತಮ ಪರಿಣಾಮದಲ್ಲಿ ಮನಸ್ಸನ್ನು ದೃಢವಾಗಿರಿಸುವುದು ಅಥವಾ ಪಂಚಪರಮೇಷ್ಠಿಗಳ ಸ್ಮರಣೆಯು ಸಮಾಧಿ ಎನಿಸುವುದು. ಮನಃಪ್ರಸನ್ನತೆಯುಂಟಾಗುವ ಪರಮಾನಂದವೆ ಸರ್ವಶ್ರೇಷ್ಠ ಸಂಪದ!

ಬಾಹುಬಲಿಯ ತಪಸ್ಸು

ಧ್ಯಾನತತ್ವವನ್ನು ಭಗವಾನ್ ಜಿನಸೇನಾಚಾರ್ಯರು ಶಾಸ್ತ್ರೋಕ್ತವಾಗಿ ಪಾಂಡಿತ್ಯಪೂರ್ಣವಾಗಿ ವಿವರಿಸಿರುವರು. ಇವರ ವಿವರಣೆ ಕ್ಲಿಷ್ಟವೂ ಬುದ್ಧಿಗಮ್ಯವೂ ಆಗಿ ಸಾಮಾನ್ಯ ಓದುಗರಿಗೆ ಹಿಡಿಸುವುದು ಕಷ್ಟ. ಆತ್ಮಾನಂದ ಸಾಧಕವಾದ ಧ್ಯಾನವೂ ಆಚಾರ್ಯರ ಕೈಲಿ ಕಟ್ಟುನಿಟ್ಟಾದ ಶಾಸ್ತ್ರವಾಗಿ ಹೋಗಿದೆ. ಈ ಧ್ಯಾನವನ್ನು ಆಚರಿಸಿದ ಯೋಗಿಯ ಅನುಭವವನ್ನು ಹೇಗೆ ವಿವರಿಸಿರುವರೊ ನೋಡೋಣ.

ಬಾಹುಬಲಿ ಒಂದು ವರ್ಷದವರೆಗೆ ಪ್ರತಿಮಾಯೋಗದಲ್ಲಿ ನಿಂತನು. ದೃಢವ್ರತಿಯಾಗಿ ಉಪವಾಸಿಯಾಗಿ ಒಂದುವರ್ಷ ನಿಂತಲ್ಲೇ ನಿಂತು ಧ್ಯಾನಾಸಕ್ತನಾದಾಗ ಮೈಮೇಲೆ ಬಳ್ಳಿಗಳಡರಿ ಬಳಸಿದವು; ಸುತ್ತಲೂ ಹುತ್ತಗಳೆದ್ದುವು; ಸರ್ಪಗಳು ಈ ಯೋಗಿಯ ಸುತ್ತ ಓಡಾಡಿ ಚೇಷ್ಟೆಮಾಡಿದವು[25] ಬಾಹುಬಲಿಯು ತಲೆಗೂದಲು ಬೆಳೆದು ಬೊಂತೆಯಾಗಿರಲು ಕೃಷ್ಣಸರ್ಪಗಳು ಜೋಲಾಡುವ ಚಂದನ ವೃಕ್ಷದಂತೆ ಕಂಗೊಳಿಸಿದನು.

ತಪಸಿನ ಜ್ವಾಲೆಯಿಂದ ಬಾಹುಬಲಿಯ ದೇಹ ಕೃಶವಾಗುವುದರ ಜೊತೆಗೆ ಆತನ ಕರ್ಮಗಳೂ ಕೃಶವಾದುವು. ಕಠಿಣತಪವೆಸಗುವ ಈ ಯೋಗಿಗೆ ಯಾವ ಉಪದ್ರವವೂ ಉಂಟಾಗಲಿಲ್ಲ. ಗಾಳಿಗೆ ಅದರದೆ ಬೇಗೆಗೆ ಅಳುಕದೆ, ಮಳೆಗೆ ನಡುಗದೆ ನೆಟ್ಟನೆ ನಿಂತಿದ್ದನು. ಬಂದ ಪರೀಷಹಗಳನ್ನೂ ತಾಳ್ಮೆಯಿಂದ ಸಹಿಸಿದನು. ತಪಸ್ಸಿನ ಪ್ರಭಾವದಿಂದ ನಿಗಿ ನಿಗಿ ಹೊಳೆದನು. ಒಂದೊಂದಾಗಿ ಯೋಗಮಹಿಮೆಗಳು ಲಭಿಸಿದವು. ಮೂರು ಲೋಕವನ್ನು ನಡುಗಿಸುವ ಶಕ್ತಿ ಆವಿರ್ಭವಿಸಿತು. ಎಂಟು ವಿಧವಾದ ಮಹಿಮೆಗಳುದಯಿಸಿದವು[26] ಉಪವಾಸಿಯಾದ ಈ ಬಾಹುಬಲಿಗೆ ತಪಸ್ಸಿನಶಕ್ತಿಯಿಂದಲೇ ಅಮೃತ ಸ್ರವಿಸುವ ಋದ್ಧಿಯಿಂಟಾಯಿತು. ಮನೋಬಲ, ವಾಗ್ಬಲ, ಕಾಯ

[25] ಸ ಶಂಸಿತವ್ರತೋಽನಾಶ್ವಾನ್ವನವಲ್ಲೀ ತತಾಂತಿಕಃ |
ವಲ್ಮೀಕರಂಧ್ರನಿಃಸರ್ಪತ್ಸರ್ಪೈರಾಸೀದ್ಭಯಾನಕಃ || ೩೬-೧೦೭
ಶ್ವಸದಾವಿರ್ಭವದ್ಭೋಗ ಭುಜಂಗಶಿಶುಜೃಂಭಿತೈಃ |
ವಿಷಾಂಕುರೈರಿವೋಪಾಂಘ್ರಿಸರೋಜೇ ವೇಷ್ಟಿತೋಽಭಿತಃ || ೩೬-೧೦೮

[26] ಆಪತ್ತ್ವಹರದ ಛರ್ದಿ, ಉಗುಳುವಿಕೆ, ಬೆವರಿನಿಂದುಂಟಾದ ಮಲ ಇವೇ ಮೊದಲಾದ ತಪೋಮಹಿಮೆಗಳಿಂದ ಪ್ರಾಣಿಗಳಿಗೆ ಉಪಕಾರಿಯೂ, ಔಷಧರ್ಧಿ ಹೊಂದಿರುವನೂ ಆದನು.

ಬಲ ಮುಂತಾದ ಋದ್ಧಿಗಳುಂಟಾದುವು. ಅಕ್ಷೀಣಾಲಯಋದ್ಧಿ ಮತ್ತು ಅಕ್ಷೀಣ ಮಹಾಭೋಜನ ಋದ್ಧಿಗಳುಂಟಾದವು.[27]

ದೀಪದ ಕಾಡಿಗೆ ಹೊರಟುಹೋಗುವಂತೆ ಧ್ಯಾನದಿಂದ ಕರ್ಮರಜಸ್ಸು ನಶಿಸಿತು. ತಪೋವನದಲ್ಲಿ ಗರುಡೋದ್ಗಾರಮಣಿಯ ಕಾಂತಿ ಹರಡಿದಂತೆ ಬಾಹುಬಲಿಯ ದೇಹ ಕಾಂತಿ ವ್ಯಾಪಿಸಿತು. ಪರಸ್ಪರ ಬದ್ಧದ್ವೇಷಿಗಳಾದ ಮೃಗಗಳು ಹಗೆತನವನ್ನು ಮರೆತು ಯೋಗಿಯ ಸುತ್ತ ನೆರೆದು ಅನ್ಯೋನ್ಯವಾಗಿದ್ದವು. ಆನೆಗಳು ತಾವರೆಗಳನ್ನು ತಂದು ಬಾಹುಬಲಿಯ ಪಾದಕ್ಕರ್ಪಿಸಿದವು. ಯೋಗಿಯ ಪಾದಕ್ಕರ್ಪಿಸಿದ ನೀಲೋತ್ಪಲ ಗಳಂತೆ ಹೆಡೆಬಿಚ್ಚಿದ ಕೃಷ್ಣಸರ್ಪಗಳು ಕಾಣಿಸಿದವು. ಖೇಚರರ ವಿಮಾನಗಳು ಈತನ ತಪಃಪ್ರಭಾವದಿಂದ ಕೀಲಿಸಿದುದರಿಂದ ಅವರು ಕೆಳಗಿಳಿದು ಈ ಮಹಾ ಯೋಗಿಗೆ ನಮಸ್ಕರಿಸಿ ಹೋಗುತ್ತಿದ್ದರು.

ಯೋಗಿಯಾದ ಬಾಹುಬಲಿ ಶುಕ್ಲಧ್ಯಾನವೆಂಬ ನಿರ್ವಿಕಲ್ಪ ಸಮಾಧಿಯಲ್ಲಿ ತಲ್ಲೀನನಾದನು. ಭರತೇಶ ಈ ಎಡೆ ಬಂದು ಬಾಹುಬಲಿಯನ್ನು ಪೂಜಿಸಿದ್ದಾದ ಮೇಲೆ ಇದ್ದಬದ್ದ ಮನಃಕ್ಲೇಶ ಹೋಗಿ ಕೇವಲ ಜ್ಞಾನ ಉಂಟಾಯಿತು.

ಬಾಹುಬಲಿಯ ತಪಸ್ಸಿನಲ್ಲೂ ಭಗವಾನ್ ಜಿನಸೇನಾಚಾರ್ಯರು ಸಿದ್ಧಾಂತದ ಕಡೆಗೆ ಒಲಿದಿರುವರು. ಈ ಯೋಗಿಯ ತಪಃಪ್ರಭಾವವನ್ನು ಶಾಸ್ತ್ರೋಕ್ತವಾಗಿ ಚಿತ್ರಿಸಿರುವರು. ತಪಸ್ವಿಯ ಆಂತರ್ಯದ ಪರಿಣಾಮವನ್ನೂ ಪಾಂಡಿತ್ಯದಿಂದ ವಿವರಿಸಿರು ವರು. ಹೊರಗಾದ ಅವಾಂತರವನ್ನು ಕಾವ್ಯಮಯವಾಗಿ ಚಿತ್ರಿಸಿದರೇ ಹೊರತು ಬಾಹುಬಲಿಯ ಆಂತರಿಕ ಪರಿಣಾಮವನ್ನು ರಸವತ್ತಾಗಿ ಬಣ್ಣಿಸಿಲ್ಲ. ಜಿನಸೇನಾ ಚಾರ್ಯರು ತಮ್ಮ ಬಾಳಿನ ಬಹುಭಾಗವನ್ನು ಜೈನಾಗಮಗಳಿಗೆ ಧವಳ ಭಾಷ್ಯ ಬರೆಯುವುದರಲ್ಲೇ ಕಳೆದವರು. ಜೈನಸಿದ್ಧಾಂತವೆಲ್ಲ ಇವರಿಗೆ ಕರತಲಾಮಲಕ.[28] ಬಾಳಿನ ಕೊನೆಯ ಭಾಗದಲ್ಲಿ ಜಿನಸೇನರು ಪೂರ್ವಪುರಾಣದ ರಚನೆಗೆ ಕೈ ಹಾಕಿದರು. ಇವರ ನಾಡಿಯು ತುಂಬ ಸಿದ್ಧಾಂತವೇ ಹರಿದಾಡುತ್ತಿತ್ತು. ಅದರಿಂದಲೇ ಅವಕಾಶ ಸಿಕ್ಕಿದಾಗಲೆಲ್ಲಾ ಕಾವ್ಯದ ನಡುವೆ ಸಿದ್ಧಾಂತವನ್ನು ಬೆರಸಿದ್ದಾರೆ. ಧ್ಯಾನತತ್ವದ ಬಗ್ಗೆ ಇವರಿತ್ತ ವಿವರಣೆಯಲ್ಲಿ ಲವಲೇಶವಾದರೂ ಪ್ರತಿಭೆ ಇಣುಕಿಲ್ಲ, ಜೊತೆಗೆ ಕಲ್ಪನೆ ಕೊನರಿಲ್ಲ; ಆದರೆ ಜಿನಸೇನಾಚಾರ್ಯರನ್ನು ಕೇವಲ ಪಂಡಿತರೆಂದು ಭಾವಿಸಿದರೆ

---

[27] ಮುನಿಗೆ ಆಹಾರ ದಾನವಿತ್ತವರ ಮನೆಯಲ್ಲಿ ಭೋಜನಸಾಮಗ್ರಿ ಕಡಿಮೆಯಾಗದಿರುವಂಥ ಋದ್ಧಿಗೆ ಅಕ್ಷೀಣ ಮಹಾಭೋಜನ ಋದ್ಧಿ ಎನ್ನುವರು.

[28] ನೃಪತುಂಗನ ಆಸ್ಥಾನದಲ್ಲಿ ಜಿನಸೇನರೂ, ಇವರ ಗುರುಗಳಾದ ವೀರಸೇನರೂ ಇದ್ದರು. ಇವರಿಬ್ಬರೂ ಕಲೆತು ಧವಳ ಭಾಷ್ಯಗಳನ್ನು ನಿರ್ಮಿಸಿದರು.

ಅಕ್ಷಮ್ಯ ಅಪರಾಧವಾಗದಿರದು. ಈ ಆಚಾರ್ಯರು ಅಪ್ರತಿಮ ಪ್ರತಿಭಾಶಾಲಿಗಳು.[29] ಯೋಗದ ಅನುಭವವಿಲ್ಲವೆನ್ನೋಣವೆಂದರೆ ಜೈನಾಚಾರ್ಯರಲ್ಲಿ ಇವರು ಅಗ್ರಗಣ್ಯರು! ಇವರಾದ ಮೇಲೆ ಬಂದ ಆಚಾರ್ಯರೂ ಕವಿಗಳೂ ಇವರನ್ನು ಭಗವಾನ್ ಜಿನಸೇನಾ ಚಾರ್ಯರೆಂದೇ ಕೊಂಡಾಡಿರುವರು. ಇವರು ಮಹಾಕವಿಯೆಂತೋ ಅಂತೇ ಮಹಾ ಯೋಗಿಗಳೂ ಅಹುದು. ಆದರೆ ಇವರ ಒಲವೆಲ್ಲ ಸಿದ್ಧಾಂತದ ಕಡೆಯಾಗಿ ಪೂರ್ವ ಪುರಾಣದಲ್ಲಿ ಎಷ್ಟೋ ವೇಳೆ ಕಾವ್ಯ ಹಿಂದೆ ಬಿದ್ದು ಒಮ್ಮೊಮ್ಮೆ ಪೂರ್ಣ ಮರೆಯಾಗಿ ಸಿದ್ಧಾಂತ ತನ್ನ ಪಾರುಪತ್ಯವನ್ನು ನಡೆಸಿದೆ. ಅಧ್ಯಾಯ ಅಧ್ಯಾಯಗಳೇ ಸಿದ್ಧಾಂತದ ಆಕ್ರಮಣಕ್ಕೆ ತುತ್ತಾಗಿವೆ.

ರತ್ನಾಕರ ಪಾಂಡಿತ್ಯದಲ್ಲಿ ಯಾರಿಗೂ ಕಡಿಮೆ ಇಲ್ಲ; ಸಿದ್ಧಾಂತದಲ್ಲೂ ಆತ ಯಾರನ್ನೂ ಬಿಟ್ಟುಕೊಡುವುದಿಲ್ಲ. ಆದರೆ ಕಾವ್ಯದ ನಂದನವನದಲ್ಲಿ ಸಿದ್ಧಾಂತದ ಸ್ಥಾನವೇನೆಂಬುದನ್ನು ರತ್ನಾಕರ ಮಹಾಕವಿ ಚೆನ್ನಾಗಿ ಬಲ್ಲ. ಪಾಂಡಿತ್ಯದ ಪೆಡ ಸಾಗಲಿ, ಸಿದ್ಧಾಂತದ ಕ್ಲಿಷ್ಟತೆಯಾಗಲೀ ಭರತೇಶ ವೈಭವದಲ್ಲಿ ಕಣ್ಣಲ್ಲಿ ಕಣ್ಣಿಟ್ಟು ಹುಡುಕಿದರೂ ದೊರೆಯಲಾರದು. ಇದರಲ್ಲಿ ಏನೇ ಬರಬೇಕಾದರೂ ಭರತೇಶನಂತೆ ಸರಸಿಯಾಗಿ ಬರಬೇಕು; ರಾಗರಸಿರಕವಾಗಿ ಬೆಡಗು ಬಿನ್ನಾಣದಿಂದ ವೈಯಾರವಾಗಿ ಬರಬೇಕು. ಇಲ್ಲಿನ ಭೋಗ ರಾಗರಸಿಕತೆಯಾದರೆ ಇಲ್ಲಿನ ಯೋಗವೋ ವೀತರಾಗ ರಸಿಕತೆಯಾಗಿದೆ! ರತ್ನಾಕರ ಮಹಾ ಯೋಗಿಯೂ ಅಹುದು. ಯೋಗಿಯೆಂದಾ ಕ್ಷಣ ಕಠಿಣ ವ್ರತಗಳಿಂದ ಕಾಯಕ್ಲೇಶಗೊಳಿಸಿ ಹೆಣಗಾಡಿದನೆಂದು ಭಾವಿಸಿದರೆ ಈತನ ವಿಚಾರದಲ್ಲಿ ತಪ್ಪಾಗುವುದು.

ಹರವರ ನುಡಿಯಿಲ್ಲದಾನಿರುತಿರ್ದೆನುಂ | ಡುರುಳಿ ಭಟ್ಟಾರಕರಂತೆ ||
ನೆರಪಿ ಹೊತ್ತಗೆಗಳ ಹೊರೆಗಟ್ಟಿ ಭವಸೇನ | ಗುರುಗಳಂತವರಾಡುತಿಹರು ||
ಸರ್ವರಮೋಕ್ಷ ಸಂಧಿ ೧೦೩.

ಮೈಯೊಳಿರ್ದಾತ್ಮನ ಬತ್ತಲೆಮಾಡಿ ನಾ | ನೊಯ್ಯನೀಕ್ಷಿಸಿದರೆ ತಾವು ||
ಮೈಯ ಬತ್ತಲೆಮಾಡಿ ಮನವ ಕತ್ತಲೆಮಾಡಿ | ಹುಯ್ಯಲಿಡುತ ಸುತ್ತುತಿಹರು ||
ಸ. ಮೋ. ಸಂ. ೧೦೪.

ರಸಿಕನ ಕೈಲಿ ಜೀವನದ ಯಾವ ಮುಖವಾದರೂ ರಸಿಕತೆಯಿಂದಲೇ ಕಂಗೊಳಿಸು ತ್ತದೆ. ಯೋಗವನ್ನು ರತ್ನಾಕರ ಅನುಭವಿಸಿ ತನ್ನ ಅನುಭವವನ್ನು ರಸಿಕತೆಯಿಂದ ಬಣ್ಣಿಸಿ ಓದುಗರ ಹೃದಯವನ್ನು ತಣಿಸಿರುವನು. ಎಂಥಾ ಕ್ಲಿಷ್ಟ ಸಮಸ್ಯೆಯನ್ನಾದರೂ

---

[29] ಮಹಾಕಾವ್ಯವಾದ ಪೂರ್ವಪುರಾಣವೇ ಇದಕ್ಕೆ ಸಾಕ್ಷಿ.

ವಿರಸಕ್ಕೆ ಬಿಡದೆ ರತ್ನಾಕರನ ಭರತೇಶ ಸರಸದಿಂದಲೇ ಬಗೆ ಹರಿಸುತ್ತಿದ್ದಂತೆ ರತ್ನಾಕರನೂ ಕೂಡ ಎಂಥ ಸಂದರ್ಭವಾದರೂ ರಸವತ್ತಾಗಿ ರಮಣೀಯವಾಗಿ ಬಣ್ಣಿಸಿ ಕೃತಕೃತ್ಯನಾಗಿದ್ದಾನೆ. ರತ್ನಾಕರ ಅಧ್ಯಾತ್ಮರಸಿಕನಾದ ಯೋಗಿಯೇ ಹೊರತು ಬೇಗುದಿಗೊಳ್ಳುವ ಸಿದ್ಧಾಂತ ಭಾಸ್ಕರನಲ್ಲ! ಸಿದ್ಧಾಂತವಾಗಲಿ ಅಧ್ಯಾತ್ಮವಾಗಲಿ ರತ್ನಾಕರನ ಕೈಸೋಕಿದಾಕ್ಷಣ ಪ್ರತಿಭಾಪೀಠವನ್ನೇರಿ ಕಲ್ಪನಾ ಕಿರೀಟವನ್ನು ಧರಿಸಿ ಕಂಗೊಳಿಸದಿರದು!

ಜಿ. ಬ್ರಹ್ಮಪ್ಪ

ಕಾವ್ಯಾವಲೋಕನ

ವನಮಾಲೆ (ಕವನಸಂಕಲನ) ಕವಿ—ಅಮೃತ, ಸೋಮೇಶ್ವರ; ಪ್ರಕಾಶಕರು: ಲೇಖಕರೇ. ಪುಟಗಳು ೫೦ ; ಬೆಲೆ, ರೂ. ೦-೧೨-೦.

ರೊಮ್ಯಾಂಟಿಕ್ ಹಾಗೂ ನವ್ಯ ಪಂಥಗಳ ಘರ್ಷಣೆಯ ಪ್ರಭಾವದಿಂದ ಒಳ್ಳೆಯ ಕವನಸಂಗ್ರಹಗಳೇ ಬರದಿರುವ ಇಂದಿನ ನಿರಾಶೆಯ ಪರಿಸ್ಥಿತಿಯಲ್ಲಿ ಸುಂದರವಾದ ನಾಲ್ಕಾರು ಕವಿತೆಗಳು ಕಣ್ಣ ಮುಂದೆ ಸುಳಿದಾಗ ಎಷ್ಟೋ ಸಂತೋಷವಾದೀತು. ಅಭಿವ್ಯಕ್ತಿಯ ಮಾರ್ಗ ಯಾವುದಾದರೂ ಆಗಿರಲಿ, ಮನಸ್ಸಿನ ಭಾವಗಳನ್ನು ಪ್ರಾಮಾಣಿಕವಾಗಿ, ತೀವ್ರವಾಗಿ ವ್ಯಕ್ತಪಡಿಸಿದರೆ ಸಾಕು. ಈ ದೃಷ್ಟಿಯಿಂದ ಪ್ರಸ್ತುತ ಕವನ ಸಂಚಯ—'ವನಮಾಲೆ'—ಒಂದು ಸ್ವಾಗತಾರ್ಹವಾದ ಆಶಾಕಿರಣ. ಇದರಲ್ಲಿ ಮೂವತ್ತೈದು ಕವನಗಳಿವೆ. ಇವುಗಳ ಪ್ರಮುಖ ಲಕ್ಷಣಗಳೆಂದರೆ ಭಾವಾಭಿವ್ಯಕ್ತಿಯಲ್ಲಿ ಪ್ರಾಮಾಣಿಕತೆ ಹಾಗೂ ಸ್ಪಷ್ಟತೆ.

ಎನ್ನ ಹೃದಯುವ ಹಾಲಿನಾಗರಗೈದು ಪವಡಿಸು ದಿವ್ಯವೇ
ಮನದ ಸರಸಿಯೊಳರಳು ಬೃಹದರವಿಂದವಾಗಿಯೆ ಭವ್ಯವೇ
ಹೊರಳುವುಸಿರೊಡವೆರೆದು ಚಣಚಣಕೇರಿ ಬಾ ನವಭಾವವೇ
ಬರಡು ಕೊರಡನು ಪ್ರೇಮಸ್ಪರ್ಶದಿ ಚಿಗುರಿಸೆಲೆ ಚೈತನ್ಯವೇ—

ಎಂಬ ಕವಿಯ ಸರಳಸುಂದರವಾದ ಪ್ರಾರ್ಥನೆಯೇ ಅವರ ಕಾವ್ಯದ ಚೆಲುವನ್ನು ಪರಿಚಯ ಮಾಡಿಕೊಡುತ್ತದೆ.

'ಇಲ್ಲಿ ಲಂಗರನಿಕ್ಕಿ ನಿಲ್ಲದಿರು ನಾವಿಕನೆ' ಮತ್ತು 'ಬುಗುರಿ' ಎಂಬ ಕವನಗಳಲ್ಲಿ ಮೂಡಿರುವ ಪ್ರತಿಮೆಗಳು ಸ್ವಲ್ಪಮಟ್ಟಿಗಾದರೂ ಪರಿಣಾಮಕಾರಿಯಾಗಿವೆ. ಕೆಲವು ಸಾಲುಗಳನ್ನು ನೋಡಬಹುದು :

ಇಲ್ಲಿ ಲಂಗರನಿಕ್ಕಿ ನಿಲ್ಲದಿರು ನಾವಿಕನೆ
ಅಪರಿಚಿತ ನೀನರಿಯೆ ತಾಣವಿದನು.
ತಳುವದಿಲ್ಲಿಂ ಹೊರಡು ಪಟವ ಬಿಡಿಸು,
ನಿನ್ನ ನಿಲ್ದಾಣಕ್ಕೆ ಪಯಣ ಬೆಳಸು.

('ಇಲ್ಲಿ ಲಂಗರನಿಕ್ಕಿ . . .')

ಬುಗುರಿಯೊಂದು ತಿರುಗುತಿದೆ ನಿಂತಲ್ಲಿ ನಿಲ್ಲದೆ,
ಆರು ಸುತ್ತಿ ಬಿಸುಟರೇನೊ ರಭಸದಿಂದ ಹರಿದಿದೆ!
('ಬುಗರಿ')

'ಆ ಹೂವ ಕೀಳದಿರು', 'ಪತಗವಾಗಿಯೆ ಬಾ', 'ಆಟದ ಕಳದಲ್ಲಿ'—ಈ ಕವನಗಳು ತಮ್ಮ ಬಂಧುರತೆಯಿಂದ ನಮ್ಮ ಮನಸ್ಸನ್ನು ಗೆದ್ದುಕೊಳ್ಳುತ್ತವೆ. 'ಒಂದು ದುರಂತ', 'ಕಲಾವಿದನ ಕೈ'—ಇವುಗಳ ಅಂತ್ಯ ಚಕಿತಗೊಳಿಸುತ್ತದೆ. 'ಏಕಾಕಿನಿ' ಮತ್ತು 'ಆಹುತಿ'ಗಳಲ್ಲಿ ಕವಿಯ ಸಾಮಾಜಿಕ ಅನುಕಂಪ ವ್ಯಕ್ತವಾಗಿದೆ. 'ಹಿತ್ತಲ ಗಿಡ', 'ಗೊಂಬೆಯಾಟ'—ಮುಂತಾದ ಕವಿತೆಗಳಲ್ಲಿ ವಿಡಂಬನಕ್ಕೆ ಶಕ್ತಿ ಸಾಲದು. ಶ್ರೀ ಗೋವಿಂದ ಪೈಯವರನ್ನು ಕುರಿತ 'ಕಂಡೆ ಕಾವ್ಯರ್ಷಿಯಂ' ಎಂಬ ಕವನ ಸಾರ್ಥಕವಾಗಿದೆ. 'ಮಿಾಸಲ ಮಾಲೆ' ಎಂಬ ಪದ್ಯ ದಾಸರ ಕೀರ್ತನೆಗಳನ್ನು ಸ್ಮೃತಿಗೆ ತರುತ್ತದೆ.

ಏಕೆ ಕದಂಬದ ಮರದಡಿ ನಿನ್ನಯ
ನಿರುಪಮ ಮುರಲಿಯ ನುಡಿಯಿಸಿದೆ;
ಕನಸಿನೊಳಲೆಯುವ ಎದೆಯಲಿ ಭಾವೋ-
ದ್ವೇಗದ ನಾಡಿಯ ಮಿಡಿಯಿಸಿದೆ—

ಎಂದು ಆರಂಭವಾಗುವ 'ಬೃಂದಾವನದ ವೇಣುವಿನೋದ' ಎಂಬ ಅನುವಾದಿತ ಕವನವೂ (ಮೂಲ ಸರೋಜಿನಿ ದೇವಿಯವರದು) ಮೆಚ್ಚುಗೆಗೆ ಯೋಗ್ಯ.

ಕಲ್ಲೆದೆಯ ನೀಡಯ್ಯ ಓ ತಂದೆ ಈ ಜಗದ
ಕಣ್ಣೀರ ಕಥೆಯ ನಾ ಕಾಣಲಾರೆ

ಮೊದಲಾದ ಕಡೆಗಳಲ್ಲಿ ಅಪೂರ್ವತೆ ತೋರಿಬರದಿದ್ದರೂ ಭಾವಗಳು ಕವಿ ಹೃದಯದಿಂದ ನೈಸರ್ಗಿಕವಾಗಿ, ಸ್ವಾನುಭವಪ್ರೇರಿತವಾಗಿ ಸ್ಫುರಿಸಿರುವುದು ಸುಸ್ಪಷ್ಟ.

ಒಟ್ಟಿನಲ್ಲಿ 'ವನಮಾಲೆ' ಒಂದು ಉತ್ತಮವಾದ ಕವನ ಸಂಗ್ರಹ; ಇದರ ಒಂದೊಂದು ಕವನವೂ ವನಸುಮದಂತೆ ಅಕೃತಕ, ಸೌರಭಯುಕ್ತ, ಹರ್ಷದಾಯಕ.

ಬಾಳದೀಪಾವಳಿ (ಕವನಗಳು) ಕವಿ—ಎಲ್. ಆರ್. ಹೆಗಡೆ; ಪ್ರಕಾಶಕರು: ಗ್ರಾಮ ಜೀವನ ಕಾರ್ಯಾಲಯ, ಕುಮಟಾ; ಪುಟಗಳು ೮೦; ಬೆಲೆ, ರೂ. ೧.೦.

ಉತ್ತರ ಕನ್ನಡದ ಜನಜೀವನವನ್ನು ಚಿತ್ರಿಸುವ ಕವನಗಳು ಈ ಸಂಕಲನದಲ್ಲಿವೆ. ಇದರ ಶೈಲಿ ಜಾನಪದ ಶೈಲಿ; ಕುಣಿತಕ್ಕೆ ಹೊಂದಿಕೊಳ್ಳುವ, ವೇಷಕಟ್ಟಿ ಅಭಿನಯ

ಪೂರ್ವಕವಾಗಿ ಹಾಡಲು ಯೋಗ್ಯವಾದ ಗೀತೆಗಳಿವು. ಹಾಡು, ಕತೆ, ಸಂಭಾಷಣೆ—ಮುಂತಾದ ವಿವಿಧ ರೂಪಗಳಲ್ಲಿ ಗ್ರಾಮ ಜೀವನದ ಹಲವು ದೃಶ್ಯಗಳನ್ನು ಕವಿ ಇಲ್ಲಿ ಹಿಡಿದಿಟ್ಟಿದ್ದಾರೆ. ಹಾಸ್ಯ, ವಿಡಂಬನ, ಲಘುವರ್ಣನೆ—ಇವನ್ನೆಲ್ಲ ಪ್ರಕೃತಸಂಗ್ರಹದಲ್ಲಿ ಕಾಣಬಹುದು.

> **ತಲೆಮೇಲೆ ಒಂದು ಹಸುರು ರುಮಾಲು**
> **ಹೆಗಲಮೇಲೆ ಒಂದು ಹಳದಿಯ ಶಾಲು**
> **ಬಣ್ಣದ ಗರಿಗಳು ಕಿವಿಗಳ ಮ್ಯಾಲು**
> **ಕೈಯಲಿ ಹಿಡಿದಾನ ಬಲೆಚಾಪೆ ಕೋಲು**
> **ಹೊಂಟಾನ ತೇರ ಜಾತ್ರೀಗೆ.**
>
> (' ಅಂಬೀರ ಸೊಂಯ ')

ಮೊದಲಾದ ಕಡೆ ಚಿತ್ರಕಶಕ್ತಿ ಸೊಗಸಾಗಿ ಹೊಮ್ಮಿದೆ. ' ಮಳೆಬಂತೊ ಮಳೆರಾಯ, ' ' ಅಂಬೀರ ಸೊಂಯ '—ಮುಂತಾದುವು ವೃಂದಗೀತೆಗಳಾಗಲು ತಕ್ಕವು. ಉದಾಹರಣೆಗೆ ಕೆಲವು ಪಂಕ್ತಿಗಳು :

> **ಮಳೆಬಂತೊ ಮಳೆರಾಯ ಬಳಿಗಿರೊ ನನರಾಯ**
> **ಚೆಲುವಿನಾ ಹೊಸಪ್ರಾಯಾ,**
> **ರ್‍ಯಾಯಾ | ಚೆಲುವಿನ ಹೊಸಪ್ರಾಯಾ**
> **ಮಳೆಬಂತು ಮಳೆರಾಣಿ ಚೆಲುವಿನ ನನರಾಣಿ**
> **ಒಲವಿನ ಹೊಸಪ್ರಾಣಿ**
> **ರಾಣೀ | ಒಲವಿನ ಹೊಸಪ್ರಾಣೀ**

' ತಂದಾನೋ ತಾನೋ ' ಎಂಬ ಪುಟ್ಟ ರೂಪಕವನ್ನು ಹಿಮ್ಮೇಳದ ಸಹಾಯದಿಂದ ರಂಗದ ಮೇಲೆ ಯಶಸ್ವಿಯಾಗಿ ಅಭಿನಯಿಸಬಹುದು.

ವಿನೋದವೇ ಇಲ್ಲಿನ ಬಹುಪಾಲು ಕವನಗಳ ಜೀವಾಳ. ಕವಿಯ ಉದ್ದೇಶವೂ ಅದೇ—

> ವಧುವಿಲ್ಲದೆ ಕೂಡ ಮದುವೆ ನಡೆಯಲು ಬಹುದು
> ದಲ್ಲಾಳಿಯಿಲ್ಲದ ಮದುವೆಯೆಲ್ಲಿಹುದು ?
>
> (' ಮದುವೆ ದಲ್ಲಾಳಿ ')
>
> ಗಂಡು ಎನ್ನುವ ಪ್ರಾಣಿ ಹೆಂಡಿರನು ಬಯಸುವುದು
> ನೂರು ವರ್ಷದ ಮೇಲು ಇದು ನಿಶ್ಚಯ !
>
> (' ಭಟ್ಟರ ಜ್ಯೋತಿಷ ')

ಭಟ್ಟರ ಗೊರಕೆಯ ಶಬ್ದವ ಕೇಳಿ
ಬಿಕ್ಕಿಗು ಹೆದರಿಕೆಯಾಗುವುದು.—

ಮುಂತಾದ ಸಾಲುಗಳಲ್ಲಿ ತಮಾಷೆಯ ಚೆಲ್ಲಾಟವನ್ನು ನೋಡಬಹುದು. 'ಹಾರಣ್ಣಾ ಭಂಗನೆ', 'ನಶ್ಯ', 'ಮದುವೆ ಮಾರ್ಕೆಟ್ಟಿನಲಿ', 'ಕರೀಬಂಟನ ಕಾಳಗ'—ಈ ಕವನಗಳಲ್ಲಿ ನಕ್ಕುನಗಿಸುವ ಕಲೆ ಉಂಟು.

'ಸಿಳ್ಳು ಹಾಕು ಬರುವೆ ನಾನು' ಎಂಬ ಭಾಷಾಂತರಿತ ಕವಿತೆ (ಬರ್ನ್ಸ್ ಕವಿಯದು) ಮೂಲಕ್ಕೆ ಸರಿದೂಗುತ್ತದೆ. ಅದರ ಆರಂಭದ ಸಾಲುಗಳು:

ಸಿಳ್ಳು ಹಾಕು ಬರುವೆ ನಾನು ನನ್ನ ಗೆಣೆಗಾರ!
ತಂದೆ ತಾಯಿ ಎಲ್ಲರೂನು ಹುಚ್ಚರಾಗಿ ಹೋದರೂನು
ಸಿಳ್ಳು ಹಾಕು ನಾನು ಭರುವೆ . . .!

ಈ ಸಂಗ್ರಹದ ಅನೇಕ ಪದ್ಯಗಳಲ್ಲಿ ನಿರಂತರವಾಗಿ ಬರುವ ಪ್ರಾಸಪರಂಪರೆ ಬೇಸರವನ್ನು ತರುತ್ತದೆ.

ಆಲಸ್ಯ ನಿನಗೆ ಶಾಪ
ಅಜ್ಞಾನ ನಿನ್ನ ಪಾಪ
ದಾರಿದ್ರ್ಯ ನಿನ್ನ ತಾಪ—

ಎನ್ನುವಂಥ ಎಡೆಗಳಲ್ಲಿ ಪ್ರಾಸಕ್ಕೆ ಔಚಿತ್ಯವಿಲ್ಲ. 'ಮಳ್ಳ ಹೆಣ್ಣ ಜಾತಿ ನೀನು' 'ಗುಡುಗಿನ ತಾಳಕ್ಕ ಬಿರುಗಾಳಿ ಮ್ಯಾಳಕ್ಕ'—ಮುಂತಾದ ಸಾಲುಗಳಲ್ಲಿ ಬೇಂದ್ರೆಯವರ ಪ್ರಭಾವ ಗಾಢವಾಗಿದೆ. ವಿಡಂಬನವು ಅಲ್ಲಲ್ಲಿ ವಿಸ್ತೃತವಾದುದರಿಂದ ಮೊನಚನ್ನು ಕಳೆದುಕೊಂಡಿದೆ.

ಈ 'ಬಾಳ ದೀಪಾವಳಿ'ಯನ್ನು ನೋಡಿದ ಮೇಲೆ ಉಳಿಯುವುದು ಅತೃಪ್ತಿಯೇ: ಇಲ್ಲಿ ವಿನೋದದ ರಂಗು ದಟ್ಟವಾಗಿದೆಯಾದರೂ, ಈ ಕವನಗಳಿಗೆ ಆಳವೇನೂ ಇಲ್ಲ. ಇಲ್ಲಿರುವುದು ಜೀವನದ ನೊರೆಯ ಮೇಲೆ ತೇಲಾಡುವ ಪ್ರವೃತ್ತಿ. ಆದುದರಿಂದ ಈ ಕವಿತೆಗಳನ್ನು ಓದುವಾಗ ಉತ್ತಮ ಮಟ್ಟದ ರಸಾನುಭವವನ್ನು ನಿರೀಕ್ಷಿಸುವುದು ತಪ್ಪಾದೀತು; ಅಭಿನಯಸಹಿತವಾಗಿ ಹಾಡಿದಾಗ ಇವುಗಳಿಂದ ಪ್ರಯೋಜನವುಂಟು. ಅದೇನೇ ಇರಲಿ, ಹೆಗಡೆಯವರ ಕವಿ ಮನೋಧರ್ಮದ ಬಗ್ಗೆ ಸಾಕಷ್ಟು ಭರವಸೆಯನ್ನು ಈ ಸಂಕಲನ ಮೂಡಿಸುತ್ತದೆ. ಕವಿ ತಮ್ಮ ಪ್ರತಿಭೆಗೆ ಇಲ್ಲಿ ತಕ್ಕ ಅವಕಾಶವನ್ನು ಕಲ್ಪಿಸಿಕೊಂಡಿಲ್ಲವೆನಿಸುತ್ತದೆ. ಮುನ್ನುಡಿಯಲ್ಲಿ

ಶ್ರೀ. ದ. ರಾ. ಬೇಂದ್ರೆಯವರಾಡಿರುವಂತೆ "ಹೆಗಡೆಯವರದು 'ಸರ್ವಜ್ಞ'ನಂಥ ಸಾಮಾಜಿಕ ದೃಷ್ಟಿ" ಇದ್ದೀತು ; ಅದಕ್ಕೆ ಇಲ್ಲಿ ಗೋಚರಿಸಿರುವುದು ಬದುಕಿನ ಒಂದು ಮುಖ ಮಾತ್ರ.

—ಸಿ. ಪಿ. ಕೆ.

* * *

ಸತೀಗೀತೆ—(ಪದ್ಯ ಸಂಗ್ರಹ) ಮೂಲ ಲೇಖಕಿ: ಸಂಚಿ ಹೊನ್ನಮ್ಮ ; ಸಂಪಾದಕರು : ಕ. ನರಸಿಂಹಶಾಸ್ತ್ರಿ ; ಪುಟಗಳು ೧೩೩, ಬೆಲೆ : ಒಂದು ರೂಪಾಯಿ.

"ಪೆಣ್ಣಲ್ಲವೇ ತಮ್ಮನೆಲ್ಲ ಪಡೆದ ತಾಯಿ, ಪೆಣ್ಣಲ್ಲವೇ ಪೊರೆದವಳು, ಪೆಣ್ಣ ಪೆಣ್ಣೆಂದೇತಕೆ ಬೀಳುಗಳೆವರು, ಕಣ್ಣು ಕಾಣದ ಗಾವಿಲರು."—ಇದು ಸ್ತ್ರೀಯ ಹಕ್ಕು ಬಾಧ್ಯತೆಗಳಿಗಾಗಿ ಹೋರಾಡುತ್ತಿರುವ ಆಧುನಿಕ ಮಹಿಳಾನಾಯಕಿಯ ಘೋಷಣೆ ಯಲ್ಲ, ನೂರಾರು ವರ್ಷಗಳ ಹಿಂದೆ "ಸ್ತ್ರೀ ಧರ್ಮ"ವನ್ನು ಸಾರಿರುವ ಹೊನ್ನಮ್ಮನ ಸವಾಲು. ಹೊನ್ನಮ್ಮ ಸ್ತ್ರೀಯ ಲೌಕಿಕ ಸ್ಥಾನಮಾನಗಳಿಗೆ ಹೋರಾಡುವ ಗಡಸು ಗಾರ್ತಿಯಲ್ಲ, ನಾರಿಯ ಆಂತರಿಕ ಶೀಲ ಸಂಪತ್ತೇ ಅವಳ ಸರ್ವಸ್ವ ಎಂದು ನುಡಿಯುವ ವಿನಯಮೂರ್ತಿ. ಹೆಣ್ಣನ್ನು ಕೀಳು ದೃಷ್ಟಿಯಿಂದ ನೋಡುವವರಿಗೆ ಮೇಲಿನ ಸವಾಲನ್ನು ಹಾಕಿದ ಹೊನ್ನಮ್ಮ ಮುಂದುವರೆದು 'ಲಕ್ಷ್ಮಿ, ಸರಸ್ವತಿ, ಸೀತೆ, ರುಕ್ಮಿಣಿಯರನ್ನು ಹಿರಿಯರು ಶ್ರೀ ಹರಿಯ ಜೊತೆಯಲ್ಲಿಟ್ಟು ಪೂಜಿಸುತ್ತಾರೆ. ಯೋಚಿಸಿ ನೋಡುವುದಾದರೆ ಅವರೆಲ್ಲ ಹೆಣ್ಣಲ್ಲವೇ ?' ಎಂದು ಪ್ರಶ್ನಿಸುತ್ತಾಳೆ.

ಪುರುಷನ ಸರಿಸಮಾನತೆಯನ್ನು ಕೇಳುತ್ತಿರುವ ಆಧುನಿಕ ಮಹಿಳೆಯರಿಗೂ ಮತ್ತು ಹೊನ್ನಮ್ಮನಿಗೂ ಬಹಳ ವ್ಯತ್ಯಾಸವಿದೆ. ಹೆಂಗಸು ಗಂಡಸಿಗೆ ಯಾವ ದೃಷ್ಟಿ ಯಿಂದಲೂ ಕಡಿಮೆಯಿಲ್ಲ ಎಂದು ಇವರೆಂದರೆ ಹೆಂಗಸು ಗಂಡಸಿನ ಸಮ ಎಂದು ತಿಳಿದು ನಡೆಯಬಾರದು, ಎಂದು ಅವಳೆನ್ನುತ್ತಾಳೆ. ಲೋಕದ ಎಲ್ಲಾ ಎಡೆಯಲ್ಲೂ ತಮ್ಮ ಸ್ಥಾನವಿದೆ ಎಂದು ಇವರೆಂದರೆ ಸ್ತ್ರೀಯ ಸ್ಥಾನವನ್ನು ಮನೆಗೆ ಮಾತ್ರ ಮಿತಿಗೊಳಿಸಿ "ಮನೆಯೆ ಧರ್ಮಾಶ್ರಮ ಮನೆವಾಳ್ತಿಯೆ ಧರ್ಮವಿನಿಯನೂಳಿಗ ದೇವಪೂಜೆ" ಎಂದು ಹೊನ್ನಮ್ಮ ಹೇಳಿದ್ದಾಳೆ.

"ಸತೀಗೀತೆ" ಎನ್ನುವ ಹೆಸರಿನಿಂದ ರೂಪಗೊಂಡಿರುವ ಈ ಕೃತಿ ಸಂಚಿ ಹೊನ್ನಮ್ಮನ "ಹದಿಬದೆಯ ಧರ್ಮ"ದ ಸಂಗ್ರಹ: "ಹದಿಬದೆಯ ಧರ್ಮ" ಭಾರತೀಯ ನಾರೀಧರ್ಮವನ್ನು ಸಾರುವ ಕೆಲವೇ ಗ್ರಂಥಗಳಲ್ಲಿ ಒಂದು. ಇದನ್ನು ಹೆಚ್ಚು ಸಂಸ್ಕೃತ ಸೇರಿರದ, ಸರಳವಾದ, ಸೊಗಸಾದ ತಿಳಿಗನ್ನಡದಲ್ಲಿ ರಚಿಸಿ ಹೊನ್ನಮ್ಮ ಕನ್ನಡಿಗರ ಮೆಚ್ಚಿಕೆಗೆ ಪಾತ್ರಳಾಗಿದ್ದಾಳೆ. ಇದರಲ್ಲಿ ಸ್ತ್ರೀಯ ದಾಂಪತ್ಯ

ಧರ್ಮಕ್ಕೆ ಸಂಬಂಧಿಸಿದ ಅನೇಕ ವಿಚಾರಗಳನ್ನು ಹೇಳಿದ್ದಾಳೆ. ಇಲ್ಲಿ ಕೇವಲ ಸ್ತ್ರೀಗೆ ಮಾತ್ರ ಸಂಬಂಧಿಸಿದ ವಿಚಾರಗಳೇ ಅಲ್ಲದೆ ಗಂಡುಗಳೂ ಗಮನಿಸಬೇಕಾದ ಅನೇಕ ವಿಷಯುಗಳಿವೆ. ಹೊನ್ನಮ್ಮ ಹೇಳಿರುವ ಧರ್ಮ, ಬುದ್ಧಿವಾದ, ಸಲಹೆಗಳು ಅತ್ಯಮೂಲ್ಯವಾದುವು. ಅವಳು ಹೇಳಿರುವಂತೆ ನಡೆದರೆ ಜೀವನ ಪಾವನವಾದೀತು. ಬಾಳು ಬೆಳಕಾದೀತು, ಬದುಕು ಬಂಗಾರವಾದೀತು.

ಹೊನ್ನಮ್ಮನ ಮಿತಿಮೀರಿದ ಸೌಜನ್ಯ, ಅಪರಿಮಿತವಾದ ಲೋಕಾನುಭವ, ಅಪಾರವಾದ ಜೀವನ ಪರಿಪಕ್ವತೆಗಳಿಗೆ ಅವಳ ಕಾವ್ಯ ಕನ್ನಡಿಯಾಗಿದೆ.

ಮೂಲದ ದೊಡ್ಡ ಗ್ರಂಥವನ್ನು ಓದಲು ವೇಳೆಯಿಲ್ಲದವರಿಗಾಗಿ, ಅದನ್ನು ಓದಿ ಅರ್ಥಮಾಡಿಕೊಳ್ಳಲು ಶಕ್ತಿಯಿಲ್ಲದವರಿಗಾಗಿ ಇಂಥ ಗ್ರಂಥವನ್ನು ಸಂಗ್ರಹಿಸುವ ಆವಶ್ಯಕತೆ ಬಹಳ ದಿವಸಗಳಿಂದಲೂ ಇತ್ತು. ಆ ಕೆಲಸವನ್ನು ಮಾಡಿದ್ದಾರೆ ನರಸಿಂಹಶಾಸ್ತ್ರಿಗಳು.

ಈ ಸಂಗ್ರಹದಲ್ಲಿ ಅವರು ಈಗಿನ ಕಾಲಕ್ಕೆ ಅನ್ವಯಿಸದ ಅನೇಕ ಪದ್ಯಗಳನ್ನೂ, ಪುನರುಕ್ತಿಯಿಂದ ಒಂದೇ ವಿಷಯವನ್ನು ತಿಳಿಸುವ ಕೆಲವು ಪದ್ಯಗಳನ್ನೂ ತೆಗೆದು ಹಾಕಿ ಓದುಗರಿಗೆ ತುಂಬ ಅನುಕೂಲಮಾಡಿದ್ದಾರೆ. ಕನ್ನಡದ ಗೃಹಿಣಿಯರೆಲ್ಲ ವಿದ್ಯಾವಂತೆಯರಾಗಿಲ್ಲ; ಕೆಲವರು ವಿದ್ಯಾವಂತೆಯರಾಗಿದ್ದರೂ ಈ ಕಾವ್ಯವನ್ನು ಓದಿ ಅರ್ಥಮಾಡಿಕೊಳ್ಳುವ ಶಕ್ತಿಯನ್ನು ಪಡೆದುಕೊಂಡಿಲ್ಲ. ಅಂಥ ಎಲ್ಲರಿಗೂ ಅರ್ಥವಾಗುವಂತೆ ಸಂಪಾದಕರು ಪದ್ಯದ ಭಾವವನ್ನು ಅಡಿ ಟಿಪ್ಪಣಿಯಲ್ಲಿ ಹೊಸಗನ್ನಡದಲ್ಲಿ ವಿವರಿಸಿದ್ದಾರೆ. ಇವರ ಅಡಿಟಿಪ್ಪಣಿ ಬಹಳ ಉಪಕಾರಿಯಾಗಿದೆ. ಕೆಲವು ಕಡೆ ಪದ್ಯದ ಭಾವಕ್ಕಿಂತ ಅದರ ವಿವರಣೆ ಸೊಗಸಾಗಿದೆ. ಈ ಸಂಗ್ರಹ ವಿದ್ವಾಂಸರಿಗಾಗಿ ಅಲ್ಲ, ಓದಿರುವ ನಾಲ್ಕು ಜನಗಳಿಗಾಗಿ ಅಲ್ಲ, ಸ್ವಲ್ಪ ವಿದ್ಯೆಯನ್ನು ಮಾತ್ರ ಕಲಿತು ಭಾರತೀಯ ಗೃಹಜ್ಯೋತಿಗಳೆನಿಸಿರುವ ಸಾವಿರಾರು ಸಾಮಾನ್ಯ ನಾರೀಮಣಿಗಳಿಗೆ.

ಒಂದೇ ವಿಷಯಕ್ಕೆ ಸಂಬಂಧಿಸಿ ಮೂಲದಲ್ಲಿ ಚೆಲ್ಲಾಪಿಲ್ಲಿಯಾಗಿರುವ ಅನೇಕ ಪದ್ಯಗಳನ್ನು ವಿಂಗಡಿಸಿ, ಒಂದುಕಡೆ ಒಂದೇ ಹೆಸರಿನ ಚಿಕ್ಕ ಪ್ರಕರಣದಲ್ಲಿ ಸೇರಿಸಿದ್ದಾರೆ. ಪ್ರಕರಣಗಳನ್ನು ಜೋಡಿಸುವುದರಲ್ಲೂ ಒಂದು ಕ್ರಮವನ್ನಿಟ್ಟುಕೊಂಡು ಶ್ರಮವಹಿಸಿ ಚೆನ್ನಾಗಿ ಜೋಡಿಸಿದ್ದಾರೆ.

ಮೊದಲ ಕೆಲವು ಪ್ರಕರಣಗಳಲ್ಲಿ ಹೆಣ್ಣು ಮಕ್ಕಳಿಗೆ ಸಂಬಂಧಿಸಿದ ಎಲ್ಲಾ ವಿಚಾರಗಳನ್ನೂ, ಬುದ್ಧಿವಾದವನ್ನೂ ಅನುಕ್ರಮವಾಗಿ ಹೇಳಿ, ಕೊನೆಗೆ ಸತಿಯರ ದಿನಚರಿಯನ್ನೂ ಕೂಡ ಕೂಲಂಕಷವಾಗಿ ಹೊನ್ನಮ್ಮ ಹೇಳಿರುವುದನ್ನು ತೋರಿಸಿದ್ದಾರೆ.

ಮೂಲದಲ್ಲಿನ ಅತಿಮುಖ್ಯವಾದ ಮತ್ತು ಸಾರವತ್ತಾದ ಎಲ್ಲ ಪದ್ಯಗಳೂ ಸಂಗ್ರಹದಲ್ಲಿ ಇವೆಯಾದರೂ, ಕವಿತಾದೃಷ್ಟಿಯಿಂದ, ವಿಷಯದ ಸೊಗಸಿನಿಂದ ಶೋಭಿಸುವ ಇನ್ನೂ ಕೆಲವು ಪದ್ಯಗಳನ್ನು ಬಿಡಬಾರದಾಗಿತ್ತು ಎನಿಸುತ್ತದೆ. ಇದಕ್ಕೆ ಬಹುಶಃ ಕಾವ್ಯದ ಕವಿತಾ ಸೌಂದರ್ಯಕ್ಕೆ ಗಮನಕೊಡದೆ, ಈಗಿನ ಸ್ತ್ರೀಯರಿಗೆ ಅನ್ವಯಿಸುವ ವಿಷಯಗಳ ಕಡೆಗೆ ಮಾತ್ರ ಸಂಗ್ರಹಕಾರರ ಗಮನ ಹರಿದಿರುವುದು ಕಾರಣವಿರಬಹುದೆಂದು ತೋರುತ್ತದೆ.

ಅಂತೂ ಸ್ತ್ರೀಯರಿಗೆ ತುಂಬ ಉಪಯುಕ್ತವಾದ ಗ್ರಂಥ: ಹೆಣ್ಣುಳ್ಳ ಪ್ರತಿಯೊಂದು ಮನೆಯಲ್ಲೂ ಇರಲೇಬೇಕಾದ ಪುಸ್ತಕ ಎನ್ನುವುದು ನಿಜ.

—ಕೆ. ನಾಗೇಂದ್ರಪ್ಪ

***

ಮದುವಣಗಿತ್ತಿ (ಕಿರುಕಾದಂಬರಿಗಳು-ಕಥೆಗಳು)—ಮೂಲ ಲೇಖಕರು: ಆಂಟನ್ ಚೆಖಾವ್; ಅನುವಾದ: ಶ್ರೀಮತಿ ಎಚ್. ವಿ. ಸಾವಿತ್ರಮ್ಮ; ಪ್ರಕಾಶಕರು: ಕಾವ್ಯಾಲಯ, ಮೈಸೂರು. ಪುಟಗಳು ೨೯೨; ಬೆಲೆ, ರೂ. ೩-೨೫.

ವಿಶ್ವ ಸಾಹಿತ್ಯದ ಶ್ರೇಷ್ಠ ಕೃತಿಗಳಲ್ಲಿ ರಷ್ಯನ್ ಲೇಖಕರು ಹಿರಿದಾದ ಸ್ಥಾನವನ್ನೂ ಮನ್ನಣೆಯನ್ನೂ ಗಳಿಸಿಕೊಂಡಿದ್ದಾರೆ. ಪ್ರಚಾರಾತ್ಮಕವೆನ್ನಬಹುದಾದರೂ ದೀನ-ದಲಿತರ ನೋವು ನಲಿವು, ಕಷ್ಟಕಾರ್ಪಣ್ಯಗಳನ್ನು ಹೃದಯಂಗಮವಾಗಿ, ಕಲಾತ್ಮಕವಾಗಿ ಸೃಜಿಸುವಲ್ಲಿ ತಮ್ಮ ಗುರಿಯನ್ನು ಅವರು ಸಾರ್ಥಕಗೊಳಿಸಿಕೊಂಡಿದ್ದಾರೆ. ಗಾರ್ಕಿ, ಪುಷ್ಕಿನ್, ಟಾಲ್‌ಸ್ಟಾಯರ ಅಮರ ಕೃತಿಗಳು ಈಗಾಗಲೇ ಕನ್ನಡದಲ್ಲಿ ಹೊರಬಂದಿದ್ದು ರಷ್ಯಾದ ಮಹಾಕೃತಿಗಳ ಅಗಾಧಪರಿಚಯವನ್ನು ನಮಗೆ ಮಾಡಿಕೊಟ್ಟಿವೆ.

ಪ್ರಸ್ತುತ ಕೃತಿ ವಿಶ್ವವಿಖ್ಯಾತ ರಷ್ಯನ್ ಸಾಹಿತಿ ಆಂಟನ್ ಚೆಖಾವ್‌ನದು. ಕ್ರಾಂತಿಗೆ ಮುನ್ನ ಬಾಳಿ ಬದುಕಿದ ಚೆಖಾವ್ ಎಳೆತನದಲ್ಲೆ ಕಡುಬಡತನದ ಬೇಗೆಗೆ ಸಿಲುಕಿ ವಿದ್ಯಾಭ್ಯಾಸವನ್ನು ದೊರಕಿಸಿಕೊಂಡ. ವೈದ್ಯಕೀಯ ಪರೀಕ್ಷೆಯಲ್ಲಿ ಉತ್ತೀರ್ಣನಾಗಿ ಡಾಕ್ಟರಾದ. ಹಲವು ಬಣ್ಣಗಳ ದಾರದಿಂದ ಸಾಹಿತ್ಯ ರೇಶಿಮೆಯನ್ನು ಕುಸುರಾಗಿ ಹೆಣೆದ. ಸಾಹಿತ್ಯಕ್ಷೇತ್ರದಲ್ಲಿ ಮಧ್ಯಮವರ್ಗದವರ ಜೀವನವನ್ನು ಸಜೀವವಾಗಿ, ವಾಸ್ತವಿಕ ದೃಷ್ಟಿಯಿಂದ ನೋಡಿ ನಿರ್ಭೀತನಾಗಿ ಬರೆದ. ಸಂವೇದನಾ ಜೀವಿಯಾದ ಆತ ಬದುಕನ್ನು ಸುಂದರವಾಗಿ ಪ್ರೀತಿಸುತ್ತಿದ್ದ. ಅವನ ಬರಹಗಳಲ್ಲಿ ವಿಜ್ಞಾನದಷ್ಟೇ ಕಲೆಗೂ ಪ್ರಾಧಾನ್ಯವಿತ್ತಿರುವುದನ್ನು ನಾವು ಸೂಕ್ಷ್ಮ

ವಾಗಿ ಗಮನಿಸಬಹುದಾಗಿದೆ. ಕತೆಗಾರನಾಗಿ, ನಾಟಕಕರ್ತೃವಾಗಿ, ಕಾದಂಬರಿ ಕಾರನಾದ ಚೆಖಾವ್ ಪ್ರತಿಭಾವಂತ ವ್ಯಕ್ತಿ. ವಿಚಾರಪರವಾದ, ಹರಿತವಾದ ಶೈಲಿಯಿಂದೊಡಗೂಡಿದ ಅವನ ಬರಹ ಮೇರುಪರ್ವತದಷ್ಟು ಉನ್ನತವಾಗಿದೆ ಹಾಗೂ ನಿಷ್ಠುರ ಪ್ರಾಮಾಣಿಕತೆಯಿಂದ ಕೂಡಿದೆ.

ಈ ಸಂಕಲನದಲ್ಲಿ "ಗುಮಾಸ್ತೆಯ ಸಾವು" "ಮದುವಣಗಿತ್ತಿ" "ವಂಕ" ಮುಂತಾದ ಹದಿಮೂರು ಸಣ್ಣ ಕಥೆಗಳೂ "ಕಂದರದಲ್ಲಿ" "ಬೇಸರದ ಕಥೆ" ಮತ್ತು "೬ ನೇ ಸಂ. ವಾರ್ಡ್" ಎಂಬ ಮೂರು ಕಿರುಕಾದಂಬರಿಗಳೂ ಇವೆ. ರಷ್ಯನ್ ಭಾಷೆಯ ಕಿರುಕಾದಂಬರಿಗಳನ್ನು ನಮ್ಮ ನೀಳ್ಗತೆಗಳಿಗೆ ಹೋಲಿಸಬಹು ದಾಗಿದೆ.

ಹುಚ್ಚುನಾಯಿ ಬೀದಿಯಲ್ಲಿ ಓಡುತ್ತಿತ್ತು. ಪೋಲಿಸ್ ಇನ್ಸ್‌ಪೆಕ್ಟರ್ ಓಷು ಮಿಲಾಫ್ ನೆರೆದಿದ್ದ ಗುಂಪನ್ನುದ್ದೇಶಿಸಿ ಯದ್ವಾತದ್ವಾ ಬೈದ. ಆದರೆ ಆ ನಾಯಿ ತನ್ನ ಮೇಲಧಿಕಾರಿಯದು ಎಂದು ಖಚಿತವಾದೊಡನೆ ಗೋಸುಂಬೆಯಂತೆ ಬಣ್ಣ ಬದ ಲಾಯಿಸಿಕೊಂಡ. "ಎಲ್ಲಾದರೂ ಉಂಟೆ? ಅದು ಉತ್ತಮ ನಾಯಿ" ಎಂದ. "ಗೋಸುಂಬೆ" ಎಂಬ ಸಣ್ಣ ಕಥೆಯಲ್ಲಿ ಚೆಖಾವ್‌ನ ಹಾಸ್ಯದ ಚಟಾಕಿಯನ್ನು ನಾವು ಕಾಣಬಹುದಾಗಿದೆ. ಸ್ನೇಹ ಮೊದಲು ನವೀನವಾಗಿ, ಆಮೇಲೆ ತೊಡಕಾ ದಂತೆ ತೋರುವ ಚಿತ್ರಣವನ್ನು "ಹೆಂಗಸೂ ನಾಯಿಯೂ" ಎಂಬ ಕಥೆಯಲ್ಲಿ ಕಾಣುತ್ತೇವೆ. ಗುರೋವ್‌ಗೆ ಮದುವೆಯಾಗಿತ್ತು. ಹನ್ನೆರಡು ವರ್ಷದ ಮಗಳೂ ಶಾಲೆಗೆ ಹೋಗುವ ಇಬ್ಬರು ಗಂಡುಮಕ್ಕಳೂ ಇದ್ದರು. ಆನಳಿಗೂ ಅಷ್ಟೆ. ಆದರೆ ಅವರು ಪರಸ್ಪರ ಪ್ರೀತಿಸಿದರು. ಅವಳಿಗಾಗಿ ಅವನು ಪೀಟರ್ಸ್‌ಬರ್ಗಿಗೆ ಹೋದ. ಇದರ ಮುಕ್ತಾಯ ಹೇಗೆ ಎಂದು ಅವರೀರ್ವರೂ ಯೋಚಿಸಿದರು. ಜೀವನವೇನೊ ಸುಂದರವಾಗಿದ್ದರೂ ಕೈಗೆಟಕದಷ್ಟು ಅದು ದೂರ ಎಂದವರು ಮನಗಂಡರು. ಮನೋವಿಶ್ಲೇಷಣ ರೀತಿಯಲ್ಲಿ ಈ ಕಥೆ ಸುಂದರವಾಗಿದೆ. ಮಾನವನ ಸಂಕುಚಿತ ದೃಷ್ಟಿ, ವಿವೇಕ ಶೂನ್ಯವಾದ ಹಾಗೂ ಅರ್ಥ ರಹಿತವಾದ ಅಭಿಪ್ರಾಯಗಳ ಒಂದು ಸಮಸ್ಯೆಯನ್ನು "ಕಲೆಗಾರನ ಕತೆ"ಯಲ್ಲಿ ವೀಕ್ಷಿಸಬಹುದು. ವೈದ್ಯ-ವಿದ್ಯೆ-ವಿಜ್ಞಾನಗಳು ಮಾತ್ರ ಮಾನವನ ವಿಕಾಸಕ್ಕೆ ಸಾಲದು, ಸುಂದರ ವಸ್ತುವನ್ನು ಕಂಡು ಸಂತಸಪಡುವ ಒಳ್ಳೇ ಹೃದಯವೂ ಬೇಕು ಎನ್ನುವ ಚೆಖಾವ್‌ನ ಸೂಕ್ಷ್ಮ ತತ್ವ ಇದರಲ್ಲಿ ಪ್ರತಿಬಿಂಬಿತವಾಗಿದೆ. ಚಿತ್ರಗಾರ ಬೆಲೊಕುರಾಫ್ ವಿಜ್ಞಾನದ ಪರವಾಗಿ ಮಾತನಾಡುವವ. ಆದರೆ ಲಿಡಾಳ ದೃಷ್ಟಿ ಬೇರೆ. ಅಕ್ಷರಜ್ಞಾನ ವೊಂದಿದ್ದರೆ ಸಾಕು, ಆತ್ಮಸಂಸ್ಕಾರಕ್ಕೆ ಅದಕ್ಕಿಂತ ಮತ್ತೊಂದು ಸಾಧನ

ಬೇರೊಂದಿಲ್ಲ ಎಂದು. "ಓದು ಕಲಿತವರನೇಕರು ಕಳ್ಳಂಗಡಿಗೆ ಹೋಗುವುದಿಲ್ಲವೆ?" ಎನ್ನುತ್ತಾನೆ ಬೆಲೊಕುರಾಫ್. ಲಿಡಾಳ ತಂಗಿ ಜೆನ್ಯಾ ಆತನನ್ನು ಪ್ರೀತಿಸುತ್ತಾಳೆ. ಆದರೆ ಲಿಡಾ ತನ್ನ ಅಭಿಪ್ರಾಯಗಳಿಗೆ ವಿರುದ್ಧವಾದವನ ಸಹವಾಸವೇ ಬೇಡ ಎನ್ನುವಷ್ಟು ಕಠಿಣಳಾಗುತ್ತಾಳೆ. ಒಂದು ದಿನ ಬೆಲೊಕುರಾಫ್ ಅವರ ಮನೆಗೆ ಹೋಗಿ "ಜೆನ್ಯಾ ಎಲ್ಲಿ?" ಎಂದು ವಿಚಾರಿಸಿದರೆ, ಲಿಡಾ ಸಿಡುಕಿನಿಂದ "ಅವಳ ಚಿಕ್ಕಮ್ಮನ ಮನೆಗೆ ಹೋಗಿದ್ದಾಳೆ, ಇನ್ನು ಬರುವುದಿಲ್ಲ" ಎನ್ನುತ್ತಾಳೆ. "ಯೋನಿಕ್" ಮತ್ತು "ಮುಖವಾಡ" ಸಾಧಾರಣ ವಸ್ತುವನ್ನೊಳಗೊಂಡ ಕಥೆಗಳು. ಸಂಕಲನದ ಪ್ರಥಮ ಕಥೆ "ಗುಮಾಸ್ತೆಯ ಸಾವು" ತೀರಾ ಸಪ್ಪೆ.

ಈ ಸಂಕಲನದ ಉತ್ಕೃಷ್ಟ ಕಥೆಗಳೆಂದರೆ "ಮದುವಣಗಿತ್ತಿ" ಮತ್ತು "ಮಿಡಿತೆ." ಹದಿನಾರರ ಪ್ರಾಯದಿಂದಲೂ ಮದುವೆಯ ವಿಚಾರವಾಗಿ ಕನಸು ಕಾಣುತ್ತಿದ್ದವಳು ನದಿಯಾ. ಅವಳ ಮದುವೆ ಆಂಡ್ರ್ರಿಯೊಡನೆ ನಿಶ್ಚಯವಾಯಿತು. ಆದರೆ ಆ ಮದುವೆಗೆ ನದಿಯಾಳ ಇಷ್ಟವಿಲ್ಲ. ಶಿಲ್ಪಶಾಸ್ತ್ರದಲ್ಲಿ ತೇರ್ಗಡೆ ಹೊಂದಿದ ಸಾಶನನ್ನು ಕಂಡರೆ ಅವಳಿಗೆ ಅಭಿಮಾನ. ಅವಳ ಮದುವೆ ಆಂಡ್ರ್ರಿಯೊಡನೆ ನಡೆಯಿತು. ನದಿಯಾ ಪತಿಗೃಹಕ್ಕೆ ತೆರಳಿದಳು. ಜೀವನ ತಲೆಕೆಳಗಾಗಿ, ತಾನು ಪರಕೀಯಳಾಗಿರುವುದರ ಅನುಭವ ಅಲ್ಲವಳಿಗೆ ದೊರಕಿತು. ಇಷ್ಟು ವೇಳೆಗೆ ಅವಳು ಪೂರ್ಣ ದಿಟ್ಟತನವನ್ನು ಪಡೆದುಕೊಂಡಿದ್ದಳು. ಸಾಶ ಒಂದು ದಿನ ಕ್ಷಯರೋಗದಿಂದ ಮೃತನಾದನೆಂದು ಅವಳಿಗೆ ಕಾಗದ ಬಂತು. ಊರಿಗೆ ಹೋಗಿ ಬರುವೆನೆಂದು ಅವಳು ಹೊರಟಳು. ಮತ್ತೆ ಆ ಮನೆಗೆ ಹಿಂದಿರುಗಿ ಬರುವುದಿಲ್ಲೆಂದು ಅವಳಿಗೆ ತಿಳಿದಿತ್ತು. ಬದುಕಿನ ಹೊಸ ಅಧ್ಯಾಯವನ್ನು ಪ್ರಾರಂಭಿಸುವ ದಿಟ್ಟತನದ ನಿರ್ಧಾರ ಮಾಡಿದ್ದಳು ನದಿಯಾ.

"ಮಿಡಿತೆ" ಒಂದು ದುರಂತ ಕಥೆ. ಅಲ್ಗ ಮತ್ತು ಡಿಮೂವ್‌ರ ಸಂಸಾರ ಚೆನ್ನಾಗಿತ್ತು. ಆದರೆ ಅವರಿಬ್ಬರಲ್ಲಿ ಅಗಾಧವಾದ ವ್ಯತಿರಿಕ್ತ ಭಾವನೆಗಳು ತುಂಬಿದ್ದವು. ಸಂಗೀತ–ನಾಟ್ಯಗಳಲ್ಲಿ ಆಸಕ್ತಿಯಿಂದಿರುವ ಅಲ್ಗ ಪತಿಯನ್ನು ಬಹಳವಾಗಿ ಮೆಚ್ಚಿಕೊಂಡಿರುತ್ತಾಳೆ. ಆದರೆ ಅವಳಂತೆಯೇ ಅಭಿಪ್ರಾಯವುಳ್ಳ ರಯಬೋವ್‌ಸ್ಕಿಯೊಂದಿಗೆ ಹೆಚ್ಚಿನ ಸಲಿಗೆ ಅವಳಿಗೆ. ಅವರಿಬ್ಬರ ಮೂದಲಿಕೆಯೂ ಒಂದೇ: "ಕಲೆಯಲ್ಲಿ ಆತನಿಗೆ ಆಸಕ್ತಿಯೇ ಇಲ್ಲ" ಎಂದು. ಎರಡು ಆಸ್ಪತ್ರೆಗಳನ್ನು ನಡಸುವ ಡಿಮೂವ್‌ಗೆ ಆ ವಿಚಾರ ಯೋಚಿಸಲೂ ಬಿಡುವಿಲ್ಲ. "ನನಗೆ ಅವುಗಳಲ್ಲಿ ಆಸಕ್ತಿ ಇಲ್ಲ. ನಾನೇನು ಮಾಡಲಿ?" ಎನ್ನುತ್ತಾನೆ ಡಿಮೂವ್. ತನ್ನ ಪತ್ನಿಯಿಂದ, ರಯಬೋವ್‌ಸ್ಕಿಯಿಂದ ತನಗೆ ಅನ್ಯಾಯವಾಗುತ್ತಿದೆ ಎಂದವನು

ಬಲ್ಲ. ಆದರೆ ಯಾವುದರ ಪರಿವೆಯೂ ಇಲ್ಲದೆ ತನ್ನ ಕರ್ತವ್ಯದತ್ತ ಮುನ್ನಡೆಯುವವ ಆತ. ರಯಬೋವ್‌ಸ್ಕಿಯಿಂದ ವಂಚಿತಳಾಗಿ ಅಲ್ಲ ಮನಃಪರಿವರ್ತನೆಯಾಗುವುದರೊಳಗೆ ಡಿಮೂವ್ ಸಾಯುತ್ತಾನೆ. ಕಥಾವಸ್ತು ಇಲ್ಲಿ ಹೃದಯಂಗಮವಾಗಿ ಚಿತ್ರಿಸಲ್ಪಟ್ಟಿದೆ.

ಕಿರು ಕಾದಂಬರಿಗಳೆನಿಸಿಕೊಂಡಿರುವ ಮೂರು ನೀಳ್ಗತೆಗಳಲ್ಲಿ ಚೆಕಾವ್‌ನ ಕಥನ ಕೌಶಲದ ಪರಮಾವಧಿಯನ್ನು ಕಾಣಬಹುದಾಗಿದೆ. "ಬೇಸರದ ಕಥೆ"ಯಲ್ಲಿನ ಕಾತ್ಯಾ, "ಕಂದರದಲ್ಲಿ"ನ ಲಿಪಾ ಈರ್ವರೂ ಒಂದೇ ವರ್ಗಕ್ಕೆ ಸೇರಿದವರು; ಅಸಹಾಯಕರಾಗಿ ಮುಂದೇನು ಮಾಡುವುದೆಂದು ತೋಚದೆ ತೊಳಲಾಡುವವರು. "ಬೇಸರದ ಕಥೆ"ಯ ಅಧ್ಯಾಪಕ ನಿಕೊಲೆ ಸ್ಟೆಪನೋವಿಕ್‌ಚ್ ತನ್ನ ವೃತ್ತಾಂತವನ್ನು ತಾನೇ ಹೇಳುವಂತೆ ಕಥೆ ಹೆಣೆಯಲ್ಪಟ್ಟಿದೆ. ಆಕೆ ನಟಿ, ನಿಕೊಲೆಯನ್ನು ತಂದೆಯ ದೃಷ್ಟಿಯಿಂದ ಕಾಣುತ್ತಾಳೆ. ಬದುಕಿನಲ್ಲಿ ಅವಳಿಗೆ ನಿರಾಸಕ್ತಿ. ಖಾರ್ಕೋಟಿಗೆ ಅವನು ಹೋದರೆ ಅವಳೂ ಅವನನ್ನು ಹಿಂಬಾಲಿಸುತ್ತಾಳೆ. "ಕಂದರದಲ್ಲಿ"ನ ಲಿಪಾ ನಮ್ಮ ಕಣ್ಮುಂದೆ ಎದ್ದು ನಿಲ್ಲುವ ಸಜೀವ ಚಿತ್ರಣವಾಗಿದೆ. ಗ್ರಿಗರಿ ವರ್ತಕ. ಅವನಿಗೆ ಈರ್ವರು ಪುತ್ರರು. ಹಿರಿಯವನಾದ ಅನಿಸಿಮನೊಂದಿಗೆ ಲಿಪಾಳ ಮದುವೆಯಾಯಿತು. ಕೊನೆಗೆ ಖೋಟಾ ನಾಣ್ಯ ತಯಾರಿಸುವಾಗ ಸಿಕ್ಕಿಬಿದ್ದು ಅನಿಸಿಮ್ ಸೆರೆಮನೆಗೆ ಹೋಗುತ್ತಾನೆ. ಲಿಪಾಳ ಬಾಳು ಹಾಳಾಗುತ್ತದೆ. "೬ನೇ ನಂ ವಾರ್ಡ್" ಹೃದಯ ವಿದ್ರಾವಕವಾದ ಕಥೆ. ಹುಚ್ಚಾಸ್ಪತ್ರೆಯ ಆಂಡ್ರಿ ರೋಗಿಗಳನ್ನು ಗುಣಪಡಿಸುವವನಾಗಿದ್ದು, ಕ್ರಮೇಣ ತಾನೇ ಹುಚ್ಚನೆಂದು ಪರಿಗಣಿಸಲ್ಪಟ್ಟು ದುರಂತಕ್ಕೊಳಗಾಗುತ್ತಾನೆ. ಚೆಖಾವ್ ಅಸದೃಶ ಕಲೆಗಾರ ಎಂಬುದು ಈ ಕಥೆಯಿಂದ ಸ್ಪಷ್ಟವಾಗುತ್ತದೆ.

ಸ್ವತಂತ್ರ ಕಥೆಗಳನ್ನು ಬರೆದಿರುವ, ರವೀಂದ್ರರ ನಾಲ್ಕಾರು ಕಾದಂಬರಿಗಳನ್ನು ಕನ್ನಡಕ್ಕೆ ಅನುವಾದ ಮಾಡಿರುವ ಶ್ರೀಮತಿ ಎಚ್. ವಿ. ಸಾವಿತ್ರಮ್ಮನವರಿಂದ ಈ ಕೃತಿ ಕನ್ನಡಕ್ಕೆ ಅನುವಾದವಾಗಿದೆ. ಶ್ರೀಮತಿಯವರ ಶೈಲಿ ಶಬ್ದಾಡಂಬರವಿಲ್ಲದ, ಸರಳವಾದ ಗಾಂಭೀರ್ಯದಿಂದ ಕೂಡಿದೆ. ಅನುವಾದ ಮನೋಹರವಾಗಿದ್ದರೂ ಕೆಲವೆಡೆ ಏನೋ ತೊಡಕಾದಂತೆ ಕಾಣುತ್ತದೆ. ಆಂಗ್ಲ ಭಾಷೆಯಿಂದ ವಾಕ್ಯಗಳನ್ನು ನೇರವಾಗಿ ಹಾಗೇ ಇಳಿಸುವಲ್ಲಿ ಅರ್ಥವಾಗದ ಹಾಗೆ ಅನಿವಾರ್ಯವಾಗಿ ಕೆಲವು ಪದಗಳ ಬಳಕೆ ಸೇರಿಕೊಂಡಿರುವಂತಿದೆ. ಉದಾ: "ಮಂದವಾದ ಆತ್ಮಕ್ಕೆ ಗೋಡೆಯ ಮೇಲೆಲ್ಲಾ ಸ್ವಲ್ಪ ಬೆಲೆಯ ಬೀಸಣಿಗೆಗಳು" "ದಪ್ಪ, ರೈತನ ರೀತಿಯ ಮನುಷ್ಯ; ಫಲಹಾರ ಮಂದಿರದ ದಪ್ಪ, ಹಠ ಸ್ವಭಾವದ, ಕಠಿಣ ರೀತಿಯನ್ನು ನೆನಪಿಗೆ ತರುವ ಮುಖ, ಗಡ್ಡ, ಉದ್ದ ಕೂದಲು, ಬಲವಾದ ವಿಕಾರವಾದ ದೇಹ".

ಉತ್ತಮ ಕೃತಿಗಳ ಪ್ರಕಟಣೆಗೆ ಹೆಸರಾಂತ ಕಾವ್ಯಾಲಯದವರಿಂದ ಈ ಕೃತಿ ಹೊರಬಂದಿದೆ; ಸುಂದರವಾದ ದ್ವಿವರ್ಣ ಚಿತ್ರ ಹೊರಮೈಯನ್ನು ರಾಜಿಸಿದೆ.

ಶೇಷನಾರಾಯಣ.

***

ಜಾನಪದ ಕಥನಗೀತೆಗಳು—ಸಂಪಾದಕರು: ಕ.ರಾ.ಕೃ; ಪ್ರಕಾಶಕರು: ಜನಪದ ಸಾಹಿತ್ಯ ಅಕಾಡೆಮಿ; ಸರಸ್ವತೀಪುರಂ, ಮೈಸೂರು; ಪುಟಗಳು: ಕ್ರಾ. ಅ. ಪ. ೨೦+೪೯೦; ಬೆಲೆ, ರೂ. ೮.೫೦.

ಜನಪದಗೀತೆಗಳ ಅನೇಕ ಸಂಕಲನಗಳನ್ನು ಹೊರತಂದಿರುವ ಶ್ರೀ ಕ.ರಾ.ಕೃ ಅವರು ಈಗಾಗಲೇ ಕನ್ನಡ ಸಾರಸ್ವತ ಕ್ಷೇತ್ರಕ್ಕೆ ಪರಿಚಿತರಾಗಿದ್ದಾರೆ. ಇದೀಗ ಬಂದಿರುವ ಅವರ ಮತ್ತೊಂದು ಸಂಗ್ರಹ—'ಜಾನಪದ ಕಥನಗೀತೆಗಳು'—ಶ್ರೀಯುತರ ಸಾಹಿತ್ಯಸೇವೆಗೆ ಕಳಶಪ್ರಾಯವಾಗಿದೆ. ಕನ್ನಡದಲ್ಲಿ ಭಾವಗೀತಾತ್ಮಕವಾದ ನಾಡಪದಗಳ ಸಂಗ್ರಹಗಳು ಹಲವಾರು ಬಂದಿವೆ. ಆದರೆ ವರ್ಣನಾತ್ಮಕವಾದ ಕಥನಕವನಗಳಿಲ್ಲದ ಅರಕೆ ಎದ್ದು ಕಾಣುತ್ತಿತ್ತು. ಈ ಕೊರತೆಯನ್ನು ಪ್ರಕೃತ ಗ್ರಂಥ ಸ್ವಲ್ಪಮಟ್ಟಿಗಾದರೂ ನಿವಾರಿಸಿದೆಯೆಂದು ಧೈರ್ಯವಾಗಿ ಹೇಳಬಹುದು. ಆದುದರಿಂದ ಈ ಜನಪದ ಕಥನಗೀತೆಗಳ ಸಂಕಲನಕ್ಕೆ ತನ್ನದೇ ಆದ ವೈಶಿಷ್ಟ್ಯವಿದೆ, ತೂಕವಿದೆ. ಇದನ್ನು ಪ್ರಕಟಿಸಿ ಕ.ರಾ.ಕೃರವರು ನಾಡಿನ ವಿಶೇಷ ಮನ್ನಣೆಗೆ ಪಾತ್ರರಾಗಿದ್ದಾರೆ.

ಜಾನಪದ ಕವಿಗಳು ಮುಕ್ತಕಗಳಲ್ಲಿ ತಮ್ಮ ಸುಖದುಃಖಗಳನ್ನು, ಭಾವಾನುಭವಗಳನ್ನು ವ್ಯಕ್ತಗೊಳಿಸಿರುವಂತೆ, ತಮ್ಮ ಮನಸ್ಸಿನಲ್ಲಿ ಅಚ್ಚೊತ್ತಿದ ವ್ಯಕ್ತಿಯನ್ನೋ ಘಟನೆಯನ್ನೋ ಕುರಿತು ಕಥೆಕಟ್ಟಿ ಹಾಡಿದ್ದಾರೆ. ಸಾಮಾಜಿಕ, ಕಾಲ್ಪನಿಕ, ಪೌರಾಣಿಕ, ಹಾಗೂ ಐತಿಹಾಸಿಕವೆಂದು ಈ ಕಥೆಗಳಲ್ಲಿ ಭೇದಗಳನ್ನು ಕಲ್ಪಿಸಬಹುದು. ಇಂಥ ನೀಳ್ಗವನಗಳ ವಸ್ತುವೈವಿಧ್ಯ ಮತ್ತು ಪಾತ್ರವೈವಿಧ್ಯ ಅನಂತವಾದುದು; ನಿರೂಪಣೆಯಲ್ಲಿ ತೋರಿಬರುವ ಚಾತುರ್ಯ ಅಚ್ಚರಿಗೊಳಿಸುವಂತಹುದು. ಈ ಜಾನಪದ ಕವಿಗಳ ಕಥನಕಲೆ ಆಧುನಿಕ ವಿಮರ್ಶೆಯ ಒರೆಗಲ್ಲಿನ ಮೇಲೂ ತನ್ನ ಸುವರ್ಣ ಗುಣವನ್ನು ಸ್ಥಾಪಿಸಿಕೊಳ್ಳಬಲ್ಲುದು. ಅವರ ಕಲ್ಪನೆಯ ಮೋಡಿಗೆ ವಶವಾಗಿ ದೇವತೆಗಳು ನೆಲಕ್ಕಿಳಿಯುತ್ತಾರೆ, ಮರ್ತ್ಯರು ದೇವತೆಗಳಾಗಿ ಪೂಜೆಗೊಳ್ಳುತ್ತಾರೆ, ಬೇರೊಂದು ಲೋಕವೇ ಕಣ್ಣಮುಂದೆ ತೆರೆದುಕೊಳ್ಳುತ್ತದೆ. ತಮಗೆ ಸರಿದೋರಿದ ನೀತಿಯನ್ನೋ ಆದರ್ಶವನ್ನೋ ಜನ ಇಂಥ ಕಥನಗೀತೆಗಳಲ್ಲಿ ಪರೋಕ್ಷವಾಗಿ ನಿರೂಪಿಸಿದ್ದಾರೆ

ಅನೇಕ ಗೀತೆಗಳು 'ಕಲೆಗಾಗಿ ಕಲೆ' ಎಂಬ ತತ್ತ್ವವನ್ನು ಸಮರ್ಥಿಸುವಂತಿವೆ. ಈ ಹಾಡುಗಳನ್ನು ಕಟ್ಟಿದವರ ಉದ್ದೇಶ ಮನೋರಂಜನೆ, ನೀತಿಬೋಧೆ, ತನ್ಮೂಲಕ ಹೃದಯಸಂಸ್ಕಾರ. ಜಾನಪದ ಕಥನಕವನಗಳ ಈ ಎಲ್ಲ ವೈಶಿಷ್ಟ್ಯ, ವೈವಿಧ್ಯ, ವಿಪುಲತೆ ಹಾಗೂ ಸೌಂದರ್ಯವನ್ನು ಕಾಣಬಹುದು ಪ್ರಸ್ತುತ ಸಂಕಲನಗ್ರಂಥದಲ್ಲಿ.

ಈ ಹೊತ್ತಿಗೆಯಲ್ಲಿ ಒಟ್ಟು ಮೂವತ್ತೈದು ಸ್ವಾರಸ್ಯವಾದ ಕಥನಗೀತೆಗಳಿವೆ. ಈ ಎಲ್ಲ ಹಾಡುಗಳ ವಿಸ್ತಾರವಾದ ವಿಮರ್ಶೆಗೆ ಇಲ್ಲಿ ಅವಕಾಶವಿಲ್ಲ. ಕೆಲವನ್ನು ಕುರಿತು ಪರಿಚಯ ರೂಪದಲ್ಲಿ ನಾಲ್ಕು ಮಾತುಗಳನ್ನಾಡಿ, ಪುಸ್ತಕದ ಕಡೆಗೇ ಬೆರಳು ತೋರಿಸಬಹುದಷ್ಟೆ.

ಶೃಂಗಾರವನ್ನು ಚಿತ್ರಿಸುವ ಹಾಡುಗಳನ್ನು ಮೊದಲು ನೋಡಬಹುದು. ಇವುಗಳಲ್ಲಿ ಶಿವನಿಗೆ ಸಂಬಂಧಿಸಿದವೇ ಹೆಚ್ಚಾಗಿವೆ. ಹರ-ಗಿರಿಜೆಯರ ಪರಿಣಯ, ಶಿವ-ಗಂಗೆಯರ ಪ್ರೇಮ, ನಂಜುಂಡ-ಚಾಮುಂಡಿಯರ ಪ್ರಣಯ ಮುಂತಾದುವನ್ನು ಕುರಿತು ಸರಸವಾದ ಗೀತೆಗಳು ಇಲ್ಲಿವೆ. 'ಗಿರಿಜಾಮಲ್ಲಯ್ಯ', 'ಅಂಬಿಗರಗಂಗ', 'ಹುಟ್ಟಿದಾಳೆ ಗೌರಮ್ಮ ಭೂಲೋಕದಲ್ಲಿ', 'ನಾ ನಂಜುಂಡಲಿಂಗ ಬಿಡೆ ಸೆರಗ' ಇವುಗಳಲ್ಲಿ ಜನಪದ ಕವಿಗಳು ಶುಚಿಯಾದ ರಸಿಕತೆಯನ್ನು ಅಭಿವ್ಯಕ್ತಗೊಳಿಸಿದ್ದಾರೆ. ನಿದರ್ಶನಕ್ಕಾಗಿ ಒಂದೆರಡು ಪದ್ಯಗಳನ್ನು ನೋಡಬಹುದು :

ಎಡಗಡೆ ಮಾಳವ್ವ ಬಲಗಡೆ ಪಾರ್ವತಿದೇವಿ
ಇಬ್ಬರ ನಡುವೆ ಘನಲಿಂಗ—ಕೂತುಕೊಂಡು
ಇಬ್ಬರಿಗ್ಹೂವ ಮುಡಿಸ್ಯಾನ
('ಹೆಸರಿಗೆ ದೊಡ್ಡೋನು ಶಿವತಂದ')

ಕದವ ತೆಗೆದಾಳೆ ಜೋತುರದ ಸೆರಗ ಹಿಡಿದಾಳೆ
ನಿಮ್ಮ ಹೆಸರ್ಹೇಳಿ ಸ್ವಾಮಿ ಕುಲವ್ಹೇಳಿ
ನಂಜನಗೂಡಿನ ನಡುವೆ ತೋಪಿನಲಿರುವ
ನಾ ನಂಜುಂಡಲಿಂಗ ಬಿಡೆ ಸೆರಗ
('ನಾ ನಂಜುಂಡಲಿಂಗ . . .')

'ನುಚ್ಚಾಯ್ತು ನೀರ ಹೊಳೆಯಾಗೆ' ಎಂಬ ಕವನ ಜನಜೀವನಕ್ಕೆ ಬಹಳ ಹತ್ತಿರವಾದುದು ; ರಹಸ್ಯ ಪ್ರೇಮವನ್ನದು ಚಿತ್ರಿಸುತ್ತದೆ. ಹೆಣ್ಣೊಬ್ಬಳು ತನ್ನ ಪ್ರಣಯಿಯ ಮರಣವಾರ್ತೆಯನ್ನು ತಿಳಿದಾಗ ಹಿಡಿದಿದ್ದ ಕೊಡವನ್ನು ಎತ್ತಿಹಾಕುವುದೂ, ಅದರ ನೆವದಲ್ಲಿ ದುಃಖಿಸಿ ಅದು ತನಗೆ ಬಹಳ ಪ್ರಿಯವಾದ ಕೊಡವಾಗಿತ್ತೆಂದು ಗೆಳತಿಯರಿಗೆ ಕಾರಣ ಹೇಳುವುದೂ ಒಳ್ಳೆಯ ಸಂಕೇತಗಳಾಗಿವೆ. 'ಕೃಷ್ಣ-ಕೊರವಂಜಿ' ಎಂಬುದು ಕೃಷ್ಣರುಕ್ಮಿಣಿಯರ ಪ್ರೇಮ ವಿವಾಹವನ್ನು ಕುರಿತ ರಮ್ಯವಾದ ಗೀತೆ.

'ಮದುವಣ್ಣ' ಎಂಬ ಹಾಡು ಹಳ್ಳಿಯ ಬಾಳಿನ ಒಂದು ಮುಖವನ್ನು ತೋರಿಸುತ್ತದೆ; ಮದುವೆಯ ಹಲವಾರು ಚಿತ್ರಗಳನ್ನಿಲ್ಲಿ ನೋಡುತ್ತೇವೆ. ವಿವಾಹದ ಸಂದರ್ಭದಲ್ಲಿ ಗೀತೆಗಳನ್ನು ಹಾಡುವುದು, ಮದುವಣಿಗನನ್ನು ಹಾಡಿನ ಮೂಲಕ ಹಾಸ್ಯಮಾಡುವುದು—ಇದೆಲ್ಲ ಈಗ ಮರೆಯಾಗುತ್ತಿರುವ ಸಂಪ್ರದಾಯ. ಹಿಂದೆ ವಿವಾಹದ ಅನಿವಾರ್ಯ ಅಂಗವಾಗಿದ್ದ ಈ ಪದ್ಧತಿ ಈ 'ಮದುವಣಿಗ'ದಲ್ಲಿ ಪ್ರತಿಬಿಂಬಿತವಾಗಿದೆ. ಮದುವೆಮನೆಯ ಗಡಿಬಿಡಿ, ಸಂಭ್ರಮ, ಮಂಗಳಕಾರ್ಯಗಳ ವಿವರ, ವಧೂವರರ ವರ್ಣನೆ—ಇವೆಲ್ಲ ಚೆನ್ನಾಗಿ ಮೂಡಿಬಂದಿವೆ ಈ ಗೀತದಲ್ಲಿ. ವರನನ್ನು ಕುರಿತ ಹಾಸ್ಯದ ಪದ್ಯಗಳಲ್ಲೊಂದು :

ಹಾಗೆ ಗಾಜಿನಕಂಬ ಹೀಗೆ ಗಾಜಿನಕಂಬ
ಸೋಕದೆ ಬಾರೊ ಮದುವಣ್ಣ—ನಿಮ್ಮತ್ತೆ
ಸೋಕಿದರ್‍ಹೆಣ್ಣ ಕೊಡಳಂತೆ.

'ಸಂಗಾತಿ' ಎಂಬ ಕವನದಲ್ಲಿ ಇಬ್ಬರು ಗೆಳತಿಯರ ಆತ್ಮೀಯ ಸ್ನೇಹದ ಚಿತ್ರವಿದೆ:

ಸಂಗಾತಿ ಬಾರೆ ಸಾದು ನಿಂಬೆಹಣ್ಣೆ
ಉಂಗುರವೆ ಬಾರೆ ಬೆರಳೀಗೆ—ನಡುತೋಟ್ದ
ಹೊಂಬಾಳೆ ಬಾರೆ ಕಳಸಕೆ.

'ಒಡ್ಡರ ಬೋಯಿ' ಎಂಬ ಹಾಡಿನಲ್ಲಿ ಊರಿನ ಕಲ್ಯಾಣ ಸಾಧನೆಗಾಗಿ ಆತ್ಮಾರ್ಪಣಾ ಮಾಡಿದ ಓರ್ವ ನಾರೀಮಣಿಯ ತ್ಯಾಗದ ಕಥೆ ನಿರೂಪಿತವಾಗಿದೆ. 'ಬಂಜೆ ಹೊನ್ನಮ್ಮ' ಎಂಬ ಹಾಡಿನಲ್ಲಿ ಬಂಜೆತನದ ದಾರುಣತೆ ಮಿಡಿಯುತ್ತಿದೆ. ಸ್ತ್ರೀಯರ ಹೃದಯದ ನೈಸರ್ಗಿಕವಾದ ತುಡಿತವನ್ನು ಇಂಥ ಪದ್ಯಗಳಲ್ಲಿ ನೋಡಬೇಕು. 'ಇರೋಬಿ,' 'ಚೆನ್ನಿಗರಾಯ,' 'ಮುನಿಯಾಗಿ ಬಂದ'—ಇತ್ಯಾದಿ ಹಾಡುಗಳಲ್ಲಿ ಹೆಣ್ಣಿನ ದೃಢವಾದ ಶೀಲ ಮತ್ತು ಪತಿಭಕ್ತಿ ಚಿತ್ರಿತವಾಗಿವೆ. ಹೀಗೆ ಹೆಣ್ಣಿನ ತ್ಯಾಗ, ಶೀಲ, ಸಹನೆ ಮುಂತಾದ ಸದ್ಗುಣಗಳನ್ನು ನಿರೂಪಿಸುವ ಕಥೆಗಳೇ ಹೆಚ್ಚು. ತದ್ವಿರುದ್ಧವಾದ ಗುಣಗಳನ್ನುಳ್ಳ ಸ್ತ್ರೀಯರೂ ಈ ಕಥೆಗಳಲ್ಲಿ ಇಲ್ಲದಿಲ್ಲ.

ಸಾವಿನ ಸಮಸ್ಯೆಯ ಕಡೆಗೂ ಜಾನಪದ ಕವಿಗಳ ಗಮನ ಹರಿದಿದೆ. 'ಹಬ್ಬೋಗೊ ಕುಡಿಯ ಹರಕೊಂಡ', 'ನಾನಿದ್ದು ಬಂದೇನು ನಡೀರಣ್ಣ', 'ಫಲ ಬಿಡುವ ಮರಗಳ ಕಡಿಸ್ಯಾನೆ'—ಈ ಹಾಡುಗಳಲ್ಲಿ ಸಾವಿನ ಅನಿವಾರ್ಯತೆಯನ್ನು ಮನಗಾಣಿಸಿದ್ದಾರೆ. ಯಮನೊಡನೆ ನಡೆಯುವ ಸಂಭಾಷಣೆ, ಅವನು ಕೊಡುವ ಉತ್ತರ ಪರಿಣಾಮಕಾರಿಯಾಗಿವೆ. ಹೀಗೆ ಸಮಾಧಾನ ಹೇಳಿಕೊಂಡಿದ್ದಾರೆ ಜನ :

ನರಜನ್ಮ ಹೋಗೋವಾಗ ತಾಯಿಲ್ಲ ತಂದಿಲ್ಲ
ನ್ಯಾಯದೋರಿಲ್ಲ ಧೊರೆಯಿಲ್ಲ—ರಂಗಪ್ಪ
ಹೋಗೋವಾಗ ನಾಯಿ ಕೂಡ ಹಿಂದೆ ಬರಲಿಲ್ಲ.

'ನಾಗರಗನ್ನೆ', 'ತಬ್ಬಲಿರಾಯ'—ಇವು ಕಲ್ಪನಾಪ್ರಧಾನವಾದ ಕಥನ ಗೀತೆಗಳು. ಅವುಗಳದೇ ಬೇರೊಂದು ವಾತಾವರಣ; ಅಲ್ಲಿ ತುಂಬಿದೆ ಅದ್ಭುತ ಘಟನೆಗಳ ಪರಂಪರೆ. 'ನಾಗರಗನ್ನೆ' ಎಲ್ಲರಿಗೂ ಗೊತ್ತಿರುವ ಬಾಲನಾಗಮ್ಮನ ಕಥೆ. ಬಾಲಕನೊಬ್ಬ ಮಾಯದ ಜೋಗಿಯ ಪ್ರಾಣಪಕ್ಷಿಯನ್ನು ಕೊಂದು, ಅವನ ಬಂಧನದಿಂದ ತನ್ನ ತಾಯಿಯನ್ನು ಬಿಡಿಸುವುದು ಇದರ ವಸ್ತು. 'ತಬ್ಬಲಿರಾಯ' ಎಂಬ ಹಾಡಿನಲ್ಲಿ ದ್ರೋಹಕ್ಕೊಳಗಾಗಿ ಮಡಿದ ತನ್ನ ತಂದೆಯನ್ನು ಸೂರ್ಯ ನಾರಾಯಣನೆಂಬ ಬಾಲಕ 'ಹಂಚಿಕಡ್ಡಿ ರಥವ ಮಾಡಿ', ಶಿವಪಾರ್ವತಿಯರನ್ನು ಬೇಡಿ ಬದುಕಿಸಿಕೊಂಡ ಕಥೆ ವಿದಿತವಾಗಿದೆ. ಇವು ಚಮತ್ಕಾರಯುಕ್ತವಾಗಿ ಮೊದಲಿಂದ ಕಡೆಯತನಕವೂ ಕುತೂಹಲವನ್ನು ಸೆರೆಗೈಯುವ ಕಥೆಗಳು.

'ಕೋಳೂರ ಕೊಡಗೂಸು' ಬಾಲಕಿಯೊಬ್ಬಳ ಮುಗ್ಧ ಭಕ್ತಿಯನ್ನು ವರ್ಣಿಸುತ್ತದೆ. ಪ್ರೌಢಕವಿಗಳು ಈ ಕಥೆಯನ್ನು ಕಾವ್ಯಗಳಲ್ಲಿ ಚಿತ್ರಿಸಿರುವ ಪರಿಯೇ ಬೇರೆ; ಈ ಜಾನಪದ ಕಥನಗೀತೆಯ ರೀತಿಯೇ ಬೇರೆ.

ಬೆಟ್ಟ ಹತ್ತುವೋನೆ ಅಲ್ಲಿಂದ ಬೀಳುವೋನೆ
ದೃಷ್ಟೀಲಿ ಮಡುವ ಕಲಕೋನೆ—ಕೋಳೂರ
ಪುಟ್ಟಮಲ್ಲಯ್ಯ ಹಾಲ ಸಲಿಸ್ಹೋಳಿ—

ಮುಂತಾದ ನುಡಿಗಳಲ್ಲಿ ಕೊಡಗೂಸಿನ ಭಕ್ತಿ ಅಕೃತಕವಾಗಿ ಹೊಮ್ಮಿದೆ.

'ಪಿರಿಯಾಪಟ್ಟಣದ ಕಾಳಗ'ದ ವಸ್ತು ಚಾರಿತ್ರಿಕ. ಇದಕ್ಕೆ ಕವಿಯ ಕಲ್ಪನೆ ಬೆರೆತಿದೆ. ವೀರರಾಜ ದೊರೆಯ ಕಾಲದಲ್ಲಿ ಪಿರಿಯಾಪಟ್ಟಣ ಮೈಸೂರಿನ ವಶವಾದ ಘಟನೆ ಇಲ್ಲಿದೆ.

ಗಂಡಾದರೆ ದಂಡೆತ್ತಿ ಬರಲಯ್ಯ
ದಳವಾಯಿಯವರು ಹೇಡಿಯಾದರೆ
ತನ್ನ ರಮನೇಲಿರಲಯ್ಯಾ—

ಎಂದು ಶ್ರೀರಂಗಪಟ್ಟಣದ ದಳವಾಯಿಗೆ ಓಲೆ ಬರೆದ ವೀರರಾಜ ಆಪತ್ತನ್ನು ತಂದುಕೊಂಡು ಅಂತ್ಯದಲ್ಲಿ ಆತ್ಮಹತ್ಯ ಮಾಡಿಕೊಂಡಂತೆ ಚಿತ್ರಿಸಲಾಗಿದೆ. ಕರುಳಿರಿಯುವ ಈ ಹಾಡು ವೀರ ಕರುಣಗಳ ಸಂಗಮ.

ಜನಪದಕಾವ್ಯ ಜನಸಾಮಾನ್ಯರ ಬಾಳಿಗೆ ಅಂಟಿಕೊಂಡದ್ದು, ಅವರ ಅಂತರಂಗದಿಂದ ನೇರವಾಗಿ ಸ್ಫುರಿಸಿದ್ದು—ಎಂಬುದನ್ನು ಸಮರ್ಥಿಸುವ ಒಂದು ಬಿಡಿಪದ್ಯವನ್ನು ಕಡೆಯದಾಗಿ ಉದಾಹರಿಸಬಹುದು. 'ಉತ್ತರದೇವಿ' ಎಂಬ ಹಾಡಿನಲ್ಲಿ ತಾಯಿ ಮಗನಿಗೆ ಹೆಂಡತಿಯನ್ನು ತ್ಯಜಿಸೆಂದು ಹೇಳುತ್ತಾಳೆ. ಆಗ ಅವನು ಕೊಡುವ ಉತ್ತರ, ಅದಕ್ಕಾಗಿ ಬಳಸುವ ಉಪಮಾನ ಎಷ್ಟು ಸ್ವಾಭಾವಿಕವಾಗಿವೆ—ಪರಿಭಾವಿಸಿ :

ಬಿಟ್ಟು ಬಿಡುವೋಕೆ ಹಸುವೇನು ಕರುವೇನು
ಹತ್ತು ಸಾವಿರ ಸಭೆಗೂಡಿ—ತಂದ್ಹೆಣ್ಣ
ಹೇಗಮ್ಮ ನಾನು ಕಳುಹಲಿ

ಅಗುಳಿನಿಂದ ಅನ್ನದ ಪರೀಕ್ಷೆಯಾಗುವಂತೆ, ಇಷ್ಟರಿಂದಲೇ ಉಳಿದೆಲ್ಲ ಗೀತೆಗಳ ಉತ್ಕೃಷ್ಟತೆಯನ್ನು ಅರಿಯಬಹುದಾಗಿದೆ. ಪ್ರತಿಯೊಂದು ಕಥನಕವನದಲ್ಲೂ ಅದರದೇ ಆದ ಬಂಧುರತೆಯಿದೆ, ಹೃದ್ಯವಾದ ಗುಣವಿಶೇಷವಿದೆ. ಶೃಂಗಾರ, ವೀರ, ಕರುಣ, ಹಾಸ್ಯ ಮೊದಲಾದ ರಸಗಳ ಪ್ರತಿಪಾದನೆ, ವಸ್ತುವಿಗೆ ಅನುಗುಣವಾದ ಶೈಲಿ ಮತ್ತು ಛಂದಸ್ಸು—ಇವುಗಳಲ್ಲಿ ಜಾನಪದ ಕವಿಗಳು ತಮ್ಮ ಮೇಲ್ಮಟ್ಟದ ಪ್ರತಿಭೆಯನ್ನು ತೋರ್ಪಡಿಸಿದ್ದಾರೆ. ಅಚ್ಚಗನ್ನಡದ ಚೆಲುವು, ಸ್ವಭಾವೋಕ್ತಿ ಬಾಹುಳ್ಯ, ನಿರಾಭರಣ ಸೌಂದರ್ಯ ಇವು ಬಗೆಯನ್ನು ಸೂರೆಗೊಳ್ಳುತ್ತವೆ. ಆದರೆ ಈ ಹಾಡುಗಳನ್ನು ಓದಿದಾಗ ದೊರಕುವುದು ಅರ್ಧ ಸ್ವಾರಸ್ಯ ಮಾತ್ರ. ಏಕೆಂದರೆ ಇವು ಹಾಡುಗಬ್ಬಗಳು, ಓದುಗಬ್ಬಗಳಲ್ಲ. ಸಹಜವಾದ ಧಾಟಿಯಲ್ಲಿ ಒಬ್ಬರೋ ಅಥವಾ ಒಟ್ಟಾಗಿ ಹಲವರೋ ಹಾಡಿದಾಗ ಇವು ಜೀವಂತವಾಗಿ, ರಸಭಾವಗಳ ಜೊತೆಗೆ ನಾದಮಾಧುರ್ಯವನ್ನೂ ಸೂಸಿ ಹೆಚ್ಚು ಪರಿಣಾಮಕಾರಿಯೂ, ಪ್ರಯೋಜನದಾಯಕವೂ ಆಗುತ್ತವೆ. ಹೀಗೆ ಹಾಡುವ ಕಾರ್ಯ ನಡೆದು ಜನಪದ ಕಾವ್ಯದ ಪುನರುದ್ಧಾರವಾಗಬೇಕು; ಇವು ಸರ್ವಜನತೆಯ ನಾಲಗೆಯ ಮೇಲೆ ಮತ್ತೆ ನೆಲೆಗೊಂಡು ಸಂಸ್ಕೃತಿಯ ಪರಿಮಳವನ್ನು ಹರಡುವಂತಾಗಬೇಕು.

ಪ್ರಕೃತ ಗೀತೆಗಳ ಕೀರ್ತಿಯಲ್ಲಿ ಅರೆಪಾಲು ಸಂಪಾದಕರದು. ಅವರ ಎಣೆಯಿಲ್ಲದ ಶ್ರದ್ಧೆ, ಉತ್ಸಾಹ, ಪರಿಶ್ರಮಗಳಿಲ್ಲದಿದ್ದರೆ ಈ ಆಣಿಮುತ್ತುಗಳು ಯಾವ ಕೊಂಪೆಯಲ್ಲಿದ್ದು ಅಳಿದುಹೋಗುತ್ತಿದ್ದುವೊ. ಕಥನಕವನಗಳ ಸಂಗ್ರಹಕಾರ್ಯ ಸುಲಭವಲ್ಲ; ಅದೆಷ್ಟು ದುಷ್ಕರವೆಂಬುದು ಸಂಪಾದಕರು ಹೇಳಿಕೊಂಡಿರುವ 'ಸಾಹಸದ ಕಥೆ'ಯಲ್ಲಿ ವಿದಿತವಾಗಿದೆ. ಜನಪದ ಸಾಹಿತ್ಯರಕ್ಷಣೆಯ ಈ ಉಪಕಾರಕ್ಕಾಗಿ ಕ. ರಾ. ಕೃ. ಅಭಿನಂದನಾರ್ಹರು; ಅವರದು ಅನುಕರಣ ಯೋಗ್ಯವಾದ ಕಾರ್ಯ.

ಗ್ರಂಥಾಂತ್ಯದಲ್ಲಿ ಹಾಡುಗಳ ಸಾರಾಂಶವನ್ನು ತಿಳಿಸುವ 'ಕಥಾವಿಹಾರ'ವನ್ನು ಅಳವಡಿಸಿದ್ದಾರೆ; ಗ್ರಾಮ್ಯಶಬ್ದಗಳಿಗೆ ಅರ್ಥ ಕೊಟ್ಟಿದ್ದಾರೆ. ಇದರಿಂದ ರಸಾಸ್ವಾದನೆಗೆ ವಿಶೇಷ ಸೌಲಭ್ಯ ಉಂಟಾಗಿದೆ. ಜನಪದ ಸಾಹಿತ್ಯದ ವಿಚಾರದಲ್ಲಿ ಪರಿಣತರಾದ ಸಾಹಿತಿಗಳ ಅಭಿಪ್ರಾಯಗಳನ್ನಾಯ್ದು ಪ್ರತಿಯೊಂದು ಗೀತೆಗೂ ಮುನ್ನುಡಿಯಂತೆ ಬೇರೆ ಬೇರೆಯಾಗಿ ಅಳವಡಿಸಲಾಗಿದೆ. ಇದೊಂದು ಹೊಸ ವಿಧಾನ.

ಪ್ರಸ್ತುತ ಹೊತ್ತಿಗೆಗೆ ಪ್ರೊ. ತೀ. ನಂ. ಶ್ರೀಕಂಠಯ್ಯನವರು ಶುಭಾಶಂಸೆಯ 'ಮುನ್ನುಡಿ'ಯನ್ನೂ, ಶ್ರೀ ಜಿ. ವರದರಾಜರಾಯರು ದೀರ್ಘವೂ ವಿಚಾರಪೂರ್ಣವೂ ಆದ 'ಮೆಚ್ಚುನುಡಿ'ಯನ್ನೂ ಬರೆದಿದ್ದಾರೆ. ಈ ಕೃತಿಯನ್ನು ವಿದ್ವನ್ಮಣಿ ಶ್ರೀ ಡಿ. ಎಲ್. ನರಸಿಂಹಾಚಾರ್ಯರಿಗೆ ಸಮರ್ಪಿಸಿರುವುದು ಉಚಿತವಾಗಿದೆ. ಕಲಾವಿದ ಶ್ರೀ ಪಿ. ಆರ್. ತಿಪ್ಪೇಸ್ವಾಮಿಯವರು ಪುಸ್ತಕದ ಉದ್ದಕ್ಕೂ ಅಲ್ಲಲ್ಲಿ ಬರೆದಿರುವ ಗ್ರಾಮಜೀವನದ ಚಿತ್ರಗಳು ಆಕರ್ಷಕವಾಗಿವೆ.

ಇಂತು ಅಂತರಂಗ ಬಹಿರಂಗವೆರಡರಲ್ಲೂ ಅಂದಚಂದಗಳಿಂದ ಕೂಡಿರುವ ಈ ಉತ್ತಮಗ್ರಂಥಕ್ಕೆ ಕರ್ನಾಟಕದ ಮನೆಮನೆಯಲ್ಲೂ ಸ್ಥಾನ ದೊರೆಯಬೇಕು. ಒಟ್ಟಿನಲ್ಲಿ ಈ ಸಂಕಲನ ನಾಡಪದಗಳ ಇತಿಹಾಸದಲ್ಲಿ ಒಂದು ನೂತನ ಅಧ್ಯಾಯ; ಆ ಕ್ಷೇತ್ರದಲ್ಲಿ ಒಂದು ಮೈಲಿಗಲ್ಲು—ಎಂದರೆ ಉತ್ಪ್ರೇಕ್ಷೆಯಾಗಲಾರದು.

ಸಿ.ಪಿ.ಕೆ.

***

ಟಿಬೆಟ್ಟಿನ ಯೋಗಿ ಮಿಲರೇಪ—ಶ್ರೀ ಎಸ್. ಕೆ. ರಾಮಚಂದ್ರರಾಯರಿಂದ; ಪ್ರಕಾಶಕರು: ಕಾವ್ಯಾಲಯ, ಮೈಸೂರು; ಪುಟಗಳು ೧೨೮; ಬೆಲೆ, ಸಾದಾ ರೂ. ೧.೭೫; ಕ್ಯಾಲಿಕೊ ರೂ. ೩.೦೦.

ಟಿಬೆಟ್ಟಿನ ಮತ್ತು ಅದರ ನೆರೆಹೊರೆಯ ದೇಶಗಳಲ್ಲಿ ಪ್ರಸಿದ್ಧನಾದ ಮಿಲರೇಪನು ಪ್ರತಿಬುದ್ಧನಾದ ದಾರ್ಶನಿಕನೂ ಯೋಗಿಯೂ ಸಿದ್ಧಪುರುಷನೂ ಕಾಲಜ್ಞಾನಿಯೂ ಅಲ್ಲದೆ ಅನುಭಾವಿಯಾದ ಕವಿಯೂ ಅಹುದು. ಅವನ ದುಷ್ಕರವಾದ ತಪಶ್ಚರ್ಯೆ ಮತ್ತು ದುರ್ಲಭವಾದ ಅಲೌಕಿಕ ಸಿದ್ಧಿಗಳು—ಇವುಗಳನ್ನು ನೋಡಿದಾಗ ಅವನು ಐತಿಹಾಸಿಕವ್ಯಕ್ತಿಯೊ ಅಥವಾ ಕಾಲ್ಪನಿಕ ವ್ಯಕ್ತಿಯೊ ಎಂಬ ಸಂದೇಹವುಂಟಾದರೂ ಅವನು ಐತಿಹಾಸಿಕವ್ಯಕ್ತಿಯೇ ಎಂಬುದು ನಿರ್ವಿವಾದವಾದುದು.

ಸೂತ್ರಸಿಂಹ ಮತ್ತು ವಜ್ರಸಿಂಹ ಅಣ್ಣತಮ್ಮಂದಿರು. ಮಿಲರೇಪ ಮತ್ತು ಭಾಗ್ಯರಕ್ಷಕಿ ವಜ್ರಸಿಂಹನ ಮಕ್ಕಳು. ಶ್ರೀಮಂತನಾದ ವಜ್ರಸಿಂಹನು ಅಕಾಲ

ಮೃತ್ಯುವಿಗೆ ತುತ್ತಾಗಲು ಅವನ ಹೆಂಡತಿ ಶ್ವೇತಮಾಲೆಯು ಮತ್ತು ಅವಳ ಇಬ್ಬರು ಮಕ್ಕಳ ಸಂರಕ್ಷಣೆಯನ್ನೂ ಅವರ ಆಸ್ತಿಯ ವಹಿವಾಟನ್ನೂ ಅಣ್ಣ ಸೂತ್ರಸಿಂಹನೇ ವಹಿಸಿಕೊಂಡನು. ಆದರೆ ದುಷ್ಟನಾದ ಸೂತ್ರಸಿಂಹನು ತಮ್ಮನ ಆಸ್ತಿಯನ್ನು ತಾನೇ ನುಂಗಿ ಅವನ ಮಕ್ಕಳನ್ನೂ ಬೀದಿಗೆ ತಳ್ಳಿದನು. ಸೇಡಿನಿಂದ ಕುದಿಯಲಾರಂಭಿಸಿದ ಶ್ವೇತಮಾಲೆಯು ತನ್ನ ಮಗ ಮಿಲರೇಪನನ್ನು ಮಾಂತ್ರಿಕವಿದ್ಯೆಯ ಸಿದ್ಧಿಗಾಗಿ ಯೋಗ್ಯ ಗುರುವೊಬ್ಬನ ಬಳಿಗೆ ಕಳಿಸಿಕೊಟ್ಟಳು. ಈ ವಿದ್ಯೆಯನ್ನು ಕರಗತಮಾಡಿ ಕೊಂಡ ಮಿಲರೇಪನು ಮಾರಕಮಂತ್ರಪ್ರಯೋಗದಿಂದ ಸೂತ್ರಸಿಂಹನ ಸಂಸಾರ ವನ್ನು—ಅವನು ಮತ್ತು ಅವನ ಹೆಂಡತಿ ಹೊರತು ಧ್ವಂಸಮಾಡಿದನು. ಹಾಗೆಯೇ ತನ್ನನ್ನು ಆ ಊರಿನವರು ಕೊಲೆಮಾಡಲು ಯತ್ನಿಸಿದುದರಿಂದ ಚಂಡಮಾರುತವನ್ನೆಬ್ಬಿಸಿ ಊರನ್ನು ಹಾಳುಮಾಡಿದನು. ಆದರೆ ಈ ಹತ್ಯಾಕಾಂಡವು ಮಿಲರೇಪನ ಕಣ್ಣು ತೆರೆಯಿಸಿತು. ಜೀವನದ ನಶ್ವರತೆ ಮುಂದಟ್ಟಾಯಿತು. ಆದುದರಿಂದ ತಾನು ಇದುವರೆಗೆ ಮಾಡಿದ ಪಾಪರಾಶಿಯನ್ನು ದಹಿಸಿ ಧರ್ಮಜೀವನ ನಡೆಸಲು ನಿಶ್ಚಯಿಸಿದನು. ಭಾರತ ದೇಶದ ಪ್ರಸಿದ್ಧ ಸಂತನಾದ ನರೋಪನ ಮೆಚ್ಚಿನ ಶಿಷ್ಯ ಮಾರ್ಪನೆಂಬವನನ್ನು ಮಿಲರೇಪನು ಆಶ್ರಯಿಸಿದನು. ಆದರೆ ಆಗ ಆ ಗುರುವಿನ ಬಳಿ ದೀಕ್ಷೆ ಪಡೆಯಲು ಶಿಷ್ಯನಾದ ಮಿಲರೇಪನು ಪಟ್ಟ ಕಷ್ಟ ಅಷ್ಟಿಷ್ಟಲ್ಲ. ಗುರುವಿನ ಕಠಿಣಹೃದಯವು ಏನಾದರೂ ಕರಗಲೇ ಇಲ್ಲ. ಗುರುಪತ್ನಿಯ ಅನುಕಂಪದಿಂದ ಮಿಲರೇಪನು ಹೇಗೊ ಜೀವನ ಸಾಗಿಸುತ್ತಿದ್ದ. ಕೊನೆಗೊಮ್ಮೆ ಗುರುವೊಲಿದು ತಾರಕಮಂತ್ರವನ್ನು ಪದೇಶಿಸಿ ದನು. ಸಂನ್ಯಾಸದೀಕ್ಷೆಯನ್ನೂ ಕೊಟ್ಟನು. ಗುರುವಿತ್ತ ಮಂತ್ರವನ್ನು ಬಹು ಶ್ರದ್ಧೆ ಯಿಂದ ಸ್ವೀಕರಿಸಿದ ಮಿಲರೇಪ ಹನ್ನೊಂದು ತಿಂಗಳು ಕೂತಲ್ಲಿಂದ ಏಳದೆ ಸಾಧನೆ ನಡೆಸಿದನು, ಸಿದ್ಧನಾದನು. ಅನಂತರ ಬಹು ಕಷ್ಟದಿಂದ ಗುರುವನ್ನಗಲಿ ತಾಯಿಯನ್ನು ನೋಡಲು ಮನೆಗೆ ಮರಳಿದನು. ಆದರೆ ಅವನ ತಾಯಿ ಮಡಿದಿದ್ದಳು. ಇದರಿಂದ ಅವನ ವೈರಾಗ್ಯವು ಇನ್ನೂ ಹೆಚ್ಚಿತು. ಈ ಸಂದರ್ಭದಲ್ಲಿ ಅವನ ಗುರುತುಹಿಡಿದ ಊರಿನವರೂ ಮತ್ತು ಸೂತ್ರಸಿಂಹ ದಂಪತಿಗಳೂ ಅವನಿಗೆ ಸಾಕಷ್ಟು ಉಪದ್ರವ ಕೊಟ್ಟರೂ ಅವನ ಮಂತ್ರಶಕ್ತಿಯು ಜ್ಞಾಪಕಕ್ಕೆ ಬಂದು ಹೆದರಿ ಸುಮ್ಮನಾದರು.

ಮಿಲರೇಪ ತನ್ನ ಊರಿನ ಬಳಿಯ ಗುಹೆಯೊಂದರಲ್ಲಿ ಪುನಃ ಘೋರ ತಪಶ್ಚರ್ಯೆ ಯನ್ನು ಕೈಕೊಂಡನು. ನಿರ್ವಾಣ ಅಥವಾ ಮರಣ ಎಂಬ ದೃಢನಿರ್ಧಾರದಿಂದ ಕುಳಿತನು. ಗುರುವಿನ ಅನುಗ್ರಹದಿಂದಲೂ ಸಾಧನೆಯ ಬಲದಿಂದಲೂ ಪೂರ್ಣ ಜ್ಞಾನೋದಯವನ್ನು ಪಡೆದನು.

ನಿರ್ವಾಣದ ಆನಂದವನ್ನು ಸವಿದ ಮಿಲರೇಪನು ಈಗ ಲೋಕಕಲ್ಯಾಣಕ್ಕಾಗಿ

ಉದ್ಯುಕ್ತನಾದನು. ಅವನ ವಿರೋಧಿಗಳಾಗಿದ್ದವರೆಲ್ಲರೂ ಪರಿವರ್ತನಗೊಂಡರು. ಅನೇಕರು ಅವನ ಬಳಿ ಶಾಂತಿಯನ್ನು ಪಡೆದರು.

ಪಾಂಡಿತ್ಯದಿಂದಲೂ ಶ್ರೀಮಂತಿಕೆಯಿಂದಲೂ ಕೊಬ್ಬಿದ್ದ ಟ್ಸಿಪುವಾ ಎಂಬ ಲಾಮನೋರ್ವನು ಜನಪ್ರಿಯನಾಗಿದ್ದ ಮಿಲರೇಪನ ಮೇಲೆ ಅಸೂಯೆಗೊಂಡು ಸೂಳೆಯೊಬ್ಬಳ ಮೂಲಕ ವಿಷ ಬೆರೆಸಿದ್ದ ಕಜ್ಜಾಯವನ್ನು ಕಾಣಿಕೆಯಾಗಿ ಕಳಿಸಿ ಕೊಟ್ಟನು. ಸರ್ವಜ್ಞನಾಗಿದ್ದ ಮಿಲರೇಪನು ಇದನ್ನು ತಿಳಿದಿದ್ದರೂ ತನ್ನ ಇಹಲೋಕ ಲೀಲೆಯು ಮುಗಿದಿದ್ದರಿಂದ ಅವುಗಳನ್ನು ಸ್ವೀಕರಿಸಿದನು. ಕೊನೆಗಾಲವು ಸಮೀಪಿಸಿದ್ದ ರಿಂದ ತನ್ನ ಶಿಷ್ಯಸಮುದಾಯವನ್ನು ಕರೆಸಿ ಅವರಿಗೆ ತನ್ನ ಅಂತಿಮೋಪದೇಶವನ್ನು ನೀಡಿದನು. ಸಾಯಲಿದ್ದ ಅವನನ್ನು ನೋಡಿಹೋಗಲು, ಅರ್ಥಾತ್ ಹಂಗಿಸಲು, ಲಾಮಾಟ್ಸಿಪುವಾ ಬಂದನು. ಆದರೆ ಅವನನ್ನು ಹಂಗಿಸಲು ಬಂದ ಆ ಲಾಮನಿಗೆ ಮಿಲರೇಪನ ಮಹಿಮೆಯು ಅರ್ಥವಾಯಿತು. ತನ್ನ ದುಷ್ಕೃತ್ಯಗಳಿಗಾಗಿ ಪಶ್ಚಾ ತ್ತಾಪ ಪಟ್ಟು ಕ್ಷಮೆ ಬೇಡಿದನು. ಇದಾದ ಸ್ವಲ್ಪ ಕಾಲದ ಮೇಲೆ ಮಿಲರೇಪ ಮಹಾನಿರ್ವಾಣವನ್ನು ಹೊಂದಿದನು. ಆಗ ಅವನಿಗೆ ಎಂಬತ್ತನಾಲ್ಕು ವರುಷ.

ಮಿಲರೇಪನ ಉಪದೇಶಗಳೆಲ್ಲ ಭಾವಪೂರಿತ ಕವಿತೆಗಳಲ್ಲಿವೆ. ಲೇಖಕರು ಅವುಗಳಲ್ಲಿ ಕೆಲವನ್ನು ಆರಿಸಿ ಭಾವಾನುವಾದವನ್ನು ಕೊಟ್ಟಿದ್ದಾರೆ. ಗ್ರಂಥಕರ್ತರು ಬೆಂಗಳೂರಿ ನಲ್ಲಿರುವ ಅಖಿಲಭಾರತ ಮಾನಸಿಕ ಆರೋಗ್ಯಸಂಸ್ಥೆಯ ಅಧಿಕಾರಿಗಳಲ್ಲೊಬ್ಬರು. ಭಗವಾನ್ ಬುದ್ಧದೇವನ ಜೀವನದಿಂದ ಆಕರ್ಷಿತರಾದ ಇವರು ಬುದ್ಧನ ಜೀವನ ಮತ್ತು ಬೌದ್ಧ ಧರ್ಮದ ಬಗ್ಗೆ ತೀವ್ರ ವ್ಯಾಸಂಗವನ್ನು ನಡೆಸಿ ಆಳವಾದ ಪಾಂಡಿತ್ಯ ವನ್ನು ಪಡೆದುಕೊಂಡಿದ್ದಾರೆ. ಸುಲಲಿತ ಶೈಲಿಯಲ್ಲಿ ಟಿಬೆಟ್ಟಿನ ಯೋಗಿವರ್ಯನ ಜೀವನವನ್ನು ಕನ್ನಡಿಗರ ಮುಂದಿಟ್ಟು ಕೃತಾರ್ಥರಾಗಿದ್ದಾರೆ. ಈ ಸಣ್ಣ ಗ್ರಂಥ ವನ್ನಲ್ಲದೆ ಇನ್ನೂ ಕೆಲವು ಗ್ರಂಥಗಳನ್ನು ಬರೆದಿದ್ದಾರೆ.

ಪುಸ್ತಕದಲ್ಲಿ ಒಂದೆರಡು ಕಡೆ ಹೆಸರುಗಳ ಬಗ್ಗೆ ಗೊಂದಲವಾಗಿದೆ. ಪುಟ ೧೪, ೧೫ರಲ್ಲಿ ಹೇಳಿರುವಂತೆ ನೋಡಿದರೆ ವಜ್ರಸಿಂಹನ ಮಗ ಜ್ಞಾನಸಮುದ್ರನೆಂದೂ, ಅವನ ಮಗ ಮಿಲರೇಪನೆಂದೂ ಅರ್ಥವಾಗುತ್ತದೆ. ಎಂದರೆ ಮಿಲರೇಪನು ವಜ್ರಸಿಂಹನ ಮೊಮ್ಮಗನೆಂಬ ಅಭಿಪ್ರಾಯವುಂಟಾಗುತ್ತದೆ. ಆದರೆ ಮುಂದೆ ವಜ್ರಸಿಂಹನು ತಂದೆ ಯೆಂದು ಹೇಳಿದೆ. ಪುಟ ೨೬, ೨೭ ಮತ್ತು ೨೮ ರಲ್ಲಿ ಸೂತ್ರಸಿಂಹನ ಹೆಸರಿಗೆ ವಜ್ರ ಸಿಂಹ ಎಂದು ಬಿದ್ದಿದೆ, ಪುಟ ೨೫ ರಲ್ಲಿ ಶೀಲಸಮುದ್ರನು ರುದ್ರದಮನನ ಶಿಷ್ಯನೆಂದು ಹೇಳಿ ಪುನಃ ಪುಟ ೨೬ ರಲ್ಲಿ ರುದ್ರದಮನನು ಶೀಲಸಮುದ್ರನ ಶಿಷ್ಯನೆಂಬ ಅಭಿಪ್ರಾಯ ಬರುವ ವಾಕ್ಯವಿದೆ. ("ರುದ್ರದಮನ ತನ್ನ ಗುರ್ವಾಜ್ಞೆಯನ್ನು ಶಿರಸಾವಹಿಸಿ . . .").

ಪುಟ ೮೧, ೮೨ (ಮತ್ತು ಅಲ್ಲಿಂದ ಮುಂದಕ್ಕೆ) ಸೊತ್ರಸಿಂಹ ಮತ್ತು ಅವನ ಹೆಂಡತಿಯನ್ನು ದೊಡ್ಡಪ್ಪ, ದೊಡ್ಡಮ್ಮ ಎಂದು ಹೇಳುವ ಬದಲು ಚಿಕ್ಕಪ್ಪ, ಚಿಕ್ಕಮ್ಮ ಎಂದು ಕರೆದಿದೆ. ಇವನ್ನು ಮುಂದಿನ ಮುದ್ರಣದಲ್ಲಿ ಸರಿಪಡಿಸಬಹುದು.

ಅಂದವಾದ ಮುದ್ರಣ ಮತ್ತು ಆಕರ್ಷಕರೂಪ ಪುಸ್ತಕದ ಸೌಂದರ್ಯವನ್ನು ಹೆಚ್ಚಿಸಿವೆ. ಈಗಾಗಲೇ ಅನೇಕ ಪುಸ್ತಕವನ್ನು ಪ್ರಕಟಿಸಿ ಹೆಸರಾಂತ ಕಾವ್ಯಾಲಯದವರು ಈ ಪುಸ್ತಕವನ್ನೂ ತಮ್ಮ ಮಾಲೆಯಲ್ಲಿ ಸೇರಿಸಿರುವುದು ಅವರ ಉತ್ತಮ ಸಂಪ್ರದಾಯಕ್ಕನುಸಾರವಾಗಿಯೆ ಇದೆ.

ಸೂರ್ಯಚೈತನ್ಯ

* * *

ಪತಿವ್ರತೆ (ಸಾಮಾಜಿಕ ಕಾದಂಬರಿ)—ಲೇಖಕರು: ಶ್ರೀಕೃಪಾನಂದ; ಪ್ರಕಾಶಕರು: ಸತ್ಸಾಹಿತ್ಯ ಪ್ರಕಾಶನ ಮಂದಿರ, ತೀರ್ಥಹಳ್ಳಿ; ಪುಟಗಳು ೧೧೦+೮; ಬೆಲೆ, ರೂ. ೧-೪-೦.

ಭಗವದ್ಗೀತೆಯ ಪಾವನವಾದ ಅಮೃತ ಗಂಗಾಜಲದಿಂದ ತನ್ನ ಬಾಳ ದಿವ್ಯ ಜ್ಯೋತಿಯನ್ನು ಬೆಳಗಿಸಿಕೊಂಡಿದ್ದ ಗೋಪಾಲನಿಂದ ಅವನ ಪರಿಸರಣದಲ್ಲಿ ಬಂದ ಪ್ರತಿಯೊಬ್ಬ ವ್ಯಕ್ತಿಯೂ ಪ್ರಭಾವಿತನಾಗಿ ಪುನೀತರಾದ ಮಹಾಕಥೆ "ಪತಿವ್ರತೆ" ಯಲ್ಲಿದೆ. ಇದರಲ್ಲಿ ಮಹಾನೀಚ ಕೃತ್ಯಗಳಿಂದ ಅಧಃಪತನಕ್ಕಿಳಿಯುತ್ತಿದ್ದ ವಿಷಯ ಲಂಪಟನೊಬ್ಬನೂ ಕೂಡ, ಗೀತಾಮೃತಸೇಚನದಿಂದ ಸ್ಥಿರಳಾದ ನಾರೀಮಣಿಯೊಬ್ಬಳಿಂದ ಊರ್ಧ್ವಮುಖಿಯಾಗುತ್ತಾನೆ; ತನ್ನ ಉದ್ಧಾರವನ್ನು ಕಂಡುಕೊಳ್ಳುತ್ತಾನೆ.

ವೆಂಕಟಾಚಾರ್ಯ ಮತ್ತು ಸಾವಿತ್ರಮ್ಮನವರ ಬಾಳಿಗೆ ನಕ್ಷತ್ರವಾಗಿ ಹುಟ್ಟುತ್ತಾಳೆ ಸರಸ್ವತಿ. ಈ ಮೂವರುಳ್ಳ ಸಂಸಾರಕ್ಕೆ ಕಿರೀಟಪ್ರಾಯವಾಗಿ ಬೆಳಗುತ್ತಿರುತ್ತಾಳೆ, ಸಾವಿತ್ರಿಯ ಅತ್ತೆಯಾದ ನಾಗಜ್ಜಿ. ಈ ಒಬ್ಬೊಬ್ಬರೂ ಬದುಕಿನ ಅನಂತಶಾಂತಿಗೆ ಆದರ್ಶಪ್ರಾಯರಾದವರು. ನಡೆಯಲ್ಲಿ, ನುಡಿಯಲ್ಲಿ, ರೀತಿ ನೀತಿಗಳಲ್ಲಿ ಪ್ರತಿಯೊಬ್ಬರೂ ದೈವೀಗುಣ ಸಂಪನ್ನರು. ವೆಂಕಟಾಚಾರ್ಯರು ಹಿರಿಯ ವ್ಯಕ್ತಿ. ಗುಣಶೀಲಗಳಲ್ಲಿ ನಾಗಜ್ಜಿ ಚಿನ್ನವಾದರೆ ಸಾವಿತ್ರಮ್ಮ ಅಪರಂಜಿ. ಅತ್ತೆಯನ್ನು ಪ್ರತ್ಯಕ್ಷದೇವತೆ ಎಂದು ತಿಳಿದು ಸಾವಿತ್ರಮ್ಮ ನಡೆದುಕೊಂಡರೆ, ಸೊಸೆಯನ್ನು ತನ್ನ ಹೊಟ್ಟೆಯಲ್ಲಿ ಬಂದ ಮಗಳು, ತನ್ನ ಕಣ್ಣಬೊಂಬೆ ಎಂದು ಪ್ರೀತಿಸುತ್ತಿದ್ದಳು ನಾಗಜ್ಜಿ. ಇಂತಹ ಉದಾತ್ತಮನೋಭಾವದ ಸ್ತ್ರೀಯರು ಈಗಿನ ಕಾಲದಲ್ಲಿ ಬಹಳ ವಿರಳ. ಸಾವಿತ್ರಮ್ಮನ ಗುಣದ ನೆರಳಾಗಿ, ಶೀಲದ ಮೂರ್ತಿಯಾಗಿ ಜನಿಸಿದಳು ಸರಸ್ವತಿ.

ವಿಧಿಲೀಲೆಯಿಂದ ಸಾವಿತ್ರಮ್ಮ ಸತ್ತು ಸ್ವರ್ಗ ಸೇರಿದಳು. ಸರಸ್ವತಿ ಬಿದಿಗೆಯ ಚಂದ್ರನಂತೆ ಬೆಳೆದು, ಶಿಕ್ಷಣ ಪಡೆದು, ಗೋಪಾಲನ ಸಂಪರ್ಕದಿಂದ ಗೀತೆಯ ಸಂಸರ್ಗವನ್ನು ಹೊಂದಿ, ಧನಿಕ ಶ್ರೀನಿವಾಸನ ಕೈಹಿಡಿದು ಮನೆಗೆ ಯಜಮಾನಿ ಯಾದಳು. ಕಾಮಾಂಧನಾಗಿದ್ದ ಶಂಕರನಿಗೆ ಬೆಳಕುತೋರಿಸಿ ಅವನ ಜೀವನವನ್ನು ಪಾವನಮಾಡಿದಳು.

ಬಡವರ ಮನೆಯಲ್ಲಿ ಹುಟ್ಟಿದರೂ ಜ್ಞಾನದಲ್ಲಿ ಬಡವನಾಗಿರಲಿಲ್ಲ ಗೋಪಾಲ. ಇಷ್ಟು ಚಿಕ್ಕ ವಯಸ್ಸಿನಲ್ಲಿಯೇ ಉಪನಿಷತ್ತು, ಭಗವದ್ಗೀತೆ ಮತ್ತು ಬ್ರಹ್ಮಸೂತ್ರ ಗಳನ್ನು ಹೃದ್ಗತಮಾಡಿಕೊಂಡು ಅಪಾರವಾದ ಅಧ್ಯಾತ್ಮಜ್ಞಾನವನ್ನು ಪಡೆದಿದ್ದ. ತನ್ನ ಉತ್ತಮಗುಣದಿಂದ ಮತ್ತು ಬುದ್ಧಿಕುಶಲತೆಯಿಂದ ತನ್ನ ಶಾಲೆಯಲ್ಲಿ ಮೊದಲನೆ ಯವನಾಗಿದ್ದನಲ್ಲದೆ ಸರಸ್ವತಿಯ ಮನೆಯವರಿಗೆ ಪರಿಚಯವಾದ ತಕ್ಷಣ ಅವರ ಮನಮೆಚ್ಚಿಸಿ ಮನೆಯ ಒಬ್ಬ ವ್ಯಕ್ತಿಯಾಗಿ ಪರಿಣಮಿಸಿದ.

ಅತ್ಯುತ್ತಮ ಕತೆಯೊಂದನ್ನು ತೆಗೆದುಕೊಂಡು ಲೇಖಕರು ಮನೋಹರವಾದ ಕಾದಂಬರಿಯನ್ನು ಸೃಷ್ಟಿಸಿದ್ದಾರೆ. ಬರವಣಿಗೆ ಚೊಕ್ಕವಾಗಿದೆ. ಯಾವ ಸಂದರ್ಭ ದಲ್ಲೂ ಹೇಳಬೇಕಾದುದಕ್ಕಿಂತಲೂ ಹೆಚ್ಚಿಗೆ ಹೇಳಿಲ್ಲ; ಅನಾವಶ್ಯಕವಾದುದನ್ನು ಸೇರಿಸದೆ ಬರವಣಿಗೆಯನ್ನು ಬೆಳೆಸಿದ್ದಾರೆ.

ಇದು ಲೇಖಕರ ಪ್ರಥಮ ಕೃತಿಯಾದರೂ ಹೆಚ್ಚು ಉತ್ತಮ ಕೃತಿಯ ಲಕ್ಷಣಗಳನ್ನೊಳಗೊಂಡಿದೆ. ವಸ್ತುಸಂವಿಧಾನ, ಪಾತ್ರ ಪರಿಪೋಷಣೆ, ಕಥನ ಕ್ರಮ—ಎಲ್ಲದರಲ್ಲೂ ಲೇಖಕರು ಪಳಗಿರುವ ಲೇಖನಿಯ ಕೈವಾಡವನ್ನು ತೋರಿ ಸಿದ್ದಾರೆ. ಯಾವ ಕಡೆಯಲ್ಲೂ ನೀರಸವಾದ ವಿಷಯಗಳನ್ನಾಗಲಿ, ಅಶ್ಲೀಲವಾದ ವಿಚಾರಗಳನ್ನಾಗಲಿ ನಾವು ಕಾಣುವುದಿಲ್ಲ. ಇವರ ಬರಹ ಸರಳವಾಗಿ ತುಂಬು ಗಂಭೀರವಾಗಿ ಮುಂದುವರೆಯುತ್ತದೆ.

ಇವರ ಕಥನಕ್ರಮದಲ್ಲಿ ಆಡಂಬರವಿಲ್ಲ, ಬೆಡಗಿನ ಲಾಸ್ಯವಿಲ್ಲ. ನಿರೂಪಣೆಯ ನಿರಾಡಂಬರತ್ವ ಅನೇಕ ವೇಳೆ ಬೇಸರ ತರುವಷ್ಟು ಸಾಧಾರಣವಾಗಿ ಪರಿಣಮಿಸುತ್ತದೆ. ಕಥನಕ್ರಮ ಗಂಭೀರ ಮನೋಹರವಾಗಿದ್ದರೂ ಬೆಡಗಿನ ಲಾಸ್ಯವಿದ್ದರೆ ಇನ್ನೂ ಸೊಗಸಾಗಿರುತ್ತಿತ್ತು ಎನ್ನಿಸುತ್ತದೆ.

ನವನಾಗರಿಕರೆಂದು ಕೆಟ್ಟದಾರಿ ಹಿಡಿಯುತ್ತಿರುವ ವಿದ್ಯಾರ್ಥಿ, ವಿದ್ಯಾರ್ಥಿನಿಯ ಜೀವನದ ಒಂದು ವಾಸ್ತವಿಕ ಚಿತ್ರವನ್ನು ಲೇಖಕರು ಸೊಗಸಾಗಿ ಕೊಟ್ಟಿದ್ದಾರೆ.

ತನ್ನ ಸ್ನೇಹಿತನ ಹೆಂಡತಿಯನ್ನು ಸಾಧಿಸಲು ತೊಡಗಿದ್ದ ಶಂಕರನನ್ನು ಸರಸ್ವತಿ ತನ್ನ ಗೀತಾವಾಣಿಯಿಂದ ಪರಿವರ್ತನಗೊಳಿಸಿದ ಸಮಯದಲ್ಲಿ ಅವನ ಮನಸ್ಸಿನಲ್ಲಾದ

ಹೋರಾಟ ಮತ್ತು ಪರಿವರ್ತನೆಯನ್ನು ಇನ್ನೂ ಚೆನ್ನಾಗಿ ಸ್ಪಷ್ಟವಾಗುವಂತೆ ಚಿತ್ರಿಸಬೇಕಾಗಿತ್ತು.

ಅಧ್ಯಾತ್ಮದ ಹಿನ್ನೆಲೆಯ ಮೇಲೆ ರಚಿತವಾಗಿರುವುದರಿಂದ ಕೃತಿ ಗೌರವಾರ್ಹವಾಗಿ ಎಲ್ಲರಿಗೂ ಆದರ್ಶಪ್ರಾಯವೆನಿಸುತ್ತದೆ. ಗೋಪಾಲನ ಪಾತ್ರ ಮನಮೆಚ್ಚುವಂತಿದ್ದು ಹೆಚ್ಚು ಪ್ರಭಾವಯುತವಾಗಿದೆ.

ಕೆ. ನಾಗೇಂದ್ರಪ್ಪ

*
* *

ಅರಿಸ್ಟಾಟಲನ ಕಾವ್ಯಮೀಮಾಂಸೆ—ಲೇಖಕರು: ಶ್ರೀ ಎನ್. ಬಾಲಸುಬ್ರಹ್ಮಣ್ಯಂ, ಎಂ.ಎ.; ಪ್ರಕಾಶಕರು : ಕಾವ್ಯಾಲಯ ಪ್ರಕಾಶಕರು, ಮೈಸೂರು ; ಬೆಲೆ, ಸಾದಾ ಪ್ರತಿ ರೂ. ೪.೫೦ ; ಕ್ಯಾಲಿಕೊ ಪ್ರತಿ ರೂ. ೬.೦೦.

ಗ್ರೀಕ್ ತತ್ತ್ವಜ್ಞಾನಿಯಾದ ಅರಿಸ್ಟಾಟಲನ ಕಾವ್ಯಮೀಮಾಂಸೆಯು (Poetics) ಗಾತ್ರದಲ್ಲಿ ಚಿಕ್ಕದಾದರೂ ಗುಣಗೌರವದಲ್ಲಿ ಹಿರಿದಾದ ಗ್ರಂಥ. ಇದರಲ್ಲಿ ಕಾವ್ಯದ ಸ್ವರೂಪ, ಗ್ರೀಕ್ ಮಹಾಕಾವ್ಯ ಮತ್ತು ರುದ್ರನಾಟಕದ ಲಕ್ಷಣ ನಿರೂಪಣೆ, ರಚನೆ ಮತ್ತು ಅವುಗಳನ್ನು ಕುರಿತು ತಾತ್ತ್ವಿಕ ವಿವೇಚನೆ ಇದೆ. ಸಾಹಿತ್ಯದ ದರ್ಶನಾತ್ಮಕವಾದ ವಿಮರ್ಶಾಭಿರುಚಿಗೆ ಈ ಗ್ರಂಥವು ಪ್ರೇರಕವೂ ಪ್ರಯೋಜಕವೂ ಆದುದಾಗಿದೆ. ಕ್ರಿ. ಪೂ. ನಾಲ್ಕನೆಯ ಶತಮಾನದಲ್ಲಿ ರಚಿತವಾದ ಈ ಲಕ್ಷಣ ಗ್ರಂಥವು ಪಾಶ್ಚಾತ್ಯರ ಸಕಲ ಭಾಷೆಗಳ ಮೇಲೆ ಮತ್ತು ಪಾಶ್ಚಾತ್ಯ ಸಾಹಿತ್ಯ ವಿಮರ್ಶೆಯ ಮೇಲೆ ಅಚ್ಚಳಿಯದ ಪ್ರಭಾವವನ್ನು ಬೀರಿದೆ. ಇಂತಹ ಗ್ರಂಥವನ್ನು ಶ್ರೀ ಎನ್. ಬಾಲಸುಬ್ರಹ್ಮಣ್ಯಂ ಅವರು ಗ್ರೀಕ್‌ಮೂಲದ ಜೊತೆಗೆ ಅದರ ಹಲವಾರು ಆಂಗ್ಲ ಅನುವಾದಗಳನ್ನು ಪರಿಶೀಲಿಸಿ ಕನ್ನಡದಲ್ಲಿ ಪಾಂಡಿತ್ಯಪೂರ್ಣವಾಗಿ ಅನುವಾದ ಮಾಡಿದ್ದಾರೆ. ಮೂಲದ ಅಭಿಪ್ರಾಯ ಮತ್ತು ಆಶಯಗಳಿಗೆ ಚ್ಯುತಿ ಬಾರದಂತೆ ಅನುವಾದಕರು ಪ್ರಯತ್ನಪಟ್ಟಿದ್ದಾರೆ. ಈ ಗ್ರಂಥಕ್ಕೆ ಮೈಸೂರು ವಿಶ್ವವಿದ್ಯಾನಿಲಯದ ಭಾಷಾ ಶಾಸ್ತ್ರದ ವಿಶ್ರಾಂತ ಪ್ರಾಧ್ಯಾಪಕರಾದ ಡಾ|| ಎ. ಎನ್. ನರಸಿಂಹಯ್ಯನವರು ವಿಚಾರಪರವಾದ ಮುನ್ನುಡಿಯನ್ನು ಬರೆದಿದ್ದಾರೆ. ಲೇಖಕರು ಈ ಗ್ರಂಥವನ್ನು ತಮ್ಮ ಗುರುಗಳಾದ ಶ್ರೀ ಎಸ್. ವಿ. ರಂಗಣ್ಣನವರಿಗೆ ಅರ್ಪಿಸಿದ್ದಾರೆ.

ಪೀಠಿಕೆಯಲ್ಲಿ ಲೇಖಕರು ಅರಿಸ್ಟಾಟಲನ ಬಹುಮುಖವಾದ ಪಾಂಡಿತ್ಯ ಮತ್ತು ಶಾಸ್ತ್ರದೃಷ್ಟಿಯನ್ನು ವಿವರಿಸುತ್ತ ಆತನ ಸಿದ್ಧಾಂತಗಳನ್ನು ಸುದೀರ್ಘವಾಗಿ ಚರ್ಚಿಸಿ

ಅವುಗಳಿಗೂ ಭಾರತೀಯ ಕಾವ್ಯಸಿದ್ಧಾಂತಗಳಿಗೂ ಇರುವ ಸಾದೃಶ್ಯವನ್ನು ಯಥೋಚಿತ ಸಂದರ್ಭಗಳಲ್ಲಿ ತೋರಿಸಿಕೊಟ್ಟಿದ್ದಾರೆ. ಇದಲ್ಲದೆ ಅಂದಿನ ಗ್ರೀಕ್ ಸಾಹಿತ್ಯವನ್ನಷ್ಟೆ ವಿಮರ್ಶಿಸುವಾಗ ಅರಿಸ್ಟಾಟಲನ ನಿರೂಪಣೆಯಲ್ಲಿ ಆಗಿರಬಹುದಾದ ಲೋಪದೋಷಗಳನ್ನು ಆಧುನಿಕ ವಿಮರ್ಶೆಯ ದೃಷ್ಟಿಯಿಂದ ವಿವೇಚಿಸಿದ್ದಾರೆ. ಗ್ರಂಥದ ಕೊನೆಯಲ್ಲಿ ಕೊಟ್ಟಿರುವ ಪ್ರಾಚೀನ ಗ್ರೀಕ್ ಸಾಹಿತ್ಯದ ಪರಿಚಯ, ಗ್ರೀಕ್ ಕಾವ್ಯಗಳಲ್ಲಿ ಬರುವ ಕಥಾನಕಗಳು, 'ಅನುಕರಣ,' 'ಅನಜ್ಞಾನ,' 'ಪರಿವೃತ್ತಿ,' 'ಭಾವಶೋಧನೆ (ಶುದ್ಧಿ),' ಇವೇ ಮುಂತಾದ ಕೆಲವು ವಿಶೇಷ ವಿಷಯಗಳ ವಿವರಣೆ, ಪಾರಿಭಾಷಿಕ ಶಬ್ದಕೋಶ ಇವುಗಳಿಂದ ಗ್ರಂಥದ ಉಪಯುಕ್ತತೆ ಹೆಚ್ಚಿದೆ. ಅರಿಸ್ಟಾಟಲನ ಅಭಿಪ್ರಾಯಗಳನ್ನು ತಿಳಿದುಕೊಳ್ಳಲು ಸಾಹಿತ್ಯಾಭ್ಯಾಸಿಗಳಿಗೆ ಇವುಗಳಿಂದ ತುಂಬ ಸಹಾಯ ಸಿಕ್ಕುತ್ತದೆ. ಗ್ರೀಕ್ ಕಥೆಗಳಲ್ಲಿ ಬರುವ ಘಟನೆಗಳ ವೈವಿಧ್ಯ ಮತ್ತು ವೈಚಿತ್ರ್ಯಪೂರ್ಣವಾದ ಸಂಯೋಜನೆಯಿಂದ ರುದ್ರನಾಟಕದಲ್ಲಿ ಪಾತ್ರಕ್ಕೆ ಬದಲು ವಸ್ತುವಿಗೆ ಕೊಟ್ಟಿರುವ ಪ್ರಾಧಾನ್ಯವನ್ನು ತಿಳಿಯಬಹುದಾಗಿದೆ. ವಾಸ್ತವಿಕ ಜೀವನದಲ್ಲಿ ಶೀಲವು ಕ್ರಿಯೆಗೆ ಅಧೀನವಾಗಿರುವುದರಿಂದ ಮತ್ತು ನಾಟಕದ ವಸ್ತು ನಾಟಕಕಾರನ ಸಮಗ್ರ ಜೀವನ ದೃಷ್ಟಿಯನ್ನು ಮೂಡಿಸುವ ಕಾರಣ ಕಥಾವಸ್ತುವಿಗೆ ಪಾತ್ರಗಳಿಗಿಂತ ಹೆಚ್ಚಿನ ಮಹತ್ವವಿದೆಯೆಂಬ ಅರಿಸ್ಟಾಟಲನ ಅಭಿಪ್ರಾಯಕ್ಕೆ ಈ ಮಾತಿನಿಂದಲೂ ಪುಷ್ಟಿ ಸಿಕ್ಕುತ್ತದೆ.

ಮೂಲದ ಅನುವಾದ ೯೨ ಪುಟಗಳಲ್ಲಿ ಬಂದಿದೆ. ಅನುವಾದ ಭಾಗವು ೨೬ ಅಧ್ಯಾಯಗಳಲ್ಲಿದೆ. ಮೊದಲನೆಯ ಐದು ಅಧ್ಯಾಯಗಳಲ್ಲಿ ಕಲೆಯ ಸಾಮಾನ್ಯ ಸ್ವರೂಪ, ಕಲೆಯಲ್ಲಿ ಲಲಿತ ಹಾಗು ಪ್ರಯೋಜಕ ಎಂಬ ಭೇದ, ಗ್ರೀಕ್ ಕಾವ್ಯದ ಹುಟ್ಟು ಮತ್ತು ಬೆಳವಣಿಗೆ ಮುಂತಾದುವುಗಳನ್ನು ಸ್ಥೂಲವಾಗಿ ಹೇಳಿದೆ. ಮುಂದಿನ ಹದಿಮೂರು ಅಧ್ಯಾಯಗಳಲ್ಲಿ ರುದ್ರನಾಟಕವನ್ನು ರಚಿಸುವ ವಿಧಾನ, ವಸ್ತು, ಪಾತ್ರ, ರುದ್ರಪಾತ್ರಗಳ ಭಾವನೆಗಳನ್ನು ಕುರಿತು ಹೇಳಿದೆ. ಇದರಲ್ಲಿ ಬಹುಭಾಗ ವಸ್ತು ವಿಮರ್ಶೆಯನ್ನು ಕುರಿತಿದೆ. ಮುಂದಿನ ಮೂರು ಅಧ್ಯಾಯಗಳಲ್ಲಿ ಶೈಲಿ ಮತ್ತು ಭಾಷೆಯ ಬಗ್ಗೆ ಕೇವಲ ತಾರ್ಕಿಕವಾದ ವಿಮರ್ಶೆಯಿದೆ. ಕೊನೆಯ ನಾಲ್ಕು ಅಧ್ಯಾಯಗಳಲ್ಲಿ ಮಹಾಕಾವ್ಯ ಮತ್ತು ರುದ್ರನಾಟಕಗಳ ಪರಸ್ಪರ ಸಾದೃಶ್ಯ ವ್ಯತ್ಯಾಸಗಳನ್ನು ತಿಳಿಸಿ ಕಾವ್ಯಕ್ಕಿಂತ ನಾಟಕವೇ ಶ್ರೇಷ್ಠ ಎಂದು ಹೇಳಿದೆ.

ಅನುವಾದದ ಭಾಷೆ ಸರಳವಾಗಿದ್ದರೂ ಶೈಲಿಯು ಸುಲಭಗ್ರಾಹ್ಯವಾಗಿಲ್ಲ. ಅಲ್ಲಲ್ಲಿ ಮೂಲದ ಶೈಲಿಯ ಛಾಯೆ ತೋರಿದೆ. ಇದರಿಂದಾಗಿ ಅನುವಾದ ಭಾಗವು ಸಾಕಷ್ಟು ಸುಬೋಧವಾಗಿಲ್ಲ. ಇದಕ್ಕೆ ಮೂಲದ ರಚನೆಯೇ ಕಾರಣವಾಗಿರಬೇಕು.

ಒಂದು ಭಾಷೆಯಲ್ಲಿ ವ್ಯಾಪಕವಾದ ಅರ್ಥವನ್ನು ಪರಿಮಿತವಾದ ಪದಗಳಲ್ಲಿ ಹೇಳುವ ಶಕ್ತಿ ಸಹಜವಾಗಿದ್ದರೂ ಅದು ಬೇರೆ ಭಾಷೆಯಲ್ಲಿ ಇರಲೇಬೇಕೆಂದಿಲ್ಲ. ಈ ದೃಷ್ಟಿಯಿಂದ ಅನುವಾದಗಳು ವಿವರಣಾತ್ಮಕವಾಗಿದ್ದಷ್ಟು ಸುಲಭ ಗ್ರಾಹ್ಯವೆನಿಸುವುವು. ಸಂಬಂಧಿಸಿದ ಅಧ್ಯಾಯಗಳ ಪ್ರಾರಂಭದಲ್ಲಿ ಕೊಟ್ಟಿರುವ ವಿವರಗಳು ಮೂಲದ ಆಶಯ ಮತ್ತು ಅಭಿಪ್ರಾಯಗಳನ್ನು ತಿಳಿದುಕೊಳ್ಳಲು ತುಂಬ ಸಹಾಯಕವಾಗಿವೆ. ಅರ್ಥ ವಿವರಣೆಗಾಗಿ ಅನುವಾದದ ಪ್ರತಿ ಪುಟಗಳಲ್ಲಿಯೂ ಟಿಪ್ಪಣಿಗಳನ್ನು ಕೊಡಲಾಗಿದೆ.

ಕೆಲವು ಪಾರಿಭಾಷಿಕ ಶಬ್ದಗಳ ಅನುವಾದ ಅರ್ಥವ್ಯಕ್ತಿಯ ದೃಷ್ಟಿಯಿಂದ ಸಮರ್ಪಕವಾಗಿಲ್ಲ. 'ಅನಜ್ಞಾನ' ಮತ್ತು 'ಪರಿವೃತ್ತಿ' ಇವು ಕೇವಲ ಪದಾನುವಾದಗಳಾಗಿ ಅವುಗಳ ಅರ್ಥ ಸುಲಭವಾಗಿ ಆಗುವುದಿಲ್ಲ. 'ಪರಿವೃತ್ತಿಗಳು' ಎಂಬ ಪದಕ್ಕಿಂತ 'ಪರಿವರ್ತಗಳು' ಎಂಬ ಪದವು 'ಸ್ಥಿತ್ಯಂತರಗಳು' ಎಂಬ ಅರ್ಥವನ್ನು ನೇರವಾಗಿ ಸೂಚಿಸುವುದು. ಸಂಸ್ಕೃತ ಕವಿಗಳು ಈ ಅರ್ಥದಲ್ಲಿ ಈ ಪದವನ್ನು ಪ್ರಯೋಗಿಸಿದ್ದಾರೆ. Monotony ಎಂಬ ಪದಕ್ಕೆ 'ಏಕನಾದ' ಎನ್ನುವುದರಿಂದ ಸಂಪೂರ್ಣ ಬೋಧೆಯಾಗಲಾರದು. 'ನೀರಸತೆ'ಯ ಸೂಚನೆ ಅದರಲ್ಲಿಲ್ಲ. Consistent ಎಂಬುದಕ್ಕೆ 'ಸುಸಂಗತ', Current word ಎಂಬುದಕ್ಕೆ 'ಬಳಕೆಯ ಪದ' ಎಂದು ಅನುವಾದ ಮಾಡಿದರೆ ಚೆನ್ನಾಗಬಹುದಲ್ಲವೆ? 'ವಸ್ತುವಾಗುಳ್ಳ' ಎಂಬಲ್ಲಿ ಸಂಧಿ ಕಾರ್ಯವು ಉಚ್ಚಾರಕ್ಲಿಷ್ಟತೆಗೆ ಎಡೆಕೊಡುವುದು. ಪುಟ ೯೯ ರ ಟಿಪ್ಪಣಿಯಲ್ಲಿ 'ಅವನನ್ನು' ಎಂಬುದು ಅಚ್ಚಿನ ದೋಷದಿಂದ 'ಅವನನು' ಎಂದು ಅಚ್ಚಾಗಿದೆ. ಪ್ರಮಾಣ ಗ್ರಂಥಗಳ ಪಟ್ಟಿಯನ್ನು ನೋಡಿದರೆ ಲೇಖಕರ ತುಲನಾತ್ಮಕ ದೃಷ್ಟಿ, ಅಧ್ಯಯನ ಮತ್ತು ವಿದ್ವತ್‌ಪೂರ್ಣ ಪರಿಶ್ರಮಗಳು ವಿದಿತವಾಗುತ್ತವೆ. ತುಲನಾತ್ಮಕ ಕಾವ್ಯಮೀಮಾಂಸೆ ಮತ್ತು ಸಾಹಿತ್ಯ ವಿಮರ್ಶೆಗೆ ಪ್ರೇರಕವೂ ಪ್ರಯೋಜಕವೂ ಆದ ಈ ಗ್ರಂಥದ ಅಧ್ಯಯನದಿಂದ ಕನ್ನಡಿಗರಲ್ಲಿ ವಿಮರ್ಶಾಭಿರುಚಿ ಬೆಳೆದು ಬರಲೆಂದು ಹಾರೈಸುತ್ತೇವೆ.

ಕಾವ್ಯವು ಬರಿಯ ಮಿಥ್ಯಾಲಾಪ, ಮೌಲಿಕತೆ ಇಲ್ಲದ ಅನುಕರಣ, ಅನೈತಿಕ, ಉದ್ವೇಗಕಾರಕ ಇವೇ ಮುಂತಾದ ಕಟು ಟೀಕೆಗಳಿಂದ ಕಾವ್ಯಕಲೆಯನ್ನು ರಕ್ಷಿಸಿದ ಶ್ರೇಯಸ್ಸು ಅರಿಸ್ಟಾಟಲನಿಗೆ ಸಲ್ಲುವಂತೆ ನಮ್ಮ ಪೂರ್ವಾಲಂಕಾರಿಕರಿಗೂ ಸಲ್ಲುತ್ತದೆ. ಕಾವ್ಯದ ಗುರಿ ಸಾಧ್ಯ ಆದರ್ಶಗಳನ್ನು ಚಿತ್ರಿಸುವುದಾಗಿದೆ, ಹಿತಾಹಿತಗಳನ್ನು ಹೃದ್ಯವಾದ ರೀತಿಯಲ್ಲಿ ತಿಳುಹಿಸಿ ಅನ್ಯನಿರಪೇಕ್ಷವಾದ ಆನಂದವನ್ನು ಕೊಡುವುದಾಗಿದೆ ಎಂದು ಹೇಳಿ ಕಾವ್ಯ ಜಿಜ್ಞಾಸೆಯೂ ಶಾಸ್ತ್ರಜಿಜ್ಞಾಸೆಯಂತೆ ಪ್ರಯೋಜನಕಾರಿ ಎಂಬುದನ್ನು ನಮ್ಮ ಆಲಂಕಾರಿಕರು ಸಯುಕ್ತಿಕವಾಗಿ ಪ್ರತಿಪಾದಿಸಿದ್ದಾರೆ.

ಗ್ರೀಕ್ ಮೂಲದಿಂದ ಅನುವಾದಿಸುವ ಹಿರಿಯ ಪಾಠವನ್ನು ಶ್ರೀ ಕೆ. ವಿ. ರಾಘವಾಚಾರ್ಯರು ಕನ್ನಡಕ್ಕೆ ಹಾಕಿಕೊಟ್ಟರು. ಅದೇ ಪರಂಪರೆಯಲ್ಲಿ ಶ್ರೀ ಬಾಲಸುಬ್ರಹ್ಮಣ್ಯರು ಮುಂದುವರಿಯುತ್ತಿದ್ದಾರೆ. ಅವರ ಪೀಠಿಕೆ ಹಾಗು ಪರಿಶಿಷ್ಟಗಳು ತಾರುಣ್ಯದಲ್ಲಿಯೇ ಅವರಿಗೆ ಬಂದ ಪಾಂಡಿತ್ಯ ಪರಿಣತಿಯನ್ನು ತೋರಿಸುತ್ತವೆ. ಶ್ರೇಷ್ಠ ವಿದ್ವತ್ತಿನ ಇಂತಹ ಹವಣಿಕೆಯಿಂದ ಇನ್ನೂ ಅನೇಕ ಮಹತ್ವದ ಕಾರ್ಯಗಳು ಸಾಧ್ಯ. ಅವುಗಳನ್ನು ಈ ಲೇಖಕರು ಸಾಧಿಸುವರೆಂದು ನಾವು ಹಾರೈಸುತ್ತೇವೆ.

ಕನ್ನಡದ ಕನ್ನಡತನ ಇಂತಹ ಅನುವಾದಗಳಲ್ಲಿ ಉಳಿಯುವುದು ಕಷ್ಟ. ಈ ದೃಷ್ಟಿಯಿಂದ ಲೇಖಕರ ಪೀಠಿಕೆಯ ಶೈಲಿಗಿದ್ದಷ್ಟು ಸುಬೋಧತೆ ಅನುವಾದಕ್ಕಿಲ್ಲ. ಇದು ಎಲ್ಲ ಅನುವಾದಕರನ್ನೂ ಕಾಡುತ್ತಿರುವ ಪ್ರಶ್ನೆ. ಈ ಪ್ರಶ್ನೆಯನ್ನು ಒಂದು ರೀತಿಯಿಂದ ಕನ್ನಡ ಲೇಖಕರೆಲ್ಲ ಕೂಡಿ ಬಿಡಿಸಬೇಕಾಗಿದೆ. ಪರಿವರ್ತನದ ಭಾಷೆಯ ಗುಣಧರ್ಮಗಳಿಗೆ ಒಗ್ಗದ ಅನುವಾದವು ಬರಿ 'ಭಾಷಾಂತರ'ವಾಗುತ್ತದೆ. ಮೂಲವನ್ನು ಅರಗಿಸಿ ಕನ್ನಡದಲ್ಲಿ 'ಅನುವದಿ'ಸಿದರೆ ಒಳ್ಳೆಯ ಅನುವಾದಗಳು ಹುಟ್ಟುವುದು ಸಾಧ್ಯ. ಪ್ರಸ್ತುತ ಲೇಖಕರೂ ಅದನ್ನು ಸಾಧಿಸಬಲ್ಲರು. ಅವರ ಮುಂದಿನ ಹವಣಿಕೆಗಳಲ್ಲಿ ಇದು ಸಾಧ್ಯವಾಗುವುದೆಂದು ನಾವು ನಂಬಿದ್ದೇವೆ.

ಎಚ್. ಜೆ. ಉಪಾಧ್ಯಾಯ, ವಿ. ಕೃ. ಗೋಕಾಕ

* * *

ರಿಸರ್ವ್ ಬ್ಯಾಂಕ್ ಅಫ್ ಇಂಡಿಯ: ಕ್ರಿಯಾಸ್ವರೂಪ ಮತ್ತು ಕಾರ್ಯಕಲಾಪಗಳು—ಪ್ರಕಾಶಕರು: ರಿಸರ್ವ್ ಬ್ಯಾಂಕ್ ಅಫ್ ಇಂಡಿಯ, ಆಗಸ್ಟ್ 1959; ಪುಟಗಳು 180; ಬೆಲೆ, ಒಂದು ರೂಪಾಯಿ.

ಆಧುನಿಕ ಆರ್ಥಿಕ ಪ್ರಪಂಚದಲ್ಲಿ ಪ್ರತಿರಾಷ್ಟ್ರವೂ ಒಂದು ಕೇಂದ್ರೀಯ ಬ್ಯಾಂಕನ್ನು ಹೊಂದಿದೆ.[1] ಇದು ಒಂದು ವಿಶೇಷ ಮಾದರಿಯ ಬ್ಯಾಂಕಿಂಗ್ ಸಂಸ್ಥೆಯಾಗಿದೆ: (೧) ಇದರ ಸ್ಥಾಪನೆ ಸಾಮಾನ್ಯವಾಗಿ ಪ್ರತ್ಯೇಕ ಶಾಸನದಮೇಲೆ ನಿಂತಿದೆ. (೨) ಇತರ ಬ್ಯಾಂಕುಗಳಂತೆ ಲಾಭದೃಷ್ಟಿಯನ್ನು ಪ್ರಧಾನವಾಗಿಟ್ಟುಕೊಳ್ಳದೆ, ಸಾರ್ವಜನಿಕ ಯೋಗಕ್ಷೇಮವನ್ನೇ ಮುಖ್ಯಗುರಿಯಾಗಿಟ್ಟುಕೊಂಡಿರುವ ಹಿರಿಯ ಬ್ಯಾಂಕು ಅದು. (೩) ಈ ಬ್ಯಾಂಕು ಹಣಮಂಡಲದಲ್ಲಿ (Monetary System)

---

[1] ಅಮೆರಿಕ ಸಂಯುಕ್ತ ಸಂಸ್ಥಾನದಲ್ಲಿ ಮಾತ್ರ ೧೨ ರಿಸರ್ವ್ ಬ್ಯಾಂಕುಗಳಿವೆ; ಆದರೆ ಇವುಗಳೆಲ್ಲವೂ 'ಫೆಡರಲ್ ರಿಸರ್ವ್ ಬೋರ್ಡು' ಎಂಬ ಸಂಸ್ಥೆಯ ಮೂಲಕ ಸಂಘಟಿತವಾಗಿ ಒಂದೇ ಕೇಂದ್ರೀಯ ಬ್ಯಾಂಕಿನಂತೆ ವರ್ತಿಸುತ್ತವೆ.

ಅಗ್ರಸ್ಥಾನವನ್ನೂ, ಸರ್ಕಾರದೊಡನೆ ಇರುವ ಬಾಂಧವ್ಯದಲ್ಲಿ ವಿಶೇಷ ಮನ್ನಣೆಯನ್ನೂ ಪಡೆದಿರುವ ಪ್ರಭಾವಯುತವಾದ ಹಣಕಾಸಿನ ಸಂಸ್ಥೆ. (೪) ಇತರ ಬ್ಯಾಂಕುಗಳಂತೆ ಸಾರ್ವಜನಿಕರೊಡನೆ ಸಾಮಾನ್ಯವಾಗಿ ನೇರವಾಗಿ ವ್ಯವಹರಿಸದೆ, ಬ್ಯಾಂಕುಗಳನ್ನು ಇದರ ಸದಸ್ಯ ಸಂಸ್ಥೆಗಳಾಗಿ ಮಾಡಿಕೊಂಡು ಇವುಗಳ ಮೂಲಕ ಸಾರ್ವಜನಿಕರೊಡನೆ ಸಂಪರ್ಕ ಹೊಂದಿರುವುದು. ನಮ್ಮ ದೇಶಕ್ಕೆ ಇಂತಹ ಕೇಂದ್ರೀಯ ಬ್ಯಾಂಕಾದ ರಿಸರ್ವ್ ಬ್ಯಾಂಕ್ ಆಫ್ ಇಂಡಿಯದ ವಿಷಯವಾಗಿ ಆ ಸಂಸ್ಥೆಯೇ ಈ ಅಚ್ಚುಕಟ್ಟಾದ ಪುಸ್ತಕವನ್ನು ಬರೆದು ಪ್ರಕಟಿಸಿದೆ. ಇಂಗ್ಲಿಷ್ ಮೂಲಲೇಖನದ ಮೊದಲನೆ ಆವರ್ತ ೧೯೪೧ ರಲ್ಲಿ ಪ್ರಕಾಶವಾಯಿತು; ಹದಿನೇಳು ವರ್ಷಗಳನಂತರ ಸಂಪೂರ್ಣ ಪುನರಾಮರ್ಶಿತವಾಗಿ ಪುಸ್ತಕದ ಎರಡನೆ ಆವರ್ತವಾಗಿ ಸೆಪ್ಟೆಂಬರ್ ೧೯೫೮ ರಲ್ಲಿ ಹೊರಬಿದ್ದಿತು. ಕನ್ನಡಕ್ಕೆ ಭಾಷಾಂತರವಾಗಿ ಆಗಸ್ಟ್ ೧೯೫೯ ರಲ್ಲಿ ಪ್ರಕಾಶಿಸಲ್ಪಟ್ಟ ಈ ಕಿರುಗ್ರಂಥವನ್ನು ಕನ್ನಡಿಗರು ಆದರದಿಂದ ಸ್ವಾಗತಿಸಬಹುದಾಗಿದೆ. "ಜನತೆಯ ಯೋಗಕ್ಷೇಮಕ್ಕೆ ಬಹು ಆಪ್ತವಾಗಿ ಸಂಬಂಧಿಸಿದ ಈ ರಾಷ್ಟ್ರೀಯ ಸಂಸ್ಥೆಯ ಕಾರ್ಯಗಳು ಹೆಚ್ಚು ಜನರ ತಿಳುವಳಿಕೆಗೆ ಬರುವುದು ಅಗತ್ಯವೆಂದು ಯೋಚಿಸಿ" ಪುಸ್ತಕವನ್ನು ಕೆಲವು ಪ್ರಾದೇಶಿಕ ಭಾಷೆಗಳಲ್ಲಿಯೂ ಅಚ್ಚು ಹಾಕಿಸಿರುವುದು ಸ್ತುತ್ಯರ್ಹ. ಬ್ಯಾಂಕಿಂಗ್ ತಿಳಿವಳಿಕೆಯನ್ನು ಸಾಮಾನ್ಯ ಜನರಿಗೆ ಹರಡುವ ಮಹತ್ಕಾರ್ಯಸಾಧನೆಗೆ ರಿಸರ್ವ್ ಬ್ಯಾಂಕು ಮಾಡಬಹುದಾದ ಪ್ರಯತ್ನಗಳ ಮಾರ್ಗದಲ್ಲಿ ಇದು ಮುಖ್ಯವಾದ ಹೊಸ ಹೆಜ್ಜೆಯಾಗಿದೆ. ಪುಸ್ತಕದ ಕನ್ನಡ ಭಾಷಾಂತರ ಮಾಡಿರುವವರು ಅರ್ಥಶಾಸ್ತ್ರಪಂಡಿತರೂ ಹಿರಿಯ ಕನ್ನಡ ಸಾಹಿತಿಗಳೂ ಆದ ಶ್ರೀ ವಿ. ಸೀತಾರಾಮಯ್ಯನವರು.

ರಿಸರ್ವ್ ಬ್ಯಾಂಕಿನ ಸ್ವರೂಪ, ರಚನೆ, ಅಧಿಕಾರ ಮತ್ತು ಕಾರ್ಯಕಲಾಪಗಳ ವಿಷಯವಾಗಿ ಅಧಿಕೃತ ನಿರೂಪಣೆಯಾಗಿರುವುದರಿಂದ ಪುಸ್ತಕಕ್ಕೆ ವಿಶೇಷ ಮನ್ನಣೆ ಸಲ್ಲತಕ್ಕದ್ದಾಗಿದೆ. ಹನ್ನೆರಡು ಅಧ್ಯಾಯಗಳಾಗಿ ವಿಂಗಡಿಸಿ ವಿವರಿಸಲ್ಪಟ್ಟಿರುವ ವಿಷಯುಗಳ ಸಾರಾಂಶ ಹೀಗಿದೆ:

೧೭೭೩ ರಲ್ಲಿ ವಾರೆನ್ ಹೇಸ್ಟಿಂಗ್ಸ್ ಅವರು ಕೇಂದ್ರೀಯ ಬ್ಯಾಂಕು ಸ್ಥಾಪನೆಗೆ ಮಾಡಿದ ಶಿಫಾರಿಸಿನಿಂದ ಏಪ್ರಿಲ್ ೧, ೧೯೩೫ ರಲ್ಲಿ ಭಾರತದ ರಿಸರ್ವ್ ಬ್ಯಾಂಕು ಹುಟ್ಟಿದವರೆಗೆ ಬ್ಯಾಂಕು ಸ್ಥಾಪನೆ ವಿಷಯವಾಗಿ ನಡೆದ ಪ್ರಯತ್ನಗಳ ಮುಖ್ಯ ಘಟ್ಟಗಳ ಸೂಚನೆ; ರಿಸರ್ವ್ ಬ್ಯಾಂಕು ಮೊದಲು ಷೇರುದಾರರ ಬ್ಯಾಂಕಾಗಿ ಸ್ಥಾಪನೆಯಾದುದು; ೧೯೪೮ ರಲ್ಲಿ ರಾಜ್ಯದ ಒಡೆತನಕ್ಕೆ ವರ್ಗಾವಣೆ ಆದುದು ಹಾಗು ಅದರ ಪರಿಣಾಮವಾಗಿ ವ್ಯವಸ್ಥೆ ಮತ್ತು ರಚನೆಯಲ್ಲಿ ಆದ ಬದಲಾವಣೆಗಳು;

ಮತ್ತು ಬ್ಯಾಂಕಿನ ಮುಖ್ಯ ಕಾರ್ಯಗಳ ಸಂಗ್ರಹ ಪರಿಚಯ—ಇವು ಪೀಠಿಕೆಯಲ್ಲಿ ಹೇಳಿರುವ ವಿಷಯಗಳು. ಕೇಂದ್ರೀಯ ಬ್ಯಾಂಕಿನ ರಾಷ್ಟ್ರೀಕರಣದ ವಿಷಯ ಭಿನ್ನಾಭಿಪ್ರಾಯವಿದ್ದಾಗ್ಯೂ ಆಧುನಿಕ ಒಲವು ಹೆಚ್ಚಾಗಿ ರಾಷ್ಟ್ರೀಕರಣದ ಕಡೆ ಇದೆ. ಅಲ್ಲದೆ ಸರ್ಕಾರದ ಮುಂದಾಳುತ್ವದಲ್ಲಿ ತೀವ್ರ ಆರ್ಥಿಕ ಪ್ರಗತಿ ಹೊಂದ ಉದ್ಯಮಿಸಿರುವ ನಮ್ಮ ದೇಶದಲ್ಲಿ ಬ್ಯಾಂಕಿನ ಮತ್ತು ಸರ್ಕಾರದ ಧೋರಣೆಗಳೊಳಗೆ ಪರಸ್ಪರ ಐಕ್ಯವನ್ನು ಉಂಟುಮಾಡುವುದು ಸುಲಭವಾಗುವಂತೆ ಬ್ಯಾಂಕಿನ ಒಡೆತನ ಸರ್ಕಾರಕ್ಕೆ ಸಕಾಲದಲ್ಲಿ ಆದುದು ಮುಖ್ಯವಾದ ಘಟನೆ. ಬ್ಯಾಂಕಿನ ಒಳ ರಚನಾವ್ಯವಸ್ಥೆಯನ್ನು ಮುಂದೆ ಹತ್ತನೆಯ ಅಧ್ಯಾಯದಲ್ಲಿ ವಿಶದವಾಗಿ ವಿವರಿಸಿದೆ. ಅಲ್ಲದೆ, ರಚನಾವ್ಯವಸ್ಥೆಯನ್ನು ಒಂದು ನೋಟದಲ್ಲಿ ಗ್ರಹಿಸಲು ಅನುಕೂಲವಾಗುವಂತೆ ಉಪಯುಕ್ತವಾದ 'ರಿಸರ್ವ್ ಬ್ಯಾಂಕಿನ ಕ್ರಿಯಾರಚನೆಯ ನಕ್ಷೆ'ಯೊಂದನ್ನು ಪುಸ್ತಕದ ಕೊನೆಯಲ್ಲಿ ಕೊಟ್ಟಿದೆ.

ನಾವು ದೈನಂದಿನ ಜೀವನದಲ್ಲಿ ನೋಡುವ, ಉಪಯೋಗಿಸುವ ನೋಟು ಹಣ ಚಲಾವಣೆಗೆ ಬರುವ ವಿಧಾನ, ಕಾಲ ಕಾಲದ ಅಗತ್ಯಗಳಿಗೆ ಅನುಸಾರವಾಗಿ ನೋಟು ಹಣದ ಮೊತ್ತವು ಸಂಕೋಚ—ವಿಕೋಚಗೊಳ್ಳುವ ಬಗೆ, ನೋಟಿಗೆ ನಾಣ್ಯ ಮತ್ತು ನಾಣ್ಯಕ್ಕೆ ನೋಟುಗಳನ್ನು ಕೊಡುವ ಏರ್ಪಾಡುಗಳು—ಇತ್ಯಾದಿ ವಿಷಯಗಳ ಬಗ್ಗೆ ಚಿಕ್ಕವರಲ್ಲಿಯೂ ಸಹ ಸ್ವಾಭಾವಿಕವಾಗಿ ಏಳುವ ಕುತೂಹಲವನ್ನು ನಾವು ಗಮನಿಸಿರಬಹುದು. ಚಾಲ್ತಿಹಣ ನಿಯಂತ್ರಣದ ವಿವರಗಳನ್ನು ಒಳಗೊಂಡ ಎರಡನೆಯ ಅಧ್ಯಾಯವು ಇಂತಹ ಕುತೂಹಲಕ್ಕೆ ಸರಳ ಮಾರ್ಗದಲ್ಲಿ ಉತ್ತರಕೊಡುತ್ತದೆ.

ಬ್ಯಾಂಕಿಂಗ್ ಮತ್ತು ಉದ್ದರಿ ಮಂಡಲಗಳನ್ನು ತನ್ನ ಮುಂದಾಳುತನದಲ್ಲಿಟ್ಟುಕೊಂಡು ಅಲ್ಲಿನ ಕಾರ್ಯಾಚರಣೆಗಳನ್ನು ಕ್ರಮಗೊಳಿಸುವುದರಲ್ಲಿಯೂ, ಬ್ಯಾಂಕಿಂಗ್ ಬೆಳವಣಿಗೆಯಲ್ಲಿಯೂ ರಿಸರ್ವ್ ಬ್ಯಾಂಕು ವಹಿಸುತ್ತಿರುವ ಪಾತ್ರ ಕುರಿತು ನಾಲ್ಕು ಅಧ್ಯಾಯಗಳಿವೆ (III, IV, VI, VII).

ದೇಶದಲ್ಲಿರುವ ಒಟ್ಟು ಹಣದಲ್ಲಿ ಬ್ಯಾಂಕುಗಳು ಕೊಡುವ ಉದ್ದರಿಯ ಮೂಲಕ ಹುಟ್ಟುವ ಬ್ಯಾಂಕು ಡೆಪಾಸಿಟ್ಟು ಮುಖ್ಯ ಭಾಗವಾಗಿದೆ. ಬ್ಯಾಂಕು ಉದ್ದರಿಯ ಒಟ್ಟು ಮೊತ್ತ ಮತ್ತು ಉದ್ದರಿಯು ವಿವಿಧ ಆರ್ಥಿಕ ಕ್ಷೇತ್ರಗಳಿಗೆ ಎಷ್ಟೆಷ್ಟು ಭಾಗ ಹರಿದುಹೋಗುವುವು ಎಂಬ ಅಂಶಗಳು ಆರ್ಥಿಕ ಅಭಿವೃದ್ಧಿ ಹಾಗು ಸ್ತಿಮಿತತೆ ದೃಷ್ಟಿಗಳಿಂದ ಮುಖ್ಯವಾಗಿವೆ. ಇಂತಹ ಮುಖ್ಯವಾದ ಉದ್ದರಿಯ ನಿಯಂತ್ರಣವು ರಿಸರ್ವ್ ಬ್ಯಾಂಕಿನ ಮುಖ್ಯ ಕರ್ತವ್ಯಗಳಲ್ಲೊಂದಾಗಿದೆ. ಈ ನಿಯಂತ್ರಣಕ್ಕೆ

ಅಗತ್ಯವಾದ ಸಾಧನಗಳನ್ನೂ, ಅಧಿಕಾರಗಳನ್ನೂ ರಿಸರ್ವ್ ಬ್ಯಾಂಕಿಗೆ ಕಾನೂನು ಕೊಡಿಸಿಕೊಟ್ಟಿರುತ್ತದೆ. ಬ್ಯಾಂಕ್ ರೇಟ್, ಹಣದ ಪೇಟೆಯಲ್ಲಿ ಸಾರ್ವಜನಿಕರೊಡನೆ ನೇರ ವ್ಯವಹಾರ, ನಗದು ಸಿಲ್ಕು ಹಣದ ಪ್ರಮಾಣ ವ್ಯತ್ಯಾಸಮಾಡುವುದು, ಆರಿಸಿದ ಮತ್ತು ನೇರವಾದ ಉದ್ದರಿ ನಿಯಂತ್ರಣ ಕ್ರಮಗಳು—ಇಂತಹ ಅಧಿಕಾರಗಳ ಮೂಲಕವೂ ಮತ್ತು ಸ್ಥಾನಬಲದಿಂದ ಲಭಿಸುವ ನೈತಿಕ ಪ್ರಭಾವದ ಮೂಲಕವೂ ರಿಸರ್ವ್ ಬ್ಯಾಂಕು ಉದ್ದರಿಯ ಪ್ರಮಾಣ ಮತ್ತು ವಿತರಣೆಯನ್ನು ನಿಯಂತ್ರಿಸುವ ವಿಧಾನವನ್ನು ಮೂರನೆಯ ಅಧ್ಯಾಯದಲ್ಲಿ ವಿವರಿಸಿದೆ.

ಬ್ಯಾಂಕು ಅಥವಾ ಬ್ಯಾಂಕೊಂದರ ಶಾಖೆಯ ಸ್ಥಾಪನೆಗೂ, ಬ್ಯಾಂಕುಗಳ ಸಂಘಟನೆಗೂ ರಿಸರ್ವ್ ಬ್ಯಾಂಕಿನ ಅಪ್ಪಣೆ ಅಗತ್ಯ. ಹೀಗೆ ಲೈಸೆನ್ಸ್ ಅಥವಾ ಅಪ್ಪಣೆ ಕೊಡುವ ಸಂದರ್ಭಗಳನ್ನು ರಿಸರ್ವ್ ಬ್ಯಾಂಕು ದೇಶದಲ್ಲಿ ಬ್ಯಾಂಕಿಂಗ್ ಪದ್ಧತಿಯು ಸುಸ್ಥಾವಾದ ಮಾರ್ಗಗಳಲ್ಲಿ ಬೆಳೆಯುವಂತೆ ನೋಡಿಕೊಳ್ಳಲು ಉಪಯೋಗಿಸಿಕೊಳ್ಳುತ್ತದೆ. ಅಲ್ಲದೆ, ಬ್ಯಾಂಕರುಗಳ ಶಿಕ್ಷಣಕ್ಕೆ ಒಂದು ಕಾಲೇಜನ್ನೂ, ಬ್ಯಾಂಕಿಂಗ್ ಸೌಕರ್ಯಗಳನ್ನು ಕಾಲಕ್ರಮವಾಗಿ ದೇಶದ ಮೂಲೆ ಮೂಲೆಗೂ ಹರಡಲು ಸಹಾಯ ಕೊಡುವುದಕ್ಕೆ ಒಂದು ಬ್ಯಾಂಕಿಂಗ್ ಬೆಳೆವಣಿಗೆ ಇಲಾಖೆಯನ್ನೂ ರಿಸರ್ವ್ ಬ್ಯಾಂಕಿನ ಅಂಗವಾಗಿ ಸ್ಥಾಪಿಸಲಾಗಿದೆ. ಇವೆಲ್ಲದರ ವಿವರ ನಾಲ್ಕನೆಯ ಅಧ್ಯಾಯವಾಗಿದೆ.

ಕೇಂದ್ರ ಮತ್ತು ಪ್ರಾಂತೀಯ ಸರ್ಕಾರಗಳಿಗೆ ಬ್ಯಾಂಕರಾಗಿ ರಿಸರ್ವ್ ಬ್ಯಾಂಕು ನಡೆಯಿಸುವ ಅನೇಕ ಕೆಲಸಗಳು ಮತ್ತು ಬ್ಯಾಂಕು—ಸರ್ಕಾರಗಳ ನಿಕಟ ಬಾಂಧವ್ಯ ಇವುಗಳ ವಿಸ್ತರಣೆಯೇ ಐದನೆಯ ಅಧ್ಯಾಯ.

ಇಂಡಿಯದ ಕೇಂದ್ರೀಯ ಬ್ಯಾಂಕಿಂಗ್ ವ್ಯವಹಾರಗಳಲ್ಲಿ ಕೆಲವು ವಿಶೇಷ ಲಕ್ಷಣಗಳನ್ನು ಕಾಣುತ್ತೇವೆ. ಇವುಗಳಲ್ಲಿ ಎರಡು ಮುಖ್ಯವಾದುವು: ಒಂದು, ವ್ಯವಸಾಯ ಉದ್ದರಿ ಸಂಬಂಧದಲ್ಲಿ ಬ್ಯಾಂಕಿನ ಮುಖ್ಯ ಪಾತ್ರ. ಎರಡು, ಕೈಗಾರಿಕೆಗೆ ಹಣಕಾಸು ಒದಗಿಸುವುದರಲ್ಲಿ ಬ್ಯಾಂಕಿನ ಪಾತ್ರ ವಿಸ್ತಾರವಾಗುತ್ತಿರುವುದು. ಗ್ರಾಮಾಂತರ ಉದ್ದರಿ ಸಮಸ್ಯೆಯ ಪರಿಶೀಲನೆಗೆ ವ್ಯವಸಾಯ ಉದ್ದರಿ ಇಲಾಖೆಯೊಂದು ಮೊದಲಿನಿಂದಲೂ ಇದೆ. ಈಚೆಗೆ ಒಂದು ಸ್ಥಾಯಿ ಸಲಹಾಸಮಿತಿಯೂ ನೇಮಿಸಲ್ಪಟ್ಟಿದೆ. ಇವುಗಳ ಕಾರ್ಯಕಲಾಪಗಳೂ ಮತ್ತು ರಿಸರ್ವ್ ಬ್ಯಾಂಕು ಸಹಕಾರ ಸಂಘಗಳಿಗೆ ಕೊಡುತ್ತಿರುವ ವಿಶೇಷ ರಿಯಾಯಿತಿಗಳೂ ವ್ಯವಸಾಯಕ್ಕೆ ರಿಸರ್ವ್ ಬ್ಯಾಂಕ್ ನೀಡುತ್ತಿರುವ ವಿಶೇಷ ಸಹಾಯವಾಗಿವೆ. ವ್ಯವಸಾಯ ಪ್ರಧಾನವಾದ ನಮ್ಮ ದೇಶದಲ್ಲಿ ಕೇಂದ್ರೀಯ ಬ್ಯಾಂಕಾದ ರಿಸರ್ವ್ ಬ್ಯಾಂಕು

ವ್ಯವಸಾಯ ಉದ್ಧರಿಯ ಕಡೆ ವಿಶೇಷ ಗಮನವಿತ್ತಿರುವುದು ಸಾಧುವಾಗಿದೆ. ಆರನೇ ಅಧ್ಯಾಯ ರಿಸರ್ವ್ ಬ್ಯಾಂಕು ಮತ್ತು ಗ್ರಾಮಾಂತರ ಉದ್ಧರಿಗೆ ಸಂಬಂಧಿಸಿದುದಾಗಿದೆ.

ಯೋಜನೆಯಂತೆ ಕೈಗಾರಿಕೆಗೆ ಹಣಕಾಸು ಒದಗಣೆಯನ್ನು ಚುರುಕುಗೊಳಿಸುವುದರಲ್ಲಿಯೂ ರಿಸರ್ವ್ ಬ್ಯಾಂಕು ವಿಶೇಷ ಪಾತ್ರವಹಿಸಿ ತನ್ನ ಕಾರ್ಯಕ್ಷೇತ್ರವನ್ನು ಸಂದರ್ಭಕ್ಕೆ ಅನುಸಾರವಾಗಿ ವಿಸ್ತರಿಸಿಕೊಳ್ಳುತ್ತಿರುವುದು ಈ ಸಂಸ್ಥೆಯ ಜೀವಂತ ಚಲನಾತ್ಮಕ ಶಕ್ತಿಯನ್ನು ತೋರಿಸುತ್ತದೆ. ಕೈಗಾರಿಕೆ ಉದ್ಧರಿ ಒದಗಿಸಲು ಅನೇಕ ಸಂಸ್ಥೆಗಳು ಈಚೆಗೆ ಸ್ಥಾಪನೆಯಾಗಿವೆ: ಕೈಗಾರಿಕೆಯ ಹಣಕಾಸಿನ ಕಾರ್ಪೊರೇಷನ್, ರಾಜ್ಯಗಳ ಹಣಕಾಸಿನ ಕಾರ್ಪೊರೇಷನ್‌ಗಳು (ಸಂಸ್ಥಾನಕ್ಕೆ ಒಂದೊಂದು), ಭಾರತದ ಕೈಗಾರಿಕೆಯ ಉದ್ಧರಿ ಮತ್ತು ಬಂಡವಾಳ ಹೂಟದ ಕಾರ್ಪೊರೇಷನ್, ಭಾರತದ ರೀಫಿನಾನ್ಸ್ ಕಾರ್ಪೊರೇಷನ್, ಇವೆಲ್ಲವುಗಳ ಸ್ಥಾಪನೆಯಲ್ಲಿ ಬ್ಯಾಂಕು ಮುಖ್ಯ ಪಾತ್ರ ವಹಿಸಿರುವುದೇ ಅಲ್ಲದೆ ಅವುಗಳೊಡನೆ ಹಣಕಾಸಿನ ಮತ್ತು ಇತರ ರೀತಿಯ ನಿಕಟ ಸಂಪರ್ಕಗಳನ್ನಿಟ್ಟುಕೊಂಡಿದೆ. ಏಳನೆ ಅಧ್ಯಾಯದಲ್ಲಿ ಕೈಗಾರಿಕೆ ಹಣಕಾಸಿನ ಒದಗಣೆಯಲ್ಲಿ ಬ್ಯಾಂಕಿನ ವಿಶೇಷ ಪಾತ್ರ ವಿವರಿಸಲ್ಪಟ್ಟಿದೆ.

ದೇಶದ ಆರ್ಥಿಕ ಜೀವನ ಹಾಗು ಅಭಿವೃದ್ಧಿಗೂ ಮತ್ತು ಅಂತರರಾಷ್ಟ್ರೀಯ ವ್ಯಾಪಾರ-ವ್ಯವಹಾರಗಳಿಗೂ ನಿಕಟವಾದ ಬಾಂಧವ್ಯವಿದೆ. ಈ ಬಾಂಧವ್ಯಕ್ಕೆ ಸೇರಿದಂತೆ ಅನೇಕ ಅಂತರರಾಷ್ಟ್ರೀಯ ಹಣಕಾಸಿನ ಪ್ರಶ್ನೆಗಳಿವೆ. ಇಂಡಿಯವು ಅಂತರ್ರಾಷ್ಟ್ರೀಯ ವಿನಿಮಯ ನಿಧಿಯ ಮತ್ತು ಪೌಂಡು ಮಂಡಲದ ಸದಸ್ಯರಾಷ್ಟ್ರ. ಇದರಿಂದ ಉಂಟಾಗಿರುವ ಕಟ್ಟುಪಾಡುಗಳ ಜೊತೆಗೆ ಯುದ್ಧಕಾಲದಿಂದ ಬೆಳೆದು ಬಂದಿರುವ ಅನೇಕ ವಿನಿಮಯ ಹತೋಟಿ ಕ್ರಮಗಳಿವೆ. ಈ ವಿವಿಧ ವಿದೇಶಿ ವಿನಿಮಯ ನಿಯಮಗಳಿಗೆ ಭಂಗ ಬರದಂತೆ ನೋಡಿಕೊಂಡು, ರೂಪಾಯಿ ಮತ್ತು ವಿದೇಶಿ ಹಣಗಳ ವಿನಿಮಯ ದರದ ಸ್ತಿಮಿತತೆಯನ್ನು ಕಾಪಾಡಿಕೊಂಡು, ವಿದೇಶಿ ಹಣ ಬಲವನ್ನು ಮಿತವ್ಯಯದಿಂದ ವಿನಿಯೋಗಿಸಿಕೊಳ್ಳುವುದರಲ್ಲಿ ಬ್ಯಾಂಕಿನ ಕೈವಾಡ ಪ್ರಮುಖವಾಗಿದೆ. ಬ್ಯಾಂಕಿನ 'ವಿದೇಶಿ ವಿನಿಮಯ ಹತೋಟಿ' ಇಲಾಖೆಯ ಕಾರ್ಯಕಲಾಪಗಳನ್ನೂ, ರಿಸರ್ವ್ ಬ್ಯಾಂಕಿಗೆ ವಿದೇಶಿ ವಿನಿಮಯಕ್ಕೆ ಸಂಬಂಧಿಸಿದಂತೆ ಇರುವ ಅಧಿಕಾರಗಳನ್ನೂ ಮತ್ತು ವಿನಿಮಯ ಹತೋಟಿಗೆ ಸಂಬಂಧಿಸಿದ ಸಾಮಾನ್ಯ ಆಡಳಿತವನ್ನೂ ಕುರಿತು ಎಂಟನೆ ಅಧ್ಯಾಯದಲ್ಲಿ ತಿಳಿವಳಿಕೆ ಕೊಡಲಾಗಿದೆ.

ಆರ್ಥಿಕ ಸಲಹೆಗಾರ, ಡೆಪ್ಯುಟಿ ಆರ್ಥಿಕ ಸಲಹೆಗಾರ, ಅಂಕಿಅಂಶಗಳ ಸಲಹೆಗಾರ

ನಾಲ್ಕು ಸಂಶೋಧನಾ ಡೈರೆಕ್ಟರುಗಳು—ಈ ಪ್ರಮುಖ ನಿಪುಣ ಆಫೀಸರುಗಳ ಕೈಕೆಳಗೆ ವ್ಯವಸ್ಥಿತವಾಗಿರುವ ಐದು ಸಂಶೋಧನಾ ವಿಭಾಗಗಳು ಸೇರಿ ರಿಸರ್ವ್ ಬ್ಯಾಂಕಿನ ಅಂಕಿಅಂಶಗಳ ಮತ್ತು ಸಂಶೋಧನಾ ಇಲಾಖೆಯಾಗಿದೆ. ಸಮಗ್ರ ವಾದ, ಖಚಿತವಾದ ಆರ್ಥಿಕ ವಿಷಯ ಸಂಗ್ರಹಣ ಮತ್ತು ಪರಿಶೀಲನೆಯೇ ಈ ಇಲಾಖೆಯ ಕೆಲಸ. ಪರಿಣಿತರ ಸಂಶೋಧನೆಯ ಮೂಲಕ ಮಾತ್ರವೆ ಇಂದಿನ ಕ್ಲಿಷ್ಟವಾದ ಆರ್ಥಿಕ ಸಮಸ್ಯೆಗಳ—ಮುಖ್ಯವಾಗಿ ಬ್ಯಾಂಕಿಂಗ್ ಮತ್ತು ಹಣಕಾಸಿನ ಸಮಸ್ಯೆಗಳ—ನೈಜ ಸ್ವರೂಪ ಮತ್ತು ಗಾತ್ರಗಳ ತಿಳಿವಳಿಕೆ ಸಾಧ್ಯ. ಇಂತಹ ತಿಳಿವಳಿಕೆಯು ರಿಸರ್ವ್ ಬ್ಯಾಂಕಿನ ನೀತಿ ರೂಪಿಸುವುದಕ್ಕೂ, ಅವರ ಕಾರ್ಯ ನಿರ್ವಹಣೆಗೂ ಸಹಾಯಕವಾಗುವುದಷ್ಟೇ ಅಲ್ಲದೆ ಅನೇಕ ವಿದ್ವಾಂಸರಿಗೂ, ಇತರ ಆರ್ಥಿಕ ಸಂಶೋಧನಾ ಕೇಂದ್ರಗಳಿಗೂ ಸಹಾಯಕವಾಗಿದೆ. ರಿಸರ್ವ್ ಬ್ಯಾಂಕು ಪ್ರಕಟಿಸುವ ಲೆಕ್ಕದ ವಾರ ವಾರದ ವರದಿ ಮತ್ತು ತಃಖ್ತೆಗಳು, ವಾರ್ಷಿಕ ಆಸ್ತಿ—ಋಣಪಟ್ಟಿ, ಮಾಸಪತ್ರಿಕೆ, ವಾರ್ಷಿಕ ವರದಿಗಳು, ವಿಶೇಷ ಸಮಿತಿಗಳ ವರದಿಗಳು ಇತ್ಯಾದಿ ಪ್ರಕಟನೆಗಳು ಆರ್ಥಿಕ ಅಧ್ಯಯನಕ್ಕೆ ಮುಖ್ಯವಾದ ಸಂಪತ್ತಾಗಿದೆ. ೯ ಮತ್ತು ೧೧ ನೆಯ ಅಧ್ಯಾಯಗಳು ಅಂಕಿಅಂಶಗಳು ಮತ್ತು ಸಂಶೋಧನೆಯ ಮತ್ತು ಪ್ರಕಟನೆಗಳ ವಿಷಯಗಳ ವಿವರಗಳನ್ನು ತಿಳಿಸುವುವು.

ಬ್ಯಾಂಕಿಂಗ್ ಮಂಡಲವನ್ನು ಸುವ್ಯವಸ್ಥೆಗೊಳಿಸಲು ಪ್ರಯತ್ನಿಸುತ್ತಿರುವ ರಿಸರ್ವ್ ಬ್ಯಾಂಕು ಮುಂಬರುವ ವರ್ಷಗಳಲ್ಲಿ ಮಾಡಬೇಕಾಗಿರುವ ಮಹತ್ಕಾರ್ಯ ವನ್ನು ಸಮಾಪ್ತಿ ವಾಕ್ಯದಲ್ಲಿ ಈ ಮಾತುಗಳಲ್ಲಿ ಹೇಳಿದೆ: "ಬೆಳವಣಿಗೆಯ ಅಗತ್ಯಕ್ಕೆ ತಕ್ಕ ವಿಸ್ತಾರ ಹಾಗು ವೈವಿಧ್ಯತೆಯನ್ನುಳ್ಳ, ದಕ್ಷತೆಯಲ್ಲಿ ಬಲವಾದ, ನಾನಾಬಗೆಯ ಉದ್ದರಿಗಳನ್ನು ಒದಗಿಸಲು ತಕ್ಕಷ್ಟು ವಿವಿಧ ಲೇವಾದೇವಿ ಸಂಸ್ಥೆಗಳನ್ನೊಳಕೊಂಡ, ದೇಶದ ಹೆಚ್ಚು ಭಾಗಕ್ಕೆ—ಗ್ರಾಮಾಂತರದ ಮೂಲೆಗಳಿಗೂ—ಹರಡಿರುವಂತಹ ಬ್ಯಾಂಕಿಂಗ್ ಮಂಡಲದ ರಚನಾವ್ಯವಸ್ಥೆಯನ್ನು ಬಲಪಡಿಸುವುದೇ ಮುಂಬರುವ ವರ್ಷಗಳಲ್ಲಿ ರಿಸರ್ವ್ ಬ್ಯಾಂಕು ಮಾಡಬೇಕಾಗಿರುವ ಮಹಾಕಾರ್ಯವಾಗಿದೆ."

ರಿಸರ್ವ್ ಬ್ಯಾಂಕಿನ ಕ್ರಿಯಾಸ್ವರೂಪ ಮತ್ತು ಕಾರ್ಯಕಲಾಪಗಳ ವಿಷಯ ವಾಗಿ ಪುಸ್ತಕವು ಒಳಗೊಂಡಿರುವ ವಿವರಗಳ ಮೇಲಿನ ಸಾರಾಂಶದಿಂದ ಪುಸ್ತಕದ ಉಪಯುಕ್ತತೆಯನ್ನು ಗ್ರಹಿಸಬಹುದಾಗಿದೆ.

ಕನ್ನಡ ಭಾಷಾಂತರದ ವಿಷಯ ಒಂದೆರಡು ಮಾತುಗಳು. ಬ್ಯಾಂಕಿಂಗ್, ಹಣಕಾಸು, ವಿದೇಶಿ ವಿನಿಮಯ,—ಇಂತಹ ವಿಷಯಗಳು ಸಾಮಾನ್ಯ ಜನರಿಗೆ ಅರ್ಥವಾಗುವುದು ಕಷ್ಟವೆಂದು ಹೇಳಬಹುದು. ಆದರೆ ಆದಷ್ಟು ಸರಳವಾದ, ಬಳ

ಕೆಯ ಮಾತುಗಳಿಂದ ಹೇಳಿದರೆ ಕಷ್ಟವಾದುದೂ ಸುಲಭವಾದೀತು. ಶ್ರೀ ವಿ. ಸೀ.-ಯವರ ಕನ್ನಡದ 'ರಿಸರ್ವ್ ಬ್ಯಾಂಕ್ ಆಫ್ ಇಂಡಿಯ'ವು ಈ ಮಾತಿನ ಸತ್ಯವನ್ನು ತೋರಿಸಿಕೊಡುತ್ತದೆ. ಪ್ರಕಾಶಿಸಿರುವವರ ಆಶಯದಂತೆ ಹೆಚ್ಚು ಜನರಿಗೆ ರಿಸರ್ವ್ ಬ್ಯಾಂಕಿನ ತಿಳಿವಳಿಕೆಯನ್ನು ಹರಡುವುದಕ್ಕೆ ಸಹಾಯವಾಗುವುದರಲ್ಲಿ ಸಂಶಯವಿಲ್ಲ. ಅಲ್ಲದೆ ವಿದ್ಯಾರ್ಥಿ ವೃಂದಕ್ಕೂ ಮುಖ್ಯವಾದ ಅಚ್ಚುಕಟ್ಟಾದ ಓದು ಗ್ರಂಥವಾಗಿದೆ. ಆದರೆ, ಇನ್ನೂ ಬಹುಮಂದಿ ಸಾಮಾನ್ಯ ಓದುಗರಿಗೆ ಶಾಸನಗಳ ಕಲಮುಗಳು ಬೇಕಿರುವುದಿಲ್ಲ; ಶಾಸನ ಶೈಲಿಯ ಭಾಷೆಯೂ ಅಷ್ಟು ರುಚಿಸಲಾರದು. ಈ ದೃಷ್ಟಿಯಿಂದ ಇಂತಹ ಉನ್ನತ ಮಟ್ಟದ ಗ್ರಂಥದ ಜೊತೆಗೆ ಇನ್ನೂ ಸರಳ ಪಾಠಗಳನ್ನು ಒಳಗೊಂಡ ಕಿರುಹೊತ್ತಿಗೆಗಳನ್ನು ಆಯಾ ಪ್ರಾದೇಶಿಕ ಭಾಷೆಯಲ್ಲಿ ಬರೆಸಿ ಜನತೆಗೆ ನಿಲುಕುವ ಬೆಲೆಯಲ್ಲಿ ಪ್ರಕಾಶಿಸಬೇಕು.

ಶಾಸ್ತ್ರ ಅಥವಾ ವಿಜ್ಞಾನ ಗ್ರಂಥಗಳನ್ನು ಭಾಷಾಂತರಿಸುವುದರಲ್ಲಿ ಇನ್ನೂ ಇರುವ ಮುಖ್ಯ ಸಮಸ್ಯೆ ಪಾರಿಭಾಷಿಕ ಪದಗಳು. 'ಹಣ ಪ್ರಪಂಚ'ವೆಂಬ ಗ್ರಂಥವನ್ನು ಅನೇಕ ವರ್ಷಗಳ ಹಿಂದೆಯೇ ಬರೆದ ಶ್ರೀ ಸೀತಾರಾಮಯ್ಯನವರಿಗೆ ಇಂತಹ ಸಮಸ್ಯೆ ಕಷ್ಟವಾಗಿರಲಾರದು. ಪುಸ್ತಕದಲ್ಲಿ ನಾವು ಕಾಣುವ ಉಪಯುಕ್ತ ಆರ್ಥಿಕ ಪದಗಳು ಅವರ ಅನುಭವಯುತ ಹಾಗು ಪಕ್ವವಾದ ಮನಸ್ಸಿನಿಂದ ಎಷ್ಟು ಸ್ವಾಭಾವಿಕವಾಗಿ ಜಾರಿವೆ ಎಂಬುದನ್ನು ಊಹಿಸಬಹುದು.

ಅಲ್ಲೊಂದು ಇಲ್ಲೊಂದು ಮಾತ್ರ ಪದಶಃ ತರ್ಜುಮೆಯಾಗಿ ಭಾವಾರ್ಥ ತಪ್ಪಿದೆ. ಉದಾ—ಹೊರದೇಶದ ಆರ್ಥಿಕ ವ್ಯವಹಾರಗಳಿಗೆ ಸಂಬಂಧಿಸಿದ ಲೇಣೆ-ದೇಣೆ ಲೆಕ್ಕದ ಸಾರಾಂಶ ತಃಖ್ತೆ ಎಂಬ ಅರ್ಥವಿರುವ Balance of payments (page 9) ಎಂಬುದನ್ನು 'ವಿದೇಶಿ ವ್ಯಾಪಾರದ ನಿವ್ವಳ ಸಿಲ್ಕು' (ಪುಟ ೮) ಎಂದು ಕರೆಯಲಾಗಿದೆ. Individual banks (page 43) ಎಂಬಲ್ಲಿ ಒಂದೊಂದು ಬ್ಯಾಂಕು ಎಂಬ ಅರ್ಥವುಳ್ಳ individual ಎಂಬುದನ್ನು 'ವ್ಯಕ್ತಿ' ಎಂದಿಟ್ಟುಕೊಂಡು 'ವ್ಯಕ್ತಿಬ್ಯಾಂಕುಗಳು' (ಪುಟ ೪೦) 'ವ್ಯಕ್ತಿಕಂಪೆನಿ' ಎಂಬ ಪದಗಳನ್ನು ಉಪಯೋಗಿಸಲಾಗಿದೆ. 'General monetary situation' ಎಂಬುದನ್ನು 'ಹಣಕಾಸಿನ ಸಾಮಾನ್ಯ ಪರಿಸ್ಥಿತಿ' ಎಂದು ಹೇಳದೆ 'ಸಾಮಾನ್ಯ ಹಣದ ಪರಿಸ್ಥಿತಿ' (ಪುಟ ೧೧) ಎಂದು ಹೇಳಿರುವುದು ಪದಶಃ ತರ್ಜುಮೆಯಾಗಿದೆ. 'Secondary and Tertiary Sectors' (page 17) ಎನ್ನುವುದನ್ನು 'ಎರಡನೆಯ ಮತ್ತು ಮೂರನೆಯ ಮಟ್ಟದ ಕಾರ್ಯ ಪ್ರಪಂಚ' (ಪುಟ ೧೬) ಎಂದು ಭಾಷಾಂತರಿಸಿದ್ದಾರೆ. ಇದರಿಂದ ವಿಷಯ ತಿಳಿಯುವುದಿಲ್ಲ. ಇಂಗ್ಲಿಷ್‌ನಲ್ಲಿ ಬಳಕೆಯ ಮೇಲೆ ಅನೇಕ ಪದಗಳಿಗೆ ವಿಶೇಷಾರ್ಥ ಬಂದಿದೆ;

ಕನ್ನಡದಲ್ಲಿಯೂ ಹೀಗೆಯೇ ಉಂಟಾಗಬಹುದು. ಆದರೆ ಸಾಧ್ಯವಾದಲ್ಲೆಲ್ಲ ನೇರವಾಗಿ ವಿಷಯವನ್ನು ಅರ್ಥಮಾಡಿಕೊಡುವ ಪದಗಳನ್ನು ಉಪಯೋಗಿಸುವುದು ಒಳ್ಳೆಯದೆಂದು ನನ್ನ ಅಭಿಪ್ರಾಯ. ಇದರಂತೆ Secondary and tertiary sectors ಅನ್ನುವುದನ್ನು "ಕೈಗಾರಿಕೆ ಮತ್ತು ವಿವಿಧ ಸೇವೆಗಳ ಒದಗಣೆಯ ಆರ್ಥಿಕ ಕ್ಷೇತ್ರಗಳು" ಎಂದು ಹೇಳಿದರೆ ಸಂದರ್ಭಕ್ಕೆ ಸರಿಯಾದ ಅರ್ಥ ವಿವರಣೆಯಾಗುವುದೆಂದು ತೋರುತ್ತದೆ. 'Open market operations' ಎಂಬುದಕ್ಕೆ 'ಹೊರಪೇಟೆಯ ವ್ಯವಹಾರಗಳು', 'ತೆರೆದ ಪೇಟೆಯ ವ್ಯವಹಾರಗಳು' ಎಂಬ ಪದಗಳನ್ನು ಪ್ರಯೋಗಿಸಿರುತ್ತಾರೆ. ಸಾಮಾನ್ಯವಾಗಿ ಸದಸ್ಯ ಸಂಸ್ಥೆಗಳೊಡನೆ ಮಾತ್ರ ಹಣಕಾಸಿನ ವ್ಯವಹಾರ ನಡೆಸುವ ರಿಸರ್ವ್ ಬ್ಯಾಂಕು ಕೆಲವು ವೇಳೆ ಸದಸ್ಯರಲ್ಲದವರೊಡನೆಯೂ ಹಣದ ಪೇಟೆಯಲ್ಲಿ ವ್ಯವಹಾರ ನಡೆಸುವುದಕ್ಕೆ 'Open market operations' ಎಂದು ಇಂಗ್ಲಿಷಿನಲ್ಲಿ ಹೇಳುತ್ತೇವೆ. 'ಹಣದ ಪೇಟೆಯ ಸಾರ್ವಜನಿಕರೊಡನೆ ನೇರ ವ್ಯವಹಾರಗಳು' ಎಂದು ಹೇಳಬಹುದು. ಅಥವಾ 'ತೆರೆದ ಪೇಟೆಯ ವ್ಯವಹಾರಗಳು' ಎಂಬ ಪದವನ್ನು ಒಪ್ಪಬಹುದಾದರೂ 'ಹೊರಪೇಟೆಯ ವ್ಯವಹಾರಗಳು' ಎಂಬುದು ಸರಿ ಎನ್ನಿಸುವುದಿಲ್ಲ.

ಅಚ್ಚಿನ ಸರಿ ತಪ್ಪುಗಳ ಪಟ್ಟಿಯಲ್ಲಿ ಹಾಕಬಹುದಾದ ಕಾಣಿಸಿದ ಕೆಲವನ್ನು ಕೆಳಗೆ ಕೊಟ್ಟಿದ್ದೇನೆ:

ಪುಟ	ಸಾಲು	ತಪ್ಪು	ಸರಿ
೨೧	೧೫	ಕಂಪೆನಿಗಳು	ಬ್ಯಾಂಕುಗಳು
೧೯	೧೯	ಅದರ	ಅವುಗಳ
,,	,,	ಅದು	ಅವುಗಳು
೨೫	೩೦	ಕೈಸಾಲದ	ಪಾವತಿಪಡೆದ
,,	೩೨	ಉತ್ಪತ್ತಿ	ಪಾವತಿಪಡೆದ ಬಂಡವಾಳ ಮತ್ತು ಆಪನ್ನಿಧಿ
೨೬	೧೫	ಅಂದಿವೆ	ಸಂದಿವೆ

Informal ಎಂಬ ಪದ ಬಂದ ಕಡೆ ಎಲ್ಲ 'ಔಪಚಾರಿಕ' ಎಂಬ ಕನ್ನಡ ಪದ ಹಾಕಿದ್ದಾರೆ; 'ಅನೌಪಚಾರಿಕ' ಎಂದಿರಬೇಕೆಂದು ನನಗೆ ಅನ್ನಿಸುತ್ತದೆ. ಪುಸ್ತಕದ ಕೊನೆಯಲ್ಲಿ ಕೊಟ್ಟಿರುವ ಅರ್ಥಕೋಶದಲ್ಲಿಯೂ Informal=ಔಪಚಾರಿಕ (ಪುಟ ೧೫೮) ಎಂದೇ ಇರುವುದರಿಂದ ಇದರ ಸಮಾಧಾನ ಭಾಷಾಂತರ ಕರ್ತರಿಗೆ ಸೇರಿದೆ.

ಕೆಲವು ಕಡೆ ವಾಕ್ಯಗಳ ರಚನೆ ಸಮಂಜಸವಾಗಿ ಕಾಣುವುದಿಲ್ಲ: ಉದಾ— "ಬ್ಯಾಂಕಿನ ಕೈಯಲ್ಲಿ ಎಷ್ಟು ನಗದಿದೆ ಎಂಬುದರ ಮೇಲೆ ಅದರ ಉದ್ದರಿ ಕೊಡುವ **ಶಕ್ತಿ ಹೊಂದಿರುತ್ತದೆ**" (ಪುಟ ೧೯).

"... ಇಂಗ್ಲಿಷ್ ಪಾಠಕ್ಕೂ ಭಾಷಾಂತರಗಳಿಗೂ ಅರ್ಥ ಪ್ರತಿಪಾದನೆಯಲ್ಲಿ ಭಿನ್ನತೆ ಉಂಟಾದರೆ ಇಂಗ್ಲಿಷ್ ಪಾಠವೇ ಅಧಿಕೃತವಾದ್ದೆಂದು ಎಣಿಸತಕ್ಕದ್ದು" ಎಂದು ಮುನ್ನುಡಿಯಲ್ಲಿ ಗವರ್ನರ್ ಶ್ರೀ ಎಚ್. ವಿ. ಆರ್. ಐಯಂಗಾರ್ ಅವರು ಹೇಳಿದ್ದಾರೆ. ಭಾಷಾಂತರವು ಮೂಲವನ್ನು ಇದ್ದಹಾಗೆಯೇ ಪರಿಪೂರ್ಣವಾಗಿ ಪ್ರತಿಬಿಂಬಿಸುವುದಾದರೆ ಭಾಷಾಂತರಕ್ಕೂ ಮೂಲಗ್ರಂಥದಷ್ಟೇ ಅಧಿಕೃತ ಸ್ಥಾನವನ್ನು ದೊರಕಿಸಬಹುದು. ಇದು ಸಾಧ್ಯ ಎಂಬುದು ಕನ್ನಡ ಭಾಷೆಯ ಪರಿಪೂರ್ಣತೆಯಲ್ಲಿ ವಿಶ್ವಾಸವಿರುವವರೆಲ್ಲರೂ ಒಪ್ಪುವ ಮಾತು.

ಪ್ರಕೃತ ಗ್ರಂಥಕ್ಕೆ ಅನ್ವಯಿಸಿ ಹೇಳುವುದಾದರೆ ಮೇಲೆ ಹೇಳಿರುವ ಗವರ್ನರವರ ಮುನ್ನೆಚ್ಚರಿಕೆ ಮಾತು ಅಗತ್ಯವೆಂದು ತೋರುವುದು. ಏಕೆಂದರೆ ಕೆಲವು ಕಡೆ ಭಾಷಾಂತರವು ಮೂಲಕ್ಕೆ ಸಂಪೂರ್ಣವಾಗಿ ಅನುಸಾರವಾಗಿಲ್ಲ. ಅನೇಕ ಕಡೆಗಳಲ್ಲಿ ಇಂಗ್ಲಿಷಿನ ದೀರ್ಘ ವಾಕ್ಯಗಳನ್ನು ಕನ್ನಡದಲ್ಲಿ ಪುಟ್ಟ ಪುಟ್ಟ ವಾಕ್ಯಗಳಾಗಿ ಒಡೆದಿರುತ್ತಾರೆ. ಎಷ್ಟೋ ಕಡೆ ಇದರಿಂದ ವಿಷಯ ನಿರೂಪಣೆ ಸರಳವಾಗಿದೆ; ಆದರೆ ಕೆಲವು ಕಡೆಗಳಲ್ಲಿ ಸ್ವಲ್ಪ ಅರ್ಥವ್ಯತ್ಯಾಸ ಅಥವಾ ಸ್ವರಭಾರ (Emphasis) ವ್ಯತ್ಯಾಸವಾಗಿದೆ. ಉದಾಹರಣೆಗೆ—ಮೂರನೆ ಅಧ್ಯಾಯದ ಮೊದಲಲ್ಲಿ ಇಂಗ್ಲಿಷ್‌ನಲ್ಲಿರುವ ಒಂದು ವಾಕ್ಯವನ್ನು ಎರಡುಮಾಡುವುದರಿಂದ ಸ್ವಲ್ಪ ಮಟ್ಟಿಗೆ ಆಗಿರುವ ಅರ್ಥ ವ್ಯತ್ಯಾಸವನ್ನು ಈ ರೀತಿ ಭಾಷಾಂತರಿಸಿದ್ದರೆ ತಪ್ಪಿಸಬಹುದಾಗಿತ್ತು—"ರಿಸರ್ವ್ ಬ್ಯಾಂಕಿನೊಡನೆ ನೇರವಾದ ಸಂಬಂಧವುಳ್ಳ ಉದ್ದರಿ ಸಂಸ್ಥೆಗಳ—ಮುಖ್ಯವಾಗಿ ವ್ಯಾಪಾರ ಬ್ಯಾಂಕುಗಳ—ಆಸ್ತಿಗಳ ರಚನೆಯು ನಿಯಂತ್ರಣವು ಉದ್ದರಿ ನಿಯಂತ್ರಣದ ಮುಖ್ಯವಾದ ಒಳಭಾಗವಾಗಿದೆ."

ಇಂಗ್ಲಿಷ್ ಪುಸ್ತಕ ಪುಟ ೭೦—೬ ನೆ ಸಾಲಿನಿಂದ ಶುರು ಆಗುವ ವಾಕ್ಯವನ್ನು ಕನ್ನಡದಲ್ಲಿ ಎರಡು ವಾಕ್ಯಗಳಾಗಿಮಾಡಿದ್ದಾರೆ; ಇಲ್ಲಿಯೂ ಭಾಷಾಂತರ ಸ್ವಲ್ಪ ತಪ್ಪಿದೆ. (ಪುಟ ೬೪ ಕೊನೆ ೩ ಸಾಲುಗಳು; ೬೫ ಮೊದಲ ೩ ಸಾಲುಗಳು). ಸರಿಪಡಿಸುವುದಾದರೆ ಹೀಗೆ ಬರೆಯಬಹುದು—"ದೇಶದ ಕೇಂದ್ರ ಬ್ಯಾಂಕಿನ ಸ್ಥಾನದಲ್ಲಿರುವುದರಿಂದಲೂ, ಬ್ಯಾಂಕುಗಳೊಡನೆಯೂ, ಹಣದ ಪೇಟೆಯೊಡನೆಯೂ ನಿಕಟವಾದ ಸಹಚಾರವಿರುವುದರಿಂದಲೂ, ನಾಡಿನ ವಾಣಿಜ್ಯ ಲೇವಾದೇವಿಗಳ ಪ್ರತಿಷ್ಠಾನವಾದ ಬೊಂಬಾಯಿ ಪಟ್ಟಣದಲ್ಲಿ ಅದರ ಮುಖ್ಯ ನೆಲೆ ಇರುವುದರಿಂದಲೂ, ರಿಸರ್ವ್ ಬ್ಯಾಂಕು ಬ್ಯಾಂಕಿಂಗ್ ಮತ್ತು ಹಣಕಾಸಿನ ವಿಚಾರದಲ್ಲಿ ಸರ್ಕಾರಗಳಿಗೆ ಹಿತಕರವಾದ ಸಲಹೆಗಳನ್ನು ಕೊಡುವ ಸ್ಥಿತಿಯಲ್ಲಿದೆ."

ಹೀಗೆಯೇ ಸಮಾಪ್ತಿ ಅಧ್ಯಾಯದ ಕೊನೆಯ ಇಂಗ್ಲಿಷ್ ವಾಕ್ಯವನ್ನು

ಭಾಷಾಂತರಿಸುವಾಗ ಮೂರು ವಾಕ್ಯಗಳಾಗಿ ಬಿಡಿಸಿ ಬರೆದಿರುವುದರಲ್ಲಿಯೂ ಮೂಲದ ಅರ್ಥದ ಛಾಯೆ ಮಸುಕಾಗಿದೆ. ಪುಸ್ತಕದ ಸಾರಾಂಶವನ್ನು ಹೇಳುವುದರಲ್ಲಿ ಮೇಲೆ ೨೨೨ ನೆ ಪುಟದಲ್ಲಿ ಕೊಟ್ಟಿರುವ ಸಮಾಪ್ತಿ ವಾಕ್ಯದ ಭಾಷಾಂತರವನ್ನು ನೋಡಿದರೆ ಮೂಲವನ್ನು ಇದ್ದಂತೆಯೇ ಕನ್ನಡದಲ್ಲಿ ಹೇಳುವುದು ಸಾಧ್ಯವೆಂಬುದು ವ್ಯಕ್ತವಾಗುವುದು.

ಎಂಟನೆ ಪುಟದ ಕೊನೆಯಲ್ಲಿರುವ ಇಂಗ್ಲಿಷ್ ವಾಕ್ಯದ ಭಾಷಾಂತರ ತಪ್ಪಿರುವುದು ಸರಿಯಾಗಿರಬೇಕಾದರೆ ಹೇಗಿರಬಹುದೆಂದು ತೋರಿಸಲು ಕೊಟ್ಟಿರುವ ಈ ವಾಕ್ಯದೊಡನೆ ಹೋಲಿಸಿ ತಿಳಿಯಬಹುದು—"ಹಣ ಮತ್ತು ಉದ್ದರಿ ನಿಯಂತ್ರಣಗೊಳಿಸುವುದು ಮತ್ತು ಸರ್ಕಾರಕ್ಕೆ ಬ್ಯಾಂಕರಾಗಿರುವುದು—ಇವುಗಳ ಸ್ಥಾನಬಲದಿಂದ, ಸಾಮಾನ್ಯವಾಗಿ ಆರ್ಥಿಕ ವಿಷಯಗಳ ಮೇಲೆ ಹಾಗು ನಿರ್ದಿಷ್ಟವಾಗಿ ಹಣಕಾಸಿನ ಸಮಸ್ಯೆಗಳ ಮೇಲೆ, ಸರ್ಕಾರಕ್ಕೆ ಸಲಹೆಕೊಡುವ ಬ್ಯಾಂಕಿನ ಪಾತ್ರವು ಹೆಚ್ಚುತ್ತಿರುವ ಪ್ರಾಮುಖ್ಯತೆಯುಳ್ಳದ್ದಾಗಿದೆ."

ಅಲ್ಲೊಂದು ಇಲ್ಲೊಂದು ಕಾಣಬರುವ ಮೇಲೆ ಹೇಳಿರುವಂತಹ ತಪ್ಪುಗಳನ್ನು ಬಿಟ್ಟು ಒಟ್ಟಿನಲ್ಲಿ ಹೇಳುವುದಾದರೆ ಪುಸ್ತಕ ಉತ್ತಮದರ್ಜೆಯ ಭಾಷಾಂತರವಾಗಿದೆ. ಅರ್ಥಶಾಸ್ತ್ರದ ಕನ್ನಡ ಪುಸ್ತಕ ಭಂಡಾರಕ್ಕೆ ಉತ್ತಮ ಕೊಡುಗೆಯಾಗಿದೆ. ಎರಡನೆ ಮುದ್ರಣ ಆಗುವಾಗ, ಇಂಗ್ಲಿಷ್ ಪಾಠಕ್ಕೂ ಕನ್ನಡ ಭಾಷಾಂತರಕ್ಕೂ ಯಾವ ಗಣನೀಯವಾದ ಭಿನ್ನತೆಯೂ ಇಲ್ಲದ ಪರಿಪೂರ್ಣ ಭಾಷಾಂತರದ ಪುಸ್ತಕವಾಗಲಿ ಎಂಬ ಆಕಾಂಕ್ಷೆಯಿಂದ ಹಾಗು ರಚನಾತ್ಮಕ ದೃಷ್ಟಿಯಿಂದ ಕೆಲವು ನ್ಯೂನತೆಗಳನ್ನು ತೋರಿಸಿರುವುದನ್ನು ಅನ್ಯಥಾ ಭಾವಿಸಲಾಗದು.

ಅ. ಪು. ಶ್ರೀ.

ವಸ್ತುಕೋಶ

ತಾ|| ೩-೩-೧೯೫೫ ರಂದು ಕುವೆಂಪುರವರು ಮಹಾರಾಜಾಕಾಲೇಜಿನ ಮನಶ್ಶಾಸ್ತ್ರಸಂಘದ ಮುಕ್ತಾಯಸಮಾರಂಭದಲ್ಲಿ ಮಾಡಿದ ಭಾಷಣ

ನನಗೆ ಮನಶ್ಶಾಸ್ತ್ರದಲ್ಲಿ ಅಭಿಮಾನ. ಆದರೆ ಅಭಿಮಾನಕ್ಕಿಂತಲೂ ಇನ್ನೂ ಸ್ವಲ್ಪ ಹೆಜ್ಜೆ ಮುಂದಕ್ಕೆ ಹೋಗಬೇಕಾಗುತ್ತದೆ. ಜೀವಂತವಾದ ತೀವ್ರ ಆಸಕ್ತಿಯೂ ಇದೆ. ನಾನು ನಿತ್ಯವೂ ಓದುವ ಗ್ರಂಥಗಳಲ್ಲಿ ಒಂದಾದರೂ ಮನಶ್ಶಾಸ್ತ್ರಕ್ಕೆ ಸಂಬಂಧಪಟ್ಟುದಾಗಿರುತ್ತದೆ. ಏಕೆಂದರೆ, ಅದು ನನಗೆ ಬರಿಯ ಶಾಸ್ತ್ರವಲ್ಲ; ಅದು ಒಂದು ರೀತಿಯಲ್ಲಿ ಸಾಕ್ಷಾತ್ಕಾರದ ಸೂತ್ರಗಳನ್ನು ಒಳಗೊಂಡ ಶಾಸ್ತ್ರ. ನನ್ನ ಸ್ವಂತ ಜೀವನದಲ್ಲಿ ಆಲೋಚನೆಯ ಆವಶ್ಯಕತೆಗಾಗಿ ಮನಶ್ಶಾಸ್ತ್ರ, ತತ್ತ್ವಶಾಸ್ತ್ರ, ಸಾಹಿತ್ಯ—ಇವೆಲ್ಲ ಭೇದಗಳನ್ನು ಕಲ್ಪಿಸಿಕೊಂಡಿರುವುದುಂಟು. ಆದರೆ ಅನುಭವದ ದೃಷ್ಟಿಯಿಂದ ನನ್ನ ಕಾವ್ಯದಲ್ಲಿ, ನನ್ನ ಸಾಹಿತ್ಯದಲ್ಲಿ ಮನಶ್ಶಾಸ್ತ್ರ, ತತ್ತ್ವಶಾಸ್ತ್ರ, ಇತಿಹಾಸ, ರಾಜ್ಯಶಾಸ್ತ್ರದ ವಿಷಯ—ಮುಂತಾದ ಇನ್ನೂ ಹಲವಾರು ವಿಷಯಗಳು, ಒಂದೇ ವ್ಯಕ್ತಿಯ ಶರೀರದಲ್ಲಿ ವಸ್ತುತಃ ಒಂದಕ್ಕೊಂದು ಬಹು ದೂರವಾಗಿ ಬೇರೆ ಬೇರೆಯಾಗಿರುವ ಪದಾರ್ಥಗಳು ಸೇರಿಕೊಂಡಿರುವಂತೆ, ಸೇರಿಕೊಂಡಿವೆ. ಯಾವುದೋ ಒಂದು ಸತ್ತ್ವ ಅದಕ್ಕೆ ಏಕತ್ವವನ್ನು ದಯಪಾಲಿಸಿದೆ. ನಮ್ಮ ಶರೀರದಲ್ಲಿರುವ ಮಾಂಸ, ರಕ್ತ, ಎಲುಬು—ಇವುಗಳನ್ನು ನೋಡಿದರೆ ಒಂದಕ್ಕೂ ಮತ್ತೊಂದಕ್ಕೂ ಎಷ್ಟು ವ್ಯತ್ಯಾಸ! ಒಂದು ಮೃದು, ಒಂದು ಕಠಿಣ—ನಾನಾ ರೂಪಗಳಲ್ಲಿ ವ್ಯತ್ಯಾಸ. ಈ ಬಹುತ್ವ, ಈ ಭೇದ, ಹಲವಾರು ಪ್ರಭೇದ—ಇವು ಶರೀರಕ್ಕೆ, ಶರೀರವನ್ನು ಉಪಯೋಗಿಸುವ ಜೀವಕ್ಕೆ ಅತ್ಯಂತ ಆವಶ್ಯಕವಾದ ಸಾಮಗ್ರಿ. ಹಾಗೆಯೇ ಜೀವನದಲ್ಲಿ ನಾವು ಬೇರೆ ಬೇರೆ ಅಧ್ಯಯನಕ್ಕಾಗಿ, ಆಲೋಚನೆಗಾಗಿ ವಿಭಜನೆಗಳನ್ನು ಮಾಡಿ ಬೇರೆ ಬೇರೆ ಶಾಸ್ತ್ರಗಳನ್ನು ಕಲ್ಪಿಸುತ್ತೇವೆ. ಆದರೆ ಬದುಕು ಇವುಗಳ ಪ್ರತ್ಯೇಕತಾಭಾವವನ್ನು ತೋರುವುದಿಲ್ಲ. ಇವೆಲ್ಲವೂ ಆವಶ್ಯಕ. ಆದುದರಿಂದ ಈ ಏಕಸೂತ್ರ, ಈ ಏಕತ್ವ ಅವೆಲ್ಲವನ್ನೂ ಬಂಧಿಸಿದೆ.

ನನಗೆ ಇದೆಲ್ಲಿಯಾದರೂ ಬರಿಯ ಶಾಸ್ತ್ರದ ಅಧ್ಯಯನವಿಷಯವಾಗಿದ್ದರೆ ಇದರಲ್ಲಿ ಯಾವ ತಂಟೆಗೂ ಹೋಗದೆ ಸುಖವಾಗಿ ವೈಸ್ ಚಾನ್ಸಲರ್ ಆಗಿರಬಹುದಾಗಿತ್ತು. ಆದರೆ ಶೈಶವ, ಯೌವನ, ಜರಾ ಬರುವಂತೆ ವೈಸ್ ಚಾನ್ಸಲರ್ ಪದವಿ ಎಂಬುದೂ

ಬಂದು ಹೋಗತಕ್ಕ ವಿಷಯ. ಆದುದರಿಂದ ಹೀಗೆ ಕ್ಷಣಿಕವಾಗಿ, ಕ್ಷಣಭಂಗುರವಾಗಿ ಬಂದು ಹೋಗುವಂಥ ವಿಷಯಗಳನ್ನೇ ನಿತ್ಯಸತ್ಯವೆಂದು ಹಿಡಿದುಕೊಂಡು, ಯಾವುದು ಶಾಶ್ವತವೋ, ಸದಾ ಇರುತ್ತದೆಯೋ ಅದನ್ನು ಮರೆತರೆ ನಿವೃತ್ತನಾದ ಮೇಲೆ ರೈಲ್ವೆ ಕಂಬಿಯನ್ನೋ, ಮರದ ಕೊಂಬೆಯನ್ನೋ ಆಶ್ರಯಿಸಬೇಕಾಗಿ ಬಂದೀತು. ಆದುದರಿಂದ ಮನಶ್ಶಾಸ್ತ್ರದಲ್ಲಿ ನನಗೆ ಜೀವಂತವಾದ ಆಸಕ್ತಿ. ಬಹುಶಃ ನಾನು ಅದರ ಶಾಖೆ, ಉಪಶಾಖೆಗಳಲ್ಲೆಲ್ಲ ಆಸಕ್ತನಾಗಿದ್ದೇನೆ. ಅಂತಹ ಶಾಖೆಗಳು ಇವೆ ಎಂಬುದೂ ಕೂಡ ನಿಮಗೆ ಗೊತ್ತಿಲ್ಲವೆಂದು ಕಾಣುತ್ತದೆ. ಏಕೆಂದರೆ, ನನ್ನ ಗುರಿ ಇದರಲ್ಲಿ ಬರಿಯ ಶಾಸ್ತ್ರಾಧ್ಯಯನ ಮಾತ್ರವಲ್ಲ. ನನ್ನ ಜೀವನದ ವಿಕಾಸದ ಮಾರ್ಗದಲ್ಲಿ, ಅದರ ಪ್ರಯಾಣದಲ್ಲಿ ಇವುಗಳಿಂದ ಏನೇನು ಸಹಾಯ ದೊರಕೀತು, ಶಕ್ತಿ ಲಭಿಸೀತು, ದಾರಿ ಕಂಡೀತು, ವಿಘ್ನಗಳ ಅಪಸರಣವಾದೀತು—ಇದೇ ಮುಖ್ಯ ಆಸೆ, ಗುರಿ. ಆದುದರಿಂದ ನಾನು ಇಲ್ಲಿಗೆ ಬರುತ್ತೇನೆಂದು ಒಪ್ಪಿಕೊಂಡಾಗ ಬಹುಶಃ ಅಸ್ಪಷ್ಟವಾದ ಈ ಪ್ರೇರಣೆಗಳೆಲ್ಲಾ ನನ್ನ ಮನಸ್ಸಿನ ಹಿಂದೆ ಇದ್ದುವೆಂದು ತೋರುತ್ತದೆ.

ನಾನು ಬಯಲಿನ ವ್ಯಕ್ತಿ, ಕಾಡಿನ ವ್ಯಕ್ತಿ, ಹೊಳೆ ಕೆರೆಗಳ ವ್ಯಕ್ತಿ, ಬಾನು ಬಯಲುಗಳ ವ್ಯಕ್ತಿ. ಅಲ್ಲಿ ನಮ್ಮ ಬಾಳು; ಇಲ್ಲಿ ಆ ಬಾಳನ್ನು ಕುರಿತ ಧ್ಯಾನ, ಆಲೋಚನೆ, ತತ್ತ್ವಗ್ರಹಣ. ಬಹುಶಃ ಬಾಳಿಲ್ಲದ ಆಲೋಚನೆ, ತತ್ತ್ವಗ್ರಹಣ—ಇವು ತುಂಬಾ ನೀರಸ, 'ಮ್ಯೂಸಿಯಂ'ನಲ್ಲಿ ನೋಡುವ ಪ್ರಾಣಿಗಳಂತೆ. ಬಾಳುಸಹಿತವಾಗಿದ್ದ ಪಕ್ಷದಲ್ಲಿ ಅವು ಅರಣ್ಯದ ಪ್ರಾಣಿಗಳಂತೆಯೇ ಅಥವಾ ಮೃಗಾಲಯದ ಜೀವಂತ ಪ್ರಾಣಿಗಳಂತೆಯೇ ಇರುತ್ತವೆ, ತಮ್ಮ ಜೀವ ಲಕ್ಷಣ ಸ್ವರೂಪಗಳನ್ನೊಳಗೊಂಡು. ನಾನು ಇಲ್ಲಿಗೆ ಬರುವ ಮುನ್ನ ಏನನ್ನು ಮಾತನಾಡುತ್ತೇನೆ, ಏನನ್ನು ಮಾತನಾಡಬೇಕು—ಎಂಬುದನ್ನು ಆಲೋಚಿಸುವುದು ಕೂಡ ಕಷ್ಟವಾಯಿತು. ಅದರಿಂದ ಒಂದು ರೀತಿಯಲ್ಲಿ ಶೂನ್ಯಸಂಪಾದನೆ ಎಂದು ಹೇಳುತ್ತಾರಲ್ಲ, ಆ ಶೂನ್ಯಸಂಪಾದನೆಗೆ ಸಿದ್ಧನಾಗಿಯೇ ಬಂದು ನಿಂತುಕೊಂಡೆ. ಆದರೆ ಇವರಾಡಿದ ಮಾತುಗಳಿಂದ, ಅವರಾಡಿದ ಮಾತುಗಳಿಂದ ಸ್ವಲ್ಪಸ್ವಲ್ಪ ಸಂಗ್ರಹಿಸಿಕೊಂಡು ಅದನ್ನೇ ಒಂದು ರೀತಿಯಲ್ಲಿ ಸ್ವಲ್ಪ ಒಗ್ಗರಣೆಯ ಸಹಿತವಾಗಿ ನಿಮಗೆಲ್ಲರಿಗೂ ಹಂಚೋಣ ಎಂದು ಮನಸ್ಸು ಮಾಡಿದ್ದೇನೆ.

ನಾನು ಮಾತನಾಡುತ್ತಿರುವುದು ಮನಶ್ಶಾಸ್ತ್ರದ ಸಂಘ—ಇಲ್ಲಿ ಹೆಚ್ಚಾಗಿ ಮನಶ್ಶಾಸ್ತ್ರದ ವಿದ್ಯಾರ್ಥಿಗಳೇ ಇದ್ದೀರಿ ಎಂದು ನನ್ನ ಭಾವನೆ. ಮನಶ್ಶಾಸ್ತ್ರ ನಾನು ಓದುತ್ತಿದ್ದ ಕಾಲದ ಮನಶ್ಶಾಸ್ತ್ರಕ್ಕಿಂತಲೂ ಶಾಖೋಪಶಾಖೆಗಳಲ್ಲಿ ಬಹು ಮಟ್ಟಿಗೆ ಮುಂದುವರಿದಿದೆ, ಮುಂದುವರಿಯುತ್ತಿದೆ. ಬಹುಶಃ ಆಗ ಇದ್ದುದಕ್ಕಿಂತ

ಹೆಚ್ಚಾಗಿ ಭಾರತೀಯತ್ವ ಸ್ವಲ್ಪಮಟ್ಟಿಗೆ ಪ್ರವೇಶಿಸಿದೆ ಎಂದು ತೋರುತ್ತದೆ. ವಿಶ್ವವಿದ್ಯಾನಿಲಯದ ಸಹಾಯಧನ ಆಯೋಗದವರು (University Grants Commission) ಈಗ ನಮ್ಮ ವಿಶ್ವವಿದ್ಯಾನಿಲಯದಲ್ಲಿ ಸಂಶೋಧನಾಂಗವನ್ನು ಪ್ರಬಲಗೊಳಿಸಬೇಕು, ಪುಷ್ಟಿಗೊಳಿಸಬೇಕು—ಎಂದು ಆಲೋಚಿಸಿ ಅದಕ್ಕೆ ಸಹಾಯ ಧನ ನೀಡಿದ್ದಾರೆ. ಇನ್ನು ಈ ವಿವಿಧ ಅಧ್ಯಯನದ ಶಾಖೆಗಳಲ್ಲಿ ಸಂಶೋಧನೆಯ ಮಟ್ಟದ ಕೆಲಸ ನಡೆಯಬೇಕಾಗಿದೆ. ಅದಕ್ಕೆ ಅಧ್ಯಾಪಕರ ನಿರ್ದೇಶನದಲ್ಲಿ ಸಮರ್ಥ ರಾದ ವಿದ್ಯಾರ್ಥಿಗಳು ಹಗಲಿರುಳು ದುಡಿಯುವ ಕಾರ್ಯಕ್ಕೆ ಸೊಂಟಕಟ್ಟಿ ನಿಲ್ಲಬೇಕಾಗು ತ್ತದೆ. ಈ ವಿಚಾರದಲ್ಲಿ ಇದುವರೆಗೆ ಸಂಗ್ರಹವಾಗಿರುವ ಮನಶ್ಶಾಸ್ತ್ರದ ವಿಷಯ, ವಸ್ತುಗಳನ್ನು ಅರಿಯುವುದರಲ್ಲಿಯೇ ಪರ್ಯವಸಾನವಾಗಬಾರದು. ಅದು ಆವಶ್ಯಕ; ಬೋಧನಾಂಗದ ಕೆಲಸ ಅದೇ. ಇದುವರೆಗೆ ಬೇರೆ ಬೇರೆ ಜನಾಂಗಗಳಲ್ಲಿ, ನಮ್ಮ ದೇಶದಲ್ಲಿ ಅಡಕವಾಗಿರುವ ವಿದ್ಯೆ, ಸಂಸ್ಕೃತಿ ಎಲ್ಲವೂ ಮಕ್ಕಳ ಮನಸ್ಸಿಗೆ ಹೊಗು ವಂತೆ ಮಾಡತಕ್ಕದ್ದು ಒಂದು ರೀತಿಯ ಪ್ರಸಾರ, ಇದ್ದದ್ದನ್ನು ಹಂಚುವುದು—ಅದೇ ವಿಶ್ವವಿದ್ಯಾನಿಲಯದ ಬೋಧನಾಂಗದ ಕೆಲಸ. ಆದರೆ ಸಂಶೋಧನಾಂಗದ ಕೆಲಸ ಬೋಧನಾಂಗದ ಕೆಲಸ ಮುಗಿದ ಮೇಲೆ. ಈ ಸಂಶೋಧನಾಂಗದ ಕಾರ್ಯ ಹೊಸ ಹೊಸ ವಿಷಯಗಳನ್ನು ಕಂಡುಹಿಡಿಯುವುದು, ಜ್ಞಾನದ ದಿಗಂತಗಳನ್ನು ವಿಸ್ತರಿಸು ವುದು. ಕೆಲವರ ಅಭಿಪ್ರಾಯದಲ್ಲಿ ವಿಶ್ವವಿದ್ಯಾನಿಲಯದ ಮುಖ್ಯ ಸ್ವರೂಪವೇ ಈ ಸಂಶೋಧನಾಂಗ, ಉಳಿದುದೆಲ್ಲವೂ ಗೌಣ. ಆದುದರಿಂದ ವಿಶ್ವವಿದ್ಯಾನಿಲಯ ಈ ಬೋಧನೆಯ ಕೆಲಸವನ್ನು ಇನ್ನು ಯಾರಿಗಾದರೂ ವಿಧಿಸಿ, ತನ್ನ ಗಮನವನ್ನೆಲ್ಲಾ ಶೋಧನೆಯ ಕೆಲಸದ ಮೇಲೆಯೇ ಕೇಂದ್ರಿಕರಿಸಬೇಕು ಎಂದು ಒಂದು ಅಭಿಪ್ರಾಯ. ಈ ವಿಚಾರವನ್ನು ಕುರಿತು ನಾನು ಇಲ್ಲಿ ಚರ್ಚೆಗೆ ಹೋಗುವುದಿಲ್ಲ. ಅಂತೂ ಈ ಸಂಶೋಧನಾಂಗವನ್ನು—ಅದರಲ್ಲೂ ಮನಶ್ಶಾಸ್ತ್ರದ ವಿಷಯವನ್ನು ಕುರಿತು ಒಂದೆರಡು ಮಾತುಗಳನ್ನು ಹೇಳುತ್ತೇನೆ.

ಬಹುಶಃ ಮನಶ್ಶಾಸ್ತ್ರದ ಶಾಖೆ ನಾವು ವಿದ್ಯಾರ್ಥಿಗಳಾಗುವುದಕ್ಕೆ ಮೂರು ನಾಲ್ಕು ವರ್ಷಗಳ ಹಿಂದೆ ಪ್ರಾರಂಭವಾಯಿತು(೧೯೨೪). ಎಂದರೆ, ನಾವು ವಿದ್ಯಾರ್ಥಿ ಗಳಾಗಿ ಬರುವ ವೇಳೆಗೆ ಮನಶ್ಶಾಸ್ತ್ರದ ಒಂದು ಇಲಾಖೆ ಪ್ರಾರಂಭವಾಗಿತ್ತು; ಅದಕ್ಕೆ ನಾಲ್ಕೈದು ವರ್ಷಗಳ ಹಿಂದೆ ಇರಲಿಲ್ಲ. ಇರದಿದ್ದುದರಿಂದ ಏನು ಕೇಡಾಗಿತ್ತು? ವಿಶ್ವವಿದ್ಯಾನಿಲಯದ ಕೆಲಸ ನಡೆದುಕೊಂಡು ಹೋಗುತ್ತಿತ್ತು, ಅಸಾಧಾರಣ ಪ್ರಾಧ್ಯಾಪಕರು ಬರುತ್ತಿದ್ದರು, ಎಲ್ಲ ನಡೆಯುತ್ತಿತ್ತು—ಅದರಿಂದ ಏನೂ ಅಂಥ ತೊಂದರೆ ಆಗುತ್ತಿರಲಿಲ್ಲ; ಕೇಡೂ ಆಗುತ್ತಿರಲಿಲ್ಲ. ಹಾಗೆ ತೋರುತ್ತಿತ್ತು. ಆದರೆ

ಯಾವುದೋ ದೇಶದಲ್ಲಿ, ಎಲ್ಲಿಯೋ 'ಮನಸ್ಸು ಎಂಬುದು ಒಂದು ಮುಖ್ಯ ವಿಷಯ. ಉಳಿದ ಶರೀರಶಾಸ್ತ್ರ, ಪ್ರಾಣಿಶಾಸ್ತ್ರ, ಭೌತಶಾಸ್ತ್ರ, ರಾಜ್ಯಶಾಸ್ತ್ರಗಳನ್ನು ಹೇಗೆ ಅಧ್ಯಯನ ಮಾಡುವುದು ಆವಶ್ಯಕವೋ ಹಾಗೆಯೇ ಮನಸ್ಸನ್ನೂ ಒಂದು ಶಾಸ್ತ್ರ ವನ್ನಾಗಿ ಅಧ್ಯಯನಮಾಡಬೇಕು' ಎಂಬುದು ಯಾರಿಗೋ ಗೋಚರವಾಗಿ, ಅವರು ಅದನ್ನು ಪ್ರಾರಂಭಿಸಿ, ಅದು ಇಲ್ಲಿಯೂ ಪ್ರಾರಂಭವಾಯಿತು. ಈ ಮನಶ್ಶಾಸ್ತ್ರ ಎಂಬುದು ಪ್ರಾರಂಭವಾದಾಗ ವಿಚಿತ್ರವಾದ ಶಬ್ದ. ಈಗ ಅದು 'ಕಾಂಗ್ರೆಸ್' ಎನ್ನುವ ಶಬ್ದಕ್ಕಿಂತ ಹೆಚ್ಚು ಪರಿಚಿತವಾಗಿದೆ. ಎಂದರೆ, ಅದು ಅಷ್ಟು ಅವಶ್ಯಕ. ಮಾತೆತ್ತಿದರೆ ಅದನ್ನು ಉಪಯೋಗಿಸುತ್ತೇವೆ. ಮನಶ್ಶಾಸ್ತ್ರ ಆವಶ್ಯಕ ಎಂಬ ಭಾವನೆ ಎಲ್ಲರಿಗೂ ಬಂದಿದೆ.

ಆದರೆ ವಾಸ್ತವವಾಗಿ ಮನಶ್ಶಾಸ್ತ್ರ, ತತ್ತ್ವಶಾಸ್ತ್ರ—ಇವಿಲ್ಲದಿದ್ದರೂ ಚಿಂತೆಯಿಲ್ಲ, ಶುದ್ಧ ಮತ್ತು ಉನ್ನತವಾದ ಬರಿಯ ಪ್ರಾಣಿ ಜೀವನ, ನಾಗರಿಕ ಜೀವನ ನಡೆದು ಕೊಂಡು ಹೋಗುತ್ತದೆ. ಪ್ರಾಣಿ ತಿನ್ನುತ್ತದೆ, ಚೆನ್ನಾಗಿ ಬಟ್ಟೆ ಹಾಕಿಕೊಳ್ಳುತ್ತದೆ, ಪ್ರಾಣಿಕಾರ್ಯವನ್ನೆಲ್ಲಾ ಮಾಡಿಕೊಂಡು ಹೋಗುತ್ತದೆ. ಅದಕ್ಕೆ ಮನಶ್ಶಾಸ್ತ್ರವನ್ನು ಅಧ್ಯಯನಮಾಡಬೇಕೆಂಬುದೂ ಗೋಚರಿಸದಿರಬಹುದು. ಆದರೆ ನಾವು ನಮ್ಮನ್ನು ಹೆಸರಿಸಿಕೊಳ್ಳುವಾಗ ಆನೆಯೆಂದು ಕರೆದುಕೊಂಡಿಲ್ಲ, ಕುದುರೆ ಎಂದು ಕರೆದುಕೊಂಡಿಲ್ಲ—ಮನುಷ್ಯ ಎಂದು ಕರೆದುಕೊಂಡಿದ್ದೇವೆ. ಬಹುಶಃ ಉಳಿದವುಗಳಿಗಿಂತ ಹೆಚ್ಚಾಗಿ ಮನಸ್ಸುಳ್ಳ ಜೀವಿ ಎಂದು ನಮ್ಮನ್ನು ನಾವೇ ಗುರುತಿಸಿಕೊಂಡಿದ್ದೇವೆ. ಆದುದ ರಿಂದ ಅದರ ಕಡೆಗೆ ಸ್ವಲ್ಪ ಗಮನ ಕೊಡಬೇಕಾದುದು ಅತ್ಯಂತ ಆವಶ್ಯಕ.

ಆದರೆ ಬಹುಶಃ ಇತರ ಶಾಸ್ತ್ರಗಳಲ್ಲೆಂತೊ—ಇತರ ಶಾಸ್ತ್ರಗಳು ಎಂದರೆ ಭೌತಿಕ ಅಥವಾ ರಾಸಾಯನಿಕ—ಅಂತೆಯೆ ಮನಶ್ಶಾಸ್ತ್ರ ಎಂದರೆ ಪಾಶ್ಚಾತ್ಯರು ಏನು ಬರೆದಿದ್ದಾರೆಯೋ ಅದೇ ಪಠ್ಯಪುಸ್ತಕವನ್ನು, ಅಲ್ಲಿಯದೇ 'ಬಿಹೇವಿಯರಿಸಂ'ನ್ನು ತಂದು ಇಲ್ಲಿ ನಾವು ಹುಡುಗರಿಗೆ ಬೋಧಿಸಬೇಕು—ಎನ್ನುವ ಭಾವನೆಯೇ ಹೆಚ್ಚು. ಪಾಶ್ಚಾತ್ಯರು ಹೊಸ ಹೊಸದಾಗಿ ಪದಗಳನ್ನು ಸೃಷ್ಟಿಸುತ್ತಾರೆ; ನಾವು ಅದರ ಅರ್ಥ, ವ್ಯಾಪ್ತಿಗಳನ್ನು ತಿಳಿದುಕೊಳ್ಳುತ್ತೇವೆ. ಆದರೆ ವಾಸ್ತವವಾಗಿ ನಮ್ಮ ದೇಶದಲ್ಲಿ ಸಾವಿರಾರು ವರ್ಷಗಳಿಂದ—ಸಾವಿರಾರು ಎಂಬುದನ್ನು ಅಲಂಕಾರಿಕವಾಗಿ ಹೇಳುತ್ತಿಲ್ಲ—ಪಾಶ್ಚಾತ್ಯರ ವಿದ್ಯೆ, ಕಲ್ಪನೆಗಳು ಮುಟ್ಟಲಾರದ ಮಟ್ಟದಲ್ಲಿ ಮನಶ್ಶಾಸ್ತ್ರ ಸಂಬಂಧವಾಗಿ, ನಮ್ಮಲ್ಲಿ ಅದನ್ನು ಮನಶ್ಶಾಸ್ತ್ರ ಎಂಬ ಪ್ರತ್ಯೇಕವಾದ ಹೆಸರಿನಿಂದಲೇ ಗುರುತಿಸದಿದ್ದರೂ, ಅದ್ಭುತವಾದ ಗ್ರಂಥಗಳು ಸೃಷ್ಟಿಯಾಗಿವೆ. ಅಷ್ಟೇ ಅಲ್ಲ, ಈಗ ನಾವು ಪ್ರಯೋಗಶಾಲೆಗಳನ್ನು ಭೌತಿಕವಾಗಿ ನಿರ್ಮಿಸಿಕೊಳ್ಳುತ್ತೇವೆ. ಹಿಂದಿನ

ಕಾಲದಲ್ಲಿ ವ್ಯಕ್ತಿಯ ಮನಸ್ಸೇ ಪ್ರಯೋಗಶಾಲೆಯಾಗಿ ಪರಿಣಮಿಸುತ್ತಿತ್ತು. ಈಗ ನಾವು ಕೇಳಿದರೆ ನಂಬುವುದಕ್ಕೇ ಕಷ್ಟವಾಗುವಂಥ ವಿಷಯಗಳನ್ನೆಲ್ಲಾ ಹಿಂದಿನವರು ಹೇಳಿದ್ದಾರೆ. ಈ ದಾರಿಯಲ್ಲಿ ಹೋದರೆ ಹೀಗೆ ಆಗುತ್ತದೆ, ಈ ಶಕ್ತಿಗಳು ಬರುತ್ತವೆ—ಎನ್ನುವುದನ್ನೆಲ್ಲ ಹೇಳಿದ್ದಾರೆ.

ಆದರೆ ಈಗಲೂ ಕೂಡ ಹಿಂದಿನ ದೊಡ್ಡ ದೊಡ್ಡವರು ಬರೆದಿದ್ದಾರೆ ಎಂಬ ಗೌರವವಿದ್ದರೂ, ನಮ್ಮನ್ನು ಯಾರಾದರೂ ಬಲವಾಗಿ ಅಲುಗಿಸಿ ಕೇಳಿದರೆ ಸ್ವಲ್ಪ ಸಂದೇಹ ಹುಟ್ಟುತ್ತದೆ—'ಏನಪ್ಪಾ, ಇದನ್ನೆಲ್ಲಾ ಹೇಗೆ ನಂಬುವುದು ? ಸರಿಯಾದ ಪ್ರಯೋಗ, ಸಿದ್ಧಾಂತ, ಪ್ರತ್ಯಕ್ಷ ದರ್ಶನ—ಇವೆಲ್ಲಾ ಬೇಕಲ್ಲ'—ಎಂದು. ಹಿಂದಿನವರು ಹೇಳಿರುವ ಆ ವಿದ್ಯೆಯೂ ಕೂಡ ಇಲ್ಲಿಗೇ ಬರುತ್ತದೆ ಎಂದು ನಾವಿಲ್ಲಿ ವಿಶ್ವವಿದ್ಯಾನಿಲಯದಲ್ಲಿ ದೂರ ಕುಳಿತು ಹೇಳುವುದಕ್ಕಾಗುವುದಿಲ್ಲ. ನಾವು ಮನಶ್ಶಾಸ್ತ್ರದ ಪ್ರಯೋಗಶಾಲೆಯನ್ನು ಸೃಷ್ಟಿಮಾಡಿ ಇಲಿಗಳನ್ನು ತರಬಹುದು, ಮೊಲಗಳನ್ನು ತರಬಹುದು, ಸ್ವಲ್ಪ ಧೈರ್ಯ ಮಾಡಿದರೆ ಹಾವುಗಳನ್ನೂ ತರಬಹುದು. ಅವುಗಳ ಹೊಟ್ಟೆಗೆ ಆಹಾರ ಕೊಟ್ಟು ಏನು ಸಂತೋಷಪಡುತ್ತವೆ ಎಂದು ನೋಡಬಹುದು; ಹಸಿವು ಹುಟ್ಟಿಸಿ, ಏನು ದುಃಖ ಪಡುತ್ತವೆ ಎಂದು ನೋಡಬಹುದು. ಇದನ್ನೆಲ್ಲಾ ನಾವು ಪ್ರಯೋಗ ಮಾಡಬಹುದು. ಆದರೆ ಹಾಗೆಯೇ ಒಬ್ಬ ಯೋಗಿಯನ್ನು, ಇಲಿಯನ್ನು ಎತ್ತಿಕೊಂಡು ಬಂದ ಹಾಗೆ ತಂದು ಪ್ರಯೋಗ ಮಾಡುವುದಕ್ಕಾಗುತ್ತದೆಯೆ? ಒಬ್ಬ ಋಷಿ ಎಲ್ಲೋ ಕುಳಿತು ತಪಸ್ಸು ಮಾಡುತ್ತಿರುತ್ತಾನೆ—ಅವನನ್ನು ತರುವುದಕ್ಕಾಗುತ್ತದೆಯೆ ? ಆ ದಾರಿಯಲ್ಲಿ ಬಹಳ ಗೋಪ್ಯವಾಗಿ, ಗುಂಭವಾಗಿ ಮುಂದುವರಿಯುವವರಿದ್ದಾರೆ—ಅವರನ್ನು ತರುವುದಕ್ಕಾಗುತ್ತದೆಯೆ ? ಅಥವಾ ಆ ಮಹಾವಿದ್ಯೆಯನ್ನು ಅನಧಿಕಾರಿಗಳಿಗೆ ಹೇಳುವುದೇ ಪಾಷಂಡಿತನ ಎಂದು ಭಾವಿಸಿ, ಅದನ್ನು ರಕ್ಷಿಸಿಕೊಂಡಿರುತ್ತಾರೆ—ಅವರನ್ನೆಲ್ಲಾ ತರುವುದಕ್ಕಾದೀತೆ? ಮೊಲ ಇಲಿ ಹಾವುಗಳನ್ನೆಲ್ಲಾ ತಂದು ಪ್ರಯೋಗಶಾಲೆಯಲ್ಲಿಟ್ಟು ಪರೀಕ್ಷೆ ಮಾಡಿದಂತೆ ಅವರನ್ನು ತರುವುದಕ್ಕಾಗುತ್ತದೆಯೇ ? ಆಗುವುದಿಲ್ಲ. ಅಂದರೇನು—ಪ್ರಯೋಗಶಾಲೆಗಳನ್ನು ಈ ರೀತಿ ನಿರ್ಮಿಸಿರುವುದರ ಜೊತೆಗೆ ನಮ್ಮನ್ನು ನಾವೇ ಪ್ರಯೋಗಶಾಲೆಗಳನ್ನಾಗಿ ಮಾಡಿಕೊಳ್ಳಬೇಕು. ಇನ್ನೊಂದು—ತಮ್ಮನ್ನು ತಾವೇ ಪ್ರಯೋಗಶಾಲೆಗಳನ್ನಾಗಿ ಮಾಡಿಕೊಂಡು ಈ ವಿಚಾರದಲ್ಲಿ ಮುಂದುವರಿಯುವವರು ಎಲ್ಲಿದ್ದಾರೆ, ಏನು ಮಾಡುತ್ತಿದ್ದಾರೆ ಎಂಬುದನ್ನು ಅನ್ವೇಷಣೆ ಮಾಡಬೇಕು. ಅವರು 'ನಾವು ಇಲ್ಲಿದ್ದೇವೆ' ಎಂದು ಜಾಹಿರಾತು ಹಾಕುವುದಿಲ್ಲ; ಅದಕ್ಕೆ ವ್ಯತಿರಿಕ್ತವಾಗಿ ತಮ್ಮಲ್ಲೇನೂ ಇಲ್ಲ, ತಮಗೇನೂ ಗೊತ್ತಿಲ್ಲ—ಎಂದೇ ಹೇಳಿಕೊಳ್ಳುತ್ತಾರೆ.

ಆದುದರಿಂದ ಇನ್ನು ಮುಂದೆ ಈ ವಿಚಾರದಲ್ಲಿ ವಿಶ್ವವಿದ್ಯಾನಿಲಯದ ಆಯೋಗ ಕೊಡುವ ಹಣದಿಂದ ನಾವು ಕಟ್ಟುವ ಪ್ರಯೋಗಶಾಲೆಗಳು ಮಾತ್ರವೇ ಮುಖ್ಯವಲ್ಲ; ಈ ವಿಷಯದಲ್ಲಿ ಬಹಳ ಮುಂದುವರಿಯಬೇಕೆಂದು ಬಯಸುವ ವಿದ್ಯಾರ್ಥಿಗಳು ಬೇಕು. 'ನನ್ನ ಸ್ನೇಹಿತ ಮನಶ್ಶಾಸ್ತ್ರವನ್ನು ಅಧ್ಯಯನ ವಿಷಯವನ್ನಾಗಿ ಆರಿಸಿಕೊಂಡಿದ್ದಾನೆ; ಆದುದರಿಂದ ನಾನೂ ಮನಶ್ಶಾಸ್ತ್ರವನ್ನೇ ತೆಗೆದುಕೊಳ್ಳುತ್ತೇನೆ. ಅಪರಿಚಿತರ ಮಧ್ಯೆ ಹೋಗಿ ಕುಳಿತುಕೊಳ್ಳುವುದಕ್ಕಿಂತ ನನಗೆ ಪರಿಚಿತನಾಗಿರುವವನ ಜೊತೆಯಲ್ಲಿ ಕುಳಿತುಕೊಳ್ಳುವುದು ಲೇಸು'—ಎಂಬ ಭಾವನೆಯಿಂದ ಬರುವ ವಿದ್ಯಾರ್ಥಿ ಅಪ್ರಯೋಜಕ. ಮನಶ್ಶಾಸ್ತ್ರದಲ್ಲಿ ಸಂಶೋಧನೆ ಎಂಬುದಿದೆ. ಅದು ತುಂಬಾ ದೊಡ್ಡ ಕೆಲಸ, ತುಂಬಾ ಗಂಭೀರವಾದ ಕೆಲಸ, ತುಂಬಾ ಗೌರವದ ಕೆಲಸ; ತುಂಬಾ ಕ್ಲೇಶಕರವಾದ ಕೆಲಸ ಎಂದೂ ನಾನು ಹೇಳುತ್ತೇನೆ. ಏಕೆಂದರೆ ಇದೆಲ್ಲಾ ಸುಲಭವಾಗಿ ಆಗುವ ಕೆಲಸವಲ್ಲ. ಇಲಿಯೇನೊ ನೀವು ಸಿಗರೇಟು ಸೇದುತ್ತಾ ಕೆಲಸಮಾಡುತ್ತಿದ್ದರೂ ನಿರ್ದಾಕ್ಷಿಣ್ಯವಾಗಿ ಸುಮ್ಮನಿರುತ್ತದೆ. ಆದರೆ ದೊಡ್ಡವರ ಹತ್ತಿರ ಹೋದಾಗ ಅಲ್ಲೊಂದು ನಿಯಮವಿರುತ್ತದೆ, ಸಂಯಮವಿರುತ್ತದೆ. ಅದನ್ನೆಲ್ಲ ನಾವು ಸಂಬದಿದ್ದರೂ ಚಿಂತೆಯಿಲ್ಲ, ಅನುಸರಿಸಬೇಕು. ದೇವರು, ಮನುಷ್ಯ, ಜನ್ಮ—ಇದರಲ್ಲೆಲ್ಲಾ ನಮಗೆ ನಂಬಿಕೆ ಇಲ್ಲದೇ ಇರಬಹುದು—ಆದರೆ ಅದು ಅವನ ಪ್ರಯೋಗಶಾಲೆ. ಅದನ್ನು ಪ್ರವೇಶಿಸುವಾಗ ನಾವು ಅವನಿಗೆ ಧೈರ್ಯವಾಗಿ ಹೇಳಬಹುದು: 'ಇದರಲ್ಲೆಲ್ಲಾ ನನಗೆ ನಂಬಿಕೆಯಿಲ್ಲ; ಆದರೂ ನಿನ್ನ ಕಟ್ಟುಕಟ್ಟಳೆಗಳನ್ನೆಲ್ಲ ನಾನು ಅನುಸರಿಸುತ್ತೇನೆ. ಇದರಲ್ಲೇನಾದರೂ ತಿರುಳಿದ್ದರೆ ಗೊತ್ತಾಗುತ್ತದಲ್ಲ—ಆಗ ನಂಬಿಕೆ ಬರುತ್ತದೆ'. ಈ ತೆರನಾಗಿ ಅದನ್ನೇ ಒಂದು ಸಾಧನೆಯನ್ನಾಗಿ ಮಾಡಿ ಮುಂದುವರಿಯತಕ್ಕ ಚೇತನಗಳು ನಮ್ಮಲ್ಲಿ ಬಂದರೆ ಅವರು ಜಗತ್ತಿನ ಮನಶ್ಶಾಸ್ತ್ರಜ್ಞರಾಗುತ್ತಾರೆ, ಬರೀ ಭಾರತದ ಅಥವಾ ಮಹಾರಾಜಾ ಕಾಲೇಜಿನ ಮನಶ್ಶಾಸ್ತ್ರಜ್ಞರಾಗುವುದಿಲ್ಲ. ಜಗತ್ತೇ ಅವರ ಬಳಿಗೆ ಬರುವಂತಾಗುತ್ತದೆ.

ಮುಂದಿನ ಸಂಶೋಧನಾಂಗದ ವಿಚಾರದಲ್ಲಿ ನನಗೆ ಹೀಗೆ ತೋರುತ್ತದೆ: ಭರತಖಂಡದ ಸಂಸ್ಕೃತ ಸಾಹಿತ್ಯದಲ್ಲಿ, ಪ್ರಾಚೀನ ವೇದವೇದಾಂತಗಳು, ಪುರಾಣಗಳು—ಪುರಾಣಗಳಲ್ಲಿ ಇಲ್ಲದಿರುವುದೇ ಇಲ್ಲ; ಅದು ಕಾಡಿದ್ದ ಹಾಗೆ: ಅಲ್ಲಿಗೆ ಹುಲಿಷಿಕಾರಿ ಮಾಡುವವರು ಬರಬಹುದು, ಬೀಟೆ ತೇಗ ಮುಂತಾದ ಮರಗಳನ್ನು ಕತ್ತರಿಸಿ ಮನೆಗೆ ತರುವವರೂ ಬರಬಹುದು ಅಥವಾ ಜೇನು ಗೂಡನ್ನು ಹುಡುಕುವವರು ಬರಬಹುದು; ಹೀಗೆ ನೂರಾರು ಕೆಲಸಗಳನ್ನು ಮಾಡಬಹುದು—ನಮ್ಮ ತಂತ್ರಶಾಸ್ತ್ರಗಳು, ವೈಷ್ಣವಶಾಸ್ತ್ರಗಳು—ಇವುಗಳಲ್ಲಿ ಸಾವಿರಾರು ವರ್ಷ

ಗಳಿಂದಲೂ ಮುಂದಿನ ಸಂಶೋಧನೆಯ ವಿದ್ಯಾರ್ಥಿಗೆ ಆವಶ್ಯಕವಾಗುವ ಸಾಮಗ್ರಿ ವಿಪುಲವಾಗಿದೆ. ಸಾಮಾನ್ಯವಾಗಿ ಪಾಶ್ಚಾತ್ಯ ಮನಶ್ಶಾಸ್ತ್ರದ ಮೂಲ ತತ್ತ್ವಗಳನ್ನು ತಿಳಿಯುವುದು; ಅವುಗಳನ್ನು ಪ್ರಸಾರ ಮಾಡುವುದು—ಇಷ್ಟರಲ್ಲೇ ಪರ್ಯವಸಾನ ವಾಗದೆ, ದೊಡ್ಡ ದೊಡ್ಡ ವಿಶ್ವವಿದ್ಯಾನಿಲಯಗಳ ದೊಡ್ಡ ದೊಡ್ಡ ಪ್ರಾಧ್ಯಾಪಕರು ಮನಶ್ಶಾಸ್ತ್ರದಲ್ಲಿ ಆಸಕ್ತರಾಗಿದ್ದಾರೆ. ಅದನ್ನೆಲ್ಲಾ ಓದುತ್ತಾ ಇದ್ದರೆ ನಿಮಗೆ 'ಸ್ಪುಟ್ನಿಕ್'ನಲ್ಲಿ ಕುಳಿತು ಚಂದ್ರಮಂಡಲಕ್ಕೆ ಹೋಗುವಾಗ ಆಗುವಂಥ—ಬದುಕಿದ್ದರೆ ಆಗುವಂಥ—ಅನುಭವಗಳಾಗುತ್ತವೆ. ಅಂಥ ಪ್ರಯೋಗಗಳನ್ನೆಲ್ಲ ನಡೆಸಬಹುದು. ಮನುಷ್ಯನ ಮನಸ್ಸಿನ ಶಕ್ತಿಯೇನು, ಅದರ ಎಲ್ಲೆಯೇನು, ಇತಿಮಿತಿಯೇನು, ವ್ಯಾಪ್ತಿಯೇನು, ಅದರ ಔನ್ನತ್ಯವೇನು, ಆಳವೇನು—ಎಂಬುದನ್ನೆಲ್ಲ ಹುಡುಕುವ ಕೆಲಸಗಳನ್ನು ಮಾಡುತ್ತಿದ್ದಾರೆ. ಅದು ಅತ್ಯಂತ ಆವಶ್ಯಕವಾದುದು.

ಸಾವಿರಾರು ವರ್ಷಗಳಿಂದ ನಮ್ಮಲ್ಲಿ ನಡೆದುಕೊಂಡು ಬರುತ್ತಿರುವ ಈ ವಿದ್ಯೆ ಪಾಶ್ಚಾತ್ಯರ ಆಧುನಿಕ ಮನಶ್ಶಾಸ್ತ್ರಕ್ಕೆ ಸರ್ವಸಮನಾಗಿದೆಯೆಂದು ನಾನು ಹೇಳು ವುದಿಲ್ಲ. ಪಾಶ್ಚಾತ್ಯರದು ಸ್ವಲ್ಪ ಬಹಿರ್ಮುಖವಾದ ರೀತಿಯಲ್ಲೇ ಪ್ರಯೋಗಗಳು ಮತ್ತು ಆವಿಷ್ಕಾರಗಳ ಮೂಲಕ ನಡೆದುಕೊಂಡು ಹೋಗಿದೆ. ಆದರೆ ನಮ್ಮದೂ ವೈಜ್ಞಾನಿಕ ರೀತಿಯೇ. ವೈಜ್ಞಾನಿಕ ಎಂದರೆ—ಈ ದಾರಿಯಲ್ಲಿ ಈ ರೀತಿ ಹೋದರೆ ಈ ಫಲ ದೊರಕುತ್ತದೆ, ಈ ಕಾರ್ಯ ಕಾರಣ ಸಂಬಂಧವಿದೆ ಎಂಬುದನ್ನು ಹೇಳಿ ದ್ದಾರೆ. ಎಲ್ಲಿ ಕಾರ್ಯಕಾರಣ ಸಂಬಂಧ ಇಲ್ಲವೋ ಅಲ್ಲಿ ಇಲ್ಲ ಎಂದೂ ಹೇಳುತ್ತಾರೆ. ಇದು ಕಾರ್ಯ ಕಾರಣ ಸಂಬಂಧಕ್ಕೆ ಸಂಬಂಧ ಪಟ್ಟುದಲ್ಲ ಎನ್ನುವ ಕಾರಣವನ್ನೂ ಹೇಳುತ್ತಾರೆ. ಈ ದಾರಿಯಲ್ಲಿ ನಮ್ಮದು ವಿಶೇಷವಾಗಿ ಬೆಳೆದುಕೊಂಡು ಹೋಯಿತು. ಆದರೆ ಅಂತರ್ಮುಖಿಯಾದ್ದುದರಿಂದ ಅವೈಜ್ಞಾನಿಕ ಎಂದು ಹೇಳುವುದಕ್ಕಾಗುವುದಿಲ್ಲ. ಒಬ್ಬ ವ್ಯಕ್ತಿ ವಿಮಾನದಲ್ಲಿ ಕುಳಿತು ಹತ್ತು ನಿಮಿಷ ಎಲ್ಲಿಯೋ ಹೋಗುತ್ತಾನೆ; 'ಯಾರೂ ಹತ್ತಿರ ಬರಕೂಡದು, ದೂರ ಇರಬೇಕು' ಎಂದು ಹೇಳಿ ಒಬ್ಬನೇ ಹೋಗಿ ಬರುತ್ತಾನೆ. ಈಗ ನಾವು 'ಹೌದಪ್ಪಾ, ಏನೋ ಹೋಗಿಬಿಟ್ಟು ಬಂದ ಹಾಗಿತ್ತು' ಎನ್ನುತ್ತೇವೆ. ಹಾಗಲ್ಲದೆ 'ನೀನೂ ಬಾ, ನಿನ್ನನ್ನೂ ಕೂರಿಸಿಕೊಂಡು ಹೋಗುತ್ತೇನೆ' ಎಂದು ಕರೆದೊಯ್ದಾಗ ಪ್ರತ್ಯಕ್ಷವಾದ ಅನುಭವ ದೊರಕುತ್ತದೆ. ಹಾಗೆಯೇ ಒಬ್ಬ 'ನನಗೆ ಲಘಿಮಾಶಕ್ತಿ ಬಂದಿದೆ, ನನಗೆ ಗರಿಮಾಶಕ್ತಿ ಬಂದಿದೆ, ನಾನು ತೂಕದ ಹಲಗೆಯ ಮೇಲೆ ನಿಂತರೆ ಅದು ನೂರೋ ನೂರೈವತ್ತೋ ಪೌಂಡು ತೋರಿಸುತ್ತದೆ' ಎನ್ನುತ್ತಾನೆ. ವಾಸ್ತವವಾಗಿ ನಾಲ್ಕು ಜನ ಪ್ರಯತ್ನಿಸಿದರೂ ಅವನನ್ನು ಎತ್ತುವುದಕ್ಕಾಗುವುದಿಲ್ಲ. ಆಗ ನಮಗೆನಿಸುತ್ತದೆ: ಸಾಮಾನ್ಯವಾಗಿ

ಇಬ್ಬರು ಎತ್ತಿಬಿಡಬಹುದು. ಈಗ ಎಷ್ಟು ಜನ ಬಂದರೂ ಎತ್ತುವುದಕ್ಕಾಗುವುದಿಲ್ಲ—ಎಂದು. ಆದರೆ ವಿಮಾನ ಮಾಡಿದವನು 'ಇಲ್ಲಿ ಬಾ, ನೀನೂ ನಡೆಸು' ಎಂದು ತೋರಿಸುವ ಹಾಗೆ ಲಘಿಮಾ ಅಥವಾ ಗರಿಮಾ ಶಕ್ತಿಯನ್ನು ಪಡೆದವನು ಮತ್ತೊಬ್ಬನಿಗೆ ತೋರಿಸುವುದಕ್ಕಾಗುವುದಿಲ್ಲ. ಅವನು ಹೇಳಿದ್ದನ್ನೆಲ್ಲ ಮಾಡುವುದಕ್ಕೆ ನೀವು ಸಿದ್ಧರಾಗಿಲ್ಲ. ಅವನು ಏನೇನನ್ನೋ ಬಿಡು ಎಂದು ಹೇಳುತ್ತಾನೆ. ನಿಮಗೆ 'ಊಟ ಬಿಡು' ಅನ್ನುವುದಿರಲಿ, 'ಸಿಗರೇಟು ಬಿಡು' ಎಂದರೆ 'ಪ್ರಾಣಬಿಡು' ಎಂದ ಹಾಗಾಗುತ್ತದೆ. ಆದರೆ ಅವನು 'ಊಟ ಬಿಡು, ಅದು ಬಿಡು, ಇದು ಬಿಡು' ಎಂದರೆ ಆ ಪ್ರಯೋಗಗಳಿಗೆ ಒಳಗಾಗುವುದಕ್ಕೆ ನೀವು ಸಿದ್ಧರಾಗಿಲ್ಲ. ಆಗ ನಿಮಗೆ 'ಎಂಥದೋ ಏನೋ ಮಾಡಿಕೊಂಡಿದ್ದಾನೆ. ಇದೆಲ್ಲ ಸುಳ್ಳು ಎಂತಲೇ ಕಾಣುತ್ತದೆ' ಎಂಬ ಭಾವನೆಯಿಂದ ಆ ವಿಷಯಕ್ಕೆ ತಿರಸ್ಕಾರವೇ ಬರುತ್ತದೆ. ನಿಜವಾಗಿ ವೈಜ್ಞಾನಿಕ ದೃಷ್ಟಿ ಇರುವ ವಿದ್ಯಾರ್ಥಿ ಅದನ್ನು ತೆರೆದ ಮನಸ್ಸಿನಿಂದ ನೋಡುತ್ತಾನೆ. ತಾನ ದನ್ನು ಮಾಡುವುದಕ್ಕಾಗುವುದಿಲ್ಲ ಎಂದ ಮಾತ್ರಕ್ಕೆ ಅದನ್ನು ಅಲಕ್ಷಿಸುವುದಿಲ್ಲ. ಅದನ್ನು ಪಾಶ್ಚಾತ್ಯ ವೈಜ್ಞಾನಿಕ ರೀತಿಯಿಂದ ತೋರಿಸುವುದಕ್ಕಾಗುವುದಿಲ್ಲ. ಆದರೆ ಯಾವುದೋ ಒಂದು ವಿಧಾನವನ್ನನುಸರಿಸಿದರೆ ಅದು ಸಾಧ್ಯ. ಏಕೆಂದರೆ ಒಬ್ಬನಿಗೆ ಸಾಧ್ಯವಾದದ್ದು ಇನ್ನೊಬ್ಬನಿಗೂ ಸಾಧ್ಯವಾಗಲೇ ಬೇಕು. ಆದುದರಿಂದ ಅವನು ಹೇಳುತ್ತಾನೆ 'ನೀನು ಈ ಕ್ರಮದಲ್ಲಿ ಹೋಗುವುದಾದರೆ ನಿನಗೆ ಸಿದ್ಧಿಯಾಗುತ್ತದೆ' ಎಂದು. ಹಿಂದೆ ಪತ್ರಿಕೆಗಳಲ್ಲೆಲ್ಲ ಬಂತು: ತುಂಬಾ ಗಂಭೀರೆಯಾದ, ವೃದ್ಧೆಯಾದ ಒಬ್ಬ ಮಹಿಳೆ ಏನೋ ಒಂದಿಷ್ಟು ಕುಂಕುಮವನ್ನು ಕೈಗೆ ಹಾಕಿದರೆ ಯಾವುದೋ ವಿಗ್ರಹ ಬರುತ್ತದೆ, ಇನ್ನೇನೋ ಆಗುತ್ತದೆ—ಎಂಬ ವಾರ್ತೆ. ಅದನ್ನು ಯಾವಾಗಲೂ ನಂಬದೇ ಇರತಕ್ಕ ವ್ಯಕ್ತಿಯೂಕೂಡ ಹೋಗಿ ಕೈಯೊಡ್ಡಿದರೆ—ಪಾಪ, ಸಂಭಾವಿತೆಯಾದ ಆ ಮಹಿಳೆ ಯಕ್ಷಿಣಿ ಮಾಡಿ ದುಡ್ಡು ತೆಗೆದುಕೊಳ್ಳುವುದಕ್ಕೆ ಬಂದವರಲ್ಲ. ಏನೋ ಹೀಗಾಗುತ್ತದೆ, ಏಕೆ ಆಗುತ್ತದೆ ಎನ್ನುವುದು ಕೂಡ ಅವರಿಗೆ ಗೊತ್ತಿಲ್ಲ—ಒಂದು ವಿಗ್ರಹ ಬಂತು. ಇದು ಅಲ್ಪವಿಷಯ. ಆ ವಿಗ್ರಹಕ್ಕೆ ನಾಲ್ಕು ರೂಪಾಯಿ ಬೆಲೆಯಿರಬಹುದು. ಅದೇನೂ ದೊಡ್ಡದಲ್ಲ. ಆದರೆ ಒಬ್ಬ ಪ್ರಬುದ್ಧನಾದ ವ್ಯಕ್ತಿಗೆ ಇದು ಒಂದು ಅದ್ಭುತಲೋಕಕ್ಕೆ ತೆರೆದ ಒಂದು ಚಿಕ್ಕ ಗವಾಕ್ಷವಾಗಿ ಪರಿಣಮಿಸುತ್ತದೆ.

ಮನಶ್ಶಾಸ್ತ್ರಜ್ಞನಾಗುವವನು ಇದನ್ನೆಲ್ಲ ವೈಜ್ಞಾನಿಕವಾಗಿ ಪರೀಕ್ಷೆಮಾಡದೆ ಸ್ವೀಕರಿಸಬೇಕೆಂದಲ್ಲ. ಬೇರೆ ಬೇರೆ ವೈಜ್ಞಾನಿಕ ಮಾರ್ಗಗಳಿವೆ. ಅವುಗಳಲ್ಲಿಯೂ ಹೋಗುವುದಕ್ಕೆ ಸಮರ್ಥರಾಗಬೇಕು. ಒಂದು ಕಡೆ, ಪಾಶ್ಚಾತ್ಯರು ತೋರಿಸಿ

ಕೊಟ್ಟಿರುವ ದಾರಿಯಲ್ಲಿ ಪ್ರಯೋಗಗಳನ್ನು ಮಾಡಬೇಕು. ಇದೂ ತಕ್ಕಮಟ್ಟಿಗೆ ನಮ್ಮಲ್ಲಿ ನಡೆಯುತ್ತಿದೆ; ಸಮರ್ಥರು ಇದನ್ನು ಕೈಗೊಂಡಿದ್ದಾರೆ. ಆದರೆ ನಾನು ಹೇಳಿದ ಭಾರತೀಯ ಮನಶ್ಶಾಸ್ತ್ರದ ಗಣಿಗಳಲ್ಲಿ ಸಾವಿರಾರು ವರ್ಷಗಳಿಂದಲೂ ಅದ್ಭುತವಾದ ಶಕ್ತಿ ಅಡಗಿಕೊಂಡಿದೆ. ಹಾಗೆಂದು ಯಾರಾದರೂ ಹೇಳಿದರೆ ನಾವು ಹಾಸ್ಯಮಾಡಬಹುದು—'ರೇಡಿಯಂ' ಅಥವಾ 'ಥೋರಿಯಂ'ನಲ್ಲಿ ಶಕ್ತಿಯಿದೆ ಯೆಂದು ಯಾರಾದರೂ ಕೆಲವು ವರ್ಷಗಳ ಹಿಂದೆ ಹೇಳಿದ್ದರೆ ಹೇಗೆ ಹಾಸ್ಯಮಾಡು ತ್ತಿದ್ದೆವೋ ಹಾಗೆ. ಅಣುವನ್ನೊಡೆದರೆ ಶಕ್ತಿ ಸ್ಫೋಟವಾಗುತ್ತದೆ ಎಂಬುದು ನಮಗೀಗ ಎಷ್ಟರಮಟ್ಟಿಗೆ ಗೊತ್ತಿದೆ ಎಂದರೆ 'ಅಯ್ಯೋ, ಇದು ನಾನು ಹುಟ್ಟುವುದಕ್ಕಿಂತ ಎಷ್ಟೋ ಮುನ್ನವೇ ಗೊತ್ತಿತ್ತು' ಎನ್ನುವಂತಾಗಿದೆ. ಆದರೆ ಅದು ಹಾಗೆ ತಿಳಿದು ಬರುವವರೆಗೂ ಅಗೋಚರವಾಗಿಯೇ ಇತ್ತು. ಭಾರತೀಯ ಮನಶ್ಶಾಸ್ತ್ರದ ಅದ್ಭುತವೂ ಹೀಗೆಯೇ. ಇದನ್ನು ಸಂಶೋಧಿಸುವುದು ಅಷ್ಟೊಂದು ಲಘುವಾದ ಕಾರ್ಯವಲ್ಲ.

ನಾನು ವಿದ್ಯಾರ್ಥಿಯಾಗಿದ್ದಾಗ ಎಂಥವರು ಮನಶ್ಶಾಸ್ತ್ರ ತೆಗೆದುಕೊಳ್ಳು ತ್ತಿದ್ದರೋ ಅಂಥವರು ಬಂದರೆ ಎಂದೆಂದಿಗೂ ಮುಂದುವರಿಯುವುದು ಸಾಧ್ಯವೇ ಇಲ್ಲ. ಈ ಆಲಸ್ಯ, ಡಿಗ್ರಿ ಸಿಕ್ಕಿದರೆ ಸಾಕು ಎನ್ನುವ ಈ ಮನೋಭಾವ ಇರುವ ವ್ಯಕ್ತಿಗಳಿಂದ ಯಾವತ್ತೂ ಸಾಧ್ಯವಿಲ್ಲ. ಈ ವಿಚಾರದಲ್ಲಿ ಮುಂದೆ ಹೋಗುವವರಿಗೆ ಆಳವಾದ, ಶಾಸ್ತ್ರೀಯವಾದ, ತತ್ತ್ವಶಾಸ್ತ್ರೀಯವಾದ ಮತ್ತು ಮನಶ್ಶಾಸ್ತ್ರೀಯವೂ ಆದ ಸಂಸ್ಕೃತಜ್ಞಾನ ಅತ್ಯಂತ ಆವಶ್ಯಕ. ಅದು ಮೊದಲನೇ ಮೆಟ್ಟಲು. ಅದಿಲ್ಲದೇ ಹೋದರೆ ನೀವು ಏನನ್ನು ಗ್ರಹಿಸುವುದಕ್ಕೂ ಸಾಧ್ಯವಿಲ್ಲ. ಹಾಗಾದರೆ ಇದು ಅಸಾಧ್ಯವೆಂಬ ಭಾವನೆ ಕೆಲವರ ಮನಸ್ಸಿನಲ್ಲಿ ಹುಟ್ಟಬಹುದು. ಹಾಗೇನಿಲ್ಲ, ಇದರಲ್ಲಿ ಎಲ್ಲರಿಗೂ ಪ್ರವೇಶವಿರುವುದಿಲ್ಲ, ಹೌದು. ನೂರು ಜನ ವಿದ್ಯಾರ್ಥಿಗಳಲ್ಲಿ ಒಬ್ಬನಿಗೆ ಇದು ಸಾಧ್ಯ. ಆದರೆ ನೂರಲ್ಲ, ಸಾವಿರದಲ್ಲಿ ಒಬ್ಬನಿಗೆ ಬಂತು ಎಂದರೂ ಯಥೇಚ್ಛ ವಾಗಿ ಬಂತೆಂದೇ ನನ್ನ ಭಾವನೆ. ಅಂತೂ ಈ ದಾರಿಯಲ್ಲೇ ಹೋಗಬೇಕು, ಮುಂದುವರಿಯಬೇಕು. ಅವಸರವಸರವಾಗಿ ಹೋದರೆ ಆಗುವುದಿಲ್ಲ. ಬಹುಶಃ ನಿಮ್ಮ ಜೀವಮಾನದಲ್ಲಿ ಎಲ್ಲಿಯೋ ಎರಡಂಗುಲ ದಾರಿಯನ್ನು ಸವೆಸಬಹುದು. ಆದರೂ ನೀವು ಎರಡಂಗುಲ ನಡೆದು, ಮುಂದೆ ಬರುವವನು ನಾಲ್ಕು ಅಂಗುಲ ನಡೆದು ಒಟ್ಟಿನಲ್ಲಿ ದಾರಿಯನ್ನು ಮುಗಿಸಬಹುದು, ಪ್ರವೇಶಿಸಿ. ಆದರೆ ಇದು ಅಂತರ್ಮುಖ ವಿಷಯವಾದುದರಿಂದ ನಾನು ಧೈರ್ಯವಾಗಿ ಹೇಳಲಾರೆ. ವೈಜ್ಞಾನಿಕ ಪ್ರಪಂಚದಲ್ಲಿ ಅರ್ಹ, ಅನರ್ಹ, ಅನಧಿಕಾರಿ ಎಲ್ಲರಿಗೂ ಆಗುವಂಥ ಯಂತ್ರಗಳನ್ನು

ಸೃಷ್ಟಿಸಿದ್ದೇವೆ. ದುಡ್ಡಿದ್ದ ಮಾತ್ರಕ್ಕೆ ಯಾರು ಬೇಕಾದರೂ ಹೋಗಿ, ಒಂದು ಕಾರನ್ನು ಕೊಂಡು 'ಡ್ರೈವ್' ಮಾಡಬಹುದು. ಹಾಗೆಯೇ—ಅದೇ ಮಟ್ಟದಲ್ಲಲ್ಲ—ಈ ಜ್ಞಾನ, ಈ ಶಕ್ತಿ ಹೆಚ್ಚು ಜನರಿಗೆ ಬರುವಂತೆ ಮಾಡುವುದು ಸಾಧ್ಯವೋ ಏನೊ.

ಅಂದರೇನು—ನಮ್ಮ ಭಾರತೀಯ ಮನಶ್ಶಾಸ್ತ್ರದ ಅಧ್ಯಯನ ಒಂದು, ಪಾಶ್ಚಾತ್ಯ ಶಾಸ್ತ್ರದ ಅಧ್ಯಯನ ಒಂದು : ಈ ಎರಡು ದಾರಿಗಳಲ್ಲಿ ಮುಂದುವರಿಯಬೇಕಾಗುತ್ತದೆ ; ಹಿಂದೆ ಕಂಡುಹಿಡಿದುದಷ್ಟನ್ನೇ ನೋಡಿಕೊಂಡು ಬರೆದುಕೊಂಡು ಹೋಗುವುದು ಮಾತ್ರವೇ ಅಲ್ಲ. ಹೀಗೆ ಪ್ರಯತ್ನಪಡುವ ಸಾವಿರ ಜನರಲ್ಲಿ ಯಾವನೋ ಒಬ್ಬ—ಬಹುಶಃ ಮನಃಶ್ಶಾಸ್ತ್ರದ ಅವತಾರಪುರುಷ ಎಂದಿಟ್ಟುಕೊಳ್ಳೋಣ ; ಏಕೆಂದರೆ, ಅವತಾರಪುರುಷ ಅಥವಾ ವಿಭೂತಿಪುರುಷ ಎಷ್ಟೋ ಶತಮಾನಗಳಿಗೊಂದು ಸಲ ಬರುವವನು—ಬಂದಾಗ ಇನ್ನೂ ಮುಂದೆ ಹೋಗುತ್ತಾನೆ. ಇದುವರೆಗಿನ ಪ್ರಾಚ್ಯ, ಇದುವರೆಗಿನ ಪಾಶ್ಚಾತ್ಯ—ಎರಡನ್ನೂ ಅಳವಡಿಸಿಕೊಂಡು ಇನ್ನು ಯಾವುದೋ ಹೊಸ ದಿಕ್ಕಿನಲ್ಲಿ ನಮ್ಮನ್ನು, ಜನತೆಯನ್ನು ಕೊಂಡೊಯ್ಯುತ್ತಾನೆ. ಅಂತೂ ಇಷ್ಟು ದೊಡ್ಡ ಅನ್ವೇಷಣೆಯ ಕ್ಷೇತ್ರ, ಪ್ರಯೋಗಶಾಲೆ ನಿಮಗಾಗಿ, ಸಾಹಸಜ್ಞರಿಗಾಗಿ ಕಾದಿದೆ. ಅದನ್ನು ಸ್ವಲ್ಪ ಜನರಾದರೂ ಪ್ರವೇಶಿಸಬೇಕು. ಇದು ಎಲ್ಲಕ್ಕಿಂತಲೂ ಆವಶ್ಯಕವಾಗಿ—ಹೆಚ್ಚಾಗಿ ಎಂದು ನಾನು ಹೇಳುವುದಿಲ್ಲ—ಬೋಧನಾಂಗದ ಕೆಲಸ. ಇದರ ಜೊತೆಗೆ ಸಂಶೋಧನಾಂಗ. ಇನ್ನೊಂದು ಅಂಗ—ಪ್ರಸಾರಾಂಗ. ಅದನ್ನು ಎಲ್ಲ ಶಾಖೆಗಳಲ್ಲಿಯೂ ವಿಶ್ವವಿದ್ಯಾನಿಲಯ ಕೈಗೊಳ್ಳುತ್ತಿದೆ. ಈ ಮನಶ್ಶಾಸ್ತ್ರದಲ್ಲಿ ನೀವೆಲ್ಲರೂ ಊಹಿಸಿರುವುದಕ್ಕಿಂತ ಹೆಚ್ಚಾಗಿ ಪ್ರಯತ್ನಗಳನ್ನು ಕೈಗೊಳ್ಳಬೇಕೆಂದು ನನ್ನ ಆಸೆ. ಇದನ್ನು ನಾನು ಲಘುವಾಗಿ ಹೇಳುತ್ತಿಲ್ಲ.

ನಮ್ಮ ಅನೇಕ ಕೇಡು, ಕಷ್ಟಗಳಿಗೆಲ್ಲ ನಮ್ಮ ಮನಸ್ಸಿನ ಅನುಕೂಲ ಮತ್ತು ಪ್ರತಿಕೂಲ ವ್ಯಾಪಾರಗಳೇ ಕಾರಣ. ಒಬ್ಬರು ಬಂದು Socialist pattern of society ಇರಲಿ, ಸಹಕಾರ ಪದ್ಧತಿಯಲ್ಲೇ ವ್ಯವಸಾಯ ಮಾಡೋಣ—ಎನ್ನುತ್ತಾರೆ. ಅದನ್ನು ಕೇಳಿ, ಭೂಮಿ ಇಲ್ಲದ ನೂರಾರು ಜನ ಚಪ್ಪಾಳೆ ತಟ್ಟುತ್ತಾರೆ. ಇದಕ್ಕೆ ಕಾರಣ ರಾಜಕೀಯವಲ್ಲ, ಮನಸ್ಸು. ಅವರಿಗೇ ಬೇಗಬೇಗ ಒಂದಿಷ್ಟು ಜಮೀನು ಕೊಟ್ಟು ಬಿಡಿ—ಅವರೇ ಅದಕ್ಕೆ ವಿರೋಧವಾಗಿ ಕೈ ಎತ್ತುತ್ತಾರೆ! ಎಂದರೇನು—ಇದಕ್ಕೆಲ್ಲ ರಾಜಕೀಯ ಕಾರಣವಿದೆ, ಆರ್ಥಿಕ ಕಾರಣವಿದೆ ಎಂದು ನಾವು ತಿಳಿದುಕೊಂಡಿರುತ್ತೇವೆ. ಆದರೆ ವಾಸ್ತವವಾಗಿ ಇದಕ್ಕೆ ಮನಸ್ಸೇ ಮೂಲಕಾರಣ. ಎಲ್ಲರನ್ನೂ ನಮ್ಮಂತೆಯೇ ಎಂದು ನೋಡಬೇಕು, ಭೂಮಿಯೆಲ್ಲಾ ಭಗವಂತನದು, ಆದುದರಿಂದ

ಎಲ್ಲರೂ ಒಟ್ಟಾಗಿರಬೇಕು—ಎಂದು ಹೇಳಿದಾಗ ಒಂದು ಕ್ಷಣದಲ್ಲಿ ಮನುಷ್ಯ ಮಗುವಾಗಿಬಿಟ್ಟು 'ಆಃ! ಇದೇ ಚೆನ್ನಾಗಿದೆ' ಎನ್ನುತ್ತಾನೆ. ಆದರೆ ಎಷ್ಟು ಕಾಲ ಮಗುವಾಗಿರುವುದಕ್ಕೆ ಸಾಧ್ಯ? ಸ್ವಲ್ಪ ಹೊತ್ತಿನಲ್ಲೇ 'ನಾನು, ನನ್ನದು' ಎಂಬ ಭಾವನೆ ಬರುತ್ತದೆ. ಇದ್ದಕ್ಕಿದ್ದ ಹಾಗೆ 'ಛೆ, ಛೆ—ಇದೆಲ್ಲಾದರೂ ಉಂಟೆ? ಇದು ಆಗುವುದಿಲ್ಲ' ಎನಿಸುತ್ತದೆ. ಮನಶ್ಶಾಸ್ತ್ರಜ್ಞ, ಮನಶ್ಶಾಸ್ತ್ರದ ವಿದ್ಯಾರ್ಥಿ ಇದನ್ನು ಸುಲಭವಾದ ಭಾಷೆಯಲ್ಲಿ—ಆಯಾ ದೇಶಭಾಷೆಯಲ್ಲಿ—ಸಣ್ಣಸಣ್ಣ ಪುಸ್ತಕಗಳ ಮೂಲಕ, ಉಪನ್ಯಾಸಗಳ ಮೂಲಕ—ನೂರಾರು ವಿಷಯಗಳಿವೆ, ಅವುಗಳನ್ನೆಲ್ಲಾ—ತಿಳಿಸುತಲ್ತ್ತ ಹೋಗಬೇಕು. ಅದೇ ಪ್ರಸಾರಾಂಗ. ಅದನ್ನು ನಮ್ಮ ವಿಶ್ವವಿದ್ಯಾನಿಲಯದ ಉಪಾಧ್ಯಾಯರು ನಾನಾ ಶಾಖೆಗಳಲ್ಲಿ ಕೈಗೊಂಡಿದ್ದಾರೆ, ಮಾಡುತ್ತಿದ್ದಾರೆ. ಅದು ಎಲ್ಲರ ಶ್ಲಾಘನೆಗೂ ಪಾತ್ರವಾಗಿದೆ. ವಿಶ್ವವಿದ್ಯಾನಿಲಯದ ಅಧ್ಯಾಪಕವರ್ಗಕ್ಕೆ ನಾನು ವೈಯಕ್ತಿಕವಾಗಿ ಅಲ್ಲದಿದ್ದರೂ ಸಾಮೂಹಿಕವಾಗಿ ಅತ್ಯಂತ ಕೃತಜ್ಞನಾಗಿದ್ದೇನೆ. ಏಕೆಂದರೆ ನಮ್ಮ ವಿಶ್ವವಿದ್ಯಾನಿಲಯ ಪ್ರಪಂಚದ ಇನ್ನಾವ ವಿಶ್ವವಿದ್ಯಾನಿಲಯವೂ ಮಾಡಿಲ್ಲದ ರೀತಿಯಲ್ಲಿ ಈ ಕೆಲಸವನ್ನು ಕೈಗೊಂಡಿದೆ. ವಿದ್ಯಾರ್ಥಿಗಳ ಮುಂದೆಯೂ ನಾನು ಮತ್ತೊಮ್ಮೆ ಈ ಪ್ರಸಾರದ ದೃಷ್ಟಿಯನ್ನು ಇಡುತ್ತಿದ್ದೇನೆ. ಮುಂದೆ ಈ ವಿಷಯಗಳನ್ನೆಲ್ಲಾ ಯಾರೋ ಇಬ್ಬರು ಮೂವರು ರಾಜಕೀಯ ವ್ಯಕ್ತಿಗಳು ತಮ್ಮಲ್ಲಿಟ್ಟುಕೊಂಡು ಬೆಂಗಳೂರಿನಲ್ಲಿಯೋ, ಇಲ್ಲಿಯೋ ಉಪನ್ಯಾಸ ಮಾಡಿಬಿಟ್ಟರೆ ಆಗಲಿಲ್ಲ. ಈ ಭಾವನೆಗಳು ಕ್ರಮೇಣವಾಗಿ ಹಳ್ಳಿಯ ಜನರಲ್ಲಿ—ಎಲ್ಲ ಜನರಲ್ಲೂ—ಪ್ರವೇಶಿಸಬೇಕು.

ಎಲ್ಲ ಪರಿವರ್ತನೆಗಳಿಗೂ ಮೊದಲು ಮನಃಪರಿವರ್ತನೆಯಾದರೆ ಉಳಿದುದೆಲ್ಲ ಸರಸರ ಆಗಿಬಿಡುತ್ತದೆ. ಇದು ಎಷ್ಟರಮಟ್ಟಿಗೆ ಎಂದರೆ, ಭಾರಿ ಸಭೆಗಳಲ್ಲಿ ಭಯಂಕರವಾದ ಭಿನ್ನಾಭಿಪ್ರಾಯ ಬರುವ ಸಂದರ್ಭದಲ್ಲಿ ಒಂದು ಕಾಫಿ ಕೊಡಿಸಿಬಿಟ್ಟರೆ ಅಭಿಪ್ರಾಯಗಳ ಏಕತ್ವ ಉಂಟಾಗುವ ಸಂಭವವುಂಟು. ಹೀಗೆ ಮನಸ್ಸಿನ ಪರಿವರ್ತನೆ ಅತ್ಯಂತ ಆವಶ್ಯಕ. ದಿನಬೆಳಗಾದರೆ ಪತ್ರಿಕೆ ತೆಗೆದು ನೋಡಿದಾಗ ಈ ಪ್ರಪಂಚದಷ್ಟು ಹೊಲಸು ಪ್ರಪಂಚ ಮತ್ತೊಂದಿಲ್ಲವೋ ಎನಿಸುತ್ತದೆ. ಆದರೆ ಇದಕ್ಕಿಂತ ಉತ್ತಮವಾದ ಪ್ರಪಂಚ ಬೇರೆ ಇದೆ—ಪತ್ರಿಕೆಯನ್ನು ಬಿಟ್ಟುನೋಡಿದರೆ. ಪ್ರತಿನಿತ್ಯವೂ ಆತ್ಮಹತ್ಯೆ, ಕೊಲೆ, ಪ್ರಣಯ ಸಂಬಂಧದಲ್ಲಿ ಖೂನಿ, ಜಾತ್ರೆಗೆ ಹೋಗಿದ್ದ ವ್ಯಕ್ತಿ ಶ್ರೀಮನ್ನಾರಾಯಣನಿಗೆ ನಮಸ್ಕಾರ ಮಾಡುತ್ತಿರುವಾಗ ಚೋರನಾರಾಯಣ ಜೇಬಿನಿಂದ ದುಡ್ಡು ಹಾರಿಸುವುದು, ಜಗಳ—ಇದನ್ನೆಲ್ಲ ಪತ್ರಿಕೆ ಜೋಡಿಸಿ ತಂದು ಒಟ್ಟುಮಾಡಿರುತ್ತದೆ. ಆಪಾದಿತರನ್ನೆಲ್ಲ ನೀವು ಜೈಲಿನಲ್ಲಿ ಸಂಧಿಸಿದಾಗ, ಅವರಲ್ಲಿ

ಒಬ್ಬೊಬ್ಬರೂ ಸಂಭಾವಿತರೆ—ಯಾವುದೋ ಒಂದು ಕ್ಷಣಿಕವಾದ ಆವೇಶಕ್ಕೆ ಒಳಗಾಗಿ ಇಲ್ಲಿಗೆ ಬಂದು ಜೀವಮಾನಪರ್ಯಂತ ಇಲ್ಲಿ ಕೊಳೆಯುತ್ತಿರುತ್ತಾರೆ. ನಮ್ಮ ಭಾವಗಳು ತೀವ್ರವಾದಾಗ ಅವುಗಳನ್ನು ಸ್ವಲ್ಪ ಸಂಯಮ ಮಾಡಿಕೊಳ್ಳುವ ಶಕ್ತಿಯನ್ನು ನೀವು ನಾಲ್ಕು ಜನಕ್ಕೆ ದಯಪಾಲಿಸಿದರೆ ಅದರಿಂದ ಎಷ್ಟು ಕಷ್ಟಗಳು, ದುರಂತಗಳು ಕಡಮೆಯಾಗುತ್ತವೆ! ಪೂರ್ತಿ ನಿಸ್ವಾರ್ಥತೆಯನ್ನು ಸಾಧಿಸುವುದು ಕಷ್ಟ, ಅದು ಬೇಡ—ಆದರೆ, ನಮ್ಮಲ್ಲಿರುವ ಸ್ವಾರ್ಥತೆಯನ್ನು ಕಡಮೆ ಮಾಡುವುದನ್ನು ಅದಕ್ಕೊಂದು ಮಿತಿ ಕಲ್ಪಿಸುವುದನ್ನು ಕಲಿತರೆ ಎಷ್ಟು ಸಹಾಯವಾಗುತ್ತದೆ!

ಹಿಂದೆ ಇದನ್ನೆಲ್ಲ ನಾವು ಮನಶ್ಶಾಸ್ತ್ರದ ಸಹಾಯದಿಂದ ಮಾಡಲಿಲ್ಲ—ಮತದ ಸಹಾಯದಿಂದ ಮಾಡಿದೆವು. ಸ್ವರ್ಗ ನರಕಗಳನ್ನು ಸೃಷ್ಟಿಸಿ, ಪುರಾಣಗಳನ್ನು ರಚಿಸಿ 'ಇಲ್ಲಿ ಇವನನ್ನು ನೀನು ಹೊಡೆದರೆ ಆಮೇಲೆ ಅಲ್ಲಿ ನಿನ್ನನ್ನು ಕಾಯಿಸಿದ ಶೂಲದ ತುದಿಗೆ ಚುಚ್ಚಿ ಎತ್ತುತ್ತಾರೆ! ಅನಂತರ ಮೇಲಿನಿಂದ ಮೆಣಸಿನಕಾಯಿ ರಸ ಕಣ್ಣಿಗೆ ಬಿಡುತ್ತಾರೆ!'—ಹೀಗೆಲ್ಲಾ ಹೇಳಿದೆವು. ಇದನ್ನು ಕೇಳಿದವನು ಒಂದೆರಡುಸಲ ಹೆದರುತ್ತಾನೆ. ಆಮೇಲೆ ಮೂರು ನಾಲ್ಕು ಸಲ ಕೇಳಿದಾಗ 'ಅಯ್ಯೋ! ಇದೆಲ್ಲಾ ಕಟ್ಟುಕತೆ, ಬಿಡೊ' ಎನ್ನುತ್ತಾನೆ. ಆದುದರಿಂದ ಹಿಂದೆ ಸಾಧಿಸಿದ ರೀತಿಯಲ್ಲಿ ಈಗ ಸಾಧಿಸುವುದಕ್ಕಾಗುವುದಿಲ್ಲ. ಏಕೆಂದರೆ ನೀವು ಮತದ ವಿಚಾರದಲ್ಲೇ ಪ್ರಶ್ನೆ ಹಾಕುತ್ತೀರಿ; ಸ್ವರ್ಗನರಕಗಳ ವಿಚಾರದಲ್ಲಿ 'ಅವೇನೂ ಇಲ್ಲ' ಎಂದು ಧೈರ್ಯವಾಗಿಯೇ ಇದ್ದೀರಿ. ಇವೆಲ್ಲ ಹೋದಮೇಲೆ ಜನ ಏನನ್ನಾಶ್ರಯಿಸಬೇಕು? ಆದರೆ, ಏನಾದರೂ ಮೂಲಾಧಾರ ಇಲ್ಲದೇ ಹೋದರೆ ನಾವೆಲ್ಲ ಒಟ್ಟಿಗೆ ಬಾಳುವುದು ಕಷ್ಟವಾಗುತ್ತದೆ. ಆಗ ಯಾವನು ಬಲಿಷ್ಠನೋ ಅವನೇ ಬದುಕುತ್ತಾನೆ. ಎಂದರೆ ಪರಿಣಾಮದಲ್ಲಿ ಒಂದು ಪಶುಸಮಾಜ ಉತ್ಪತ್ತಿಯಾಗುತ್ತದೆ. ಇದನ್ನೇ ಮನಶ್ಶಾಸ್ತ್ರದ ರೀತಿಯಿಂದ ಹೇಳಿದರೆ ಅರ್ಥವಾಗುವುದಿಲ್ಲ, ಬೇಸರವಾಗುತ್ತದೆ—ಎಂಬ ಕಾರಣದಿಂದ ಸಾಹಿತ್ಯ ಮೆಲ್ಲಗೆ ಇದನ್ನೇ ಉಪಯೋಗಿಸಿಕೊಂಡು 'ಒಂದು ಕತೆಯಾಗಿ ಹೇಳುತ್ತೇನೆ, ಕವಿತೆಯಾಗಿ ಹೇಳುತ್ತೇನೆ, ದೊಡ್ಡ ದೊಡ್ಡ ವ್ಯಕ್ತಿಗಳ ಜೀವನ ಚರಿತ್ರೆಯಾಗಿ ಹೇಳುತ್ತೇನೆ' ಎಂದು ಅದರ ಮುಖಾಂತರವಾಗಿಯೇ—ಬೇರೆ ಯಾವುದೂ ಸಾಧಿಸದ ಪ್ರಮಾಣದಲ್ಲಿ—ಮೃಗವನ್ನು ಮನುಷ್ಯನನ್ನಾಗಿ ಮಾಡಿದೆ. ಸಾಹಿತ್ಯದಿಂದ ಈ ಕೆಲಸವಾಗಿದೆ. ಮನಶ್ಶಾಸ್ತ್ರ, ತತ್ತ್ವಶಾಸ್ತ್ರ, ಇತಿಹಾಸ—ಎಲ್ಲವನ್ನೂ ಸಾಹಿತ್ಯ ಸ್ವೀಕರಿಸುತ್ತದೆ.

ಈಗ ನಾನು ಪ್ರಸಾರಾಂಗದ ವಿಷಯ ಹೇಳಿದೆ. ಒಬ್ಬ ಮನಶ್ಶಾಸ್ತ್ರದ ವಿದ್ಯಾರ್ಥಿ—ಅವನು ಮನಶ್ಶಾಸ್ತ್ರದ ಪಾಠ ಹೇಳುವುದು ಬೇಡ—'ನಾನು ಕೃಷ್ಣ

ಸಂಧಾನದ ಮನಶ್ಶಾಸ್ತ್ರೀಯವಾದ ಒಂದು ವಿಮರ್ಶೆ ಮಾಡುತ್ತೇನೆ' ಎಂದು ಹೋಗಲಿ. ಜನರು 'ಓಹೊ! ಇವನು ಕೃಷ್ಣಸಂಧಾನ ಓದುತ್ತಾನೆ' ಎಂದುಕೊಳ್ಳು ತ್ತಾರೆ. ಜನರಿಗೆ ಈ ರೀತಿ ಮೋಸಮಾಡಬೇಕೆಂದು ನಾನು ಹೇಳುವುದಿಲ್ಲ. ಇವನು ಕೂಡ ಅದನ್ನು ಚೆನ್ನಾಗಿ ಓದಿದ್ದಾನೆ, ಅದರ ಸಾಹಿತ್ಯರೂಪದಿಂದ ಜನರನ್ನು ಆಕರ್ಷಿಸುತ್ತಾನೆ. ಅವರು ಆಕರ್ಷಿತರಾದ ಮೇಲೆ ಅದರಲ್ಲಿ ಧ್ವನಿಯ ರೂಪದಲ್ಲಿ, ಸೂಚನೆಯ ರೂಪದಲ್ಲಿ, ಇಂಗಿತದ ರೂಪದಲ್ಲಿ ಅಡಕವಾಗಿರುವುದನ್ನು ತಿಕ್ಕಿ ಹೇಳುವುದಿಲ್ಲ; ಆದರೆ, ಅವರ ಹೃದ್ಗೋಚರವಾಗುವಂತೆ ಸೂಚಿಸಿ ಹೇಳುತ್ತಾನೆ. ಅವರು ಇದನ್ನು ಕೇಳಿ ಕಣ್ಣೀರು ಸುರಿಸುತ್ತಿರುವಾಗಲೇ ಇದರ ಭಾವ ಅವರ ಹೃದಯವನ್ನು ವ್ಯಾಪಿಸಿ ಅವರ ಚೇತನವನ್ನೇ ಪರಿವರ್ತಿಸುತ್ತಿರುತ್ತದೆ.

ನಾನು ಅನೇಕ ಸಲ ಪಾಠ ಹೇಳುತ್ತಿರುವಾಗ ನನ್ನ ವಿದ್ಯಾರ್ಥಿಗಳಿಗೆ 'ಇವ ರೇನು ಮನಶ್ಶಾಸ್ತ್ರ ಹೇಳುತ್ತಿದ್ದಾರೊ, ತತ್ವಶಾಸ್ತ್ರ ಹೇಳುತ್ತಿದ್ದಾರೊ, ಸಾಹಿತ್ಯ ಹೇಳುತ್ತಿದ್ದಾರೊ'—ಎಂದು ಕಂಡರೂ ಕಂಡಿರಬಹುದು. ನಿಜವಾದ ಸಾಹಿತ್ಯದ ವಿದ್ಯಾರ್ಥಿ—ಆನರ್ಸ್, ಎಂ.ಎ. ಓದುವಾಗ—ತತ್ವಶಾಸ್ತ್ರ, ಮನಶ್ಶಾಸ್ತ್ರ ಓದದಿದ್ದರೆ ಅವನು ಮಾಡುವ ವಿಮರ್ಶೆಯೆಲ್ಲ ಬರೀ ಬರುಬರು ನೊರೆಯಾಗುತ್ತದೆ. ಯಾವುದೇ ಒಂದು ಸಂಗತಿ ಅಲ್ಲಿ ನಡೆಯಿತು—ಎಂದು ಬರೀ ಚರಿತ್ರೆಯನ್ನಷ್ಟೇ ತಿಳಿಯದೆ, ಅದರ ಧ್ವನಿ, ಇಂಗಿತ, ದರ್ಶನ—ಇವುಗಳನ್ನು ಗುರುತಿಸಬೇಕಾದರೆ ನಿಮಗೆ ತತ್ವಶಾಸ್ತ್ರ, ಮನಶ್ಶಾಸ್ತ್ರಗಳ ಅರಿವು ಅತ್ಯಗತ್ಯ. ಹಾಗೆಯೇ ಮನಶ್ಶಾಸ್ತ್ರದ ವಿದ್ಯಾರ್ಥಿಗಳು ಸಾಹಿತ್ಯವನ್ನು ಅಭ್ಯಾಸಮಾಡಿ ಅದನ್ನು ಜನರ ಮನಸ್ಸಿನ ಮೇಲೆ ಎಷ್ಟು ಪರಿಣಾಮ ಕಾರಿಯಾಗಿ ಮಾಡಬಹುದು—ಎಂಬುದನ್ನು ನೋಡಬೇಕು. ಒಂದು ಮಹಾ ಪ್ರಬಂಧದಲ್ಲಿ ಯೂಂಗ್ 'Psychology and Literature' ಎಂಬ ಅಧ್ಯಾಯ ಬರೆ ದಿದ್ದಾನೆ. ಅದು ತುಂಬಾ ಗಹನವಾದ, ಅದ್ಭುತವಾದ ಪ್ರಬಂಧ. ಅದರ ಎಲ್ಲ ಅಂಶ ಗಳನ್ನು ನಾವೆಲ್ಲ ಒಪ್ಪಿಕೊಂಡುಬಿಡುತ್ತೇವೆ ಎಂದೂ ಅಲ್ಲ. ಆದರೆ ಒಬ್ಬ ಮನ ಶ್ಶಾಸ್ತ್ರಜ್ಞ ಈ ವಿಚಾರದಲ್ಲಿ ಏನು ಬೆಳಕನ್ನು ಬೀರಬಲ್ಲ, ಹೇಗೆ ಪ್ರವೇಶಿಸಬಲ್ಲ, The Literature of vision, the Literature of psychology—ಇದನ್ನೆಲ್ಲ ತೆಗೆದುಕೊಂಡು ಏನು ಮಾಡಬಹುದು, ಮನಶ್ಶಾಸ್ತ್ರ ಎಲ್ಲಿ ಪ್ರವೇಶಿಸಬಹುದು, ಎಲ್ಲಿ ಪ್ರವೇಶಿಸಬಾರದು—ಇದನ್ನೆಲ್ಲ ತಿಳಿಯಬಹುದು. ಒಬ್ಬನಿಗೆ ತಾನು ವಿಮಾನ ಸಾರಥಿ ಯಾಗಬೇಕೆಂದು ಆಸೆ. ಆದರೆ, ಹಾರುವುದರಿಂದ ಅವನ ಮನಸ್ಸಿನ ಮೇಲೆ ಏನು ಪರಿಣಾಮವಾಗಿ ಇನ್ನೂ ಯಾರ ಯಾರ ಜೀವನವನ್ನು ಹಾಳುಮಾಡುತ್ತಾನೊ! ಆದರೆ ಇಲ್ಲಿ ಮನಶ್ಶಾಸ್ತ್ರ ಪ್ರವೇಶಿಸಿ 'ಅಪ್ಪಾ, ನೀನೇನೊ ಹಾರಬೇಕು ಅಂತ ಇಚ್ಛೆ

ಉಳ್ಳವನಾಗಿರಬಹುದು—ಆದರೆ ಇತರರ ಜತೆ ಹಾರು, ನೀನೇ ಹಾರಿಸಬೇಡ' ಎಂದು ಹೇಳಬೇಕಾಗುತ್ತದೆ. ಈ ಕೆಲಸಗಳನ್ನೆಲ್ಲ ಮನಶ್ಶಾಸ್ತ್ರ ಮಾಡಬೇಕು. ಹೀಗೆ ಮನಶ್ಶಾಸ್ತ್ರ ಎಷ್ಟು ಮುಖ್ಯವಾದುದು, ಗಹನವಾದುದು, ನಮ್ಮ ಮೂಲಸ್ವರೂಪಕ್ಕೇ ಅಂಟಿಕೊಳ್ಳತಕ್ಕುದು, ಅದರ ವ್ಯಾಪ್ತಿ ಎಷ್ಟು ವಿಸ್ತಾರವಾದುದು, ಶಾಖೋಪಶಾಖೆಗಳನ್ನುಳ್ಳದು, ಎಲ್ಲ ಮಟ್ಟಗಳನ್ನೂ ಮುಟ್ಟತಕ್ಕದ್ದು—ಎಂಬುದನ್ನೆಲ್ಲ ತಮ್ಮೆಲ್ಲರ ಗಮನಕ್ಕೆ ತಂದಿದ್ದೇನೆ.

ಕೊನೆಯದಾಗಿ ಈ ಮನಶ್ಶಾಸ್ತ್ರದ ಸಂಘದವರು ನನ್ನನ್ನು ಈ ಮುಕ್ತಾಯ ಭಾಷಣಕ್ಕೆ ಕರೆದು ನನ್ನ ಸ್ವಸ್ವರೂಪದ ಅನುಸಂಧಾನದಲ್ಲಿ ಕಾಲಕಳೆಯುವಂತೆ ಮಾಡಿದ್ದಕ್ಕಾಗಿ ನಾನು ಎಲ್ಲರಿಗೂ ಕೃತಜ್ಞನಾಗಿದ್ದೇನೆ. ಅಲ್ಲದೆ ಪ್ರೊ. ಕುಪ್ಪುಸ್ವಾಮಿಯವರಿಗೆ ನಾನು ಕೃತಜ್ಞತೆ ಅರ್ಪಿಸುತ್ತೇನೆ.

ಮಂದಸ್ಮಿತ



ಸುಮಭಾರಕೆ ಕುಸಿದಿದೆ ವಿದ್ವತ್ತಿನ ಕೊರಳು





ಕರಂಡಕದ ಕಾಣಿಕೆ

ಸಂಪಾದಕೀಯ

ಪ್ರೊ|| ಡಿ. ಎಲ್. ನರಸಿಂಹಾಚಾರ್ಯರಿಗೆ ಗೌರವ ಸಮರ್ಪಣೆ

ಪ್ರಬುದ್ಧ ಕರ್ಣಾಟಕ ಪ್ರಧಾನ ಸಂಪಾದಕರಾದ ಶ್ರೀ ಡಿ. ಎಲ್. ನರಸಿಂಹಾಚಾರ್ಯ ಅವರು ಬಿದರೆಯಲ್ಲಿ ನಡೆದ ನಲವತ್ತೊಂದನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು. ಶ್ರೀ ದೊಡ್ಡಬೆಲೆ ಲಕ್ಷ್ಮೀ ನರಸಿಂಹಾಚಾರ್ಯರು ವಿದ್ವತ್ತಿನ ಗಣಿ. ಅವರು ಕನ್ನಡದ ಬಲ, ಹೆಮ್ಮೆ. ಅವರ ಮಿತ್ರರೂ ಶಿಷ್ಯರೂ ಅವರನ್ನು ಹೀಗೆ ವರ್ಣಿಸುತ್ತಾರೆ: ಶ್ರೀ ಡಿ. ಎಲ್. ಎನ್. ಮತ್ತು ವಿದ್ವತ್ತು ಇವೆರಡೂ ಸಮಾನಾರ್ಥಕ ಶಬ್ದಗಳಾಗಿವೆ. ಇಂತಹ ಪಂಡಿತ ವರ್ಯರಿಗೆ, ವಿದ್ವನ್ಮಣಿಗಳಿಗೆ ಸಾಹಿತ್ಯ ಸಮ್ಮೇಳನದ ಅಧ್ಯಕ್ಷಸ್ಥಾನವನ್ನು ಅರ್ಪಿಸಿ ಗೌರವಿಸಿದುದಕ್ಕಾಗಿ ಕನ್ನಡಿಗರು ಅಭಿನಂದನಾರ್ಹರು.

ಶ್ರೀ ನರಸಿಂಹಾಚಾರ್ಯರು ಬಿದರೆಗೆ ಹೊರಡುವ ಮುನ್ನ ಮೈಸೂರು ಮಹಾರಾಜ ಕಾಲೇಜಿನಲ್ಲಿ, ಅಲ್ಲಿಂದ ಬಂದನಂತರ ಮೈಸೂರು ಯುವರಾಜ ಕಾಲೇಜಿನಲ್ಲಿ ಅವರ ಮಿತ್ರರೂ ಶಿಷ್ಯರೂ ಸಹಸ್ರ ಸಹಸ್ರ ಸಂಖ್ಯೆಯಲ್ಲಿ ಸಭೆ ಸೇರಿ ಅವರನ್ನು ಗೌರವಿಸಿದರು, ಹೂವಿನ ಹಾರಗಳ ರಾಶಿಯಲ್ಲಿ ಅವರನ್ನು ಅಕ್ಷರಶಃ ಮುಳುಗಿಸಿದರು. ಆ ಎರಡೂ ಸಂದರ್ಭಗಳಲ್ಲಿ ಅವರಿಗೆ ಅರ್ಪಿಸಿದ ಮಾನಪತ್ರಗಳು ಸ್ಮರಣೀಯವಾಗಿವೆ.

* * *

ಮೈಸೂರು ಮಹಾರಾಜ ಕಾಲೇಜಿನ ಕನ್ನಡ ಪ್ರಾಧ್ಯಾಪಕರಾದ ಶ್ರೀಮಾನ್ ದೊಡ್ಡಬೆಲೆ ಲಕ್ಷ್ಮೀ ನರಸಿಂಹಾಚಾರ್, ಎಂ.ಎ. ಅವರಿಗೆ ಮಹಾರಾಜ ಕಾಲೇಜಿನ ಅಧ್ಯಾಪಕರು ಮತ್ತು ವಿದ್ಯಾರ್ಥಿಗಳು ಅರ್ಪಿಸಿದ ಸನ್ಮಾನ ಪತ್ರ

ಮಾನ್ಯರೆ,

ತಾವು ಈ ವರ್ಷ ಬಿದರೆಯಲ್ಲಿ ನಡೆಯಲಿರುವ ಕನ್ನಡ ಸಾಹಿತ್ಯ ಸಮ್ಮೇಳನದ ನಲವತ್ತೊಂದನೆಯ ಅಧಿವೇಶನದ ಅಧ್ಯಕ್ಷರಾಗಿ ಆಯ್ಕೆಗೊಂಡು ಅದರ ಕಾರ್ಯ ಭಾರವನ್ನು ನಿರ್ವಹಿಸಲಿರುವ ಈ ಶುಭ ಸನ್ನಿವೇಶದಲ್ಲಿ ನಾವು ತಮಗೆ ಗೌರವಪುರಸ್ಸರವಾದ ಅಭಿನಂದನೆಯನ್ನು ಸಲ್ಲಿಸಲು ತುಂಬ ಹರ್ಷಪಡುತ್ತೇವೆ.

ಕಳೆದ ಮೂರು ದಶಕಗಳಿಂದ ತಾವು ಕನ್ನಡ ನಾಡುನುಡಿಗಳಿಗೆ ಅಮೂಲ್ಯವಾದ ಸೇವೆ ಸಲ್ಲಿಸಿದ್ದೀರಿ. ಗ್ರಂಥ ಸಂಪಾದನೆ, ಕವಿಕಾಲವಿಚಾರ, ಕೃತಿಕರ್ತೃತ್ವಪರಿಶೋಧನೆ, ಶಬ್ದಾರ್ಥನಿರ್ಣಯ, ಸಾಹಿತ್ಯವಿಮರ್ಶೆ ಈ ಮೊದಲಾದ ಹಲವು ರಂಗಗಳಲ್ಲಿ ತಾವು ಸಂತತವಾಗಿ ಶ್ರಮಿಸಿ ಒಂದು ತಪಸ್ಸಿನಂತೆ ಸಂಶೋಧನ ಕಾರ್ಯವನ್ನು ಕೈಕೊಂಡಿದ್ದೀರಿ. ತಮ್ಮ ವ್ಯವಸಾಯದ ಫಲವಾಗಿ, ಪಂಪರಾಮಯಣ ಸಂಗ್ರಹ, ವಡ್ಡಾರಾಧನೆ, ಸಿದ್ಧರಾಮಚಾರಿತ್ರ, ಸುಕುಮಾರಚರಿತೆ, ಶಬ್ದಮಣಿದರ್ಪಣ ಮುಂತಾದ ಪ್ರಾಚೀನ ಗ್ರಂಥಗಳ ಪ್ರಮಾಣಭೂತ ಸಂಸ್ಕರಣಗಳು ಈಗ ನಮಗೆ ದೊರೆತಿವೆ. ವಡ್ಡಾರಾಧನೆಯಂಥ ಅಪೂರ್ವವಾದ ಹಳಗನ್ನಡದ ಗದ್ಯಕೃತಿಯನ್ನು ಬೆಳಕಿಗೆ ತಂದು ಬಹು ಶ್ರಮದಿಂದ ಮಾತೃಕೆಗಳನ್ನು ದೊರಕಿಸಿಕೊಂಡು ಗ್ರಂಥಸಂಪಾದನ ಕಾರ್ಯಕ್ಕೆ ಮೇಲ್ಪಂಕ್ತಿಯಾಗುವಂತೆ ಪಾಠಶೋಧನೆ ಮಾಡಿ ಪ್ರಕಟಿಸಿ ಕನ್ನಡ ವಿದ್ವತ್ ಪ್ರಪಂಚಕ್ಕೆ ತಾವು ಮಾಡಿರುವ ಮಹೋಪಕಾರವನ್ನು ಎಷ್ಟು ಸ್ಮರಿಸಿದರೂ ಸಾಲದು.

ಗ್ರಂಥಸಂಪಾದನೆಯ ಜೊತೆಗೆ ತಾವು ಲೇಖನವ್ಯವಸಾಯವನ್ನೂ ಕೈಕೊಂಡಿರುವುದರಿಂದ ತಮ್ಮ ಬರಹಗಳು ಸಾಹಿತ್ಯದ ಅಭ್ಯಾಸಿಗಳಿಗೆ ತವನಿಧಿಯಾಗಿ ಪರಿಣಮಿಸಿವೆ. ಭಾಷೆ, ವ್ಯಾಕರಣ, ಛಂದಸ್ಸು ಮುಂತಾದ ವಿಷಯಗಳಲ್ಲಿನ ಸಮಸ್ಯೆಗಳನ್ನು ಕುರಿತು ತಾವು ಆಧಾರಪೂರ್ವಕವೂ ವಿಚಾರಪೂರ್ಣವೂ ಆದ ಶಾಸ್ತ್ರೀಯ ಲೇಖನಗಳನ್ನು ಪ್ರಕಟಿಸಿರುವುದರಿಂದ ಕನ್ನಡಿಗರಿಗೆ ದೊಡ್ಡ ಪ್ರಯೋಜನವಾಗಿದೆ.

ತಮ್ಮ ವಿದ್ಯಾರ್ಥಿ ಜೀವನವೂ ಉಜ್ವಲವೂ ಪ್ರಥಮ ಶ್ರೇಣಿಯದೂ ಪ್ರಶಂಸನೀಯವೂ ಆಗಿತ್ತೆಂದು ಕೇಳಿ ಬಲ್ಲೆವು. ಕನ್ನಡದ ಅಧ್ಯಯನ ಅಧ್ಯಾಪನಗಳಿಗೆ ತಾವು ಬದುಕನ್ನು ಮುಡುಪಾಗಿಟ್ಟಿದ್ದೀರಿ. ಮೈಸೂರು ವಿಶ್ವವಿದ್ಯಾನಿಲಯದ ಕನ್ನಡದ ಅಧ್ಯಾಪಕರಾಗಿ, ಆಚಾರ್ಯರಾಗಿ ತಮ್ಮ ಪಾಠಪ್ರವಚನಗಳಿಂದ ಅನೇಕ ಸಹಸ್ರ ವಿದ್ಯಾರ್ಥಿಗಳಿಗೆ ಕನ್ನಡದ ದೀಕ್ಷೆ ಕೊಟ್ಟಿದ್ದೀರಿ. ತಮ್ಮ ಶಿಷ್ಯವಾತ್ಸಲ್ಯವನ್ನೂ ಸ್ನೇಹಪರತೆಯನ್ನೂ ಸರಳಸ್ವಭಾವವನ್ನೂ ಅರಿಯದ ವಿದ್ಯಾರ್ಥಿಯಿಲ್ಲ.

ಕನ್ನಡ ಸಾಹಿತ್ಯ ಪರಿಷತ್ತು ಕೈಕೊಂಡಿರುವ ಕನ್ನಡ ನಿಘಂಟಿನ ರಚನೆಗಾಗಿ ತಾವು ಹಲವು ರೀತಿಗಳಲ್ಲಿ ಶ್ರಮಿಸುತ್ತಿರುವುದನ್ನು ಈ ಸಂದರ್ಭದಲ್ಲಿ ನಾವು ಕೃತಜ್ಞತೆಯಿಂದ ಸ್ಮರಿಸುತ್ತೇವೆ. 'ಪ್ರಬುದ್ಧ ಕರ್ಣಾಟಕ'ದ ಪ್ರಧಾನ ಸಂಪಾದಕರಾಗಿ ತಾವು ಅದರ ಅಭಿವೃದ್ಧಿಗೆ ಕಾರಣರಾಗಿದ್ದೀರಿ. ಕಾಲೇಜಿನ ಕನ್ನಡ ಸಂಘದ ಅಧ್ಯಕ್ಷರಾಗಿ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಮಾಡುತ್ತಿದ್ದೀರಿ. ತಮ್ಮ ಈ ಬಹುಮುಖವಾದ ಕಾರ್ಯಗಳಿಂದ ನಮಗೆ ಆಗಿರುವ ಉಪಕಾರವನ್ನು ನಾವು ಸಂತೋಷದಿಂದ ಸ್ಮರಿಸುತ್ತೇವೆ.

ಈ ಬಾರಿಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ತಮ್ಮನ್ನು ಆರಿಸಿರುವುದರಿಂದ ಕನ್ನಡನಾಡು ತನ್ನನ್ನೇ ಪುರಸ್ಕರಿಸಿಕೊಂಡಂತಾಗಿದೆ. ತಮ್ಮ ಈ ಅಧ್ಯಕ್ಷಪದವಿಯಿಂದ ನಾಡಿಗೆ ಅನನ್ಯಲಭ್ಯವಾದ ಮಾರ್ಗದರ್ಶನ ದೊರೆಯುವುದರಲ್ಲಿ ಯಾವ ಸಂದೇಹವೂ ಇಲ್ಲ.

ಮಹಾಶಯರೆ, ಈ ಸುಸಮಯದಲ್ಲಿ ನಮಗೆ ಉಂಟಾಗಿರುವ ಆನಂದವನ್ನು ತಮಗೆ ಅರಿಕೆಮಾಡಲು ತಾವು ಕೃಪೆಯಿಂದ ಅವಕಾಶಕೊಟ್ಟದ್ದಕ್ಕಾಗಿ ತಮ್ಮನ್ನು ವಂದಿಸಿ, ಭಗವಂತನು ತಮಗೆ ಶ್ರೇಯಸ್ಸನ್ನೂ ಸನ್ಮಂಗಳವನ್ನೂ ದಯಪಾಲಿಸಲೆಂದೂ, ತಮ್ಮ ಪರಿಣತಪ್ರಜ್ಞೆಯ ಸತ್ಫಲ ನಮಗೆ ಚಿರಕಾಲ ಲಭಿಸಲೆಂದೂ ಹಾರೈಸುತ್ತೇವೆ.

ಮೈಸೂರು, ಇಂತು ತಮ್ಮವರೇ ಆದ,

ತಾ|| ೫-೨-೧೯೬೦. **ಮಹಾರಾಜ ಕಾಲೇಜಿನ ಅಧ್ಯಾಪಕರು**

ಮತ್ತು ವಿದ್ಯಾರ್ಥಿಗಳು

* * *

ಮೈಸೂರು ಮಹಾರಾಜ ಕಾಲೇಜಿನ ಕನ್ನಡ ಪ್ರಾಧ್ಯಾಪಕರಾದ ಶ್ರೀಮಾನ್ ದೊಡ್ಡಬೆಲೆ ಲಕ್ಷ್ಮೀ ನರಸಿಂಹಾಚಾರ್, ಎಂ.ಎ. ಅವರಿಗೆ ಯುವರಾಜ ಕಾಲೇಜಿನ ವಿದ್ಯಾರ್ಥಿಗಳು ಮತ್ತು ಅಧ್ಯಾಪಕರು ಅರ್ಪಿಸಿದ ಸನ್ಮಾನ ಪತ್ರ

ಮಾನ್ಯರೇ,

ಈಗತಾನೆ ಬಿದರೆಯಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದ ನಲವತ್ತೊಂದನೆಯ ಅಧಿವೇಶನದ ಅಧ್ಯಕ್ಷಸ್ಥಾನವನ್ನು ಅಲಂಕರಿಸಿ ವಿಚಾರಪ್ರಚೋದಕವಾದ ಹಾಗೂ ಸಮದೃಷ್ಟಿಯಿಂದ ಕೂಡಿದ ಅನುಭವದ ನುಡಿಗಳಿಂದ ಮಾರ್ಗದರ್ಶನಮಾಡಿ ಇಲ್ಲಿಗೆ ಆಗಮಿಸಿರುವ ತಮ್ಮನ್ನು ಸ್ವಾಗತಿಸುವುದು ನಮಗೊಂದು ಹೆಮ್ಮೆಯ ವಿಷಯವಾಗಿದೆ.

ಕಾಳಿದಾಸ ಒಂದೆಡೆ ಹೇಳುತ್ತಾನೆ: ಮರಗಳು ಬಾಗುವುದು ಫಲಭಾರದಿಂದ, ಮೋಡಗಳು ಬಾಗುವುದು ಜಲಭಾರದಿಂದ ಎಂದು. ನಿಮ್ಮನ್ನು ಕಂಡಾಗ ಯಾರಿಗಾದರೂ ಅನ್ನಿಸಬಹುದು—ತಾವು ಬಾಗಿರುವುದು ವಿದ್ವತ್ತಿನ ವಿನಯದ ಭಾರದಿಂದ ಎಂದು. ಅಪ್ರಿಯವಾದರೂ ಸತ್ಯವನ್ನೇ ನುಡಿಯಬೇಕೆಂಬ ನಿಮ್ಮ ಹಂಬಲದ ನೈಷ್ಠುರ್ಯದ ಹಿಂದೆ ಸಹಾನುಭೂತಿಯ ಗದ್ದೆಯ ಬಯಲು ತೆನೆದೂಗುತ್ತಿರುವುದನ್ನು ಕಂಡ ಪುಣ್ಯಶಾಲಿಗಳು ನಾವು.

ವಿದ್ಯಾರ್ಥಿದೆಸೆಯಲ್ಲೇ ಪ್ರತಿಭಾನ್ವಿತರಾಗಿ ವಿಜ್ಞಾನದ ಹಾದಿಯಲ್ಲಿ ಹೊರಟ

ನಿಮ್ಮನ್ನು ಕನ್ನಡ ಸಾರಸ್ವತ ಪ್ರಪಂಚದ ಕಡೆಗೆ ತಿರುಗಿಸಿದ ಶಕ್ತಿಗಳಿಗೆ ಮತ್ತು ವ್ಯಕ್ತಿಗಳಿಗೆ, ಹಲವಾರು ವರ್ಷಗಳಿಂದ ನಿಮ್ಮ ಬೋಧನೆಯ ಫಲವನ್ನು ಅನುಭವಿಸಿದ ಎಷ್ಟೋ ವಿದ್ಯಾರ್ಥಿಗಳು ತುಂಬಾ ಋಣಿಯಾಗಿದ್ದಾರೆ. ಆ ನಿಮ್ಮ ಸಹಜ ಎನ್ನಿಸಿಕೊಳ್ಳುವ ವೈಜ್ಞಾನಿಕವಾದ ದೃಷ್ಟಿಯು ನಿಮ್ಮದೇ ಆದ 'ದೇಸಿ' ಎನ್ನಿಸಿಕೊಳ್ಳಬಹುದಾದ ಬೋಧನಕ್ರಮದಲ್ಲಿ, ಸಂಶೋಧನೆಯ ವಿಧಾನಗಳಲ್ಲಿ, ಲೇಖನಗಳಲ್ಲಿ ಹಲವಾರು ವಿದ್ಯಾರ್ಥಿಗಳಿಗೆ ಮಾರ್ಗದರ್ಶಕವಾಗಿರುವುದು ಎಲ್ಲರಿಗೂ ತಿಳಿದ ವಿಚಾರವೇ.

ಸುಲಭ ಯಶಸ್ಸಿನ ಬಿಸಿಲುಗುದುರೆಯ ಬೆನ್ನುಹತ್ತದೆ ಸಾರಸ್ವತ ಸಂಶೋಧನೆಯ ಶಕ್ತಿಯಾರಾಧನೆಯ ಸಾಧಕರಾಗಿ ತಾವು ಅನೇಕ ಪ್ರಾಚೀನ ಅಮೂಲ್ಯ ಗ್ರಂಥಗಳನ್ನು ಪರಿಷ್ಕರಿಸಿ ಪ್ರಕಟಿಸಿದ್ದೀರಿ; ಅನೇಕ ಶಬ್ದಾರ್ಥಗಳ ರಹಸ್ಯವನ್ನು ಭೇದಿಸಿದ್ದೀರಿ; ಭಾಷೆ ವ್ಯಾಕರಣ ಛಂದಸ್ಸು ಮುಂತಾದ ವಿಷಯಗಳಲ್ಲಿನ ಸಮಸ್ಯೆಗಳನ್ನು ಕುರಿತು ವಿಚಾರಪೂರ್ಣವೂ ಶಾಸ್ತ್ರೀಯವೂ ಆದ ಲೇಖನಗಳನ್ನು ಪ್ರಕಟಿಸಿದ್ದೀರಿ. ಸಾಹಿತ್ಯ ವಿಮರ್ಶೆಯಲ್ಲಿ ಭಾವನಾಪೂರ್ಣವಾದ ಕೆಲವು ಲೇಖನಗಳು ನಿಮ್ಮಿಂದ ನಮಗೆ ಲಭ್ಯವಾಗಿವೆ. ಇತ್ತೀಚಿನ ಕನ್ನಡ ವಿಮರ್ಶನ ಪ್ರಪಂಚದಲ್ಲಿ ಕನ್ನಡದ ದುರದೃಷ್ಟವೋ ಎನ್ನುವಂತೆ ಹರಡುತ್ತಿರುವ ಸೋಂಕುರೋಗದ ಬಗ್ಗೆ ತಾವು ಸಾಹಿತ್ಯಸಮ್ಮೇಳನದ ಅಧ್ಯಕ್ಷಪೀಠದಿಂದ ನಿರ್ಭಯವಾಗಿ ಆಡಿರುವ ಮಾತುಗಳ ಬಗ್ಗೆ ನಮ್ಮೆಲ್ಲರ ಸಂಪೂರ್ಣ ಬೆಂಬಲವಿದೆ.

"ಆಸೆಗಳು ಬಹಳ, ಸಾಧನೆ ಸಿದ್ಧಿಗಳು ಸ್ವಲ್ಪ" ಎಂದು ನೀವು ಒಂದು ಕಡೆ ಹೇಳಿಕೊಂಡಿದ್ದೀರಿ. ಇದು ತಮ್ಮ ವಿಸಯಕ್ಕೆ ಸಹಜವಾದ ಮಾತು. ಭಗವಂತನ ಕೃಪೆಯಿಂದ ತಮ್ಮ ವಿದ್ವತ್ತಿನ ಸಂಪೂರ್ಣ ಪ್ರಯೋಜನವು ಕನ್ನಡ ಸಾರಸ್ವತ ಪ್ರಪಂಚಕ್ಕೆ ಲಭಿಸಿ ತನ್ಮೂಲಕ ಕನ್ನಡದ 'ದೊಡ್ಡಬೆಲೆ' ಇನ್ನೂ ಹೆಚ್ಚಲೆಂದು ನಾವೆಲ್ಲರೂ ಹಾರೈಸುತ್ತೇವೆ.

ಮೈಸೂರು,
23–2–1960

ಇತಿ ತಮ್ಮ ವಿಶ್ವಾಸಿಗಳು,

ಯುವರಾಜ ಕಾಲೇಜಿನ ಅಧ್ಯಾಪಕರು
ಮತ್ತು ವಿದ್ಯಾರ್ಥಿಗಳು

***

ಶ್ರೀಯುತ ಡಿ. ಎಲ್. ನರಸಿಂಹಾಚಾರ್ಯರಿಗೆ ನಮ್ಮ ಹೃತ್ಪೂರ್ವಕ ಅಭಿನಂದನೆಗಳು. ಭಗವಂತನು ಅವರಿಗೆ ಸಮಸ್ತ ಸನ್ಮಂಗಳಗಳನ್ನು ಕರುಣಿಸಲಿ.

ಕಾರಂತರಿಗೆ ಸಾಹಿತ್ಯ ಅಕಾಡೆಮಿಯ ಸನ್ಮಾನ

ಭಾರತ ಸಾಹಿತ್ಯ ಅಕಾಡೆಮಿಯು ಈ ವರ್ಷ ಶ್ರೀ ಕೋಟಾ ಶಿವರಾಮ ಕಾರಂತರನ್ನು ಸನ್ಮಾನಿಸಿರುವ ವಿಷಯ ನಮಗೆಲ್ಲ ಅತ್ಯಂತ ಸಂತೋಷ ಸಮಾಚಾರ ವಾಗಿದೆ. ಅವರ ದೀರ್ಘ ಸಾಧನೆಯ ಪ್ರತ್ಯಕ್ಷವಾದ ಅನುಭವದ ಫಲವಾಗಿ ಮೂಡಿ ಬಂದಿರುವ "ಯಕ್ಷಗಾನ ಬಯಲಾಟ" ಎಂಬ ಅವರ ನೃವ್ಯಾತ್ಯಾತ್ಮಕ ಸಂಶೋಧನ ಗ್ರಂಥಕ್ಕೆ ಬಹುಮಾನಕೊಡುವ ಮೂಲಕವಾಗಿ ಶ್ರೀ ಕಾರಂತರನ್ನು ಸಾಹಿತ್ಯ ಅಕಾಡೆಮಿ ಸನ್ಮಾನಿಸಿದೆ. ಭಾರತ ಸಾಹಿತ್ಯ ಅಕಾಡೆಮಿಯು ಕನ್ನಡದ ವಿಭಾಗವನ್ನು ಕನ್ನಡದವರೆ ಆದ ಹತ್ತಾರು ಜನ ಶ್ರೇಷ್ಠರಾದ ಸಾಹಿತ್ಯವೇತ್ತರು ಪ್ರತಿನಿಧಿಸುವುದ ರಿಂದ ವಾಸ್ತವವಾಗಿ ಈ ಬಹುಮಾನ, ಈ ಸನ್ಮಾನ ಕನ್ನಡ ಜನರಿಂದಲೆ ಬಂದಿತೆಂದು ಭಾವಿಸಬೇಕು. ಜನತೆಯನ್ನು ರಾಷ್ಟ್ರಪ್ರಭುತ್ವ ಪ್ರತಿಬಿಂಬಿಸಿದೆ. ಅದಕ್ಕಾಗಿ ಉಭಯರೂ ಅಭಿವಂದ್ಯರು. ಕಾರಂತರನ್ನು ಸನ್ಮಾನಿಸಲು ಒಂದು ಅವಕಾಶ ಬೇಕಿತ್ತು. ತಮಗೆ ಈಗ ಬಂದಿರುವಂತಹ ಗೌರವವನ್ನು ಪ್ರತ್ಯೇಕ ಪ್ರತ್ಯೇಕವಾಗಿ ಪಡೆದು ತಂದುಕೊಡುವಂತಹ ನಾಲ್ಕಾರು ಮಹತ್ಕೃತಿಗಳನ್ನು ತಮ್ಮ ಈ ಐವತ್ತೆಂಟು ವರ್ಷದ ಅವಧಿಯಲ್ಲಿ ನೀಡಿರುವ ಶ್ರೀ ಕಾರಂತರು ಈ "ಯಕ್ಷಗಾನ ಬಯಲಾಟ"ದಿಂದ ಮಾತ್ರವೇ ಗೌರವಾರ್ಹರಾದರೆಂದು ಯಾರಿಗೂ ಅನಿಸುವುದಿಲ್ಲ. ಈ ಕೃತಿಯು ಅವರ ಶ್ರೇಷ್ಠಸಾಧನೆಗಳಲ್ಲಿ ಒಂದು, ಹಾಗೂ ಅವರಿಗೆ ರಾಷ್ಟ್ರಗೌರವವನ್ನು ತಂದುಕೊಟ್ಟ ನಿಮಿತ್ತದಿಂದಾಗಿ ಅಭಿವಂದ್ಯವಾಗಿದೆ.

ಕಾರಂತರ ಜೀವನ ವ್ಯಕ್ತಿತ್ವಗಳು ಅವರ ಯಾವೊಂದು ಕೃತಿಗಿಂತಲೂ, ಅಷ್ಟೇ ಏಕೆ ಅವರ ಕೃತಿಸಮಷ್ಟಿಗೂ ಮಿಗಿಲಾದುದು ಎಂಬ ಅಂಶವನ್ನು ಮರೆಯಬಾರದು. ಸಾಹಿತಿಯಾಗಿ ಬೇರೆ ಬೇರೆ ಸಾಹಿತ್ಯಪ್ರಕಾರಗಳಲ್ಲಿ ಪ್ರಯೋಗ ಕೃಷಿ ವ್ಯವಸಾಯ ನಡೆಸಿ ಅದರಲ್ಲಿ ಪ್ರಧಾನವಾಗಿ ವರಿಷ್ಠ ಕಾದಂಬರಿಕಾರರಾಗಿ ಸಿದ್ಧಿಪಡೆದು ಪ್ರಸಿದ್ಧ ರಾಗಿದ್ದಾರೆ. 'ಬಾಲಪ್ರಪಂಚ' 'ಈ ಜಗತ್ತು'ಗಳಂತಹ, ಸಂಘಸಂಸ್ಥೆಗಳು ಮಾಡ ಬಹುದಾದಂತಹ ಮಹಾಸಾಹಸ ಕಾರ್ಯವನ್ನು ಏಕಾಂಗಿಯಾಗಿ ಸಾಧಿಸಿದ್ದಾರೆ. ಮತ್ತೆಷ್ಟೋ ಧಾರ್ಮಿಕ ಗ್ರಂಥಗಳನ್ನು, ವಿಜ್ಞಾನ ಗ್ರಂಥಗಳನ್ನು ಅನುವಾದಿಸಿದ್ದಾರೆ. ಸಮಾಜ ಸುಧಾರಕರಾಗಿ, ಸತ್ಯಾಗ್ರಹಿಯಾಗಿ, ಪತ್ರಿಕಾ ಕರ್ತರಾಗಿ, ವ್ಯಾಪಾರಿ ಯಾಗಿ, ವ್ಯವಸಾಯಗಾರರಾಗಿ, ಪ್ರೆಸ್ ಮಾಲೀಕರಾಗಿ, ಬ್ರಹ್ಮಚಾರಿಯಾಗಿ, ಕ್ರಾಂತಿಶೀಲ ಧಾರ್ಮಿಕರಾಗಿ, ಪ್ರಕೃತಿಪ್ರಿಯರಾಗಿ, ಪ್ರವಾಸಿಯಾಗಿ, ಜ್ಞಾನಭಿಕ್ಷು ವಾಗಿ, ರಾಜಕೀಯಕ್ಕೆ ಇಳಿದು ಬಹುಬೇಗ ಎಚ್ಚೆತ್ತು ಮೇಲೆದ್ದವರಾಗಿ, ಎಲ್ಲಕ್ಕೂ ಮಿಗಿಲಾಗಿ ಒಳ್ಳೆಯ ಆದರ್ಶ ಪತಿಯಾಗಿ ತಂದೆಯಾಗಿ ಸದ್ಗೃಹಸ್ಥರಾಗಿ ಬಾಳಿದ,

ಬಾಳುತ್ತಿರುವ ಈ ಕಾರಂತರು ನೂರಾರು ವ್ಯಕ್ತಿಮುಖದಿಂದ ನಾಡನ್ನು ವಿಸ್ಮಯ ಗೊಳಿಸುತ್ತಿದ್ದಾರೆ. ಕಾರಂತರ ನಿಜವಾದ ವ್ಯಕ್ತಿತ್ವ ಇದು ಮಾತ್ರ ಎಂದು ಯಾರೂ ಹೇಳಲುಬಾರದು. ಆದ್ದರಿಂದಲೇ ಅವರನ್ನು ಶ್ರೇಷ್ಠ ಕಾದಂಬರಿಕಾರರು ಎಂಬೊಂದು ದೃಷ್ಟಿಯಿಂದ ನೋಡುವುದು ಅಪೂರ್ಣವಾಗುತ್ತದೆ. ಅವರ ಈ ಬಹುಮುಖವಾದ ಕಾರ್ಯದ ಹಿಂದೆ ನಿಂತು ಅವರನ್ನು ಆಡಿಸುತ್ತಿರುವ ಶಕ್ತಿ ಅಮೇಯವಾದುದೆ ಸರಿ. ಆ ಅದ್ಭುತ ಶಕ್ತಿಯೊಡನೆ ಅದಮ್ಯಸಾಹಸವೂ ಸೇರಿಕೊಂಡಿದೆ. ಸಾಗರ ಪರ್ವತಗಳ ನಡುವೆ ಹುಟ್ಟಿ ಬೆಳೆದು ಕಣ್ತೆರೆದು ಬಾಳುತ್ತಿರುವ ಕಾರಂತರಿಗೆ ಈ ಸಾಹಸ ಶಕ್ತಿಗಳು ಬಂದುದು ಆಶ್ಚರ್ಯವೇನಲ್ಲ. ಅತ್ತಕಡೆ ಕಡಲು ತನ್ನ ಅಪಾರ ರುಂದ್ರ ಮಹತ್ತನ್ನು ತೆರೆದು ತೋರಿ, ಈ ಕಡೆ ಮಹೋನ್ನತ ಪರ್ವತಶ್ರೇಣಿಗಳು ಮೇಲೆದ್ದು ಬಾನೆತ್ತರವೂ ನಿಮಿರಿ ಮುಡಿಬಾಗದೆ ನಿಂತುಕೊಂಡು ಅವರಲ್ಲಿನ ಸುಪ್ತಮಹಾಶಕ್ತಿಯನ್ನು ಕೆರಳಿಸಿ ಅರಳಿಸಿದಂತೆ ಕಾಣುತ್ತದೆ. ಆ ನಾಡಿನಲ್ಲಿ ಹರಿಯುವ—ಬೇಸಿಗೆಯಲ್ಲಿ ಸತ್ತುಹೋಗಿ, ಮಳೆಗಾಲದಲ್ಲಿ ಹುಟ್ಟಿಕೊಂಡು ತಾರುಣ್ಯಪಡೆದು ಕೊಬ್ಬಿ ಉಬ್ಬಿ ಹರಿಯುವ—ಆ ನದಿಗಳ ಹುಚ್ಚು ಅದಮ್ಯತೆ ಆ ಪರ್ವತ ಕಂದರಗಳನ್ನು ಮುಚ್ಚಿಕೊಂಡಿರುವ ಅರಣ್ಯಗಳ ಅಭೇದ್ಯತೆ ಎಲ್ಲವೂ ಅವರ ಸಾಹಸಕ್ಕೆ ಸವಾಲಾಗಿ ನಿಂತಂತೆ ತೋರುತ್ತದೆ. ಹೀಗಾಗಿ ಕಾರಂತರು ಸಹ್ಯಾದ್ರಿ ಪರ್ವತದ ಪೃಥುಲೋನ್ನತವಾದ 'ಸಾಣೆಕಲ್ಲಿನ' ಮೇಲೆ ಸಾಗರತೀರ್ಥ ಜಲವನ್ನು ಎರೆದುಕೊಂಡು ತಮ್ಮ ಬದುಕನ್ನು ಶ್ರೀಗಂಧವಾಗಿ ತೇಯುತ್ತಿದ್ದಾರೆ; ಅದರಿಂದ ನಾಡಿನಲ್ಲಿ ಗಂಧದ ಹೊನಲನ್ನು ಗಂಧಾನಿಲವನ್ನು ಹರಿಸಿದ್ದಾರೆ ಸೂಸಿದ್ದಾರೆ. ಹಾಗೂ ತಮ್ಮ ಬದುಕನ್ನು ನುಣುಪಾಗಿ ಸುಗಂಧಮಯ ವಾಗಿ ಮಾಡಿಕೊಂಡಿದ್ದಾರೆ. ಈ ವ್ಯಕ್ತಿ ಈ ನಾಡಿನ ಪುಣ್ಯ, ಈ ನಾಡಿನ ಪ್ರಕೃತಿಯ ಒಂದು ಸೆರಗು.

ಇವರ ಜೀವನದ ಅತಿಸ್ಥೂಲ ರೇಖೆಯನ್ನು ಕಂಡವರಿಗೂ ಅದ್ಭುತವಾದ ಅನು ಭವವಾದೀತು. ಕೆಲವರಿಗೆ ಅವರ ಸಾಹಸ ಬರಿಯ ಹುಡುಗಾಟವಾಗಿ ಅನಿಸಿದರೂ ಆಶ್ಚರ್ಯವೇನಿಲ್ಲ. ಅಂತಹವರಿಗೆ ಯಾವ ಸಾಹಸವೂ ಬೆಪ್ಪುತನವೆ ಸರಿ. ರಾಮೇಶ್ವರದ ಬೃಹದ್ ದೇವಾಲಯ ಮಹಾಸೃಷ್ಟಿಯನ್ನು ನೋಡಿದಾಗ, ತಂಜಾವೂರಿನ ಆ ಭವ್ಯೋನ್ನತವಾದ ಗೋಪುರದ ಮೇಲಿರುವ ಆ ಗುರುಭಾರದ ಅಖಂಡ ಶಿಲೆಯನ್ನು ಕಂಡಾಗ ಯಾರಿಗೂ ಆಶ್ಚರ್ಯವಾಗುತ್ತದೆ. "ಆ ಕಲ್ಲು ಆ ಸುತ್ತಣ ಸಮೀಪದಲ್ಲೆಲ್ಲೂ ದೊರೆಯುವಂತಿಲ್ಲ, ರಾಮೇಶ್ವರಕ್ಕಂತೂ ಸುತ್ತಲೂ ಸಾಗರವಿದೆ—ಹೀಗಿದ್ದೂ ಆ ಭಾರದ ಆ ಗಾತ್ರದ ಕಲ್ಲುಗಳನ್ನು ಹೇಗೆ ತಂದರು, ಹೇಗೆ ಸಾಗಿಸಿದರು, ಹೇಗೆ ಮೇಲೇರಿಸಿ ದರು," ಎಂದು ಶಿಲ್ಪಿಗೆ, ಯಂತ್ರಜ್ಞನಿಗೆ, ಸಾಹಸಿಗೆ ಪ್ರಶ್ನೆ ಮೂಡಿದರೆ; 'ಏಕೆ ಈ

ಎಲ್ಲ ಹುಚ್ಚು ಸಾಹಸ' ಎಂದು ಕೆಲವು ಲೆಕ್ಕಾಚಾರದ ಕೀರ್ತಿಜಾತರಿಗೆ ಅನ್ನಿಸ ಬಹುದು. ತಪ್ಪೇನೂ ಇಲ್ಲ. ಎಲ್ಲ ಸಾಹಸಕ್ಕೂ ಸಿದ್ಧಿಯೆ ಫಲವಾಗಬೇಕು ಎಂದರೆ ಸಿದ್ಧಿ ಯಾವುದೊ ತಿಳಿಯುವುದಿಲ್ಲ. ಕಾರಂತರ ಜೀವನ ದ್ರಾವಿಡ ಶಿಲ್ಪ, ಹೊಯ್ಸಳ ಶಿಲ್ಪವಲ್ಲ. ಆದುದರಿಂದಲೆ, ಅವರ ಸಮಗ್ರ ಜೀವನದರ್ಶನದಿಂದಾಗುವ ಅದ್ಭುತಾನುಭವ ಅವರ ಶ್ರೇಷ್ಠ ಕೃತಿಗಳಲ್ಲಿ ಒಮ್ಮೊಮ್ಮೆ ಆದರೂ ಆ ಯಾವ ಕೃತಿಯೂ ಸಮಗ್ರವಾಗಿ ತೋರಲಾರದಂತಹ ಕಟ್ಟು ಹಿಡಿಯಲಾರದಂತಹ ವ್ಯಕ್ತಿತ್ವ ಅವರದು. ಈ ವಯಸ್ಸಿ ನಲ್ಲಿ ಇಷ್ಟು ಮಾಡಿದ ಈ ವ್ಯಕ್ತಿ ಮುಂದೇನು ಮಾಡುತ್ತಾರೆ, ಕಾದು ನೋಡಿಯೆ ಅರಿಯಬೇಕು. ಅವರ ಬದುಕೆಲ್ಲ ಪ್ರಶ್ನಾರ್ಥಕ ಚಿಹ್ನೆ ಆಶ್ಚರ್ಯಾರ್ಥಕ ಚಿಹ್ನೆಗಳ ಮಾಲೆ. ನಮ್ಮ ವಿಶ್ವವಿದ್ಯಾನಿಲಯದ ಮುಂದಿರುವ ಆ ಮಹಾಸಂಕೇತದ ನೆನಪಾಗು ತ್ತದೆ ಕಾರಂತರಂತಹವರ ಜೀವನವನ್ನು ಕಂಡಾಗ. "ಹೀಗೇಕೆ ಮಾಡಹೋಗು ತ್ತಾರೆ ಇವರು?" ಎಂಬ ಪ್ರಶ್ನೆಯನ್ನು ಮೊದಲು ಹಾಕಿಸುವ ಆ ಅವರ ಸಾಹಸ "ಅಃ! ಹೀಗೆ ಮಾಡಬಹುದೆಂದೇ ತಿಳಿದಿರಲಿಲ್ಲವಲ್ಲ! ಎಷ್ಟು ಅಸಾಧಾರಣ! ಎಷ್ಟು ಅಪೂರ್ವ ಇದು!" ಎನ್ನುವಂತಹ ಆಶ್ಚರ್ಯಾರ್ಥಕ ಚಿಹ್ನೆಯೊಡಗೂಡಿದ ಉತ್ತರವನ್ನು ನೀಡುತ್ತದೆ ತುದಿಯಲ್ಲಿ. ಅವರ ಒಂದೊಂದು ಸಾಹಸೋದ್ಯಮದ ಪ್ರಾರಂಭಾಂತ್ಯದಲ್ಲಿ ಇಂತಹ ಒಂದೊಂದು ಪ್ರಶ್ನಾಶ್ಚರ್ಯ ಚಿಹ್ನಗಳನ್ನು ಕಾಣುತ್ತೇವೆ. ಅವರ ಸಮಗ್ರ ಜೀವನವೆ ಅಂತಹ ಪ್ರಶ್ನಾಶ್ಚರ್ಯ ಮಹಾಚಿಹ್ನ ಸಂಕೇತವಾಗಿದೆ.

ಮೊನ್ನೆ ಮೈಸೂರಿನ ಪುರಜನರು ಕಾರಂತರನ್ನು ಸನ್ಮಾನಿಸಿದರು. ಆ ಸಮಾರಂಭ ದಲ್ಲಿ ಶ್ರೀ ತೀ. ನಂ. ಶ್ರೀ. ಅವರು, ಶ್ರೀ ವಿ. ಸೀ. ಅವರು, ಶ್ರೀ ಎಸ್. ವಿ. ರಂಗಣ್ಣ ನವರು, ಶ್ರೀ ವಿ. ಎಂ. ಇನಾಂದಾರರು ಕಾರಂತರನ್ನು ಕಾರಂತರ ಕೃತಿಯನ್ನು ಕುರಿತು ಮಾತನಾಡಿದರು. ಗಮನಿಸಬೇಕಾದ ಒಂದಂಶವೆಂದರೆ ಸನ್ಮಾನ ಸಮಿತಿಯವರು ಕಾರಂತರಿಗೆ ಅಶೋಕಸ್ತಂಭವನ್ನು ವಲ್ಲಿಯೊಂದನ್ನು ಅರ್ಪಿಸಿ ಅವರ ಶ್ರೀಮತಿಯವರಿ ಗೆಂದು ಪೀತಾಂಬರವನ್ನು ಉಡುಗೊರೆಯಾಗಿ ಕೊಟ್ಟರು. ಅದು ಅರ್ಥಪೂರ್ಣ ವಾಗಿತ್ತು. ಶ್ರೀ ವಿ. ಸೀ. ಅವರು ಅದರ ಔಚಿತ್ಯವನ್ನು ಕುರಿತು ನಾಲ್ಕು ಮಾತನಾಡಿ ದರು. ಶ್ರೀ ಕಾರಂತರೇ ತಮ್ಮ ಮಾತನ್ನು ಆ ಮಾತಿನಿಂದಲೆ ಆರಂಭಿಸಿದರು. ತಮ್ಮ ಯಾವುದೊ ಸಾಹಸವನ್ನು ಮೆಚ್ಚಿ ಬಂದ ಆ ಸತಿ ತಮ್ಮಲ್ಲಿರುವ ಕಲಾವಿದನ ಎಲ್ಲ ಓರೆಕೋರೆಗಳನ್ನೂ ತಾಳಿಕೊಂಡು ತಿದ್ದಿಕೊಂಡು ತಮ್ಮನ್ನು ನಡೆಸುತ್ತಿರುವುದಾಗಿ ಹಾರ್ದಿಕವಾಗಿ ಮಾತನಾಡಿದರು. ಶ್ರೀ ಕಾರಂತರ ಈ ಸಾಹಸ ಸಾಧನೆ ಸಿದ್ಧಿಗಳಿಗೆ ಬಹುಮಟ್ಟಿಗೆ ಕಾರಣವಾಗಿ ನೆರವಾಗಿರುವ ಅವರ ಶ್ರೀಮತಿ ಅವರಿಗೂ ಈ ಸನ್ಮಾನ ಸಲ್ಲುತ್ತದೆ ಎಂದರೆ ಯಾರೂ ಊಹು, ಎನ್ನುವುದಿಲ್ಲ. ಶ್ರೀ ಕಾರಂತರ, ಶ್ರೀಮತಿ ಲೀಲಾ

ಕಾರಂತರ ಹಾಗೂ ಅವರ ಮಕ್ಕಳ ಆಯುರಾರೋಗ್ಯ ಶ್ರೀಯನ್ನು ಭಗವಂತನು ವರ್ಧಿಸಲಿ, ಅವರಿಂದ ನಾಡಿಗೆ ಇನ್ನೂ ಮಹತ್ಕಾರ್ಯ ನಡೆಯುವಂತೆ ಮಾಡಲಿ.

ಭಾಷಾ ಮಾಧ್ಯಮವನ್ನು ಕುರಿತು ಉಪಕುಲಪತಿ ಶ್ರೀ ಪಾವಟೆ ಅವರು

[೧೯೫೯ ರ ಡಿಸೆಂಬರ್ ೧೮ ರಂದು ಬರೋಡದಲ್ಲಿ ನಡೆದ ' ಇಂಟರ್ ಯೂನಿವರ್ಸಿಟಿ ಬೋರ್ಡ್ 'ನ ಮೂವತ್ತೈದನೆ ವಾರ್ಷಿಕ ಸಭೆಯಲ್ಲಿ ಕರ್ಣಾಟಕ ವಿಶ್ವವಿದ್ಯಾನಿಲಯದ ಉಪಕುಲಪತಿ ಶ್ರೀ ಡಿ. ಸಿ. ಪಾವಟೆಯವರು ಮಾಡಿದ ಅಧ್ಯಕ್ಷ ಭಾಷಣದಿಂದ ಈ ಭಾಗವನ್ನು ಆರಿಸಿಕೊಟ್ಟಿದ್ದೇವೆ.]

" ಶಿಕ್ಷಣಮಾಧ್ಯಮದ ಸಮಸ್ಯೆ ಅನೇಕ ತೊಡಕುಗಳಿಂದ ಕೂಡಿದೆ ; ಅವುಗಳಲ್ಲಿ ಕೆಲವು ಅಪರಿಹಾರ್ಯವಾಗಿ ತೋರುತ್ತವೆ. ಆದುದರಿಂದ ಈ ಸಮಸ್ಯೆಯನ್ನು ಎದುರಿಸಬೇಕಾದುದು ಅತ್ಯಂತ ಮುಖ್ಯವಾಗಿದೆ. ಏಕೆಂದರೆ, ಇದರ ಶೀಘ್ರಪರಿಹಾರದ ಮೇಲೆ ನಮ್ಮ ಶಿಕ್ಷಣದ ಭವಿಷ್ಯ ನಿಂತಿದೆ. ಶಿಕ್ಷಣಮಾಧ್ಯಮದ ಸಮಸ್ಯೆಯ ತಂಟೆಗೆ ಹೋಗದೆ ಸುಮ್ಮನಿದ್ದರೆ ಅದು ತನ್ನಷ್ಟಕ್ಕೆ ತಾನೆ ಬಗೆಹರಿಯುವುದೆಂದು ಯೋಚಿಸುವ ಪ್ರವೃತ್ತಿಯೊಂದು ನಮ್ಮ ದೇಶದಲ್ಲುಂಟು. ಇದಕ್ಕಿಂತ ಹೆಚ್ಚು ಅಪಾಯಕರವಾದ ಭ್ರಾಂತಿ ಇನ್ನೊಂದಿಲ್ಲ. ಪರಿಹಾರದ ಹಾದಿಯಲ್ಲಿ ವಿವಿಧವಾದ ಅಡ್ಡಿಗಳಿವೆ. ಮೊದಲನೆಯದು ನಮ್ಮ ಆಂತರಿಕವಾದ ಮಂದಗಾಮಿ ಪ್ರವೃತ್ತಿ (Conservation). ಅಲ್ಲದೆ, ಪ್ರಜಾಸತ್ತಾತ್ಮಕ ಪರಿವರ್ತನೆಯ ಮಂದಗತಿಯೂ ಸೇರಿದೆ. ಪ್ರಾಯಶಃ ಶಕ್ತಿಯುತವಾದ, ಅಪ್ರಜ್ಞಾಪೂರ್ವಕವಾಗಿಯೆ ಕೆಲಸಮಾಡುವ ಪಟ್ಟಭದ್ರ ಹಿತಗಳೂ (Vested interests) ಇಲ್ಲಿವೆ. ಹೊಸದೊಂದು ಮಾಧ್ಯಮದ ಮೂಲಕ ಬೋಧಿಸಲು ಅಧ್ಯಾಪಕರೂ ಅಸಮ್ಮತಿ ಸೂಚಿಸುತ್ತಾರೆ. ದೇಶದ ಹಲವು ಭಾಗಗಳಲ್ಲಿ ಹಿಂದಿಗೆ ಪ್ರಬಲವಾದ ಪ್ರತಿಭಟನೆಯಿದೆ. ಪ್ರಾದೇಶಿಕ ಅಥವಾ ರಾಷ್ಟ್ರೀಯ ಮಾಧ್ಯಮವನ್ನು ಕೂಡಲೆ ಜಾರಿಗೆ ತರಬೇಕಾದ ಪಕ್ಷದಲ್ಲಿ ಅಧ್ಯಾಪಕರನ್ನು ಹೊಸದಾಗಿ ನೇಮಿಸುವ ಸಮಸ್ಯೆ ಹುಟ್ಟುತ್ತದೆ. ಪ್ರತಿಯೊಂದು ಪ್ರಾಂತ್ಯದಲ್ಲೂ ಭಾಷಾ ಅಲ್ಪಸಂಖ್ಯಾತರ ಸಮಸ್ಯೆಯಿರುತ್ತದೆ. ಇದು ಆಡಳಿತದ ಭಾಷೆ, ಪಬ್ಲಿಕ್ ಸರ್ವಿಸ್ ಕಮಿಷನ್‌ಗಳ ಮಟ್ಟದಲ್ಲಿ ನಡೆಯುವ ಪರೀಕ್ಷೆಗಳ ಭಾಷೆ—ಇವುಗಳೊಡನೆಯೂ ನಿಕಟ ಸಂಬಂಧ ಹೊಂದಿದೆ. ಆದರೆ ಅಡ್ಡಿಗಳೇನೇ ಇರಲಿ, ವಿದ್ಯಾರ್ಥಿಯು ಹೈಸ್ಕೂಲ್‌ನಿಂದ ಕಾಲೇಜಿಗೆ ಹೋಗುವಾಗ ಶಿಕ್ಷಣಮಾಧ್ಯಮವನ್ನು ಪ್ರಾದೇಶಿಕ ಭಾಷೆಯಿಂದ ಇಂಗ್ಲಿಷಿಗೆ ಬದಲಿಸುವುದರಿಂದ ಉಂಟಾದ ಪರಿಸ್ಥಿತಿಯಂತೂ ದುರಂತದಲ್ಲಿ ಕಡಮೆಯೇನಲ್ಲ. ಶೈಕ್ಷಣಿಕ ನೀತಿಯ ನಿರ್ಧಾರದ ಹೊಣೆಯನ್ನು ವಿವಿಧ ಘಟ್ಟಗಳಲ್ಲಿ

ವಿವಿಧ ಶಿಕ್ಷಣಸಂಸ್ಥೆಗಳ ಕೈಗೇ—ಅವುಗಳಲ್ಲಿ ಪರಸ್ಪರ ಸಂಪರ್ಕವಿಲ್ಲದಿರುವಾಗ— ಒಪ್ಪಿಸಿದ್ದು ವಿಷಾದನೀಯವಾದ ತಪ್ಪು ಎನ್ನುವುದರಲ್ಲಿ ಈಗ ಸಂಶಯವಿಲ್ಲ. ಇದರ ಪರಿಣಾಮವೇನೆಂದರೆ—ಅಧ್ಯಾಪಕರ ಮತ್ತು ವಿದ್ಯಾರ್ಥಿಗಳ ಪಾಲಿಗೆ ಬಂದ ತೀವ್ರ ನಿರಾಶೆಯ ಭಾವನೆ. ಇದರ ಜೊತೆಗೆ, ಕಾಲದ ಮತ್ತು ಶಕ್ತಿಯ ಅಪವ್ಯಯವಾಗುತ್ತಿದೆಯೆಂಬ ಭಾವನೆ ಅಧ್ಯಾಪಕನಲ್ಲೂ, ಅಪಮಾನ, ಆತ್ಮವಂಚನೆ ಮತ್ತು ಅಶ್ರದ್ಧೆಯ ಭಾವನೆಗಳು ವಿದ್ಯಾರ್ಥಿಗಳಲ್ಲೂ ಬೆಳೆಯುವಂತಾಯಿತು. **ಇಂದಿನ ವಸ್ತುಸ್ಥಿತಿಯಲ್ಲಿ ನಮ್ಮ ಯುವಜನಾಂಗವನ್ನು ಕಾಲೇಜುಗಳಲ್ಲಿ ಇಂಗ್ಲಿಷ್ ಮಾಧ್ಯಮಕ್ಕೆ ಗುರಿಮಾಡುವುದಂತೂ ಸುವ್ಯಕ್ತ ಅಮಾನುಷತೆ ಎಂದು ಸ್ಪಷ್ಟವಾಗಿದೆ.** ಇದರ ಚೇಷ್ಟೆ ಶುದ್ಧ ಇಂಗ್ಲಿಷ್ ವಿಷಯಗಳಲ್ಲಿ ಮಾತ್ರ ಕೇಂದ್ರೀಕೃತವಾಗಿರದೆ, ಎಲ್ಲ ವಿಷಯಗಳ ಮೇಲೂ ತನ್ನ ಬಾಹುಗಳನ್ನು ಚಾಚುತ್ತದೆ. ವಿಷಯಗ್ರಹಣದ ಮಟ್ಟ ಇಷ್ಟು ಅವನತಿಯಲ್ಲಿರುವಾಗ, ಬರವಣಿಗೆಯಲ್ಲಿ ಪವಾಡಗಳನ್ನು ನಿರೀಕ್ಷಿಸುವಂತಿಲ್ಲ. ಆದುದರಿಂದ ವಿದ್ಯಾರ್ಥಿಯು 'ನೋಟ್ಸು,' 'ಗೈಡು'—ಇತ್ಯಾದಿ ಸುಲಭೋಪಾಯಗಳನ್ನು ಅವಲಂಬಿಸುವ ಸ್ಥಿತಿ ಬರುತ್ತದೆ. ಈ ಕಡೆಯಲ್ಲಿ ಅವನು ಪದವೀಧರನಾದಾಗ ಅವನ ಎಲ್ಲ ವಿಷಯಗಳ ಪರಿಜ್ಞಾನ ಆಳವಿಲ್ಲದ್ದೂ, ಅಸ್ಪಷ್ಟವೂ ಆಗಿರುತ್ತದೆ. ಇದು ಸ್ಥೂಲವಾಗಿ ಅಧ್ಯಾಪಕರಿಂದಲೂ, ಪಬ್ಲಿಕ್ ಸರ್ವಿಸ್ ಕಮಿಷನ್ ಮುಂತಾದ ಉದ್ಯೋಗದಾಯಕ ಸಂಸ್ಥೆಗಳಿಂದಲೂ ಕೇಳಿಬರುವ ಆಕ್ಷೇಪಣೆಗಳ ಮೊತ್ತ. **ನಾವು ಶಿಕ್ಷಣದ ಮಟ್ಟವನ್ನು ಕುರಿತು ಮಾತನಾಡುವಾಗ ಪ್ರತ್ಯಕ್ಷವಾಗಿಯೋ ಪರೋಕ್ಷವಾಗಿಯೋ ಇಂಗ್ಲಿಷಿನ ಮಟ್ಟವನ್ನೇ ಉದ್ದೇಶಿಸುತ್ತೇವೆ.** ಇಂಗ್ಲಿಷನ್ನು ಕುರಿತು ರಾಷ್ಟ್ರನೀತಿಯ ಬಗ್ಗೆ ನಮ್ಮ ಪ್ರಧಾನಿ ೭-೮-೫೯ ರಂದು ಲೋಕಸಭೆಯಲ್ಲಿ ನೀಡಿದ ಹೇಳಿಕೆ ಆ ವಿಚಾರವನ್ನು ಸ್ಪಷ್ಟಪಡಿಸುತ್ತದೆ. ಅವರು ಹೇಳಿದರು: 'ನಿಮಗೆ ಇಷ್ಟವಿರಲಿ ಇಲ್ಲದಿರಲಿ, ಭಾರತದಲ್ಲಿ ಶಿಕ್ಷಣಮಾಧ್ಯಮವು ಪ್ರಾದೇಶಿಕಭಾಷೆಗಳಲ್ಲಿ ಬೆಳೆಯುತ್ತಿದೆ. ಇಂಗ್ಲಿಷ್ ಭಾಷೆ ಹಿಂದೆ ಶಿಕ್ಷಣ ಮಾಧ್ಯಮವಾಗಿದ್ದುದೇ ಅದರ ನಿಜವಾದ ಪ್ರಾಮುಖ್ಯವಾಗಿತ್ತು. ನಾವು ಇಂಗ್ಲಿಷಿನಿಂದ ಹೊರಬರಲಾರೆವು. ಆದರೆ ಮುಂದಿನ ಜನಾಂಗ ಅದರಿಂದ ಹೊರಬರುತ್ತದೆ; ಅದಕ್ಕಿಂತ ಮುಂದಿನ ಜನಾಂಗವಂತೂ ಸಂಪೂರ್ಣವಾಗಿ ಹೊರಬರುವುದು.' ಪರಿಸ್ಥಿತಿ ಹೀಗಿರುವಾಗ, ನಮ್ಮ ವಿಶ್ವವಿದ್ಯಾನಿಲಯಗಳು ಹೊರಬರುತ್ತಿರುವ ಜನಾಂಗದ ಹಿತಕ್ಕಾಗಿ ಒಮ್ಮತದಿಂದ ಏಕೆ ಕ್ರಮ ಕೈಗೊಳ್ಳಬಾರದೆಂದು ಯಾರಾದರೂ ಆಶ್ಚರ್ಯಪಡುತ್ತಾರೆ. ಆದರೆ ವಿಶ್ವವಿದ್ಯಾನಿಲಯಗಳು ಸಮಾಜದ, ಅದರಲ್ಲೂ ಮುಖ್ಯವಾಗಿ ಯುವ ಪದವೀಧರರಿಗೆ ಮುಂದೆ ಉದ್ಯೋಗ ನೀಡುವವರ ಆವಶ್ಯಕತೆಗಳನ್ನೂ

ಗಮನದಲ್ಲಿಟ್ಟುಕೊಳ್ಳಬೇಕು. ರಾಜ್ಯಸರ್ಕಾರಗಳು ಮುಂದಿನ ಹತ್ತು ವರ್ಷಗಳೊಳಗೆ ಪ್ರಾದೇಶಿಕ ಭಾಷೆಗಳನ್ನು ಸಂಪೂರ್ಣವಾಗಿ ಆಡಳಿತದ ಭಾಷೆಗಳನ್ನಾಗಿ ಮಾಡುವ ಸಂಭವವಿದೆ. ಹಾಗಾದರೆ, ಪಬ್ಲಿಕ್ ಸರ್ವಿಸ್ ಕಮಿಷನ್‌ಗಳೂ ಕೂಡ ತಮ್ಮ ಪರೀಕ್ಷೆಗಳನ್ನು ಪ್ರಾದೇಶಿಕ ಭಾಷೆಯ ಮೂಲಕವೆ ನಡೆಸಬೇಕು. ಏಕೆಂದರೆ, ಸರ್ಕಾರಿ ಉದ್ಯೋಗಕ್ಕೆ ಬೇಕಾದ ದಕ್ಷತೆ ಮತ್ತು ಗುಣಗಳನ್ನು ವಿದೇಶೀಯ ಭಾಷೆಯೊಂದರ ಮೇಲಿನ ಪ್ರಭುತ್ವದಿಂದ ಅಳೆಯುವುದು ಅಶಕ್ಯ. ಆದುದರಿಂದ ಮುಂದಿನ ಹತ್ತು ವರ್ಷಗಳ ಅವಧಿಯಲ್ಲಿ ನಮ್ಮ ವಿಶ್ವವಿದ್ಯಾನಿಲಯಗಳೂ ಕೂಡ ಪ್ರಾದೇಶಿಕ ಭಾಷೆಗಳನ್ನು ಶಿಕ್ಷಣಮಾಧ್ಯಮವನ್ನಾಗಿ ವಿಧಿಸುವುದು ಕ್ಷೇಮಕರ ಮತ್ತು ಅಪೇಕ್ಷಣೀಯ. ಇದು ಸಹಜವೆಂದೂ ತರ್ಕಬದ್ಧವೆಂದೂ ತೋರಿದರೆ, ವಿಶ್ವವಿದ್ಯಾನಿಲಯಗಳು ಮುಖ್ಯವಾದ ಪಠ್ಯಪುಸ್ತಕಗಳನ್ನು ರಚಿಸುವ ಮತ್ತು ಪ್ರಾದೇಶಿಕ ಭಾಷೆಯಲ್ಲಿ ಬೋಧಿಸಬಲ್ಲ ಅಧ್ಯಾಪಕರನ್ನು ಪಡೆಯುವ ಕಾರ್ಯದಲ್ಲಿ ತೊಡಗಿ, ಹತ್ತು ವರ್ಷಗಳ ಅಂತ್ಯದಲ್ಲಿ ಪರಿವರ್ತನೆಗೆ ಸಿದ್ಧವಾಗಬೇಕು. ಇಂಗ್ಲಿಷನ್ನು ಸೆಕೆಂಡರಿ ಮಟ್ಟದಲ್ಲಾಗಲಿ, ಕಾಲೇಜುಗಳ ಮಟ್ಟದಲ್ಲಾಗಲಿ ಕಡೆಗಣಿಸಬೇಕೆಂಬುದು ಸರ್ವಥಾ ಇದರ ಅರ್ಥವಲ್ಲ. ಅದನ್ನು ಮೊದಲನೆಯ ಡಿಗ್ರಿವರೆಗೆ ಎಲ್ಲ ಘಟ್ಟಗಳಲ್ಲಿಯೂ ನಿರ್ಬಂಧ ವಿಷಯವನ್ನಾಗಿ ಇಟ್ಟುಕೊಳ್ಳಲೇಬೇಕು. ಪ್ರಾದೇಶಿಕ ಭಾಷೆಯ ಮೂಲಕ ನಿರ್ವಹಿಸಲು ಹೆಚ್ಚು ಕಠಿಣವಾದ ಎಂಜಿನಿಯರಿಂಗ್, ಲಾ ಮತ್ತು ವೈದ್ಯಕೀಯ—ಇವುಗಳಲ್ಲಿ ಮಾಧ್ಯಮದ ಪರಿವರ್ತನೆಗೆ ಇಪ್ಪತ್ತು ವರ್ಷಗಳ ಅವಧಿಯನ್ನು ಕೊಡಬಹುದು. ಸ್ನಾತಕೋತ್ತರ ಶಿಕ್ಷಣ ಮತ್ತು ಸಂಶೋಧನೆಯು ಆರಿಸಿದ ಕೆಲವರಿಗೆ ಮಾತ್ರ ಮೀಸಲಾದುದರಿಂದ, ಅದನ್ನು ಇಂಗ್ಲಿಷಿನ ಅಥವಾ ಹಿಂದಿಯ ಮೂಲಕ ನಡೆಸುವುದರಲ್ಲಿ ತೊಂದರೆಯೇನಿಲ್ಲ. ಹಾಗೆ ಮಾಡುವುದರಿಂದ ದೇಶಾದ್ಯಂತ ಅಧ್ಯಾಪಕರ ಮತ್ತು ವಿದ್ಯಾರ್ಥಿಗಳ ವಿನಿಮಯವೂ ಸಾಧ್ಯವಾಗುತ್ತದೆ. ಇಂಥ ಯಾವುದೆ ಒಂದು ಕ್ರಮವನ್ನು ಈ ಬೋರ್ಡು ಅಂಗೀಕರಿಸಿ ವಿಶ್ವವಿದ್ಯಾನಿಲಯಗಳಿಗೆ ಮಾರ್ಗದರ್ಶನ ಮಾಡಬೇಕೆಂದೂ, ಹಾಗೆ ಮಾಡುವುದರಿಂದ ವಿಶ್ವವಿದ್ಯಾನಿಲಯಗಳು ತಮಗೆ ತೋಚಿದಂತೆ ಅಯುಕ್ತ ಪ್ರಯೋಗಗಳಲ್ಲಿ ತೊಡಗುವುದನ್ನು ತಪ್ಪಿಸಬೇಕೆಂದೂ ನನಗೆ ತೋರುತ್ತದೆ. ಒಂದು ವಿಶ್ವವಿದ್ಯಾನಿಲಯದಿಂದ ಮತ್ತೊಂದಕ್ಕೆ ಮಟ್ಟದಲ್ಲಿ ವ್ಯತ್ಯಾಸಗಳಾಗುವುದು ಸಂಧಿಕಾಲದಲ್ಲಿ ಅನಿವಾರ್ಯ. ಹೋಗುತ್ತಿರುವ ಪದ್ಧತಿ ಪೂರ್ಣವಾಗಿ ಅಳಿದಿಲ್ಲ, ಬರುತ್ತಿರುವ ಕ್ರಮ ಪೂರ್ಣವಾಗಿ ನೆಲೆಗೊಂಡಿಲ್ಲ. ಇಲ್ಲಿದೆ ನಮ್ಮ ಇಂದಿನ ಹಲವು ತೊಡಕುಗಳ ವಿವರಣೆ.

"ನಾನು ಸ್ಥೂಲವಾಗಿ ಪ್ರಸ್ತಾಪಿಸಬೇಕಾದ ಮತ್ತೊಂದು ಅತಿಮುಖ್ಯವಾದ

ಸಮಸ್ಯೆ ವಿದ್ಯಾರ್ಥಿಗಳ ಶಿಸ್ತಿಗೆ ಸಂಬಂಧಿಸಿದೆ. ಶಿಸ್ತಿನ ಮಟ್ಟ ಇಳಿಯುತ್ತಿರುವುದರ ಕಾರಣಗಳು ಒಂದಲ್ಲ, ಎರಡಲ್ಲ; ಅವು ಸರಳವೂ ಅಲ್ಲ. ಅವು ನಮ್ಮ ಜೀವನದ ಉದ್ದಕ್ಕೂ—ಮನೆಯಿಂದ ಹಿಡಿದು ನಮ್ಮ ಸಾಮಾಜಿಕ ಮತ್ತು ರಾಷ್ಟ್ರೀಯ ಶಿಖರದವರೆಗೂ—ಹರಡಿವೆ. ವಿದ್ಯಾರ್ಥಿಗಳಲ್ಲಿ ಶಿಸ್ತು ಕೆಳಮಟ್ಟದಲ್ಲಿದ್ದರೆ, ನಮ್ಮ ಸಾರ್ವಜನಿಕ ಜೀವನದಲ್ಲಿ ಅದೇನೂ ಉತ್ತಮ ಮಟ್ಟದಲ್ಲಿಲ್ಲ—ಎಂಬುದನ್ನು ಒಪ್ಪಿಕೊಳ್ಳಬೇಕು. ನಾವು ಶೀಘ್ರವಾದ ರಾಜಕೀಯ ಮತ್ತು ಸಾಮಾಜಿಕ ಪರಿವರ್ತನೆಯ ಕಾಲದಲ್ಲಿ ಬದುಕುತ್ತಿದ್ದೇವೆ. ಯುವಕರು, ವೃದ್ಧರು—ಎಲ್ಲರೂ ಹೊಸ ಪ್ರಭಾವಗಳಿಗೆ ಗುರಿಯಾಗುತ್ತಿದ್ದಾರೆ; ಇವುಗಳಲ್ಲಿ ಕೆಲವು ಪ್ರಭಾವಗಳನ್ನು ಜೀರ್ಣಿಸಿಕೊಳ್ಳುವುದು ಕಷ್ಟವಾಗಿದೆ. ದೀರ್ಘಕಾಲ ನಿಂತ ನೀರಿನಂತಿದ್ದ ನಮ್ಮ ಸಾಮಾಜಿಕ ವ್ಯವಸ್ಥೆಯ ಮಥನದಿಂದ ಭವಿಷ್ಯದ ಉಜ್ವಲವಾದ ಆಶೆ ಹುಟ್ಟುವಂತೆಯೇ ತಕ್ಷಣದ ಕೆಲವು ಅಪಾಯಗಳೂ ಉದ್ಭವಿಸುತ್ತವೆ. ಸಂಕ್ಷಿಪ್ತವಾಗಿ ಹೇಳುವುದಾದರೆ, ನಾವು ತಪ್ಪುಗಳನ್ನು ತಿದ್ದಿಕೊಳ್ಳುವ, ಹೊಸ ಮೌಲ್ಯಗಳಿಂದ ಬೆಲೆಕಟ್ಟುವ, ಅಪಾಯಕರ ಪರಿವರ್ತನೆಯ ಮತ್ತು ಹೊಂದಾಣಿಕೆಯ ಯುಗದಲ್ಲಿದ್ದೇವೆ; ಈ ಕಾಲವು ವರ್ತಮಾನದ ಅನುಭವಗಳಿಂದ ಮತ್ತು ಭವಿಷ್ಯತ್ತಿನ ಸಾಧ್ಯತೆಗಳಿಂದ ಕೂಡಿರುವಂತೆಯೇ, ಸಮತೋಲನವಿಲ್ಲದ್ದೂ ಅನಿಶ್ಚಯದಿಂದ ಕೂಡಿದ್ದೂ ಆಗಿದೆ. ಇಂಥ ಪರಿಸ್ಥಿತಿಯಲ್ಲಿ ನಮ್ಮ ಯುವಜನಾಂಗದವರಿಗೆ ತಮ್ಮಲ್ಲಿ ಸ್ವಾತಂತ್ರ್ಯ, ಶಕ್ತಿಗಳು ಅಧಿಕವಾಗಿರುವಂತೆ ತೋರಿದರೆ ಆಶ್ಚರ್ಯಪಡಬೇಕಾಗಿಲ್ಲ. ನಮ್ಮ ಮುಂದಿರುವ ಸಮಸ್ಯೆಯೇನೆಂದರೆ, ಈ ಸ್ವಾತಂತ್ರ್ಯವನ್ನು ದಮನಮಾಡುವುದಾಗಲಿ, ಈ ಶಕ್ತಿಯನ್ನು ಕುಗ್ಗಿಸುವುದಾಗಲಿ ಅಲ್ಲ; ಆದರೆ ಈ ಶಕ್ತಿಯು ಪ್ರಯೋಜನಕಾರಿಯೂ ರಚನಾತ್ಮಕವೂ ಆದ ದಿಕ್ಕಿನಲ್ಲಿ ಹರಿಯುವಂತೆ ಮಾಡಬೇಕಾಗಿದೆ. ಯುವಜನಾಂಗವು ತನ್ನಲ್ಲಿ ಮತ್ತು ನಮ್ಮಲ್ಲಿ ಕಳೆದುಕೊಂಡಿರುವ ನಂಬಿಕೆಯನ್ನು ಮತ್ತೆ ಪಡೆಯುವಂತೆ ಮಾಡಬೇಕಾಗಿದೆ. **ಶಿಸ್ತಿನ ಸಮಸ್ಯೆ ಶಿಕ್ಷಣ ಮಾಧ್ಯಮದ ಸಮಸ್ಯೆಯೊಡನೆ ಹೆಣೆದುಕೊಂಡಿದೆ** ಎಂದೂ ನನಗೆ ತೋರುತ್ತದೆ. ಪ್ರೌಢ ಶಿಕ್ಷಣದಿಂದ ಲಾಭ ಪಡೆಯಲು ಅರ್ಹರಾದ ವಿದ್ಯಾರ್ಥಿಗಳು ಮಾತ್ರ ವಿಶ್ವವಿದ್ಯಾನಿಲಯಗಳಿಗೆ ಪ್ರವೇಶಿಸಲು ಸಾಧ್ಯವಾಗುವಂಥ ಪರಿಸ್ಥಿತಿಯನ್ನು ಕಲ್ಪಿಸಿದರೆ ಅವ್ಯವಸ್ಥೆ, ಅಪವ್ಯಯ, ನಿರಾಶೆ—ಇವೆಲ್ಲ ತಮ್ಮಷ್ಟಕ್ಕೆ ತಾವೆ ಕಡಮೆಯಾಗುತ್ತವೆ. ಹಾಗೆ ಮಾಡಿದರೆ, ಪ್ರೌಢ ವಿದ್ಯಾಭ್ಯಾಸದಲ್ಲಿ ಶ್ರದ್ಧೆಯ ಮತ್ತು ಬೌದ್ಧಿಕ ಜವಾಬ್ದಾರಿಯ ವಾತಾವರಣವನ್ನು ಸೃಷ್ಟಿಸಿದಂತಾಗುತ್ತದೆ. ನನ್ನ ವೈಯಕ್ತಿಕ ಅಭಿಪ್ರಾಯವೇನೆಂದರೆ, **ಭಾರತೀಯ ವಿದ್ಯಾರ್ಥಿಗಳು ಯಾವುದೇ ಶಿಕ್ಷಣಸಂಸ್ಥೆಯು ಪಡೆಯಬಹುದಾದ ಅತ್ಯುತ್ತಮ ಸಾಮಗ್ರಿ; ಆದರೆ ಅವರ**

ಕುಂದುಕೊರತೆಗಳನ್ನು ಅರಿತು, ಅವುಗಳನ್ನು ಜಾಗ್ರತೆ ನಿವಾರಿಸುವುದು ಮಾತ್ರ ನಮ್ಮ ಅವಶ್ಯಕರ್ತವ್ಯ."

ಕರ್ನಾಟಕ ವಿಶ್ವವಿದ್ಯಾಲಯದ ಉಪಕುಲಪತಿಗಳಾದ ಶ್ರೀ ಡಿ. ಸಿ. ಪಾವಟೆ ಅವರಂತಹ ಶಿಕ್ಷಣವೇತ್ತರ ಬಹು ವಿಚಾರಪ್ರಚೋದಕವಾದ ಸುದೂರದರ್ಶಿಯಾದ ಮೇಲಿನ ಮಾತುಗಳನ್ನು ನಾವು ಹೃತ್ಪೂರ್ವಕವಾಗಿ ಸ್ವಾಗತಿಸಿ ಅದಕ್ಕಾಗಿ ಅವರನ್ನು ಗೌರವಪೂರ್ವಕವಾಗಿ ವಂದಿಸುತ್ತೇವೆ. ಇನ್ನು ಮೇಲಾದಾರೂ ರಾಷ್ಟ್ರ ಹಿತಚಿಂತಕರು ಶಿಕ್ಷಣ ಶಾಸ್ತ್ರಜ್ಞರು ಅವರ ಅಮೋಘವಾದ ವಿಚಾರವನ್ನು ವೈದ್ಯವನ್ನು ಎಚ್ಚರಿಕೆಯನ್ನು ಗಮನಿಸಲೆಂದು ಹಾರೈಸುತ್ತೇವೆ. ಮೈಸೂರು ವಿಶ್ವವಿದ್ಯಾನಿಲಯ ಶಿಕ್ಷಣಮಾಧ್ಯಮ ವಿಷಯವಾಗಿ ಕೊನೆಯಿಲ್ಲದ ಫಲವಿಲ್ಲದ ಚರ್ಚೆಯಲ್ಲೆ ಕಾಲಹರಣ ಮಾಡದೆ ದಿಟ್ಟತನದಿಂದ ಕನ್ನಡ ಭಾಷಾ ಮಾಧ್ಯಮವನ್ನು ಮೂರು ವರ್ಷಗಳ ಹಿಂದೆಯೆ ಜಾರಿಗೆ ತಂದಿತು. ಪ್ರೀ-ಯೂನಿವರ್ಸಿಟಿ ಘಟ್ಟದಲ್ಲಿ ಮಾತ್ರವಲ್ಲದೆ ಡಿಗ್ರಿ ತರಗತಿಗಳ ಮಟ್ಟದಲ್ಲೂ ಕೆಲವು ಕಾಲೇಜುಗಳಲ್ಲಿ ಪಾಠಪ್ರವಚನಗಳು ಬಹು ಯಶಸ್ವಿಯಾಗಿಯೆ ನಡೆಯುತ್ತಿದೆ. ಮುಂದಿನ ವರ್ಷದಿಂದ ಕರ್ನಾಟಕ ವಿಶ್ವವಿದ್ಯಾಲಯವೂ ಅದೇ ಕ್ರಮವನ್ನು ಅನುಸರಿಸುತ್ತದೆಯೆಂದು ವರದಿಯಾಗಿದೆ. ಇದನ್ನು ಆನಂದದಿಂದ ಸ್ವಾಗತಿಸಿ ಆ ವಿಶ್ವವಿದ್ಯಾಲಯದ ಕಾರ್ಯ ದಿಗ್ದರ್ಶಕರೆಲ್ಲರಿಗೂ ಉಪಕುಲಪತಿಗಳಾದ ಶ್ರೀ ಪಾವಟೆ ಅವರಿಗೂ ನಾವು ಅಭಿನಂದನೆಗಳನ್ನು ಸಲ್ಲಿಸಿ ವಂದಿಸುತ್ತೇವೆ.

ಅಭಿನಂದನೆ

ಮೈಸೂರು ವಿಶ್ವವಿದ್ಯಾನಿಲಯವು ಈ ಕೆಳಕಂಡವರಿಗೆ ಅವರು ಬರೆದ ಮಹಾಪ್ರಬಂಧಗಳಿಗಾಗಿ ಡಾಕ್ಟರ್ ಆಫ್ ಫಿಲಾಸಫಿ ಡಿಗ್ರಿ (ಪಿಎಚ್. ಡಿ) ಯನ್ನು ನೀಡಿದೆ.

(೧) ಶ್ರೀ ಜಿ. ಎಸ್. ಶಿವರುದ್ರಪ್ಪ ಅವರು, "ಸೌಂದರ್ಯಬೋಧ–ಕನ್ನಡ ಕಾವ್ಯಗಳಲ್ಲಿ ಅದರ ಹೊಳಹು."

(೨) ಶ್ರೀ ಟಿ. ಜಿ. ಸಿದ್ಧಪ್ಪಾರಾಧ್ಯ ಅವರು, "ಶಕ್ತಿ ವಿಶಿಷ್ಟಾದ್ವೈತ"

(೩) ಶ್ರೀಮತಿ ಎಂ. ಎನ್. ತಂಗ ಅವರು, "Levels of Aspiration among the Factory Workers"

ಬಹು ವರ್ಷಗಳ ಸಂಶೋಧನೆಯನ್ನು ನಡೆಸಿ ಈ ವಿದ್ವತ್ಪದವಿಯನ್ನು ಸಂಪಾದಿಸಿರುವ ಈ ಮಹನೀಯರಿಗೆ ಹಾಗೂ ಶ್ರೀಮತಿ ಅವರಿಗೆ ನಾವು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇವೆ.

ಸಾದರ ಸ್ವೀಕಾರ

೧. **ಗೆಜ್ಜೆಯ ಕುಣಿತ** (ಸಾಮಾಜಿಕ ಕಾದಂಬರಿ)—ಲೇಖಕರು: ಶ್ರೀ ಕೆ. ರಾಮಕೃಷ್ಣ ಭಟ್ಟ; ಪ್ರಕಾಶಕರು: ಸೌಹಾರ್ದ ಸಾಹಿತ್ಯಮಾಲೆ, ಮಂಗಳೂರು ೧; ಪುಟಗಳು ೧೬೮; ಬೆಲೆ, ರೂ. ೧.೫೦.

೨. **ಜೀವನ ತೀರ್ಥ** (ಕವನ ಸಂಕಲನ)—ಕವಿ: ಶ್ರೀ ಕೋ. ಚೆನ್ನಬಸಪ್ಪ ಅವರು; ಪ್ರಕಾಶಕರು: ಸಜೀವ ಸಾಹಿತ್ಯಮಾಲೆ, ಬಳ್ಳಾರಿ; ಪುಟಗಳು ೬೦; ಬೆಲೆ, ರೂ. ೧.೦೦.

೩. **ಸಿರಿಗನ್ನಡ ಗ್ರಂಥಕರ್ತರ ಚರಿತ್ರಕೋಶ** (ಪ್ರಥಮ ಸಂಪುಟ ೧೮೫೦-೧೯೨೦)—ಲೇಖಕರು: ವೆಂಕಟೇಶ ಸಾಂಗಲಿ; ಪ್ರಕಾಶಕರು: ಉಷಾ ಸಾಹಿತ್ಯಮಾಲೆ, ಮೈಸೂರು; ಪುಟಗಳು ३३೭; ಬೆಲೆ, ರೂ. ೫.೦೦.

೪. **ಇಂದಿನ ವಿಜ್ಞಾನ ಮತ್ತು ನೀವು**—ಮೂಲ ಲೇಖಕರು: ಲಿನ್‌ಪೂಲ್; ಅನುವಾದಕರು: ಶ್ರೀ ಜಿ. ಆರ್. ಲಕ್ಷ್ಮಣರಾವ್; ಪ್ರಕಾಶಕರು: ಸಾಹಿತ್ಯ ಭಂಡಾರ, ಹುಬ್ಬಳ್ಳಿ; ಪುಟಗಳು ೧೪೨; ಬೆಲೆ, ರೂ. ೧.೫೦. ದಕ್ಷಿಣ ಭಾಷಾ ಸಂಸ್ಥೆಯ ಸಹಕಾರದೊಂದಿಗೆ ಪ್ರಕಟಿಸಲಾಗಿದೆ.

೫. **ಸೇತುವೆಯಲ್ಲಿ ಮರಣ ಕಾದಿತ್ತು**—ಮೂಲ ಲೇಖಕರು: ಥಾರ್ನ್‌ಟನ್ ವೈಲ್ಡರ್; ಅನುವಾದಕರು: ಸೇವ ನಮಿರಾಜಮಲ್ಲ; ಪ್ರಕಾಶಕರು: ಅಮೃತ ಪ್ರಕಾಶನ, ಮಂಗಳೂರು—೩; ಪುಟಗಳು ೧೩೦; ಬೆಲೆ, ರೂ. ೧.೨೫. ದಕ್ಷಿಣ ಭಾಷಾ ಪುಸ್ತಕ ಸಂಸ್ಥೆಯ ಆಶ್ರಯದಲ್ಲಿ ಪ್ರಕಟಿತ.

೬. **ಏರಿಬಂದ ನೀರು**—ಲೇಖಕರು: ಶ್ರೀ ಕೆ. ರಾಮಕೃಷ್ಣಭಟ್ಟರು; ಪ್ರಕಾಶಕರು: ಸೌಹಾರ್ದ ಸಾಹಿತ್ಯಮಾಲೆ, ಮಂಗಳೂರು ೧; ಪುಟಗಳು ೯೪; ಬೆಲೆ, ರೂ. ೧.೦೦.

೭. **ಸುಧಾ ತರಂಗ** (ಕಥಾ ಸಂಕಲನ)—ಲೇಖಕರು: ಶ್ರೀ ಉಮಾಶಂಕರ; ಪ್ರಕಾಶನ: ಸ್ವರ್ಣಕಿರಣ ಪ್ರಕಾಶನ, ತುಮಕೂರು; ಪುಟಗಳು ೧೩೨; ಬೆಲೆ, ರೂ. ೧.೫೦.

೮. **ಕಲಾಯೋಗಿ** (ನಾಟಕಗಳು)—ಲೇಖಕರು: ಶ್ರೀ ಎಚ್. ದೇವಿರಪ್ಪನವರು; ಪ್ರಕಾಶನ: ಶ್ರೀ ಗೌರೀಶಂಕರ ಬುಕ್ ಡಿಪೋ, ಮೈಸೂರು; ಪುಟಗಳು ೧೦೬; ಬೆಲೆ, ರೂ. ೧.೫೦.

೯. **ನಿರ್ಮಲ ಭಾರತೀ** (ಮಕ್ಕಳ ಮಹಾ ಭಾರತ)—ಲೇಖಕರು: ಶ್ರೀ ಎ. ಆರ್. ಕೃಷ್ಣಶಾಸ್ತ್ರಿಗಳು; ಪ್ರಕಾಶನ: ಎ. ಆರ್. ಕೃಷ್ಣಶಾಸ್ತ್ರೀ, ಎಂ.ಎ. ೩೧, ಎರಡನೆಯ ಕ್ರಾಸ್ ರಸ್ತೆ, ಬಸವನಗುಡಿ, ಬೆಂಗಳೂರು—೪; ಪುಟಗಳು ೧೦೨; ಬೆಲೆ, ರೂ. ೧.೫೦.

೧೦. **ಸರೋಜಿನಿದೇವಿ**—ಲೇಖಕರು: ಶ್ರೀ ಎಚ್. ಎಲ್. ನಾಗೇಗೌಡರು; ಪ್ರಕಾಶಕರು: ಜಿ. ಕೆ. ಅಂಡ್ ಬ್ರದರ್ಸ್, ಬಸವನಗುಡಿ, ಬೆಂಗಳೂರು—೪; ಪುಟಗಳು ೧೨೪.

೧೧. **ಮಧುಸಂಚಯ** (ಕವನ ಸಂಕಲನ)—ಶ್ರೀ ಜಿ. ವಿ. ಕುಲಕರ್ಣಿ; (ಕಾವ್ಯನಾಮ "ಜೀವಿ") ಪ್ರ: ಶ್ರೀ ಬಾಲಮಾರುತಿ ಪ್ರಕಾಶನ, ಧಾರವಾಡ; ಪುಟಗಳು ೯೬; ಬೆಲೆ, ರೂ. ೧.೫೦.

೧೨. **ವಚನವಲ್ಲರಿ (ಭಾಗ ೧)**—ಲೇಖಕರು : ಶ್ರೀ ಸೂರ್ಯಸಿಂಹಾಸನಾಧೀಶ್ವರ ಜ. ಚ. ನಿ. ಗೂಳೂರು ; ಪ್ರಕಾಶಕರು : ಶ್ರೀ ಶೈಲಜಗದ್ಗುರು, ನಿಡುಮಾಮಿಡಿ ಪುಸ್ತಕ ಭಂಡಾರ, ೪೯, ಹ. ಬ. ಸಮಾಜರಸ್ತೆ, ಬೆಂಗಳೂರು—೪ ; ಪುಟಗಳು ೧೦೪ + iii ; ಬೆಲೆ, ರೂ. ೧.೦೦.

೧೩. **ಸೌಂದರ್ಯ ಸೌಗಂಧ (ಕವನ ಸಂಕಲನ)**—ಲೇಖಕರು : ಶ್ರೀ ಕೆ. ಎನ್. ಭಟ್, ಶಿರಾಡಿಪಾಲ್ ; ಪ್ರ : ವಿಚಾರಸಾಹಿತ್ಯಮಾಲೆ, ಮುಂಡಾಜೆ ; ಪುಟಗಳು ೪೫ ; ಬೆಲೆ, ೯ ಆಣೆ.

೧೪. **ಜಾನಪದ ಕಥನ ಗೀತೆಗಳು**—ಸಂಪಾದಕ : ಕ. ರಾ. ಕೃ. ಜನಪದ ಸಾಹಿತ್ಯ ಅಕಾಡೆಮಿ ಕಾವ್ಯಕುಟೀರ, ಸರಸ್ವತಿಪುರಂ, ಮೈಸೂರು ; ಪುಟಗಳು ೪೮೮ ; ಬೆಲೆ, ರೂ. ೮.೫೦.

೧೫. **ಕರುಣಾಗಂಗೆ**—ಡಾ|| ಪ್ರಭುಶಂಕರ, ಎಂ.ಎ., ಪಿಎಚ್.ಡಿ. ಪ್ರಕಾಶಕರು : ಪ್ರಭುಶಂಕರ, ಮಹಾರಾಜಾ ಕಾಲೇಜ್, ಮೈಸೂರು ; ಪುಟಗಳು ೧೦೦ ; ಬೆಲೆ, ಸಾಧಾರಣ ರೂ. ೧.೨೫ ; ಉತ್ತಮ ರೂ. ೨.೨೫.

೧೬. **Studies in education and culture** (In Honour of Sri D. C. Pavate)—Diamond Jubilee Celebration Committee, Karnataka University, Dharwar, Mysore State. Editor : Prof. G. S. Halappa. Pp. 420. Price : Ordinary binding Rs. 15 ; Full calico binding Rs. 25.

ಪ್ರಬುದ್ಧ ಕರ್ಣಾಟಕ

ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಪತ್ರಿಕೆ

'ಪ್ರಬುದ್ಧ ಕರ್ಣಾಟಕ'ವು ಚೈತ್ರ, ಆಷಾಢ, ಆಶ್ವಯುಜ, ಪುಷ್ಯಮಾಸಗಳಲ್ಲಿ ಆಯಾ ತಿಂಗಳ ಹುಣ್ಣಿಮೆಯ ಹೊತ್ತಿಗೆ ವರ್ಷಕ್ಕೆ ನಾಲ್ಕು ಸಲ ಹೊರಡುತ್ತದೆ.

ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) :	ರೂ. ನ.ಪೈ.
ಸಾಮಾನ್ಯ ಚಂದಾದಾರರಿಗೆ	೩.೫೦
ವಾಚನಾಲಯ ಮುಂತಾದ ಸಂಸ್ಥೆಗಳಿಗೆ	೪.೫೦
ಮೈಸೂರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳಿಗೆ ಮಾತ್ರ	೨.೫೦

ಸಂಚಿಕೆಗಳನ್ನು ರಿಜಿಸ್ಟರ್ ಮೂಲಕ ತರಿಸಿಕೊಳ್ಳಬೇಕೆನ್ನುವವರು ಚಂದಾ ಹಣದ ಜೊತೆಗೆ ರೂ. ೨-೦-೦ ಕಳುಹಿಸಬೇಕು.

ಚಂದಾಹಣವನ್ನೂ ಅದರ ವಿಚಾರವಾಗಿ ಪತ್ರಗಳನ್ನೂ ಡೈರೆಕ್ಟರ್, 'ಪ್ರಸಾರಾಂಗ,' ಮೈಸೂರು ವಿಶ್ವವಿದ್ಯಾನಿಲಯ, ಆಕಾಶವಾಣಿ ಕಟ್ಟಡ, ವಿ. ವಿ. ಮೊಹಲ್ಲ, ಮೈಸೂರು-೨, ಎಂಬ ವಿಳಾಸಕ್ಕೆ ಕಳುಹಿಸಬೇಕು. ವಿಶ್ವವಿದ್ಯಾನಿಲಯದ ರಿಜಿಸ್ಟ್ರಾರವರಿಗಾಗಲಿ, ಪ್ರಬುದ್ಧ ಕರ್ಣಾಟಕದ ಸಂಪಾದಕರಿಗಾಗಲಿ ಕಳುಹಿಸ ಬಾರದು. ಮೈಸೂರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳು ಚಂದಾಹಣವನ್ನು ತಮ್ಮ ತಮ್ಮ ಕಾಲೇಜಿನ ಅಕೌಂಟ್ಸ್ ಅಧಿಕಾರಿಗಳಿಗೆ ಮುಂಗಡವಾಗಿ ಸಲ್ಲಿಸಿ, ಪಡೆದ ರಸೀತಿಯನ್ನು ತಮ್ಮ ವಿಳಾಸದೊಂದಿಗೆ ಕಳುಹಿಸಿಕೊಡಬೇಕು. ಕಾಲೇಜುಗಳ ಅಧ್ಯಾಪಕವರ್ಗದವರೂ ಇದೇ ರೀತಿ ಮಾಡಬಹುದು. ವಿದ್ಯಾರ್ಥಿಗಳು ತಾವು ವಿದ್ಯಾರ್ಥಿಗಳೆಂಬ ಬಗ್ಗೆ ತಮ್ಮ ಪಾಠಶಾಲೆಯ ಮುಖ್ಯೋಪಾಧ್ಯಾಯರಿಂದ ಒಂದು ಪ್ರಮಾಣಪತ್ರವನ್ನು ಪಡೆದು ಅದನ್ನು ಚಂದಾಹಣದೊಡನೆ ಕಳುಹಿಸಬೇಕು. ಚಂದಾದಾರರು ತಮ್ಮ ಚಂದಾಹಣವನ್ನು (ಸರ್ಕಾರಿ ಖಜಾನೆಯಲ್ಲಿ 'ಯೂನಿವರ್ಸಿಟಿ ಫಂಡ್'ಗೆ ಕಟ್ಟಿ ಖಜಾನೆ ರಸೀತಿಯನ್ನು ತಮ್ಮ ವಿಳಾಸದೊಡನೆ ಪ್ರಬುದ್ಧ ಕರ್ಣಾಟಕದ ಆಫೀಸಿಗೆ ಕಳುಹಿಸಬಹುದು.)

ಪ್ರಬುದ್ಧ ಕರ್ಣಾಟಕದ ೩೩, ೩೪, ೩೫ನೆಯ ಸಂಪುಟಗಳು ನಮ್ಮಲ್ಲಿ ಸಿಕ್ಕುತ್ತವೆ. ಇವುಗಳನ್ನು ಸಂಚಿಕೆ ಒಂದಕ್ಕೆ ೬ ಆಣೆ ಅಥವಾ ೩೭ ನಯೆ ಪೈಸೆಯಂತೆ ರಿಯಾಯಿತಿ ದರದಲ್ಲಿ ಪಡೆಯಬಹುದು. ಅಂಚೆಯ ಮೂಲಕ ತರಿಸಿಕೊಳ್ಳುವವರು ಸಂಪುಟ ಒಂದಕ್ಕೆ ಹದಿಮೂರು ಆಣೆ, ಸಾಮಾನ್ಯ ಸಂಚಿಕೆ ಒಂದಕ್ಕೆ ಏಳು ಆಣೆ, ಎರಡು ಸಂಚಿಕೆಗಳನ್ನು ಒಳಗೊಂಡ ಸಂಚಿಕೆಗೆ ಒಂಬತ್ತು ಆಣೆಯಂತೆ ಅಂಚೆ ವೆಚ್ಚವನ್ನು ಕಳುಹಿಸಬೇಕು.

'ಪ್ರಬುದ್ಧ ಕರ್ಣಾಟಕ'ದಲ್ಲಿ ಪ್ರಕಟನೆಗೆ ಲೇಖನಗಳನ್ನೂ ವಿಮರ್ಶೆಗೆ ಗ್ರಂಥಗಳನ್ನೂ ವಿನಿಮಯಕ್ಕೆ ಪತ್ರಿಕೆಗಳನ್ನೂ ಪ್ರಬುದ್ಧ ಕರ್ಣಾಟಕದ ಸಂಪಾದಕ (ಮಹಾರಾಜರವರ ಕಾಲೇಜು, ಮೈಸೂರು) ರಿಗೆ ಕಳುಹಿಸಬೇಕು.

ಮೈಸೂರು ವಿಶ್ವವಿದ್ಯಾನಿಲಯದ ಪ್ರಚಾರ ಪುಸ್ತಕಮಾಲೆ

೧. ಖಗೋಳಶಾಸ್ತ್ರ ಪ್ರವೇಶ—ಸಿ. ಎನ್. ಶ್ರೀನಿವಾಸ ಅಯ್ಯಂಗಾರ್, ಡಿ.ಎಸ್‌ಸಿ.
೨. ಸಮಾಜದ ರೋಗರುಜಿನಗಳು—ಜಿ. ಹನುಮಂತರಾವ್, ಎಂ.ಎ.
೩. ತೆರಿಗೆ—ಬಿ. ಆರ್. ಸುಬ್ಬರಾವ್, ಎಂ.ಎ.
೪. ನವರತ್ನಗಳು—ಎಚ್. ಸುಬ್ಬಾಜೋಯಿಸ್, ಎಂ.ಎಸ್‌ಸಿ.
೫. ನಮ್ಮ ಹಳ್ಳಿಗಳು—ಜಿ. ಎನ್. ಕೃಷ್ಣಮೂರ್ತಿ, ಎಂ.ಎ.
೬. ಕುಮಾರವ್ಯಾಸ—ಎಸ್. ವಿ. ರಂಗಣ್ಣ, ಎಂ.ಎ.
೭. ಹಂಪೆಯ ಹರಿಹರ—ಡಿ. ಎಲ್. ನರಸಿಂಹಾಚಾರ್, ಎಂ.ಎ.
೮. ಕನ್ನಡ ಸಾಹಿತ್ಯ—ಕೆ. ವೆಂಕಟರಾಮಪ್ಪ, ಎಂ.ಎ.
೯. ವಿದ್ಯುಚ್ಛಕ್ತಿಯ ವೈಭವ—ಬಿ. ಎ. ಕೃಷ್ಣಸ್ವಾಮಿರಾವ್, ಎಂ.ಎಸ್‌ಸಿ.
೧೦. ಪಂಪ—ಟಿ. ಎನ್. ಶ್ರೀಕಂಠಯ್ಯ, ಎಂ.ಎ.
೧೧. ಪ್ರಾಣಿಜೀವನ—ಎ. ನಾರಾಯಣರಾವ್, ಎಂ.ಎಸ್‌ಸಿ.
೧೨. ಕನಸುಗಳು—ಡಾ|| ಎನ್. ಎಸ್. ನಾರಾಯಣಶಾಸ್ತ್ರೀ, ಎಂ.ಎ., ಡಿ.ಲಿಟ್.
೧೩. ಮದುವೆ—ಎನ್. ಕಸ್ತೂರಿ, ಎಂ.ಎ., ಬಿ.ಎಲ್.
೧೪. *ನಮ್ಮ ಆರ್ಥಿಕದೃಷ್ಟಿ—ಎಸ್. ಗೋಪಾಲಸ್ವಾಮಿ, ಎಂ.ಎ.
೧೫. ವಾಯುಗುಣ—ಕೆ. ಶೇಷಾದ್ರಿ ಅಯ್ಯಂಗಾರ್, ಎಂ.ಎಸ್‌ಸಿ., ಎಲ್‌ಎಲ್.ಬಿ.
೧೬. ಬೆಳಕು—ಟಿ. ಎಸ್. ಸುಬ್ಬರಾಯ, ಎಂ.ಎಸ್‌ಸಿ.
೧೭. ಕರ್ಣಾಟಕ ಕಾದಂಬರಿ—ವಿ. ಸೀತಾರಾಮಯ್ಯ, ಎಂ.ಎ.
೧೮. ಕಾಳಿದಾಸನ ಕಾವ್ಯಗಳು—ಎಸ್. ರಾಮಚಂದ್ರರಾವ್, ಎಂ.ಎ.
೧೯. ಇಂಗ್ಲೆಂಡಿನ ರಾಜಕೀಯ ಬೆಳವಣಿಗೆ—ಪಿ. ಜಿ. ಸತ್ಯಗಿರಿನಾಥನ್, ಎಂ.ಎ.
೨೦. ಕಣ್ಣು ಮತ್ತು ಅದರ ರಕ್ಷಣೆ—ಡಿ. ಶಾಮಣ್ಣ, ಬಿ.ಎ., ಎಂ.ಬಿ., ಬಿ.ಎಸ್.
೨೧. ಸಾರ್ವಜನಿಕ ವೆಚ್ಚ—ಡಾ|| ಎಂ. ಎಚ್. ಗೋಪಾಲ್, ಎಂ.ಎ., ಪಿಎಚ್.ಡಿ.
೨೨. ಶಿಶುವಿಹಾರಗಳು—ಸಿ. ರಂಗಾಚಾರ್, ಬಿ.ಎಸ್‌ಸಿ., ಎಂ.ಎಡ್.
೨೩. ಸಂಖ್ಯೋದ್ಯಾನ—ಬಿ. ಸೀತಾರಾಮಶಾಸ್ತ್ರೀ, ಎಂ.ಎ.
೨೪. ವಿಡಂಬನ—ಎಸ್. ವಿ. ರಂಗಣ್ಣ, ಎಂ.ಎ.
೨೫. ಎಲ್ಲೋರ ಮತ್ತು ಅಜಂತಾ—ಡಾ|| ಎಂ. ಎಚ್. ಕೃಷ್ಣ, ಎಂ.ಎ., ಡಿ.ಲಿಟ್.
೨೬. ಸಾರಜನಕದ ಮಹತ್ವ—ಎಚ್. ಸುಬ್ಬಾಜೋಯಿಸ್, ಎಂ.ಎಸ್‌ಸಿ.
೨೭. ಭಾಸ—ಡಾ|| ಎಚ್. ಎಲ್. ಹರಿಯಪ್ಪ, ಎಂ.ಎ., ಪಿಎಚ್.ಡಿ.
೨೮. ಪಾಶ್ಚಾತ್ಯ ರಾಜಕೀಯ ತತ್ವಗಳು—ಎಂ. ಯಾಮುನಾಚಾರ್ಯ, ಎಂ.ಎ.
೨೯. ಸರ್ವಜ್ಞಕವಿ—ಎ. ಆರ್. ಕೃಷ್ಣಶಾಸ್ತ್ರೀ, ಎಂ.ಎ.

೩೦. ರಕ್ತ—ಡಿ. ಶಾಮಣ್ಣ, ಬಿ.ಎ., ಎಂ.ಬಿ., ಬಿ.ಎಸ್.

೩೧. ಇಂಗ್ಲಿಷ್ ಪ್ರಬಂಧಗಳು—ಎಸ್. ಮಂಜುನಾಥ್, ಎಂ.ಎ.

೩೨. ಅಕ್ಕಮಹಾದೇವಿ—ಎಸ್. ವಿ. ಪರಮೇಶ್ವರಭಟ್ಟ, ಎಂ.ಎ.

೩೩. ಗಣಿತಶಾಸ್ತ್ರದ ಸ್ವರೂಪ—ಡಾ|| ಸಿ. ಎನ್. ಶ್ರೀನಿವಾಸ ಅಯ್ಯಂಗಾರ್, ಡಿ.ಎಸ್‌ಸಿ.

೩೪. ಋಗ್ವೇದ—ಎಂ. ಎ. ಕೃಷ್ಣಸ್ವಾಮಿ, ಎಂ.ಎ.

೩೫. ಕುಮಾರವ್ಯಾಸ ವಾಣಿ—ಎಸ್. ವಿ. ರಂಗಣ್ಣ, ಎಂ.ಎ.

೩೬. ಆಳ್ವಾರುಗಳು—ಎಂ. ಯಾಮುನಾಚಾರ್ಯ, ಎಂ.ಎ.

೩೭. ಹಿಂದು ಮುಸ್ಲಿಂ ಮೈತ್ರಿಯನ್ನು ಬೆಳಸಿದ ರಾಜರು—
ವಿ. ರಾಘವೇಂದ್ರರಾವ್, ಎಂ.ಎ., ಬಿ.ಟಿ.

೩೮. ಸುಭಾಷಿತ ಸಂಗ್ರಹಗಳು—ಎಂ. ಪಿ. ಲಕ್ಷ್ಮೀನರಸಿಂಹಶಾಸ್ತ್ರೀ, ಎಂ.ಎ.

೩೯. ಮಕ್ಕಳ ಭಾವಜೀವನ—ಡಾ|| ಬಿ. ಕುಪ್ಪುಸ್ವಾಮಿನಾಯಿಡು, ಎಂ.ಎ., ಡಿ.ಲಿಟ್.

೪೦. ಸಹಕಾರ—ಎಸ್. ಗೋಪಾಲಸ್ವಾಮಿ, ಎಂ.ಎ.

೪೧. ನಯಸೇನ—ಜಿ. ವೆಂಕಟಸುಬ್ಬಯ್ಯ, ಎಂ.ಎ., ಬಿ.ಟಿ.

೪೨. ಕೌಟಿಲ್ಯ—ಡಾ|| ಎಂ. ವಿ. ಕೃಷ್ಣರಾವ್, ಎಂ.ಎ., ಬಿ.ಟಿ., ಡಿ.ಲಿಟ್.

೪೩. ತೆಲುಗು ಚಾಟುಪದ್ಯಗಳು—ಕೆ. ವೆಂಕಟರಾಮಪ್ಪ, ಎಂ.ಎ.

೪೪. ಮುನಿಸಿಪಾಲಿಟಿಗಳು—ಎಚ್. ಕೃಷ್ಣರಾವ್, ಎಂ.ಎ.

೪೫. ಲಕ್ಷ್ಮೀಶ—ಎನ್. ಅನಂತರಂಗಾಚಾರ್, ಎಂ.ಎ., ಬಿ.ಟಿ.

೪೬. ರುಚಿ—ಎಸ್. ವಿ. ರಂಗಣ್ಣ, ಎಂ.ಎ.

೪೭. ಕೀಟಗಳು—ಡಿ. ಎಸ್. ವೀರಯ್ಯ, ಎಂ.ಎಸ್‌ಸಿ.

೪೮. ಅಲೆಗಳು—ಕೆ. ಶೇಷಾದ್ರಿ ಅಯ್ಯಂಗಾರ್, ಎಂ.ಎಸ್‌ಸಿ., ಎಲ್‌ಎಲ್.ಬಿ.

೪೯. ಮುದ್ದಣ—ಟಿ. ಎಸ್. ಶಾಮರಾವ್, ಎಂ.ಎ.

೫೦. ಐವರು ಭೌತವೈಜ್ಞಾನಿಕರು—ಬಿ. ಎ. ಕೃಷ್ಣಸ್ವಾಮಿರಾವ್, ಎಂ.ಎಸ್‌ಸಿ.

೫೧. ಕೃತಕ ರೇಷ್ಮೆ—ಎಂ. ಷಡಕ್ಷರಸ್ವಾಮಿ, ಎಂ.ಎಸ್‌ಸಿ.

೫೨. ಚೀನರ ಇತಿಹಾಸ ಮತ್ತು ನಾಗರಿಕತೆ—ಎಸ್. ವೆಂಕಟದೇಶಿಕಾಚಾರ್, ಎಂ.ಎ.

೫೩. ಯುದ್ಧಕಾಲದ ಆರ್ಥಿಕ ಸಮಸ್ಯೆಗಳು—ಎಸ್. ಲಕ್ಷ್ಮೀನರಸಿಂಹನ್, ಎಂ.ಎ.

೫೪. ಆಹಾರ—ಜಿ. ಆರ್. ಲಕ್ಷ್ಮಣರಾವ್, ಎಂ.ಎಸ್‌ಸಿ.

೫೫. ಇಬ್ಸನ್ನಿನ ಕೆಲವು ನಾಟಕಗಳು—ಎಸ್. ಮಂಜುನಾಥ್, ಎಂ.ಎ.

೫೭. ಶಬ್ದಪ್ರಪಂಚ—ಆರ್. ಎಲ್. ನರಸಿಂಹಯ್ಯ, ಎಂ.ಎಸ್‌ಸಿ.

೫೭. ಪ್ರಜಾಭಿಪ್ರಾಯ—ಟಿ. ಎಸ್. ರಾಜಗೋಪಾಲ ಅಯ್ಯಂಗಾರ್, ಎಂ.ಎ., ಎಲ್‌ಎಲ್.ಬಿ.

೫೮. ಕಲ್ಲಿದ್ದಲು—ಕೆ. ಎಸ್. ಲಕ್ಷ್ಮಣರಾವ್, ಎಂ.ಎಸ್‌ಸಿ.

೫೯. ಜನಪದಮುಕ್ತಕಗಳು—ಎಚ್. ಎಂ. ಶಂಕರನಾರಾಯಣರಾವ್, ಎಂ.ಎ.

೬೦. ಹಾಲು—ಕೆ. ಎಸ್. ಲಕ್ಷ್ಮಣರಾವ್, ಎಂ.ಎಸ್‌ಸಿ.

೬೧. ಭಾವಗೀತೆ—ಎಸ್. ವಿ. ಪರಮೇಶ್ವರಭಟ್ಟ, ಎಂ.ಎ.

೬೨. ಭಾರತದಲ್ಲಿ ಪ್ರಜಾಪ್ರಭುತ್ವ—ಟಿ. ಎಸ್. ರಾಜಗೋಪಾಲ ಅಯ್ಯಂಗಾರ್, ಎಂ.ಎ., ಎಲ್‌ಎಲ್.ಬಿ.

೬೩. ಆರೋಗ್ಯಸಾಧನೆ—ಮೋಟಗಾನಹಳ್ಳಿ ಮಹದೇವಶಾಸ್ತ್ರೀ, ಎಲ್.ಎ. ಎಂ.ಎಸ್.

೬೪-೬೫. ಆಧುನಿಕ ಭಾರತದಲ್ಲಿ ನೃತ್ಯಕಲೆ—ಯು. ಎಸ್. ಕೃಷ್ಣರಾವ್, ಎಂ.ಎಸ್‌ಸಿ. ಮತ್ತು ಚಂದ್ರಭಾಗಾದೇವಿ; ಬೆಲೆ, ಸಾದಾ ೫೦ ನಯೆ ಪೈಸೆ; ಉತ್ತಮ ೭೫ ನಯೆ ಪೈಸೆ.

೬೬. ಚುನಾವಣೆಗಳು—ಗ. ಸ. ಹಾಲಪ್ಪ, ಎಂ.ಎ. (ಕೊಲಂಬಿಯ)

೬೭. ಮೀನಿನಿಂದ ಮಾನವನೆಡೆಗೆ—ಎಚ್. ಬಿ. ದೇವರಾಜ ಸರ್ಕಾರ್, ಬಿ.ಎಸ್‌ಸಿ. (ಆನರ್ಸ್)

೬೮. ಕ್ಷಯ—ಡಾ॥ ಎಸ್. ಟಿ. ಪುಟ್ಟಣ್ಣ, ಬಿ.ಎಸ್‌ಸಿ., ಎಂ.ಬಿ. ಬಿ.ಎಸ್., ಡಿ.ಒ. ಎಂ.ಎಸ್. (ಲಂಡನ್)

೬೯. ಶಿಲ್ಪಿಯ ಪಾತ್ರ—ಶ್ರೀ ಬಿ. ಎಲ್. ಸಿ. ರಾಜನ್, ಬಿ.ಇ.

೭೦. ಪರತಂತ್ರಜೀವಿಗಳು ಮತ್ತು ಪರತಂತ್ರಜೀವನ—ಎಚ್. ಬಿ. ದೇವರಾಜ ಸರ್ಕಾರ್, ಬಿ.ಎಸ್‌ಸಿ. (ಆನರ್ಸ್)

೭೧. ಮಾನವ ಹಕ್ಕುಗಳು—ಹೆಚ್. ಎಂ. ಸದಾಶಿವಯ್ಯ, ಎಂ.ಎ., ಎಲ್‌ಎಲ್.ಬಿ.

೭೨. ವಿನೋದಗಣಿತ—ವಿ. ಕೆ. ದೊರೆಸ್ವಾಮಿ, ಎಂ.ಎಸ್‌ಸಿ., ಬಿ.ಎಲ್.

೭೩. ಸಾಬೂನು—ಕೆ. ಎಸ್. ಲಕ್ಷ್ಮಣರಾವ್, ಎಂ.ಎಸ್‌ಸಿ.

೭೪. ಉಷ್ಣಯಂತ್ರಗಳ ಪರಿಚಯ—ಕೆ. ವಿ. ಸುಬ್ಬರಾಯ, ಬಿ.ಎಸ್‌ಸಿ., ಬಿ.ಇ.

೭೫. ಬಟ್ಟೆಗಳ ವೈಜ್ಞಾನಿಕ ಪರೀಕ್ಷೆ—ಶ್ರೀನಾಗಭೂಷಣ್, ಬಿ.ಎಸ್‌ಸಿ., ಎಫ್.ಟಿ.ಐ.

೭೬. ಮಹಾಭಾರತ—ಡಾ॥ ಕೆ. ಕೃಷ್ಣಮೂರ್ತಿ, ಎಂ.ಎ., ಪಿಎಚ್.ಡಿ.

೭೭. ಜೇನು—ಡಿ. ಎಸ್. ಮುರಿಗಪ್ಪ ಶ್ರೇಷ್ಠಿ, ಬಿ.ಎಸ್‌ಸಿ. (ಅಗ್ರಿ)

೭೮. ಮಾನವಶಾಸ್ತ್ರ—ಡಾ॥ ಕೆ. ಎನ್. ವೆಂಕಟರಾಯಪ್ಪ, ಎಂ.ಎ., ಪಿಎಚ್.ಡಿ.

೭೯. ಅಥರ್ವವೇದ—ಸಿ. ಜಿ. ಪುರುಷೋತ್ತಮ, ಎಂ.ಎ.
೮೦. ನೇಮಿಚಂದ್ರ—ಎನ್. ಅನಂತರಂಗಾಚಾರ್, ಎಂ.ಎ., ಬಿ.ಟಿ.
೮೧-೮೨. ಹಾಸ್ಯ—ಎಸ್. ವಿ. ರಂಗಣ್ಣ, ಎಂ.ಎ.
೮೩. ಶ್ರೀನಾಥ—ಕೆ. ವೆಂಕಟರಾಮಪ್ಪ, ಎಂ.ಎ.
೮೪. ಷಡಕ್ಷರದೇವ—ದೇ. ಜವರೇಗೌಡ, ಎಂ.ಎ.
೮೫. ಚಿತ್ರಾಂಗದಾ—ಯು. ಕೆ. ಸುಬ್ಬರಾಯಚಾರ್, ಎಂ.ಎ.
೮೬. ಸಂಚಿಯ ಹೊನ್ನಮ್ಮ—ಎಚ್. ಎಂ. ಶಂಕರನಾರಾಯಣರಾವ್, ಎಂ.ಎ.
೮೭. ವಾಲ್ಮೀಕಿ ರಾಮಾಯಣ—ಯು. ಕೆ. ಸುಬ್ಬರಾಯಾಚಾರ್, ಎಂ.ಎ.
೮೮. ಜಪಾನರ ಇತಿಹಾಸ ಮತ್ತು ನಾಗರಿಕತೆ—ಕೆ. ಪದ್ಮಾವತಮ್ಮ, ಎಂ.ಎ., ಬಿ.ಇಡಿ.
೮೯. ಕ್ರಿಶ್ಚಿಯನ್ ಕ್ಯಾಲೆಂಡರ್—ಬಿ. ಸೀತಾರಾಮಶಾಸ್ತ್ರೀ, ಎಂ.ಎ.
೯೦. ಆಲ್‌ಫ್ರೆಡ್ ನೊಬೆಲ್—ಎಸ್. ಸುಬ್ರಹ್ಮಣ್ಯಂ, ಬಿ.ಎಸ್‌ಸಿ., ಬಿ.ಇಡ್.
೯೧. ಗೃಹರಚನಾವಿಧಿ— ಕೆ. ಎಸ್. ಸದಾನಂದ, ಬಿ.ಇ.
೯೨. ಹಿಂದೂಧರ್ಮಸಾರ—ಸ್ವಾಮಿ ಸೋಮನಾಥಾನಂದ.
೯೩. ಪ್ರಜಾಪ್ರಭುತ್ವದಲ್ಲಿ ರಾಜಕೀಯಪಕ್ಷಗಳು—ಟಿ. ಎಸ್. ರಾಜಗೋಪಾಲ್ ಅಯ್ಯಂಗಾರ್, ಎಂ.ಎ., ಎಲ್‌ಎಲ್.ಬಿ.
೯೪. ದಾರಿತಪ್ಪಿದ ಮಕ್ಕಳು—ಎನ್. ಎಸ್. ಶಾಂತಮ್ಮ, ಎಂ.ಎ.
೯೫. ಮಹಾ ಕವಿ ಬಾಣ—ಟಿ. ಎಸ್. ಕೃಷ್ಣಮೂರ್ತಿ, ಎಂ.ಎ.
೯೬. ಪ್ರೇರಣೆ—ಕೆ. ನಾಗರಾಜಶಾಸ್ತ್ರಿ, ಎಂ.ಎ.

ಅಚ್ಚಿನಲ್ಲಿವೆ

೯೭. ಪ್ರಾಣಿಗಳ ರಚನಾಕೌಶಲ—ಹೆಚ್. ಬಿ. ದೇವರಾಜಸರ್ಕಾರ್, ಬಿ.ಎಸ್‌ಸಿ. (ಆನರ್ಸ್).
೯೮. ಭಾರತೀಯ ರಾಷ್ಟ್ರೀಯತೆಯ ವಿಕಾಸ—ಎ. ಎಸ್. ಸಂಜುಂಡಸ್ವಾಮಿ, ಬಿ.ಎ., ಬಿ.ಟಿ.
೯೯. ಎಕ್ಸ್-ರೇಸ್—ಕೆ. ಎಸ್. ಲಕ್ಷ್ಮಣರಾವ್, ಎಂ.ಎಸ್‌ಸಿ.
೧೦೦. ಪ್ರಸಾರಾಂಗ ಡಾ|| ಕೆ. ವಿ. ಪುಟ್ಟಪ್ಪ, ಎಂ.ಎ., ಡಿ.ಲಿಟ್.

ವಿಶ್ವವಿದ್ಯಾನಿಲಯದ ಪ್ರಚಾರೋಪನ್ಯಾಸಮಾಲೆ ಮತ್ತು ಸರ್ ಕೆ. ಪಿ. ಪುಟ್ಟಣ್ಣಚೆಟ್ಟಿರ ಪುದುವಟ್ಟಿನ ಪ್ರಕಟನಮಾಲೆಯಲ್ಲಿ ಪುಸ್ತಕಗಳನ್ನು ಕೊಳ್ಳುವ ಮಾರಾಟಗಾರರಿಗೆ ಈ ಕೆಳಗೆ ಕಂಡಂತೆ ಕಮಿಷನ್ ಕೊಡಲಾಗುವುದು. ಅಂಚೆ ಮತ್ತು ಪುಸ್ತಕವನ್ನು ಕಳುಹಿಸುವ ಖರ್ಚು ಪ್ರತ್ಯೇಕ.

ಶೇಕಡ ೧೦ ರಂತೆ   ೫೦ ಪುಸ್ತಕಗಳನ್ನು ಏಕಕಾಲದಲ್ಲಿ ಕೊಳ್ಳುವವರಿಗೆ
ಶೇಕಡ ೧೫ ರಂತೆ   ೨೦೦ ಪುಸ್ತಕಗಳನ್ನು ಏಕಕಾಲದಲ್ಲಿ ಕೊಳ್ಳುವವರಿಗೆ
ಶೇಕಡ ೨೦ ರಂತೆ   ೫೦೦ ಪುಸ್ತಕಗಳನ್ನು ಏಕಕಾಲದಲ್ಲಿ ಕೊಳ್ಳುವವರಿಗೆ
ಶೇಕಡ ೨೫ ರಂತೆ ೨೦೦೦ ಪುಸ್ತಕಗಳನ್ನು ಒಂದು ವರ್ಷದಲ್ಲಿ ಕೊಳ್ಳುವವರಿಗೆ
(ಏಪ್ರಿಲ್ ೧ ರಿಂದ ಮಾರ್ಚಿ ೩೧ ರ ವರೆಗೆ)

ಸಾಧಾರಣ ಪ್ರತಿ ೨೫ ನಯೆ ಪೈಸೆ   ಉತ್ತಮ ಪ್ರತಿ ೩೭ ನಯೆ ಪೈಸೆ

*

---

* ಈ ಪುಸ್ತಕಗಳು ಮುಗಿದುಹೋಗಿವೆ.

ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಗ್ರಂಥಮಾಲೆ

ಪ್ರಧಾನ ಸಂಪಾದಕರು :
- ಬಿ. ಎಂ. ಶ್ರೀಕಂಠಯ್ಯ, ಎಂ.ಎ., ಬಿ.ಎಲ್., ೧೯೪೩ ರ ವರೆಗೆ
- ಎ. ಆರ್. ಕೃಷ್ಣ ಶಾಸ್ತ್ರೀ, ಎಂ.ಎ., ೧೯೪೩ ರಿಂದ ೧೯೪೭ ರ ವರೆಗೆ
- ಡಾ॥ ಕೆ. ವಿ. ಪುಟ್ಟಪ್ಪ, ಎಂ.ಎ., ಡಿ.ಲಿಟ್., ೧೯೪೭ ರಿಂದ

೧. **ಹರಿಶ್ಚಂದ್ರ ಕಾವ್ಯಸಂಗ್ರಹ** (ಆರನೆಯ ಮುದ್ರಣ)—ಸಂಪಾದಕರು : ಟಿ. ಎಸ್. ವೆಂಕಣ್ಣಯ್ಯ, ಎಂ.ಎ. ಮತ್ತು ಎ. ಆರ್. ಕೃಷ್ಣಶಾಸ್ತ್ರೀ, ಎಂ.ಎ. ; ಬೆಲೆ, ಸಾದಾ ರೂ. ೧-೮-೦ ; ಉತ್ತಮ ರೂ. ೨-೦-೦.

೨. ***ಕರ್ಣಾಟಕ ಕಾದಂಬರೀ ಸಂಗ್ರಹ** (ಮೂರನೆಯ ಮುದ್ರಣ)—ಸಂಪಾದಕರು: ಟಿ. ಎಸ್. ವೆಂಕಣ್ಣಯ್ಯ, ಎಂ.ಎ. ; ಬೆಲೆ, ಸಾದಾ ರೂ. ೧-೧೨-೦.

೩. **ಪ್ರಭುಲಿಂಗಲೀಲೆಯ ಸಂಗ್ರಹ** (ಸಚಿತ್ರ)—ಸಂಪಾದಕರು : ಎಂ. ಎಸ್. ಬಸವಲಿಂಗಯ್ಯ, ಎಂ.ಎ., ಬಿ.ಎಲ್. ಮತ್ತು ಎಂ. ಆರ್. ಶ್ರೀನಿವಾಸ ಮೂರ್ತಿ, ಬಿ.ಎ. ; ಬೆಲೆ, ಸಾದಾ ರೂ. ೨-೦-೦ ; ಉತ್ತಮ ರೂ. ೩-೦-೦.

೪. **ಸಾಕ್ರಟೀಸನ ಕೊನೆಯ ದಿನಗಳು** (ಸಚಿತ್ರ)—ಅನುವಾದಕರು : ಎ. ಎನ್. ಮೂರ್ತಿರಾವ್, ಎಂ.ಎ. ; ಬೆಲೆ, ಸಾದಾ ರೂ. ೨-೨೫ ನ.ಪೈ ; ಉತ್ತಮಪ್ರತಿ ರೂ. ೩.೨೫ ನ.ಪೈ.

೫. **ಶ್ರೀರಾಮಕೃಷ್ಣ ಪರಮಹಂಸ**—ಲೇಖಕರು : ಕೆ. ವಿ. ಪುಟ್ಟಪ್ಪ, ಎಂ.ಎ. ; ಬೆಲೆ, ಸಾದಾ ರೂ. ೩.೫೦ ನ.ಪೈ ; ಉತ್ತಮಪ್ರತಿ ರೂ. ೫.೦೦ ನ.ಪೈ.

೬. ***ರವೀಂದ್ರನಾಥ ಠಾಕೂರರು** (ಸಚಿತ್ರ)—ಲೇಖಕರು : ಮಾಸ್ತಿ ವೆಂಕಟೇಶ ಅಯ್ಯಂಗಾರ್, ಎಂ.ಎ.

೭. ***ಆರೋಗ್ಯ, ಅದರ ಜ್ಞಾನ ಮತ್ತು ಸಾಧನ** (ಸಚಿತ್ರ)—ಲೇಖಕರು : ಜಿ. ಎ. ಈಶ್ವರ ಮೂರ್ತಿ, ಬಿ.ಎ., ಎಲ್.ಎಂ.ಎಸ್., ಬಿ.ಎಸ್‌ಸಿ.

೮. **ಪಂಪರಾಮಾಯಣ ಸಂಗ್ರಹ**—ಸಂಪಾದಕರು : ಆಸ್ಥಾನ ಮಹಾ ವಿದ್ವಾನ್ ತಿರುವಳ್ಳೂರ್ ಶ್ರೀನಿವಾಸರಾಘವಾಚಾರ್ ಮತ್ತು ಡಿ. ಎಲ್. ನರಸಿಂಹಾಚಾರ್, ಎಂ.ಎ. ; ಬೆಲೆ, ಸಾದಾ ರೂ. ೧-೦-೦.

೯. **ಹಣಪ್ರಪಂಚ**—ಲೇಖಕರು : ವಿ. ಸೀತಾರಾಮಯ್ಯ, ಎಂ.ಎ. ; ಬೆಲೆ, ಸಾದಾ ರೂ. ೪.೨೫ ; ಉತ್ತಮ ರೂ. ೫.೨೫.

೧೦. **ಸಂಸ್ಕೃತ ನಾಟಕ**—ಲೇಖಕರು : ಎ. ಆರ್. ಕೃಷ್ಣಶಾಸ್ತ್ರೀ, ಎಂ.ಎ. ; ಬೆಲೆ, ಸಾದಾ ರೂ. ೨-೨-೦ ; ಉತ್ತಮ ರೂ. ೨-೧೦-೦.

೧೧. ***ಜೀವವಿಜ್ಞಾನ**—ಲೇಖಕರು : ಬಿ. ವೆಂಕಟನಾರಾಯಣಪ್ಪ, ಎಂ.ಎ.

೧೨. **ಹಿಂದೂದರ್ಶನಸಾರ**—ಲೇಖಕರು : ಮಹಾಮಹೋಪಾಧ್ಯಾಯ ಪಂಡಿತ

ರತ್ನಂ ಲಕ್ಷ್ಮೀಪುರಂ ಶ್ರೀನಿವಾಸಾಚಾರ್ಯ, ಬೆಲೆ, ಸಾದಾ ರೂ. ೩.೫೦; ಉತ್ತಮಪ್ರತಿ ರೂ. ೪.೫೦. ನ.ಪೈ.

೧೩. **ರಾಜ್ಯಶಾಸ್ತ್ರ**—ಲೇಖಕರು : ಎಚ್. ಕೃಷ್ಣರಾವ್, ಎಂ.ಎ. ; ಬೆಲೆ, ಸಾದಾ ರೂ. ೧-೮-೦ ; ಉತ್ತಮ ರೂ. ೨-೮-೦.

೧೪. **ಹದಿಬದೆಯ ಧರ್ಮ**—ಸಂಪಾದಕಿಯರು : ಡಿ. ಚಂಪಾಬಾಯಿ, ಎಂ.ಎ. ; ಬೆಲೆ, ಸಾದಾ ರೂ. ೧.೫೦ ; ಉತ್ತಮ ರೂ. ೨.೫೦.

೧೫. **ಪುರಾಣನಾಮಚೂಡಾಮಣಿ**—ಲೇಖಕರು : ಬೆನಗಲ್ ರಾಮರಾವ್, ಎಂ.ಎ., ಎಲ್‌ಎಲ್.ಬಿ. ಮತ್ತು ಪಾನ್ಯಂ ಸುಂದರಶಾಸ್ತ್ರೀ ; ಬೆಲೆ, ಸಾದಾ ರೂ. ೫.೫೦ ; ಉತ್ತಮ ರೂ. ೬.೫೦.

೧೬. ***ಯಶೋಧರ ಚರಿತೆಯ ಸಂಗ್ರಹ**— ಸಂಪಾದಕರು : ಕೆ. ವಿ. ರಾಘವಾಚಾರ್, ಎಂ.ಎ., ಬಿ.ಟಿ.

೧೭. **ಗ್ರೀಕರ ತತ್ತ್ವಶಾಸ್ತ್ರಸಾರ ಸಂಗ್ರಹ**—ಲೇಖಕರು : ಕೆ. ಆರ್. ಶ್ರೀನಿವಾಸ ಅಯ್ಯಂಗಾರ್, ಎಂ.ಎ. .

೧೮. **ಹಿಂದೂ ದೇಶದ ಭೂಚರಿತ್ರೆ**—ಲೇಖಕರು: ವೈ. ನಾಗಪ್ಪ, ಎಂ.ಎಸ್‌ಸಿ. ; ಬೆಲೆ, ಸಾದಾ ರೂ. ೦-೧೨-೦ ; ಉತ್ತಮ ಪ್ರತಿ ರೂ. ೧-೪-೦.

೧೯. **ವಚನಧರ್ಮಸಾರ**—ಲೇಖಕರು: ಎಂ. ಆರ್. ಶ್ರೀನಿವಾಸಮೂರ್ತಿ, ಬಿ.ಎ.; ಬೆಲೆ, ಸಾದಾ ರೂ. ೨-೦-೦ ; ಕ್ಯಾಲಿಕೊ ರೂ. ೩-೦-೦.

೨೦. ***ಪ್ರಾಣಿಶಾಸ್ತ್ರ**—ಡಾ|| ಎ. ಸುಬ್ಬರಾವ್, ಬಿ.ಎ., ಡಿ.ಎಸ್‌ಸಿ. ಮತ್ತು ಎ. ನಾರಾಯಣರಾವ್, ಎಂ.ಎಸ್‌ಸಿ. ; ಬೆಲೆ, ಸಾದಾ ರೂ. ೧-೮-೦ ; ಕ್ಯಾಲಿಕೊ ರೂ. ೧-೧೨-೦.

೨೧. **ಆಧುನಿಕ ತತ್ತ್ವಶಾಸ್ತ್ರಸಮಸ್ಯೆಗಳು**—ಜಿ. ಹನುಮಂತರಾವ್, ಎಂ.ಎ. ; ಬೆಲೆ, ಸಾದಾ ರೂ. ೧-೧೨-೦ ; ಕ್ಯಾಲಿಕೊ ರೂ. ೨-೧೨-೦.

೨೨. **ಕನ್ನಡ ಕೈಪಿಡಿ** (ಭಾಗ ೫, ಸಾಹಿತ್ಯಚರಿತ್ರೆ)—ಬಿ. ಎಂ. ಶ್ರೀಕಂಠಯ್ಯ, ಎಂ.ಎ., ಬಿ.ಎಲ್.; ಬೆಲೆ, ಸಾದಾ ರೂ. ೧-೪-೦ ; ಕ್ಯಾಲಿಕೊ ರೂ. ೨-೪-೦.

೨೩. **ಇಸ್ಲಾಂ ಸಂಸ್ಕೃತಿ**—ಮೂಲಲೇಖಕರು : ಪ್ರೊ|| ಮಹಮದ್ ಅಬ್ಬಾಸ್ ಷೂಸ್ತ್ರಿ ; ಅನುವಾದಕರು : ರಾಜಸೇವಾಸಕ್ತ ಬಿ. ಎಂ. ಶ್ರೀಕಂಠಯ್ಯ, ಎಂ.ಎ., ಬಿ.ಎಲ್.; ಬೆಲೆ, ಸಾದಾ ರೂ. ೨-೦-೦ ; ಉತ್ತಮ ರೂ. ೩-೦-೦.

೨೪. **ತಮಿಳು ಪಾಠಗಳು**—ಲೇಖಕರು : ಎಸ್. ರುದ್ರಪತಿ, ಎಂ.ಎ. ; ಬೆಲೆ, ರೂ. ೩-೪-೦.

೨೫. **ಅಶೋಕ**—ಲೇಖಕರು: ಎನ್. ಕಸ್ತೂರಿ, ಎಂ.ಎ., ಬಿ.ಎಲ್.; ಬೆಲೆ, ಸಾದಾ ರೂ. ೧-೨-೦ ; ಉತ್ತಮ ರೂ. ೨-೦-೦.

೨೬. **ಭಾರತೀಯ ಕಾವ್ಯಮೀಮಾಂಸೆ**—ಲೇಖಕರು: ಪ್ರೊ॥ ತೀ. ನಂ. ಶ್ರೀಕಂಠಯ್ಯ, ಎಂ.ಎ.; ಬೆಲೆ, ಸಾದಾ ರೂ. ೩-೮-೦.

೨೭. **ಭಾರತೀಯ ಸಂಸ್ಕೃತಿ**—ಲೇಖಕರು: ಡಾ॥ ಎಸ್. ಶ್ರೀಕಂಠಶಾಸ್ತ್ರೀ, ಎಂ.ಎ., ಡಿ.ಲಿಟ್.; ಬೆಲೆ, ಸಾದಾ ರೂ. ೩-೦-೦; ಉತ್ತಮ ರೂ. ೪-೦-೦.

೨೮. **ಸಾರ್ವಜನಿಕ ಹಣಕಾಸು**—ಲೇಖಕರು: ವಿ. ಎಲ್. ಡಿ'ಸೋಜ, ಬಿ.ಎ., ಬಿ.ಕಾಂ. (ಲಂಡನ್) ಮತ್ತು ಬಿ. ಆರ್. ಸುಬ್ಬರಾವ್, ಎಂ.ಎ., ಡಿಪ್-ಇನ್-ಕಾಂ.; ಬೆಲೆ, ಸಾದಾ ರೂ. ೨-೮-೦; ಉತ್ತಮ ರೂ. ೩-೮-೦.

೨೯. **ಆದಿಪುರಾಣ ಸಂಗ್ರಹ**—ಸಂಪಾದಕರು: ಎಲ್. ಗುಂಡಪ್ಪ, ಎಂ.ಎ.; ಬೆಲೆ, ಸಾದಾ ರೂ. ೨-೦-೦ ; ಉತ್ತಮ ರೂ. ೩-೦-೦.

೩೦. **ಪಂಪ ಭಾರತ**—(೯-೧೪ ಆಶ್ವಾಸಗಳು) ಬೆಲೆ, ಸಾದಾ ರೂ. ೧-೧೨-೦ ; ಉತ್ತಮ ರೂ. ೨-೪-೦.

೩೧. **ಕಾಳಿದಾಸ**—ಲೇಖಕರು: ಎಂ. ಲಕ್ಷ್ಮೀನರಸಿಂಹಯ್ಯ, ಎಂ.ಎ.; ಬೆಲೆ, ಸಾದಾ ರೂ. ೨-೦-೦ ; ಉತ್ತಮ ರೂ. ೨-೮-೦.

೩೨. **ಭರತೇಶ ವೈಭವ ಸಂಗ್ರಹ**—ಸಂಪಾದಕರು: ತ. ಸು. ಶಾಮರಾವ್, ಎಂ.ಎ.; ಬೆಲೆ, ಸಾದಾ ರೂ. ೨-೮-೦ ; ಉತ್ತಮ ರೂ. ೩-೦-೦.

೩೩. **ಶ್ರೀ ಕೃಷ್ಣ ಚರಿತೆ**—ಸಂಪಾದಕರು: ಕೆ. ವೆಂಕಟರಾಮಪ್ಪ, ಎಂ.ಎ.; ಬೆಲೆ, ಸಾದಾ ರೂ. ೧-೪-೦ ; ಉತ್ತಮ ರೂ. ೧-೧೨-೦.

೩೪. **ಕನ್ನಡ ಕೈಪಿಡಿ**—(ಭಾಗ ೧, ೨, ೩, ೪,) ಬೆಲೆ, ಸಾದಾ ರೂ. ೨-೮-೦ ; ಉತ್ತಮ ರೂ. ೩-೦-೦.

೩೫. **ಪ್ರಜಾಸರ್ಕಾರ**—ಡಾ॥ ಎಂ. ವಿ. ಕೃಷ್ಣರಾವ್, ಎಂ.ಎ., ಬಿ.ಟಿ., ಡಿ.ಲಿಟ್.; ಬೆಲೆ, ಸಾದಾ ರೂ. ೧-೧೨-೦ ; ಉತ್ತಮ ರೂ. ೨-೪-೦.

೩೬.***ಭಾರತೀಯ ತತ್ತ್ವಶಾಸ್ತ್ರ ಸಂಗ್ರಹ**—ವಿದ್ವಾನ್ ಹೆಚ್. ಎನ್. ರಾಘವೇಂದ್ರಾಚಾರ್ಯ, ಎಂ.ಎ.

೩೭. **ಭೌತ ವಿಜ್ಞಾನ**—ಡಾ॥ ಟಿ. ಎಸ್. ಸುಬ್ಬರಾಯ, ಡಿ.ಎಸ್‌ಸಿ.; ಬೆಲೆ, ಸಾದಾ ರೂ. ೨.೫೦ ; ಉತ್ತಮ ರೂ. ೩.೫೦.

೩೮. **ಕಮ್ಯುನಿಸಂ**—ಎಲ್. ಶ್ರೀಕಂಠಯ್ಯ, ಎಂ.ಎ., ಎಂ.ಎಸ್‌ಸಿ. (ಲಂಡನ್), ಬಾರ್-ಅಟ್-ಲಾ; ಬೆಲೆ, ಸಾದಾ ರೂ. ೨-೦-೦ ; ಉತ್ತಮ ರೂ. ೩-೦-೦.

೩೯. **ವಿಜ್ಞಾನ ಸಂಶೋಧನೆ**—ಎಸ್. ವರದರಾಜನ್ ; ಬೆಲೆ, ಸಾದಾ ರೂ. ೩-೨-೦ ; ಉತ್ತಮ ರೂ. ೪-೨-೦.

೪೦. **ಗಣಿತಶಾಸ್ತ್ರದ ಚರಿತ್ರೆ**—ಸಿ. ಎನ್. ಶ್ರೀನಿವಾಸ ಐಯಂಗಾರ್ ; ಬೆಲೆ, ಸಾದಾ ರೂ. ೨.೮೦ ; ಉತ್ತಮ ರೂ. ೩.೮೦.

೪೧. **ರಸಾಯನಶಾಸ್ತ್ರ** (ಒಂದನೆಯ ಭಾಗ)—ಕೆ. ಸುಬ್ಬಾಭಟ್ಟ, ಎಂ.ಎಸ್‌ಸಿ. ; ಬೆಲೆ, ಸಾದಾ ರೂ. ೫.೨೫ ; ಉತ್ತಮ ರೂ. ೬.೨೫.

೪೨. **ತರ್ಕಶಾಸ್ತ್ರ** (ಭಾಗ ೧)—ಜಿ. ಹನುಮಂತರಾವ್ ; ಬೆಲೆ, ಸಾದಾ ರೂ. ೨.೧೩ ; ಉತ್ತಮ ರೂ. ೩.೧೩.

ತರ್ಕಶಾಸ್ತ್ರ (ಭಾಗ ೨)—ಜಿ. ಹನುಮಂತರಾವ್ ; ಬೆಲೆ, ಸಾದಾ ರೂ. ೨ ; ಉತ್ತಮ ರೂ. ೩.

೪೩. **ಸಂಸ್ಕೃತ ಕಾವ್ಯ**—ಡಾ॥ ಕೆ. ಕೃಷ್ಣಮೂರ್ತಿ, ಎಂ.ಎ., ಪಿಎಚ್.ಡಿ. ; ಬೆಲೆ, ಸಾದಾ ರೂ. ೩.೫೦ ; ಉತ್ತಮ ರೂ. ೪.೫೦.

೪೪. ನಾಟುನುಡಿ—ಎಸ್. ವಿ. ರಂಗಣ್ಣ, ಎಂ.ಎ. ; ಬೆಲೆ, ಸಾದಾ ರೂ. ೨.೧೦ ; ಉತ್ತಮ ರೂ. ೩.೧೦.

೪೫. ತೆಲುಗು ಪಾಠಗಳು—ಕೆ. ಸುಬ್ಬರಾಮಪ್ಪ, ಎಂ.ಎ., ಬಿ.ಇಡ್. ಬೆಲೆ, ಸಾದಾ ರೂ. ೩.೭೫ ; ಉತ್ತಮ ರೂ. ೪.೭೫.

ವಿಶ್ವವಿದ್ಯಾನಿಲಯದ ಕನ್ನಡ ಗ್ರಂಥಮಾಲೆಯ ಪುಸ್ತಕಗಳನ್ನು ಕೊಳ್ಳುವ ಮಾರಾಟಗಾರರಿಗೆ ಈ ಕೆಳಗೆ ಕಂಡಂತೆ ಕಮೀಷನ್ ಕೊಡಲಾಗುವುದು. ಅಂಚೆ ವೆಚ್ಚ, ಮಾರಾಟ ತೆರಿಗೆ ಮತ್ತು ಪುಸ್ತಕವನ್ನು ಕಳುಹಿಸುವ ಖರ್ಚು ಪ್ರತ್ಯೇಕ.

ಶೇಕಡ ೧೨½ ಯಂತೆ ೨೫ ರೂಗಳ ಪುಸ್ತಕಗಳನ್ನು ಏಕಕಾಲದಲ್ಲಿ ಕೊಳ್ಳುವವರಿಗೆ

ಶೇಕಡ ೧೮¾ ರಂತೆ ೧೦೦೦ ರೂಗಳ ಬೆಲೆಬಾಳುವ ಪುಸ್ತಕಗಳನ್ನು ಒಂದು ವರ್ಷದಲ್ಲಿ ಕೊಳ್ಳುವವರಿಗೆ

ಶೇಕಡ ೨೫ ರಂತೆ ೨೦೦೦ ರೂಗಳ ಬೆಲೆಬಾಳುವ ಪುಸ್ತಕಗಳನ್ನು ಒಂದು ವರ್ಷದಲ್ಲಿ (ಏಪ್ರಿಲ್ ೧ ರಿಂದ ಮಾರ್ಚಿ ೩೧ ರ ವರೆಗೆ) ಕೊಳ್ಳುವವರಿಗೆ.

---

* ಈ ಪುಸ್ತಕಗಳು ಮುಗಿದುಹೋಗಿವೆ.

ಮೈಸೂರು ವಿಶ್ವವಿದ್ಯಾನಿಲಯ ಪಠ್ಯ ಪುಸ್ತಕ ಮಾಲೆ

೧. **ಇಂಟರ್‌ಮೀಡಿಯಟ್ ಭೌತಶಾಸ್ತ್ರ**—ಬಿ. ವಿ. ನಾರಾಯಣರಾವ್, ಎಂ.ಎಸ್‌ಸಿ.; ಬೆಲೆ, ಸಾದಾ ರೂ. ೧-೧೨-೦ ; ಉತ್ತಮ ರೂ. ೨-೧೨-೦.

೨. **ಬೀಜರೇಖಾಗಣಿತ**—ಕೆ. ಮಂಜುನಾಥಯ್ಯ, ಎಂ.ಎಸ್‌ಸಿ., ಬಿ.ಎಲ್.; ಬೆಲೆ, ರೂ. ೨-೪-೦.

೩. **ಕಲನಶಾಸ್ತ್ರ**—ಎಂ. ಎಸ್. ಸೂರ್ಯನಾರಾಯಣಶಾಸ್ತ್ರೀ, ಎಂ.ಎಸ್‌ಸಿ.; ಬೆಲೆ, ರೂ. ೩.೨೫.

೪. **ಗ್ರೇಟ್ ಬ್ರಿಟನ್ನಿನ ಚರಿತ್ರೆ**—ಡಾ|| ಎಂ. ಶೇಷಾದ್ರಿ; ಬೆಲೆ, ಸಾದಾ ರೂ. ೨.೭೫; ಉತ್ತಮ ರೂ. ೩.೭೫.

೫. **ಆರ್ಥಿಕರಚನೆ**—ಡಾ|| ಜಿ. ಟಿ. ಹುಚ್ಚಪ್ಪ, ಎಂ.ಎ., ಪಿಎಚ್.ಡಿ.; ಬೆಲೆ, ಸಾದಾ ರೂ. ೧.೭೫; ಉತ್ತಮ ರೂ. ೨.೭೫.

೬. **ಇಂಟರ್‌ಮೀಡಿಯಟ್ ಪ್ರಾಣಿಶಾಸ್ತ್ರ**—ಎ. ನಾರಾಯಣರಾವ್, ಎಂ.ಎಸ್‌ಸಿ.; ಬೆಲೆ, ರೂ. ೩-೦-೦.

೭. **ಸರಳ ರಸಾಯನಶಾಸ್ತ್ರ**—ಕೆ. ಸುಬ್ಬಾಭಟ್ಟ, ಎಂ.ಎಸ್‌ಸಿ.; ಬೆಲೆ, ಸಾದಾ ರೂ. ೨.೨೫; ಉತ್ತಮ ರೂ. ೩.೨೫.

೮. **ಇಂಟರ್ ಮೀಡಿಯಟ್ ಜಾಮಿಟ್ರಿ**—ಜಂಬುನಾಥನ್, ಎಂ.ಎಸ್‌ಸಿ.; ಬೆಲೆ, ಸಾದಾ ರೂ. ೩-೦-೦ ; ಉತ್ತಮ ರೂ. ೪-೦-೦.

೯. **ಭೌತಿಕ ಭೂಗೋಳ**—ಕುಮಾರಸ್ವಾಮಿ, ಎಂ.ಎ.; ಬೆಲೆ, ಸಾದಾ ರೂ. ೩.೨೫.

೧೦. **ಆಧುನಿಕ ತರ್ಕಶಾಸ್ತ್ರ ಸಂಗ್ರಹ**—ಎಂ. ಯಾಮುನಾಚಾರ್ಯ, ಎಂ.ಎ.; ಬೆಲೆ, ಸಾದಾ ರೂ. ೧.೭೫; ಉತ್ತಮ ರೂ. ೨.೭೫.

೧೧. **ಪ್ರಪಂಚ ಚರಿತ್ರೆಯ ರೂಪರೇಖೆಗಳು**—ಡಾ|| ಶ್ರೀಕಂಠ ಶಾಸ್ತ್ರೀ, ಎಂ.ಎ., ಡಿ.ಲಿಟ್.; ಬೆಲೆ, ಸಾದಾ ರೂ. ೨.೨೫; ಉತ್ತಮ ರೂ. ೩.೨೫.

೧೨. **ಪ್ರೀ-ಯೂನಿವರ್ಸಿಟಿ ಜ್ಯಾಮಿತಿ**—ಎಂ. ವಿ. ಜಂಬುನಾಥನ್, ಎಂ.ಎಸ್‌ಸಿ.; ಬೆಲೆ, ಸಾದಾ ರೂ. ೩-೦-೦ ; ಉತ್ತಮ ರೂ. ೪-೦-೦.

೧೩. **ವಾಣಿಜ್ಯ ಶಾಸ್ತ್ರ**—ಡಾ|| ಜಿ. ರಾಮಕೃಷ್ಣ ರೆಡ್ಡಿ, ಎಂ.ಎ., ಪಿಎಚ್.ಡಿ.; ಬೆಲೆ, ಸಾದಾ ರೂ. ೨.೬೫; ಉತ್ತಮ ರೂ. ೩.೬೫.

೧೪. **ರೋಮ್ ದೇಶದ ಚರಿತ್ರೆ**—ಡಾ|| ಬಿ. ಎಸ್. ಕೃಷ್ಣಸ್ವಾಮಿ ಅಯ್ಯಂಗಾರ್, ಎಂ.ಎ., ಡಿ.ಲಿಟ್.; ಬೆಲೆ, ಸಾದಾ ರೂ. ೨.೪೦ ; ಉತ್ತಮ ರೂ. ೩.೪೦.

ಬರಲಿವೆ

11. ಉರ್ದು ಮತ್ತು ಫಾರಸಿ ಸಾಹಿತ್ಯ—ಶ್ರೀ ರಾಘವೇಂದ್ರರಾವ್

12. ಸಾಹಿತ್ಯ ವಿಮರ್ಶೆಗಳಲ್ಲಿ ಅರ್ಥ ಮತ್ತು ಮೌಲ್ಯದ ಸ್ಥಾನ—ಶ್ರೀ ವಿ. ಸೀತಾರಾಮಯ್ಯ, ಎಂ.ಎ.

13. **European man:** by Prof. Toachim von Rentleen.

MYSORE UNIVERSITY PUBLICATIONS
ENGLISH

1. **The Mysore Tribes and Castes:** by the late Mr. H. V. NANJUNDAYYA, M.A., M.L., C.I.E. and RAO BAHADUR L. K. ANANTAKRISHNA IYER; Four Volumes: Vol. II, 1928; Vol. III, 1930; Vol. IV, 1931; Vol. I, 1935. Appendix: Each Volume is profusely illustrated: Vol. I, Rs. 15-0-0; Other Volumes each, Rs. 12-8-0.

(a) *Studies in Economics and Politics*

1. **Labour and Housing in Bangalore City:** C. NARASIMHA MOORTHY, M.A. and R. K. SRINIVASAN, M.A.; Re. 0-8-0.

2. **The Munro System of British Statesmanship in India:** Dr. K. N. VENKATASUBBA SASTRI, M.A., Ph.D.; Rs. 3-0-0.

3. **Theory of Interest:** Sri S. LAXMINARASIMHAN, M.A.; Rs. 2-8-0.

4. **An Inquiry into Economic Theory:** Sri A. N. SUBRAHMANYAM, M.A.; Re. 1-4-0.

(b) *Mysore University Historical Series*

1. **Sources of Karnataka History,** Vol. I: S. SRIKANTA SASTRY, M.A.; Calico Rs. 3-8-0; Stiff Rs. 3-0-0.

(c) *Mysore University Studies in Philosophy*

1. ***Dvaita Philosophy, and Its Place in the Vedanta:** Mr. H. N. RAGHAVENDRACHAR, M.A.

2. **Metaphysics of Value,** Vol. I: K. R. SRINIVASA IYENGAR, M.A.; Rs. 5-0-0.

(d) *Mysore University Studies in Dravidian Philology*

1. ***A Grammar of the Oldest Kannada Inscriptions:** Dr. A. N. NARASIMHIAH, M.A., L.T., Ph.D.; Rs. 2-12-3.

2. ***History of Kannada Literature:** RAO BAHADUR R. NARASIMHACHARYA; Re. 1-0-0.

3. ***History of Kannada Language:** RAO BAHADUR R. NARASIMHACHARYA.

ವಿಶ್ವವಿದ್ಯಾನಿಲಯದ ಪಠ್ಯಪುಸ್ತಕಮಾಲೆ ವಿಶೇಷೋಪನ್ಯಾಸಮಾಲೆ ಮತ್ತು ಇತರ ಪ್ರಕಟನ ಮಾಲೆಯ ಪುಸ್ತಕಗಳನ್ನು ಕೊಳ್ಳುವ ಮಾರಾಟಗಾರರಿಗೆ ಈ ಕೆಳಗೆ ಕಂಡಂತೆ ಕಮೀಷನ್ ಕೊಡಲಾಗುವುದು. ಅಂಚೆ ವೆಚ್ಚ, ಮಾರಾಟ ತೆರಿಗೆ ಮತ್ತು ಪುಸ್ತಕಗಳನ್ನು ಕಳುಹಿಸುವ ಖರ್ಚು ಪ್ರತ್ಯೇಕ.

ಶೇಕಡ ೧೨ ಯಂತೆ ೨೫ ರೂಪಾಯಿ ಬೆಲೆಬಾಳುವ ಪುಸ್ತಕಗಳನ್ನು
ಏಕಕಾಲದಲ್ಲಿ ಕೊಳ್ಳುವವರಿಗೆ.

ಈ ಗ್ರಂಥಮಾಲೆಯ ಪುಸ್ತಕಗಳನ್ನು ತರಿಸಿಕೊಳ್ಳಲಿಚ್ಛಿಸುವವರು ಈ ಕೆಳಗಿನ ವಿಳಾಸಕ್ಕೆ ಬರೆಯಬೇಕು.

ಡೈರೆಕ್ಟರ್,
'ಪ್ರಸಾರಾಂಗ' ಮೈಸೂರು ವಿಶ್ವವಿದ್ಯಾನಿಲಯ
ವಾಣಿವಿಲಾಸ ಮೊಹಲ್ಲ, ಮೈಸೂರು-೨

ಸರ್ ಕೆ. ಪಿ. ಪುಟ್ಟಣ್ಣ ಚೆಟ್ಟರ ಪುದುವಟ್ಟಿನ ಪ್ರಕಟನಮಾಲೆ

೧. ಟಪಾಲ್ ಸಂಸ್ಥೆಯ ವಿವರ—ಕೆ. ಲಕ್ಷ್ಮೀನರಸಿಂಹಯ್ಯ, ಬಿ.ಎ., ಎಲ್‌ಎಲ್.ಬಿ.

೨. ವಿಶ್ವವಿಸರಣ—ಜಿ. ಎಸ್. ಪರಮಶಿವಯ್ಯ, ಎಂ.ಎಸ್‌ಸಿ.

೩. ಸರ್ಕಾರದ ಪದ್ಧತಿ ಮತ್ತು ರಚನಾಕ್ರಮ—ಎಚ್. ಕೃಷ್ಣರಾವ್, ಎಂ.ಎ.

೪. ವ್ಯವಸಾಯದ ಮಣ್ಣುಗಳು—ಕೂರಪಾಡು ಗುಂಡಪ್ಪ, ಬಿ.ಎ.

೫. *ಆಕಾಶಯಾನ—ಬಿ. ಕೆ. ಎನ್. ರಾವ್.

೬. *ವಿಶ್ವವಿದ್ಯಾನಿಲಯಗಳು—ಡಾ॥ ಎಂ. ಸಿದ್ಧಲಿಂಗಯ್ಯ, ಎಂ.ಎ., ಬಿ.ಟಿ., ಪಿಎಚ್.ಡಿ., ಡಿಪ್.ಎಡ್. ಮತ್ತು ಸಿ. ರಂಗಾಚಾರ್, ಬಿ.ಎಸ್‌ಸಿ., ಎಂ.ಎಡ್.

೭. *ಹೆರಿಗೆ ಮತ್ತು ಶಿಶುಪೋಷಣೆ—ಡಾ॥ ರತ್ನಮ್ಮ ಐಸಾಕ್, ಎಲ್.ಎಂ.ಎಸ್., ಎಂ.ಆರ್.ಸಿ.ಎಸ್., ಎಲ್.ಆರ್.ಸಿ.ಪಿ.

೮. ಮಲೇರಿಯಾ ನಿರೋಧ—ಬಿ. ಅನಂತಸ್ವಾಮಿರಾವ್, ಬಿ.ಎಸ್‌ಸಿ., ಎಂ.ಬಿ., ಬಿ.ಎಸ್., ಎಂ.ಪಿ.ಎಚ್.

೯. ಗ್ರಾಮ ನೈರ್ಮಲ್ಯ—ಎಸ್. ಡಿ. ನಾರಾಯಣಗೌಡ, ಎಂ.ಬಿ., ಬಿ.ಎಸ್., ಡಿ.ಪಿ.ಎಚ್.

೧೦. *ಪಶುಪಾಲನೆ—ಎಂ. ಕೃಷ್ಣಶಾಸ್ತ್ರೀ, ಬಿ.ಎ., ಐ.ಡಿ.ಡಿ., ಅಸೋಸಿಯೇಟ್ ಐ.ಡಿ.ಆರ್.ಐ.

೧೧. ಯೋಗಾಸನಗಳು—ವಿದ್ವಾನ್ ಟಿ. ಕೃಷ್ಣಮಾಚಾರ್ಯ. ಬೆಲೆ, ಸಾದಾ ೮೦ ನಯೆ ಪೈಸೆ; ಉತ್ತಮ ಪ್ರತಿ ರೂ. ೧-೦-೦.

೧೨. ಮೈಸೂರು ದೇಶದ ರಸಾಯನಿಕ ಕೈಗಾರಿಕೆಗಳು—ಕೆ. ಅಶ್ವತ್ಥನಾರಾಯಣ ರಾವ್, ಡಿ.ಎಸ್‌ಸಿ.

೧೩. ವಿದ್ಯುಚ್ಛಕ್ತಿಯ ಉಪಯೋಗ—ಎಂ. ಬಿ. ತಿರುನಾರಾಯಣ, ಬಿ.ಎ., ಬಿ.ಎಸ್‌ಸಿ. (ಆನರ್ಸ್, ಇ.ಇ.) ಸಿ.ಪಿ., ಇ.ಟಿ. (ಐ.ಐ.ಎಸ್.)

೧೪. ಮಕ್ಕಳ ಬೆಳವಣಿಗೆ—ಡಾ॥ ಬಿ. ಕುಪ್ಪುಸ್ವಾಮಿನಾಯಿಡು, ಎಂ.ಎ., ಡಿ.ಲಿಟ್.

೧೫. ರೇಡಾರ್—ಆರ್. ಎಲ್. ನರಸಿಂಹಯ್ಯ, ಎಂ.ಎಸ್‌ಸಿ.; ಸಾಧಾರಣ ಪ್ರತಿ ೮೦ ನಯೆ ಪೈಸೆ; ಉತ್ತಮ ಪ್ರತಿ ರೂ. ೧-೦-೦.

೧೬. ಗಣಿ ಕೆಲಸದ ಕೈಪಿಡಿ—ಜೆ. ಪಿ. ಡೇವಿಡ್, ಬಿ.ಎಸ್‌ಸಿ.; ಸಾಧಾರಣ ಪ್ರತಿ ೮೦ ನಯೆ ಪೈಸೆ; ಉತ್ತಮ ಪ್ರತಿ ರೂ. ೧-೦-೦.

೧೭. ಲೋಹವಿದ್ಯೆ—ಡಾ॥ ಬಿ. ಪಿ. ರಾಧಾಕೃಷ್ಣ, ಎಂ.ಎಸ್‌ಸಿ., ಪಿ.ಎಚ್‌ಡಿ.

೧೮. ಪರಮಾಣುಶಕ್ತಿ—ಡಾ|| ಎಲ್. ಸೀಬಯ್ಯ, ಡಿ.ಎಸ್‌ಸಿ.

೧೯. ಭಾರತ ಸಂವಿಧಾನ—ಗ. ಸ. ಹಾಲಪ್ಪ, ಎಂ.ಎ. (ಕೊಲಂಬಿಯ).

೨೦. ಅಂತರ ರಾಷ್ಟ್ರೀಯ ಸಂಬಂಧಗಳು—ಟಿ. ಎಸ್. ನಾರಾಯಣರಾವ್, ಎಂ.ಎ.

೨೧. ವಿಕಿರಣಕ್ರಿಯಾಶಕ್ತಿ—ಕೆ. ಶೇಷಾದ್ರಿ ಐಯ್ಯಂಗಾರ್, ಎಂ.ಎಸ್‌ಸಿ., ಎಲ್‌ಎಲ್.ಬಿ.

೨೨-೨೩. ಸಂಸಾರಯೋಜನೆ—ಡಾ|| ಎಂ. ದಯಾಕರ, ಎಂ.ಬಿ., ಬಿ.ಎಸ್. ಬೆಲೆ, ಸಾದಾ ೮೦ ನಯೆ ಪೈಸೆ; ಉತ್ತಮ ಪ್ರತಿ ರೂ. ೧-೦-೦.

೨೪. ಜಲಶಕ್ತಿ—ಎಚ್. ಸಿ. ಕಪನೀಪತಿಭಟ್ಟ, ಬಿ.ಎ., ಬಿ.ಇ., ಎಂ.ಐ.ಇ.

೨೫. ಪತ್ರಿಕೋದ್ಯಮಶಾಸ್ತ್ರ—ನಾಡಿಗ ಕೃಷ್ಣಮೂರ್ತಿ, ಎಂ.ಎ. (ಮಿಸ್ಸೋರಿ).

ಸಾಧಾರಣ ಪ್ರತಿ ೪೦ ನಯೆ ಪೈಸೆ; ಉತ್ತಮ ಪ್ರತಿ ೫೦ ನಯೆ ಪೈಸೆ.

ಡೈರೆಕ್ಟರ್,
'ಪ್ರಸಾರಾಂಗ' ಮೈಸೂರು ವಿಶ್ವವಿದ್ಯಾನಿಲಯ
ವಾಣಿವಿಲಾಸ ಮೊಹಲ್ಲ, ಮೈಸೂರು-೨

* ಈ ಪುಸ್ತಕಗಳು ಮುಗಿದುಹೋಗಿವೆ.

ಪ್ರಬುದ್ಧ ಕರ್ಣಾಟಕ

ಸಂಪುಟ ೪೧

(ವಿಕಾರಿ ಸಂವತ್ಸರ)

ಮೈಸೂರು

ಮೈಸೂರು ವಿಶ್ವವಿದ್ಯಾನಿಲಯ

೧೯೫೯–೧೯೬೦

ವೆಸ್ಲಿ ಪ್ರೆಸ್, ಮೈಸೂರು

ವಿಷಯ ಸೂಚಿಕೆ

೪. ಕಥೆಗಳು

೫. ಪ್ರಬಂಧ ಹರಟೆ ಮತ್ತು ಇತರ

ಮೈಸೂರು ಮಹಾರಾಜರವರ ಕಾಲೇಜಿನ
ಕರ್ಣಾಟಕ ಸಂಘದ ಪ್ರಕಟಣೆಗಳು

೧. ನಾಗಾನಂದ ನಾಟಕ—ಅನಂತನಾರಾಯಣ ಶಾಸ್ತ್ರಿ; ಬೆಲೆ, ರೂ. ೧-೦-೦.
೨. ಕರ್ಣಾಟಕ ಮೃಚ್ಛಕಟಿಕಪ್ರಕರಣಂ—ಆಸ್ಥಾನ ಕವಿ ನಂಜನಗೂಡು ಸುಬ್ಬಾಶಾಸ್ತ್ರಿಗಳವರಿಂದ; ರೂ. ೧-೧೨-೦.

ಸೆಂಟ್ರಲ್ ಕಾಲೇಜಿನ ಕರ್ಣಾಟಕ ಸಂಘದ ಪ್ರಕಟಣೆಗಳು

೧. ಶ್ರೀ ಕೈಲಾಸಂ ಅವರ ಸ್ಮರಣೆ—ಕೆ. ವಿ. ಅಯ್ಯರ್; ರೂ. ೨-೪-೦.
೨. ಕರ್ಣಾಟಕ ಮಾಲವಿಕಾಗ್ನಿಮಿತ್ರ ನಾಟಕಂ—ವೋಟಗಾನಹಳ್ಳಿ ಶಂ. ಸುಬ್ರಹ್ಮಣ್ಯಶಾಸ್ತ್ರೀ; ರೂ. ೧-೧೨-೦.
೩. ಮೊನ್ನ ವನ್ನ (ಮಾರಿಸ್ ಮ್ಯಾಟರ್‌ಲಿಂಕನ ಮೂರಂಕದ ನಾಟಕ)—ಎಸ್. ಜಿ. ಶಾಸ್ತ್ರಿ; ರೂ. ೨-೦-೦.
೪. ನಾಗನ ಪದಗಳು—ಜಿ. ಪಿ. ರಾಜರತ್ನಂ; ರೂ. ೧-೪-೦.
೫. ಶಕ್ತಿ (ಸಚಿತ್ರ)—ಆರ್. ಎಲ್. ನರಸಿಂಹಯ್ಯ; ರೂ. ೩-೦-೦.
೬. ಸುಪ್ರಭಾತವಮ್—(ದೈವಭಕ್ತಿಯನ್ನು ಕುರಿತ ಪ್ರಬಂಧಗಳು); ರೂ. ೩-೦-೦.
೭. ಸೋಕ್ರಟೀಸನ ಮರಣ—ಎಸ್. ಜಿ. ಶಾಸ್ತ್ರಿ; ರೂ. ೧-೪-೦.
೮. ಬಾಹುಬಲಿ ವಿಜಯಂ—(ಎರಡು ನಾಟಕಗಳು); ರೂ. ೧-೮-೦.
೯. ಕಾರ್ಕಳದ ಗೊಮ್ಮಟಸ್ವಾಮಿ—(ಲೇಖನ, ಕವನ); ರೂ. ೧-೦-೦.
೧೦. ನಮ್ಮ ನಮ್ಮವರು—(೬೬ ಬೇರೆ ಬೇರೆ ಕೃತಿಗಳು); ರೂ. ೨-೮-೦.
೧೧. ಬಾಲಸರಸ್ವತಿ—(೩೬ ಬೇರೆ ಬೇರೆ ಕೃತಿಗಳು); ರೂ. ೨-೮-೦.
೧೨. ಚಿನ್ನದ ದೋಸೆ ಮತ್ತು ಇತರ ಕಥೆಗಳು—ರೂ. ೦-೧೨-೦.
೧೩. ಮಕ್ಕಳ ಮಾತು—(ಎಸ್ಸೆಗಳು); ರೂ. ೧-೦-೦.
೧೪. ಪಚ್ಚೆಯ ತೆನೆ—(ಎಸ್ಸೆಗಳು); ರೂ. ೧-೦-೦.
೧೫. ಗಂಧದ ಹುಡಿ—(ಎಸ್ಸೆಗಳು); ರೂ. ೧-೦-೦.
೧೬. ದುರಾಸೆಯ ದಂಡ—(ಐದು ಏಕಾಂಕ ನಾಟಕಗಳು); ರೂ. ೧-೪-೦.
೧೭. ಜನಪ್ರಿಯ ವಿಜ್ಞಾನ—(ವಿಜ್ಞಾನ ಪ್ರಬಂಧಗಳು); ರೂ. ೧-೦-೦.

Edited by Dr. Prabhu Shankara, M.A., Ph.D. and Sri S. Narayana Setty, M.A.
Published by The University of Mysore, Mysore.
Printed by Sri K. A. Korula at the Wesley Press, Mysore City.